VEC, Library
001289

ಬಿಎಸ್
VIJAYA EVENING COLLEGE,
LIBRARY
BANGALORE-4.
ACCN. NO. 1289
SECTION
COST 15-00
Date 23.8.69 Librarian.
VECKAN1056
VEC, Library
001289

ಶ್ರೀ ನೃಪತುಂಗದೇವಾನುಮತಮಪ್ಪ

ಶ್ರೀವಿಜಯಕೃತ

ಕವಿರಾಜಮಾರ್ಗಂ

ಸಂಪಾದಕ

ಎಂ. ವಿ. ಸೀತಾರಾಮಯ್ಯ

ಕರ್ಣಾಟಕ ಸಂಘ

ಸರಕಾರದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು

ಬೆಂಗಳೂರು

Kavirājamārgam

A Treatise in Kannada on Alaṁkāraṣ'āstra

By ṢRĪ VIJAYA

Poet and Scholar at the Court of

Amōghavarsha Nṛpatunga,

Rāshtrakūta Emperor (814-877 A.D.)

Edited, with Introduction and Commentary,

By M. V. Seetha Ramiah,

Retired Reader in Kannada and U.G.C. Research Scholar,

Central College, Bangalore University, Bangalore

First Edition, 1968 : 1,000 Copies

© M. V. SEETHA RAMIAH

Publishers :

KARNATAKA SANGHA

Govt. Arts and Science College, Bangalore

Copies available at :

D. V. K. MURTHY

Book Sellers & Publishers

Krishnamurthypuram, Mysore-4

Rs. 15-00

Printed at :

B. M. Srikantia Press, Kannada Sahitya Parishat

Pampa Mahakavi Road, Chamarajapet, Bangalore-18

ಅರ್ಪಣೆ

ನನ್ನ ವಿದ್ಯಾಗುರುಗಳಾದ

ದಿವಂಗತ

ಪ್ರೊ|| ಟಿ. ಎಸ್. ವೆಂಕಣ್ಣಯ್ಯ

ಮತ್ತು

ಡಾ|| ಎ. ಆರ್. ಕೃಷ್ಣಶಾಸ್ತ್ರೀ

ಅವರ

ಪವಿತ್ರ ಸಂಸ್ಮರಣೆಗೆ

ಸಂಪಾದಕನ ಅರಿಕೆ

ನಾನು ಎಂ. ಎ. ತರಗತಿಯ ವಿದ್ಯಾರ್ಥಿಯಾಗಿದ್ದಾಗ (೧೯೩೧-೩೩) ನನ್ನ ವಿದ್ಯಾಗುರು ದಿವಂಗತ ಪ್ರೊ|| ಟಿ. ಎಸ್. ವೆಂಕಣ್ಣಯ್ಯನವರು ಕನ್ನಡ ಸಾಹಿತ್ಯ ಚರಿತ್ರೆಯ ಪಾಠದ ಅಂಗವಾಗಿ ಕವಿರಾಜಮಾರ್ಗದ ಕೆಲವು ಭಾಗ ಗಳನ್ನು ಸ್ಥೂಲವಾಗಿ ತಿಳಿಯಹೇಳಿದರು. ಕವಿರಾಜಮಾರ್ಗದ ಕರ್ತೃತ್ವದ ವಿಚಾರವಾಗಿ ಅವರಿಗೂ ನಾ. ಶ್ರೀ. ರಾಜಪುರೋಹಿತರಿಗೂ ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ನಡೆದಿದ್ದ ಪತ್ರವ್ಯವಹಾರವನ್ನು ನಾನು ಆಸಕ್ತಿ ಯಿಂದ ಓದಿದ್ದು ಆಗಲೆ. ಮದ್ರಾಸು ವಿಶ್ವವಿದ್ಯಾನಿಲಯದವರು ಆದೇತಾನೆ ಕವಿರಾಜಮಾರ್ಗದ ದ್ವಿತೀಯ ಮುದ್ರಣವನ್ನು ಹೊರತಂದಿದ್ದರು. ಆಗ ಮದರಾಸಿನಿಂದ ಪ್ರಕಟವಾಗುತ್ತಿದ್ದ ‘ ಪ್ರಜಾಮತ ’ ವಾರಪತ್ರಿಕೆಗೆ ಹೋದ ವಿಮರ್ಶೆಯ ಪ್ರತಿ ವಿಮರ್ಶೆಗೆಂದು ನನ್ನ ಬಳಿಗೆ ಬಂದಿತು. ವಿದ್ವಾಂಸ ರೊಬ್ಬರು ಮಾಡಬೇಕಾಗಿದ್ದ ಕಾರ್ಯವನ್ನು ನನ್ನಂತಹ ಅಪರಿಣತ ವಿದ್ಯಾರ್ಥಿ ಯೊಬ್ಬನು ಮಾಡುವುದು ಹೇಗೆ ಎಂದು ಅಧೀರನಾಗಿ ಹಿಂಜರಿಯುತ್ತಿದ್ದ ನನ್ನನ್ನು ಉತ್ತೇಜಿಸಿ, ವಿಮರ್ಶೆಯನ್ನು ಮಾಡಿಸಿದವರು ಗುರು ವೆಂಕಣ್ಣಯ್ಯ ನವರು. ಅಂದಿನಿಂದ ನಾನು ಕವಿರಾಜಮಾರ್ಗದ ಭಕ್ತ.

ಈಗ್ಗೆ ಮೂರು ನಾಲ್ಕು ವರ್ಷಗಳ ಹಿಂದೆ ಬಿ.ಎ. ಪದವೀ ಪರೀಕ್ಷೆಗೆ ಕನ್ನಡವನ್ನು ಪ್ರಧಾನ (Major) ವಿಷಯವಾಗಿ ವ್ಯಾಸಂಗಮಾಡುವ ವಿದ್ಯಾರ್ಥಿಗಳಿಗೆ ಕವಿರಾಜಮಾರ್ಗವನ್ನು ನಾನು ಪಾಠ ಹೇಳಬೇಕಾಗಿ ಬಂದಿತು. ಆಗ ನನಗೆ ಗೋಚರವಾಯಿತು, ಕವಿರಾಜಮಾರ್ಗವನ್ನು ಪಾಠ ಹೇಳಬೇಕಾದರೆ ಕೇವಲ ಗ್ರಂಥಭಕ್ತಿ ಸಾಲದು ಎಂಬ ಸತ್ಯಸಂಗತಿ; ಅದನ್ನು ಪಾಠಮಾಡಬೇಕಾದ ಅಧ್ಯಾಪಕನ ಬವಣೆ ಎಂಥದು ಎಂಬ ನಿಜ ವಿಚಾರ. ಗ್ರಂಥದ ಮುದ್ರಿತ ಪ್ರತಿಗಳಲ್ಲಿ ಕಂಡುಬರುತ್ತಿದ್ದ ಪಾಠಗ್ರಂಥಿ ಗಳು, ಅರ್ಥಕ್ಲೇಶಗಳು, ಸಹಾಯಕ ಟಿಪ್ಪಣಿಗಳ ಕೊರತೆ—ಇವೆಲ್ಲ ಬೋಧಕನನ್ನು ಸವಾಲುಹಾಕಿ ಎದುರಿಸುತ್ತಿದ್ದುವು. ಎಲ್ಲಕ್ಕಿಂತ ಮಿಗಿಲಾಗಿ,

ವಿದ್ಯಾರ್ಥಿಗಳಿಗೆ ಎಲ್ಲಿಯೂ ಒಂದು ಪ್ರತಿ ಕೂಡ ದೊರಕದಿದ್ದ ಪರಿಸ್ಥಿತಿ ನನಗೆ ತುಂಬ ವ್ಯಥೆಯನ್ನುಂಟುಮಾಡಿತು; ಏನಾದರೂ ಪರಿಹಾರ ಹುಡುಕುವಂತೆ ನನ್ನನ್ನು ಪ್ರಚೋದಿಸಿತು. ನಮ್ಮ ಸಂಘದ ಮೂಲಕ ಗ್ರಂಥವನ್ನು ಪ್ರಕಟಿಸಬಹುದೆಂಬ ನನ್ನ ಸೂಚನೆಯನ್ನು ನನ್ನ ಸಹೋದ್ಯೋಗಿಗಳೂ ಸಂಘದ ಕಾರ್ಯಸಮಿತಿಯ ಸದಸ್ಯರೂ ಅಂಗೀಕರಿಸಿ, ಗ್ರಂಥಸಂಪಾದನೆಯ ಕಾರ್ಯವನ್ನು ನನಗೇ ವಹಿಸಿಬಿಟ್ಟರು. ಸಲಹೆ ಕೊಟ್ಟದ್ದಕ್ಕೆ ವಿಶ್ವಾಸದ ಶಿಕ್ಷೆ! ಕವಿರಾಜಮಾರ್ಗದ ಈ ಮೂರನೆಯ ಮುದ್ರಣ ಕಾರ್ಯದ ಹಿನ್ನೆಲೆ ಇದು. ಸಂಪಾದನ ಕಾರ್ಯವನ್ನು ವಹಿಸಿಕೊಂಡು ಸುಮಾರು ಎರಡು ವರ್ಷಗಳಾದ ಮೇಲೆ ಗ್ರಂಥ ಈಗಲಾದರೂ ಹೊರಬರುತ್ತಿರುವುದು ನನಗೆ ನೆಮ್ಮದಿಯುಂಟುಮಾಡಿದೆ.

ಗ್ರಂಥಸಂಪಾದನೆಯ ಕಾರ್ಯದಲ್ಲಿ ನನಗೆ ಹಲವು ಮಂದಿ ಹಲವು ಬಗೆಗಳಲ್ಲಿ ನೆರವು ನೀಡಿದ್ದಾರೆ. ಅವರಲ್ಲಿ ಮುಖ್ಯರಾದ ಕೆಲವರ ಹೆಸರನ್ನಾದರೂ ಹೇಳದಿದ್ದರೆ ಕರ್ತವ್ಯಲೋಪವಾಗುವುದು. ಗ್ರಂಥವನ್ನು ಅಚ್ಚಿಗಾಗಿ ಪ್ರತಿ ಮಾಡಿ ಸಿದ್ಧಗೊಳಿಸುವ ಕಾರ್ಯದಲ್ಲಿ ನನ್ನ ಸಹೋದ್ಯೋಗಿಗಳಾಗಿದ್ದ, ಸಂಪಾದಕಮಂಡಲಿಯ ಸದಸ್ಯರಾದ ಶ್ರೀ ಹಂಪ. ನಾಗರಾಜಯ್ಯ, ಎಂ.ಎ. ಮತ್ತು ಶ್ರೀಮತಿ ಲಲಿತಮ್ಮ, ಎಂ.ಎ. ಇವರುಗಳು ನೆರವಾಗಿದ್ದಾರೆ; ಪಾಠನಿಷ್ಕರ್ಷೆಯ ಕಾರ್ಯದಲ್ಲಿ ಶ್ರೀ. ಹಂಪ. ನಾ. ಅವರ ಸಲಹೆ ಸೂಚನೆಗಳಿಂದ ಬಹಳ ಪ್ರಯೋಜನ ಪಡೆದಿದ್ದೇನೆ; ಪದ್ಯಗಳ ಅಕಾರಾದಿ, ನಾಮಸೂಚೀಪತ್ರ, ಪಾರಿಭಾಷಿಕ ಪದಗಳ ಪಟ್ಟಿ ಇವುಗಳನ್ನೂ ಬೇಸರಪಡದೆ ಸಿದ್ಧಪಡಿಸಿ ಕೊಟ್ಟವರೂ ಅವರೆ. ಅವರ ಉಪಕಾರದ ಹೊರೆ ಹಿರಿದು. ಅಲಂಕಾರಶಾಸ್ತ್ರದ ಎಷ್ಟೋ ವಿಚಾರಗಳನ್ನು ಗ್ರಹಿಸುವುದರಲ್ಲಿ ಪ್ರೊ॥ ಕೆ. ಟಿ. ಪಾಂಡುರಂಗಿ, ಎಂ.ಎ. ಅವರಿಂದ ತಿಳಿವಳಿಕೆ ಪಡೆದಿದ್ದೇನೆ; ಸಂಘದ ಅಧ್ಯಾಪಕ ಕಾರ್ಯದರ್ಶಿ ಶ್ರೀ ಆರ್. ಎನ್. ಪಟ್ವಾರಿ, ಎಂ.ಎ. ಅವರು ಅನೇಕ ವಿಧಗಳಲ್ಲಿ ಸಹಕರಿಸಿದ್ದಾರೆ. ಇವರೆಲ್ಲರಿಗೂ ಒಟ್ಟಿಗೆ ಕೃತಜ್ಞತೆಯನ್ನು ತಿಳಿಸುವ ಮಾತು ಒಂದೇ ಆದರೂ ಅದು ಒಳಗೊಂಡ ಕೃತಜ್ಞತಾಭಾವ ಅಪಾರ, ಅನಂತ ಎಂದು ಹೇಳಬಯಸುತ್ತೇನೆ.

ನಾನು ಕಾಲೇಜಿನಿಂದ ನಿವೃತ್ತನಾದಾಗ (೨೪-೩-೧೯೬೭) ಕೆಲಸ ಅರ್ಧಾಂತಕವಾಗಿತ್ತು. ಕೈಕೊಂಡ ಕಾರ್ಯವನ್ನು ಮುಗಿಸಿ ಕೃತಕೃತ್ಯನಾಗುವ ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ಸಂಘದ ಈಗಿನ ಅಧ್ಯಕ್ಷರು ಶ್ರೀ ಜಿ. ಬ್ರಹ್ಮಪ್ಪ, ಎಂ.ಎ. ಅವರಿಗೆ ನಾನು ಋಣಿಯಾಗಿದ್ದೇನೆ.

ಈ ಮುದ್ರಣದಲ್ಲಿ ಹಲವು ಬಗೆಯ ಹಲವಾರು ಲೋಪದೋಷಗಳು ಕಂಡುಬಂದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಅವು ನನ್ನ ಗಮನಕ್ಕೆ ಬಾರದೆ, ಇತರರ ಗಮನಕ್ಕೆ ಬರುವ ಸಂಭವ ಹೆಚ್ಚು: 'ಕಾಣನೇಗೆಯ್ದುಂ ತನ್ನ ದೋಷಮಂ| ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯಂ'! ಇದು ಮುಖ್ಯವಾಗಿ 'ವಿದ್ಯಾರ್ಥಿಗಳ ಮುದ್ರಣ'; ವಿದ್ವಾಂಸರದ್ದಲ್ಲ. ಇದು ಈಗಿಗಿಂತ ಹೆಚ್ಚು ಉಪಯುಕ್ತವಾಗುವಂತೆ ಪ್ರಾಜ್ಞರು ನೀಡುವ ಸಲಹೆ ಸೂಚನೆಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿ, ಗ್ರಂಥದ ಮರು ಆವೃತ್ತಿಯಲ್ಲಿ—ಆ ಯೋಗ ಒದಗಿಬಂದರೆ—ಅವನ್ನು ಅಳವಡಿಸಿಕೊಳ್ಳುತ್ತೇನೆ.

ದಿವಂಗತ ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರ ಸತ್ಪುತ್ರರಾದ, ಮೈಸೂರು ಸರ್ಕಾರದ ಮುಖ್ಯ ಭಾಷಾಂತರಕಾರರಾದ, ಶ್ರೀ ಎಂ. ಕೇಶವ ಭಟ್ಟ, ಎಂ.ಎ. ಅವರು ನಾನು ಕೇಳಿದೊಡನೆಯೆ ತಮ್ಮ ತೀರ್ಥರೂಪರವರು ಬರೆದಿರುವ 'ಕವಿರಾಜಮಾರ್ಗ ವಿವೇಕ' ಗ್ರಂಥದ (ಎರಡನೆಯ ಭಾಗ) ಅಪ್ರಕಟಿತ ಹಸ್ತಪ್ರತಿಯನ್ನು ನನ್ನ ವಶಕ್ಕೆ ಕೊಟ್ಟದ್ದಲ್ಲದೆ, ನನ್ನ ಇಚ್ಛೆಯಂತೆ ಅದನ್ನು ಉಪಯೋಗಿಸಿಕೊಳ್ಳಲೂ ಅದರಿಂದ ಆಗತ್ಯಕಂಡ ಭಾಗಗಳನ್ನು ಉದ್ಧರಿಸಲೂ ಅನುಮತಿಯನ್ನು ನೀಡಿದರು. ಗ್ರಂಥಕ್ಕೆ ಟಿಪ್ಪಣಿ ಬರೆಯುವ ಕೆಲಸದಲ್ಲಿ ದಿವಂಗತರ ವಿದ್ವತ್ಪೂರ್ಣವಾದ ವ್ಯಾಖ್ಯಾನದಿಂದ ಅಪಾರವಾದ ಪ್ರಯೋಜನವನ್ನು ಪಡೆದಿರುತ್ತೇನೆ. ಈವೊಂದು ಪ್ರಯೋಜನವನ್ನು ದೊರಕಿಸಿಕೊಟ್ಟದ್ದಕ್ಕಾಗಿ, ಪಂಡಿತೋತ್ತಮರೂ ಪಾಂಡಿತ್ಯಪಕ್ಷಪಾತಿಗಳೂ ಆದ ಶ್ರೀ ಕೇಶವಭಟ್ಟರಿಗೆ ನಾನು ಚಿರಋಣಿಯಾಗಿದ್ದೇನೆ. ಕವಿರಾಜಮಾರ್ಗವನ್ನು ವ್ಯಾಸಂಗಮಾಡಬೇಕೆನ್ನುವವರಿಗೆ ಅತ್ಯಂತ ಉಪಯುಕ್ತವಾದ ಆ ಗ್ರಂಥ ಬೇಗನೆ ಬೆಳಕನ್ನು ಕಾಣಲಿ ಎಂದು ಹಾರೈಸುತ್ತೇನೆ.

ನಾನು ಕೊಟ್ಟ ಕಿರುಕುಳವನ್ನೆಲ್ಲಾ ಸಹಿಸಿಕೊಂಡು, ಕನ್ನಡ ಸಾಹಿತ್ಯ ಪರಿಷತ್ತಿನ ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟದವರು ವಿಶೇಷ ಶ್ರಮವಹಿಸಿ ಗ್ರಂಥವನ್ನು ಚೆನ್ನಾಗಿ ಅಚ್ಚುಮಾಡಿಕೊಟ್ಟಿದ್ದಾರೆ. ಅಚ್ಚುಕೂಟದಿಂದ ದೊರೆತ ಎಲ್ಲ ಬಗೆಯ ಸಹಾಯ ಸಹಕಾರಗಳಿಗಾಗಿ ನಾನು ಅದರ ವ್ಯವಸ್ಥಾಪಕರಾದ ಶ್ರೀ ಶೇಷನಾರಾಯಣರಿಗೂ ಸಂಬಂಧಪಟ್ಟ ಕೆಲಸಗಾರರಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಬೆಂಗಳೂರು

ಫೆಬ್ರುವರಿ ೧೨, ೧೯೬೮

ಎಂ. ವಿ. ಸೀತಾರಾಮಯ್ಯ

ಸಂಪಾದಕ

ಪ್ರಕಾಶಕರ ಅರಿಕೆ

ನಮ್ಮ ಕಾಲೇಜಿನ ಕನ್ನಡ ವಿಭಾಗದ ಮುಖ್ಯರೂ, ಸಂಘವು ಪುನರ್ ಸಂಸ್ಥಾಪನೆಯಾದ ಏಳೆಂಟು ವರ್ಷಗಳಿಂದ ಅದರ ಅಧ್ಯಕ್ಷರೂ ಆಗಿದ್ದ ಶ್ರೀ ಎಂ. ವಿ. ಸೀತಾರಾಮಯ್ಯ, ಎಂ. ಎ. ಅವರ ಸೂಚನೆಯನ್ನು ಅನುಮೋದಿಸಿ, ಕನ್ನಡ ಸಾಹಿತ್ಯದ ಆದ್ಯ ಗ್ರಂಥವೆಂದು ಸುಪ್ರಸಿದ್ಧವಾದ 'ಕವಿರಾಜಮಾರ್ಗ'ವನ್ನು ಪ್ರಕಟಿಸಬೇಕೆಂಬ ನಿರ್ಧಾರವನ್ನು ನಮ್ಮ ಸಂಘವು ೧೯೬೬ರಲ್ಲಿ ಕೈಗೊಂಡಿತು. ಪ್ರಕಟನಕಾರ್ಯವನ್ನು ನಿರ್ವಹಿಸಲು ಈ ಕೆಳಗೆ ಕಂಡಂತೆ ಸಂಪಾದಕ ಮಂಡಲಿಯನ್ನು ಗೊತ್ತುಮಾಡಿತು:

೧. ಶ್ರೀ ಎಂ. ವಿ. ಸೀತಾರಾಮಯ್ಯ, ಎಂ.ಎ. (ಸಂಪಾದಕರು)
೨. ಶ್ರೀ ಜಿ. ಬ್ರಹ್ಮಪ್ಪ, ಎಂ.ಎ.
೩. ಶ್ರೀ ಹಂಪ. ನಾಗರಾಜಯ್ಯ, ಎಂ.ಎ.

ಸಂಪಾದಕರಾದ ಶ್ರೀ ಎಂ.ವಿ ಸೀತಾರಾಮಯ್ಯನವರು ಕಳೆದ ವರ್ಷ ಮಾರ್ಚಿ ತಿಂಗಳಿನಲ್ಲಿ ತಮ್ಮ ಉದ್ಯೋಗದಿಂದ ನಿವೃತ್ತರಾದರೂ ಕೂಡ ಸಂಘದ ಪ್ರಾರ್ಥನೆಯಂತೆ ಗ್ರಂಥದ ಸಂಪಾದನಾಕಾರ್ಯವನ್ನು ಮುಂದುವರಿಸಿ, ಯಾವ ಪ್ರತಿಫಲವನ್ನೂ ಬಯಸದೆ ಅದನ್ನು ಮುಗಿಸಿಕೊಟ್ಟಿರುತ್ತಾರೆ; ಇದಕ್ಕೆಂದು ಅವರು ಸುಮಾರು ಎರಡು ವರ್ಷಕಾಲ ಅವಿಶ್ರಾಂತರಾಗಿ ದುಡಿದಿರುತ್ತಾರೆ. ಗ್ರಂಥಕ್ಕೆ ಅವರು ಬರೆದಿರುವ ವಿಸ್ತಾರವಾದ ಪೀಠಿಕೆಯನ್ನೂ ಅಮೂಲ್ಯವಾದ ವ್ಯಾಖ್ಯಾನವನ್ನೂ ಪರಿಶೀಲಿಸಿದರೆ, ಅವರು ಪಟ್ಟ ಶ್ರಮದ ಪ್ರಮಾಣ ಗೊತ್ತಾಗುತ್ತದೆ. ತಮ್ಮ ಪರಿಶ್ರಮದ ಫಲವೆಲ್ಲವನ್ನೂ ತಾವು ಕಟ್ಟಿ ಬೆಳಸಿದ ಸಂಘಕ್ಕೇ ಧಾರೆಯೆರೆದು ಕೊಟ್ಟಿರುತ್ತಾರೆ. ಇದಕ್ಕೆ ಪ್ರತಿಯಾಗಿ ನಾವು ಅವರಿಗೆ ಅರ್ಪಿಸುತ್ತಿರುವುದು ಸಂಘದ ಕೃತಜ್ಞತೆಯ ವಂದನೆಗಳನ್ನು ಮಾತ್ರ.

ಕಳೆದ ವರ್ಷ ನಮ್ಮ ಸಂಘದ ಪ್ರಾರಂಭೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ದಯಮಾಡಿಸಿದ್ದ, ಬೆಂಗಳೂರು ವಿಶ್ವವಿದ್ಯಾನಿಲಯದ ಮಾನ್ಯ

ಉಪಕುಲಪತಿ ಪದ್ಮಶ್ರೀ ಡಾ|| ವಿ. ಕೃ. ಗೋಕಾಕ್, ಎಂ.ಎ. (ಆಕ್ಸನ್) ಅವರು ನಮ್ಮ ಸಂಘದ ಪ್ರಕಟನ ಕಾರ್ಯೋದ್ಯಮವನ್ನು ಶ್ಲಾಘಿಸಿ, ಕವಿರಾಜಮಾರ್ಗದಂಥ ಉದ್ಗ್ರಂಥದ ಪ್ರಕಟನೆಗೆ ವಿಶ್ವವಿದ್ಯಾನಿಲಯವು ಧನಸಹಾಯ ಮಾಡುವುದೆಂಬ ಆಶ್ವಾಸನೆಯಿತ್ತರು. ಇದಕ್ಕಾಗಿ ಸಂಘದ ಪರವಾಗಿ ನಮ್ಮ ಕೃತಜ್ಞತೆಯ ವಂದನೆಗಳನ್ನು ಅವರಿಗೆ ಸಮರ್ಪಿಸುತ್ತೇವೆ.

ಗ್ರಂಥ ಪ್ರಕಟನೆಯ ಸಂಬಂಧದ ಪೂರ್ವಭಾವಿ ವೆಚ್ಚವು ನಮ್ಮ ನಿರೀಕ್ಷೆಯ ಮಿತಿಯನ್ನು ಮೀರಿ ಕಾರ್ಯವು ಕುಂಠಿತವಾದಾಗ, ಮೈಸೂರಿನ ಉತ್ಸಾಹಶಾಲಿ ಪ್ರಕಾಶಕರಾದ ಶ್ರೀ ಡಿ. ವಿ. ಕೆ. ಮೂರ್ತಿಯವರು ನಮ್ಮ ನೆರವಿಗೆ ಬಂದರು. ಅವರ ಸಹಕಾರವನ್ನು ಸಂಘ ಕೃತಜ್ಞತೆಯಿಂದ ಸ್ಮರಿಸುತ್ತದೆ.

ಕವಿರಾಜಮಾರ್ಗದ ಈ ಮುದ್ರಣವು ವಿದ್ಯಾರ್ಥಿಲೋಕಕ್ಕೆ ಉಪಯುಕ್ತವೂ ವಿದ್ವಜ್ಜನರಿಗೆ ಪ್ರಿಯವೂ ಆಗುವುದೆಂದು ನಂಬಿದ್ದೇವೆ. ಈ ಗ್ರಂಥವನ್ನೂ ನಮ್ಮ ಸಂಘದ ಇತರ ಪ್ರಕಟನೆಗಳನ್ನೂ ಕನ್ನಡಿಗರು ಕೊಂಡುಕೊಂಡು ಸಂಘಕ್ಕೆ ಪ್ರೋತ್ಸಾಹ ಕೊಟ್ಟು ಅದನ್ನು ಬಲಪಡಿಸಬೇಕೆಂದು ಪ್ರಾರ್ಥಿಸುತ್ತೇವೆ.

ಬೆಂಗಳೂರು
ಫೆಬ್ರುವರಿ ೧೨, ೧೯೬೮

ಜಿ. ಬ್ರಹ್ಮಪ್ಪ
ಅಧ್ಯಕ್ಷ

ಪೀಠಿಕೆ

ಚಾರಿತ್ರಿಕ ಹಿನ್ನೆಲೆ: ಕವಿರಾಜಮಾರ್ಗವು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟವೂ ಮಹತ್ತ್ವಪೂರ್ಣವೂ ಆದ ಸ್ಥಾನವನ್ನು ಪಡೆದಿದೆ. ಈವರೆಗೆ ಉಪಲಬ್ಧವಾಗಿರುವ ಕನ್ನಡ ಗ್ರಂಥಗಳಲ್ಲಿ ಕವಿರಾಜಮಾರ್ಗವು ಮೊತ್ತಮೊದಲನೆಯದು. ಇದು ಅಲಂಕಾರಶಾಸ್ತ್ರಕ್ಕೆ ಸಂಬಂಧಪಟ್ಟ ಲಕ್ಷಣ ಗ್ರಂಥ; ಕನ್ನಡದಲ್ಲಿ ಕಾವ್ಯಮೀಮಾಂಸೆಯ ಪರಂಪರೆಗೆ ತಲಕಾವೇರಿ. ಹೀಗೆ, ಅನೇಕ ದೃಷ್ಟಿಗಳಿಂದ ಅಮೂಲ್ಯವೆನಿಸಿರುವ ಈ ಗ್ರಂಥವನ್ನು ರಚಿಸಿದವನು ಕರ್ಣಾಟಕದ ರಾಷ್ಟ್ರಕೂಟವಂಶದ ದೊರೆ ನೃಪತುಂಗನೆಂದು ಕೆಲವು ವಿದ್ವಾಂಸರ ಅಭಿಪ್ರಾಯ; ಆತನ ಸಭಾಸದನಾಗಿದ್ದ ಕವಿಯೊಬ್ಬನು ಇದರ ಕರ್ತೃ ಎಂದು ಬೇರೆ ಹಲವು ಮಂದಿ ವಿದ್ವಾಂಸರ ಅಭಿಮತ. ನೃಪತುಂಗ ಸಭಾಸದನಾದ ಆ ಕವಿ ಶ್ರೀವಿಜಯನೆಂದು ಕೆಲವರೂ, ಕವೀಶ್ವರನೆಂದು ಇನ್ನು ಕೆಲವರೂ ವಾದಿಸಿದ್ದಾರೆ. ಕವಿ ಯಾರೇ ಆಗಿದ್ದರೂ, ಗ್ರಂಥವು ನೃಪತುಂಗನ ಆಳಿಕೆಯಲ್ಲಿ (ಕ್ರಿ.ಶ. ೮೧೪-೮೭೭) ರಚಿತವಾಗಿರುವುದು ನಿರ್ವಿವಾದವಾಗಿರುವುದರಿಂದಲೂ, ಆತನೇ (ಅದರ ಕರ್ತೃವಲ್ಲದಿದ್ದರೂ) ಅದರ ನಿರ್ಮಾಣಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿರುವ ಪ್ರೇರಕಶಕ್ತಿಯೂ ಕವಿಯ ಆಶ್ರಯದಾತನೂ ಆಗಿರುವುದರಿಂದಲೂ, ನೃಪತುಂಗನ ಮತ ವ್ಯಕ್ತಿತ್ವ ಮುಂತಾದ ಸಂಗತಿಗಳ ವಿವೇಚನೆಯಿಂದ ಗ್ರಂಥದ ಕರ್ತೃತ್ವ ವಿಚಾರದ ಗೋಜನ್ನು ಬಿಡಿಸಿ, ಆ ಸಂಬಂಧದ ವಿವಾದವನ್ನು ಕೊನೆಮುಟ್ಟಿಸುವ ಮಾತು ಎಂದು ಹೇಳುವುದು ಸಾಹಸವಾಗಬಹುದಾದರೂ ನಾವು ವಹಿಸಿರುವ ಪಕ್ಷದ ನಿಲುವನ್ನು ಇನ್ನಷ್ಟು ಬಲಪಡಿಸುವ ನಮ್ಮ ಕೊನೆಯ ಮಾತನ್ನು ಜಿಜ್ಞಾಸುಗಳ ಮುಂದಿಡಲು ತಕ್ಕಮಟ್ಟಿನ ನೆರವು ದೊರೆಯುವುದರಿಂದಲೂ, ನೃಪತುಂಗನ ವಿಚಾರವನ್ನು ಸಂಕ್ಷೇಪವಾಗಿಯಾದರೂ ಪ್ರಸ್ತಾವಿಸಬೇಕಾದ್ದು ಅಗತ್ಯ.

ರಾಷ್ಟ್ರಕೂಟ ವಂಶ: ರಾಷ್ಟ್ರಕೂಟವಂಶವು ಕರ್ನಾಟಕ ಮತ್ತು ಮಹಾರಾಷ್ಟ್ರ ಪ್ರದೇಶಗಳನ್ನು ಸುಮಾರು ಎರಡು ಶತಮಾನಗಳಿಗಿಂತ ಹೆಚ್ಚುಕಾಲ ತನ್ನ ಆಳ್ವಿಕೆಯಲ್ಲಿ ಇಟ್ಟುಕೊಂಡಿದ್ದಿತು. ಈ ವಂಶದ ಹೆಸರಿನ ಬಗೆಗೆ ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ನಿರ್ವಚನಗಳನ್ನು ನೀಡಿದ್ದಾರೆ;[1] ರಾಷ್ಟ್ರಕೂಟರು ಕನ್ನಡಿಗರು ಎಂಬುದಿಷ್ಟನ್ನು ನಾವು ನೆನಪಿಟ್ಟರೆ ಸಾಕು. ಈ ವಂಶದ ಮೂಲಪುರುಷ ಯದು ಎಂದು ಶಾಸನದ ಉಲ್ಲೇಖ ವಿದ್ದರೂ ಮೊದಲ ದೊರೆ ದಂತಿದುರ್ಗ. (ಇವನ ಹೆಸರು ದಂತಿವರ್ಮ, ದಂತಿಗ ಎಂದೂ ಉಲ್ಲೇಖಗಳಿವೆ).[2] ಬಾದಾಮಿಯ ಚಾಲುಕ್ಯರ ಸಾಮಂತನಾಗಿದ್ದ ಅವನು ಕ್ರಿ. ಶ. ೭೫೩ರಲ್ಲಿ ಚಾಲುಕ್ಯರನ್ನು ಸೋಲಿಸಿ, ತಾನೇ ಪ್ರಭುವಾದನು; 'ರಾಜಪರಮೇಶ್ವರ' ಎಂಬ ಸಾರ್ವಭೌಮಾಂಕಿತವನ್ನು ಇರಿಸಿಕೊಂಡನು. ಅವನಿಗೆ ಪೃಥ್ವೀವಲ್ಲಭ, ಖಡ್ಗಾವಲೋಕ ಎಂಬ ಬಿರುದುಗಳೂ ಇದ್ದುವು. (ಇವನಿಗೂ ಹಿಂದಿನ ರಾಷ್ಟ್ರಕೂಟರ ಸಾಮಂತರಾಜರ ಹೆಸರುಗಳನ್ನು ರಾಷ್ಟ್ರಕೂಟ ವಂಶವೃಕ್ಷದಲ್ಲಿ ಕೊಟ್ಟಿದೆ. ನೋಡಿ: ಅನುಬಂಧ). ಅವನು ತಾನು ಸಂಪಾದಿಸಿದ ಹೊಸ ರಾಜ್ಯವನ್ನು ಉತ್ತರದಲ್ಲಿ ಮಾಳವದವರೆಗೂ ವಿಸ್ತರಿಸಿ, ಕ್ರಿ. ಶ. ೭೫೬ರಲ್ಲಿ ಮರಣ ಹೊಂದಿದನು. ದಂತಿದುರ್ಗನ ತರುವಾಯ ಸಿಂಹಾಸನವನ್ನೇರಿದ (ಅವನ ಚಿಕ್ಕಪ್ಪ) Iನೆಯ ಕೃಷ್ಣನ ಕಾಲದಲ್ಲಿ (ಕ್ರಿ.ಶ. ೭೫೬-೭೭೩) ರಾಷ್ಟ್ರಕೂಟ ಸಾಮ್ರಾಜ್ಯವು ದಕ್ಷಿಣದಲ್ಲಿ ಗಂಗವಾಡಿಯನ್ನು ಭೇದಿಸಿ, ವಿಸ್ತಾರಗೊಂಡಿತು. ರಾಜ್ಯವಿಸ್ತರಣೆಯ ಕಾರ್ಯದಲ್ಲಿ ಯುವರಾಜ ಗೋವಿಂದನ ನೆರವೂ ಇದ್ದಿತು. ಕೃಷ್ಣನ ಹೆಸರು ನಿಂತಿರುವುದು ಅವನು ಎಲ್ಲೋರದಲ್ಲಿ ಅಖಂಡ ಶಿಲೆಯಲ್ಲಿ ಕೊರೆಯಿಸಿ ಕಟ್ಟಿಸಿರುವ ಶಿವದೇವಾಲಯದಿಂದ. (ಕೃಷ್ಣನಿಗೆ **ಅಕಾಲವರ್ಷ, ಶುಭತುಂಗ** ಎಂಬ ಬಿರುದುಗಳಿದ್ದುವು). ತಂದೆಯ ಕಾಲದಲ್ಲಿ ಪರಾಕ್ರಮಿಯೆನಿಸಿದ್ದ ಯುವರಾಜ ಗೋವಿಂದನು (IIನೆಯ ಗೋವಿಂದ: ಕ್ರಿ. ಶ. ೭೭೩-೭೮೦) ಪಟ್ಟಕ್ಕೆ ಬಂದಮೇಲೆ ವಿಷಯಲೋಲುಪನಾಗಿ ರಾಜ್ಯಭಾರವಿಚಾರಗಳಲ್ಲಿ ಉದಾಸೀನನಾಗಿದ್ದನು. ಗೋವಿಂದನಿಗೂ ಅವನ ತಮ್ಮ ಧ್ರುವನಿಗೂ ಯಾದವೀ ಕಲಹ ನಡೆದು, ಗಂಗರಸರು ಗೋವಿಂದನ ಪಕ್ಷವನ್ನು ವಹಿಸಿದ್ದರು. ಇದೇ ನೆವವಾಗಿ, ಪ್ರಬಲನಾದ ಧ್ರುವನು ಸಿಂಹಾಸನವನ್ನು ಆಕ್ರಮಿಸಿಕೊಂಡು, ಗಂಗರಾಜ್ಯವನ್ನೆಲ್ಲ ಸ್ವಾಧೀನಪಡಿಸಿಕೊಂಡನು. ಹೀಗೆ, **ಧ್ರುವನ ಕಾಲದಲ್ಲಿ** (ಕ್ರಿ. ಶ. ೭೮೦-೭೯೩), **ರಾಷ್ಟ್ರಕೂಟ ಸಾಮ್ರಾಜ್ಯವು ದಕ್ಷಿಣದಲ್ಲಿ ಕಾವೇರಿಯುವರೆಗೂ ಹಬ್ಬಿತು.** ಇಷ್ಟರಿಂದ ತೃಪ್ತನಾಗದೆ, ವೆಂಗಿಯ ಚಾಲುಕ್ಯರನ್ನೂ ಪಲ್ಲವರನ್ನೂ ಸೋಲಿಸಿ, ಉತ್ತರ ದಿಗ್ವಿಜಯದತ್ತ ದೃಷ್ಟಿ ಹರಿಸಿದನು. ಉತ್ತರದಲ್ಲಿ ಗುಜರಾತಿನ ವತ್ಸರಾಜನನ್ನೂ ಗೌಡದೇಶದ (ಬಂಗಾಳದ) ಧರ್ಮಪಾಲನನ್ನೂ ಸೋಲಿಸಿದನು. (ಧ್ರುವನಿಗೆ **ನಿರುಪಮ, ಧಾರಾವರ್ಷ, ಕಲಿವಲ್ಲಭ** ಎಂಬ ಬಿರುದುಗಳಿದ್ದುವು). ತನ್ನ ಮಕ್ಕಳಲ್ಲೆಲ್ಲಾ ಗೋವಿಂದನೇ ಉತ್ತರಾಧಿಕಾರಿಯಾಗಲು ಸಮರ್ಥನೆಂದು ಅರಿತಿದ್ದ ಧ್ರುವನು, ಅವನಿಗೆ ಯುವರಾಜ ಪಟ್ಟವನ್ನು ಕಟ್ಟಿದನು. ಧ್ರುವನ ಕಾಲದಲ್ಲಿ

ರಾಷ್ಟ್ರಕೂಟ ಸಾಮ್ರಾಜ್ಯವು ರಾಜಕೀಯ ದೃಷ್ಟಿಯಿಂದ ಅಖಂಡ ಭಾರತದಲ್ಲಿ ಅತ್ಯಂತ ಪ್ರಬಲವಾಗಿತ್ತು. ಧ್ರುವನ ಮರಣಾನಂತರ, ಅವನ ಹಿರಿಯ ಮಗನಾದ ಕಂಭನ ಪ್ರತಿಭಟನೆಯನ್ನು ಯುವರಾಜ ಗೋವಿಂದನು ಎದುರಿಸಬೇಕಾಯಿತು. ಕಂಭನಿಗೆ ಗಂಗರಾಜರ ಬೆಂಬಲವಿತ್ತು; ಏಕೆಂದರೆ, ಅವನು ಗಂಗವಾಡಿಯಲ್ಲಿ ರಾಷ್ಟ್ರಕೂಟ ಪ್ರತಿನಿಧಿಯಾಗಿದ್ದನು. ಕಂಭನನ್ನೂ ಅವನ ಪಕ್ಷದವರನ್ನೂ ಅಡಗಿಸಿ, ಸಿಂಹಾಸನವನ್ನೇರುವುದು ಗೋವಿಂದನಿಗೆ ಕಷ್ಟವಾಗಲಿಲ್ಲ. ಪಟ್ಟಕ್ಕೆ ಬಂದಮೇಲೆ ಅವನು ಕಂಭನನ್ನು ಮತ್ತೆ ಗಂಗವಾಡಿಯ ಪ್ರತಿನಿಧಿಯಾಗಿ ನೇಮಿಸಿ, ಕೃತಘ್ನರಾಗಿ ವರ್ತಿಸಿದ್ದ ಸಾಮಂತರನ್ನು ಅವರವರ ರಾಜ್ಯಗಳಲ್ಲಿ ನೆಲೆಗೊಳಿಸಿದನು. ಈ ಮುನ್ನವೇ ಗೋವಿಂದನು ತನ್ನ ತಮ್ಮಂದಿರಾದ ಕರ್ಕ (II) ಇಂದ್ರ (III) ರನ್ನು ಗುರ್ಜರ (ಗುಜರಾತ್) ಪ್ರಾಂತದಲ್ಲಿ ನೆಲೆಗೊಳಿಸಿದ್ದನು. ರಾಷ್ಟ್ರಕೂಟವಂಶದ ಗುಜರಾತ್ ಶಾಖೆ ಅವರಿಂದ ಮೊದಲಾಯಿತು. ೩ನೆಯ ಗೋವಿಂದನೂ ತನ್ನ ತಂದೆಯಂತೆಯೇ ಉತ್ತರ ದಿಗ್ವಿಜಯಕ್ಕೆ ಹೊರಟು, ಹಿಮವತ್ಪರ್ವತದವರೆಗೂ ದಂಡಯಾತ್ರೆಗೈದು, ಮತ್ತೆ ತಲೆಯೆತ್ತಿದ್ದ ಗುರ್ಜರರಾಜನನ್ನು ಅಂಕೆಯಲ್ಲಿಟ್ಟು, ಕನೂಜದ ಚಕ್ರಾಯುಧನನ್ನೂ ವಂಗದೇಶದ ಧರ್ಮಪಾಲನನ್ನೂ ಬಾಯ್ಕೇಳಿಸಿ, ರಾಜ್ಯಕ್ಕೆ ಹಿಂತಿರುಗಿದನು. ಆಗ, ಮಾರ್ಗಮಧ್ಯದಲ್ಲಿ ನರ್ಮದಾ ತೀರದಲ್ಲಿ 'ಶ್ರೀಭುವನ' (ಶ್ರೀಭವನ ?) ಎಂಬಲ್ಲಿ ಕೆಲಕಾಲ ತಂಗಿದ್ದನೆಂದೂ, ಅಲ್ಲಿಯೆ ಅವನ ಮಗನಾದ ನೃಪತುಂಗನು ಜನಿಸಿದುದಾಗಿಯೂ ಚರಿತ್ರಕಾರರು ಅಭಿಪ್ರಾಯ ಪಟ್ಟಿದ್ದಾರೆ.[4] ಅದು ಹೇಗಾದರೂ ಇರಲಿ. ಉತ್ತರ ದಿಗ್ವಿಜಯದಿಂದ ಹಿಂದಿರುಗುತ್ತಿದ್ದಾಗಲೇ, ದಕ್ಷಿಣದ ಅರಸರು ರಾಷ್ಟ್ರಕೂಟ ರಾಜ್ಯದ ಮೇಲೆ ಒಟ್ಟಾಗಿ ಆಕ್ರಮಣ ಮಾಡುವ ಹವಣಿಕೆಮಾಡಿದಂತೆ ಕಂಡುಬರುತ್ತದೆ. ಇದನ್ನರಿತ ಗೋವಿಂದನು ತನ್ನ ದೃಷ್ಟಿಯನ್ನು ದಕ್ಷಿಣಕ್ಕೆ ತಿರುಗಿಸಿ, ದಕ್ಷಿಣಾಪಥದಮೇಲೆ ದಂಡೆತ್ತಿ ಬಂದನು. ಕೇರಳದ ರಾಜರು, ಚೋಳರು, ಪಲ್ಲವರು, ಪಾಂಡ್ಯರು – ಇವರೆಲ್ಲ ಗೋವಿಂದನ ಸಾರ್ವಭೌಮತ್ವವನ್ನು ಒಪ್ಪಿಕೊಂಡರು. ಸಿಂಹಳದ ದೊರೆಯೂ ಇವನಿಗೆ ಶರಣಾಗತನಾದನು. ಹೀಗೆ ೩ನೆಯ ಗೋವಿಂದನು ಅಖಂಡಭಾರತದ ಮೇಲೆ ತನ್ನ ಪ್ರತಾಪಾಂಕಿತವನ್ನು ಒತ್ತಿ, ಬಹುಮಟ್ಟಿಗೆ ಸಮಗ್ರಭಾರತದ ಪ್ರಥಮ ಸಮ್ರಾಟನೆನಿಸಿಕೊಂಡು, **ಜಗತ್ತುಂಗ, ಪ್ರಭೂತವರ್ಷ,** ಶ್ರೀವಲ್ಲಭ, ಪ್ರಥ್ವೀವಲ್ಲಭ, **ಕೀರ್ತಿನಾರಾಯಣ** ಎಂಬ ಬಿರುದುಗಳಿಂದ ಮೆರೆದನು. ಇವನ ಆಳಿಕೆಯಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯ ರಾಜಕೀಯ ದೃಷ್ಟಿಯಿಂದ ತನ್ನ ವೈಭವದ ಶಿಖರವನ್ನು ಮುಟ್ಟಿತು.

ನೃಪತುಂಗನ ಸಾಧನೆ, ವ್ಯಕ್ತಿತ್ವ: ನೃಪತುಂಗನು ೩ನೆಯ ಗೋವಿಂದನ ಏಕಮಾತ್ರ ಪುತ್ರ. ಅವನಿಗೆ ತಂದೆ ಇಟ್ಟ ಹೆಸರು **ಶರ್ವ.** (ಕ್ರಿ. ಶ. ೮೬೭ರ ಶಾಸನವೊಂದರಲ್ಲಿ 'ಶರ್ವ' ಎಂಬ ಹೆಸರೇ ಕಂಡು

ಬರುತ್ತದೆ). ಅವನು ಪಟ್ಟಕ್ಕೆ ಬಂದಾಗ **ಅಮೋಘವರ್ಷ** ಎಂಬ ಹೆಸರನ್ನು ತಳೆದು, ತಂದೆ 'ಜಗತ್ತುಂಗ'ನೆಂದು ಪ್ರಸಿದ್ಧನಾಗಿದ್ದಂತೆ ಇವನು **ನೃಪತುಂಗ**ನೆಂದು ಪ್ರಸಿದ್ಧನಾದನು. ಸಮಕಾಲೀನ ಶಾಸನಗಳಲ್ಲಿ **ಅತಿಶಯಧವಳ, ಲಕ್ಷ್ಮೀವಲ್ಲಭ,** ಮಹಾರಾಜ ಶರ್ವ, ನೃಪತುಂಗ, **ಪೃಥ್ವೀವಲ್ಲಭ** ಎಂದೂ, ತರುವಾಯದ ಶಾಸನಗಳಲ್ಲಿ ಮಹಾರಾಜಷಂಡ, **ಶ್ರೀವಲ್ಲಭ, ವೀರನಾರಾಯಣ** ಎಂದೂ ನೃಪತುಂಗನ ಬಿರುದುಗಳು ಉಲ್ಲೇಖಗೊಂಡಿವೆ. ಕವಿರಾಜಮಾರ್ಗದಲ್ಲಿ ಕಂಡುಬರುವ ಬಿರುದುಗಳೆಂದರೆ—**ನೀತಿನಿರಂತರ, ಕೃತಕೃತ್ಯಮಲ್ಲ (ವಲ್ಲಭ),** ವೀರನಾರಾಯಣ, **ನಿತ್ಯಮಲ್ಲವಲ್ಲಭ, ನರಲೋಕಚಂದ್ರ.** ಕವಿರಾಜಮಾರ್ಗದಲ್ಲಿ ಮೇಲಿಂದ ಮೇಲೆ ಉಕ್ತವಾಗಿರುವವು ಅತಿಶಯಧವಳ, ನೃಪತುಂಗ, ಅಮೋಘವರ್ಷ ಎಂಬ ಬಿರುದುಗಳು. ರಾಷ್ಟ್ರಕೂಟ ವಂಶದ ದೊರೆಗಳಲ್ಲಿ ಅನೇಕ ಮಂದಿಗೆ ಅಮೋಘವರ್ಷ ಎಂಬ ಬಿರುದಿರುವುದೂ, ನೃಪತುಂಗನೊಬ್ಬನಿಗೆ ಮಾತ್ರ ಅತಿಶಯಧವಳ ಎಂಬ ಬಿರುದಿರುವುದೂ ಗಮನಾರ್ಹ. (ನೋಡಿ, ಅನುಬಂಧ: ರಾಷ್ಟ್ರಕೂಟ ವಂಶಾವಳಿ). ಈ ಬಿರುದುಗಳಲ್ಲಿ ಹಲವನ್ನು ನೃಪತುಂಗನು ರಾಜ್ಯಭಾರ ವಹಿಸಿಕೊಂಡು ಬಹುಕಾಲವಾದಮೇಲೆ ತಳೆದಿರಬೇಕು; ಏಕೆಂದರೆ, ರಾಜ್ಯವನ್ನು ರೂಢಿಸಿಕೊಳ್ಳುವುದಕ್ಕೇ ಅವನಿಗೆ ಬಹುಕಾಲ ಹಿಡಿಯಿತು.

ತಂದೆ ಗೋವಿಂದನು ಅವಸಾನಹೊಂದಿದ ಮೇಲೆ, ಕ್ರಿ.ಶ. ೮೧೪ರಲ್ಲಿ ನೃಪತುಂಗನು ಸಿಂಹಾಸನವನ್ನೇರಿ, ಸುಮಾರು ೬೫ ವರ್ಷಗಳಷ್ಟು ದೀರ್ಘಕಾಲ ರಾಜ್ಯಭಾರ ಮಾಡಿದನು. (ಗೋವಿಂದನ ಅವಸಾನ ವಿಚಾರವು ಕ. ರಾ. ಮಾರ್ಗದ ಒಂದು ಪದ್ಯದಲ್ಲಿ ಸೂಚಿತವಾಗಿದೆಯೆಂದು ಊಹಿಸಲಾಗಿದೆ. (ನೋಡಿ: III-೩೦ರ ಟಿಪ್ಪಣಿ; ಪು. ೨೬೮). ನೃಪತುಂಗನು ರಾಜ್ಯಾಧಿಕಾರವನ್ನು ವಹಿಸಿಕೊಂಡಮೇಲೆ, ತನ್ನ ತಂದೆ ಕಟ್ಟಿದ ವಿಸ್ತಾರವಾದ ರಾಜ್ಯವನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಅವನಿಗೆ ಸಹಜವಾಗಿಯೆ ಕಷ್ಟವಾಗಿ ಪರಿಣಮಿಸಿತು. ಪಟ್ಟಕ್ಕೆ ಬಂದಾಗ ನೃಪತುಂಗನು ಸುಮಾರು ೧೫-೧೬ರ ಹರೆಯದವನು. ಈ ಸುಸಂಧಿಯನ್ನು ರಾಜ್ಯದ ಪೂರ್ವವೈರಿಗಳು ಉಪಯೋಗಿಸಿಕೊಂಡರು. ಜಗತ್ತುಂಗ ಗೋವಿಂದನೊಡನೆ ಅನೇಕವೇಳೆ ಹೋರಾಡಿ ಸೋತಿದ್ದ ವೆಂಗಿಯ ಅಥವಾ ಮೂಡಣ

ಚಾಲುಕ್ಯವಂಶದ ಎರಡನೆಯ ವಿಜಯಾದಿತ್ಯನು (ಸು. ಕ್ರಿ.ಶ. ೭೯೩-೮೪೧) ಗೋವಿಂದನು 'ಅಸ್ತಂಗತ'ನಾದಕೂಡಲೆ, ರಾಷ್ಟ್ರಕೂಟ ರಾಜಧಾನಿಯನ್ನಾಕ್ರಮಿಸಿ, 'ರಾಜಾಧಿರಾಜ,' 'ರಾಜ ಪರಮೇಶ್ವರ' ಮುಂತಾದ ರಾಷ್ಟ್ರಕೂಟ ಪರಮಾಧಿಕಾರ ಸೂಚಕ ಬಿರುದುಗಳನ್ನು ತಾನು ವಹಿಸಿಕೊಂಡನೆಂದು ಚರಿತ್ರಕಾರರು ತಿಳಿಸಿದ್ದಾರೆ.[5] ವಿಜಯಾದಿತ್ಯನ ಈ ದ್ರೋಹಕಾರ್ಯವಲ್ಲದೆ, ಇನ್ನೂ ಅನೇಕ ಆಘಾತಗಳನ್ನು ನೃಪತುಂಗನು ಎದುರಿಸಬೇಕಾಗಿ ಬಂದದ್ದನ್ನು ಕೆಲವು ಶಾಸನಗಳು ಉಲ್ಲೇಖಿಸಿವೆ. ಸ್ವಭಾವತಃ ಶಾಂತಿಪ್ರಿಯನಾದ ನೃಪತುಂಗನು ಏಕಕಾಲದಲ್ಲಿ 'ಒಳಹಗೆ'ಗಳನ್ನೂ 'ಹೊರಹಗೆ'ಗಳನ್ನೂ ಎದುರಿಸಬೇಕಾಗಿ ಬಂದು, ಯುದ್ಧಗಳು ಅನಿವಾರ್ಯವಾದುವು. ಸಾಮಂತರು, ಮಂತ್ರಿಗಳು, ಬಾಂಧವರು ಮುಂತಾದವರೆಲ್ಲ ವಿರೋಧಿಗಳಾದಂತೆ ಕಾಣುತ್ತದೆ; ಇತ್ತ ದಕ್ಷಿಣದಲ್ಲಿ, ಸಾಮಂತರಾಗಿದ್ದ ಗಂಗರು ಮತ್ತೆ ತಲೆಯೆತ್ತಿಕೊಂಡು ರಾಷ್ಟ್ರಕೂಟರ ಪ್ರಬಲವೈರಿಗಳಾಗಿದ್ದರು. ನೃಪತುಂಗನು ಸುಮಾರು ೨೦ ವರ್ಷಕಾಲ ಒಂದೇ ಸಮನಾಗಿ ಅವರೊಂದಿಗೆ ಹೋರಾಡಬೇಕಾಯಿತು. ಸಾಲದುದಕ್ಕೆ, ಅವರು ಅವನ ಏಕಮಾತ್ರ ಪುತ್ರ ಯುವರಾಜ ಕೃಷ್ಣನನ್ನು ಪ್ರಲೋಭನಗೊಳಿಸಿ ತಮ್ಮ ಬಲೆಗೆ ಹಾಕಿಕೊಂಡಿದ್ದರು. ದಂಡನಾಯಕ ವೀರ ಬಂಕೆಯನು ಗಂಗರ ಮೇಲೆ ದಂಡೆತ್ತಿ ಹೋಗಿ ಕಡೆಗೊಮ್ಮೆ ಅವರನ್ನು ಪರಾಭವಗೊಳಿಸಿ, ದಕ್ಷಿಣದಲ್ಲಿ ನೃಪತುಂಗನ ಸಾರ್ವಭೌಮತ್ವ ಮತ್ತೆ ನೆಲೆಗೊಳ್ಳಲು ವಿಶೇಷವಾಗಿ ನೆರವಾದನು. ನೃಪತುಂಗನು ತನ್ನ ಇಬ್ಬರು ಪುತ್ರಿಯರಲ್ಲಿ (ಚಂದ್ರೋಬಲಬ್ಬೆ ಮತ್ತು ಶಂಖಾದೇವಿ) ಹಿರಿಯಳನ್ನು ಗಂಗ ರಾಜಕುಮಾರ ೧ನೆಯ ಬೂತುಗನಿಗೆ ವಿವಾಹ ಮಾಡಿಕೊಟ್ಟು, ಗಂಗರೊಂದಿಗೆ ಮೈತ್ರಿಯನ್ನು ಬಲಪಡಿಸಿಕೊಂಡನು. (ಕಿರಿಯ ಮಗಳನ್ನು ಪಲ್ಲವ ರಾಜಕುಮಾರನಿಗೆ ಮದುವೆ ಮಾಡಿಕೊಟ್ಟಂತೆ ತಿಳಿದುಬರುತ್ತದೆ). ಅತ್ತ ಉತ್ತರದಲ್ಲಿ ವಂಗದೇಶ ಮತ್ತು ಮಗಧರಾಜ್ಯಗಳೊಂದಿಗೆ ಘರ್ಷಣೆಯೊದಗಿತು. ಈಯೆಲ್ಲ ಕಾಳೆಗಗಳಲ್ಲಿ ವೀರ ಬಂಕೆಯನ ನೆರವು ನೃಪತುಂಗನಿಗೆ ವಿಶೇಷವಾಗಿತ್ತು; ಜೊತೆಗೆ, ಗುಜರಾತಿನಲ್ಲಿ ರಾಷ್ಟ್ರಕೂಟ ಪ್ರತಿನಿಧಿಯಾಗಿ ಆಳುತ್ತಿದ್ದ ಅವನ ಚಿಕ್ಕಪ್ಪ ಕರ್ಕನ ನೆರವೂ ಇದ್ದಿತು. ಅಂತೂ, ನೃಪತುಂಗನು ಸಿಂಹಾಸನವೇರಿದ ಮೇಲೆ ತಂದೆ ಗೋವಿಂದನು

ಕಟ್ಟಿದ್ದ ವಿಸ್ತಾರವಾದ ರಾಜ್ಯವನ್ನು—ಬೆಳಸುವ ಮಾತಿರಲಿ—ಉಳಿಸಿಕೊಳ್ಳಲು ಬಹಳ ಪ್ರಯಾಸಪಟ್ಟಂತೆ ಕಂಡುಬರುತ್ತದೆ; ರಾಜ್ಯದಲ್ಲಿ ಶಾಂತಿ ನೆಲೆಗೊಂಡಮೇಲೆ, ಪ್ರಜೆಗಳ ಮನಸ್ಸನ್ನು ಒಲಿಸಿಕೊಂಡು ರಾಜ್ಯವನ್ನು ಸುಭದ್ರಗೊಳಿಸುವ ಕಾರ್ಯಕ್ಕೆ ಅವನು ಮನಸ್ಸು ಕೊಟ್ಟಿರಬೇಕು. ನೃಪತುಂಗನ ಆಳ್ವಿಕೆಯ ಮುಖ್ಯ ಚಾರಿತ್ರಿಕ ಘಟನೆಗಳನ್ನು ಸಂಕ್ಷೇಪವಾಗಿಯಾದರೂ ಇಲ್ಲಿ ಉಲ್ಲೇಖಿಸಿರುವ ಉದ್ದೇಶ ಇಷ್ಟೆ: ಕವಿರಾಜಮಾರ್ಗದ ಹಲವಾರು ಲಕ್ಷ್ಯಪದ್ಯಗಳಲ್ಲಿ, ಕೆಲವು ಆ ಘಟನೆಗಳ ಹಿನ್ನೆಲೆಯನ್ನು ಪ್ರತಿಧ್ವನಿಸುವಂತಿರುವ ' ರಾಜಕೀಯ ಧ್ವನಿ 'ಯನ್ನು ಒಳಗೊಂಡಿವೆ; ಇನ್ನು ಕೆಲವು, ಒಳಹೊರಗಿನ ' ಅರಾತಿಸಮಿತಿ 'ಯನ್ನು ಕೊಂದಮೇಲೆ ರಾಜ್ಯದ ಆಡಳಿತಕ್ಕೂ ಕಾವ್ಯ, ಶಾಸ್ತ್ರ, ಧರ್ಮ ಮುಂತಾದ ಶಾಂತಿಕಾಲದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಗಮನವೀಯುತ್ತಿದ್ದ ಉದಾರನೀತಿಯ ನೃಪತುಂಗನ ವ್ಯಕ್ತಿತ್ವವನ್ನು ಬಣ್ಣಿಸುವಂತಿವೆ.[6] ಇನೆಯ ಪರಿಚ್ಛೇದದ ೧೪೦–೧೪೧ನೆಯ ಲಕ್ಷ್ಯ ಪದ್ಯಗಳಲ್ಲಿ 'ಪ್ರಣತಾರಿ'ಯಾದ, ರಾಜ್ಯದಲ್ಲಿ ಸುಪ್ರತಿಷ್ಠಿತನಾಗಿ ಸಿಂಹಾಸನಾರೂಢನಾದ ' ವೀರನಾರಾಯಣ ' ನೃಪತುಂಗನ ವರ್ಣನೆಯಿರುವುದು ನಿಸ್ಸಂದಿಗ್ಧ. ಕವಿರಾಜಮಾರ್ಗದಲ್ಲಿ ಉಕ್ತವಾಗಿರುವ ಬಿರುದುಗಳೆಲ್ಲ ಆವನ ಈ ವ್ಯಕ್ತಿತ್ವದ ರೂಪರೇಖೆಯನ್ನೇ ನಿಚ್ಚಳವಾಗಿ ಚಿತ್ರಿಸುತ್ತಿವೆ. ಕವಿರಾಜಮಾರ್ಗವು ' ನೃಪತುಂಗದೇವಾನುಮತ 'ವಾಗಿದ್ದು, ಅವನ ಆಳಿಕೆಯಲ್ಲಿ ರಚಿತವಾಗಿರುವುದು ಸುನಿಶ್ಚಿತವಷ್ಟೆ. ರಾಜ್ಯವು ಯುದ್ಧಜ್ವಾಲೆಗೂ ಅಂತಃಕ್ಷೋಭೆಗೂ ಸಿಲುಕಿರುವ ಕಾಲದಲ್ಲಿ ರಾಜನು ಒಂದು ಲಕ್ಷಣಗ್ರಂಥ ರಚನೆಯ ಕಡೆಗೆ ಗಮನ ಹರಿಸಿದ್ದಾನೆ ಎಂಬುದು ಅಸಂಭವ ಎಂಬ ಮಾತು ಹಾಗಿರಲಿ, ಹಾಸ್ಯಾಸ್ಪದ ಎನಿಸೀತು. ನೃಪತುಂಗನಿಗಿಂತ ಬಹು ಈಚಿನ ಗ್ರಂಥಗಳಾದ 'ಶಬ್ದಮಣಿದರ್ಪಣ' ಮತ್ತು ' ಕಾವ್ಯಾವಲೋಕನ 'ಗಳಲ್ಲಿ ಪ್ರಯುಕ್ತಗಳಾದ ಲಕ್ಷ್ಯಪದ್ಯಗಳೂ ' ಕೈದುವೊತ್ತರದೇವ ' ನೃಪತುಂಗನ ಪರಾಕ್ರಮದ ಚಿತ್ರವನ್ನೆ ಮುಂದಿಡುತ್ತಿವೆ.[7] ನೃಪತುಂಗನ ಆಸ್ಥಾನದ ಮಹಾಪಂಡಿತನೆನಿಸಿದ್ದ ವೈಯಾಕರಣಿ ಶಾಕಟಾಯನನು ತನ್ನ ಸಂಸ್ಕೃತ ವ್ಯಾಕರಣಕ್ಕೆ ಆಶ್ರಯದಾತನಾದ ಅಮೋಘವರ್ಷನ ಅಂಕಿತವಿಟ್ಟು ಬರೆದ 'ಅಮೋಘವೃತ್ತಿ'ಯಲ್ಲಿ ಅನದ್ಯತನ

ಭೂತಕಾಲಕ್ಕೆ ದೃಷ್ಟಾಂತವನ್ನು ಕೊಡುವಾಗ, ಪಾಂಡ್ಯರನ್ನು ಗೆದ್ದು ಅವರನ್ನು ಭಸ್ಮ ಮಾಡಿದನೆಂದು ಬರೆದಿದ್ದಾನೆ.[8] ಹೀಗೆ, ಅಮೋಘವರ್ಷ ನೃಪತುಂಗನು ಅಪ್ರತಿಹತ ಪರಾಕ್ರಮಿ ಎನಿಸಿದಮೇಲೆಯೆ 'ವೀರನಾರಾಯಣ'ನೆಂದು ಕವಿ ಕೃತಿಗಳಲ್ಲಿಯೂ ಶಾಸನಗಳಲ್ಲಿಯೂ ಕೀರ್ತಿತನಾಗಿರಬೇಕು. ಕ್ರಿ. ಶ. ೮೧೪ರಲ್ಲಿ ಪಟ್ಟಕ್ಕೆ ಬಂದ ನೃಪತುಂಗನು ಈ ಕೀರ್ತಿಗೆ ಭಾಜನನಾಗಲು ಕನಿಷ್ಠಪಕ್ಷ ೨೫-೩೦ ವರ್ಷಗಳಾದರೂ ಸಂದಿರಬೇಕು. ಎಂದ ಮೇಲೆ, **ಕವಿರಾಜಮಾರ್ಗವು ಕ್ರಿ. ಶ. ೮೪೦-೮೭೭ರ ನಡುವಣ ಅವಧಿಯಲ್ಲಿ, ಕ್ರಿ. ಶ. ೮೭೦ರ ಸುಮಾರಿನಲ್ಲಿ, ರಚಿತವಾಗಿರಬೇಕು** ಎಂದು ಊಹಿಸಬಹುದು. ಈ ಎರಡು ಗ್ರಂಥಗಳಲ್ಲದೆ, ನೃಪತುಂಗನ ಕಾಲದಲ್ಲಿ ಬೇರೆಯ ಗ್ರಂಥಗಳೂ ರಚಿತವಾಗಿದ್ದುವು ಎನ್ನುವುದಕ್ಕೆ ಸ್ಪಷ್ಟ ಸಾಕ್ಷ್ಯಗಳು ಯಾವುವೂ ದೊರೆತಿಲ್ಲ. 'ಅಮೋಘವರ್ಷ'ರಚಿತ ಎಂದಿರುವ 'ಪ್ರಶ್ನೋತ್ತರಮಾಲಿಕೆ' ಎಂಬ ಚಿಕ್ಕ ಸಂಸ್ಕೃತ ಗ್ರಂಥವನ್ನು ಬಿಟ್ಟರೆ, ಭಟ್ಟಾಕಳಂಕನ 'ಶಬ್ದಾನುಶಾಸನ'ದಲ್ಲಿ ಕವಿರಾಜಮಾರ್ಗವನ್ನು 'ನೃಪತುಂಗಗ್ರಂಥ' ಎಂದಿರುವ ಉಲ್ಲೇಖವನ್ನು ಹೊರತುಪಡಿಸಿದರೆ, ಶಾಸನಗಳಲ್ಲಿಯಾಗಲಿ ನೃಪತುಂಗನಿಗಿಂತ ಈಚಿನ ಗ್ರಂಥಸ್ಥ ಉಲ್ಲೇಖಗಳಲ್ಲಿ ನಿರೂಪಣೆಯಾಗಿರುವ ಅವನ ಶೌರ್ಯಾದಿ ಗುಣವರ್ಣನೆಗಳಲ್ಲಿಯಾಗಲಿ (ಟಿಪ್ಪಣಿ ೭) ಅವನ ಪಾಂಡಿತ್ಯ ಕವಿತ್ವಗಳ ಪ್ರಸ್ತಾವವಿಲ್ಲ. ನೃಪತುಂಗನು ಸ್ವತಃ ವಿದ್ವಾಂಸನೂ ವಿದ್ವಜ್ಜನರ ಹಾಗೂ ಕವಿಗಳ ಆಶ್ರಯದಾತನೂ ಆಗಿದ್ದನೆಂಬುದಕ್ಕೆ ಕವಿರಾಜಮಾರ್ಗವೊಂದೇ ಬಲವಾದ ಆಧಾರ. (ಕವಿರಾಜಮಾರ್ಗದಲ್ಲಿ ಮೂಡಿರುವ ನೃಪತುಂಗ ವ್ಯಕ್ತಿತ್ವಚಿತ್ರಣ ಗ್ರಂಥಕರ್ತೃತ್ವ ನಿರ್ಣಯಕ್ಕೆ ಹೇಗೆ ನೆರವಾಗಿದೆ ಎಂಬ ಅಂಶವನ್ನು ಆ ಪ್ರಕರಣದಲ್ಲಿ ಮತ್ತೆ ಗಮನಿಸಲಾಗುವುದು).

ನೃಪತುಂಗನ ಮತ: ನೃಪತುಂಗನ ಮತವು ಅವನ ವ್ಯಕ್ತಿತ್ವದ ಒಂದು ಭಾಗವೇ ಆಗಿದೆ. ಕವಿರಾಜಮಾರ್ಗ ಕರ್ತೃತ್ವ ನಿರ್ಣಯ ವಿಚಾರದಲ್ಲಿ ಅದಕ್ಕೆ ಪ್ರಾಮುಖ್ಯವಿರುವುದರಿಂದ, ಆ ಪ್ರಕರಣವನ್ನು ವಿವೇಚಿಸುವ ಮುನ್ನ ನೃಪತುಂಗನ ಮತ ಯಾವುದೆಂಬುದನ್ನು ಖಚಿತಪಡಿಸಿಕೊಳ್ಳಬೇಕಾದದ್ದು ಅಗತ್ಯ. ಅವನು ವಿಷ್ಣುಭಕ್ತನಾದ ವೈದಿಕಮತಾನುಯಾಯಿ

ಯೆಂದು ಕೆಲವು ವಿದ್ವಾಂಸರೂ, ಜೈನಮತಾವಲಂಬಿಯೆಂದು ಇನ್ನು ಕೆಲವರೂ ವಾದಿಸಿದ್ದಾರೆ. ಅವನ ಮತವನ್ನು ನಿರ್ಣಯಿಸುವಲ್ಲಿ ಗಮನಿಸಬೇಕಾದ ಮುಖ್ಯ ಸಾಕ್ಷ್ಯಗಳೆಂದರೆ: (೧) ಶಾಸನಗಳು, (೨) ಕವಿರಾಜಮಾರ್ಗ, (೩) ನೃಪತುಂಗನು ರಚಿಸಿದ್ದೆಂದು ಹೇಳಲಾದ 'ಪ್ರಶ್ನೋತ್ತರಮಾಲಿಕಾ' ಮತ್ತು ಇತರ ಜೈನಧರ್ಮ ಗ್ರಂಥಗಳು.

(೧) ಶಾಸನಗಳು: ಗ್ರಂಥಾಧಾರಗಳು ಲಿಪಿಕಾರಜನ್ಯಸ್ಖಾಲಿತ್ಯಗಳಿಂದಲೂ ಪ್ರಕ್ಷೇಪಾದಿ ಇತರ ಕಾರಣಗಳಿಂದಲೂ ಎಷ್ಟೋ ವೇಳೆ ಅವಿಶ್ವಸನೀಯವಾಗುತ್ತವೆ. ಶಾಸನಗಳು ಹಾಗಲ್ಲ; ಶಾಶ್ವತವಾಗಿರಬೇಕೆಂಬ ಉದ್ದೇಶದಿಂದಲೇ ಅವು ಲೇಖನಗೊಳ್ಳತಕ್ಕವು; ಯಾವ ಮಾರ್ಪಾಟಿಗೂ ಒಳಗಾಗದವು. ಆದ್ದರಿಂದ, ಪ್ರಬಲಪ್ರಮಾಣಗಳಾದ ಶಾಸನಾಧಾರಗಳು ಗ್ರಂಥಾಧಾರಗಳಿಗಿಂತ ಹೆಚ್ಚು ವಿಶ್ವಾಸಾರ್ಹವಾದವು.

ನೃಪತುಂಗನು ಬೇರೆ ಬೇರೆ ಮತದವರಿಗೆ ಬಿಟ್ಟ ದಾನ ಶಾಸನಗಳು ದೊರಕಿವೆ. ಇವುಗಳಿಂದ, ಅವನು ಯಾವ ಮತಕ್ಕೇ ಸೇರಿರಲಿ, ಎಲ್ಲ ಮತಗಳನ್ನೂ ಸಮದೃಷ್ಟಿಯಿಂದ ಕಾಣುತ್ತಿದ್ದನೆಂಬುದನ್ನು ನಾವು ಮೊದಲು ಗಮನಿಸಬೇಕು.

ನೃಪತುಂಗನ ಪೂರ್ವದ ರಾಷ್ಟ್ರಕೂಟವಂಶದ ದೊರೆಗಳೆಲ್ಲ ಪರಮ ವಿಷ್ಣುಭಕ್ತರು-ಲಕ್ಷ್ಮೀಭಕ್ತರು; ಮಾತ್ರವಲ್ಲ, ಶಿವನ ಆರಾಧಕರು ಕೂಡ. "ಇವರ ಯಾವೊಂದು ಲೇಖನವಾಗಲಿ ಶಾಸನವಾಗಲಿ ಜಿನಸ್ತುತಿಪರವಾದ ಶಿರೋಲೇಖನದಿಂದ ಕೂಡಿಲ್ಲ." ರಾಷ್ಟ್ರಕೂಟ ವಂಶಿಕರ ಶಾಸನ ಹಾಗೂ ತಾಮ್ರಪಟ್ಟಗಳಲ್ಲಿ ಶಿವ ಮತ್ತು ಶಿವಸಂಬಂಧವಾದ ಲಾಂಛನಗಳಿವೆ. ನೃಪತುಂಗನ ಕಾಲದ ಶಾಸನವೊಂದರಲ್ಲಿ (ಕ್ರಿ.ಶ. ೮೬೬, ಎಂದರೆ, ಅವನ ಆಳಿಕೆಯ ೫೨ನೆಯ ವರ್ಷ) ಗರುಡಲಾಂಛನವುಂಟು. ನೃಪತುಂಗನು ಪಟ್ಟಕ್ಕೆ ಬಂದಾಗ ಸು. ೧೬ರ ಪ್ರಾಯದವನು ಇರಬಹುದೆಂದು ಚರಿತ್ರಕಾರರು ಊಹಿಸಿರುವುದರಿಂದ, ಈ ಶಾಸನ ಕಾಲದ ವೇಳೆಗೆ ನೃಪತುಂಗನ ವಯಸ್ಸು ಸು. ೭೦ ವರ್ಷ ಎಂದು ಇಟ್ಟುಕೊಳ್ಳಬಹುದು. ಈ ಶಾಸನದ ಪ್ರಾರಂಭದಲ್ಲಿ ಹರಿಹರಸ್ತುತಿಯಿರುವುದರಿಂದಲೂ, ಇದರಲ್ಲಿ 'ಶ್ರೀನೃಪತುಂಗನಾಮಾಂಕಿತ ಲಕ್ಷ್ಮೀವಲ್ಲಭೇಂದ್ರಂ . . . ಮಹಾವಿಷ್ಣುವ ರಾಜ್ಯಂಬೋಲ್"

ರಾಜ್ಯವಾಳುತ್ತಿದ್ದ ಪ್ರಸಕ್ತಿಯಿರುವುದರಿಂದಲೂ ಈ ಶಾಸನದ ಕಾಲದವರೆಗೆ ಎಂದರೆ ನೃಪತುಂಗನ ೭೦ನೆಯ ವಯಸ್ಸಿನವರೆಗೆ, ಆತನು ಜೈನಮತಾವಲಂಬಿಯಾಗಿರಲಿಲ್ಲವೆಂಬುದು ಖಂಡಿತ. ಕವಿರಾಜಮಾರ್ಗದ ಮಂಗಳಾಚರಣ ಪದ್ಯಗಳೂ, ಅವನ ಲಕ್ಷ್ಮೀ-ನಾರಾಯಣಭಕ್ತಿಯನ್ನು ದ್ಯೋತಿಸುವ ಲಕ್ಷ್ಯಪದ್ಯಗಳೂ (I-೧, ೨; III-೮೦; ೮೧; ೧೬೧, ೧೬೨) ನೃಪತುಂಗನು ಲಕ್ಷ್ಮೀಭಕ್ತನಾದ, ವೀರನಾರಾಯಣ ಬಿರುದಾಂತ ವೈಷ್ಣವನೆಂದು ಸಾರುತ್ತಿವೆ. ಇದರಿಂದ ಹೊರಪಡುವ ನಿಸ್ಸಂದಿಗ್ಧವಾದ ಸತ್ಯಾಂಶವೆಂದರೆ, ಕವಿರಾಜಮಾರ್ಗವು ನೃಪತುಂಗನ ೭೦ರ ವಯಸ್ಸಿಗೆ ಮುಂಚೆ ರಚಿತವಾಗಿದ್ದಿರಬೇಕು ಎಂಬುದು. ಬೇರೆಯ ಕಾರಣಕ್ಕಾಗಿ ಸು. ಕ್ರಿ. ಶ. ೮೬೦ರ ಸುಮಾರಿನಲ್ಲಿ ರಚಿತವಾಗಿರಬೇಕು ಎಂದು ಹಿಂದೆಯೆ ಸೂಚಿಸಿದ್ದೇವೆ. ಅದರ ರಚನಾಕಾಲವನ್ನು ಇನ್ನೂ ೮–೧೦ ವರ್ಷ ಈಚೆಗೆ ತಳ್ಳಿಕೊಂಡರೂ ಬಾಧಕವಿರದು.

ಸರ್ವಸಮತಾದೃಷ್ಟಿ ಅಮೋಘವರ್ಷ ನೃಪತುಂಗನಿಗೆ ಬಳಿವಳಿಯಾಗಿ ಬಂದ ವಂಶಗುಣ. ರಾಷ್ಟ್ರಕೂಟ ರಾಜರಲ್ಲಿ ಅನೇಕರು ಜಿನಾಲಯಗಳಿಗೆ ದತ್ತಿ ಬಿಟ್ಟಿರುವುದುಂಟು. ಇದು ಅವರ ವಿಶಾಲಮನಸ್ಸಿನ ಕುರುಹು. ನೃಪತುಂಗನೂ ಅದೇ ಸಂಪ್ರದಾಯವನ್ನು ನಡಸಿಕೊಂಡುಬಂದನು. ಉದಾಹರಣೆಗೆ, ಕೊಣ್ಣೂರ ದಾನಶಾಸನದಲ್ಲಿ (ಕ್ರಿ. ಶ. ೮೬೧) ತನ್ನ ಇಷ್ಟಭೃತ್ಯನಾದ ಬಂಕೆಯನ ಪ್ರಾರ್ಥನೆಯಂತೆ, ಬಂಕೆಯನೇ ನಿರ್ಮಾಪಿಸಿದ ಜಿನಾಲಯದ ಪರಿಪಾಲನೆಗೆಂದು ದೇವೇಂದ್ರ ಮುನೀಂದ್ರನಿಗೆ ದತ್ತಿ ಬಿಟ್ಟ ಉಲ್ಲೇಖವಿದೆ; ಈವೊಂದು ಶಾಸನದ ಆದಿಯಲ್ಲಿ ಮಾತ್ರ ಜಿನಸ್ತುತಿಯಿದೆ.[9] ಈ ಶಾಸನಾಧಾರದಿಂದ ನೃಪತುಂಗನನ್ನು ಜೈನನೆನ್ನಲಾಗದು. ಏಕೆಂದರೆ, ಕ್ರಿ. ಶ. ೮೭೧ರ ಸಂಜನ ಶಾಸನದಲ್ಲಿ ವೈದಿಕ ಬ್ರಾಹ್ಮಣರಿಗೆ ಗ್ರಾಮದಾನ ಮಾಡಿದ್ದರ ಉಲ್ಲೇಖವಿದೆ.[10] ಈ ದಾನಗಳಿಂದ ಮತವನ್ನು ನಿರ್ಣಯಿಸುವುದಾದರೆ, ನೃಪತುಂಗನು ಜೈನನಾಗಿದ್ದು ೧೦ ವರ್ಷಗಳಾದಮೇಲೆ ವೈದಿಕ ಮತಾನುಯಾಯಿಯಾದನೆನ್ನಬೇಕಾಗುತ್ತದೆ! ಜಿನಾಲಯಕ್ಕೆ ದತ್ತಿಕೊಟ್ಟ ಮೇಲಿನ ಕ್ರಿ. ಶ. ೮೬೬ರ ಶಾಸನದಲ್ಲಿನ ಗರುಡಲಾಂಛನ, ಹರಿಹರಸ್ತುತಿ ಇತ್ಯಾದಿ ಅಂಶಗಳು ನೃಪತುಂಗನ ವೈಷ್ಣವ ನಿಷ್ಠೆಯನ್ನೇ ಸಾರಿಹೇಳುತ್ತಿವೆ.

(೨) ಕವಿರಾಜಮಾರ್ಗ : ನೃಪತುಂಗನ ಮತವನ್ನು ಗೊತ್ತುಹಿಡಿಯುವಲ್ಲಿ, ಶಾಸನಗಳನ್ನು ಬಿಟ್ಟರೆ, ಕವಿರಾಜಮಾರ್ಗವು ಅತ್ಯಂತ ಪ್ರಬಲವಾದ ಆಧಾರ. ಪ್ರಥಮ ಪರಿಚ್ಛೇದದ ೧-೨ನೆಯ ಪದ್ಯಗಳು ವಿಷ್ಣುಸ್ತುತಿಯ ಪದ್ಯಗಳೆಂಬಲ್ಲಿ ಸಂದೇಹವಿಲ್ಲವಷ್ಟೆ. ಮೂಲದಿಂದ ಭಿನ್ನವಾದ ಕೆಲವು ಲಕ್ಷ್ಯ ಪದ್ಯಗಳು ವಿಷ್ಣುಪರವೋ ಲಕ್ಷ್ಮೀಪರವೋ ಆಗಿವೆ. (ಉದಾ : III-೮೧; ೧೬೧, ೧೬೨). ಕವಿರಾಜಮಾರ್ಗದಲ್ಲಿ ಜಿನಸ್ತುತಿಯ ಪದ್ಯವೂ, ಜೈನಧರ್ಮ ಪರವಾದ ಉಲ್ಲೇಖಗಳೂ ಗ್ರಂಥಕರ್ತನ (ಅರ್ಥಾತ್ ನೃಪತುಂಗನ) ಮತ ಧರ್ಮವನ್ನು ಸೂಚಿಸುತ್ತವೆ ಎಂದು ಕೆ. ಬಿ. ಪಾಠಕರು ಅಭಿಪ್ರಾಯಪಡುತ್ತಾರೆ. (I-೯೧, III-೧೮) ("These two verses reflect the religious opinions of the author") "ಸಕಲ ಧರ್ಮದಲ್ಲಿ ಸಮದೃಷ್ಟಿಯುಳ್ಳ ಈತನು ಅದನ್ನು ರಚಿಸಿರುವುದರಿಂದ, ಅದರಿಂದಲೇ ಈತ ಜೈನನೆನ್ನಲಾಗದು . . . ಅಲ್ಲದೆ, ಇಷ್ಟ ದೇವತೆಯನ್ನು ಸ್ತುತಿಸುವುದು ಗ್ರಂಥಾವತಾರದಲ್ಲಿಯೇ ಹೊರತು, ದೃಷ್ಟಾಂತ ಪದ್ಯಗಳಲ್ಲಿಯಲ್ಲ" ಎಂಬ ಗೋವಿಂದ ಪೈ ಅವರ ಅಭಿಪ್ರಾಯವನ್ನೂ ಗಮನಿಸಬೇಕು. ಕವಿರಾಜಮಾರ್ಗವನ್ನು ರಚಿಸಿದವನು ನೃಪತುಂಗ ಎಂದು ಗ್ರಹಿಸಿದರೆ, – ಗ್ರಹಿಸಿದರೂ ಕೂಡ – ಗ್ರಂಥಸ್ಥವಾದ ಜೈನಧರ್ಮಪರವಾದ ಉಕ್ತಿಗಳು ಆತನ ವೈಷ್ಣವಧರ್ಮ ನಿಷ್ಠೆಗೆ ಭಂಗತರಲಾರವು. ಪದ್ಯ I-೧೦೫ರಲ್ಲಿ ಪ್ರಸಕ್ತವಾದ ಸಮಯ ವಿರುದ್ಧ ದೋಷವಿವರಣೆಯಿಂದ ನೃಪತುಂಗನಕಾಲದಲ್ಲಿ ಜೈನಧರ್ಮ ಮಾತ್ರವಲ್ಲದೆ, ಸಾಂಖ್ಯ ಬೌದ್ಧ ವೈಶೇಷಿಕ ದರ್ಶನಗಳೂ ಪ್ರಚಲಿತವಾಗಿದ್ದುವು ಎಂದು ಊಹಿಸಲು ಅವಕಾಶವಿದೆ. ಆದರೆ, ಆಗ ಜನಜೀವನದಲ್ಲಿ ಪ್ರಭಾವಶಾಲಿಯಾಗಿದ್ದುದು ಜೈನ ಧರ್ಮ. ನೃಪತುಂಗನೂ ಜೈನಧರ್ಮದಿಂದ ವಿಶೇಷವಾಗಿ ಪ್ರಭಾವಿತನಾಗಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದ, ಜೈನಧರ್ಮ ಪರವಾದ ಗ್ರಂಥೋಕ್ತಿಗಳು ಆ ಧರ್ಮದಲ್ಲಿ ತನ್ನ ಪ್ರಜಾಕೋಟಿಯ ಒಂದು ಪ್ರಮುಖ ವರ್ಗದ ಜನರ ಧರ್ಮದಲ್ಲಿ ಆತನು ಇಟ್ಟಿದ್ದ ಗೌರವಕ್ಕೆ ನಿದರ್ಶನಗಳಾಗಿವೆ. ಕವಿರಾಜಮಾರ್ಗವು ರಚನೆಯಾದ ಕಾಲದಲ್ಲಿಯಂತೂ ಆತ ಖಂಡಿತವಾಗಿಯೂ ಜೈನಮತಾವಲಂಬಿಯಾಗಿದ್ದಿರಲಾರ ಎಂದು ಮೇಲೆ ಶಾಸನಾಧಾರದಿಂದ ದೃಢಪಟ್ಟಿದೆ. ಕವಿರಾಜಮಾರ್ಗವು ಅನ್ಯಕರ್ತೃಕ

ಎಂದು ಗ್ರಹಿಸಿದರಂತೂ, ನೃಪತುಂಗನು ವೈಷ್ಣವನೆಂದೇ ಗ್ರಂಥವು ನಿಸ್ಸಂದಿಗ್ಧ ಸಾಕ್ಷ್ಯವನ್ನು ನೀಡುತ್ತಿದೆ. ಹೇಗೆ ವಿಚಾರಮಾಡಿದರೂ, ಕವಿರಾಜಮಾರ್ಗದ ಆಧಾರದಮೇಲೆ ಹೇಳುವುದಾದರೆ, ನೃಪತುಂಗನು ಜೈನನೆನ್ನುವುದಕ್ಕಿಂತ ವೈಷ್ಣವನೆನ್ನುವುದಕ್ಕೆ ಹೆಚ್ಚು ಪ್ರಬಲವಾದ ಆಧಾರವಿದೆ.

(೩) ಇತರ ಗ್ರಂಥಾಧಾರಗಳು: (i) ಜಿನಸೇನ, ಗುಣಭದ್ರರ ಕಾವ್ಯಗಳಲ್ಲಿಯ ಉಲ್ಲೇಖಗಳು : (ಅ) ಗುಣಭದ್ರರ 'ಉತ್ತರಪುರಾಣ'ದ ವೃತ್ತವೊಂದರಲ್ಲಿ, 'ಅಮೋಘವರ್ಷನು ಜಿನಸೇನನನ್ನು ವಂದಿಸಿ ತಾನು ಇಂದು (=ಅದ್ಯ) ಧನ್ಯನಾದನೆಂದು ಭಾವಿಸಿಕೊಂಡನು' ಎಂದು ಉಕ್ತವಾಗಿದೆ.[11] ಇಷ್ಟರಿಂದ, ಆತ ಸ್ವಧರ್ಮವನ್ನು ತ್ಯಜಿಸಿ, ಜಿನಸೇನನ ಶಿಷ್ಯನಾಗಿ, ಜೈನಮತ ಸ್ವೀಕಾರಮಾಡಿದನು ಎಂಬ ಅರ್ಥವನ್ನು ಸೆಳೆಯುವುದು ಸಾಧ್ಯವಿಲ್ಲ. ಅಲ್ಲದೆ, ನೃಪತುಂಗನು ಜಿನಸೇನನ ಶಿಷ್ಯನಾಗಿದ್ದರೆ, ಜಿನಸೇನನು ತನ್ನ 'ಜಯಧವಲಾಟೀಕೆ'ಯಲ್ಲಿ[12] (ಇದರ ಸಮಾಪ್ತಿ ಕಾಲ ಕ್ರಿ.ಶ. ೮೩೭) ಈ ಸಂಗತಿಯನ್ನು ಸ್ಪಷ್ಟವಾಗಿ ತಿಳಿಸುವ ಸಂಭವವಿರುತ್ತಿತ್ತು. ಹಾಗೆ ಮಾಡದೆ, 'ಅಮೋಘವರ್ಷ ರಾಜೇಂದ್ರ ಪ್ರಾಜ್ಯರಾಜ್ಯಗುಣೋದಯಾ' ಎಂದಿಷ್ಟೇ ಉಲ್ಲೇಖಿತವಾಗಿದೆ. ಮಾತ್ರವಲ್ಲ; ಜಿನಸೇನನು ತನ್ನ ಗ್ರಂಥವನ್ನು ತನ್ನ ಶಿಷ್ಯನ ರಾಜ್ಯದಲ್ಲಿಯೋ ಇಲ್ಲವೆ ರಾಜಧಾನಿಯಲ್ಲಿಯೋ ಬರೆಯದೆ 'ಗುರ್ಜರಾರ್ಯಾನುಪಾಲಿತ' ವಟಗ್ರಾಮದಲ್ಲಿ ಏಕೆ ಬರೆದನು ? ಅದೇ ರೀತಿ ಅಮೋಘವರ್ಷ ನೃಪತುಂಗನು ತನ್ನ ಗುರುವಿನ ಶಿಷ್ಯನಾಗಿದ್ದರೆ, ಗುಣಭದ್ರನು ತನ್ನ 'ಉತ್ತರ ಪುರಾಣ'ವನ್ನು ಅಮೋಘವರ್ಷ ನೃಪತುಂಗ ಪುತ್ರ ಅಕಾಲವರ್ಷನ (ಕ್ರಿ. ಶ. ೮೭೭-೯೧೩) ಆಸ್ಥಾನದಲ್ಲಿಯೋ ಇಲ್ಲವೆ ರಾಜಧಾನಿಯಲ್ಲಿಯೊ ಬರೆಯದೆ ಲೋಕಾದಿತ್ಯನ ರಾಜಧಾನಿಯಲ್ಲಿ ಬರೆದನೇಕೆ? ಎಂದು ಗೋವಿಂದ ಪೈ ಎತ್ತಿರುವ ಆಕ್ಷೇಪಗಳಿಗೆ ಉತ್ತರ ಹೇಳುವುದು ಕಷ್ಟ. ಮೇಲ್ಕಂಡ ಉಲ್ಲೇಖಗಳಿಂದ, ನೃಪತುಂಗನು ಜಿನಸೇನರಲ್ಲಿ ಗುರುಭಾವನೆಯನ್ನು ಇರಿಸಿದ್ದನೆಂದು ಬೇಕಾದರೆ ಹೇಳಬಹುದು. ಇಷ್ಟರ ಜೊತೆಗೆ, 'ಉತ್ತರಪುರಾಣ' ಮತ್ತು 'ಜಯಧವಲಾಟೀಕೆ'ಗಳಲ್ಲಿ 'ಅಮೋಘವರ್ಷ' ಎಂದಿಷ್ಟೆ ಇದೆಯಲ್ಲದೆ ಆತನ 'ನಿಜನಾಮ'ವಾದ 'ಶರ್ವ' ಎಂದಾಗಲಿ 'ಅಮೋಘವರ್ಷ ನೃಪತುಂಗ' ಇಲ್ಲವೆ 'ನೃಪತುಂಗ'

ಎಂದಾಗಲಿ ಉಲ್ಲೇಖವಿಲ್ಲ. (ಆ) ಜಿನಸೇನರ ಪಾರ್ಶ್ವಾಭ್ಯುದಯ ಕಾವ್ಯದಲ್ಲಿನ 'ಅಮೋಘವರ್ಷ' ಪರವಾದ ಉಲ್ಲೇಖದಿಂದ ನೃಪತುಂಗನು ಅವರ ಶಿಷ್ಯನಾಗಿದ್ದನೆಂದು ಹೇಳಬರುವಂತಿಲ್ಲ. (ನೋಡಿ : ಟಿಪ್ಪಣಿ ೧೨).

(ii) 'ಗಣಿತಸಾರಸಂಗ್ರಹ': ಇದರ ಕರ್ತೃ 'ವೀರಚಾರ್ಯ' (ಅಥವಾ ಮಹಾವೀರಾಚಾರ್ಯ). ಈತ ಒಬ್ಬ ಜೈನ ಗಣಿತ ಶಾಸ್ತ್ರಜ್ಞ. (ಈತನು ತನ್ನ ಗ್ರಂಥದಲ್ಲಿ ಎಲ್ಲಿಯೂ ಗ್ರಂಥ ರಚನಾಕಾಲವನ್ನು ಸೂಚಿಸದಿರುವುದು ಸೋಜಿಗದ ಸಂಗತಿ). ಇದರ ಪ್ರಾರಂಭದ ಪ್ರಶಸ್ತಿಪದ್ಯಗಳಲ್ಲಿ 'ಅಮೋಘವರ್ಷ ನೃಪತುಂಗನ' ಉಲ್ಲೇಖವೇನೋ ಇದೆ. ಮಾತ್ರವಲ್ಲ, 'ಆತನು ಏಕಾಂತ ಪಕ್ಷವನ್ನು (=ಅದ್ವೈತ ನಿಷ್ಠವಾದ ಭಾಗವತ ವೈಷ್ಣವ ಧರ್ಮವನ್ನು) ಧ್ವಂಸಮಾಡಿದವನು, ಸ್ಯಾದ್ವಾದನ್ಯಾಯವಾದಿ (=ಜೈನ ಧರ್ಮವನ್ನು ಎತ್ತಿಹಿಡಿದನು)' ಎಂದೂ ಹೇಳಿದೆ![13] ಜಿನಸೇನ ಗುಣಭದ್ರರ ಕೃತಿಗಳಲ್ಲಿ ಕೂಡ ಈ ಸಂಗತಿ ಉಲ್ಲೇಖಗೊಂಡಿಲ್ಲ; ಇದಕ್ಕೆ ಶಾಸನಾಧಾರ ವ್ಯತಿರಿಕ್ತವಾಗಿಯೆ ಇದೆ. ಆದ್ದರಿಂದ, 'ಗಣಿತಸಾರ ಸಂಗ್ರಹ'ದ ಹೇಳಿಕೆ ಖಂಡಿತ ವಿಶ್ವಸನೀಯವಲ್ಲ. ಒಂದು ವೇಳೆ ಅದು ನಿಜವಿದ್ದರೂ, ಈ ಗ್ರಂಥದಲ್ಲಿ ಉಕ್ತನಾದ 'ಅಮೋಘವರ್ಷ ನೃಪತುಂಗನು' ಕವಿರಾಜಮಾರ್ಗ ಪ್ರೋಕ್ತನಾದ ನೃಪತುಂಗ ಎಂದು ಹೇಳಬರುವಂತಿಲ್ಲ. ಕಾರಣ, ರಾಷ್ಟ್ರಕೂಟ ದೊರೆ ೨ನೆಯ ಕರ್ಕನಿಗೂ 'ಅಮೋಘವರ್ಷ ನೃಪತುಂಗ'ನೆಂಬ ಹೆಸರುಗಳುಂಟು.

(iii) 'ಪ್ರಶ್ನೋತ್ತರ ರತ್ನಮಾಲಿಕಾ': ಇದೊಂದು ನೀತಿಬೋಧಕವಾದ, ಜೈನಧರ್ಮಕ್ಕೆ ಸಂಬಂಧಪಟ್ಟ, ಚಿಕ್ಕ ಕಾವ್ಯ. ಇದನ್ನು ರಚಿಸಿದವರು ಶಂಕರಾಚಾರ್ಯರು, ಶಂಕರಾನಂದ ಗುರು, ಶ್ವೇತಾಂಬರ ಜೈನ ಲೇಖಕನಾದ ವಿಮಲ ಎಂದು ಬಗೆಬಗೆಯಾಗಿ ಪ್ರತೀತಿಗಳಿವೆ. ಇದರ ಕರ್ತೃತ್ವದ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಇದರ ಮುದ್ರಿತ ಪ್ರತಿಯಲ್ಲಿ ೨೯ ಪದ್ಯಗಳಿದ್ದು, ಇಂಡಿಯನ್ ಆ್ಯಂಟಿಕ್ವೆರಿಯಲ್ಲಿ (ಸಂ. XII, ಪು. ೨೧೮) ೩೦ ಪದ್ಯಗಳು ಎಂದು ಹೇಳಲಾಗಿದೆ. ಈ ಕಾವ್ಯವನ್ನು ಮೊದಲು ಬೆಳಕಿಗೆ ತಂದವರೂ, ಕವಿರಾಜಮಾರ್ಗವನ್ನು ಮೊದಲು

ತುಂಗನಿಗೆ ಶ್ರೀ ವಿಜಯ ಎಂಬ ಬಿರುದೂ ಇದ್ದಿರಬಹುದು ಎಂದರೆ ಅದಕ್ಕೆ ಶಾಸನಗಳಲ್ಲಿಯಾಗಲಿ ಈ ಗ್ರಂಥದಲ್ಲಿಯಾಗಲಿ ಆವ ಆಧಾರವೂ ಸಿಕ್ಕುವುದಿಲ್ಲ" ಎಂದು ಕರ್ತೃತ್ವ ವಿಚಾರವನ್ನು ಅನಿಶ್ಚಯದಲ್ಲಿಯೇ ತೇಲಬಿಟ್ಟರು. ದಿ|| ಟಿ. ಎಸ್. ವೆಂಕಣ್ಣಯ್ಯನವರು ಪ್ರಬುದ್ಧ ಕರ್ಣಾಟಕದ ರೌದ್ರಿ ಸಂವತ್ಸರದ ದೀಪಾವಳಿ ಸಂಚಿಕೆಯಲ್ಲಿ ('ಕನ್ನಡದಲ್ಲಿ ಬೌದ್ಧರು ಗ್ರಂಥಗಳನ್ನು ಬರೆದಿದ್ದರೆ?' ಎಂಬ ಲೇಖನದಲ್ಲಿ) "ಕವಿರಾಜಮಾರ್ಗವನ್ನು ನೃಪತುಂಗನೇ ಬರೆದನೋ ಅಥವಾ ಆಸ್ಥಾನ ಕವಿಯಾದ ಶ್ರೀ ವಿಜಯನೇ ಬರೆದನೋ ನಿಶ್ಚಯಿಸುವುದು ಕಷ್ಟ" ಎಂದು ಅನಿಶ್ಚಯಸ್ಥಿತಿಯನ್ನೆ ಮುಂದುವರಿಸಿದರು. ಈ ಭಿನ್ನಾಭಿಪ್ರಾಯಗಳನ್ನು ಗಮನಿಸಿ, ದಿ|| ನಾ. ಶ್ರೀ. ರಾಜಪುರೋಹಿತರು "ಕನ್ನಡ ಪಂಡಿತರಲ್ಲುಂಟಾದ ಬುದ್ಧಿಭೇದವನ್ನು ಹೋಗಲಾಡಿಸುವುದಕ್ಕಾಗಿ" ಕವೀಶ್ವರ – ಶ್ರೀ ವಿಜಯ – ಕರ್ತೃತ್ವಗಳನ್ನು ನಿರಾಕರಿಸಿ, ನೃಪತುಂಗನೇ ಕವಿರಾಜಮಾರ್ಗದ ಕರ್ತೃ ಎಂಬ ಪಾಠಕರ ನಿಲುವಿಗೆ "ಸಿದ್ಧಾಂತ ಸ್ವರೂಪ"ವನ್ನು ಕೊಡಲು ಪ್ರಯತ್ನಿಸಿ, ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ (೬–೧ : ಜುಲೈ ೧೯೨೧) ಸುದೀರ್ಘವಾದ ಲೇಖನವನ್ನು ಬರೆದರು. ನೃಪತುಂಗ ಕರ್ತೃತ್ವವನ್ನು ಪ್ರಸ್ಥಾಪಿಸಲು ಅವರು ಮುಂದಿಟ್ಟ ಮುಖ್ಯವಾದ ಹೊಸ ವಾದಾಂಶ ಎಂದರೆ, ನೃಪತುಂಗನಿಗೇ ಶ್ರೀ ವಿಜಯ ಎಂಬ ಬಿರುದೂ ಇದ್ದಿತೆಂಬುದು. ಇಲ್ಲಿಂದ ತೊಡಗಿತು, ಪರಿಷತ್ಪತ್ರಿಕೆಯಲ್ಲಿ ರಾಜಪುರೋಹಿತರಿಗೂ ವೆಂಕಣ್ಣಯ್ಯನವರಿಗೂ ವಾದಪ್ರತಿವಾದಗಳ ಪತ್ರವ್ಯವಹಾರ. ಪ್ರೊ|| ಎ. ಆರ್. ಕೃಷ್ಣಶಾಸ್ತ್ರಿಗಳು ಪ್ರ. ಕರ್ಣಾಟಕದ ಮೂಲಕ ವೆಂಕಣ್ಣಯ್ಯನವರ ಶ್ರೀ ವಿಜಯಪಕ್ಷಕ್ಕೆ ಬೆಂಬಲವಿತ್ತರು. ಇದರ ಪರಿಣಾಮವಾಗಿ, ತಾತ್ಕಾಲಿಕವಾಗಿ ಕವೀಶ್ವರಪಕ್ಷ ಹಿನ್ನೆಲೆಗೆ ಸರಿದು, ನೃಪತುಂಗ ಶ್ರೀ ವಿಜಯಪಕ್ಷಗಳು ಮುನ್ನೆಲೆಗೆ ಬಂದುವು. ವಿದ್ವತ್ ಪ್ರಪಂಚದಲ್ಲಿ ಶ್ರೀ ವಿಜಯಪಕ್ಷದ ವಾದಕ್ಕೆ ಹೆಚ್ಚು ಮನ್ನಣೆ ದೊರಕುತ್ತ ಬಂದಿತು. ಆರ್. ನರಸಿಂಹಾಚಾರ್ಯರು ಕವಿಚರಿತೆಯ ತಿದ್ದಿದ ಮುದ್ರಣದ (೧೯೨೪) ಅವತರಣಿಕೆಯಲ್ಲಿ ರಾಜಪುರೋಹಿತರ ವಾದಕ್ಕೆ ಬುಡವಿಲ್ಲವೆಂದು ತೋರಿಸಿದ್ದರೂ,[18] ಯಾವ ಪಕ್ಷವನ್ನೂ ಖಚಿತವಾಗಿ ಎತ್ತಿ ಹಿಡಿದಿಲ್ಲ. ಆದರೆ, ೧೯೪೦ರಲ್ಲಿ ಪ್ರಕಟಿಸಿದ ತಮ್ಮ History of

Kannada Literature ಎಂಬ ಇಂಗ್ಲಿಷ್ ಉಪನ್ಯಾಸಮಾಲೆಯಲ್ಲಿ 'ನೃಪತುಂಗನ ಕವಿರಾಜಮಾರ್ಗ' ಎಂದೇ ಸ್ಪಷ್ಟವಾಗಿ ಹೇಳಿದ್ದಾರೆ. ಇದಕ್ಕೂ ಮೊದಲೇ, ೧೯೩೦ರಲ್ಲಿ, ಮದರಾಸು ವಿಶ್ವವಿದ್ಯಾನಿಲಯದ ಪರವಾಗಿ ಕವಿರಾಜಮಾರ್ಗವನ್ನು ಸಂಪಾದನೆಮಾಡಿ ಪ್ರಕಟಿಸಿದ ಎ. ವೆಂಕಟರಾವ್ ಮತ್ತು ಪಂಡಿತ ಎಚ್. ಶೇಷಯ್ಯಂಗಾರ್ ಅವರು ಗ್ರಂಥದ ಅವತರಣಿಕೆಯಲ್ಲಿ ಡಾ|| ಫ್ಲೀಟರ ಕವೀಶ್ವರ ಪಕ್ಷವನ್ನು ತಮ್ಮದೇ ಆದ ಹೊಸ ವಾದ ಸರಣಿಯಲ್ಲಿ ಮುಂದಿಟ್ಟರು. ಈ ಮುದ್ರಣವನ್ನು ವಿಮರ್ಶೆಮಾಡುತ್ತ (Q. J. M. S., Jan. 1933, pp. 436-442), ದಿ|| ಬಿ. ಎಂ. ಶ್ರೀ. ಯವರು ಕವೀಶ್ವರವಾದವನ್ನು ಸಂಪೂರ್ಣವಾಗಿ ನಿರಾಧಾರವಾದದ್ದೆಂದು ತಿರಸ್ಕರಿಸಿ, ಶ್ರೀ ವಿಜಯಪಕ್ಷದ ಕಡೆಗೇ ಬಹುಮಟ್ಟಿಗೆ ವಾಲಿದ್ದಾರೆ ಎಂದು ಹೇಳಬಹುದು. (ಈ ಮುದ್ರಣದ ಸಂಪಾದಕನೂ ಮದರಾಸು ಮುದ್ರಣವನ್ನು 'ಪ್ರಜಾಮತ' ವಾರ ಪತ್ರಿಕೆಯಲ್ಲಿ-೧೯೩೨-ವಿಮರ್ಶೆಮಾಡಿ, ಶ್ರೀವಿಜಯಪಕ್ಷವನ್ನೇ ಸಮರ್ಥಿಸಿದ್ದನು). ಆದರೆ, 'ಕನ್ನಡ ಕೈಪಿಡಿ'ಯ ಸಾಹಿತ್ಯ ಚರಿತ್ರೆಯ ವಿಭಾಗದಲ್ಲಿ 'ಈತನ (ನೃಪತುಂಗನ) ಕವಿರಾಜಮಾರ್ಗವು ಅಲಂಕಾರ ಗ್ರಂಥ' ಎಂದು ಸ್ಪಷ್ಟವಾಗಿ ಹೇಳಿರುವುದರಿಂದ, ಅವರ ನಿಲುವು ಖಚಿತವಾಗಿಲ್ಲ. (ಕನ್ನಡ ಕೈಪಿಡಿ, ಸಂ. ೨: ೧೯೪೭). ತರುವಾಯದ ಹೊಸ ಊಹೆ ಎಂದರೆ, ಶ್ರೀ ದ.ರಾ. ಬೇಂದ್ರೆ ಅವರದ್ದು : ಸಮಂತಭದ್ರನೇ ಶ್ರೀ ವಿಜಯನಿರಬಹುದು ಎಂಬುದೇ ಆ ಊಹೆ. ಅದು ನಿಜವಾದರೆ, ಆತ ಕವಿರಾಜಮಾರ್ಗದ ಕರ್ತೃ ಎಂದಾಗುವುದಿಲ್ಲ ; ಆದ್ದರಿಂದ, ಆ ಊಹೆ ಇಲ್ಲಿ ಪ್ರಸಕ್ತವೆನಿಸದು. ದಿ|| ಮುಳಿಯ ತಿಮ್ಮಪ್ಪಯ್ಯನವರು ಗ್ರಂಥದಲ್ಲಿನ ಚಕ್ರಬಂಧಶ್ಲೋಕ (II-೧೪೨)ವೊಂದರ ಆಧಾರದಮೇಲೆ, ಗ್ರಂಥಕಾರನ ಹೆಸರು 'ಜಯಾಬ್ಧಿ' ಎಂದೂ, "ಜಯ-ಜಯಾಬ್ಧಿ-ಶ್ರೀ ವಿಜಯ ಎಂಬವುಗಳು ಗ್ರಂಥಕಾರನ ಒಂದೇ ಹೆಸರಿನ ರೂಪಭೇದಗಳು" ಎಂದೂ ಇತ್ಯರ್ಥಮಾಡಿದ್ದಾರೆ. (ಕ. ರಾ. ಮಾರ್ಗ ವಿವೇಕ, ಪುಟ ೧೦೪, ೧೯೪೮). ಅಂತೂ, ಕವಿರಾಜಮಾರ್ಗಕಾರ ಶ್ರೀ ವಿಜಯನೆಂಬ ಬಗೆಗೆ ಅವರ ನಿಲವು ಖಚಿತ. ಪ್ರೊ|| ಡಿ. ಕೆ. ಭೀಮಸೇನರಾಯರು ತಮಗೆ ದೊರೆತ ವ್ಯಾಖ್ಯಾನ ಸಹಿತ ಶಬ್ದಮಣಿದರ್ಪಣದ ಪ್ರತಿಯಲ್ಲಿ ಉದ್ಧೃತವಾಗಿರುವ ಕವಿರಾಜ

ಮಾರ್ಗದ ಪದ್ಯಗಳ ಸಂಬಂಧವಾಗಿ ವ್ಯಾಖ್ಯಾನಕಾರನು 'ನೃಪತುಂಗದೇವ ಮತ', 'ಶ್ರೀ ವಿಜಯ ಪ್ರಯೋಗ' ಎಂದು ಮಾಡಿರುವ ಉಲ್ಲೇಖಗಳನ್ನು ಸಮೀಕರಿಸಿ, ನೃಪತುಂಗ ಎಂದರೆ ಶ್ರೀ ವಿಜಯ ಎಂದು ಸಿದ್ಧಾಂತಿಸಿದ್ದಾರೆ. ಇದೊಂದು ಹೊಸ ಸಂಗತಿ. ದಿ|| ತೀ. ನಂ. ಶ್ರೀ. ಯವರು 'ಭಾರತೀಯ ಕಾವ್ಯಮೀಮಾಂಸೆ'ಯಲ್ಲಿ (೧೯೫೩) ಕವಿರಾಜಮಾರ್ಗದ ವಿಚಾರವಾಗಿ ಬರೆಯುತ್ತಾ (ಪು. ೪೩೮) ಪ್ರಾಸಂಗಿಕವಾಗಿ, "ನೃಪತುಂಗನ ಕೃತಿ ಇದೆಂದು ಆಪಾತತಃ ತೋರಿದರೂ, ಒಳಹೊಕ್ಕು ನೋಡಿದರೆ, ಇದು ನಿಜವಾಗಿ 'ನೃಪತುಂಗದೇವಾನುಮತ' ಮಾತ್ರ; ಇದನ್ನು ವಿರಚಿಸಿದವನು ನೃಪತುಂಗನ ಆಸ್ಥಾನದ ಸಭಾಸದರಲ್ಲಿ ಒಬ್ಬನು – ಬಹುಶಃ ಶ್ರೀ ವಿಜಯನೆಂಬ ಕವಿ-ಎಂಬ ನೆಲೆಗೆ ಅಭಿಪ್ರಾಯ ಮುಟ್ಟುತ್ತದೆ"ಎಂದು ಎಚ್ಚರಿಕೆಯ ಮಾತನ್ನೇ ಆಡಿದ್ದಾರೆ. [ಗ್ರಂಥಾಂತ್ಯದಲ್ಲಿ 'ಲಾಕ್ಷಣಿಕರು ಮತ್ತು ಲಕ್ಷಣ ಗ್ರಂಥಗಳ' ಹೆಸರುಗಳ ಪಟ್ಟಿಯಲ್ಲಿ 'ಶ್ರೀ ವಿಜಯ (?)-ಕವಿರಾಜಮಾರ್ಗ' ಎಂದು ಉಲ್ಲೇಖಿಸಿದ್ದಾರೆ]. ಕವಿರಾಜಮಾರ್ಗ ಕರ್ತೃತ್ವ ವಿಚಾರದಲ್ಲಿ ಉಪಲಬ್ಧವಿರುವ ಎಲ್ಲ ಸಾಹಿತ್ಯವನ್ನೂ ಕೂಲಂಕಷವಾಗಿ ಸಮಾಲೋಕನ ಮಾಡಿರುವ ಡಾ|| ರಂ. ಶ್ರೀ. ಮುಗಳಿಯವರು ತಮ್ಮ 'ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿ—"ಇದು ನೃಪತುಂಗ ರಚಿತವಾದ ಗ್ರಂಥವಲ್ಲ ಎಂಬುದು ಮೊದಲನೆಯ ಗಟ್ಟಿಮಾತು . . . ಎರಡನೆಯ ಗಟ್ಟಿಮಾತೆಂದರೆ ಕವಿರಾಜಮಾರ್ಗಕಾರನು ನೃಪತುಂಗ ಸಭಾಸದನಾಗಿದ್ದು ಅವನಲ್ಲಿ ಅತ್ಯಂತ ಆದರವುಳ್ಳವನು . . . ಮೂರನೆಯದಾಗಿ, ಕವಿರಾಜಮಾರ್ಗಕಾರನು ಜೈನಮತೀಯನೆಂಬುದು ಗಟ್ಟಿಮಾತು"ಎಂದು ಸ್ಪಷ್ಟವಾಗಿ ಹೇಳಿದ್ದರೂ. "ಎಲ್ಲ ಪ್ರಮಾಣಗಳನ್ನು ಮನದಂದು ತೂಗಿದರೆ, ಶ್ರೀ ವಿಜಯನು ಕವಿರಾಜಮಾರ್ಗಕಾರನಾಗಿರಬಹುದೆಂದು ನಮ್ಮ ತೋರಿಕೆ" ಎಂದೇ ನುಡಿದಿದ್ದಾರೆ.

ಇದಿಷ್ಟು ಕವಿರಾಜಮಾರ್ಗದ ಕರ್ತೃತ್ವದ ವಿಚಾರದಲ್ಲಿ ಈ ವರೆಗೆ ನಡೆದಿರುವ ಚರ್ಚೆಗಳ ಹೊಲಬಿನ ಸ್ಥೂಲ ಪರಿಚಯ. 'ಹೊಲಬು' ಎನ್ನುವುದಕ್ಕಿಂತ ವಾದ ಪ್ರತಿವಾದಗಳ, ಊಹಾಪೋಹಗಳ, ಹೊಲಬು ತಪ್ಪಿಸುವ ಹೆಗ್ಗಾಡು ಎಂದರೂ ಸಲ್ಲುತ್ತದೆ. ಈ ಎಲ್ಲ ಚರ್ಚೆಗಳ ಸಾರಾಂಶವನ್ನು ಮಾತ್ರ ಪರಿಚಯ ಮಾಡಿಕೊಡಬೇಕೆಂದರೂ ಒಂದು ಸುದೀರ್ಘ

ಲೇಖನವನ್ನೇ ಬರೆಯಬೇಕಾದೀತು. ಅಷ್ಟಕ್ಕೆ ಇಲ್ಲಿ ಅವಕಾಶವಿಲ್ಲ. ಆದ್ದರಿಂದ ವಾದವಿವಾದಗಳ ಫಲವಾಗಿ ಈಗ ಸ್ಪಷ್ಟವಾಗಿ ರೂಪುಗೊಂಡಿರುವ ನೃಪತುಂಗಪಕ್ಷ, ಕವೀಶ್ವರಪಕ್ಷ, ಶ್ರೀವಿಜಯಪಕ್ಷ–ಈ ಮೂರು ಪಕ್ಷಗಳಲ್ಲಿ ಪ್ರತಿಯೊಂದು ಪಕ್ಷದವರೂ ತಮ್ಮ ನಿಲುವಿನ ಸಮರ್ಥನೆಗಾಗಿ ಮುಂದಿಟ್ಟಿರುವ ಬಾಹ್ಯಾಂತರ ಪ್ರಮಾಣಗಳಲ್ಲಿ ಅತ್ಯಂತ ಮುಖ್ಯವಾದುವನ್ನುಮಾತ್ರ ಉಲ್ಲೇಖಿಸಿ, ಅವುಗಳ ಸಾಧುತ್ವ, ಅಸಾಧುತ್ವಗಳನ್ನು ವಿವೇಚಿಸಿ, ನಮ್ಮ ಗಮನಕ್ಕೆ ಬಂದ ಹೊಸ ಪ್ರಮಾಣಗಳು ಯಾವುವಾದರೂ ಇದ್ದರೆ ಅವನ್ನೂ ಕೊಟ್ಟು,—ನಮ್ಮ ಅಭಿಪ್ರಾಯದಲ್ಲಿ ಯಾವ ಪಕ್ಷ ನಿಸ್ಸಂದಿಗ್ಧವಾಗಿ ಪರಿಗ್ರಾಹ್ಯ ಎಂಬುದನ್ನು ತಿಳಿಸುವುದಷ್ಟೆ ನಮ್ಮ ಕೆಲಸ.

ನೃಪತುಂಗಪಕ್ಷ :

(೧) ಆಂತರಿಕ ಪ್ರಮಾಣಗಳು: (i) ಮೊದಲ ಪರಿಚ್ಛೇದದ ಮೂರು ಮಂಗಳ ಶ್ಲೋಕಗಳು. (ii) ಪರಿಚ್ಛೇದ Iರ ಕೆಲವು ಉಕ್ತಿಗಳು : ನರಲೋಕಚಂದ್ರ ಮತದಿಂ (ಪದ್ಯ ೨೩); ಅತಿಶಯಧವಳೊಕ್ತ ಕ್ರಮದೆ (ಪ. ೨೪); ಉದಾರ ನೃಪತುಂಗದೇವ ವಿದಿತ ಕ್ರಮದಿಂ (ಪ. ೪೪); ಕೃತಕೃತ್ಯಮಲ್ಲ ವಲ್ಲಭ ಮತದಿಂ (ಪ. ೬೨); ನೃಪತುಂಗ ದೇವ ಮಾರ್ಗ ಕ್ರಮ (ಪ. ೧೪೭); ಅತಿಶಯಧವಳೋರ್ವಿಪೋದಿತಾಳಂಕೃತಿ (ಪ. ೧೪೮) ; ನೀತಿ ನಿರಂತರ ಕ್ರಮಂ (ಪ. ೧೪೯).

ಪರಿಚ್ಛೇದ IIರ ಕೆಲವು ಉಕ್ತಿಗಳು: ನೃಪತುಂಗ ವಿಚಾರಕ್ರಮಗಣನ ಮಾರ್ಗದೊಳ್ (ಪ. ೨) ; ಮಾರ್ಗಂ ನಿತ್ಯಮಲ್ಲವಲ್ಲಭಮತದಿಂ (ಪ. ೧೧) ; ಎಂದನತಿಶಯ ಧವಳಂ (ಪ. ೨೯) ; ಕೃತಕೃತ್ಯಮಲ್ಲವಲ್ಲಭಮತದಿಂ (ಪ. ೩೦) ; ಭಾಸುರ ನೃಪತುಂಗ ದೇವ ವಿದಿತ ಕ್ರಮದಿಂ (ಪ. ೪೫) ; ಅತಿಶಯಧವಳೋಕ್ತ ಕ್ರಮದಿನಱಿಪುವೆಂ (ಪ. ೫೫) ; ನೃಪತುಂಗ ಮಾರ್ಗೋತ್ಸವಂ (ಪ. ೧೦೦) ; ಮಹಾನೃಪತುಂಗದೇವನಾದರದೊಳೆ ಪೇೞ್ದ ಮಾರ್ಗ ಗತಿಯಿಂ (ಪ.೧೦೭) ; ಅತಿಶಯಧವಳೋರ್ವಿಪೋಕ್ತ ಮಾರ್ಗೋಚಿತಗತಿ (ಪ. ೧೫೩).

ಪರಿಚ್ಛೇದ IIIರ ಉಕ್ತಿಗಳು : ಬೆಸಸಿದನಖಿಳಧರಾವಲ್ಲಭನಿಂತಮೋಘವರ್ಷ ನೃಪೇಂದ್ರಂ (ಪ. ೧) ; ಅತಿಶಯಧವಳಧರಾಧಿಪಮತದಿಂ (ಪ. ೧೧) ; ನೃಪತುಂಗ ದೇವಮತದಿಂ (ಪ. ೯೮) ; ನೃಪತುಂಗದೇವ ಮಾರ್ಗದೊಳ್ (ಪ. ೧೦೭) ; ನುತ

ಸರಸ್ವತೀ ತೀರ್ಥಾವತಾರ ಮಾರ್ಗನೆಸಕಂ (ಪ. ೨೨೫); ನೃಪತುಂಗದೇವಮಾರ್ಗಾಂತರ ಗತ ಬೋಧ ವಿಶೇಷಯಾನಪಾತ್ರಂ (ಪ. ೨೩೦).

(iii) ಪ್ರತಿಪರಿಚ್ಛೇದಾಂತ ಗದ್ಯದಲ್ಲಿ ಬರುವ–"ಶ್ರೀ ಪರಮಶ್ರೀ ನೃಪತುಂಗ ದೇವಾನುಮತಮಪ್ಪ ಕವಿರಾಜ ಮಾರ್ಗದೊಳ್ . . ." ಎಂಬ ಮಾತು.

ಕವಿರಾಜಮಾರ್ಗವು ನೃಪತುಂಗ ಕೃತವೆಂದು ಸಾಧಿಸಲು ಮೇಲ್ಕಂಡ ಆಂತರಿಕ ಪ್ರಮಾಣಗಳನ್ನು ನೃಪತುಂಗ ಪಕ್ಷದವರು (ವಿಶೇಷತಃ ಪಾಠಕರು ಮತ್ತು ರಾಜಪುರೋಹಿತರು) ಬಳಸಿಕೊಂಡಿದ್ದಾರೆ. ಪ್ರತಿಪಕ್ಷಗಳವರು ನೃಪತುಂಗ ಕರ್ತೃತ್ವ ಸ್ಥಾಪನೆಗೆ ಅವು ಸಾಧಕಗಳಾಗಲಾರವು ಎಂದು ವಾದಿಸಿದ್ದಾರೆ. ಮೊದಲು, ಮಂಗಳ ಶ್ಲೋಕಗಳನ್ನು ಪರಿಶೀಲಿಸೋಣ:

ಈ ಮಂಗಳ ಶ್ಲೋಕಗಳು ವಿಷ್ಣುಸ್ತುತಿ ಎಂಬುದು ಸ್ಪಷ್ಟ. ನೃಪತುಂಗನು ಜೈನನೆಂದು ಪಾಠಕರು ಭಾವಿಸಿದ್ದಾರೆ. ಜೈನರು ವಿಷ್ಣು ಸ್ತುತಿಯನ್ನು ಮಾಡುವ ಸಂಭವ ಹೇಗೆ ಎಂಬ ಸಂದೇಹ ಅವರನ್ನು ಬಾಧಿಸಿದಂತೆ ಕಾಣಲಿಲ್ಲ. ನೃಪತುಂಗನು ಜೈನ ಎಂದು ಇಟ್ಟುಕೊಂಡರೆ, ಅವನು ಕರ್ತೃ ಎಂದು ವಾದಿಸಲು ಈ ಪದ್ಯಗಳು ವಿರುದ್ಧ ಸಾಕ್ಷ್ಯಗಳಾಗಿ ಪರಿಣಮಿಸುತ್ತವೆ. ಮಂಗಳಾಚಾರಣೆಯ ಪದ್ಯಗಳಲ್ಲಿ ಕೆಲವು ವೇಳೆ ಕವಿಗಳು ತಮ್ಮ ಬಿರುದುಗಳನ್ನು ತಾವು ಸ್ತುತಿಸುವ ದೇವರಿಗೆ ಆರೋಪಿಸುತ್ತಾರೆಂದು ಹೇಳಿ, ಈ ಹೇಳಿಕೆಯು ಸಮರ್ಥನೆಗೆ ಅಭಿನವಪಂಪನ ಮಂಗಳ ಶ್ಲೋಕವನ್ನು ಉದಾಹರಿಸಿ, ಗ್ರಂಥಾರಂಭದ ಎರಡು ಪದ್ಯಗಳಲ್ಲಿ ನೃಪತುಂಗನು ತನ್ನ ಬಿರುದುಗಳನ್ನೇ ವಿಷ್ಣುವಿಗೂ ಅನ್ವಯಿಸಿದ್ದಾನೆ ಎಂದು ಪಾಠಕರು ಹೇಳುತ್ತಾರೆ. ಎಂದಮೇಲೆ, ಈ ಎರಡು ಪದ್ಯಗಳಿಂದ ನೃಪತುಂಗನು ವಿಷ್ಣುಭಕ್ತನೆಂದೂ ಗ್ರಂಥದ ಉಳಿದೆಡೆಗಳಲ್ಲಿ ಕಂಡುಬರುವ ಜೈನಧರ್ಮ ದ್ಯೋತಕಗಳಾದ ಉಲ್ಲೇಖಗಳಿಂದ ಅವನು ಜೈನನೆಂದೂ ಹೇಳಬೇಕಾಗುತ್ತದೆ. ತಮ್ಮ ಹೇಳಿಕೆಯಿಂದ ಉದ್ಭವಿಸುವ ಈ ಪೂರ್ವಾಪರ ವಿರೋಧವನ್ನು ಪಾಠಕರು ಗಮನಿಸಿದಂತೆ ಕಾಣುವುದಿಲ್ಲ. ರಾಜಪುರೋಹಿತರೂ ಕೂಡ ಈ ಎರಡು ಪದ್ಯಗಳಲ್ಲಿ ಕ್ಷಾತ್ರದ್ಯೋತಕಗಳಾದ ನೃಪತುಂಗನ ಬಿರುದುಗಳಿರುವುದರಿಂದ, ಗ್ರಂಥಕಾರನು ನೃಪತುಂಗ

ಎನ್ನುವುದಕ್ಕೆ ಇವು ಪ್ರಮಾಣಗಳೆಂದು ವಾದಿಸಿದ್ದಾರೆ. ಗ್ರಂಥಾರಂಭದ ಮೂರನೆಯ ಪದ್ಯ, ದಂಡಿಯ ಶ್ಲೋಕದ ಕನ್ನಡ ಅನುವಾದ; ಮೂಲ ಶ್ಲೋಕದ ವೈದಿಕ ಕಲ್ಪನೆಯನ್ನು ಇಲ್ಲಿ ಉದ್ದೇಶಪೂರ್ವಕವಾಗಿ ಕವಿರಾಜ ಮಾರ್ಗಕಾರನು ಕೈಬಿಟ್ಟಿದ್ದಾನೆ (ನೋಡಿ : ೩ನೆಯ ಪದ್ಯದ ಟಿಪ್ಪಣಿ, ಪು. ೧೨೨). ವಿಷ್ಣುಭಕ್ತನಾದ ನೃಪತುಂಗನು–ತಾನೇ ಗ್ರಂಥಕಾರನಾಗಿದ್ದರೆ–ಹೀಗೆ ಮಾಡುತ್ತಿದ್ದನೆ? (ನೃಪತುಂಗನು ವಿಷ್ಣುಭಕ್ತನಾಗಿದ್ದನೆಂದು ಈ ಮೊದಲೇ ನಾವು ಸ್ಥಾಪಿಸಿದ್ದೇವೆ). ಈ ಮಂಗಳ ಶ್ಲೋಕಗಳ ಆಧಾರದ ಮೇಲೆಯೆ ಹೇಳುವುದಾದರೆ, ನೃಪತುಂಗನ ಆಶ್ರಿತನಾದ ಕವಿ ಮೊದಲ ಎರಡು ಪದ್ಯಗಳಲ್ಲಿ ತನ್ನ ಆಶ್ರಯದಾತನಾದ ದೊರೆಗೂ ಆತನ ವಂಶದ ಹಾಗೂ ಇಷ್ಟದ ದೈವಕ್ಕೂ ಅಭೇದವನ್ನು ಕಲ್ಪಿಸಿ, ದೊರೆಯ ಬಿರುದುಗಳನ್ನೆಲ್ಲ ದೈವಕ್ಕೂ ಅನ್ವಯಿಸಿ, ಆ ದೈವವನ್ನೆ ಎದೆತುಂಬಿ ಹೊಗಳಿದ್ದಾನೆ; ಮೂರನೆಯ ಪದ್ಯದಲ್ಲಿ, ತನ್ನ ಧಾರ್ಮಿಕ ಭಾವನೆಗೆ ವಿರುದ್ಧವಾದ ವೈದಿಕ ಕಲ್ಪನೆಯನ್ನು ಮೂಲ ಶ್ಲೋಕದಿಂದ ತೆಗೆದುಹಾಕಿ, ಜೈನ ಸಂಪ್ರದಾಯಕ್ಕೆ ಅವಿರುದ್ಧವಾಗುವಂತೆ ಸರಸ್ವತೀ ಸ್ತೋತ್ರ ಮಾಡಿದ್ದಾನೆ. (ಇಂಥ ಮಾರ್ಪಾಟುಗಳು ಗ್ರಂಥದಲ್ಲಿ ಇನ್ನೂ ಕೆಲವಿವೆ.) ಈ ಪ್ರಮೇಯದಿಂದ, ಈ ಮೂರು ಪದ್ಯಗಳಲ್ಲಿ ಸೂಕ್ಷ್ಮವಾಗಿ ಅಡಗಿರುವ ಮತದ್ವಯಗಳ ಸಂಶ್ಲೇಷದಿಂದ ಉಂಟಾಗಿರುವ ವಿರೋಧಾಭಾಸವು ಪರಿಹಾರವಾಗುತ್ತದೆ. ಆ ಆಶ್ರಿತಕವಿ ಯಾರೆಂಬುದು ಮುಂದಿನಪ್ರಶ್ನೆ.

ಇನ್ನು (ii)ನೆಯ ವಿಭಾಗದ ಆಂತರಿಕ ಪ್ರಮಾಣಗಳನ್ನು ಪರಿಶೀಲಿಸೋಣ: ಇವೆಲ್ಲ ನೃಪತುಂಗಪರವಾದ ಉಕ್ತಿಗಳೇ. ಇವುಗಳಲ್ಲಿ ಮುಖ್ಯವಾಗಿ, 'ಭಾವಿಸಿ ಬೆಸಸಿದನ್ ಅಖಿಳಧರಾವಲ್ಲಭಂ ಅಮೋಘವರ್ಷ ನೃಪೇಂದ್ರಂ'–'ಎಂದನತಿಶಯಧವಳಂ'–'ಅತಿಶಯಧವಳೋರ್ವೀಪೋದಿತಾಲಂಕೃತಿ'–'ಅತಿಶಯಧವಳೋಕ್ತಕ್ರಮದೆ'–'ಮಹಾನೃಪತುಂಗದೇವನಾದರದೊಳೆ ಪೇಳ್ದ ಮಾರ್ಗಗತಿಯಿಂ'–'ನುತಸರಸ್ವತೀ ತೀರ್ಥಾವತಾರನೆಸಕಂ'–'ನೃಪತುಂಗದೇವಮಾರ್ಗಾಂತರ ಗತಬೋಧ ವಿಶೇಷಯಾನಪಾತ್ರಂ' ಎಂಬೀ ಉಕ್ತಿಗಳು "ನೃಪತುಂಗನು ಗ್ರಂಥಕಾರನೆಂಬ ಅಂಶವನ್ನು ಸಂದೇಹಕ್ಕೆಡೆಯಿಲ್ಲದಂತೆ ಸ್ಥಾಪಿಸುತ್ತವೆ" ಎಂದು ನೃಪತುಂಗ

ಪಕ್ಷದವರ ವಾದ.[19] ಇವೂ ಇಂಥ ಇನ್ನಿತರ ಉಕ್ತಿಗಳೂ ಪ್ರಥಮ ಪುರುಷ ದಲ್ಲಿರುವುದರ ಕಡೆಗೆ ಫ್ಲೀಟರು ಗಮನ ಸೆಳೆದು, ಇದರಿಂದ ಕರ್ತೃ ನೃಪ ತುಂಗನಲ್ಲವೆಂದು ಹೇಳಬಹುದೆಂದು ಪ್ರತಿವಾದವನ್ನು ಹೂಡಿದ್ದಾರೆ. ಇದಕ್ಕೆ ನೃಪತುಂಗಪಕ್ಷದ ಸಮಾಧಾನ ಎಂದರೆ, ಗ್ರಂಥಕರ್ತೃತ್ವ ಸ್ಪಷ್ಟ ಗೋಚರವಾಗಿರುವ ನಾಗವರ್ಮಾದಿಗಳ 'ಛಂದೋಂಬುಧಿ' ಮುಂತಾದ ಗ್ರಂಥಗಳಲ್ಲಿಯೂ ಗ್ರಂಥಕಾರರು ಉತ್ತಮ ಪುರುಷಾರ್ಥದಲ್ಲಿ ಪ್ರಥಮ ಪುರುಷಪ್ರಯೋಗ ಮಾಡಿರುವ ಸಂಪ್ರದಾಯ ಕಂಡುಬರುತ್ತದೆ ಎಂಬುದು. ಮುಂದಿನ ಕವಿಗಳ ಸಂಪ್ರದಾಯವನ್ನು ಹಿಂದಿನ ಕವಿಯೊಬ್ಬನಿಗೆ ಅನ್ವಯಿ ಸುವುದು ಸಲ್ಲದು ಎಂಬ ಪ್ರತಿಪಕ್ಷದವರ ಆಕ್ಷೇಪಣೆಯೂ ಇದೆ. ಅಲ್ಲದೆ, ಈ ಪ್ರಥಮ ಪುರುಷ ಪ್ರಯೋಗಗಳೊಂದಿಗೆ ಜೊತೆಜೊತೆಯಲ್ಲಿಯೆ ಉತ್ತಮ ಪುರುಷಪ್ರಯೋಗಗಳೂ ಇರುವುದು ನೃಪತುಂಗಪಕ್ಷದವರ ಗಮನಕ್ಕೆ ಬಾರದೆ ಹೋಗಲಿಲ್ಲ. "ಸವಿಶೇಷ ಗುಣಮನತಿಶಯಧವಳೋಕ್ತಿ ಕ್ರಮದಿನಱಿಪುವೆಂ ತದ್ಭವದೊಳ್" ಎಂಬೀ ವಾಕ್ಯವನ್ನು ಎತ್ತಿಹೇಳಿ, "ಕೃತಿಕಾರನು ನೃಪ ತುಂಗನಿಗಿಂತ ಭಿನ್ನನು ಎಂಬ ಅಭಿಪ್ರಾಯ ಇದರಿಂದ ಉಂಟಾಗುತ್ತದೆ. ಆದರೆ ಇದು ಒಂದೇ ಒಂದಾದ ನಿದರ್ಶನ" ಎಂದು ಪಾಠಕರು ಸಮಾಧಾನ ಪಟ್ಟುಕೊಂಡಿದ್ದಾರೆ. ಮಾತ್ರವಲ್ಲ; "ನೃಪತುಂಗನೇ ಗ್ರಂಥಕರ್ತನೆಂಬ ತಮ್ಮ ಸಿದ್ಧಾಂತಕ್ಕೆ ವಿರೋಧವಾಗದಂತೆ ಅದಕ್ಕೆ ತೃಪ್ತಿಕರವಾದ ವ್ಯಾಖ್ಯಾನ ವನ್ನು ಬರೆಯುವುದು ಸುಲಭಸಾಧ್ಯವಲ್ಲ" ಎಂದು ಒಪ್ಪಿಕೊಂಡಿದ್ದಾರೆ. ಆದರೆ, ಇಂಥ ಉತ್ತಮಪುರುಷ ಪ್ರಯೋಗಗಳು ಇನ್ನೂ ಕೆಲವಿವೆ ಎಂಬುದು ಅವರ ಗಮನಕ್ಕೆ ಬರಲಿಲ್ಲ. ಉದಾ. 'ಅತಿಶಯಧವಳ ಧರಾಧಿಪ **ಮತ ದಿಂದಂ . . . ತೋರ್ಪೆಂ** (II - ೧೧), '**ಬೆಸಸಿದನಖಿಳಧರಾವಲ್ಲಭ** ನಿಂತಮೋಘವರ್ಷನೃಪೇಂದ್ರಂ' (III - ೧), '**ತದನುಮತ**' (?) ಲಕ್ಷ್ಯ ಲಕ್ಷಣ ನಿದರ್ಶನಂಗಳನನುಕ್ರಮೋಕ್ತಿಯೆ '**ಪೇೞ್ವೆಂ**' (III - ೫), ' ಅನ್ನೆಗಂ ನಿಶ್ಚಿತಮುಕ್ಕೆ . . . ಪೇೞ್ವ ಮಾೞ್ಕೆಯೊಳೆನ್ನಾ' (II - ೩). ಈ ಪ್ರಯೋಗಗಳನ್ನು ಗಮನಿಸಿದಮೇಲೆ, ಕವಿಕಾಮನ 'ಶೃಂಗಾರರತ್ನಾಕರ' ದಿಂದಲೂ ನಾಗವರ್ಮನ 'ಛಂದೋಂಬುಧಿ' ಯಿಂದಲೂ ಪ್ರಥಮ ಪುರುಷ ಪ್ರಯೋಗಗಳೂ ಉತ್ತಮ ಪುರುಷ ಪ್ರಯೋಗಗಳೂ ಜೊತೆ ಜೊತೆಯಾಗಿ

ಪ್ರಯೋಗವಾಗಿರುವುದನ್ನು ನೃಪತುಂಗ ಪಕ್ಷದವರು ಮುಂದಿಟ್ಟು, ನೃಪ ತುಂಗನೇ ಗ್ರಂಥಕರ್ತನೆಂಬುದಕ್ಕೆ ಅವು ಬಾಧಕಗಳಾಗಲಾರವು ಎಂದು ಸಾರಿದರು. ಆದರೆ, ಇಂಥ ಪ್ರಯೋಗಗಳು ಒಂದೇ ಕೃತಿಯಲ್ಲಿ ಬಂದಿದ್ದರೂ ಬೇರೆ ಬೇರೆ ಪದ್ಯಗಳಲ್ಲಿ ಬಂದಿವೆ ಎಂಬುದನ್ನು ನಾವು ಗಮನಿಸಬೇಕು; ಕವಿರಾಜಮಾರ್ಗದ ಮೇಲ್ಕಂಡ ಉದಾಹರಣೆಗಳು ಕೆಲವಲ್ಲಿ ಒಂದೇ ವಾಕ್ಯದಲ್ಲಿ ಪ್ರಥಮ ಪುರುಷ ಉತ್ತಮ ಪುರುಷ ಪ್ರಯೋಗಗಳೆರಡೂ ಒಟ್ಟಿಗೆ ಪ್ರಯೋಗವಾಗಿವೆ. ಆದ್ದರಿಂದ, ಡಾ|| ರಂ. ಶ್ರೀ. ಮುಗಳಿಯವರು ಹೇಳುವಂತೆ, "ಇಲ್ಲಿ ಎರಡೂ ಪುರುಷಗಳ ಪ್ರಯೋಗದಿಂದ ನೃಪತುಂಗ ನಲ್ಲದ ವ್ಯಕ್ತಿ ಗ್ರಂಥಕಾರನಾಗಿರಬೇಕೆಂದು ಸ್ಫುಟವಾಗಿ ಧ್ವನಿತವಾಗಿದೆ. 'ನೃಪತುಂಗನ ಮತದಂತೆ ನಾನು ಹೇಳುತ್ತೇನೆ' ಎಂದು ನೃಪತುಂಗನು ಹೇಳಲಾರನು." (ಕ. ಸಾ. ಚರಿತ್ರೆ, ಪು. ೫೪). 'ಬೆಸಸಿದನಖಿಳಧರಾ ವಲ್ಲಭನಿಂತಮೋಘವರ್ಷನೃಪೇಂದ್ರಂ' ಎಂಬ ಉಕ್ತಿಯಲ್ಲಿ 'ಬೆಸಸಿದನ್' ಎಂಬ ಮಾತು ಗಮನಾರ್ಹ. ನೃಪತುಂಗನು ಬೇರೊಬ್ಬರಿಗೆ ಅಧಿಕಾರ ವತ್ತಾಗಿ ತನ್ನ ಅಭಿಪ್ರಾಯವನ್ನು ತಿಳಿಸಿದನು, ಅಪ್ಪಣೆಕೊಡಿಸಿದನು ಎಂದು ಈ ಮಾತಿನಿಂದ ಅರ್ಥವಾಗುತ್ತದೆ. 'ಅತಿಶಯಧವಳೋರ್ವಿಪ **ಉದಿತ** ಅಳಂಕೃತಿಮತಿ ನೀತಿನಿರಂತರ ಪ್ರತೀತಂ' (I – ೧೪೮) ಎಂಬ ಉಕ್ತಿಯಿಂದ 'ನೃಪತುಂಗನಿಂದ ಉದಿತವಾದ ಅಲಂಕಾರಗ್ರಂಥ' ಎಂಬ ಅರ್ಥವು ಸೂಚಿತವಾಗುತ್ತದೆ. 'ಇದು ನೃಪತುಂಗಕೃತವೆನ್ನಲು ಆಧಾರವಾಗಿದ್ದಂತೆ ತೋರಬಹುದು' ಎಂಬ ಶಂಕೆಯನ್ನು ಡಾ|| ಮುಗಳಿಯವರು ವ್ಯಕ್ತಪಡಿಸಿ, 'ನೃಪತುಂಗನ ಆಶ್ರಯದಲ್ಲಿ ಅವನಿಂದ ಬೆಳಕಿಗೆ ಬಂದ ಗ್ರಂಥವೆಂಬ ವಿವರಣೆ ಹೆಚ್ಚು ಸಮಂಜಸವಾಗಿ ತೋರುತ್ತದೆ' ಎಂಬ ಶಂಕಾಪರಿಹಾರ ವನ್ನೂ ಸೂಚಿಸಿದ್ದಾರೆ. ('ಅತಿಶಯಧವಳೋರ್ವಿಪ ಉದಿತ ಅಳಂಕೃತಿ ಮತಿ ನೀತಿ ನಿರಂತರ ಪ್ರತೀತಂ' ಎಂಬ ಉಕ್ತಿಗೆ 'ನೀತಿನಿರಂತರ ಪ್ರತೀತ ವಾದ, ಅತಿಶಯಧವಳ ದೊರೆಯಿಂದ ಬೆಳಕಿಗೆ ಬಂದ ಅಲಂಕಾರಜ್ಞಾನ' ಎಂಬ ಅರ್ಥ ಹೆಚ್ಚು ಉಚಿತ ಎಂದು ಕಾಣುತ್ತದೆ. 'ಅಳಂಕೃತಿಮತಿ' ಎಂಬ ಪದಕ್ಕೆ 'ಅಲಂಕಾರ ಗ್ರಂಥ' ಎಂಬುದಕ್ಕಿಂತ 'ಅಲಂಕಾರ ಶಾಸ್ತ್ರ ಜ್ಞಾನ' ಎಂಬ ಅರ್ಥ ಸೂಕ್ತ.

ಪ್ರತಿಪರಿಚ್ಛೇದಾಂತ ಗದ್ಯ ಹೀಗಿದೆ: 'ಇದು ಪರಮಶ್ರೀ ನೃಪತುಂಗ ದೇವಾನುಮತಮಪ್ಪ ಕವಿರಾಜಮಾರ್ಗದೊಳ್...' ಇತ್ಯಾದಿ. ನೃಪ ತುಂಗನೇ ಗ್ರಂಥಕಾರನಾಗಿದ್ದಪಕ್ಷದಲ್ಲಿ, 'ನೃಪತುಂಗದೇವ ವಿರಚಿತಮಪ್ಪ' ಎಂದು ಹೇಳದೆ, 'ಅನುಮತ' ಮಪ್ಪ ಎಂದು ಏಕೆ ಹೇಳಿದ್ದಾನೆ ಎಂಬ ಸಂದೇಹ ಯಾರಿಗಾದರೂ ಮೂಡುವುದು ಸಹಜ. (ಡಾ|| ಫ್ಲೀಟರೂ[20] ಆರ್. ನರಸಿಂಹಾಚಾರ್ಯರು ಹೀಗೆ ಸಂದೇಹಿಸಿದ್ದಾರೆ). ಇದಕ್ಕೆ ನೃಪತುಂಗ ಪಕ್ಷದವರು ಕೊಡುವ ಉತ್ತರ: "ಅಲಂಕಾರಶಾಸ್ತ್ರವು ಮತಭೇದಾತ್ಮಕ; ಗ್ರಂಥದ ಹೆಸರು ಮಾರ್ಗ; ಗ್ರಂಥದಲ್ಲಿ 'ಮಹಾನೃಪತುಂಗದೇವನಾದರ ದೊಳೆ ಪೇಳ್ದ ಮಾರ್ಗ', 'ಅತಿಶಯಧವಳೋಪದೇಶ ಮಾರ್ಗ' ಎಂದು ಸ್ಪಷ್ಟವಾಗಿ ಹೇಳಿರುವುದರಿಂದಲೂ ನೃಪತುಂಗನು—'ಈ ಗ್ರಂಥದಲ್ಲಿ ನನಗೆ ಅಭಿಮತವಾದ ಮಾರ್ಗವನ್ನು ಹೇಳಿದ್ದೇನೆ' ಎಂಬುದನ್ನು ವ್ಯಕ್ತಪಡಿಸು ವುದಕ್ಕಾಗಿ 'ಅನುಮತ' ಎಂಬ ಶಬ್ದವನ್ನು ಯೋಜಿಸಿದ್ದಾನೆಂದು ನಿಷ್ಪನ್ನ ವಾಗುತ್ತದೆ." ಗ್ರಂಥವು ಅನ್ಯಕವಿಕೃತವಾಗಿದ್ದರೆ, (ಪೊನ್ನ ರನ್ನ ನೇಮಿ ಚಂದ್ರ ಇತ್ಯಾದಿ ಕವಿಗಳ ಸಂಪ್ರದಾಯದಂತೆ) '...ಕವಿ ವಿರಚಿತಮುಂ ನೃಪತುಂಗದೇವಾನುಮತಮುಮಪ್ಪ ಕವಿರಾಜಮಾರ್ಗದೊಳ್' ಎಂದು ಕವಿಯ ಹೆಸರು ಆಶ್ರಯದಾತನ ಹೆಸರು-ಎರಡೂ ಕೂಡಿ ಇರಬೇಕಾಗಿದ್ದಿತು; ನೃಪತುಂಗನ ಹೆಸರೊಂದೇ ಇರುವುದರಿಂದ, "ಕವಿರಾಜಮಾರ್ಗ ಗ್ರಂಥ ವನ್ನು ನೃಪತುಂಗನೇ ರಚಿಸಿರುತ್ತಾನೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ" ಎಂದು ನೃಪತುಂಗಪಕ್ಷದ ರಾಜಪುರೋಹಿತರ ವಾದ. ಇದಕ್ಕೆ ಪ್ರತಿಪಕ್ಷವಾಗಿ ಕೊಟ್ಟ ಉತ್ತರಗಳನ್ನೂ ಸಮಾಧಾನಗಳನ್ನೂ ಹೀಗೆ ಸಂಗ್ರಹಿಸಬಹುದು:

೧. ನೃಪತುಂಗನೇ ಕರ್ತೃವಾಗಿದ್ದ ಪಕ್ಷದಲ್ಲಿ, ಅಭಿಮತಾರ್ಥದಲ್ಲಿ 'ಅನುಮತ' ಎಂಬ ಪದವನ್ನು ಉಪಯೋಗಿಸುವ ಬದಲು, 'ಅಭಿಮತ' ಇಲ್ಲವೆ 'ಸಮ್ಮತ' ಎಂಬ ಪದವನ್ನೆ ಉಪಯೋಗಿಸಬಹುದಾಗಿತ್ತು.

೨. ಪರಿಚ್ಛೇದಾಂತ ಗದ್ಯದಲ್ಲಿ ಆಶ್ರಿತಕವಿ ಆಶ್ರಯದಾತನ ಹೆಸರಿನೊಂದಿಗೆ ತನ್ನದನ್ನೂ ಸೇರಿಸಿ ಹೇಳಬೇಕೆಂಬ ನಿಯಮವೇನೂ ಇಲ್ಲ. ಪೊನ್ನರನ್ನಾದಿ ಮುಂದಿನ ಕಾಲದ ಕವಿಗಳ ಸಂಪ್ರದಾಯವನ್ನು ಹಿಂದಿನ ಕವಿಯೊಬ್ಬನಿಗೆ ಅನ್ವಯಿಸುವುದು ಸಲ್ಲದು. ಅಲ್ಲದೆ, ಗ್ರಂಥದ ಉದ್ದಕ್ಕೂ ಮೇಲಿಂದ ಮೇಲೆ

ಪ್ರಯೋಗವಾಗಿರುವ 'ನೃಪತುಂಗದೇವ ಮಾರ್ಗ', 'ಅತಿಶಯಧವಳೋಕ್ತಿ ಕ್ರಮ', 'ನರಲೋಕಚಂದ್ರ ಮತ' ಇತ್ಯಾದಿ 'ಮಾರ್ಗ', 'ಕ್ರಮ', 'ಮತ' ಮುಂತಾದ ಪದಗಳಿಂದ ವ್ಯಕ್ತಪಡುವ ಅಲಂಕಾರಶಾಸ್ತ್ರ ವಿಷಯಕವಾದ ನೃಪತುಂಗಮತವನ್ನೆ ಗದ್ಯದ 'ಅನುಮತ' ಎಂಬ ಮಾತು ಪುಷ್ಟೀಕರಿಸುತ್ತದೆ. ೩. ಕವಿರಾಜಮಾರ್ಗಕಾರನು ತನ್ನ ಆಶ್ರಯದಾತನ ಪ್ರತಿಷ್ಠೆಯನ್ನು ಹೆಚ್ಚಿಸುವುದಕ್ಕೋಸ್ಕರ, ಬೇರೆಯ ಕಡೆಗಳಲ್ಲಿ ತನ್ನ ಕರ್ತೃತ್ವವನ್ನು ಸೂಚ್ಯವಾಗಿ ತಿಳಿಸಿರುವುದರಿಂದ, ಪರಿಚ್ಛೇದಾಂತ ಗದ್ಯದಲ್ಲಿ ತನ್ನ ಹೆಸರನ್ನು ಉದ್ದೇಶಪೂರ್ವಕವಾಗಿಯೇ ಸೇರಿಸದೆ ಬಿಟ್ಟಿದ್ದಾನೆ.

ಈ ಸಂಬಂಧವಾಗಿ ವಾದಪ್ರತಿವಾದಗಳನ್ನೆಲ್ಲ ಪರಿಶೀಲಿಸಿದಮೇಲೆ, ಪರಿಚ್ಛೇದಾಂತ ಗದ್ಯವೊಂದರಮೇಲೆ ನೃಪತುಂಗನ ಕರ್ತೃತ್ವವನ್ನು ಸ್ಥಾಪಿಸಲಾಗುವುದಿಲ್ಲ; ಕರ್ತೃ ಬೇರೆ ಇನ್ನೊಬ್ಬನಿರಬಹುದೆಂಬ ಅನುಮಾನಕ್ಕೇ ಆಸ್ಪದಕೊಡುವಂತಿದೆ ಅದು—ಎಂಬ ಅಂಶ ವ್ಯಕ್ತಪಡುತ್ತದೆ.

ಪರಿಚ್ಛೇದಾಂತ್ಯದ ಮೂರು ಪದ್ಯಗಳೂ ಕವಿರಾಜಮಾರ್ಗಕಾರನು ಶ್ರೀವಿಜಯನಿರಬಹುದು ಎಂದು ಊಹಿಸುವುದಕ್ಕೆ ಸಹಾಯಕಗಳಾಗಿವೆ. ಎರಡನೆಯ ಪರಿಚ್ಛೇದದ ಕೊನೆಯ ಪದ್ಯದಿಂದ 'ಕವೀಶ್ವರ'ನೆಂಬವನು ಕರ್ತೃ ಎಂದು ಊಹಿಸಲು ಅವಕಾಶವಿದೆ. ಈ ಮೂರು ಪದ್ಯಗಳಲ್ಲಿಯೂ ಕ್ರಮವಾಗಿ 'ಶ್ರೀವಿಜಯಪ್ರಭೂತಮ', 'ಶ್ರೀವಿಜಯಪ್ರಭೂತ', 'ಶ್ರೀವಿಜಯಪ್ರಭೂತಿ' ಎಂಬ ಪ್ರಯೋಗಗಳಿವೆ. ಗ್ರಂಥಕಾರನು 'ಶ್ರೀವಿಜಯ' ಎಂದು ಹೇಳಿರುವವರಿಗೆ ಇವು ಬಹುಮಟ್ಟಿಗೆ ಏಕೈಕ ಎನ್ನಬಹುದಾದ, ಪ್ರಬಲವಾದ ಆಂತರಿಕ ಪ್ರಮಾಣ. ಆದ್ದರಿಂದ, ಇದನ್ನು ತಮ್ಮ ಪಕ್ಷದಕಡೆಗೆ ತಿರುಗಿಸಿಕೊಳ್ಳಲು ಆ ಪಕ್ಷದ ಪ್ರಮುಖವಾದಿಗಳಾದ ರಾಜಪುರೋಹಿತರು ತಮ್ಮ ತರ್ಕಚಾತುರ್ಯವನ್ನೆಲ್ಲಾ ಉಪಯೋಗಿಸಿ, ಭಗವದ್ಗೀತೆಯ ಶ್ಲೋಕದಲ್ಲಿನ ಶ್ರೀ, ವಿಜಯ, ಭೂತಿ ಎಂಬ ಪದಪ್ರಯೋಗಗಳ ಆಧಾರದಮೇಲೆ, ಮೇಲ್ಕಂಡ ಪ್ರಯೋಗಗಳಲ್ಲಿ ನೃಪತುಂಗನ ಬಿರುದುಗಳೇ ಉಕ್ತವಾಗಿವೆ ಎಂದು ಸಾಧಿಸಲು ಪ್ರಯತ್ನಪಟ್ಟಿದ್ದಾರೆ. ಈ ವಾದದಲ್ಲಿ ಏನೂ ಹುರುಳಿಲ್ಲ. (ಟಿಪ್ಪಣಿಗಳನ್ನು ನೋಡಿ). ಆದ್ದರಿಂದ, ಈ ಬಗೆಗೆ ನಾವು ಪ್ರತಿವಾದವನ್ನು ಬೆಳಸಬೇಕಾದ ಅಗತ್ಯ ಕಾಣದು. ಹೆಚ್ಚಿನದಾಗಿ

ನಾವು ಹೇಳಬಹುದಾದದ್ದು ಇಷ್ಟೆ: ಗ್ರಂಥದಲ್ಲಿ ಉಕ್ತವಾಗಿರುವ ನೃಪತುಂಗನ (ಅತಿಶಯಧವಳ, ಇತ್ಯಾದಿ) ಬಿರುದುಗಳಲ್ಲಿ ಯಾವುದೂ ಎಲ್ಲಿಯೂ ಅಕ್ಷರಮಾತ್ರದಿಂದ ಕೂಡ ರೂಪವ್ಯತ್ಯಾಸವನ್ನು ಹೊಂದಿಲ್ಲ. ಆದರೆ, 'ಶ್ರೀ ವಿಜಯ **ಪ್ರಭೂತಮ, —ಪ್ರಭೂತ, —ಪ್ರಭೂತಿ**' ಎಂಬೀ ಪದಗಳಲ್ಲಿ ಕಾಣಬರುವ ಅಕ್ಷರವ್ಯತ್ಯಾಸಗಳು ಅವು (ಎಂದರೆ, ಆ ಪದಗಳು) ಬಿರುದುಗಳಲ್ಲ ಎಂಬುದಕ್ಕೆ ಸ್ಪಷ್ಟಸಾಕ್ಷ್ಯಗಳು.

ಕವಿರಾಜಮಾರ್ಗವು ನೃಪತುಂಗರಚಿತವಲ್ಲ ಎಂದು ನಿರ್ಧರಿಸಲು—ಹಾಗೆ ನಿರ್ಧರಿಸುವಂದೇ ಅದು ಅನ್ಯಕರ್ತೃಕ ಎಂದು ತಿಳಿಯಲು—ಗ್ರಂಥದಲ್ಲಿ ಸೂಕ್ಷ್ಮಪರಿಶೀಲನೆಗೆ ಗೋಚರಿಸುವ ಪ್ರಬಲ ಪ್ರಮಾಣವೆಂದರೆ, ಗ್ರಂಥದಲ್ಲಿ ಮೂಡಿ ನಿಂತಿರುವ ವ್ಯಕ್ತಿದ್ವಯ ಚಿತ್ರಣ; ಮತ್ತು ಆ ಎರಡು ವ್ಯಕ್ತಿಗಳಿಗೆ ನಾವು ಆರೋಪಿಸಬಹುದಾದ ಮತಧರ್ಮಕ ಭಾವನೆ. ಈ ವಿಚಾರವನ್ನೀಗ ಸಂಕ್ಷೇಪವಾಗಿ ಪರಿಶೀಲಿಸೋಣ.

ಮಂಗಳಶ್ಲೋಕಗಳು ಎರಡು, ಮತ್ತು III ನೆಯ ಪರಿಚ್ಛೇದದಲ್ಲಿ—ಗ್ರಂಥಾಂತ್ಯದಲ್ಲಿ ಬರುವ 'ಉದಾತ್ತಾಲಂಕಾರ'ಕ್ಕೆ ಕೊಟ್ಟಿರುವ ಲಕ್ಷ್ಯಪದ್ಯಗಳು (ನೋಡಿ: ಟಿಪ್ಪಣಿಗಳು: ಪ. ೧೭೩-೧೮೧, ಪು. ೩೩೭-೩೪೨) ಇವು ನಿರ್ವಿವಾದವಾಗಿ ನೃಪತುಂಗನನ್ನು ವರ್ಣಿಸುವ ಪದ್ಯಗಳು. ಮಂಗಳಶ್ಲೋಕಗಳಲ್ಲಿ ವಿಷ್ಣುಸ್ತುತಿಯ ವ್ಯಾಜದಲ್ಲಿ ನೃಪತುಂಗನ ಬಿರುದುಗಳ ಉಲ್ಲೇಖದ ಮೂಲಕ ಅವನ ಕೊಂಡಾಟವೇ ನಡೆದಿದೆ; ಉದಾತ್ತಾಲಂಕಾರದ ಲಕ್ಷ್ಯಪದ್ಯಗಳಲ್ಲಿ, (III-೧೮೦, ೧೮೧) ಈಯೆರಡು ಲಕ್ಷ್ಯಗಳಲ್ಲಿ 'ವೀರನಾರಾಯಣ - ನರಲೋಕ ಚಂದ್ರ - ನೃಪತುಂಗನ' 'ವಿಭವದ ಪೆಂಪುಮಂ' ಪ್ರಶಂಸಿಸಲಾಗಿದೆ; ಇನ್ನುಳಿದ ಹಿಂದಿನ ಪದ್ಯಗಳಲ್ಲಿ, (III-೧೭೪ ರಿಂದ ೧೭೯) ಆತನದೇ 'ಮನದ ಪೆಂಪುಮಂ' ವಿಶೇಷಿಸಿ ಹೇಳಲಾಗಿದೆ. 'ವ್ಯಾಜಸ್ತುತಿ' ಎಂಬ ಅಲಂಕಾರಕ್ಕೆ ಕೊಟ್ಟಿರುವ ಎರಡು ಲಕ್ಷ್ಯಗಳೂ ಅಷ್ಟೆ (III-೧೬೧, ೧೬೨; ಟಿಪ್ಪಣಿಯನ್ನೂ ನೋಡಿ: ಪು. ೩೨೯-೩೩೧): ಮೊದಲೆರಡು ಮಂಗಳಶ್ಲೋಕಗಳಂತೆ ಇಲ್ಲಿಯೂ, ಲಕ್ಷ್ಮೀಲಲನೆಯನ್ನು ವಕ್ಷಸ್ಥಲದಲ್ಲಿ ಧರಿಸಿರುವ, ಧರಾವಧುವನ್ನು ಕಳತ್ರವಾಗಿ ಉಳ್ಳ ವಿಷ್ಣುವಿನ 'ವ್ಯಾಜಸ್ತುತಿ'ಯಲ್ಲಿ ವಿಷ್ಣುಭಕ್ತನೂ ಲಕ್ಷ್ಮೀ

ಭಕ್ತನೂ ಆದ ನೃಪತುಂಗನ ಪ್ರಶಂಸೆಯೇ ಪರ್ಯಾಯವಾಗಿ ಬಂದಿದೆ. ಇಷ್ಟುಮಾತ್ರವಲ್ಲವೆ, ಗ್ರಂಥದಲ್ಲಿ ಅಲ್ಲಲ್ಲಿ ಪ್ರಯುಕ್ತಗಳಾದ ಲಕ್ಷ್ಯಗಳಲ್ಲಿ ಬರುವ ರಾಜವರ್ಣನೆಯಲ್ಲಿ (ಅವು ದಂಡಿಯ ಶ್ಲೋಕಗಳ ಅನುವಾದಗಳಾಗಿದ್ದರೂ ಕೂಡ ಅವುಗಳಲ್ಲಿನ ಕೆಲವು ಮಾರ್ಪಾಟುಗಳಿಂದಾಗಿ) (ನೋಡಿ: ಪದ್ಯಗಳು II–೮೦ ; III – ೪೨, ೪೩, ೪೪, ೮೧, ೯೬, ೧೧೦, ೧೧೨, ೧೨೯, ೧೩೦, ೧೫೫, ೧೫೭, ೧೯೭ ಮತ್ತು ಅವುಗಳ ಮೇಲಿನ ಟಿಪ್ಪಣಿಗಳು : ಪು. ೨೧೮, ೨೭೩, ೨೮೭, ೨೯೪, ೩೦೧, ೩೦೪, ೩೧೨, ೩೨೬, ೩೨೭, ೩೨೯–೩೩೧, ೩೫೧) ನೃಪತುಂಗ ಪ್ರಶಂಸೆಯ ಛಾಯೆಯನ್ನು ಗುರುತಿಸಬಹುದು. ನೃಪತುಂಗ ಪ್ರಶಂಸಾತ್ಮಕವಾದ ಪದ್ಯಗಳಲ್ಲಿ ಎಲ್ಲಿಯೂ ಜೈನಧರ್ಮದ ಸೋಂಕೂ ಇಲ್ಲ.

ನೃಪತುಂಗ ವ್ಯಕ್ತಿತ್ವಚಿತ್ರಣದೊಂದಿಗೆಯೇ ನೃಪತುಂಗಸಭಾಸದನ ಚಿತ್ರಣವೂ ಸಾಗಿದೆ. ಪ್ರಥಮ ಪರಿಚ್ಛೇದದಲ್ಲಿಯೇ ನೃಪತುಂಗ ಸಭಾಸದರ ಮನ್ನಣೆಗೆ ಪಾತ್ರನಾಗಲು ಅರ್ಹತೆಯುಳ್ಳ ವಿದ್ವಾಂಸನೊಬ್ಬನು ‘ ವಿವೇಕ ಬೃಹಸ್ಪತಿ ’ಯ ನಗರವನ್ನು ಪ್ರವೇಶಿಸುವ ಸಂದರ್ಭದ ವರ್ಣನೆಯಿದೆ; ಇದರೊಂದಿಗೆಯೆ ‘ ಪ್ರಿಯತರ ’ ಮತ್ತು ‘ ಆಶೀಃ ’ ಅಲಂಕಾರಗಳಿಗೆ ಕೊಟ್ಟಿರುವ ಲಕ್ಷ್ಯ ಪದ್ಯಗಳನ್ನೂ (III – ೨೦೪, ೨೦೬ ; ಪ. ೨೦೬ರ ಟಿಪ್ಪಣಿ ನೋಡಿ), ಗ್ರಂಥಾಂತ್ಯದಲ್ಲಿ (III – ೨೧೮ರಿಂದ ೨೩೧ ಪದ್ಯಗಳು) ವರ್ಣಿತನಾಗಿರುವ ‘ ಆಶ್ರಿತ ಮಹಾ ನೃಪತುಂಗ ಸಭಾಸದ ’ನ ವಿವರಪೂರ್ಣವಾದ ವರ್ಣನೆಯನ್ನೂ ಕೂಡಿಸಿಕೊಂಡು ಓದಿದರೆ. ಆ ನೃಪತುಂಗ ಸಭಾದನ ಸಮಗ್ರಚಿತ್ರ ಆಕೃತಿತಳೆದು ನಿಲ್ಲುತ್ತದೆ. ನೃಪತುಂಗನೇ ಗ್ರಂಥಕಾರನಾಗಿದ್ದ ಪಕ್ಷದಲ್ಲಿ, ತನ್ನ ಸಭಾಸದನ ವರ್ಣನೆಯನ್ನು ಸುಮಾರು ೧೫ ಪದ್ಯಗಳಲ್ಲಿ ಇಷ್ಟು ದೀರ್ಘವಾಗಿ, ಸ್ಪಷ್ಟವಾದ ಯಾವ ಕಾರಣವೂ ಇಲ್ಲದೆ, ಮಾಡಿರುವುದರ ಔಚಿತ್ಯವಾದರೂ ಏನು ? ತದ್ವಿರುದ್ಧವಾಗಿ, ಈ ಸಭಾಸದನೇ ಗ್ರಂಥಕಾರನೆಂದು ಇಟ್ಟುಕೊಂಡರೆ, ಆತನು ತನ್ನ ಆಶ್ರಯದಾತನಾದ ನೃಪತುಂಗನನ್ನು ಮಂಗಳಶ್ಲೋಕಗಳಲ್ಲಿಯೂ ಹಲಕೆಲವು ಲಕ್ಷ್ಯಪದ್ಯಗಳಲ್ಲಿಯೂ ಪ್ರಶಂಸೆ ಮಾಡಿರುವುದು ಕೇವಲ ಉಚಿತವಾಗಿ ಕಂಡುಬರುತ್ತದೆ; ಅಲ್ಲದೆ, ಸಭಾಸದನದ ವರ್ಣನೆಯಲ್ಲಿ ಆತ್ಮವೃತ್ತಾಂತ

ಕಥನವೇ ಕಂಡುಬಂದು, ಅದೂ ಸ್ವಾಭಾವಿಕವಾಗಿ ತೋರುತ್ತದೆ. ಆಗ, ಜೈನಧರ್ಮಪರವಾದ ಉಲ್ಲೇಖಗಳೆಲ್ಲ ಸಭಾಸದನಿಗೆ ಅನ್ವಿತವಾಗಿ, ಅವಕ್ಕೂ ನೃಪತುಂಗನ ವಿಷ್ಣುಭಕ್ತಿಗೂ ಘರ್ಷಣೆಯ ಲವಲೇಶವೂ ಉಳಿಯುವುದಿಲ್ಲ. ಪರಿಣಾಮದಲ್ಲಿ, ವಿಶಾಲ ಧಾರ್ಮಿಕದೃಷ್ಟಿಯ ಆಶ್ರಯದಾತ ನೃಪತುಂಗ, 'ಆಶ್ರಿತ ಮಹಾನೃಪತುಂಗ ಸಭಾಸದ' – ಇವರಿಬ್ಬರ ವ್ಯಕ್ತಿತ್ವ ಚಿತ್ರಣದಲ್ಲಿ ಒಂದು ಸುಸಾಂಗತ್ಯ ಏರ್ಪಡುವುದು; ಆಶ್ರಯದಾತನ ಆದೇಶದಂತೆ ('ಅನುಮತ'ದಂತೆ) ಆಶ್ರಿತಸಭಾಸದನಿಂದ ಗ್ರಂಥರಚನೆಯಾಗಿದೆ—ಎಂಬ ಸಂದರ್ಭಸಂಭಾವ್ಯತೆ ಹೊಳೆಯುವುದು. ಈ ಸಂದರ್ಭವನ್ನು ಪರಿಭಾವಿಸಿ ಅರ್ಥಮಾಡಿಕೊಂಡರೆ, ನೃಪತುಂಗ ಸಭಾಸದನೊಬ್ಬನು 'ನೃಪತುಂಗ ದೇವಮತ'ವನ್ನು ತನ್ನ ಕಾವ್ಯಶಾಸ್ತ್ರದಲ್ಲಿ ಅಳವಡಿಸಿ, ಅದನ್ನು, 'ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗ' ಎಂದು ಕರೆದಿರುವುದರ ಔಚಿತ್ಯವೂ ವಿಶದಪಡುವುದು.

ಒಟ್ಟಿನಲ್ಲಿ, ಆಂತರಿಕ ಪ್ರಮಾಣಗಳ ಪರೀಕ್ಷೆಯಿಂದ, "ಇದು ನೃಪತುಂಗರಚಿತವಾದ ಗ್ರಂಥವಲ್ಲ" ಎಂಬ "ಮೊದಲನೆಯ ಗಟ್ಟಿಮಾತು" ಹೊರಪಡುತ್ತದೆ.

(೨) **ಬಾಹ್ಯಪ್ರಮಾಣಗಳು**: (i) ನಾಗವರ್ಮನ ಛಂದೋಂಬುಧಿಯಲ್ಲಿ ಕವಿರಾಜಮಾರ್ಗದ ಕೆಲವು ಪದ್ಯಗಳು (ಕೆಲವು ವ್ಯತ್ಯಾಸಗಳೊಡನೆ) ಉಧೃತವಾಗಿವೆ. ಕವಿರಾಜಮಾರ್ಗದ ಎರಡು ಪದ್ಯಗಳ ಪಾಠಗಳಲ್ಲಿನ 'ನೃಪತುಂಗ' ಎಂಬ ಹೆಸರು ಛಂದೋಂಬುಧಿಯ ಪಾಠದಲ್ಲಿ ಕಂಡುಬರುವುದಿಲ್ಲ. ಈ ಬಾಹ್ಯಪ್ರಮಾಣ ನೃಪತುಂಗಪಕ್ಷಕ್ಕೆ ಸಹಾಯಕವಾಗಿಲ್ಲ. (ii) ಶಬ್ದಮಣಿದರ್ಪಣದಲ್ಲಿ ಕೇಶಿರಾಜನು ಪ್ರಮಾಣಗ್ರಂಥಕಾರರ ಗುಂಪಿನಲ್ಲಿ ಶ್ರೀ ವಿಜಯನ ಹೆಸರನ್ನು ಸೇರಿಸಿ, ವ್ಯಾಕರಣವಿಷಯಕ್ಕೆ ಸಂಬಂಧಿಸಿದ ಎರಡು ಪದ್ಯಗಳನ್ನು ಉದಾಹರಿಸಿದ್ದಾನೆ. ಅವನು ನೃಪತುಂಗನ ಹೆಸರನ್ನು ಹೇಳಿಲ್ಲ. ಇಷ್ಟರಿಂದ, ಕವಿರಾಜಮಾರ್ಗಕಾರನು ಶ್ರೀ ವಿಜಯ ಎಂದೂ ಖಂಡಿತವಾಗಿ ಹೇಳಲಾಗುವುದಿಲ್ಲ. ಪ್ರೊ|| ಡಿ. ಕೆ. ಭೀಮಸೇನರಾಯರು ಈಚೆಗೆ ತಮಗೆ ದೊರೆತ ಶಬ್ದಮಣಿದರ್ಪಣದ ಪ್ರಾಚೀನ ಪ್ರತಿಯೊಂದರಲ್ಲಿ

ಅದರ ವ್ಯಾಖ್ಯಾನಕಾರನು ತನ್ನ ವೃತ್ತಿಯಲ್ಲಿ "ಕವಿರಾಜಮಾರ್ಗದಲ್ಲಿ ಉಕ್ತವಾದಂತೆ ಷಟ್ಪ್ರಾಸಗಳನ್ನು ಅವುಗಳ ಪ್ರಯೋಗೋದಾಹರಣೆಗಳೊಡನೆ ನಿರೂಪಿಸಿದ್ದಾನೆ" ಎಂದು ತಿಳಿಸಿದ್ದಾರೆ. ಪದ್ಯ II-೨೮ರ ವೃತ್ತಿಯಲ್ಲಿ 'ನೃಪತುಂಗದೇವನ ಮತದಿಂ ಪೇೞ್ವೆಂ" ಎಂದೂ, ಅಟಿಪ್ರಾಸಕ್ಕಾಗಿ ಉದಾಹರಿಸಿರುವ ನಾಲ್ಕು ಪದ್ಯಗಳಲ್ಲಿ ಒಂದಾದ II-೫ನೆಯ ಪದ್ಯದ ಕೆಳಗೆ "ಶ್ರೀ ವಿಜಯನ ಪ್ರಯೋಗ" ಎಂದೂ ಇರುವುದನ್ನು ನಮ್ಮ ಗಮನಕ್ಕೆ ತಂದು, "ಶ್ರೀ ವಿಜಯನೇ ನೃಪತುಂಗ ದೇವನೆಂಬುದು ಈ ವ್ಯಾಖ್ಯಾನಕಾರನ ಬರೆವಣಿಗೆಯಿಂದ ಸ್ಪಷ್ಟವಾಗಿದೆ" ಎಂದು ಪ್ರೊ|| ಭೀಮಸೇನರಾಯರು ನಿರ್ಧರಿಸಿದ್ದಾರೆ.[21] ಈ ನಿರ್ಧಾರವನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ, ವ್ಯಾಖ್ಯಾನಕಾರನು ಕೇಶಿರಾಜನಿಗಿಂತ ಈಚಿನವ ನೆಂಬುದು ಸ್ಪಷ್ಟವಷ್ಟೆ. ಒಂದೋ, ಕವಿರಾಜಮಾರ್ಗವನ್ನು ಬರೆದವನು ನೃಪತುಂಗನೋ ಶ್ರೀ ವಿಜಯನೋ ಎಂಬ ಗೊಂದಲ ಈಗ ಪ್ರಚಲಿತ ವಾಗಿರುವಂತೆ ಆಗಲೂ ಇದ್ದು, ವ್ಯಾಖ್ಯಾನಕಾರನು ಆ ಗೊಂದಲಕ್ಕೆ ಒಳಗಾಗಿದ್ದಿರಬೇಕು; ಇಲ್ಲವೋ, ಪ್ರಾಸವಿಚಾರವು ಶಬ್ದಾಲಂಕಾರದ ಭಾಗವಾದ್ದರಿಂದ ಅಲಂಕಾರ ಶಾಸ್ತ್ರಭಾಗವೆಲ್ಲ ನೃಪತುಂಗದೇವ ಮತ ವೆಂದೂ, ವ್ಯಾಕರಣಕ್ಕೆ ಸಂಬಂಧಪಟ್ಟ ಕೃತಿಭಾಗವೆಲ್ಲ ಶ್ರೀ ವಿಜಯ ಕೃತವೆಂದೂ ಈ ವ್ಯಾಖ್ಯಾನಕಾರನ ಗ್ರಹಿಕೆಯಾಗಿದ್ದಿರಬೇಕು. ಇಷ್ಟಕ್ಕಿಂತ ಮುಂದೆಹೋಗಿ, "ಶ್ರೀ ವಿಜಯನೇ ನೃಪತುಂಗ" ಎಂದು ಸಮೀಕರಣ ಮಾಡಿ ತೀರ್ಮಾನಿಸುವುದಕ್ಕೆ ವ್ಯಾಖ್ಯಾನಕಾರನ ಉಲ್ಲೇಖಗಳು ಪ್ರಮಾಣ ಭೂತ ಆಧಾರಗಳಾಗಲಾರವು. (iii) ಇನ್ನೊಂದು ಮುಖ್ಯ ಬಾಹ್ಯ ಪ್ರಮಾಣ ಭಟ್ಟಾಕಳಂಕನ (ಕ್ರಿ. ಶ. ೧೬೦೪) ಶಬ್ದಾನುಶಾಸನದ್ದು. ಅದರ ೨೮೮ನೆಯ ಸೂತ್ರದ ('ಆದೇಜ್') ವ್ಯಾಖ್ಯಾನದಲ್ಲಿ ದಕ್ಷಿಣೋತ್ತರ ಮಾರ್ಗಪ್ರಯೋಗ ಭೇದವನ್ನು ಪ್ರಸ್ತಾವಿಸಿ, ಇದರ ವಿಚಾರವನ್ನು 'ನೃಪ ತುಂಗ ಗ್ರಂಥ'ದಲ್ಲಿ ನೋಡತಕ್ಕದ್ದು ಎಂದು ಹೇಳಿದೆ.[22] ಇಲ್ಲಿ, ನೃಪತುಂಗ ಗ್ರಂಥ ಎಂದರೆ ಕವಿರಾಜಮಾರ್ಗ ಎಂದೇ ತಿಳಿಯಬೇಕು. ಇದರಲ್ಲಿ ಸಂದೇಹವೇನಿಲ್ಲ. ಆದರೆ, ಇದನ್ನು ಪ್ರಮಾಣವೆಂದು ಅಂಗೀಕರಿಸ ಬಹುದೋ? ಮೇಲೆ, ಶಬ್ದಮಣಿದರ್ಪಣದ ವ್ಯಾಖ್ಯಾನವೊಂದರಲ್ಲಿ ಒಂದು

ಬಗೆಯ ಗೊಂದಲ ಸಂಭವಿಸಿರುವುದನ್ನು ಕಂಡಿದ್ದೇವೆ. ಭಟ್ಟಾಕಳಂಕನ ಕಾಲಕ್ಕೆ ಈ ಗೊಂದಲ ಮಾಸಿಹೋಗಿ, ಕವಿರಾಜಮಾರ್ಗದಲ್ಲಿ ನೃಪತುಂಗನ ಹೆಸರೂ ಆತನ ಬಿರುದುಗಳೂ ಮೇಲಿಂದ ಮೇಲೆ ಉಕ್ತವಾಗಿರುವುದ ರಿಂದಲೂ ಪರಿಚ್ಛೇದಾಂತ ಗದ್ಯದ 'ನೃಪತುಂಗದೇವಾನುಮತಮಪ್ಪ' ಎಂಬ ಉಲ್ಲೇಖವೊಂದೇ ಎದ್ದು ಕಾಣುವುದರಿಂದಲೂ ನೃಪತುಂಗನೇ ಗ್ರಂಥಕರ್ತನೆಂಬ ಪ್ರತೀತಿ ಬಲವಾಗಿ ಬೇರೂರಿರಬೇಕು. ಈಗಲೂ ಕವಿರಾಜ ಮಾರ್ಗವು ನೃಪತುಂಗಕೃತವಲ್ಲ ಎಂದು ದೃಢವಾಗಿ ನಂಬಿರುವವರೂ ಕೂಡ ಅದರ ಪ್ರಸ್ತಾವ ಬಂದಾಗ 'ನೃಪತುಂಗನ ಕವಿರಾಜಮಾರ್ಗ' ಎಂದು ಹೇಳುವುದು ರೂಢಿಯಾಗಿಬಿಟ್ಟಿದೆ! ರೂಢಿ ಅಷ್ಟು ಬಲವತ್ತರವಾದದ್ದು. ದಿವಂಗತ ವೆಂಕಣ್ಣಯ್ಯನವರು ಹೇಳುವಂತೆ, "ಒಟ್ಟಿನಲ್ಲಿ ಬಾಹ್ಯ ಪ್ರಮಾಣಗಳು ಶ್ರೀ ವಿಜಯನ ಪಕ್ಷದವರಿಗೆ ತಕ್ಕಮಟ್ಟಿಗೆ ಸಹಾಯಕಾರಿ ಗಳಾಗಿರುವಂತೆ ತೋರುತ್ತದೆ. ದುರ್ಗಸಿಂಹ ಕೇಶಿರಾಜರು ಭಟ್ಟಾ ಕಳಂಕನಿಗಿಂತಲೂ ಕವಿರಾಜಮಾರ್ಗವು ಹುಟ್ಟಿದ ಕಾಲಕ್ಕೆ ಹೆಚ್ಚು ಸಮೀಪ ದವರು. ದುರ್ಗಸಿಂಹನು ೧೧ನೆಯ ಶತಮಾನದವನು; ಭಟ್ಟಾಕಳಂಕ ನಾದರೋ ೧೭ನೆಯ ಶತಮಾನದವನು. ಆದುದರಿಂದ, ಕವಿರಾಜ ಮಾರ್ಗದ ಗ್ರಂಥಕರ್ತೃವು ಯಾರು ಎಂದು ಸಂದೇಹ ಹುಟ್ಟಿದಾಗ, ಭಟ್ಟಾ ಕಳಂಕನ ಸಾಕ್ಷ್ಯಕ್ಕಿಂತಲೂ ದುರ್ಗಸಿಂಹ ಕೇಶಿರಾಜರ ಸಾಕ್ಷ್ಯವು ಹೆಚ್ಚು ವಿಶ್ವಾಸಾರ್ಹವಾಗುವುದು ಸ್ವಾಭಾವಿಕವಾಗಿದೆ." ಅಲ್ಲದೆ, ಶಬ್ದಾನು ಶಾಸನದ ಸೂತ್ರಕಾರ - ವೃತ್ತಿಕಾರನೇ ಬೇರೆ, ವ್ಯಾಖ್ಯಾನಕಾರನೇ ಬೇರೆ ಎಂಬುದಾಗಿ ದಿವಂಗತ ಕಾನಕಾನಹಳ್ಳಿ ವರದಾಚಾರ್ಯರು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಅದರಲ್ಲಿ ನಿಜಾಂಶವಿದ್ದರೆ, ಮೇಲ್ಕಂಡ ಉಲ್ಲೇಖ ಭಟ್ಟಾಕಳಂಕನದಾಗದೆ, ಅವನ ವ್ಯಾಖ್ಯಾನಕಾರನದ್ದೆನಿಸುತ್ತದೆ; ಅದರ ವಿಶ್ವಾಸಾರ್ಹತೆ ಇನ್ನೂ ಕಡಮೆಯಾಗುತ್ತದೆ, ಅವನು ಇನ್ನೂ ಈಚಿನವನಾಗುವುದರಿಂದ.

ಹೀಗೆ, ಬಾಹ್ಯಾಂತರಿಕ ಪ್ರಮಾಣಗಳನ್ನು ಪರೀಕ್ಷಿಸಿ ನೋಡಿದಮೇಲೆ, ಕವಿರಾಜಮಾರ್ಗವು ನೃಪತುಂಗ ಕೃತವಲ್ಲ ಎಂಬ ತೀರ್ಮಾನಕ್ಕೆ ಬರ ಬೇಕಾದದ್ದು ಅನಿವಾರ್ಯವಾಗುತ್ತದೆ.

ನೃಪತುಂಗನು ಕರ್ತೃವಲ್ಲ ಎಂದು ಸಿದ್ಧವಾದಮೇಲೆ, ಕರ್ತೃ ಯಾರು ಎಂಬ ಪ್ರಶ್ನೆ ಹುಟ್ಟುವುದು ಸಹಜ. ಪ್ರಥಮ ಪರಿಚ್ಛೇದದ ಎರಡು ಪದ್ಯಗಳಲ್ಲಿಯೂ (I-೫, ೬) ತೃತೀಯ ಪರಿಚ್ಛೇದದ ಅಂತ್ಯದ ಕೆಲವು ಪದ್ಯಗಳಲ್ಲಿಯೂ (III-೨೧೮ ರಿಂದ ೨೩೦) 'ಆಶ್ರಿತ ನೃಪತುಂಗ ಸಭಾಸದನ' ಪ್ರಶಂಸಾತ್ಮಕ ವರ್ಣನೆಯಿದೆ. ಇದು ಯಾವನೋ ನೃಪತುಂಗ ಸಭಾಸದನ ವರ್ಣನೆ ಎನ್ನುವುದರಲ್ಲಿ ಅರ್ಥವಿಲ್ಲ. "ಆಶ್ರಿತ ನೃಪತುಂಗ ಸಭಾಸದಂ . . . ಕೂಡೆ ಪೇೞ್ದನುತಕಾವ್ಯಮುಂ" * ಎಂದು ಸ್ಪಷ್ಟವಾಗಿ ಹೇಳಿರುವುದರಿಂದ (III - ೨೨೩), ಕವಿರಾಜಮಾರ್ಗವನ್ನು 'ಆಶ್ರಿತ ನೃಪತುಂಗ ಸಭಾಸದ'ನೊಬ್ಬನು, ಆಶ್ರಯದಾತನಾದ ನೃಪತುಂಗನ ಅಂಕಿತದಲ್ಲಿ ರಚಿಸಿದ್ದಾನೆ ಎಂದು ಕೃತಿಯೇ ಹೇಳುತ್ತಿದೆ. ಇದಕ್ಕೆ ಅನ್ಯಪ್ರಮಾಣ ಅನಗತ್ಯ. ಬೇಕಾದರೆ, ಒಂದು ಹೆಜ್ಜೆ ಮುಂದೆ ಹೋಗಿ, ಕವಿರಾಜಮಾರ್ಗರಚನೆಗೆ ಪ್ರೇರಕ ಶಕ್ತಿಯಾಗಿದ್ದುದು ಮಾತ್ರವಲ್ಲದೆ, ಅಲಂಕಾರಶಾಸ್ತ್ರವಿಚಾರದಲ್ಲಿ ತನ್ನ ಅಭಿಪ್ರಾಯ ಭೇದಗಳನ್ನು ಸ್ಪಷ್ಟವಾಗಿ ತಿಳಿಯಹೇಳಿ, ತದನುಗುಣವಾಗಿ ತನ್ನ ಆಶ್ರಿತ ಕವಿಯಿಂದ ಗ್ರಂಥರಚನೆ ಮಾಡಿಸಿದನು ಎಂಬ ಅರ್ಥವನ್ನು 'ಬೆಸಸಿದನಖಿಳಧರಾವಲ್ಲಭನಿಂತಮೋಘವರ್ಷನೃಪೇಂದ್ರಂ' ಎಂಬ ವಾಕ್ಯಕ್ಕೆ ಕಲ್ಪಿಸಬಹುದು. ಆದರೆ, ಡಾ|| ಫ್ಲೀಟರು ಸೂಚಿಸಿರುವಂತೆ, 'ಬೆಸಸಿದನ್' ಎನ್ನುವುದಕ್ಕೆ 'ಹೇಳಿ ಬರೆಯಿಸಿದನು' ಎಂಬ ಅರ್ಥವನ್ನು ಹಿಂಜುವುದು ಕಷ್ಟ. ಆ ಆಶ್ರಿತಕವಿ ಯಾರು ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆ.

---

* ಕವಿರಾಜಮಾರ್ಗ ಲಕ್ಷಣಗ್ರಂಥ. ಇದನ್ನು ಕಾವ್ಯ ಎಂದು ಕರೆಯುವುದರ ಔಚಿತ್ಯ ಹೇಗೆ ಎಂಬ ಪ್ರಶ್ನೆ ಮೂಡುವುದು ಸಹಜ. ಗ್ರಂಥದಲ್ಲಿ ಲಕ್ಷಣ ಪದ್ಯಗಳ ಜೊತೆಗೆ ಸ್ವವಿರಚಿತ ಲಕ್ಷ್ಯ ಪದ್ಯಗಳೂ, ಕನ್ನಡ ನಾಡು ನುಡಿ ಮುಂತಾದ ಶಾಸ್ತ್ರಾತೀತ ವಿಷಯಗಳ ವ್ಯಾವರ್ಣನೆಯೂ ಇರುವುದರಿಂದ, ಗ್ರಂಥಕಾರನು ತನ್ನ ಕೃತಿಯನ್ನು ಕಾವ್ಯ ಎಂದೂ ತನ್ನನ್ನು ಕವಿ ಎಂದೂ ('ಪಾರ್ಥಿವ ಲೋಕನಪ್ಪಂ, ಕವಿ ಎಂದುಂ, ನೃಪತುಂಗ ಸಭಾಸದರ್ ವರ್ಣಕರುಂ'- III, ೨೨೪-೨೫) ಕರೆದುಕೊಂಡಿರುವುದು ಸ್ವಾಭಾವಿಕ.

ಕವೀಶ್ವರಪಕ್ಷ

ಕವೀಶ್ವರ ಪಕ್ಷದವರಿಗೆ (ಡಾ|| ಫ್ಲೀಟ್ ಮತ್ತು ಅವರನ್ನು ಅನುಸರಿಸಿರುವ ಮದ್ರಾಸು ಮುದ್ರಣದ ಸಂಪಾದಕದ್ವಯರು) ತಮ್ಮ ವಾದವನ್ನು ಸ್ಥಾಪಿಸಲು ಅತ್ಯಂತ ಮುಖ್ಯ ಆಧಾರಗಳೆಂದರೆ, ಕವಿರಾಜಮಾರ್ಗದ ಪರಿಚ್ಛೇದಾಂತ ಪದ್ಯಗಳು ಮೂರು ಮತ್ತು ದುರ್ಗಸಿಂಹನು (ಕ್ರಿ.ಶ. ಸು. ೧೧೪೫) ತನ್ನ ಪಂಚತಂತ್ರದಲ್ಲಿ 'ಶ್ರೀ ವಿಜಯರ ಕವಿಮಾರ್ಗಂ' ಎಂದು ಹೇಳಿರುವ ಉಕ್ತಿ.

ಕವೀಶ್ವರ ಪಕ್ಷದವರ ವಾದದ ಮುಖ್ಯ ಸಾರಾಂಶ ಇಷ್ಟು :

ನೃಪತುಂಗನು ಈ ಗ್ರಂಥದ ಕರ್ತೃವಲ್ಲ. ದುರ್ಗಸಿಂಹನ ಹೇಳಿಕೆಯಂತೆ, ಶ್ರೀವಿಜಯನೆಂಬ ಕವಿಯು 'ಕವಿಮಾರ್ಗ'ವೆಂಬ ಒಂದು ಲಕ್ಷಣಗ್ರಂಥವನ್ನು ಬರೆದಿದ್ದನು. ಕವಿರಾಜಮಾರ್ಗದಲ್ಲಿ ಉಕ್ತನಾದ ಪರಮ ಶ್ರೀ ವಿಜಯನೇ ಈತ. ಕವಿರಾಜಮಾರ್ಗದ ಪರಿಚ್ಛೇದಾಂತ ಪದ್ಯಗಳಲ್ಲಿ "ಶ್ರೀವಿಜಯಪ್ರಭೂತಮುನಿದಂ" ಇತ್ಯಾದಿ ಭಾಗಗಳಿಂದ ಶ್ರೀವಿಜಯನು ಒಂದು ಅಲಂಕಾರ ಗ್ರಂಥವನ್ನು ಬರೆದಿದ್ದನೆಂದು ಸೂಚಿತವಾಗಿದೆ. ಈ ಅಲಂಕಾರ ಗ್ರಂಥವೇ ಆ 'ಕವಿಮಾರ್ಗ.' "ಕವೀಶ್ವರನೆಂಬ ಬಿರುದುಳ್ಳ ಒಬ್ಬ ಕವಿ ಶ್ರೀವಿಜಯಕೃತವಾದ ಈ 'ಕವಿಮಾರ್ಗ'ವನ್ನೆ ತೆಗೆದುಕೊಂಡು ಕೆಲವೆಡೆಗಳಲ್ಲಿ ಮಾರ್ಪಡಿಸಿ, ಮತ್ತೆ ಕೆಲವೆಡೆಗಳಲ್ಲಿ ಹೊಸದಾಗಿ ಕೆಲವು ವಿಷಯಗಳನ್ನು ಸೇರಿಸಿ, 'ಕವಿರಾಜಮಾರ್ಗ'ವೆಂಬ ಹೆಸರಿನಿಂದ ಈ ಗ್ರಂಥವನ್ನು ಬರೆದು, ತನ್ನ ಆಶ್ರಯದಾತ . . . ಅಮೋಘವರ್ಷನೆಂಬ ರಾಷ್ಟ್ರಕೂಟ ಸಾರ್ವಭೌಮನಿಂದ ವಿಶೇಷ ಪ್ರಯೋಜನವನ್ನು ಹೊಂದಿ, ನೃಪತುಂಗನೇ ಈ ಗ್ರಂಥವನ್ನು ಬರೆದನೆಂಬ ಪ್ರವಾದವು ಬರಬೇಕೆಂದು ತನ್ನ ಹೆಸರನ್ನು ಎಲ್ಲಿಯೂ ಸ್ಪಷ್ಟವಾಗಿ ಹೇಳದೆ, ಸೂಕ್ಷ್ಮ ವಿಚಾರಿಗಳಿಗೆ ಮಾತ್ರ ತಿಳಿಯುವಂತೆ, ಅಲ್ಲಲ್ಲಿ ಈ ವಿಷಯವನ್ನು ಸೂಚಿಸಿರುವನೆಂದು ಊಹಿಸುವುದಕ್ಕೆ ಕಾರಣಗಳಿವೆ." (ಕ. ರಾ. ಮಾರ್ಗ, ಮದ್ರಾಸು ಮುದ್ರಣದ ಪೀಠಿಕೆ : ಪು. iii)

ದುರ್ಗಸಿಂಹನ ಹೇಳಿಕೆಯಂತೆ, ಶ್ರೀ ವಿಜಯನೆಂಬವನು 'ಕವಿಮಾರ್ಗ'ವನ್ನು ಬರೆದಿರುವನೆಂದು ಇಟ್ಟುಕೊಳ್ಳೋಣ. ಆ 'ಕವಿಮಾರ್ಗ' ನಮಗೆ ಸಿಕ್ಕಿಲ್ಲ. ಲಭ್ಯವಾಗದೆ ಇರುವ ಒಂದು ಗ್ರಂಥದ ಆಧಾರದಮೇಲೆ ಕವೀಶ್ವರನೆಂಬವನು ಕವಿರಾಜಮಾರ್ಗವನ್ನು ಬರೆದನೆಂದು ಹೇಳಲು ಕವೀಶ್ವರಪಕ್ಷವು ಕೊಡುವ ಆಧಾರಗಳು ಆಧಾರಗಳೇ ಆಗಲಾರವು. ಆ ಮುಖ್ಯ ಆಧಾರಗಳು ಯಾವುವೆಂದರೆ, ನಾಗವರ್ಮನ 'ಛಂದೋಂಬುಧಿ'

ಯಲ್ಲಿಯೂ ಕೇಶಿರಾಜನ 'ಶಬ್ದಮಣಿದರ್ಪಣದಲ್ಲಿಯೂ' ಪಾಠವ್ಯತ್ಯಾಸ ದೊಡನೆ ಉದ್ಧೃತವಾಗಿರುವ ಕವಿರಾಜಮಾರ್ಗದ ಕೆಲವು ಉದಾಹರಣ ಪದ್ಯಗಳು. (ನೋಡಿ: ಅನುಬಂಧ ೭) ಇವುಗಳಲ್ಲಿ ಒಂದೆರಡನ್ನು ಈಗ ಪರಿಶೀಲಿಸೋಣ:

II-೪೪ನೆಯ ಪದ್ಯ: ಈ ಪದ್ಯದ ನಾಲ್ಕನೆಯ ಪಂಕ್ತಿ, 'ಶತಮುಖ ಸದೃಶಾನುಭಾವನೊಲವಿಂ ಪೆತ್ತಂ' ಎಂದಿದೆ. ಛಂದೋಽಬುಧಿಯಲ್ಲಿಯೂ ಹೀಗೆಯೇ ಇದೆ. ಪಾಠಕರ ಮುದ್ರಣದಲ್ಲಿ 'ಸತತಂ ನೃಪತುಂಗನೊಲವಿಂ ಪೆತ್ತಂ' ಎಂದಿದೆ; ಆದರೆ, ಪಾಠಕರು 'ಶತಮುಖ . . . ಪೆತ್ತಂ' ಎಂಬ ಪಾಠವನ್ನು ಪಾಠಾಂತರವಾಗಿ ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. ಇದನ್ನು ಫ್ಲೀಟರು ಗಮನಿಸಿದಂತೆ ಕಾಣಲಿಲ್ಲ. ಆದ್ದರಿಂದ, ಪಾಠವ್ಯತ್ಯಾಸದ ಆಧಾರದಮೇಲೆ, ಕವೀಶ್ವರನೂ ನಾಗವರ್ಮನೂ (ಅಥವಾ ಛಂದೋಂಬುಧಿ ಯಲ್ಲಿ ಕವಿರಾಜಮಾರ್ಗದ ಪದ್ಯಗಳನ್ನು ಪ್ರಕ್ಷೇಪಮಾಡಿರುವವನು) ಒಂದೇ ಮೂಲದಿಂದ (= ಶ್ರೀ ವಿಜಯನ ಕವಿಮಾರ್ಗ) ಪದ್ಯಗಳನ್ನು ಸ್ವೀಕರಿಸಿರು ವರೆಂದೂ, ಕವಿರಾಜಮಾರ್ಗಕಾರನು ಸ್ವೀಕೃತ ಪದ್ಯವನ್ನು ಮಾರ್ಪಡಿಸಿ ಕೊಂಡಿರುವನೆಂದೂ ಹೇಳಲು ಆಧಾರವಿಲ್ಲ. 'ಶತಮುಖಸದೃಶಂ . . . ಪೆತ್ತಂ' ಎಂಬುದೇ ಮೂಲಪಾಠ. ಏಕೆಂದರೆ, II-೩೮ನೆಯ ಪದ್ಯ ದಲ್ಲಿಯೂ ವರ್ಗಪ್ರಾಸ ಪ್ರಯೋಗಕ್ಕೆ ಹೊಂದುವಂತೆ ('ಖ' ಪ್ರಾಸಕ್ಕಾಗಿ) 'ಶತಮುಖಸದೃಶ' ಎಂಬ ವಿಶೇಷಣದ ಪ್ರಯೋಗವಿದೆ. ಪ್ರಾಸ ಸಂಬಂಧ ವಾದ ಪದ್ಯಗಳೆಲ್ಲವೂ ಬಹುಮಟ್ಟಿಗೆ ರಾಮಾಯಣ ಕಥೆಗೆ ಸಂಬಂಧಿಸಿದ್ದು, 'ಶತಮುಖಸದೃಶ' ಎಂದರೆ ರಾಮ; ಆದ್ದರಿಂದ, ಪ್ರಸಕ್ತ ಪದ್ಯದಲ್ಲಿಯೂ 'ಶತಮುಖ ಸದೃಶ'ನ ಉಲ್ಲೇಖವೇ ಸಂಭಾವ್ಯ ಹಾಗೂ ಉಚಿತ; 'ನೃಪ ತುಂಗ'ನ ಪ್ರಸ್ತಾವಕ್ಕೆ ಅವಕಾಶವಿಲ್ಲ. ಗ್ರಂಥದಲ್ಲಿ ಉದ್ದಕ್ಕೂ ಲಕ್ಷಣ ಪದ್ಯಗಳಲ್ಲಿ 'ನೃಪತುಂಗ ಮಾರ್ಗ', 'ನೃಪತುಂಗಮತ' ಎಂಬ ಉಲ್ಲೇಖ ಗಳಿರುವ ಹಾಗೆ, ಯಾವ ಲಕ್ಷ್ಯಪದ್ಯದಲ್ಲಿಯೂ ನೇರವಾಗಿ ನೃಪತುಂಗನ ಹೆಸರನ್ನು ಎತ್ತಿಹೇಳದಿರುವಾಗ, ಇದೊಂದೆಡೆಯಲ್ಲಿ ಅದು ಉಕ್ತವಾಗಿದೆ ಎನ್ನುವುದು ಅಸಂಭಾವ್ಯ. 'ಶತಮುಖಸದೃಶ' ಎಂದು ಪುನರುಕ್ತ ವಾಗಿರುವೆಡೆಯಲ್ಲಿ ಯಾರೋ ಪಂಡಿತ ಪ್ರತಿಕಾರರು ಮಾಡಿರುವ ವ್ಯತ್ಯಾಸ

ವಿರಬೇಕು ಈ ಪಾಠ. (ಪಾಠಕರು ನೃಪತುಂಗ ಪಕ್ಷಪಾತಿಯಾದ್ದರಿಂದ ಇಲ್ಲಿ 'ಶತಮುಖಸದೃಶ' ಪಾಠವನ್ನು ಬಿಟ್ಟು 'ನೃಪತುಂಗ' ಪಾಠವನ್ನು ಸ್ವೀಕರಿಸಿರುವುದು ಸಹಜವಾಗಿಯೇ ಇದೆ). ಆದ್ದರಿಂದ, ಈ ವ್ಯತ್ಯಾಸವು 'ಕವಿಮಾರ್ಗ' ಗ್ರಂಥದ ಅಸ್ತಿತ್ವದ ಊಹೆಗೆ ಆಧಾರವಾಗಲಾರದು.

ಇನ್ನು, II-೪೫ರ ೪ನೆಯ ಪಂಕ್ತಿಖಂಡ: 'ನೃಪತುಂಗದೇವ ವಿದಿತ ಕ್ರಮದಿಂ.' ಇದರ ಎಡೆಯಲ್ಲಿ ಛಂದೋಂಬುಧಿಯ ಪಾಠ: 'ಕಂಜಾಯತಾಕ್ಷೀ ಕೇಳದನೊರೆವೆಂ'. 'ನೃಪತುಂಗದೇವ ವಿದಿತಕ್ರಮದಿಂ' ಎಂಬ ವಾಕ್ಯ ಗ್ರಂಥದಲ್ಲಿ ದೊರಕುವ ಇಂತಹ ಅನೇಕ ಉಕ್ತಿಗಳಿಗೆ ಅನುಗುಣವಾಗಿಯೇ ಇದೆ. ಇದು ಯಾವುದೋ ಮೂಲಗ್ರಂಥವೊಂದರ ವ್ಯತ್ಯಸ್ತಪಾಠ ಎಂದು ಅನುಮಾನಿಸುವುದಾದರೆ, ತತ್ಸದೃಶಗಳಾದ ಇತರ ಉಕ್ತಿಗಳ ವಿಷಯದಲ್ಲಿಯೂ ಹಾಗೆಯೇ ಅನುಮಾನಿಸಬೇಕಾಗುತ್ತದೆ! ಎಂದರೆ, ತನ್ನ ಆಶ್ರಯದಾತ ನೃಪತುಂಗನನ್ನು ಮೆಚ್ಚಿಸುವ ಇಂಥ ಉಕ್ತಿಗಳನ್ನು ಮಾತ್ರ ಅಳವಡಿಸಿ, ಆ ಮೂಲಗ್ರಂಥವನ್ನು ತನ್ನದಾಗಿಸಿಕೊಂಡ 'ಕವಿಚೋರ' ನಿವನು, 'ಕವೀಶ್ವರ'ನಲ್ಲ ಎನ್ನಬೇಕಾಗುತ್ತದೆ! II-೩೦ನೆಯ ಪದ್ಯದ 'ಕೃತಕೃತ್ಯಮಲ್ಲವಲ್ಲಭ' ಎಂಬ ಮಾತಿನ ಬಗೆಗೂ ಮೇಲಿನ ಟೀಕೆಯೇ ಅನ್ವಯಿಸುತ್ತದೆ.

ಆದ್ದರಿಂದ, ಕವಿರಾಜಮಾರ್ಗದ ಮೇಲ್ಕಂಡ ಮೂರು ಪದ್ಯಗಳಿಗೂ ಛಂದೋಬುಧಿಯಲ್ಲಿ ಅನುವಾದಗೊಂಡಿರುವ ಅವೇ ಪದ್ಯಗಳಿಗೂ ಇರುವ ಪಾಠವ್ಯತ್ಯಾಸಗಳ ಆಧಾರದಮೇಲೆ, ಶ್ರೀ ವಿಜಯ ವಿರಚಿತ ಪ್ರಾಚೀನತರ 'ಕವಿಮಾರ್ಗ'ವೊಂದು ಇತ್ತೆಂದು ಊಹಿಸುವುದು ಕೇವಲ ಕಲ್ಪನಾ ವಿಲಾಸ.

ಶಬ್ದಮಣಿ ದರ್ಪಣದಲ್ಲಿ ಅನುವಾದಗೊಂಡಿರುವ ಕವಿರಾಜಮಾರ್ಗದ ಪದ್ಯಗಳ ವಿಚಾರದಲ್ಲಿಯೂ ನಮ್ಮ ಅಭಿಪ್ರಾಯ ಮೇಲ್ಕಂಡಂತೆಯೇ ಇದೆ. ಕೇಶಿರಾಜನು ಅನುವಾದಮಾಡಿರುವ ಕವಿರಾಜಮಾರ್ಗದ ಪ್ರಯೋಗಪದ್ಯಗಳಲ್ಲಿ ಗಮನಾರ್ಹ ವ್ಯತ್ಯಾಸವಿದೆ. (ನೋಡಿ: ಅನುಬಂಧ ೭) ಕೇಶಿರಾಜನು ಶ್ರೀ ವಿಜಯನ ಹೆಸರನ್ನು ಮಾತ್ರ ಹೇಳಿ, ಕವಿರಾಜಮಾರ್ಗದ ಪದ್ಯಗಳನ್ನು ಉದಾಹರಿಸಿ, ಕವಿರಾಜಮಾರ್ಗದ ಇಲ್ಲವೆ ಕವೀಶ್ವರನ ಹೆಸರು

ಗಳನ್ನು ಹೇಳದೆ ಇರುವುದರಿಂದ, ಕೇಶಿರಾಜನು ಶ್ರೀ ವಿಜಯನಿಂದ (ಎಂದರೆ ಅವನ 'ಕವಿಮಾರ್ಗ'ದಿಂದ) ಪದ್ಯಗಳನ್ನು ತೆಗೆದುಕೊಂಡು ಉದಾಹರಿಸಿದ್ದಾನೆ ಎಂದು ಫ್ಲೀಟರ ತರ್ಕ. ಕೇಶಿರಾಜನು ಕೆಲವು ಲಕ್ಷ್ಯಕಾರರ ಹೆಸರಿನೊಂದಿಗೆ ಶ್ರೀ ವಿಜಯನ ಹೆಸರನ್ನೂ ಸೇರಿಸಿದ್ದಾನೆ. ಯಾವ ಆಕರ ಗ್ರಂಥದ ಹೆಸರನ್ನೂ ಹೇಳಿಲ್ಲ. ಆದ್ದರಿಂದ, ಕವಿರಾಜಮಾರ್ಗವನ್ನು ಹೆಸರಿಸಬೇಕಾದ ಅಗತ್ಯವಿರಲಿಲ್ಲ. ಕೇಶಿರಾಜನು ಒಂದು ವೇಳೆ (ದುರ್ಗಸಿಂಹನು 'ಶ್ರೀ ವಿಜಯರ ಕವಿಮಾರ್ಗಂ' ಎಂದು ಹೇಳಿರುವುದರಿಂದ) 'ಶ್ರೀ ವಿಜಯನ ಕವಿಮಾರ್ಗ' ದಿಂದಲೇ ಪದ್ಯಗಳನ್ನು ತೆಗೆದುಕೊಂಡಿದ್ದಾನೆ ಎಂದು ಭಾವಿಸಿದರೂ, ಇದರಿಂದ ಕವಿರಾಜಮಾರ್ಗವು ಕವೀಶ್ವರಕೃತ ಎಂದು ಸಿದ್ಧವಾಗದು.

ಆದ್ದರಿಂದ, ಛಂದೋಂಬುಧಿಯಲ್ಲಿಯೂ ಶಬ್ದಮಣಿದರ್ಪಣದಲ್ಲಿಯೂ ಅನುವಾದಗೊಂಡಿರುವ ಕವಿರಾಜಮಾರ್ಗದ ಪದ್ಯಗಳಲ್ಲಿ ಕಂಡು ಬರುವ ಪಾಠವ್ಯತ್ಯಾಸಗಳಿಗೆ ಕಾರಣವೇ ಬೇರೆ: ಒಂದೋ, ನಾಗವರ್ಮ (ಇಲ್ಲವೆ ಪದ್ಯಗಳ ಪ್ರಕ್ಷೇಪಕಾರ) ಮತ್ತು ಕೇಶಿರಾಜರು ಉದ್ದೇಶಪೂರ್ವಕವಾಗಿಯೇ ವ್ಯತ್ಯಾಸಗಳನ್ನು ಮಾಡಿರಬೇಕು; ಇಲ್ಲವೆ, ಪಾಠವ್ಯತ್ಯಾಸಗಳಿರುವ ಕವಿರಾಜಮಾರ್ಗದ ಪ್ರತಿಗಳಿಂದ ಪದ್ಯಗಳನ್ನು ತೆಗೆದುಕೊಂಡಿರಬೇಕು; ಇಲ್ಲವೆ, ಇವೆರಡೂ ನಡೆದಿರಬಹುದು: ಪಾಠವ್ಯತ್ಯಾಸವಿರುವ ಹಸ್ತಪ್ರತಿಗಳಿಂದ ಪದ್ಯಗಳನ್ನು ಸ್ವೀಕರಿಸಿ, ತಮ್ಮ ಉದ್ದೇಶಕ್ಕನುಗುಣವಾದ ಕೆಲವು ವ್ಯತ್ಯಾಸಗಳನ್ನೂ ಮಾಡಿಕೊಂಡಿರಬಹುದು.

ಇಷ್ಟರ ಜೊತೆಗೆ, 'ಶ್ರೀ ವಿಜಯರ ಕವಿಮಾರ್ಗಂ' ಎಂಬ ದುರ್ಗಸಿಂಹನ ಉಕ್ತಿಯಲ್ಲಿ, 'ಕವಿಮಾರ್ಗ' ಎಂದರೆ 'ಗ್ರಂಥ' ಎಂದೇ ಅರ್ಥ ಮಾಡಬೇಕಾಗಿಲ್ಲ ಎಂಬ ಅಭಿಪ್ರಾಯವೂ ಹೊರಟಿದೆ. ಕಾರಣ, 'ಕಾವ್ಯರಚನಾಪದ್ಧತಿ' ಎಂಬ ಅರ್ಥದಲ್ಲಿ 'ಕವಿಮಾರ್ಗ', 'ಕಾವ್ಯಮಾರ್ಗ' ಎಂಬ ಪದಗಳನ್ನು ಅನೇಕ ಕವಿಗಳು ಬಳಸಿಕೊಂಡು ಬಂದಿದ್ದಾರೆ. ಕವಿರಾಜಮಾರ್ಗದಲ್ಲಿಯೇ ಈ ಸಾಮಾನ್ಯಾರ್ಥದಲ್ಲಿ ಈ ಶಬ್ದದ ಪ್ರಯೋಗವಾಗಿದೆ. (II-೮೧, ಪು. ೫೩). ದುರ್ಗಸಿಂಹನು 'ಕವಿಮಾರ್ಗ' ವನ್ನು 'ಕವಿರಾಜಮಾರ್ಗ' ದ ಸಂಕ್ಷಿಪ್ತರೂಪವಾಗಿ ಪ್ರಯೋಗಿಸಿರಬಹುದು ಎಂಬ

ಊಹೆಯೂ ನಡೆದಿದೆ. ಕವಿರಾಜಮಾರ್ಗವನ್ನು ಶ್ರೀ ವಿಜಯನೇ ಬರೆದಿರಬಹುದು ಎಂದು ವಾದಿಸುವವರಿಗೂ ದುರ್ಗಸಿಂಹನ ಈ ಉಕ್ತಿ ಒಂದು ಪ್ರಮಾಣ. ನಮ್ಮ ಅಭಿಪ್ರಾಯದಲ್ಲಿ, ದುರ್ಗಸಿಂಹನು ಒಂದು ಗ್ರಂಥವನ್ನೇ ನಿರ್ದೇಶಿಸಿರುವನೆ ಹೊರತು ಒಬ್ಬ ಕವಿ ಅನುಸರಿಸಿರುವ 'ಮಾರ್ಗ'ವನ್ನಲ್ಲ. (ಈ ವಿಚಾರವನ್ನು ಮತ್ತೆ ಮುಂದೆ ವಿವೇಚಿಸಲಾಗಿದೆ). ಗ್ರಂಥವೇ ಆದಲ್ಲಿ, ಅದು 'ಕವಿಮಾರ್ಗ'ವೆ? 'ಕವಿರಾಜಮಾರ್ಗ'ವೆ? ದುರ್ಗಸಿಂಹನಂಥ ಸಮರ್ಥ ಕವಿ ಛಂದಸ್ಸಿನ ಅನುಕೂಲಕ್ಕಾಗಿ ಗ್ರಂಥದ ಹೆಸರನ್ನು ಸಂಕ್ಷಿಪ್ತಗೊಳಿದ್ದಾನೆಂದರೆ ನಂಬಬಹುದೆ? ಹೀಗೆ ಈ ಉಕ್ತಿ ವಾದಗ್ರಸ್ತವಾಗಿದೆ.

ಶ್ರೀ ವಿಜಯನ 'ಕವಿಮಾರ್ಗ' ಜನ್ಯವಾದದ್ದು 'ಕವಿರಾಜಮಾರ್ಗ' ಎಂಬ ತಮ್ಮ ವಾದವನ್ನು ಬಲಪಡಿಸಲು, ಕವೀಶ್ವರಪಕ್ಷದವರು ಕವಿರಾಜಮಾರ್ಗದ ಉಕ್ತಿಯೊಂದಕ್ಕೆ ತಮ್ಮದೇ ಆದ ವಿಚಿತ್ರರೀತಿಯಲ್ಲಿ ಅರ್ಥಕಲ್ಪನೆ ಮಾಡಲು ಪ್ರಯತ್ನಿಸಿದ್ದಾರೆ. "ಸವಿಶೇಷಗುಣಮನತಿಶಯಧವಳೋಕ್ತಿಕ್ರಮದಿನಱಿಪುವೆಂ ತದ್ಭವದೊಳ್" (II-೫೫. ಪು. ೪೮) ಎಂಬುದೇ ಮದ್ರಾಸು ಮುದ್ರಣದ ಸಂಪಾದಕರ 'ಕೈವೊಕ್ಕನಿಧಿ'! 'ತತ್ + ಭವದೊಳ್' (= ಆ ಕವಿಮಾರ್ಗದಿಂದ ಹುಟ್ಟಿದ + ಈ ಕವಿರಾಜಮಾರ್ಗದಲ್ಲಿ) ಎಂಬ ಪದಕ್ಕೆ ಅವರು ಕಲ್ಪಿಸಿರುವ ಅರ್ಥವಿವರಣೆ ಹಾಸ್ಯಾಸ್ಪದವಾದುದು. (II-೫೫ರ ಟಿಪ್ಪಣಿಯನ್ನು ನೋಡಿ: ಪು. ೨೦೬-೨೦೭). ಶ್ರೀ ವಿಜಯನ ಕವಿಮಾರ್ಗವೊಂದು ಇದ್ದಿತೆಂದು ಇಟ್ಟುಕೊಂಡರೂ, ಅದರ ರೂಪಾಂತರ ಈ ಕವಿರಾಜಮಾರ್ಗ ಎಂಬ ವಾದ 'ಗಾಂಪರ ಕುದುರೆಯ ಮೊಟ್ಟೆ'ಯೇ ಸರಿ.

'ಕವಿಮಾರ್ಗ' ಇದ್ದಿತೋ ಇಲ್ಲವೋ, ಕವೀಶ್ವರನೊಬ್ಬನು ಇದ್ದನೋ?

ಕವಿರಾಜಮಾರ್ಗದ ತರುವಾಯದ ಕವಿಗಳಲ್ಲಿ ಯಾರೂ ಕವೀಶ್ವರನೆಂಬ ಕವಿಯನ್ನು ಸ್ಮರಿಸಿಲ್ಲ. ಛಂದೋಂಬುಧಿಯಲ್ಲಿ (ಪ. ೨೫೨) ಔಪಚ್ಛಾಂದಸಿಕ ಛಂದಸ್ಸನ್ನು 'ಕವೀಶ್ವರೋಕ್ತಂ' ಎಂದು ಉಲ್ಲೇಖಿಸಿರುವ ಬಗೆಗೆ ಫ್ಲೀಟರು ಗಮನಸೆಳೆದು, ಅಲ್ಲಿ ಕವೀಶ್ವರ ಎಂದರೆ ಕವೀಶ್ವರ ಬಿರುದುಳ್ಳ ಶ್ರೀ ವಿಜಯನೆಂದೇ ಅಭಿಪ್ರಾಯಪಟ್ಟಿದ್ದಾರೆ. ಅದು ಯಾರಾ

ಗಿದ್ದರೂ, ಕವಿರಾಜಮಾರ್ಗದ ಕರ್ತೃ ಎಂದು ಊಹಿಸಲಿಕ್ಕಾಗದು. ಕವಿರಾಜಮಾರ್ಗದಲ್ಲಿ ಛಂದಸ್ಸಿನ ವಿಚಾರವಿಲ್ಲ. ಕವಿರಾಜಮಾರ್ಗದಲ್ಲಿಯೇ 'ಪರಮ ಶ್ರೀ ವಿಜಯ ಕವೀಶ್ವರ . . .' (I-೩೨) ಎಂಬ ಉಲ್ಲೇಖವಿದೆ. ಅದು 'ಶ್ರೀ ವಿಜಯ' ನಾಮಕ್ಕೇ ತಗುಲಿಕೊಂಡಿರುವ ಬಿರುದು ಇಲ್ಲವೆ (ಕವಿಶ್ರೇಷ್ಠ ಎಂಬ ಅರ್ಥದ) ವಿಶೇಷಣ. ಕವಿರಾಜಮಾರ್ಗವು ಶ್ರೀ ವಿಜಯ ಕೃತ ಕವಿಮಾರ್ಗದಿಂದ ಹುಟ್ಟಿದ್ದು ಎಂದು ವಾದಿಸಲು ಫ್ಲೀಟ್ ಮುಂತಾದವರು ಪರಿಚ್ಛೇದಾಂತ ಪದ್ಯಗಳ (೧) 'ಕವಿಪ್ರಕರಂ ಶ್ರೀ ವಿಜಯ ಪ್ರಭೂತ-ಮನಿದಂ ಕೈಕೊಳ್ವುದೀ ಮಾಟ್ಕೆಯಿಂ, (೨) 'ಅವಱಂ ಸಮೆದೊಂದು ಕಾವ್ಯದಿಂ ಶ್ರೀ ವಿಜಯಪ್ರಭೂತ ಮುದಮಂ ತನಗಾಗಿಸಿದೊಂ ಕವೀಶ್ವರಂ', (೩) 'ಪರಮಶ್ರೀವಿಜಯಪ್ರಭೂತಿಜಯಶಂ . . . ನೆಲೆಗೊಳ್ಗಾ ಚಂದ್ರತಾರಂಬರಂ' – ಎಂಬೀ ಉಕ್ತಿಗಳನ್ನು ಅವಲಂಬಿಸಿದ್ದಾರೆ. ಮೊದಲನೆಯ ಮತ್ತು ಮೂರನೆಯ ವಾಕ್ಯಗಳಲ್ಲಿ 'ಈ ಕೃತಿ ಶ್ರೀ ವಿಜಯನಿಂದ ಹುಟ್ಟಿದ್ದು' (ಅರ್ಥಾತ್ ರಚಿತವಾದದ್ದು) ಎಂಬ ಅರ್ಥ ನಿಷ್ಪನ್ನವಾಗುತ್ತದೆಯೆ ಹೊರತು, ಆ ಕೃತಿಗೂ ಕವೀಶ್ವರನೆಂಬ ಇನ್ನೊಬ್ಬ ಕವಿಗೂ ಸಂಬಂಧ ಕಲ್ಪಿಸಲು ಆಧಾರವಿಲ್ಲ. (ಪ. I-೧೫೦ ಮತ್ತು II-೨೩೧ರ ಟಿಪ್ಪಣಿಗಳನ್ನು ನೋಡಿ). ಎರಡನೆಯ ವಾಕ್ಯಕ್ಕೆ, 'ಶ್ರೀ ವಿಜಯ ಕೃತವಾದ ಕವಿರಾಜಮಾರ್ಗದಿಂದ ಒದಗುವ ಮುದವನ್ನು ಯಾವನು ತನಗೆ ದೊರಕಿಸಿಕೊಳ್ಳುವನೋ ಅವನೇ ಕವಿಶ್ರೇಷ್ಠ' ಎಂದು ಅರ್ಥಮಾಡಬೇಕಲ್ಲದೆ (ಪ. II-೧೫೮ರ ಟಿಪ್ಪಣಿ ನೋಡಿ), 'ಶ್ರೀ ವಿಜಯನಿಂದ ಉಂಟಾದ ಮುದವನ್ನು ಕವೀಶ್ವರನು ತನಗೆ ದೊರಕಿಸಿಕೊಂಡನು' (ಫ್ಲೀಟ್) ಎಂದಾಗಲಿ, 'ಕವೀಶ್ವರನೆಂಬವನು ಶ್ರೀ ವಿಜಯಕರ್ತೃಕವಾದ ಈ ಗ್ರಂಥವನ್ನು ತನ್ನ ಪ್ರಯೋಜನಕ್ಕಾಗಿ ಉಪಯೋಗಿಸಿಕೊಂಡನು' (ಮದ್ರಾಸು ಮುದ್ರಣದ ಅವತರಿಣಿಕೆ, ಪು. ix) ಎಂದಾಗಲಿ ಅರ್ಥಮಾಡಲಾಗದು.

'ಶ್ರೀ ವಿಜಯರ ಕವಿಮಾರ್ಗಂ' ಇದ್ದಿತೋ ಇಲ್ಲವೋ ಖಚಿತವಾಗಿ ಹೇಳುವುದು ಕಷ್ಟ. ಅದರ ಆಧಾರದಮೇಲೆ ಕವೀಶ್ವರನು ಕವಿರಾಜಮಾರ್ಗವನ್ನು ಬರೆದನೆನ್ನುವುದು ಬುಡವಿಲ್ಲದ ವಾದ.

ಶ್ರೀವಿಜಯನೇ ಕವಿರಾಜಮಾರ್ಗದ ಕರ್ತೃ

ಕವಿರಾಜಮಾರ್ಗದ ಕರ್ತೃ ನೃಪತುಂಗನೂ ಅಲ್ಲ ಕವೀಶ್ವರನೂ ಅಲ್ಲ ಎಂದು ಪೂರ್ವಪಕ್ಷಗಳಿಗೆ ಪ್ರತಿಪಕ್ಷವನ್ನಿಡುವ ಅವಸರದಲ್ಲಿಯೇ ಕವಿರಾಜ ಮಾರ್ಗಕಾರನು ಶ್ರೀ ವಿಜಯನಾಗಿರಬೇಕೆಂಬ ನಮ್ಮ ನಿಲವು ಪರೋಕ್ಷವಾಗಿ ಪ್ರತಿಪಾದನೆಗೊಂಡಿದೆ. ಆ ಸಂಬಂಧದ ವಾದಾಂಶಗಳನ್ನು ಆಧಾರ ಸಮೇತ ಸಂಕ್ಷೇಪವಾಗಿ ಇಲ್ಲಿ ತಿಳಿಯಹೇಳುವುದು ಅಗತ್ಯವೆಂದು ಭಾವಿಸಿದ್ದೇವೆ.

ಮಂಗರಸನು (ಸು. ೧೫೦೮) ತನ್ನ ನೇಮಿಜಿನೇಶ ಸಂಗತಿಯಲ್ಲಿ 'ದೇವಚಂದ್ರಪ್ರಭರನು ಕೊಂಡಾಡಿದ| ಶ್ರೀ ವಿಜಯರ . . .' ಎಂದು ಚಂಪೂ ಕಾವ್ಯಕರ್ತರ ವೃಂದದಲ್ಲಿ ಶ್ರೀ ವಿಜಯನ ಹೆಸರನ್ನು ಸೇರಿಸಿ ಸ್ಮರಿಸಿದ್ದಾನೆ. (೨) ಪಿರಿಯಪಟ್ಟಣದ ದೊಡ್ಡಯ್ಯನು (ಸು. ೧೫೫೦) ತನ್ನ ಚಂದ್ರಪ್ರಭ ಸಾಂಗತ್ಯದಲ್ಲಿ "ಚಂದ್ರಪ್ರಭ ಪುರಾಣವ ಪೇಟ್ದ ವಿಜಯ ಕವೀಂದ್ರ" ಎಂದು ಉಲ್ಲೇಖಿಸಿದ್ದಾನೆ. ದುರ್ಗಸಿಂಹನು (ಸು. ೧೧೧೫) ತನ್ನ ಪಂಚ ತಂತ್ರದಲ್ಲಿ—'ಶ್ರೀ ವಿಜಯರ ಕವಿಮಾರ್ಗಂ| ಭಾವಿಪ ಕವಿಜನದ ಮನಕೆ ಕನ್ನಡಿಯುಂ ಕೆ| ಯ್ದಾವಿಗೆಯುಮಾದುವದಱಂ| ಶ್ರೀ ವಿಜಯರ್ ದೇವ ರವರನೇವಣ್ಣಿಪುದೋ ||' ಎಂದು ಬಾಯ್ತುಂಬ ಹೊಗಳಿದ್ದಾನೆ. ಕೇಶಿ ರಾಜನು (ಸು. ೧೨೬೦) ಶಬ್ದಮಣಿ ದರ್ಪಣದಲ್ಲಿ-'ಗಜಗನ ಗುಣನಂದಿಯ ಮನ| ಸಿಜನಸಗನ ಚಂದ್ರಭಟ್ಟ ಗುಣವರ್ಮ ಶ್ರೀ| ವಿಜಯರ ಪೊನ್ನನ ಪಂಪನ ಸುಜನೋತ್ತಂಸನ ಸುಮಾರ್ಗಮಿದಱೊಳೆ ಲಕ್ಷ್ಯಂ ||' ಎಂದು ಹೇಳಿದ್ದಾನೆ.

ಮಂಗರಸ ದೊಡ್ಡರಸರ ಹೇಳಿಕೆಗಳಿಂದ ಶ್ರೀ ವಿಜಯನೆಂಬ ಕವಿ ಚಂದ್ರಪ್ರಭ ಪುರಾಣವೆಂಬ ಚಂಪೂಕಾವ್ಯದ ಕರ್ತೃ ಎಂದು ಗೊತ್ತಾಗು ತ್ತದೆ. ಕವಿರಾಜಮಾರ್ಗದ ಕರ್ತೃ ಶ್ರೀ ವಿಜಯನೆಂಬುದಕ್ಕೆ ಅವು ಸಾಧಕ ವಾಗವು. ದುರ್ಗಸಿಂಹನ ಹೇಳಿಕೆಯಿಂದ ಶ್ರೀ ವಿಜಯನು ಕವಿರಾಜ ಮಾರ್ಗದ ಕರ್ತೃ ಎಂದು ಅನುಮಾನಿಸಲು ಅವಕಾಶವಿದೆ. 'ಕವಿಮಾರ್ಗ' ಎನ್ನುವ ಪದಕ್ಕೆ 'ಕಾವ್ಯರಚನಾಪದ್ಧತಿ' ಎಂದು ಸಾಮಾನ್ಯಾರ್ಥವನ್ನು ಹೇಳುವುದಕ್ಕಿಂತ 'ಕವಿಮಾರ್ಗವೆಂಬ ಗ್ರಂಥ'ವೆಂದು ವಿಶಿಷ್ಟಾರ್ಥವನ್ನು ಹೇಳುವುದೇ ಸೂಕ್ತವಾಗಿ ಕಾಣುತ್ತದೆ. ಒಂದು ಗ್ರಂಥವನ್ನು ಕೈಗನ್ನಡಿ,

ಕೈದೀವಿಗೆ ಎಂದು ನಿರ್ದೇಶಿಸುವುದು ಉಚಿತ; ಕಾವ್ಯಮಾರ್ಗವನ್ನು ಹಾಗೆ ನಿರ್ದೇಶಿಸುವುದು ಸಮಂಜಸವೆನಿಸದು. ನಾಗವರ್ಮನು ತನ್ನ ಕಾವ್ಯಾವಲೋಕನವನ್ನು 'ಕವಿಗಳ್ಗಿದು ಕೈಗನ್ನಡಿ' ಎಂದು ವರ್ಣಿಸಿರುವುದನ್ನು ಈ ಸಂದರ್ಭದಲ್ಲಿ ನೆನೆಯಬಹುದು. ಆದ್ದರಿಂದ, 'ಕವಿಮಾರ್ಗ' ಎಂದರೆ ದುರ್ಗಸಿಂಹನು ಒಂದು ಲಕ್ಷಣ ಗ್ರಂಥವನ್ನೇ ಹೆಸರಿಸಿದ್ದಾನೆ ಎಂದು ತಿಳಿಯುವುದು ಹೆಚ್ಚು ಸಮಂಜಸ. 'ಕವಿರಾಜಮಾರ್ಗ' ಎಂಬ ಸಮಸ್ತ ಪದವನ್ನು ಮುಖ್ಯವಾಗಿ 'ಕವಿಗಳ+ರಾಜಮಾರ್ಗ', 'ಕವಿರಾಜರ (ಕವಿಶ್ರೇಷ್ಠರ)+ಮಾರ್ಗ,' ಎಂದು ಇಬ್ಬಗೆಯಾಗಿ ಬಿಡಿಸಬಹುದು. ಪದ್ಯರಚನೆಯ ಸೌಕರ್ಯಕ್ಕಾಗಿ ಶ್ರೇಷ್ಠಾರ್ಥವಾಚಿಯಾದ 'ರಾಜ' ಶಬ್ದವನ್ನು ಕವಿ ಲೋಪಿಸಿದ್ದಾನೆ. ಇದರಿಂದ, ಗ್ರಂಥನಾಮದ ಮುಖ್ಯಾರ್ಥಕ್ಕೆ ಬಾಧೆಯೇನೂ ತಟ್ಟುವುದಿಲ್ಲ. ಕೇಶಿರಾಜನೂ ಶ್ರೀವಿಜಯನ ಹೆಸರನ್ನು ಹೇಳಿ ಕವಿರಾಜಮಾರ್ಗದ ಪದ್ಯಗಳನ್ನು ಉದಾಹರಿಸಿರುವುದರಿಂದಲೂ, ಆಂತರಿಕ ಪ್ರಮಾಣಗಳಿಂದಲೂ ಕವಿರಾಜಮಾರ್ಗವು ಶ್ರೀವಿಜಯ ಕೃತ ಎಂದು ಸ್ಥಿರಪಡುವುದರಿಂದಲೂ ದುರ್ಗಸಿಂಹನು ಹೇಳುವ ಶ್ರೀವಿಜಯನ ಕವಿಮಾರ್ಗವು* ಕವಿರಾಜಮಾರ್ಗವೆ ಎಂಬಲ್ಲಿ ಸಂದೇಹವಿಲ್ಲ. ಆಂತರಿಕ ಪ್ರಮಾಣಗಳಲ್ಲಿ, ಪರಿಚ್ಛೇದಾಂತ ಪದ್ಯಗಳಲ್ಲಿ ಪ್ರಯುಕ್ತಗಳಾದ

---

* ೧. ಕನ್ನಡ ಕವಿಗಳು ತಮ್ಮ ಕೃತಿಗಳನ್ನು ಬೇರೆ ಬೇರೆ ಹೆಸರುಗಳಿಂದ ನಿರ್ದೇಶಿಸಿರುವ ನಿದರ್ಶನಗಳುಂಟು; ಹೆಸರು ಸಂಕ್ಷಿಪ್ತವಾಗಿರುವ ಉದಾಹರಣೆ ಇದೆ; ಕವಿ ಇಟ್ಟ ಹೆಸರು ಒಂದಾದರೆ, ಜನ ಕೊಟ್ಟ ಹೆಸರು ಮತ್ತೊಂದು. ಆದಿಪಂಪ ತನ್ನ 'ವಿಕ್ರಮಾರ್ಜುನ ವಿಜಯ'ವನ್ನು 'ಸಮಸ್ತಭಾರತ' ಎಂದೂ ಕರೆದುಕೊಂಡಿದ್ದಾನೆ; ಆದರದು ಪ್ರಸಿದ್ಧವಾಗಿರುವುದು 'ಪಂಪಭಾರತ' ಎಂದು. 'ಪಂಪರಾಮಾಯಣ'ಕ್ಕೆ ನಾಗಚಂದ್ರ ಇಟ್ಟ ಹೆಸರು 'ರಾಮಚಂದ್ರಚರಿತ ಪುರಾಣ'. ದೇವಚಂದ್ರನು ಇದನ್ನು 'ಶ್ರೀಮದಭಿನವ ಪಂಪರಚಿತ ರಾಮಾಯಣ' ಎಂದೇ ಕರೆದಿದ್ದಾನೆ. 'ಶಾಂತಿಪುರಾಣ'ವನ್ನು ಪೊನ್ನ 'ಶಾಂತೀಶ್ವರ ಕಥೆ', 'ಪುರಾಣ ಚೂಡಾಮಣಿ' ಎಂದೂ ನಿರ್ದೇಶಿಸಿದ್ದಾನೆ. ರನ್ನನ 'ಶ್ರೀಮದಜಿತ ತೀರ್ಥಕರ ಪುರಾಣತಿಲಕ'ವನ್ನು ನಾಗಚಂದ್ರ 'ಅಜಿತಪುರಾಣ' ಎಂದು ಹ್ರಸಗೊಳಿಸಿದ್ದಾನೆ. ನೆನೆದರೆ, ಹುಡುಕಿದರೆ, ಇನ್ನೂ ನಿದರ್ಶನಗಳು ದೊರೆತಾವು.

'ಶ್ರೀವಿಜಯನಿಂದ ಉಂಟಾದದ್ದು – ಉತ್ಪನ್ನವಾದದ್ದು – ಜನಿಸಿದ್ದು – ನಿರ್ಮಾಣವಾದದ್ದು', 'ಶ್ರೀವಿಜಯ ಮೂಲವಾದದ್ದು' ಎಂದು ಅರ್ಥ ಕೊಡುವ 'ಶ್ರೀ ವಿಜಯಪ್ರಭೂತ', 'ಶ್ರೀ ವಿಜಯ ಪ್ರಭೂತಿ' ಎಂಬ ಪದಗಳು ಬಹು ಮುಖ್ಯವಾದವು. (ಪ್ರಭೂತ=Sprung from ; produced. ಪ್ರಭೂತಿಃ=Source, origin : Apte) (ಸಂಬಂಧ ಪಟ್ಟ I–೧೫೦, II–೧೫೫, III–೨೩೧ ಪದ್ಯಗಳ ಟಿಪ್ಪಣಿಗಳನ್ನು ನೋಡಿ).

ಶ್ರೀವಿಜಯನೇ ಕವಿರಾಜಮಾರ್ಗಕಾರನೆನ್ನಲು ಗ್ರಂಥದೊಡಲಿನಲ್ಲಿ ಇನ್ನು ಕೆಲವು ಹೊಳಹುಗಳು ಅಲ್ಲಲ್ಲಿ ಮಿಂಚುತ್ತಿವೆ. "ಪದ್ಯಕಾರರಲ್ಲಿ ಶ್ರೀವಿಜಯನನ್ನು ಹೆಸರಿಸಿ ತನ್ನನ್ನೆ ಕವಿರಾಜಮಾರ್ಗಕಾರನು ಸೂಚಿಸಿ ದಂತಿದೆ." (ಕ. ಸಾ. ಚ. ; ಪು. ೫೮). ಸಂಬಂಧಪಟ್ಟ ಪದ್ಯದಲ್ಲಿಯೂ

ಹೀಗಿರುವಲ್ಲಿ, ದುರ್ಗಸಿಂಹನು 'ಕವಿರಾಜಮಾರ್ಗ'ವನ್ನು 'ಕವಿಮಾರ್ಗ' ಎಂದು ಸಂಕ್ಷೇಪಿಸಿದ್ದರೆ, ಅದರಲ್ಲಿ ಸೋಜಿಗವೇನಿಲ್ಲ.

೨. ಅಥವಾ, ಇನ್ನೂ ಒಂದು ಊಹೆಯನ್ನು ಮಾಡಬಹುದು :

ಶ್ರೀವಿಜಯನು 'ಕವಿಮಾರ್ಗ' ಎಂಬ ಲಕ್ಷಣ ಗ್ರಂಥವನ್ನು ಬರೆದಿದ್ದು, 'ವಿವೇಕಬೃಹಸ್ಪತಿ'ಯ ನಗರವನ್ನು ಹೊಕ್ಕು, 'ಆಶ್ರಿತ ನೃಪತುಂಗ ಸಭಾಸದ' ನಾದಮೇಲೆ ಅದನ್ನು ನೃಪತುಂಗ ಸಭೆಯಲ್ಲಿ ನಿವೇದಿಸಿ, ಸ್ವತಃ ವಿದ್ವಾಂಸನಾಗಿರ ಬಹುದಾಗಿದ್ದ 'ನೃಪತುಂಗಮತ'ವನ್ನು ಅಳವಡಿಸಿ, ಅನೇಕ ಮಾರ್ಪಾಟು ಗಳೊಡನೆ ವಿಸ್ತಾರಗೊಂಡ ತನ್ನ ಗ್ರಂಥವನ್ನು, ಅರ್ಥಗರ್ಭಿತವಾದ 'ಕವಿರಾಜ ಮಾರ್ಗ' ಎಂದು ಕರೆದು, 'ನೃಪತುಂಗದೇವಾನುಮತಮಪ್ಪ' ಆ ಗ್ರಂಥ ವನ್ನು ಪ್ರಸಿದ್ಧಗೊಳಿಸಿರಬಹುದು. ಕವಿರಾಜಮಾರ್ಗದ ಕೆಲವು ಗಮನಾರ್ಹ ಪಾಠವ್ಯತ್ಯಾಸಗಳಿಗೆ ಇದು ಕಾರಣವಾಗಿರಬಹುದು. ನೃಪತುಂಗನ ಸಂಬಂಧ ವಿಲ್ಲದ, ಶ್ರೀವಿಜಯ ಕೃತವೆಂದು ಸ್ಪಷ್ಟ ನಿರ್ದೇಶವಿದ್ದ, ಮೂಲಗ್ರಂಥ 'ಕವಿ ಮಾರ್ಗ'ವು ದುರ್ಗಸಿಂಹನ ಗಮನಕ್ಕೆ ಬಂದಿರಬಹುದು. ಕಾಲಕ್ರಮದಲ್ಲಿ ನೃಪತುಂಗಾಂಕಿತವಾದ ಕವಿರಾಜಮಾರ್ಗವೊಂದೇ ಪ್ರಚಾರಕ್ಕೆ ಬಂದು, ಮೂಲ ಗ್ರಂಥ ವಿನಷ್ಟವಾಗಿರಬಹುದು. ಒಂದು ವೇಳೆ 'ಕವಿಮಾರ್ಗ' ಎಂಬ ಗ್ರಂಥ ವೊಂದು ಇದ್ದುದಾದರೆ ಅದೂ ಶ್ರೀವಿಜಯಕೃತವೆ ಹೊರತು 'ಕವೀಶ್ವರ' ಕೃತ ಎಂದಾಗದು. ಜಿಜ್ಞಾಸುಗಳ ಮುಂದೆ ಇದನ್ನು ಒಂದು ಊಹೆಯಾಗಿ ಇಡುತ್ತಿದ್ದೇವೆಯೇ ಹೊರತು, ತೀರ್ಮಾನವಾಗಿಯಲ್ಲ. —ಸಂ.

(I-೩೨), ಗ್ರಂಥ ಸಮಾಪ್ತಿಯ ಪದ್ಯದಲ್ಲಿಯೂ ಪ್ರಯೋಗವಾಗಿರುವ 'ಪರಮಶ್ರೀವಿಜಯ' ಎಂಬ ಏಕರೂಪವು ಗಮನಾರ್ಹ. ಪದ್ಯಕಾರರ ಶ್ರೇಣಿಯಲ್ಲಿ ಉಕ್ತನಾದ 'ಪರಮ ಶ್ರೀವಿಜಯ', ಕವಿರಾಜಮಾರ್ಗಕಾರ ನಿಂದ ಭಿನ್ನನಾದ ಪ್ರಾಚೀನ ಕವಿ ಎಂಬ ಅಭಿಪ್ರಾಯವೂ ಇದೆ. ಈ ಅಭಿಪ್ರಾಯಕ್ಕೆ ವಿಶೇಷ ಪುಷ್ಟಿಕೊಡುವ ಮಾತೆಂದರೆ, ಆ ಕವಿಗಳ 'ವಸ್ತು ವಿಸ್ತರ ವಿರಚನೆ ಲಕ್ಷ್ಯಂ ತದಾದ್ಯ ಕಾವ್ಯಕ್ಕೆಂದುಂ' ಎಂಬುದು. ಪೂರ್ವ ಕವಿಗಳ ಪಂಕ್ತಿಯಲ್ಲಿ ಮಾರ್ಗಕಾರನು ತನ್ನ ಹೆಸರನ್ನು ಸೇರಿಸುವುದು ಅಸಂಭವ ಎಂಬ ಆಕ್ಷೇಪವೂ ಇದೆ. 'ಆದ್ಯಕಾವ್ಯ' ಎಂದರೆ 'ಪ್ರಥಮ ಕಾವ್ಯ' ಎಂದೂ ಆಗಬಹುದು, 'ಶ್ರೇಷ್ಠ' ಅಥವಾ 'ಪ್ರಮುಖ ಕಾವ್ಯ' ಎಂದೂ ಆಗಬಹುದು. ಕಾಲದೃಷ್ಟಿಯಿಂದ ಆದ್ಯಕಾವ್ಯ ಎಂಬ ಗ್ರಹಿಕೆ ಯನ್ನು ಪುರಸ್ಕರಿಸುವುದಾದರೆ, ಒಬ್ಬ ಕವಿಯ ಒಂದು ಕೃತಿ ಆದ್ಯಕಾವ್ಯ ವಾಗಬಹುದೆ ಹೊರತು ಹಲವು ಕವಿಗಳ ಹಲವು ಕೃತಿಗಳಲ್ಲ. ಆದ್ದರಿಂದ ಇಲ್ಲಿ 'ಆದ್ಯಕಾವ್ಯ' ಎಂದರೆ 'ಶ್ರೇಷ್ಠಕಾವ್ಯ' ಎಂದು ಡಾ|| ರಂ. ಶ್ರೀ. ಮುಗಳಿಯವರು ಅರ್ಥಮಾಡಿರುವುದೇ ಸಾಧು. "೧-೩೦ರಲ್ಲಿಯ 'ಆದ್ಯ'ಕ್ಕೂ ಇದೇ ಅರ್ಥವಿದೆ" ಎಂಬ ಅವರ ಹೆಚ್ಚಿನ ಸಮರ್ಥನೆಯನ್ನೂ ಗಮನಿಸಬೇಕು. (ಕ. ಸಾ. ಚ. - ಪು. ೫೮). ಅಲ್ಲದೆ, ಮಾರ್ಗಕಾರನು ಗ್ರಂಥಾಂತ್ಯದಲ್ಲಿ ಸ್ವವಿಷಯವನ್ನು ಹೇಳಿಕೊಳ್ಳುತ್ತಾ "ಲಕ್ಷಣಲಕ್ಷ್ಯನಾಶ್ರಿತ ಮಹಾನೃಪತುಂಗ ಸಭಾಸದಂ" ಎಂದು ತಿಳಿಸಿರುವುದನ್ನೂ ಪರಿಶೀಲಿಸ ಬೇಕು. 'ಕವಿರಾಜಮಾರ್ಗ' ಲಕ್ಷಣ ಗ್ರಂಥ. ಮಾರ್ಗಕಾರನ ಲಕ್ಷ್ಯವೊಂದೂ ಇರಬೇಕಷ್ಟೆ? ಶ್ರೀವಿಜಯನು ತನ್ನ ಲಕ್ಷಣ ಗ್ರಂಥದಲ್ಲಿ 'ಮಾರ್ಗ' ಕಾವ್ಯ ವನ್ನೆ ಕುರಿತಿರುವುದರಿಂದ, ಅವನು ರಚಿಸಿರುವ ಲಕ್ಷ್ಯವೂ ಒಂದು ಮಾರ್ಗ ಕಾವ್ಯವೇ (=ಚಂಪೂಕಾವ್ಯವೆ) ಆಗಿರಬೇಕು. ಆದ್ದರಿಂದ ಮಂಗರಸ ದೊಡ್ಡಯ್ಯ ಇವರು ಸ್ಮರಿಸುವ 'ಚಂದ್ರಪ್ರಭಪುರಾಣ' ಕರ್ತೃ ಶ್ರೀವಿಜಯನೂ ಮಾರ್ಗಕಾರ ಶ್ರೀವಿಜಯನೂ ಒಬ್ಬನೇ ಎಂದು ಸದ್ಯದ ಮಟ್ಟಿಗೆ ತೀರ್ಮಾ- ನಿಸುವುದು ಅಯುಕ್ತಿಕವಾಗದು. ಹೀಗೆ, ಶ್ರೀವಿಜಯನು 'ಲಕ್ಷಣಲಕ್ಷ್ಯ'ನಾದ್ದ ರಿಂದಲೇ ಜೈನಕವಿಯಾದರೂ ವೈದಿಕಮತಾನುಯಾಯಿಯಾದ ದುರ್ಗಸಿಂಹ ನಿಂದ ಬಹುವಚನದ ಗೌರವಕ್ಕೆ ಪಾತ್ರನಾದುದು.

ಶ್ರೀವಿಜಯ

'ಚಂದ್ರಪ್ರಭಪುರಾಣ'ವು ಉಪಲಬ್ಧವಾಗಿ ಅದರ ಕರ್ತೃ ಬೇರೆ ಎಂದು ನಿರ್ಧರವಾಗುವವರೆಗೆ, ಕವಿರಾಜಮಾರ್ಗಕರ್ತೃವಾದ ಶ್ರೀವಿಜಯನೆ ಅದನ್ನು ಬರೆದಾತನೆಂದು ಇಟ್ಟುಕೊಳ್ಳಬಹುದು. ಈ ಶ್ರೀವಿಜಯನು 'ಆಶ್ರಿತ ಮಹಾನೃಪತುಂಗಸಭಾಸದ'ನೆಂದು ಗ್ರಂಥದಿಂದಲೆ ಸ್ಪಷ್ಟವಾಗುತ್ತದೆ. ನೃಪತುಂಗ ಸಭಾಸದನಾಗುವ ಮುನ್ನವೆ ಆತ 'ಕವಿವೃಷಭರಾಪ್ರಯೋಗಗಳೊಳಂ ಕೃತಪರಿಚಯಬಲನೂ', 'ವ್ಯಾಕರಣ ಕಾವ್ಯನಾಟಕ ಲೋಕಕಲಾ ಸಮಯಮಾದಳಂಕೃತಿಗಳೊಳಂ ವ್ಯಾಕುಳನೂ' ಆಗಿದ್ದು, ತನ್ನ ಪ್ರತಿಭೆಪಾಂಡಿತ್ಯಗಳಲ್ಲಿ ಆತ್ಮವಿಶ್ವಾಸವುಳ್ಳವನಾದ್ದರಿಂದಲೇ 'ವಿವೇಕ ಬೃಹಸ್ಪತಿ'ಯ ನಗರವನ್ನು ಪ್ರವೇಶಿಸಿ, 'ಅತಿಶಯಧವಳ ಸಭಾಸದರ ಮನ್ನಣೆಗೆ ಪಾತ್ರನಾದನು.' ಶ್ರೀವಿಜಯನು ನೃಪತುಂಗ ನಗರವಾದ ಮಾನ್ಯಖೇಟವನ್ನು ಹೊಕ್ಕದ್ದು, ನೃಪತುಂಗನ ಪಾಂಡಿತ್ಯ ಪಕ್ಷಪಾತದಿಂದ ಆಕರ್ಷಿತನಾಗಿ. ಕವಿರಾಜಮಾರ್ಗದ ಒಂದೆರಡು ಪದ್ಯಗಳಲ್ಲಿ (III–೨೦೪, ೨೦೬), ನೃಪತುಂಗನು ಶ್ರೀವಿಜಯನನ್ನು ಗೌರವಾದರಗಳಿಂದ ಬರಮಾಡಿಕೊಂಡ ಸಂದರ್ಭವೇ ವರ್ಣಿತವಾಗಿರುವಂತಿದೆ.

ಹೀಗೆ ನೃಪತುಂಗನ ಗೌರವಕ್ಕೆ ಪಾತ್ರನಾಗಿ, ಅವನ ಅನುಮತಿಯಂತೆ ಕನ್ನಡದಲ್ಲಿ ಲಕ್ಷಣಗ್ರಂಥವನ್ನು ಬರೆಯುವ ಹೆಚ್ಚಿನ ಮನ್ನಣೆಗೆ ಪಾತ್ರನಾಗಿದ್ದಿರಬೇಕಾದರೆ ಶ್ರೀವಿಜಯನ ವ್ಯಕ್ತಿತ್ವವು ಘನವಾದುದಾಗಿರಬೇಕು. ಅದನ್ನು ಅವನು ನಮ್ಮ ಊಹೆಗೆ ಬಿಡದೆ, ತನ್ನ 'ಭಾವಚಿತ್ರ'ವನ್ನು ತಾನೇ ಚಿತ್ರಿಸಿ ನಮ್ಮ ಮುಂದಿಟ್ಟಿರುವುದು ತರುವಾಯದ ಅನೇಕ ಕನ್ನಡ ಕವಿಗಳಲ್ಲಿ ಕಾಣಬರದ ಒಂದು ವಿಶೇಷ ಸಂಗತಿ. (III–೨೧೮ರಿಂದ ೨೩೦ರ ವರೆಗಿನ ಪದ್ಯಗಳನ್ನೂ, ಅವುಗಳ ಮೇಲಿನ ಟಿಪ್ಪಣಿಗಳನ್ನೂ ನೋಡಿ). ಈ ಸ್ವವಿಷಯವನ್ನು ಆತ್ಮಪ್ರಶಂಸೆಯ ರೂಪದಲ್ಲಿ ಹೇಳಿಕೊಂಡಿಲ್ಲ. ನೃಪತುಂಗನ ಸಭಾಸದರು ಕವಿಯ (ಎಂದರೆ ತನ್ನ) ಗುಣೋದಯದಿಂದ ಆಕರ್ಷಿತರಾಗಿ, ತಮ್ಮ ಮನಸ್ಸು ಪ್ರಸನ್ನವಾಗಿರಲು ('ಬಗೆ ಪೆರ್ಚಿರೆ'), ಬಾಯಿಂದ ಮಾತು ಹೇಗೆ ಬಿದ್ದಿತೋ ಹಾಗೆ ಎಂದರೆ ಸ್ವಯಂಪ್ರೇರಿತರಾಗಿ ಹೇಳಿ ತನ್ನನ್ನು ಸಂತೋಷ ಪಡಿಸುವರು ಎಂದು ಚಮತ್ಕಾರವಾಗಿ

ತಿಳಿಸಿದ್ದಾನೆ. ಶ್ರೀ ವಿಜಯನ ಈ ಗುಣವರ್ಣನೆಯಲ್ಲಿ ನಾವು ಮುಖ್ಯ ವಾಗಿ ಗಮನಿಸಬೇಕಾದ ಅಂಶಗಳು ಇವು: ಶ್ರೀ ವಿಜಯನು ಲೋಕವ್ಯವ ಹಾರದಲ್ಲಿಯೂ ಜೈನ ವೈದಿಕ ಧರ್ಮಗಳೆರಡರಲ್ಲಿಯೂ ನಿಷ್ಣಾತನಾಗಿದ್ದನು; ಉಕ್ತಿಕಲೆಯಲ್ಲಿ ಪ್ರವೀಣ; ಸಾಹಿತ್ಯ ವಿದ್ಯೆಯಲ್ಲಿ ಪ್ರತಿಭಾವಂತ; ಕಾವ್ಯ ಲಕ್ಷಣ ಲಕ್ಷ್ಯಗಳಲ್ಲಿ ಅಭಿಜ್ಞ; ಸಮಸ್ತ ಭಾಷಾವಿಶೇಷ ವಿಷಯ ಕುಶಲಿ; ದೇವತಾಗುರುವೃದ್ಧರನ್ನು ಚೆನ್ನಾಗಿ ಸೇವಿಸತಕ್ಕವನು; ಪರಮ ಕಾರುಣಿಕ, ದೋಷರಹಿತ; ಸಮಸ್ತ ಜನರಲ್ಲಿಯೂ ಆದರವನ್ನು ಹುಟ್ಟಿಸತಕ್ಕವನು; ಪರರ ಗುಣದಲ್ಲಿ ಅಸಹನೆಯಿಲ್ಲದವನು, ಆತ್ಮಗುಣೋದಯವೇ ವೈವೆತ್ತಂತಿರುವವನು—ಇಂಥವನು, ನಿರ್ಮಲವಾದ ಕೀರ್ತಿವಿತಾನವನ್ನು ನಿರ್ಮಿಸುವ ಉದ್ದೇಶದಿಂದ, ಜಗತ್ತಿನ ಅಗಾಧವಾದ ಅಂತಃಪ್ರದೇಶ ವನ್ನು ಬೆಳಗತಕ್ಕ ದೀಪಸದೃಶವಾದ 'ನುತಕಾವ್ಯ'ವನ್ನು (ಎಂದರೆ ಲಕ್ಷ್ಯ ಲಕ್ಷಣಸಮನ್ವಿತವಾದ ಕವಿರಾಜಮಾರ್ಗವನ್ನು) ಹೇಳಿದನು; ಇವನು ಅಭಿಮಾನಿ, ಮಹಾಪುರುಷವ್ರತಸಿಕ್ಷಿತ, ಆದ್ದರಿಂದ, ಯಾರಿಂದಲೂ ಯಾವ ಬಗೆಯ ಹೊಗಳಿಕೆಯನ್ನೂ ನಿರೀಕ್ಷಿಸತಕ್ಕವನಲ್ಲ; ಇತ್ಯಾದಿಯಾಗಿ ಅವನ ಗುಣಗಣಪ್ರಶಂಸೆ ಸಾಗಿದೆ.

ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಮುಖ್ಯ ಸಂಗತಿಯೆಂದರೆ, ಕವಿರಾಜಮಾರ್ಗರಚನೆಗೆ ಸಂಬಂಧಪಟ್ಟದ್ದು. ನೃಪ ತುಂಗನ ವಿದ್ವತ್ಸಭೆಯಲ್ಲಿ ದಂಡಿ ಭಾಮಹ ಮುಂತಾದ ಪೂರ್ವಾಚಾರ್ಯ ಪ್ರಣೀತ ಕಾವ್ಯಮಾರ್ಗಗಳು ಚರ್ಚಿತವಾಗುತ್ತಿದ್ದುವು; ಆ ಚರ್ಚೆಗಳಲ್ಲಿ, ಸ್ವತಃ ವಿದ್ವಾಂಸನಾಗಿದ್ದ ನೃಪತುಂಗದೇವನು ತನ್ನ ನಿರ್ಣಾಯಕ ಅಭಿ ಪ್ರಾಯಗಳನ್ನು ಮಂಡಿಸುತ್ತಿದ್ದಂತೆ ಕಾಣುತ್ತದೆ. ಹೀಗೆ, ಕಾವ್ಯ ಮೀಮಾಂಸೆಯಲ್ಲಿ 'ನೃಪತುಂಗದೇವಮಾರ್ಗಾಂತರ'ವೊಂದು ರೂಪು ಗೊಂಡಿದ್ದಿರಬೇಕು. ನೃಪತುಂಗದೇವಾನುಮತವಪ್ಪ ಕನ್ನಡ ಕಾವ್ಯ ಲಕ್ಷಣ ಮಾರ್ಗವೆ ನೃಪತುಂಗದೇವಮಾರ್ಗ. ಇದರಲ್ಲಿ ಅಡಗಿರುವ ಕಾವ್ಯ ತತ್ತ್ವವೆಂಬ 'ವಿಶೇಷಯಾನಪಾತ್ರ' ಸ್ವರೂಪನೇ ಶ್ರೀ ವಿಜಯ; ಅವನು ಮಹಾತ್ಮ; ಕಾವ್ಯತತ್ತ್ವ ಸ್ವರೂಪನಾದ್ದರಿಂದಲೇ ಕಾವ್ಯರತ್ನಾಕರದ ಅಪಾರಪಾರವನ್ನು ಅವನು ಮುಟ್ಟಬಲ್ಲವನಾಗಿದ್ದನು. ಹೀಗೆ, ಕಾವ್ಯ

ತತ್ತ್ವಸಂಬಂಧವಾಗಿ ತಾನು ಪಡೆದಿದ್ದ ತಿಳಿವಳಿಕೆಯನ್ನೂ ನೃಪತುಂಗ ದೇವಮತವನ್ನೂ ಅಳವಡಿಸಿ, ಅವಕ್ಕೆ ಗ್ರಂಥರೂಪವನ್ನು ಕೊಟ್ಟವನು ಶ್ರೀ ವಿಜಯ. ಈ ಗ್ರಂಥವೆ ಕವಿರಾಜಮಾರ್ಗ. ಇದರಲ್ಲಿ ತನ್ನ ಆಶ್ರಯ ದಾತನಾದ ನೃಪತುಂಗನ ಪ್ರತಿಷ್ಠೆಯನ್ನು ಉತ್ಕರ್ಷಗೊಳಿಸುವುದಕ್ಕಾಗಿ ಆತನ ಹೆಸರಿನ ಹಸರವೇ ಗ್ರಂಥದಲ್ಲಿ ಹರಡಿಕೊಳ್ಳುವಂತೆ ಮಾಡಿ ಶ್ರೀ ವಿಜಯನು ತನ್ನ ಕರ್ತೃತ್ವವನ್ನು ಗೌಣವಾಗಿರಿಸಿದ್ದರಿಂದ, ಗ್ರಂಥವು ನೃಪ ತುಂಗ ಕೃತವೆಂಬ ಪ್ರತೀತಿಯೇ ಈವರೆಗೂ ಸಾಗಿಬಂದಿತು. ಇನ್ನಾದರೂ ನಿಜವಾದ ಕರ್ತೃವಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸೋಣ. ಕವಿರಾಜ ಮಾರ್ಗವು ಶ್ರೀ ವಿಜಯಕೃತ ಎಂದು ಮನವರಿಕೆಯಾಗಿರುವಾಗ, ಹಾಗೆಂದು ನಿಶ್ಶಂಕೆಯಿಂದ ಪ್ರಕಟಪಡಿಸಲು ಹಿಂದೆಗೆಯದಿರೋಣ.

ಶ್ರೀ ವಿಜಯನು ಮಾನ್ಯಖೇಟನಗರಕ್ಕೆ ಆಗಮಿಸಿದ ಬಗೆಗೆ ಕವಿರಾಜ ಮಾರ್ಗದಲ್ಲಿಯೇ ಉಲ್ಲೇಖವಿದೆಯಷ್ಟೆ. ಎಂದಮೇಲೆ, ಅವನ ಸ್ಥಳ ಬೇರೆಯದೆ ಆಗಿರಬೇಕು. ಅವನು ತನ್ನ ಸ್ವಸ್ಥಳದಿಂದ ರಾಷ್ಟ್ರಕೂಟ ರಾಜ ಧಾನಿಗೆ ಎಂದು, ಏಕೆ ಆಗಮಿಸಿದನೆಂಬುದು ವಿಚಾರಣೀಯವಾಗಿದೆ. ಈ ಬಗೆಗೆ ಗ್ರಂಥದಲ್ಲಿಯೇ ಸ್ಪಷ್ಟ ಸೂಚನೆ ಯಾವುದೂ ಇಲ್ಲ. ದಿ|| ಮುಳಿಯ ತಿಮ್ಮಪ್ಪಯ್ಯನವರು ಗ್ರಂಥದ ಚಕ್ರಬಂಧ ಶ್ಲೋಕದ ಆಧಾರದ ಮೇಲೆ ಶ್ರೀವಿಜಯನ ಹುಟ್ಟು ಹೆಸರು 'ಜಯಾಬ್ಬ' ಎಂದಿರಬಹುದೆಂದೂ, ಅವನು 'ಸಾಮಪ' (ಸಂಧಿವಿಗ್ರಹಿ)ನಾಗಿದ್ದನೆಂದೂ ಊಹಿಸಿರುವರಷ್ಟೆ. (ನೋಡಿ: ಪದ್ಯ ೧೪೨ರ ಟಿಪ್ಪಣಿ: ಪುಟ ೨೪೪-೨೪೫). ಸಂಜನ ಶಾಸನದ ೪೧ನೆಯ ಶ್ಲೋಕದಲ್ಲಿ 'ರಟ್ಟ ಮಾರ್ತಾಂಡ ನೃಪತುಂಗನ ಪುನರುದಯಕ್ಕೆ ಆಧಾರಭೂತನಾದ 'ಪಾತಾಳಮಲ್ಲ'ನೆಂಬ ಬಿರುದಿನ ಪೂಜ್ಯ ರಾಜನೀತಿ ನಿಪುಣನಾದ ವ್ಯಕ್ತಿಯ ಉಲ್ಲೇಖವಿದೆ. ಪಾತಾಳ ಮಲ್ಲ ಎಂಬುದು ನೃಪತುಂಗನ ಚಿಕ್ಕಪ್ಪನಾದ, ಗುಜರಾತಶಾಖೆಯ ರಾಷ್ಟ್ರ ಕೂಟ ರಾಜ ಸುವರ್ಣವರ್ಷನ ಬಿರುದಾಗಿರಬಹುದು ಎಂಬುದು ಎ. ಎಸ್. ಅಲ್ತೇಕರರ ಊಹೆ. ಬಿರುದಿನ 'ಪಾದಾಬ್ಬ' ಎಂಬ ಭಾಗ ಶಾಸನ ಲೇಖಕನ ಕೈಯಲ್ಲಿ 'ಪಾತಾಳ' ಎಂದಾಗಿರಬಹುದೆಂದೂ (ಪಾದಾಬ್ಬ> ಪಾದಾಳ>ಪಾತಾಳ), "ಈ ಗ್ರಂಥಕಾರನಾದ ಜಯಾಬ್ಬ (ಶ್ರೀವಿಜಯ)ನೇ

ಹಾಗೆ ನೃಪತುಂಗನಿಗೆ ಹಿಂದೆ ನೆರವಾದ, ಮತ್ತು ಅವನ ಪುನರುದಯಕ್ಕೆ ಕಾರಣಪುರುಷನಾದ ' ಆಳ್ವಮಲ್ಲ 'ನಾಗಿರಬೇಕೆಂದೂ ತಿಮ್ಮಪ್ಪಯ್ಯನವರು ' ವೈಯಕ್ತಿಕಾಭಿಪ್ರಾಯ 'ವನ್ನು ವ್ಯಕ್ತಪಡಿಸಿದ್ದಾರೆ. (ಕ. ರಾ. ವಿವೇಕ-೧; ಪು. ೯೩-೯೪). ಶ್ರೀವಿಜಯನು ' ಪಾರ್ಥಿವಲೋಕನಪ್ಪನ್ ' (=ಕ್ಷತ್ರಿಯ) ಎಂದು ಗ್ರಂಥದಲ್ಲಿಯೇ ಉಲ್ಲೇಖವಿದೆ. (III-೨೨೫). ನೃಪತುಂಗನು ಹೊರ ಒಳ ಹಗೆಗಳನ್ನೆಲ್ಲಾ ಗೆದ್ದು, ಶಾಂತಿಯನ್ನು ನೆಲೆಗೊಳಿಸಿ, ವಿದ್ವತ್ಸಭೆಯನ್ನು ನೆರೆಯಿಸುತ್ತಿದ್ದ ಕಾಲದಲ್ಲಿ ಅವನು ವಿದ್ವತ್‌ಪಕ್ಷಪಾತಿ ಎಂಬ ಕೀರ್ತಿ ನಾಡಿನಲ್ಲಿ ಹರಡಿರಬೇಕು. ಅಂಥ ಶಾಂತಿಕಾಲದಲ್ಲಿ ಶ್ರೀವಿಜಯನು ಮಾನ್ಯಖೇಟ ಪ್ರವೇಶಮಾಡಿರಬೇಕು ಎಂದು ನಮಗೆ ತೋರುತ್ತದೆ. ಎಂದ ಮೇಲೆ, ನೃಪತುಂಗನ ಪುನರುದಯಕ್ಕೆ ಕಾರಣನಾದ ಆ ವ್ಯಕ್ತಿ ಶ್ರೀವಿಜಯನಾಗಿರಲಾರ ಎಂದು ಹೇಳಬೇಕಾಗುತ್ತದೆ. ಅಂತೂ, ಶ್ರೀವಿಜಯನು ಮಾನ್ಯಖೇಟಕ್ಕೆ ಹೊರಗಿನಿಂದ ಬಂದವನು ಎಂಬುದು ನಿಶ್ಚಿತ. ಎಲ್ಲಿಂದ ಬಂದಿರಬಹುದು ?

ಶ್ರೀವಿಜಯನು ಕನ್ನಡನಾಡಿನ ದಕ್ಷಿಣೋತ್ತರ ಸೀಮೆಗಳನ್ನೂ ತಿರುಳ್ಗನ್ನಡ ನಾಡಿನ ಚೌಮೂಲೆಗಳನ್ನೂ ಕನ್ನಡ ಜನರ ನುಡಿಬಲ್ಮೆಯನ್ನೂ ವರ್ಣಿಸಿರುವನಷ್ಟೆ. ಈ ವರ್ಣನಾಪದ್ಯಗಳಲ್ಲಿ ಅಭಿವ್ಯಕ್ತಿ ಪಡೆದಿರುವುದು ಶ್ರೀವಿಜಯನ ನಾಡುನುಡಿಗಳ ಅಭಿಮಾನವೇ ಎಂಬಲ್ಲಿ ಸಂದೇಹವಿಲ್ಲ. ಕನ್ನಡ ನಾಡಿನ ' ತಿರುಳ್ಗನ್ನಡ ' ನಾಡನ್ನು ನಿರ್ದೇಶಿಸಿರುವುದೂ ಅವನ ಅಭಿಮಾನದ ದ್ಯೋತಕವೇ ಸರಿ. ಆದ್ದರಿಂದ, ಅವನು ಈ ತಿರುಳ್ಗನ್ನಡ ನಾಡವನು ಎಂದು ಊಹಿಸಿದರೆ, ಆ ಊಹೆ ಬಹುಶಃ ಗುರಿತಪ್ಪದ್ದು. ಮುಳಿಯ ತಿಮ್ಮಪ್ಪಯ್ಯನವರು ಇನ್ನೂ ಒಂದು ಹೆಜ್ಜೆ ಮುಂದೆಹೋಗಿ, ' ಸದಭಿಸ್ತುತಮಪ್ಪ' ಎಂಬ ' ಒಂಕುಂದ 'ದ ವಿಶೇಷಣಕ್ಕೆ ' ಸಜ್ಜನರಾದ ವಿದ್ವಾಂಸರಿಂದ ಹೊಗಳಲ್ಪಟ್ಟ' ಎಂಬ ಅರ್ಥವಿವರಣೆಕೊಟ್ಟು, ಇಂಥ ವಿಶಿಷ್ಟ ವಿಶೇಷಣ ಉಳಿದ ಮೂರು ಸ್ಥಳಗಳಿಗೆ ಇಲ್ಲವಾದ್ದರಿಂದ, ' ಭಾವನಾತ್ಮಕ ಆಧಾರ'ದ ಮೇಲೆ ಒಂಕುಂದವೇ ಶ್ರೀ ವಿಜಯನ ಹುಟ್ಟೂರು ಎಂದು ಊಹಿಸಿದ್ದಾರೆ. ಹಾಗಿದ್ದಿರಲಾರದು ಎಂದು ಅಲ್ಲಗಳೆಯಲು ಕಾರಣವಿಲ್ಲ.

ನೃಪತುಂಗ ಸಭಾಸದನಾದ ಶ್ರೀ ವಿಜಯನು ಜೈನಮತೀಯನೆಂಬು

ದಕ್ಕೆ ಗ್ರಂಥದಲ್ಲಿ ಹಲವು ಸ್ಪಷ್ಟ ಸೂಚನೆಗಳಿವೆ. ರಾಮಾಯಣ ಕಥೆಗೆ ಸಂಬಂಧಿಸಿದ ಸ್ವನಿರ್ಮಿತ ಲಕ್ಷ್ಯ ಪದ್ಯಗಳಲ್ಲಿ, ಆ ಕಥೆ ಜೈನಸಂಪ್ರದಾಯಕ್ಕೆ ಅನುಗುಣವಾಗಿರಬಹುದೆಂದು ಹೇಳಲವಕಾಶವಿರುವುದರಿಂದ, ಶ್ರೀ ವಿಜಯ ಜೈನನೆನ್ನಲು ಇವು ಪ್ರಮಾಣವನ್ನೊದಗಿಸುತ್ತವೆ. ಕವಿಯ ಜೈನಮತವನ್ನು ಇನ್ನೂ ಕೆಲವು ಲಕ್ಷ್ಯಪದ್ಯಗಳು ಪ್ರಚ್ಛನ್ನವಾಗಿ ಸಾರುತ್ತಿವೆ. ಆ ಪದ್ಯಗಳನ್ನು ಪರಿಶೀಲಿಸಬೇಕು. (ಪದ್ಯಗಳು (I-೩, ೯೧, ೧೦೪, ೧೦೯; II-೧೦೯, ೧೫೨; III-೧೮, ೫೭, ೯೫, ೧೫೭, ೨೨೭). ಉಪಲಬ್ಧವಾಗಿಲ್ಲದ 'ಚಂದ್ರಪ್ರಭ ಪುರಾಣ'ದ ಕರ್ತೃ ಶ್ರೀ ವಿಜಯನೂ ಇವನೇ ಎಂದು ದೃಢಪಟ್ಟಲ್ಲಿ, ಕವಿರಾಜಮಾರ್ಗಕಾರನು ಜೈನ ಎಂಬುದಕ್ಕೆ ಈ ಅಂಶವು ನಿರ್ವಿವಾದವಾದ ಪ್ರಮಾಣವಾಗುತ್ತದೆ. ಒಟ್ಟಿನಲ್ಲಿ ಶ್ರೀ ವಿಜಯನು ಜೈನನೆನ್ನಲು ಅಡ್ಡಿಯಿಲ್ಲ. ಆಶ್ರಯದಾತನಂತೆಯೆ ಆಶ್ರಿತನೂ ಪರಸಮಯಗಳಲ್ಲಿ ಗೌರವವುಳ್ಳ, ಸ್ವಧರ್ಮದಲ್ಲಿ ಅಭಿಮಾನಶಾಲಿಯಾದ, ಉದಾರಭಾವನೆಯ ವ್ಯಕ್ತಿಯಾಗಿದ್ದನೆಂದು ಹೇಳಬಹುದು.

ಕವಿರಾಜಮಾರ್ಗ ಗ್ರಂಥವಿಚಾರ: ಗ್ರಂಥದ ಹೆಸರಿನ ಸಮಸ್ತ ಪದವನ್ನು ನಾವು ಈ ಹಿಂದೆಯೇ ಸೂಚಿಸಿರುವಂತೆ (೧) ಕವಿಗಳ + ರಾಜಮಾರ್ಗ, (೨) ಕವಿರಾಜರ + ಮಾರ್ಗ – ಎಂದು ಬಿಡಿಸಬಹುದಾಗಿರುವುದರ ಜೊತೆಗೆ (೩) ಕವಿರಾಜ(ನ) + ಮಾರ್ಗ ಎಂದೂ ಬಿಡಿಸಬಹುದಾಗಿದೆ. ಗ್ರಂಥವು ಕವೀಶ್ವರ ಕೃತ ಎಂದು ವಾದಿಸುವವರು 'ಕವಿರಾಜ + ಮಾರ್ಗ' ಎಂಬುದು 'ಕವೀಶ್ವರ + ಮಾರ್ಗ'ಕ್ಕೆ ಸಂವಾದಿಯಾಗಿದೆ ಎಂದು, ಗ್ರಂಥದ ಹೆಸರನ್ನು ತಮ್ಮ ವಾದಸಮರ್ಥನೆಗೆ ಬಳಸಿಕೊಂಡಿದ್ದಾರೆ. ಆದರೆ, ಕವೀಶ್ವರ ಪಕ್ಷ ಪ್ರವರ್ತಕರಾದ ಡಾ|| ಫ್ಲೀಟರವರೇ ಗ್ರಂಥದ ಹೆಸರನ್ನು 'The Path of Poets Laureate' ಎಂದು ಇಂಗ್ಲಿಷಿನಲ್ಲಿ ಭಾಷಾಂತರಿಸಿದ್ದಾರೆ. ಕನ್ನಡ ಕವಿಗಳು 'ಕವಿಮಾರ್ಗ,' 'ಕಾವ್ಯಮಾರ್ಗ' ಎಂದು ಉಲ್ಲೇಖಿಸುವುದೇ ಸರ್ವಸಾಮಾನ್ಯವಾಗಿದೆ. ಕವಿರಾಜಮಾರ್ಗದಲ್ಲಿಯೇ ನಿರ್ದಿಷ್ಟವಾದ ಕಾವ್ಯರಚನಾರೀತಿಯನ್ನು 'ಮಾರ್ಗ' ಎಂದು ಉದ್ದಕ್ಕೂ ನಿರ್ದೇಶಿಸಿದೆಯೆ ಹೊರತು ಎಲ್ಲಿಯೂ 'ರಾಜಮಾರ್ಗ'ದ ಉಲ್ಲೇಖವಿಲ್ಲ. ಗ್ರಂಥವನ್ನು ಮೊದಲಿಂದ ಕಡೆಯವರೆಗೆ ಸೂಕ್ಷ್ಮವಾಗಿ

ಪರಿಶೀಲಿಸಿದರೆ, 'ಕವಿವೃಷಭ,' 'ಕವಿಪ್ರಧಾನರಾ ಕಾವ್ಯಂಗಳ್,' 'ಕವೀಶ ಪ್ರಯೋಗ ಪದ್ಧತಿ,' 'ಕವಿ ವೃಷಭರ್ಕಳ್,' 'ಕವೀಶರಾರ್ಪಂತು ಪಿಂಗಿ ಸುಗೆ,' 'ಮಿಗೆ ಪೇೞ್ಗೆ ಕವೀಶ್ವರರ್,' 'ಪರಮ ಕವೀಶಪ್ರಯೋಗಗತ ಮಾರ್ಗಂಗಳ್,' 'ಪೇೞ್ಗೆ ಕವೀಶರ್' ಇತ್ಯಾದಿಯಾಗಿ ಮೇಲಿಂದಮೇಲೆ ಉಕ್ತವಾಗಿರುವುದು ಕಂಡುಬರುತ್ತದೆ. ಇದರಿಂದ, ಶ್ರೀ ವಿಜಯನು 'ಕವೀಶ್ವರರು' ಅಥವಾ 'ಕವಿಶ್ರೇಷ್ಠರು' ಎಂಬರ್ಥದಲ್ಲಿ 'ಕವಿರಾಜ'ರನ್ನು ಉದ್ದೇಶಿಸಿ ತನ್ನ ಲಕ್ಷಣ ಗ್ರಂಥವನ್ನು ಬರೆದಿದ್ದಾನೆನ್ನುವುದು ಸ್ಪಷ್ಟವಾಗಿದೆ. ಕವಿಗಳು ಕವೀಶ್ವರರೆನ್ನಿಸಿಕೊಳ್ಳಬೇಕಾದರೆ 'ಮಾರ್ಗ' ಕಾವ್ಯಗಳನ್ನು ರಚಿಸಬೇಕೆಂಬುದು ಅವನ ಆಶಯ. ಈ "ಗ್ರಂಥವನ್ನು ನಿರ್ಮಿಸಿದುದು ಮಾರ್ಗೀಯ ವಿದ್ವತ್ಕವಿಗಳ ಮಾಸಲಾದ ಪ್ರಯೋಜನಕ್ಕಾಗಿ. ಆ ಮಟ್ಟಕ್ಕೇರದ ಕೆಳಗಿನ ತರಗತಿಯ ದೇಸಿಗಬ್ಬಿಗರನ್ನು ಗುರಿಯಿಟ್ಟು ಇದು ರಚಿತವಾದುದಲ್ಲ," ಎಂಬ ಮುಳಿಯ ತಿಮ್ಮಪ್ಪಯ್ಯನವರ ಮಾತು ಇದೇ ಅಭಿಪ್ರಾಯವನ್ನು ಹೊಂದಿದೆ.

ವಿಷಯವ್ಯಾಪ್ತಿ : ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕವಿರಾಜ ಮಾರ್ಗಕ್ಕೆ ಒಂದು ಮಹತ್ತ್ವದ ಸ್ಥಾನವಿದೆ; ಕನ್ನಡ ಕಾವ್ಯ ಮೀಮಾಂಸೆಯ ಬೆಳವಣಿಗೆಯಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಇವನ್ನು ಎತ್ತಿ ಕಾಣಿಸಿ ತೋರುವುದಕ್ಕೆ, ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯ ವ್ಯಾಪ್ತಿಯ ಸ್ಥೂಲ ಪರಿಚಯ ಅಗತ್ಯ. ಅದನ್ನು ಈ ಕೆಳಗೆ ಸಂಕ್ಷೇಪವಾಗಿ ನಿರ್ದೇಶಿಸಿದೆ :

ಪ್ರಥಮ ಪರಿಚ್ಛೇದ : ದೋಷಾದೋಷಾನುವರ್ಣನ ನಿರ್ಣಯ : (ಕಂಸದಲ್ಲಿರುವುದು ಪದ್ಯ ಸಂಖ್ಯೆ). ಮಂಗಳ ಪದ್ಯಗಳು (೧–೨)—ಸರಸ್ವತೀ ಪ್ರಾರ್ಥನೆ (೩)—ಕವೀಶ್ವರರಲ್ಲಿ ಪ್ರಾರ್ಥನೆ, ನೃಪತುಂಗ ಸಭಾಸದರ ವಿಚಾರ, ಸ್ವವಿಚಾರ (೪–೬)—'ಅಶ್ರುತ ಪ್ರಕೃತಿಜನಸ್ವರೂಪ' ವರ್ಣನೆ, ಪೂರ್ವಕಾವ್ಯಾಭ್ಯಾಸದ ಆವಶ್ಯಕತೆ, ಓದಿನ ಸ್ವರೂಪ (೭–೧೦)—ವಾಗ್ವಿದಗ್ಧತಾ ನಿಪುಣತೆಗೆ ಕಾರಣ (೧೧)—ವಚನ ವಿರಚನೆಯ ಸ್ವರೂಪ (೧೨–೧೩)—ಪರಾನುಕರಣನಿಂದೆ (೧೪)—ಮಾತರಿವವರು, ಅವರಲ್ಲಿ ಕವಿವೃಷಭರ ಸ್ಥಾನ (೧೫–೧೭)—ಕವಿತೆಯ ಕಾರ್ಯ, ಪ್ರಯೋಜನ (೧೮–೨೧)—ಕಾವ್ಯ ಲಕ್ಷಣ; ಕಾವ್ಯ ಶರೀರ ಸ್ವರೂಪ; ಶರೀರಭೇದ: ಗದ್ಯ, ಪದ್ಯ; ಗದ್ಯ ಲಕ್ಷಣ (೨೨–೨೫)—ಸಂಸ್ಕೃತ ಗದ್ಯಕಾವ್ಯಗಳು(೨೬)—(ಕನ್ನಡ)ಗದ್ಯಕಥೆಯ ಲಕ್ಷಣ(೨೭)—

ಕವಿಯ ಯೋಗ್ಯತಾಸಿದ್ಧಿ (೨೮)—ಕನ್ನಡ ಗದ್ಯಕವಿಗಳು (೨೯)—ಪದ್ಯ ಲಕ್ಷಣ (೩೦)—ಸಂಸ್ಕೃತ ಮಹಾಕವಿಗಳು (೩೧)—ಕನ್ನಡ ಪದ್ಯಕವಿಗಳು (೩೨)—ಕನ್ನಡ (ದೇಸಿ) ಕಬ್ಬದ ಪ್ರಕಾರಗಳು: ಚತ್ತಾಣ, ಬೆದಂಡೆ (೩೩); ಅವುಗಳ ಲಕ್ಷಣ (೩೪–೩೫)—ತಿರುಳ್ಗನ್ನಡ ನಾಡು (೩೬–೩೭)—ನಾಡವರ ನುಡಿಜಾಣು (೩೮–೪೦)—ಸಕ್ಕದಪಾಗದಗಳಲ್ಲಿ ಲಕ್ಷ್ಯಲಕ್ಷಣಗಳು, ಕನ್ನಡದಲ್ಲಿ ಅವುಗಳ ಅಭಾವ (೪೧–೪೨)—ಕಾವ್ಯದೋಷ, ದೋಷನಿವಾರಣೆಯ ಆವಶ್ಯಕತೆ (೪೩–೪೫)—ಕನ್ನಡಂಗಳಲ್ಲಿ ದೋಷಕಾರಣಗಳು: ದೇಸಿಯ ಅಸಂಖ್ಯಾತತೆ, ಲಕ್ಷಣಜ್ಞಾನದ ಅಭಾವ, ಹಳಗನ್ನಡದ ಅಪಪ್ರಯೋಗ (೪೬–೫೦)—ಸಮಸಂಸ್ಕೃತಗಳು, ಸಂಸ್ಕೃತಾವಯಗಳು, ಇವುಗಳ ಪ್ರಯೋಗ ಸಂಬಂಧವಾದ ವಿಧಿನಿಷೇಧಗಳು (೫೧–೫೭)—ಸಮಾಸೋಕ್ತಿಗಳಲ್ಲಿ ಸಂಸ್ಕೃತ ಕನ್ನಡ ಮಿಶ್ರಣ ನಿಷೇಧ (ಅರಿಸಮಾಸ ವಿಚಾರ) (೫೮–೬೧)—ನಾಲ್ಕು ಕೃತಿದೋಷಗಳು: ಶ್ರುತದುಷ್ಟ, ಅರ್ಥದುಷ್ಟ, ಶ್ರುತಿಕಷ್ಟ, ಕಲ್ಪನೋಕ್ತಿ ಕಷ್ಟ; ಇವಕ್ಕೆ ಲಕ್ಷ್ಯಗಳು (೬೨–೬೭); ಈ ಸಂಬಂಧದ ಅಪವಾದಸೂತ್ರ (೬೮)—ಇತರ ಕಾವ್ಯದೋಷಗಳು (ಲಕ್ಷಣ ಲಕ್ಷ್ಯಸಮನ್ವಯ ಸಮೇತ): ಯತಿ (೭೦), ಯತಿಭಂಗ (೭೨–೭೪), ಕನ್ನಡದಲ್ಲಿ ಯತಿ ವಿಲಂಘನ ಬಂಧುರತೆ (೭೫–೭೬); ಯತಿನಿಯತತೆ (೭೭); ಅರ್ಥಶೂನ್ಯ (೭೮–೮೦); ವಿರುದ್ಧಾರ್ಥ (೮೧–೮೩); ಪುನರುಕ್ತ (೮೪–೮೫); ಯಾಥಾಸಂಖ್ಯ ಲಕ್ಷಣ (೮೬), ಚ್ಯುತ್ಯಯಾಥಾಸಂಖ್ಯದೋಷ (೮೭–೮೯); ವ್ಯವಹಿತ (೯೦–೯೧); ಛಂದೋಭಂಗ (೯೨–೯೪); ವಿಸಂಧಿ (೯೫–೯೬); ವಿರೂಪಸಂಧಿ (೯೮–೧೦೦); ನೇಯಾರ್ಥ (೧೦೧–೧೦೩); ಸಮಯ, ನ್ಯಾಯ, ಕಲಾ, ಕಾಲ, ಲೋಕ, ದೇಶ,—ವಿರುದ್ಧ ದೋಷಗಳು (೧೦೫–೧೧೦); ವಿರುದ್ಧದೋಷಭೇದಗಳ ಅನಂತತೆ (೧೧೧); ದೋಷನಿವಾರಣೆಯ ಅಗತ್ಯ (೧೧೨)—ಕಾರಕಾದಿ ಇತರ ದೋಷಗಳು (೧೧೩): ಕಾರಕಗಳು, ವಚನಗಳು (೧೧೪); ಕಾರಕಯುಕ್ತ ವಿಭಕ್ತ್ಯನುಕ್ರಮ (೧೧೫); ಕಾರಕ-ದೋಷ, ಅದೋಷ: ಲಕ್ಷ್ಯ (೧೧೬), ಲಕ್ಷ್ಯಲಕ್ಷಣ ಸಮನ್ವಯ (೧೧೭); ವಚನ-ದೋಷ, ಅದೋಷ; ಲಕ್ಷ್ಯ (೧೧೮); ವಚನದೋಷ: ಅಪವಾದ ಸೂತ್ರ; ಜಾತ್ಯೇಕ ವಚನ, ಸಂಖ್ಯೆಯಲ್ಲಿ ಏಕಬಹುತ್ವ ವಿಪರ್ಯಯ; ಏಕಬಹುತ್ವ ವಿಕಲ್ಪ; ಇವಕ್ಕೆ ಲಕ್ಷ್ಯ (೧೧೯–೨೦); ಕಾರಕಸಂಪದವಿರುವಲ್ಲಿ ವಚನದೋಷ ಅಲ್ಪ (೧೨೧); ಏಕಬಹುತ್ವ ವಿಕಲ್ಪದಲ್ಲಿ ಕಾರಕದೋಷಾಭಾವ, ಇದಕ್ಕೆ ಲಕ್ಷ್ಯ (೧೨೨, ೧೨೩, ೧೨೪); ಗುರುಲಘುದೋಷಗಳು (೧೨೬–೧೨೯); ಸಮುಚ್ಚಯ ದೋಷ, ದೋಷಾಭಾವ (೧೩೨–೧೩೩); ವಿಕಲ್ಪದೋಷ, ದೋಷಾಭಾವ (೧೩೫–೧೩೬); ಅವಧಾರಣ ವಿಶಂಕಾ ದೋಷಗಳು (೧೩೮–೧೪೨); ಉಪಮಿತೋಕ್ತಿ ಗುಣಾವಗುಣ (೧೪೩–೧೪೬)—ನೀತಿನಿರಂತರ ನಿರೂಪಣಕ್ರಮ (೧೪೯).

ದ್ವಿತೀಯ ಪರಿಚ್ಛೇದ: ಶಬ್ದಾಲಂಕಾರ ವರ್ಣನನಿರ್ಣಯ: ಅಲಂಕಾರಭೇದ ನಿರ್ದೇಶ (೧–೨) ; ಶಬ್ದಾಲಂಕಾರ ನಿರೂಪಣ ನಿಶ್ಚಯ (೩) ; ಉಚಿತ ಮೃದುಪದ ಪ್ರಯೋಗ ನಿರ್ದೇಶ (೪) ; ಶಬ್ದಾರ್ಥ ಸಾಂಗತ್ಯ ವಿಚಾರ (೫) ; ಹ್ರಸ್ವಾಕ್ಷರಾಂತ ವಾದ ಪದದ ಮುಂದೆ ದೀರ್ಘಾಕ್ಷರಾದಿಯಾದ ಪದದ ಪ್ರಯೋಗದ ನಿಷೇಧ, ಈ ಸಂಬಂಧದ 'ದೂಷ್ಯ' ಪ್ರಯೋಗಕ್ಕೂ 'ಮಾರ್ಗ' ಪ್ರಯೋಗಕ್ಕೂ ಲಕ್ಷ್ಯಗಳು (೬–೮) ; ಕ್ರಿಯಾ ವಿಶೇಷಣ ಪ್ರಯೋಗ ವಿಚಾರ (೯–೧೨) ; ವ್ಯರ್ಥ ಪದಪ್ರಯೋಗ ವಿಚಾರ (೧೩–೧೪) ; ದ್ವಿತೀಯಾ, ಷಷ್ಠೀ, ಸಂಬೋಧನಾ ವಿಭಕ್ತಿ ಪ್ರತ್ಯಯಗಳ ದೀರ್ಘೀಕರಣ (೧೫–೨೪) ; ಯುಕ್ತಪುನರುಕ್ತಿ (೨೫–೨೬), 'ಬಹುವಿಶೇಷಣಗಣ' ಪ್ರಯೋಗ ವಿಚಾರ (೨೭–೨೯) ; ಕನ್ನಡದಲ್ಲಿ ಪ್ರಾಸದ ಅತಿಶಯತೆ, ಆರು ಬಗೆಯ ಪ್ರಾಸಗಳು, ಅವುಗಳಿಗೆ ಲಕ್ಷ್ಯಗಳು (೩೦–೪೫) ; 'ಪೂರ್ವಶಾಸ್ತ್ರಪದವಿಧಿ'ಗೆ ಅನುಗುಣವಾಗಿ, ಸಹಜವಾಗಿ ಅನಂತವಾಗಿರುವ 'ಕವೀಶಪ್ರಯೋಗಗತಮಾರ್ಗಗಳ'ಲ್ಲಿ ಪ್ರಸಿದ್ಧವಾದ ದಕ್ಷಿಣೋತ್ತರ ಮಾರ್ಗನಿರೂಪಣಾ ಪ್ರತಿಜ್ಞೆ (೪೬–೫೩) ; ದಕ್ಷಿಣ ಮಾರ್ಗದ ದಶಭೇದಗಳು, ಅವುಗಳ ವಿಪರ್ಯಯವೃತ್ತಿ ವಿಕಲ್ಪದಿಂದ ಆಗುವ ಉತ್ತರ ಮಾರ್ಗ, ದಕ್ಷಿಣೋತ್ತರ ಮಾರ್ಗಗತಗಳಾದ ದಶ ಬಂಧ-ಗುಣಗಳ ಲಕ್ಷ್ಯ ಲಕ್ಷಣ ಪೂರ್ವಕ ನಿರೂಪಣ (೫೪–೮೬) ; ಉಭಯ ಮಾರ್ಗಗಳಲ್ಲಿ ಓಜೋಗುಣ ಪ್ರಕಾಶನಕ್ಕೆ ಸಾಧಕವಾದ ಸಮಸ್ತಪದ ಪ್ರಯೋಗ ವಿಚಾರ: ಲಕ್ಷ್ಯಲಕ್ಷಣ ಸಮನ್ವಯದೊಂದಿಗೆ (೮೭–೧೧೦); ದುಷ್ಕರ (ಚಿತ್ರ) ಕಾವ್ಯ ಲಕ್ಷ್ಯಭೇದಗಳು (೧೧೧–೧೪೨) ; 'ಹೇಳಿಕೆ'ಯ ಲಕ್ಷ್ಯಭೇದಗಳು (೧೪೩–೧೫೨); ಪರಿಚ್ಛೇದಾಂತ ಉಪಸಂಹಾರಪದ್ಯಗಳು (೧೫೩-೧೫೫).

ತೃತೀಯ ಪರಿಚ್ಛೇದ: ಅರ್ಥಾಲಂಕಾರ ಪ್ರಕರಣ: 'ಪುರಾಣಶಾಸ್ತ್ರೋಕ್ತಂಗಳ್' ಆದ ಅರ್ಥಾಲಂಕಾರ ಭೇದಗಳ ಅನುಕ್ರಮ ನಿರ್ದೇಶ: ಪ್ರತಿಜ್ಞಾ ಪದ್ಯಗಳು (೨–೫) ; (ಲಕ್ಷ್ಯಗಳೊಡನೆ) ಜಾತಿ ರೂಪಕಾದಿ ಅರ್ಥಾಲಂಕಾರಗಳ ನಿರೂಪಣ (೬–೨೦೮) ; ಮಹಾಕಾವ್ಯ ಲಕ್ಷಣ (೨೦೯–೨೧೭) ; 'ಆಶ್ರಿತಮಹಾನೃಪತುಂಗ ಸಭಾಸದ' ಪ್ರಶಂಸೆ (೨೧೮–೨೩೦) ; ಸಮಾಪ್ತಿವಾಕ್ಯ (೨೩೧).

ಮೇಲ್ಕಂಡ ಗ್ರಂಥ ವಿಷಯ ವಿನ್ಯಾಸದ ಚೌಕಟ್ಟಿನಲ್ಲಿ ಗ್ರಂಥದ ಮಹತ್ತ್ವ ಮತ್ತು ವೈಶಿಷ್ಟ್ಯಗಳ ಸ್ವರೂಪವನ್ನು ಈಗ ಗುರುತಿಸಬಹುದು: ಕವಿರಾಜಮಾರ್ಗವು ಆದ್ಯಗ್ರಂಥ, ಆದ್ಯ ಲಕ್ಷಣಗ್ರಂಥ ಎಂಬ ಮಾತು ಈ ಸಂದರ್ಭದಲ್ಲಿ ಮತ್ತೆ ನೆನೆಯತಕ್ಕದ್ದು. ಈ ವಿಶಿಷ್ಟತೆಯಿಂದಾಗಿಯೆ ಅದಕ್ಕೆ ಒಂದು ಐತಿಹಾಸಿಕ ಮಹತ್ತ್ವ ಸಂದಿರುವುದು. ಅದು ದಂಡಿ ಭಾಮಹರ ಲಕ್ಷಣ ಗ್ರಂಥಗಳಿಗೆ ಕಡಹೊತ್ತ ಕೇವಲ ಅನುವಾದ ಗ್ರಂಥವಾಗಿದ್ದಿದ್ದರೆ,

ಆದರ ಈಗಿನ ಬೆಲೆಯ ಬಹುಭಾಗ ಇಲ್ಲವಾಗುತ್ತಿತ್ತು. ಜೊತೆಗೆ, ಅದು ತನ್ನದೇ ಆದ ಸ್ವತಂತ್ರ ದೃಷ್ಟಿ-ಸೃಷ್ಟಿಗಳನ್ನು ನೈಗೂಡಿಸಿಕೊಂಡು ಅವತರಿಸಿರುವುದು ಕನ್ನಡದ ಪುಣ್ಯ.

ಐತಿಹಾಸಿಕ ಮಹತ್ತ್ವ: ಸ್ವತಂತ್ರವೆನ್ನಿಸಿರುವ ಗ್ರಂಥಭಾಗದಲ್ಲಿ, ತತ್ಕಾಲದ ಮತ್ತು ತತ್ಪೂರ್ವದ ಕನ್ನಡ ನಾಡುನುಡಿಗಳ ಸ್ವರೂಪ, ಅಂದಿನ ಮತ್ತು ಹಿಂದಿನ ಸಾಹಿತ್ಯದ ಸ್ಥಿತಿ—ಇವುಗಳ ಸ್ಥೂಲ ಸ್ವರೂಪವನ್ನು ತಿಳಿಸುವ ಕುರುಹುಗಳು ಅಡಕವಾಗಿವೆ. ಕತ್ತಲಿಡಿದ ಸಾಹಿತ್ಯ ಚರಿತ್ರೆಯ ಅಜ್ಞಾತ ಯುಗದಮೇಲೆ ಈ ಗ್ರಂಥಭಾಗ ಬೀರುವ ಬೆಳಕಿನ ಕಿರಣಗಳಲ್ಲಿ ಮುಖ್ಯವಾದವು ಇವು:

೧. ಕನ್ನಡ ಕಾವ್ಯಗಳಲ್ಲಿ ಗದ್ಯಪದ್ಯ ಸಂಮಿಶ್ರಿತವಾದ, ಗದ್ಯ ಪ್ರಾಚುರ್ಯ ಹೆಚ್ಚಾದ, ಚಂಪೂಕಾವ್ಯ ಎನ್ನಬಹುದಾದ, 'ಗದ್ಯಕಥಾ' ಪ್ರಕಾರವೊಂದಿದ್ದಿತು (I-೨೭). ೨. ಚತ್ತಾಣ-ಬೆದಂಡೆ ಎಂಬ ದೇಸಿಗಬ್ಬ ಪ್ರಕಾರಗಳು ರೂಢವಾಗಿದ್ದುವು (I-೩೩); ಬೆದಂಡೆ ಯಕ್ಷಗಾನದ ಅಂದಿನ ರೂಪವಾಗಿದ್ದಿರಬಹುದು. 'ಪಗರಣ' (=ಪ್ರಕರಣ) ಅಂದಿನ ನಗೆನಾಟಕ. 'ವ್ಯಾಕರಣ ಕಾವ್ಯನಾಟಕ' ಪ್ರವೀಣನ ಉಲ್ಲೇಖ (I-೬೮), ನಾಟಕದ ಅಸ್ತಿತ್ವದ ಊಹೆಗೆ ಪೋಷಕ. ೩. ವಿಮಳೋದಯ ನಾಗಾರ್ಜುನಾದಿಗಳು 'ಗದ್ಯಾಶ್ರಮಪದ ಗುರುತಾಪ್ರತೀತಿ' ಯನ್ನು ಕೈಕೊಂಡಿದ್ದಂತೆ, ಶ್ರೀ ವಿಜಯಾದಿಗಳ 'ವಸ್ತುವಿಸ್ತರ ರಚನೆ' ('ವಸ್ತುಪ್ರಧಾನಕಾವ್ಯ' = 'ವಸ್ತುಕ' ಎಂದರೆ ಮಾರ್ಗಕಾವ್ಯ?) 'ಲಕ್ಷ್ಯಂ ತದಾದ್ಯ ಕಾವ್ಯಕ್ಕೆಂದುಂ' ಎನಿಸಿಕೊಂಡಿದ್ದುವು (I-೨೯, ೩೦) (ಈ ಕವಿಗಳ ವಿಚಾರಕ್ಕೆ ಟಿಪ್ಪಣಿಗಳನ್ನು ನೋಡಿ) ೪. ಬಾಣ, ಗುಣಸೂರಿ (ಈತ ಯಾರೋ ತಿಳಿಯದು), ನಾರಾಯಣ ('ಯಶಸ್ತಿಲಕ'ದ ಸೋಮದೇವನು ಸ್ಮರಿಸಿರುವ ಕವಿಯಿರಬಹುದು), ಭಾರವಿ, ಕಾಳಿದಾಸ, ಮಾಘಾದಿ ಸಂಸ್ಕೃತ ಗದ್ಯ ಪದ್ಯ ಕವಿಗಳು ಕನ್ನಡನಾಡಿನ ಪಂಡಿತಲೋಕಕ್ಕೆ ಪರಿಚಿತರಾಗಿದ್ದು, ಕನ್ನಡ ಸಾಹಿತ್ಯದ ಬೆಳವಣಿಗೆಯ ಮೇಲೆ ಪ್ರಭಾವ ಬೀರತೊಡಗಿದ್ದರು. (I-೨೬-೩೧). ೫. ಕನ್ನಡನಾಡಿನ ಜನ 'ಕುಱಿತೋದದೆಯುಂ ಕಾವ್ಯ

ಪ್ರಯೋಗ ಪರಿಣತಮತಿಗಳ್'; 'ತಂತಮ್ಮ ನುಡಿಯೊಳೆಲ್ಲರ್ ಜಾಣರ್'; ಜಾಣರಲ್ಲದವರೂ ಕೂಡ, ಕೃತಿಗಳಲ್ಲಿ 'ಅವಗುಣದಾ ತಾಣಮನಿನಿಸೆಡೆವೆತ್ತೊಡೆ ಮಾಣದೆ ಪಿಡಿದದನೆ ಕೃತಿಗಳಂ ಕೆಡೆನುಡಿವರ್' (I-೩೮, ೩೯, ೪೦): ಇದರಿಂದ, ಕನ್ನಡ ನಾಡವರ ಸಹಜ ಕಾವ್ಯಪ್ರಜ್ಞೆ, ಸಹೃದಯತೆ, ಕಾವ್ಯ ವಿಮರ್ಶನ ಸಾಮರ್ಥ್ಯ ಇವು ವ್ಯಕ್ತಪಡುತ್ತವೆ. ೬. 'ನೆಲಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ ಸತತಂ'ಎಂಬ ಪದ್ಯದ ಮಾತಿನಿಂದ (I-೪೮), ಮುಖ್ಯವಾಗಿ ಗಮನಿಸಬೇಕಾದ ಸಂಗತಿಗಳೆಂದರೆ: (i) ಕನ್ನಡ ಕಾವ್ಯ ಪರಂಪರೆಯೊಂದು ರೂಢಮೂಲವಾಗಿದ್ದಿತು, (ii) ಪೂರ್ವದ ಹಳಗನ್ನಡವೊಂದಿದ್ದಿತು (ಈ ಅಂಶವನ್ನು ಸಮರ್ಥಿಸುವ ಶಬ್ದಪ್ರಯೋಗಗಳೂ ಗ್ರಂಥದಲ್ಲಿವೆ), (iii) ಕನ್ನಡದಲ್ಲಿ ಪ್ರಾಂತಭೇದಗಳೂ ದೇಸಿಗಳೂ ಅನೇಕವಾಗಿದ್ದು, 'ಕನ್ನಡಂಗಳು' ದೋಷಮಯವಾಗಿದ್ದುವು, (iv) 'ಆಗಮಬಲಹೀನರು' (ಕಾವ್ಯಲಕ್ಷಣವನ್ನು ಅರಿಯದವರು) ಕಾವ್ಯರಚನೆಗೆ ಕೈ ಹಾಕುತಿದ್ದರು.

ಈ ಸ್ಪಷ್ಟನಿರ್ದೇಶಗಳ ಜೊತೆಗೆ 'ಪುರಾಣಕವಿಗಳ್', 'ಕವಿವೃಷಭರಾ ಪ್ರಯೋಗಂಗಳಂ', 'ಪೂರ್ವಕಾವ್ಯರಚನೆಗಳಂ', 'ಪರಮಕವಿ ಪ್ರಧಾನರಾ ಕಾವ್ಯಂಗಳ್', 'ಪುರಾಣ ಕಾವ್ಯ ಪ್ರಯೋಗಂಗಳ್', 'ಪುರಾಣ ಕವಿಪ್ರಭುಪ್ರಯೋಗಾವಿಲ ಸದ್ಗುಣೋದಯಮುಂ' ಇತ್ಯಾದಿ ಪ್ರಯೋಗಗಳು ಕವಿರಾಜಮಾರ್ಗಪೂರ್ವ ಕಾವ್ಯನಿರ್ಮಾಣೋದ್ಯೋಗದ ಜಾಡಿನ ಹಜ್ಜೆಗುರುತುಗಳಂತಿವೆ.

ಪ್ರಾಚೀನ ಕನ್ನಡ ಲಕ್ಷಣ ಸಾಹಿತ್ಯದ ಬಗೆಗೆ ಇಂಥದೇ ನಿಸ್ಸಂದಿಗ್ಧ ಸಾಕ್ಷ್ಯ ಗ್ರಂಥದಲ್ಲಿ ದೊರಕದು. ಗದ್ಯ ಕಥೆಯನ್ನು ನಿಗದಿಸುವ 'ಚಿರಂತನಾಚಾರ್ಯರ್ಕಳ್,' ಸಮಸಂಸ್ಕೃತವನ್ನೂ ಕನ್ನಡವನ್ನೂ ಬೆರಸುವಂದು 'ಅಱಿದು ಪೇಟ್ಟಿಗೆ' ಎಂಬ 'ಆಗಮಕೋವಿದ ನಿಗದಿತ ಮಾರ್ಗ,' ಖಂಡಪ್ರಾಸವನ್ನು ಪುರಸ್ಕರಿಸಿ ಯತಿಯನ್ನು ಮೀರಿದ 'ಪೂರ್ವಾಚಾರ್ಯರ್,' 'ಪೂರ್ವಶಾಸ್ತ್ರವಿಧಿ,' 'ಪ್ರಾಕ್ತನೋಕ್ತವರ್ಗಪ್ರಾಸ,' 'ಪುರಾಣಶಾಸ್ತ್ರೋಕ್ತಂಗಳ್' ಇತ್ಯಾದಿ ಉಕ್ತಿಗಳಲ್ಲಿ ಕೆಲವಂತೂ ಕನ್ನಡ ಕಾವ್ಯಲಕ್ಷಣ ಶಾಸಕರಾದ ಪೂರ್ವಾಚಾರ್ಯರು ಇದ್ದಿರಬೇಕೆಂಬುದರ ಕಡೆಗೇ ಕೈದೋರು-

VIJAYA EVENING COLLEGE LIBRARY
BANGALORE-4.

ತ್ತಿವೆ. ಆದರೆ, "ಅವರಿವರನ್ನು ಕೇಳಿಯಾದರೂ ತಿಳಿದು ಕಾವ್ಯಲಕ್ಷಣವನ್ನು ಹೇಳೋಣವೆಂದರೆ, ಸಂಸ್ಕೃತ ಪ್ರಾಕೃತಗಳಲ್ಲಿಯಂತೆ ಲಕ್ಷಣವನ್ನು ಚೆನ್ನಾಗಿ ಬಲ್ಲವರು ಕನ್ನಡದಲ್ಲಿ ಇರಲಿಲ್ಲ. ಕನ್ನಡದ ಓಜರು ಅವರಷ್ಟು ಬಲ್ಲಿದರಾಗಿರಲಿಲ್ಲ" (I-೪೨) ಎಂಬ ಹೇಳಿಕೆಯಿಂದ ಕನ್ನಡ ಕಾವ್ಯ ಲಕ್ಷಣಜ್ಞರೂ ಲಕ್ಷಣಗ್ರಂಥಗಳೂ ಬಹುಶಃ ಇದ್ದಿರಲಿಲ್ಲವೆಂದು ಊಹಿಸ ಬೇಕಾಗುತ್ತದೆ. ಇದ್ದಿರಲಿಲ್ಲವೆಂಬುದೇ ಮುಳಿಯ ತಿಮ್ಮಪ್ಪಯ್ಯನವರ ಸ್ಪಷ್ಟಾಭಿಪ್ರಾಯ. (ಕ. ರಾ. ಮಾ. ವಿವೇಕ-೧, ಪು ೧೧೬) ಮೇಲೆ ಪ್ರಸಕ್ತ ರಾದ 'ಪೂರ್ವಾಚಾರ್ಯರು' ಕೆಲವರು ಸಂಸ್ಕೃತ ಕಾವ್ಯಲಕ್ಷಣವನ್ನು ಬಲ್ಲ ಕನ್ನಡಿಗರೇ ಆಗಿದ್ದು, ಕನ್ನಡ ಕಾವ್ಯಕ್ಕೆ ಅದನ್ನು ಅನ್ವಯಿಸಿ ಹೇಳುವಲ್ಲಿ ಕನ್ನಡಕ್ಕೆ ವಿಶಿಷ್ಟವಾದ ವಿಧಿನಿಷೇಧಗಳನ್ನು ತಿಳಿಸುತ್ತಿದ್ದರೆಂದು ಗ್ರಹಿಸಿದರೆ, ಮೇಲಿನ ಇಬ್ಬಗೆಯ ಉಕ್ತಿಗಳಲ್ಲಿನ ವಿರೋಧಾಭಾಸವು ಪರಿಹಾರವಾಗ ಬಹುದು. ಗುಣದೋಷ, ದಕ್ಷಿಣೋತ್ತರ ಮಾರ್ಗ, ಅಲಂಕಾರ—ಈ ಭಾಗ ಗಳ ಲಕ್ಷಣ ನಿರೂಪಣ ಸಂಬಂಧದಲ್ಲಿ ಪೂರ್ವಶಾಸ್ತ್ರ ಇಲ್ಲವೆ ಪೂರ್ವಾ ಚಾರ್ಯರ ಮಾತು ಬಂದಾಗ(ಉದಾ., I-೭೧, II-೬೨, III-೫) ಸಂಸ್ಕೃತ ಲಾಕ್ಷಣಿಕರೆಂದೇ ಗ್ರಹಿಸಬೇಕು. ಫಲಿತಾರ್ಥವಾಗಿ, ಕವಿರಾಜಮಾರ್ಗ ವನ್ನು ಆಧರಿಸಿ ಅದಕ್ಕಿಂತ ಹಿಂದೆ ಕನ್ನಡ ಕಾವ್ಯಕ್ಕೆ ಸಂಬಂಧಪಟ್ಟಂತೆ ಲಕ್ಷಣ ಗ್ರಂಥವೊಂದು ಇದ್ದಿತೋ ಇಲ್ಲವೋ ಎಂದು ಖಚಿತವಾಗಿ ಹೇಳಲಾಗ ದಿದ್ದರೂ, ಗದ್ಯ ಪದ್ಯ ಕವಿ ಕಾವ್ಯ ಪ್ರಸಕ್ತಿಯಿರುವುದರಿಂದಲೂ ಕನ್ನಡ ಕಾವ್ಯಕ್ಕೆ ವಿಶಿಷ್ಟವಾದ ಕೆಲವು ಲಕ್ಷಣಗಳ ಸಂಬಂಧದಲ್ಲಿ 'ಪೂರ್ವಾ ಚಾರ್ಯ'ರ ಮಾತು ಬಂದಿರುವುದರಿಂದಲೂ ಕನ್ನಡ ಕಾವ್ಯಸಂಬಂಧಿಯಾದ ಲಕ್ಷಣ ಪರಂಪರೆಯೊಂದು ಬೆಳೆಯುತ್ತ ಬಂದಿದ್ದಿರಬೇಕೆಂದು ಊಹಿಸಿದರೆ ತಪ್ಪಾಗದು.

ಕವಿರಾಜಮಾರ್ಗದಲ್ಲಿ ರಾಮಾಯಣ ಕಥೆಗೆ ಸಂಬಂಧಪಟ್ಟ ಕೆಲವು ಲಕ್ಷ್ಯ ಪದ್ಯಗಳಿವೆ. (II-೩೮, ೪೦, ೪೨, ೮೯, ೯೧, ೯೩, ೯೬, ೧೨೪, ೧೨೫, ೧೨೭, ೧೩೦; III-೧೮೯, ೧೯೦, ೧೯೪). ಅವುಗಳಲ್ಲಿ ಜೈನ ರಾಮಾಯಣ ಸಂಪ್ರದಾಯದ ಕುರುಹುಗಳಿವೆಯೆಂದೂ, ಯಾವುದೋ ಪೂರ್ವ ಜೈನ ರಾಮಾಯಣದಿಂದ ಆ ಪದ್ಯಗಳನ್ನು ಕವಿರಾಜ

ಮಾರ್ಗಕಾರನು ಉದ್ಧರಿಸಿರಬೇಕೆಂದೂ ವಿದ್ವಾಂಸರು ಊಹಿಸಿದ್ದಾರೆ. ಈ ಲಕ್ಷ್ಯಪದ್ಯಗಳು ಗ್ರಂಥಕರ್ತನಿಂದಲೇ ರಚಿತವಾದ ಸ್ವತಂತ್ರ ಲಕ್ಷ್ಯಪದ್ಯಗಳೆಂದು ಸ್ಥಾಪಿಸಲು ಪ್ರತ್ಯೇಕ ಲೇಖನದಲ್ಲಿ ಈ ಸಂಪಾದಕನು ಪ್ರಯತ್ನಿಸಿದ್ದಾನೆ. (ನೋಡಿ : 'ಕವಿರಾಜಮಾರ್ಗದಲ್ಲಿನ ರಾಮಾಯಣಪದ್ಯಗಳು'; ಕ. ಸಾ. ಪ. ಪತ್ರಿಕೆ, ಡಿಸೆಂಬರ್ ೧೯೬೬). ಭಾರತಕಥೆ ಹಾಗೂ ರತ್ನಾವಳೀ ನಾಟಿಕೆಯ ಸಂಬಂಧದ ಲಕ್ಷ್ಯ ಪದ್ಯಗಳೂ ಇವೆಯೆಂಬ ಊಹೆಯೂ ಇದೆ. ಹಾಗೆ ಊಹಿಸಲು ಪದ್ಯಗಳಲ್ಲಿ ಪ್ರಮಾಣವಿಲ್ಲ. (II-೧೪, II-೩೬ ಪದ್ಯಗಳ ಟಿಪ್ಪಣಿಗಳನ್ನು ನೋಡಿ). ದಂಡಿಯ ಲಕ್ಷ್ಯಪದ್ಯಗಳ ಅನುವಾದಗಳನ್ನು ಬಿಟ್ಟು, ಉಳಿದೆಲ್ಲ ಲಕ್ಷ್ಯಪದ್ಯಗಳನ್ನೂ ದಂಡಿಯ ಪದ್ಧತಿಯನ್ನೇ ಅನುಸರಿಸಿ ಶ್ರೀವಿಜಯನೇ ಸ್ವತಃ ರಚಿಸಿರುವನೆಂದು ಹೇಳಬಹುದು. ಪದ್ಯದ ಮಟ್ಟಿಗೆ, ಅನ್ಯಕಾವ್ಯಗಳಿಂದ ಅವನು ಲಕ್ಷ್ಯ ಪದ್ಯಗಳನ್ನು ಸ್ವೀಕರಿಸಿದ್ದಾನೆ ಎಂದು ಹೇಳಲು ಸ್ಪಷ್ಟ ಸೂಚನೆ ಗ್ರಂಥದಲ್ಲಿಲ್ಲ. (ಆದರೆ, ಈ ಬಗೆಗೆ ದಿವಂಗತ ಬಿ.ಎಂ.ಶ್ರೀ.ಯವರ ಅಭಿಪ್ರಾಯ ಬೇರೆಯಾಗಿದೆ. ಈ ಅಂಶ ವಿಚಾರಾರ್ಹ)[23] ಆದ್ದರಿಂದ, ಕವಿರಾಜಮಾರ್ಗದ ಲಕ್ಷ್ಯಪದ್ಯಗಳ ಆಧಾರದ ಮೇಲೆ ಅದಕಿಂತಲೂ ಹಿಂದೆ ನಿರ್ದಿಷ್ಟ ಕಾವ್ಯವೊಂದು ಇದ್ದಿತೆಂದು ಹೇಳಲು ಸಾಧ್ಯವಿಲ್ಲ. ದಿವಂಗತ ವೆಂಕಣ್ಣಯ್ಯನವರು ಕವಿರಾಜಮಾರ್ಗಕ್ಕಿಂತಲೂ ಹಿಂದೆ ಬೌದ್ಧರು ಗ್ರಂಥರಚನೆ ಮಾಡಿರಬಹುದೆಂಬ ಊಹೆಯನ್ನು ಮುಂದಿಟ್ಟು, ಕವಿರಾಜಮಾರ್ಗದಲ್ಲಿ ಉಕ್ತರಾದ ವಿಮಲೋದಯ ನಾಗಾರ್ಜುನಾದಿಗಳು ಬೌದ್ಧರಾಗಿದ್ದಿರಬಹುದೇ ಎಂಬ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ. ಈ ಬಗೆಗೆ ನಿಶ್ಚಿತಾಭಿಪ್ರಾಯ ಯಾವುದೂ ಇಲ್ಲ.

ಶ್ರೀ ವಿಜಯನು ಗ್ರಂಥಾರಂಭದಲ್ಲಿ ತಾನು ವ್ಯಾಕರಣದಲ್ಲಿ ಪಂಡಿತ (I-೬) ಎಂದು ಸೂಚಿಸಿರುವುದಲ್ಲದೆ, ಕಾರಕದೋಷ ಇತ್ಯಾದಿ ಕನ್ನಡಕ್ಕೆ ವಿಶಿಷ್ಟಗಳಾದ ವ್ಯಾಕರಣವಿಚಾರಗಳನ್ನು ಪ್ರಸ್ತಾವಿಸಿದ್ದಾನೆ. ಅಕ್ಕರ, ಚೌಪದಿ, ಗೀತಿಕೆ, ತ್ರಿಪದಿ ಮುಂತಾದ ಕನ್ನಡ ಪದ್ಯಜಾತಿಗಳ ಹೆಸರನ್ನು ಹೇಳಿದ್ದಾನೆ. 'ಪೂರ್ವಾಚಾರ್ಯರು' ಯತಿಯನ್ನು ಮಿಕ್ಕ ಸಂದರ್ಭವನ್ನು ಉಲ್ಲೇಖಿಸಿದ್ದಾನೆ. ಇವುಗಳಿಂದ, ಕವಿರಾಜಮಾರ್ಗಕ್ಕಿಂತ ಹಿಂದೆ ಕನ್ನಡದಲ್ಲಿ ಛಂದೋಗ್ರಂಥವೂ ವ್ಯಾಕರಣಗ್ರಂಥವೂ ಇದ್ದುವೆಂದು ಹೇಳಲಾಗ

ದಿದ್ದರೂ ಕನ್ನಡ ಛಂದಸ್ಸಿನ ಸ್ಪಷ್ಟವಾದ ಜಾಡೂ ಕನ್ನಡ ವ್ಯಾಕರಣ ಪದ್ಧತಿಯೂ ಪಂಡಿತ ಮಾನ್ಯವಾಗುವ ಮಟ್ಟಿಗೆ ರೂಪುಗೊಂಡಿದ್ದುವೆಂದು ಹೇಳಲಡ್ಡಿಯಿಲ್ಲ.

ಇದುವರೆಗೆ, ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಕವಿರಾಜಮಾರ್ಗ ಗ್ರಂಥಕ್ಕೆ ಸಂದಿರುವ ಅಥವಾ ಸಲ್ಲಬೇಕಾದ ಐತಿಹಾಸಿಕ ಪ್ರಾಮುಖ್ಯವನ್ನು ಕುರಿತು ನಿರವಿಸಿದ್ದಾಯಿತು. ನೃಪತುಂಗನ ಕಾಲದ ಮತ್ತು ತತ್ಪೂರ್ವದ ಕೆಲವು ಚಾರಿತ್ರಿಕ ಅಂಶಗಳನ್ನು ಗ್ರಂಥದ ಹಲಕೆಲವು ಪದ್ಯಗಳಿಂದ ಊಹಿಸ ಬಹುದಾಗಿದೆ. (ಉದಾ. III , ೧೯೯-೧೩೦, ೧೪೪-೧೫೨). ನಾವು ಈ ಹಿಂದೆ ಚಿತ್ತರಿಸಿದ ಚಾರಿತ್ರಿಕ ಹಿನ್ನೆಲೆಗೆ ಇವು ಪೂರಕವಾದಾವು. ನೃಪ ತುಂಗನ ಕಾಲಕ್ಕೆ ಕರ್ಣಾಟಕ ಸಾಮ್ರಾಜ್ಯವು 'ಕಾವೇರಿಯಿಂದ ಗೋದಾ ವರಿವರಂ' 'ಇರ್ಪ' ನಾಡು ಎಂದಾಗದೆ 'ಇರ್ದ' ನಾಡು ಎಂದೆನ್ನುವ ಮಟ್ಟಿಗೆ ತನ್ನ ಉತ್ತರದ ಸೀಮೆಯಿಂದ ಕೆಳಕ್ಕೆ ಸರಿದಿತ್ತು. 'ತಿರುಳ್ಗನ್ನಡ ನಾಡು', ಬೇರೆ ಬೇರೆ ದೇಸಿಗಳ ಪ್ರಾಚುರ್ಯ, ವಾಸುಕಿಯೂ ಅರಿಯಲಾಗ ದಷ್ಟು ದೋಷಮಯವಾದ 'ಕನ್ನಡಂಗಳ್', ಕನ್ನಡಕ್ಕೆ ಸಂಬಂಧಪಟ್ಟಂತೆ ದಕ್ಷಿಣೋತ್ತರಮಾರ್ಗ ನಿರ್ಣಯ, ಹೊಲಗೆಟ್ಟ 'ಪಟಿಗನ್ನಡ'ದ ಉಲ್ಲೇಖ, ಇವುಗಳ ಆಧಾರದಿಂದ ಅಂದಿನ ಕನ್ನಡ ನುಡಿಯ ಪಾಡು ಒಟ್ಟನಮೇಲೆ ಹದಗೆಟ್ಟಿತ್ತೆಂದು ತಿಳಿಯಬೇಕಾಗಿದೆ. ಕನ್ನಡ ನಾಡವರ ನುಡಿಬಲ್ಮೆಯನ್ನೂ ಸಾಮರ್ಥ್ಯವನ್ನೂ ಕುರಿತು ಶ್ರೀ ವಿಜಯ ಅಭಿಮಾನದ ಮಾತುಗಳನ್ನೆ ಆಡಿದ್ದಾನೆ. (I, ೩೬-೪೨ ; ೪೬ ; ೪೮ ; II, ೧೮೧-೧೧೦). ಆದರೂ, ನಿರ್ದುಷ್ಟ ಭಾಷಾಪ್ರಯೋಗದಿಂದ ಕೂಡಿದ ಅಭಿಜಾತ ಮಾರ್ಗಕಾವ್ಯ ರಚನೆಗೆ ತಕ್ಕ ಲಕ್ಷ್ಯಲಕ್ಷಣ ನಿರ್ದಿಷ್ಟವಾದ 'ಮಾರ್ಗ' ನೇರ್ಪಟ್ಟಿರಲಿಲ್ಲ ವೆಂದು ಕಾಣುತ್ತದೆ. ಅದನ್ನು ಕಲ್ಪಿಸಿದ ಶ್ರೇಯಸ್ಸು ಶ್ರೀ ವಿಜಯನಿಗೂ, ಅವನಿಗೆ ಸ್ಫೂರ್ತಿಯನ್ನೂ ಆಶ್ರಯವನ್ನೂ ಪಾಂಡಿತ್ಯದ ನೆರವನ್ನೂ ನೀಡಿದ ನೃಪತುಂಗನಿಗೂ ಸಲ್ಲುತ್ತದೆ.

ಕವಿರಾಜಮಾರ್ಗ ಕಾವ್ಯವಾಗಿರದೆ ಲಕ್ಷಣಗ್ರಂಥವಾಗಿದ್ದರೂ ಕೂಡ ಕಣ್ಣಿಟ್ಟು ಆರೈದರೆ ಸಮಕಾಲೀನ ಸಮಾಜ ಸ್ವರೂಪದ ಒಂದು ಚಿಕ್ಕ ಇಣಿಕುನೋಟ ಸಿಕ್ಕುತ್ತದೆ. ಆಗಿನ ವರ್ಣಾಶ್ರಮಧರ್ಮ ಪರಿಪಾಲನೆ

(I-೬೫), ಆಗ ರಾಜಮನ್ನಣೆ ಪಡೆದಿದ್ದ ವೈದಿಕ ಜೈನಮತಗಳ ಜೊತೆಗೆ ಸಾಂಖ್ಯ, ಬೌದ್ಧ, ವೈಶೇಷಿಕ, ಚಾರ್ವಾಕ ದರ್ಶನಗಳಿಗೆ ಸಮಾಜದಲ್ಲಿದ್ದ ಸ್ಥಾನಮಾನ, (I-೧೦೫), ಸೈನ್ಯದ ಸ್ವರೂಪ (I-೧೨೦, ೧೩೪), ಇವುಗಳ ಹೊಳಹು ಗ್ರಂಥದಲ್ಲಿದೆ. 'ಗೊರವರ' ಪ್ರಸಕ್ತಿ ಎರಡು ಮೂರು ಕಡೆ (ಉದಾ., I-೪೯, ೧೩೨) ಬಂದಿದೆ. ಸಮಾಜದಲ್ಲಿ ಇವರ ಸ್ಥಾನಮಾನದ ಬಗೆಗೆ ಮುಳಿಯ ತಿಮ್ಮಪ್ಪಯ್ಯನವರ ಸಂಶೋಧನೆಯನ್ನು ಗಮನಿಸಬೇಕು. (ಕ. ರಾ. ಮಾಗ ವಿವೇಕ-೧; ಪು. ೬೧-೬೩). "ಕಸವರಮೆಂಬುದು ಮಿಗೆ ಸೈರಿಸಲಾಪೊರ್ಡೆ ಪರವಿಚಾರಮುಂ ಧರ್ಮಮುಮಂ"ಎಂಬ ಅಂದಿನ ರಾಜಪ್ರಜಾವರ್ಗದ ವಿಶಾಲಭಾವನೆಯ ಹಿರಿಯ ಆದರ್ಶ (III-೧೭೬) ಇಂದಿಗೂ ಅನುಸರಣೀಯ. ಆಗ ಪಂಡಿತವರ್ಗದಲ್ಲಿಯೂ ಜನಸಾಮಾನ್ಯ ದಲ್ಲಿಯೂ ಕನ್ನಡ ಸಕ್ಕದಗಳ ಜೊತೆಗೆ ಪಾಗದ (ಪ್ರಾಕೃತ)ವೂ ಬಳಕೆ ಯಲ್ಲಿದ್ದಂತೆ ಕಾಣುತ್ತದೆ. ಕ್ಷತ್ರಿಯೋಚಿತ ರಾಜೋಚಿತಗಳಾದ ನಡವಳಿಕೆ ಗಳ ಉಲ್ಲೇಖ ಅಲ್ಲಲ್ಲಿ ಬರುತ್ತವೆ; ಇವುಗಳಲ್ಲಿ ಅರಸರು 'ಕಂದುಕಕ್ರೀಡೆ' (= ಈಗಿನ ಪೋಲೋ, ಗಾಲ್ಫ್ ಆಟಗಳಂಥದು ?) ಆಡುತ್ತಿದ್ದರೆಂಬುದು ಗಮನಾರ್ಹ. (I-೪೯). 'ಪೆಗರಣ' ವಿಷಯಕವಾದ ಸ್ವಾರಸ್ಯವಾದ ಪ್ರಸ್ತಾವವೊಂದು ಅಂದು ಜನಸಾಮಾನ್ಯರಲ್ಲಿ ರುಢಿಯಲ್ಲಿದ್ದ ನಗೆನಾಟಕ ವನ್ನೆ ಸೂಚಿಸುತ್ತಿದೆ (I-೬೮). ನೃಪತುಂಗನ ರಾಜ್ಯದಲ್ಲಿ ಕೂಡ 'ಎಡೆ ತುಡಗ' ರ (ದಾರಿಗಳ್ಳರ) ಭೀತಿ ಬುತ್ತಿಗೂಳುಣ್ಣುವ ಪಯಣಿಗರನ್ನು ಬಾಧಿಸುತ್ತಿತ್ತು. ಒಟ್ಟಿನಮೇಲೆ, ಸಾಮಂತರಿಂದ ಆನೆಗಳನ್ನು ಕಾಣಿಕೆ ಯಾಗಿ ಸ್ವೀಕರಿಸುತ್ತ ವೈಭವದಿಂದ ನೆಮ್ಮದಿಯಾಗಿ ರಾಜ್ಯವಾಳುತ್ತಿದ್ದ ನೃಪತುಂಗನ ರಾಜಸಭೆ ಕನ್ನಡ, ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ಕವಿಗಳನ್ನೂ ವಿದ್ವಾಂಸರನ್ನೂ ಆಕರ್ಷಿಸುತ್ತಿದ್ದಿರಬೇಕಾದರೆ, ನೃಪತುಂಗನ ರಾಜ್ಯ ಕವಿರಾಜಮಾರ್ಗ ರಚನೆಯಾದ ವೇಳೆಯಲ್ಲಿ ಶಾಂತಿಸುಭಿಕ್ಷಗಳಿಂದ ಕೂಡಿದ್ದಿರಬೇಕು.

ದಕ್ಷಿಣೋತ್ತರ ಮಾರ್ಗ

ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಕ್ಕೆ ಎಡೆಗೊಟ್ಟಿರುವ ಕವಿರಾಜಮಾರ್ಗ ಸಂಬಂಧಿ ಯಾದ ತೊಡಕಿನ ಪ್ರಶ್ನೆಗಳಲ್ಲಿ ಇದೊಂದು. ಕವಿರಾಜಮಾರ್ಗದಲ್ಲಿ ೨ನೆಯ ಪರಿಚ್ಛೇದ

ದಲ್ಲಿ ಕಾವ್ಯಗುಣಗಳನ್ನು ವಿವರಿಸುವಾಗ ಮಾರ್ಗಕಾರನು ಇದರ ಪ್ರಸ್ತಾವಮಾಡಿದ್ದಾನೆ. ಈ ಪ್ರಕರಣದ ಬಹುಭಾಗವೆಲ್ಲವೂ ದಂಡಿಯ ಕಾವ್ಯಾದರ್ಶದಲ್ಲಿನ ಮಾರ್ಗವಿಭಾಗದಲ್ಲಿ ಪ್ರತಿಪಾದಿತವಾದ ವಿಷಯವನ್ನೇ ಅನುಸರಿಸಿದೆ. ದಂಡಿ ದಕ್ಷಿಣ ಮಾರ್ಗ ಉತ್ತರ ಮಾರ್ಗ ಎಂಬ ಮಾತುಗಳನ್ನು ಕ್ವಚಿತ್ತಾಗಿಯೂ, ಅವಕ್ಕೆ ಪರ್ಯಾಯವಾಗಿ ಅದೇ ಅರ್ಥದಲ್ಲಿ ವೈದರ್ಭಮಾರ್ಗ ಗೌಡಮಾರ್ಗ ಎಂಬ ಮಾತುಗಳನ್ನು ವಿಶೇಷವಾಗಿಯೂ ಬಳಸಿದ್ದಾನೆ. ಈ ಮಾರ್ಗವಿಚಾರದಲ್ಲಿ ಶ್ರೀವಿಜಯನು ದಂಡಿಯನ್ನು ಎಷ್ಟರ ಮಟ್ಟಿಗೆ ಅನುಸರಿಸಿದ್ದಾನೆ ಎಂಬ ಅಂಶವು ೨ನೆಯ ಪರಿಚ್ಛೇದದಲ್ಲಿ ತತ್ಸಂಬಂಧವಾದ ಪದ್ಯಗಳನ್ನೂ ಅವುಗಳ ಮೇಲಿನ ಟಿಪ್ಪಣಿಗಳನ್ನೂ (II–೪೭ ರಿಂದ ೧೦೦) ಪರಿಶೀಲಿಸುವುದರಿಂದ ವ್ಯಕ್ತಪಡುತ್ತದೆ. (ಕಾವ್ಯಾವಲೋಕನದಲ್ಲಿ ನಾಗವರ್ಮನೂ ದಂಡಿಯನ್ನೆ ಅನುಸರಿಸಿ, 'ಕೃತಿಗುಣಂಗಳೀರೈದ'ನ್ನು ಏಳು ಸೂತ್ರಗಳಲ್ಲಿ ನಿರೂಪಿಸಿದ್ದಾನೆ. ಮಾರ್ಗದ್ವಯ ಭೇದವನ್ನು ಉಲ್ಲೇಖಿಸಿದ್ದಾನೆಯೇ ಹೊರತು, ವಿವರಿಸುವ ಗೋಜಿಗೆ ಹೋಗಿಲ್ಲ)." ಶ್ರೀವಿಜಯನು ದಂಡಿಯನ್ನು ಅಕ್ಷರಶಃ ಅನುವಾದಮಾಡಿ ಅಷ್ಟಕ್ಕೇ ವಿಷಯವನ್ನು ಬಿಟ್ಟುಬಿಟ್ಟದ್ದರೆ, ಕನ್ನಡದಲ್ಲಿ ಮಾರ್ಗಭೇದವಿದ್ದಿತೆ ಇಲ್ಲವೆ ಎಂಬ ವಾದಕ್ಕೆ ಅವಕಾಶವಿರುತ್ತಿರಲಿಲ್ಲ. ಶ್ರೀವಿಜಯನು ದಂಡಿಯ ಮಾರ್ಗದ್ವಯ ಲಕ್ಷಣ ನಿರೂಪಣೆಯನ್ನು ಅನುವಾದಿಸುವ ಸಂದರ್ಭದಲ್ಲಿ, ಭಾಮಹನು ಹೇಳುವ ವಕ್ರೋಕ್ತಿ ಸ್ವಭಾವೋಕ್ತಿಗಳೆಂಬ ಉಕ್ತಿರೀತಿಗಳನ್ನು ಗೌಡ ವೈದರ್ಭಮಾರ್ಗಗಳಿಗೆ ಸಮನ್ವಯಿಸಿ (ಗೌಡ=ವಕ್ರ=ಉತ್ತರ; ವೈದರ್ಭ=ಸ್ವಭಾವ=ದಕ್ಷಿಣ) ವಿಷಯವನ್ನು ಜಟಿಲಗೊಳಿಸಿದ್ದಾನೆ. ದಂಡಿಯ ಮಾರ್ಗಭೇದ ಕಲ್ಪನೆಗೆ ಬಂಧಾನುಗತಗಳಾದ ದಶಗುಣಗಳು ಆಧಾರಭೂತ; ಇವು ಶಾಬ್ದಿಕಗಳಾದ್ದರಿಂದ ಈ ಗುಣ-ಮಾರ್ಗ ವಿವೇಚನೆ ಶಬ್ದಾಲಂಕಾರ ಪ್ರಕರಣದಲ್ಲಿ ಸಮಾವೇಶಗೊಂಡಿದೆ. ವಕ್ರೋಕ್ತಿ–ಸ್ವಭಾವೋಕ್ತಿಗಳು ಪ್ರಮುಖವಾಗಿ ಆರ್ಥಿಕಗಳಾಗಿದ್ದು ಅರ್ಥಾಲಂಕಾರಗಳಿಗೆ ಸಂಬಂಧಪಟ್ಟವಾದ್ದರಿಂದ, ದಂಡಿಪ್ರೋಕ್ತವಾದ ಮಾರ್ಗಭೇದ ಕಲ್ಪನೆಗೆ ವಕ್ರೋಕ್ತಿ ಸ್ವಭಾವೋಕ್ತಿ ಪ್ರಕಾರಗಳನ್ನು 'ಕಸಿ' ಕಟ್ಟಲು ಮಾಡಿರುವ ಶ್ರೀವಿಜಯನ ಪ್ರಯತ್ನ ಫಲಕಾರಿಯಾಗಿದೆಯೆಂದು ತೋರುವುದಿಲ್ಲ. ಏಕೆಂದರೆ, ಅವನು ಮಾರ್ಗದ್ವಯಕ್ಕೆ ಕೊಟ್ಟಿರುವ ಲಕ್ಷ್ಯಗಳಲ್ಲಿ ಆ ಉಕ್ತಿ ಪ್ರಕಾರಗಳಿಗೆ ಸಮರ್ಥನೆ ದೊರಕುವುದಿಲ್ಲ.

ಗೌಡ ವೈದರ್ಭಗಳೆಂಬ ಭೇದ ದೇಶನಿಷ್ಠವೆಂಬುದನ್ನು ಮಾರ್ಗಕಾರನು ಬಲ್ಲನು. ಆದ್ದರಿಂದ, ಈ ಮಾರ್ಗಭೇದವನ್ನು ಕನ್ನಡಕ್ಕೆ ಅನ್ವಯಿಸಿ ಹೇಳುವಾಗ ಗೌಡ ವೈದರ್ಭಗಳೆಂಬ ದೇಶವಾಚಕಗಳನ್ನು ಪೂರ್ತಿಯಾಗಿ ಕೈಬಿಟ್ಟು,* ಕೇವಲ ದಕ್ಷಿಣೋತ್ತರ

---

* ನಾಗವರ್ಮನು ಭಾಮಹನನ್ನು ಅನುವಾದಿಸುವಲ್ಲಿ ಈ ಮಾತುಗಳನ್ನು ಉಪಯೋಗಿಸಿದ್ದಾನೆ. (ನೋಡಿ: ಟಿಪ್ಪಣಿ ಪುಟ ೨೦೪)

ಮಾರ್ಗವೆಂದು ಉದ್ದಕ್ಕೂ ಹೆಸರಿಸುತ್ತಾಹೋಗುವಲ್ಲಿ ಔಚಿತ್ಯವನ್ನೆ ತೋರಿದ್ದಾನೆ. ಶ್ರೀವಿಜಯನ ಕಾಲಕ್ಕಾಗಲೇ ಕನ್ನಡ ಭಾಷೆಯ ಹಾಗೂ ಕಾವ್ಯ ಸೃಷ್ಟಿಯ ಮೇಲೆ ಸಂಸ್ಕೃತದ ಪ್ರಭಾವವು ದೇಸಿಗಬ್ಬಗಳನ್ನು ಹಿಂದಿಕ್ಕುವಮಟ್ಟಿಗೆ ಪರಿಣಾಮಗೋಚರ ವಾಗಿದ್ದುದರಿಂದ, ಕಾವ್ಯರಚನೆಯ ಶೈಲಿಗೆ ನಿಕಟವಾಗಿ ಸಂಬಂಧಪಟ್ಟ 'ಗುಣ'ಗಳನ್ನು ಕನ್ನಡಕ್ಕೆ ಅಳವಡಿಸಿ ನಿದರ್ಶನಗೊಳಿಸುವಲ್ಲಿ ಅವನು ವೈಶಿಷ್ಟ್ಯವನ್ನೆ ಮೆರೆದಿದ್ದಾನೆ; ಅವನ ಕಾಲದ ಮತ್ತು ಅವನ ಕಾಲಕ್ಕೆ ಹಿಂದಿನ ಕಾವ್ಯಪ್ರಯೋಗ ಪದ್ಧತಿಯಲ್ಲಿ ಮಾರ್ಗಭೇದಗಣನೆ ಇದ್ದಿತೋ ಇಲ್ಲವೋ, ಅದು ಹೇಗಾದರೂ ಇರಲಿ; ದಂಡಿಯನ್ನನು ಸರಿಸಿ ಬಂಧಾನುಗತ ಗುಣ ನಿರೂಪಣೆ ಮಾಡುವ ಮೂಲಕ ಮುಂದಿನ ಕವಿಗಳಿಗೆ ಅವನು ಕವಿತಾಶೈಲಿಯ 'ಮಾರ್ಗ'ವನ್ನು ಕಲ್ಪಿಸಿದನೆಂಬುದನ್ನು ಒಪ್ಪಿಕೊಳ್ಳಬೇಕು.

ಇನ್ನು, ಕನ್ನಡ ಕಾವ್ಯಪದ್ಧತಿಯಲ್ಲಿ ದಕ್ಷಿಣೋತ್ತರ ಮಾರ್ಗಭೇದ ಇದ್ದಿತೆ ಇಲ್ಲವೆ ಎಂಬುದನ್ನು ಸ್ವಲ್ಪದರಲ್ಲಿ ವಿಚಾರ ಮಾಡಬಹುದು. ದಶ ಗುಣಗಳಿಗೆ ಸಂಬಂಧ ಪಟ್ಟಂತೆ ಮಾರ್ಗಭೇದ ಕಲ್ಪನೆಯ ವಿಷಯದಲ್ಲಿ ಶ್ರೀವಿಜಯನು ಸಂಪೂರ್ಣವಾಗಿ ದಂಡಿಯನ್ನೆ ಅನುಸರಿಸಿದ್ದಾನೆಯಷ್ಟೆ; ಅವನು ಕೊಡುವ ಲಕ್ಷ್ಯಗಳಲ್ಲಿ ಕೆಲವು ದಂಡಿಯ ಲಕ್ಷ್ಯಗಳ ಅನುವಾದಗಳು, ಇನ್ನುಳಿದವು ಸ್ವನಿರ್ಮಿತ; ಯಾವವೂ ಅನ್ಯಕಾವ್ಯಗಳಿಂದ ತೆಗೆದುಕೊಂಡುವಲ್ಲ, ಅನ್ಯಕಾವ್ಯಗಳ ಅಸ್ತಿತ್ವ ಸ್ಥಾಪನೆಗೆ ಆಧಾರಗಳೂ ದೊರಕಿಲ್ಲ. ಹೀಗಿರುವಲ್ಲಿ, ಶ್ರೀವಿಜಯನ ಕಾಲದ ಕನ್ನಡ ಕಾವ್ಯಪದ್ಧತಿಯ ಸ್ವರೂಪವೇ ತಿಳಿಯ ದಿರುವಲ್ಲಿ ಮಾರ್ಗಭೇದ ವಿಚಾರದಲ್ಲಿ ಶ್ರೀವಿಜಯನ ಮಾತನ್ನು ಒರೆಗೆ ಹಚ್ಚಿನೋಡಲು ಅವಕಾಶವೇ ಇಲ್ಲ. ಶ್ರೀವಿಜಯನು ಕನ್ನಡ ಕಾವ್ಯಪದ್ಧತಿಯಲ್ಲಿದ್ದಿರಬಹುದಾದ ಮಾರ್ಗಭೇದವನ್ನು ವಿಶ್ಲೇಷಣ ಮಾಡುತ್ತಿದ್ದಾನೆಂದು ತಿಳಿಯುವುದು ತಪ್ಪಾಗುತ್ತದೆ; ನಾವು ಈ ಹಿಂದೆ ಸೂಚಿಸಿದಂತೆ, ಕನ್ನಡ ಕವಿಗಳಿಗೆ ಅವನು ಮಾರ್ಗವನ್ನು ಹಾಕಿ ತೋರಿಸುತ್ತಿದ್ದಾನೆಂದು ತಿಳಿಯುವುದೇ ಸಾಧು. ಅವನ ಈ ಮಾರ್ಗದ್ವಯ ಕಲ್ಪನೆ ದಂಡಿಯ ಅನುಸರಣೆಯಿಂದ ಸಂಭವಿಸಿರುವ ಒಂದು ಅನೌಚಿತ್ಯ.

ಆದರೆ, ಕನ್ನಡಕ್ಕೆ ಮಾತ್ರ ಸಂಬಂಧಪಟ್ಟಂತೆ ಕೆಲವು ಕ್ರಿಯಾಪದಗಳ ವಿಚಾರ ವಾಗಿ 'ಮಾರ್ಗಕಾರ' ಶ್ರೀವಿಜಯನು ಮಾಡಿರುವ ಮಾರ್ಗವಿವೇಚನೆ 'ಕನ್ನಡ ಕಾವ್ಯ ಮೀಮಾಂಸೆಗೆ ಅವನ ಸ್ವತಂತ್ರವಾದ ಕೊಡುಗೆ' ಎಂದರೆ ತಪ್ಪಾಗದು. (ನೋಡಿ: ಪದ್ಯಗಳು II-೧೦೨ ರಿಂದ ೧೧೦ ಮತ್ತು ಅವುಗಳ ಮೇಲಿನ ಟಿಪ್ಪಣಿ). 'ಸ್ವತಂತ್ರ' ಎಂದದ್ದರಿಂದ ಅವನು ಇಲ್ಲಿ ದಂಡಿಯನ್ನು ಅನುಸರಿಸಿಲ್ಲ ಎಂದಷ್ಟೆ ನಮ್ಮ ಅಭಿಪ್ರಾಯ. ಅವನ ನಿಲುವು ಸಮರ್ಥನೀಯ, ಆದರಣೀಯ, ಎಂದಲ್ಲ.

ಕನ್ನಡ ಮಾರ್ಗಭೇದ ವಿಚಾರದಲ್ಲಿ ಕವಿರಾಜಮಾರ್ಗಕಾರನ ಹೇಳಿಕೆಗಳನ್ನೂ ಭಟ್ಟಾಕಳಂಕನು ಅನ್ ಅಮ್ (ದಕ್ಷಿಣಮಾರ್ಗವಾಚಕ), ನಾನ್ ನಾಮ್ (ಉತ್ತರ ಮಾರ್ಗವಾಚಕ) ಎಂಬ ಸರ್ವನಾಮಗಳು ಮಾರ್ಗಭೇದಕ್ಕೆ ಉದಾಹರಣೆಗಳೆಂದು

ಹೇಳಿರುವುದನ್ನೂ ಆಧಾರವಾಗಿಟ್ಟುಕೊಂಡು ಕನ್ನಡದಲ್ಲಿ ದಕ್ಷಿಣೋತ್ತರಮಾರ್ಗವಿದ್ದಿತೆಂದು ಪ್ರಥಮತಃ ವಾದಿಸಿದವರು ಆರ್. ರಘುನಾಥರಾಯರು. ತೆಲುಗಿನ ಪ್ರಭಾವದಿಂದ ಉತ್ತರ ಮಾರ್ಗವೂ ತಮಿಳಿನ ಪ್ರಭಾವದಿಂದ ದಕ್ಷಿಣ ಮಾರ್ಗವೂ ಉಂಟಾದುವೆಂದು ಅವರ ವಾದ. (ನೋಡಿ: 'ವ್ಯಾಕರಣೋಪನ್ಯಾಸ ಮಂಜರಿ', ಚತುರ್ಥೋಪನ್ಯಾಸ, ಪುಟ ೩೫-೬೬). ಮಾರ್ಗಕಾರನು ಸರ್ವನಾಮಗಳ ವಿಚಾರವನ್ನು ಪ್ರಸ್ತಾವ ಮಾಡದಿರುವುದರಿಂದ, ಅದರ ವಿಚಾರ ನಮಗೆ ಇಲ್ಲಿ ಅಪ್ರಕೃತ. ೧೦೨ನೆಯ ಪದ್ಯದ 'ನೋಟ್ಟಿಪ್ಪೆನ್' ಇತ್ಯಾದಿ ಪ್ರಯೋಗಗಳಲ್ಲಿ 'ಟ'ಕಾರ ಪ್ರಯೋಗವಿರುವುದರಿಂದ, ದಕ್ಷಿಣ ಮಾರ್ಗವು ತಮಿಳಿನ ಪ್ರಭಾವದಿಂದ ಆದುದೆಂದು ರಘುನಾಥರಾಯರ ವಾದ. ಇವರ ವಾದದಲ್ಲಿ ಹುರುಳಿಲ್ಲವೆಂಬ ಅಂಶವನ್ನು ಆರ್. ನರಸಿಂಹಾಚಾರ್ಯರು ಬಹು ಸಮರ್ಥ ರೀತಿಯಲ್ಲಿ ಪ್ರತಿಪಾದಿಸಿರುವುದರಿಂದ[15] ಲೇಖನ ವಿಸ್ತಾರ ಭಯದಿಂದ ನಾವು ಇಲ್ಲಿ ಆ ಪ್ರಕರಣವನ್ನು ಬೆಳಸಲು ಇಚ್ಛಿಸುವುದಿಲ್ಲ. [ನೋಡಿ: (೧) ಆರ್. ನರಸಿಂಹಾಚಾರ್ಯರ ಕವಿಚರಿತ್ರೆ, ಸಂಪುಟ IIರ ಅವತರಣಿಕೆ, ಪುಟ ೨೩-೨೫, ಹಾಗೂ (೨) ಅವರ History of Kannada Language, ಪುಟ ೧೨೧-೧೨೮; (೩) ಕನ್ನಡ ಕೈಪಿಡಿ, ಪ್ರಥಮ ಸಂಪುಟ, ಪುಟ೩೬೩-೩೬೬]. ಶ್ರೀವಿಜಯನು 'ಕನ್ನಡಂಗಳ್' ಉಲ್ಲೇಖಮಾಡಿರುವುದರಿಂದ ಈಗಿನಂತೆ ಆಗಲೂ ಕನ್ನಡ ಭಾಷೆಯಲ್ಲಿ ಪ್ರಾಂತಭೇದಗಳಿದ್ದುವೆಂಬುದನ್ನು ಒಪ್ಪಿಕೊಳ್ಳಬಹುದು. ಶ್ರೀವಿಜಯನು ಕೊಡುವ ಕೇವಲ ಮೂರು ನಾಲ್ಕು ಪದಗಳ ಪ್ರಯೋಗ ರೂಪಗಳಲ್ಲಿನ ವ್ಯತ್ಯಾಸವು ಅಂದಿನ ಕಾವ್ಯಮಾರ್ಗದಲ್ಲಿ ಇದ್ದಿರಬಹುದಾದ ಭೇದಗಳನ್ನು ಗುರುತಿಸಿ ನಿಷ್ಕರ್ಷಿಸಲು ಸಹಾಯಕವಾಗಲಾರದು. ಅಲ್ಲದೆ, ಶ್ರೀವಿಜಯನೇ 'ನೋಟ್ಟಿಪ್ಪೆ' (ನೋಟ್ಟಿಪ್ಪಗ, ೧-೮೯) ಎಂಬ ದಕ್ಷಿಣ ಮಾರ್ಗ ವಾಚಕವನ್ನೂ 'ಸೊಗಯಿಪ್ಪುದಾಯ್ತು' (೨-೨೧೦) ಎಂಬ ಉತ್ತರೋತ್ತರ ವಾಚಕವನ್ನೂ ಪ್ರಯೋಗಿಸಿರುವಲ್ಲಿ, ಅವನ ಭೇದವಾದ ಹೇಗೆ ನಿಂತೀತು? ದಂಡಿಯ ಅಂಧಾನುಕರಣಮಾಡದೆ, ಅವನ ಮಾರ್ಗಭೇದ ಕಲ್ಪನೆಯನ್ನು ಕನ್ನಡಕ್ಕೂ ಅನ್ವಯಿಸಿ ವಿಸ್ತರಿಸುವಲ್ಲಿ ಶ್ರೀವಿಜಯನ ಸ್ವತಂತ್ರದೃಷ್ಟಿಯ ವಿಚಾರ ಪ್ರಯತ್ನವನ್ನು ಮೆಚ್ಚಿಕೊಳ್ಳಬಹುದಾದರೂ ಅದು ಫಲಕಾರಿಯಾಗಿದೆ ಎಂದು ಹೇಳುವಂತಿಲ್ಲ.

ಸ್ವತಂತ್ರದೃಷ್ಟಿ: ಶ್ರೀ ವಿಜಯನು ತನ್ನ ಕವಿರಾಜಮಾರ್ಗದಲ್ಲಿ ಬಹುಮಟ್ಟಿಗೆ ದಂಡಿಯ ಕಾವ್ಯಾದರ್ಶವನ್ನೂ, ಕೆಲವು ವಿಚಾರಗಳಲ್ಲಿ ಭಾಮಹನನ್ನೂ ಅನುಸರಿಸಿರುವುದು ಸುಸ್ಪಷ್ಟವಷ್ಟೆ. ಆದರೂ, ಅವನು ಅವರನ್ನು ಕಣ್ಣುಮುಚ್ಚಿಕೊಂಡು ಅನುಸರಿಸದೆ, ಸಂಸ್ಕೃತ ಕಾವ್ಯ ಲಕ್ಷಣವನ್ನು ಕನ್ನಡದ ಜಾಯಮಾನಕ್ಕೆ ಹೊಂದಿಕೊಳ್ಳುವಂತೆ ಹೇಳುವುದರಲ್ಲಿ ತನ್ನ ಸ್ವತಂತ್ರ ದೃಷ್ಟಿಯನ್ನು ಅಮೋಘವಾಗಿ ಮೆರೆದಿದ್ದಾನೆ; ತನ್ನ

ವೈಶಿಷ್ಟ್ಯವನ್ನು ಪ್ರಸ್ಥಾಪಿಸಿದ್ದಾನೆ. ಕಾವ್ಯದೋಷಗಳ ವಿಚಾರವನ್ನು ದಂಡಿ ಕಾವ್ಯಾದರ್ಶದ ಮೂರನೆಯ (ಕಡೆಯ) ಪರಿಚ್ಛೇದದಲ್ಲಿ ಕಿಂಚಿತ್ ಸ್ಪರ್ಶಮಾಡಿದ್ದಾನೆ; ಭಾಮಹನು ಕಾವ್ಯಾಲಂಕಾರದ ನಾಲ್ಕನೆಯ ಅಧ್ಯಾಯದಲ್ಲಿ ಅದನ್ನು ವಿಸ್ತಾರವಾಗಿಯೇ ವಿವೇಚಿಸಿದ್ದಾನೆ. ಶ್ರೀವಿಜಯನು ಈ ವಿಚಾರದಲ್ಲಿ ಭಾಮಹನನ್ನೆ ಅನುಸರಿಸಿದ್ದರೂ, ದೋಷಪ್ರಕರಣವನ್ನು ಕಡೆಗೆ ಇಟ್ಟುಕೊಳ್ಳದೆ ಗ್ರಂಥಾರಂಭದಲ್ಲಿಯೇ ಎತ್ತಿಕೊಂಡು ವಿಶೇಷ ಔಚಿತ್ಯವನ್ನು ತೋರಿಸಿದ್ದಾನೆ; ಮಾತ್ರವಲ್ಲ, ಕಾವ್ಯಮೀಮಾಂಸೆಯಲ್ಲಿ ದೋಷವರ್ಜನ ಪ್ರಕರಣಕ್ಕೆ ಇರುವ ಪ್ರಾಮುಖ್ಯವನ್ನು ಆ ಮೂಲಕ ಪ್ರಕಟ ಪಡಿಸಿದ್ದಾನೆ. ಇದಕ್ಕೆ ಇನ್ನೊಂದು ಕಾರಣವೂ ಇದ್ದಿತು: ಅವನ ಕಾಲಕ್ಕೆ ದೇಶೀ ಬೇರೆಬೇರೆಯಾಗಿದ್ದು, ಕನ್ನಡಂಗಳಲ್ಲಿ ವಾಸುಕಿಯುೂ ಅರಿಯಲಾರದೆ ಬೇಸರಿಸುವಮಟ್ಟಿಗೆ ದೋಷಗಳು ತುಂಬಿಕೊಂಡಿದ್ದುವು; ಸಂಸ್ಕೃತ ಪ್ರಾಕೃತ ಗಳಲ್ಲಿದ್ದಂತೆ ಕನ್ನಡಕ್ಕೆ ಲಕ್ಷ್ಯಲಕ್ಷಣಗಳಿರಲಿಲ್ಲ; ನೆಲಸಿದ್ದ ದೇಸಿಗಬ್ಬ 'ಮಾರ್ಗಕಾವ್ಯ'ಕ್ಕೆ ಮೇಲ್ಪಂಕ್ತಿಯಾಗುವಂತಿರಲಿಲ್ಲ. ಇಂತಹ ಪರಿಸ್ಥಿತಿ ಯಲ್ಲಿ, ಕನ್ನಡದಲ್ಲಿ ಕಾವ್ಯನಿರ್ಮಾಣಕ್ಕೆ ಹೆದ್ದಾರಿಯನ್ನು ಹಾಕಬೇಕೆಂಬ ಘನೋದ್ದೇಶದಿಂದ ಶ್ರೀ ವಿಜಯನು 'ಪುರಾಣ ಕವಿಗಳ ಸಂತತಗತ ಮಾರ್ಗಗದಿತ ದೋಷಂಗಳುಮಂ, ಚಿಂತಿಸಿ ಮತ್ತೆನ್ನಱವುದುಮಂ ಕೆಲವಂ ಪೇೞ್ವೆಂ' ಎಂದು ನಿಶ್ಚಯಿಸಿ, ದೋಷಪ್ರಕರಣಕ್ಕೆ ಆದ್ಯತೆಯನ್ನೂ ಅಗ್ರ ಮಾನ್ಯತೆಯನ್ನೂ ಕೊಟ್ಟು, ಅದನ್ನು ವಿಸ್ತಾರವಾಗಿ ಪ್ರತಿಪಾದಿಸಿರುವುದು ಕನ್ನಡ ಕಾವ್ಯಮೀಮಾಂಸೆಯ ಬೆಳವಣಿಗೆಗೆ, ಕನ್ನಡ ವ್ಯಾಕರಣ ನಿರ್ಮಾ-ಣಕ್ಕೆ, ನಿರ್ದುಷ್ಟ ಕನ್ನಡ ಕಾವ್ಯನಿರ್ಮಿತಿಗೆ, ಅವನು ಹಾಕಿದ ಭದ್ರವಾದ ಅಡಿಪಾಯ. ಅವನ ದೃಷ್ಟಿಯಲ್ಲಿ ದೂಷ್ಯವಲ್ಲದ್ದೆ ಮಾರ್ಗ. ಲಕ್ಷ್ಯ ಸಮೇತ ದೋಷಗಳನ್ನು ವಿವರಿಸಿಯಾದಮೇಲೆ 'ಅದೋಷ' ಲಕ್ಷ್ಯಗಳನ್ನು ಕೊಟ್ಟು ದೋಷಾದೋಷ ನಿರ್ಣಯಮಾಡಿರುವುದು ವಿಷಯ ವಿಶದೀಕರ ಣಕ್ಕೆ ವಿಶೇಷ ಸಹಾಯಕವಾಗಿದೆ. ಅದರಲ್ಲಿಯೂ, ಕನ್ನಡಕ್ಕೆ ಸಂಬಂಧ ಪಟ್ಟಂತೆ (೧) ಸಮಸಂಸ್ಕೃತ ಪದಗಳನ್ನು ಕನ್ನಡದೊಂದಿಗೆ ಬೆರಸುವ ವಿಚಾರ (I, ೫೧-೫೭); (೨) ಶ್ರುತದುಷ್ಟ ಅರ್ಥದುಷ್ಟ ಶ್ರುತಿಕಷ್ಟ ಕಲ್ಪನೋಕ್ತಿ ಕಷ್ಟ—ಈ ದೋಷಗಳನ್ನು ತಕ್ಕ ಕನ್ನಡ ಲಕ್ಷ್ಯಗಳಿಂದ ವಿಶದ

ಪಡಿಸಿರುವುದು (I, ೬೩-೬೬) ; ಮತ್ತು ಈ ದೋಷಗಳಿಗೆ ‘ ಪಗರಣ ’ದಲ್ಲಿ ಅವಕಾಶವಿತ್ತಿರುವುದು ; (೩) ಯತಿಭಂಗವನ್ನು ಸಮರ್ಥಿಸಿ, ಕನ್ನಡಕ್ಕೆ ಅತಿಶಯವಾದ ಖಂಡಪ್ರಾಸವನ್ನು ಎತ್ತಿ ಹಿಡಿದಿರುವುದು (I, ೭೫) ; (೪) ವಿಸಂಧಿ ದೋಷವನ್ನು ನಿಷೇಧಿಸುವ ಸಂದರ್ಭದಲ್ಲಿಯೇ ‘ ಸಂಧಿಗಳುಂ ಕೆಲವೆಡೆಯೊಳ್ ವಿರೂಪಂಗಳಾಗಿ ಸಮನಿಸಿ ’ ಹೇಗೆ ಕವಿತೆಗೆ ಕುಂದನ್ನು ತರುತ್ತದೆ ಎಂಬುದನ್ನು ಸ್ಪಷ್ಟಪಡಿಸಿರುವುದು (I, ೯೮-೯೮) ; (೫) ಕನ್ನಡದಲ್ಲಿ ಕಾರಕದೋಷ ಹೇಗೆ ಸಂಭವಿಸಬಹುದೆಂಬುದನ್ನು ತಕ್ಕ ಉದಾಹರಣಗಳಿಂದ ಸ್ಪಷ್ಟಪಡಿಸಿರುವುದು (I, ೧೧೬-೧೧೭) ; (೬) ಕನ್ನಡದಲ್ಲಿ ಜಾತ್ಯೇಕವಚನದ ವೈಶಿಷ್ಟ್ಯವನ್ನು ಗುರುತಿಸಿರುವುದು (I-೧೨೦) ; (೭) ಸಮುಚ್ಚಯ ಪ್ರಯೋಗದಲ್ಲಿ ಸಂಭವಿಸುವ ದೋಷದ ವಿವರಣೆ (I-೧೨೧) ; (೮) ಅವಧಾರಣೆ, ವಿಶಂಕೆ—ಇವುಗಳಲ್ಲಿ ಕೇವಲ ಅಲ್ಪ ಪ್ರಮಾದದಿಂದ ತೋರುವ ಅರ್ಥವೈಪರೀತ್ಯ—ಈ ಪ್ರಮುಖದೋಷಗಳನ್ನು ಶ್ರೀ ವಿಜಯನು ವಿವರಿಸಿರುವ ರೀತಿ ಕನ್ನಡ ಕಾವ್ಯರಚನೆಯಲ್ಲಿ—ಕೆಲವಂಶಗಳಲ್ಲಿಯಾದರೂ—ಇಂದಿಗೂ ಕವಿಜನಕ್ಕೆ ಮಾರ್ಗದರ್ಶಕವಾಗಬಲ್ಲದು ಎಂದರೆ ಅತಿಶಯೋಕ್ತಿಯಾಗಲಾರದು. ವ್ಯಾಕರಣಕ್ಕೂ ಕಾವ್ಯಮೀಮಾಂಸೆಗೂ ಸಂಬಂಧವಿಲ್ಲದೆ ಇಲ್ಲ ಎಂಬ ಅಂಶ ವಿಶದಪಡುವುದು ಈ ಪ್ರಕರಣದಲ್ಲಿ; ನಾಗವರ್ಮನ ‘ ಶಬ್ದಸ್ಮೃತಿ ’ ವಿಭಾಗ ರಚನೆಗೆ ಈ ಪ್ರಕರಣದಿಂದ ಸ್ಫೂರ್ತಿಯೊದಗಿದ್ದರೆ ಆಶ್ಚರ್ಯವಿಲ್ಲ ದೋಷಪ್ರಕರಣದ ಈ ವಿಚಾರಗಳನ್ನು ನಾಗವರ್ಮನು ಕೂಡ ಇಷ್ಟು ವ್ಯಾಪಕವಾಗಿ, ಖಚಿತವಾಗಿ, ನಿರೂಪಿಸಿಲ್ಲ; ಸಂಸ್ಕೃತ ಲಾಕ್ಷಣಿಕರನ್ನು ಅನುವಾದಿಸುವಷ್ಟರಿಂದಲೇ ಅವನು ತೃಪ್ತನಾಗಿದ್ದಾನೆ. ಇದರಿಂದ. ಕನ್ನಡ ಕಾವ್ಯಮೀಮಾಂಸೆಗೆ ಶ್ರೀವಿಜಯನ ಕೊಡುಗೆಯ ಮಹತ್ತ್ವವೇನೆಂಬುದರ ಅರಿವು ಉಂಟಾಗಬಹುದು. ನಮ್ಮ ಅಭಿಪ್ರಾಯದಲ್ಲಿ, ಕವಿರಾಜಮಾರ್ಗದಲ್ಲಿ ಶ್ರೀವಿಜಯನ ಪ್ರತಿಭೆ ಬೆಳಗಿರುವುದು ಪ್ರಥಮ ಪರಿಚ್ಛೇದದಲ್ಲಿ—ಅದರಲ್ಲಿ ವಿಶೇಷವಾಗಿ ಈ ದೋಷಾದೋಷ ವಿಚಾರ ವಿಮರ್ಶೆಯಲ್ಲಿ; ಅವನ ಸ್ವೋಪಜ್ಞತೆ, ಸ್ವತಂತ್ರ ವಿಚಾರಧಾರೆ, ಮೆರೆದಿರುವುದು ಇಲ್ಲಿ; ಕನ್ನಡದ ಜೀವನಾಡಿಯನ್ನು ಹಿಡಿದು, ತನ್ನ ಭಾಷಾಭೈಷಜವನ್ನು ಪ್ರಯೋಗಿಸಿರುವುದು ಇಲ್ಲಿ. ಕನ್ನಡದ ಆರೋಗ್ಯವನ್ನು

ಕಾಪಾಡುವುದಕ್ಕೆ ಕವಿರಾಜಮಾರ್ಗದ ಮಾರ್ಗದರ್ಶನ ಇಂದಿಗೂ ಊರ್ಜಿತ ಎಂದು ವ್ಯಕ್ತಪಡುವುದು ಇಲ್ಲಿ. ಈ ಪ್ರಕರಣ ಚಿರಂತನ ಮೌಲ್ಯವುಳ್ಳದ್ದು — ಕಣ್ಣಿಟ್ಟು ವ್ಯಾಸಂಗಮಾಡಿ, ಪ್ರಯೋಜನವನ್ನು ಪಡೆಯಬಯಸುವವರಿಗೆ.

ಇಷ್ಟು ಹೇಳಿದ್ದರಿಂದ, ಗ್ರಂಥದ ಉಳಿದೆರಡು ಪರಿಚ್ಛೇದಗಳಲ್ಲಿ ಶ್ರೀವಿಜಯನು ತನ್ನತನವನ್ನು ಮೆರೆದಿಲ್ಲ ಎಂದು ತಿಳಿಯಬಾರದು. ಶಬ್ದಾಲಂಕಾರ ನಿರೂಪಣೆಗೆ ಮೀಸಲಾದ ಎರಡನೆಯ ಪರಿಚ್ಛೇದದಲ್ಲಿ, ಮಾರ್ಗ ಭೇದನಿರೂಪಣೆಯ ಪ್ರಕರಣದಲ್ಲಿ ಅವನ ಸ್ವತಂತ್ರ ವಿಚಾರ ವಿಮರ್ಶೆಯನ್ನು ಇದೇ ತಾನೆ ಗಮನಿಸಿದ್ದಾಗಿದೆ. ಮಾರ್ಗದ್ವಯಾನುಸಾರವಾಗಿ ಗುಣ ನಿರೂಪಣೆಯನ್ನು ಮಾಡಿದ ಮೇಲೆ, ಗುಣಗಳಿಗೆ ರಸ-ಪರತ್ವವನ್ನು ಹೇಳಿರುವುದು ಶ್ರೀವಿಜಯನ ಸ್ವತಂತ್ರ ಕಲ್ಪನೆ ಎಂಬುದು ಗಮನಾರ್ಹ. (ನೋಡಿ : II, ೯೮, ೯೯–೧೦೦ ಮತ್ತು ಇವುಗಳ ಮೇಲಿನ ಟಿಪ್ಪಣಿಗಳು). 'ನುತಶಬ್ದಾಲಂಕಾರದೊಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ' ಎಂದು ಹೇಳಿ, ಕನ್ನಡ ಕೃತಿವಧುವಿನ ಲಾಸ್ಯಲಯದ ಗುಟ್ಟನ್ನೇ ಅವನು ಬಯಲು ಮಾಡಿದ್ದಾನೆ. ಅರ್ಥಾಲಂಕಾರ ಪ್ರಕರಣದಲ್ಲಿ (ಮೂರನೆಯ ಪರಿಚ್ಛೇದ), ಶ್ರೀವಿಜಯನ ಲಕ್ಷಣ ನಿರೂಪಣೆ ಬಹುಮಟ್ಟಿಗೆ ದಂಡಿಭಾಮಹರನ್ನೇ ಅನುಸರಿಸಿದ್ದರೂ ಅಲ್ಲೊಮ್ಮೆ ಇಲ್ಲೊಮ್ಮೆ ಅವನ ಸ್ವತಂತ್ರ ವಿಚಾರ ಕಿರಣ ಹೊಸಬೆಳಕನ್ನು ಬೀರದಿಲ್ಲ. 'ಆಕ್ಷೇಪಾಲಂಕಾರ' ವನ್ನು ಕುರಿತು 'ವ್ಯತಿರೇಕವಿಕಲ್ಪಮಿದು' ಎಂದು ಹೇಳಿರುವುದೂ, ನಿದರ್ಶನಾ-ಲಂಕಾರದ ಒಂದು ಪ್ರಭೇದ ದೃಷ್ಟಾಂತ ಎಂದು ಹೇಳಿ ದೃಷ್ಟಾಂತಾ-ಲಂಕಾರಕ್ಕೆ ಪ್ರಥಮತಃ ಕಾವ್ಯಮೀಮಾಂಸೆಯಲ್ಲಿ ಒಂದು ಸ್ಥಾನವನ್ನು ಕಲ್ಪಿಸಿ ಕನ್ನಡ ಕಾವ್ಯಕನ್ನಿಕೆಯ ಅಲಂಕಾರಕಂಠಿಕೆಗೆ ನಾಯಕಮಣಿಯನ್ನು ಪವಣಿಸಿರುವುದೂ (ನೋಡಿ : ಪದ್ಯ ೧೫೩ ಮತ್ತು ೧೪೩ನೆಯ ಪದ್ಯದ ಟಿಪ್ಪಣಿ), ರಸವದಲಂಕಾರವನ್ನು ನಿರೂಪಿಸುವಾಗ ದಂಡಿಭಾಮಹರು ಹೇಳಿಲ್ಲದ ಶಾಂತರಸವನ್ನು ಹೆಸರಿಸಿ ಅದಕ್ಕೆ ಲಕ್ಷ್ಯವನ್ನು ಕೊಟ್ಟಿರುವುದೂ, ದಂಡಿ ಹೇಳಿರುವ ೩೫ ಅಲಂಕಾರಗಳ ಮಾಲೆಗೆ ೩೬ನೆಯದಾಗಿ 'ಧ್ವನ್ಯ-ಲಂಕಾರ'ವನ್ನು ಸೇರಿಸುವುದರ ಮೂಲಕ ಕನ್ನಡ ಕಾವ್ಯಮೀಮಾಂಸೆಯಲ್ಲಿ

ಧ್ವನಿತತ್ತ್ವದ ಆದ್ಯ ಪ್ರವರ್ತಕನೆನಿಸಿರುವುದೂ, ಕಾವ್ಯತತ್ತ್ವ ನಿರೂಪಣೆಯಲ್ಲಿ ಶ್ರೀವಿಜಯನು ಸಂಸ್ಕೃತ ಲಾಕ್ಷಣಿಕರನ್ನು 'ಮಕ್ಕಿಕಾಮಕ್ಕಿ' ಅನುಸರಿಸದೆ ಸ್ವಂತ ವ್ಯಕ್ತಿತ್ವವನ್ನು ತೋರ್ಪಡಿಸಿದ್ದಾನೆ ಎನ್ನಲು ಸಾಕ್ಷ್ಯಗಳಾಗಿವೆ. ಇಷ್ಟು ಮಾತ್ರವಲ್ಲ. ದೋಷಪ್ರಕರಣದಲ್ಲಿ ಹೇಗೋ ಹಾಗೆ ಅಲಂಕಾರ ಪ್ರಕರಣಗಳಲ್ಲಿಯೂ ಅವನು ಚೆಲುವಾದ ಅನೇಕ ಲಕ್ಷ್ಯಪದ್ಯಗಳನ್ನು ಸ್ವಂತವಾಗಿ ವಿರಚಿಸಿ, ಕನ್ನಡ ಅಲಂಕಾರ ಶಾಸ್ತ್ರಕ್ಕೂ ಕಾವ್ಯಪ್ರಪಂಚಕ್ಕೂ ಮೊದಲ ಕಾಣಿಕೆಯನ್ನು ಸಲ್ಲಿಸಿದ್ದಾನೆ. ಇಂತು, ಶ್ರೀವಿಜಯನು ತನ್ನನ್ನು 'ಲಕ್ಷಣಲಕ್ಷ್ಯನ್' ಎಂದು ಕರೆದುಕೊಂಡಿರುವುದು (III-೨೧೯) ಸಾರ್ಥಕವೆನಿಸಿದೆ. ಕನ್ನಡ ಸಾಹಿತ್ಯ ಲೋಕದಲ್ಲಿ ನಾಗವರ್ಮನ ಕಾವ್ಯಾವಲೋಕನವು ರಚಿತವಾಗುವವರೆಗೆ ಸುಮಾರು ಮೂರು ಶತಮಾನಗಳ ಕಾಲ ಕವಿರಾಜಮಾರ್ಗದ ಲಕ್ಷಣಭಾಗ ಕವಿಜನದ 'ಕನ್ನಡಿ'ಯೂ ಲಕ್ಷ್ಯಭಾಗ 'ಕೈದೀವಿಗೆ'ಯೂ ಆಗಿ ಪ್ರಭಾವ ಬೀರಿವೆ.

ಗ್ರಂಥಮಹಿಮೆ: ಕವಿರಾಜಮಾರ್ಗವು ಪ್ರಮುಖವಾಗಿ ಒಂದು ಶಾಸ್ತ್ರಗ್ರಂಥ. ಇಂಥದರಲ್ಲಿ ನಿತಾಂತವಾದ ಅರ್ಥರಮಣೀಯತೆ, ಭಾವಪುಷ್ಟಿ, ರಸಪ್ರತೀತಿ ಮುಂತಾದ ಕಾವ್ಯಲಕ್ಷಣಗಳನ್ನು ನಿರೀಕ್ಷಿಸುವುದು ತಪ್ಪು. ನಾಗವರ್ಮನ ಕಾಲಕ್ಕಾದರೆ ಉತ್ತಮ ಕಾವ್ಯರಾಶಿ ಸೃಷ್ಟಿಯಾಗಿತ್ತು; ಲಕ್ಷಣಗಳಿಗೆ ಅನ್ಯಕಾವ್ಯಗಳಿಂದ ಲಕ್ಷ್ಯಗಳನ್ನು ಎತ್ತಿಕೊಡುವುದು ಅವನಿಗೆ ಸಾಧ್ಯವಾಯಿತು. ಶ್ರೀವಿಜಯನಿಗೆ ಆ ಸದವಕಾಶವಿರಲಿಲ್ಲ. ಅವನು ದಂಡಿಭಾಮಹರ ಲಕ್ಷ್ಯಗಳನ್ನೇ ಅನುವಾದಿಕೊಳ್ಳಬೇಕಾದ್ದು ಅನಿವಾರ್ಯವಾಯಿತು; ಆದರೂ, ಈ ಹಿಂದೆಯೇ ಸೂಚಿಸಿರುವಂತೆ, ಅನೇಕ ಸಂದರ್ಭಗಳಲ್ಲಿ ಅವನು ಸ್ವಂತ ಲಕ್ಷ್ಯಪದ್ಯಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಅನೇಕ ಪದ್ಯಗಳು ಪಂಪನ ಶೈಲಿಯ ಮುನ್ಸವಿಯನ್ನು ನಮಗೆ ನೀಡುತ್ತಿವೆ. 'ಕಲ್ತೊಡನೋದುವುವಲ್ತೆ ಗಿಳಿಗಳುಂ ಪುರುಳಿಗಳುಂ', 'ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯಂ', 'ಒತ್ತುಂಗರಡೆಯ ಮದ್ದಳೆಯ ಜರ್ಝರ ಧ್ವನಿಗಳವೋಲ್', 'ಮುಱುಗುವ ಪಾಲ್ಗಳೆಯ ಪನಿಗಳಂ ಬೆರಸಿದವೋಲ್', 'ಕೇಡಡಸಿದಂದು ಬಗೆಯುಂ ಕೂಡದು', 'ತಲೆಯುಂ ಕಿರಿಯಿಸಿ ದಿವಸಮನಲಸದೆ ಬೆಸಗೊಳ್ವನಂತು ಗಾವಿಲನಕ್ಕುಂ',

‘ಕಸವರನೆಂಬುದು ನೆಱೆ ಸೈರಿಸಲಾರ್ಪೊಡೆ ಪರವಿಚಾರಮುಂ ಧರ್ಮಮುಮಂ’ ಎಂಬಿವೇ ಮುಂತಾದ ಲೋಕಾನುಭವಪೂರ್ಣವಾದ ಕವಿಯ ದೃಷ್ಟಾಂತವಾಕ್ಯಗಳೂ ಹೋಲಿಕೆಗಳೂ ಶಾಸ್ತ್ರಮಾರ್ಗದ ದೀರ್ಘಪ್ರಯಾಣದಲ್ಲಿ ಅಲ್ಲಲ್ಲಿ ಕಣ್ಣಿಗೆ ಬೀಳುವ ಕಮಲಾಕರಗಳಂತೆ ಬೇಸರನ್ನು ನೀಗುತ್ತವೆ. ಕವಿರಾಜಮಾರ್ಗಕ್ಕೂ ಹಿಂದೆ ಶಾಸನಗಳಲ್ಲಿ ಮಾತ್ರ ಪ್ರಯೋಗವಾಗಿರುವ ಪೂರ್ವದ ಹಳಗನ್ನಡ ಎನ್ನಬಹುದಾದ ಕೆಲವು ಶಬ್ದ ಪ್ರಯೋಗಗಳೂ ವ್ಯಾಕರಣಪ್ರಕ್ರಿಯೆಗಳೂ, ಇತರ ಅಪೂರ್ವ ಶಬ್ದರೂಪಗಳೂ ಅದರಲ್ಲಿ ದೊರಕುತ್ತವೆ; ಭಾಷಾಚರಿತ್ರೆಯ ಸೃಷ್ಟಿಯಿಂದ ಇವು ಗಮನಾರ್ಹ.

ಕವಿರಾಜಮಾರ್ಗವು ಇಡಿಯಾಗಿಯಲ್ಲದಿದ್ದರೂ ಬಿಡಿಭಾಗಗಳಲ್ಲಿ ಅನುವಾದಿತ ಗ್ರಂಥ ಎಂಬುದು ವಿದಿತವಷ್ಟೆ. ಗ್ರಂಥಾರಂಭದಲ್ಲಿ, ‘ನೆರಮಕ್ಕೆ ಪರಮಕವೀಶ್ವರರ್ ಅಕೃತಕಾಚಾರ ಪರರ್ ಎಮಗೀ ಕೃತಿಯೊಳ್’ ಎಂಬ ಪೂಜ್ಯಭಾವನೆಯ ಕೋರಿಕೆಯೂ, ಪೂರ್ವ ಸಂಸ್ಕೃತ ಕನ್ನಡ ಕವಿಗಳನ್ನು ಹೆಸರಿಸಿ ನೆನೆದಿರುವುದೂ, ಗ್ರಂಥದುದ್ದಕ್ಕೂ ಅಲ್ಲಲ್ಲಿ ಪೂರ್ವಾಚಾರ್ಯರನ್ನೂ ಪೂರ್ವಕವಿಗಳನ್ನೂ ಒಟ್ಟಿನ ಮೇಲೆ ಮಾರ್ಗದರ್ಶಕರನ್ನಾಗಿ ಪರಿಗಣಿಸಿರುವುದೂ ಪೂರ್ವ ಕವಿಗಳಿಗೂ ಲಾಕ್ಷಣಿಕರಿಗೂ ತಾನು ಋಣಿ ಎಂಬ ಅಂಶವನ್ನು ಅವನು ಒಪ್ಪಿಕೊಂಡಂತೆಯೇ ಆಗಿದೆ. ಎಲ್ಲಿಯೂ ಕಂಠೋಕ್ತವಾಗಿ ಹೇಳದಿದ್ದರೂ, ಕಾವ್ಯದೋಷ ನಿರೂಪಣೆಯ ವಿಭಾಗದಲ್ಲಿ ಸಂಸ್ಕೃತ ‘ಕಾವ್ಯಾಲಂಕಾರ’ ಕರ್ತೃವಾದ ಭಾಮಹನನ್ನೂ ಕಾವ್ಯಗುಣಗಳು, ದಕ್ಷಿಣೋತ್ತರ ಮಾರ್ಗಭೇದ, ಅರ್ಥಾಲಂಕಾರ ಪ್ರಕರಣ—ಈ ವಿಭಾಗಗಳಲ್ಲಿ ‘ಕಾವ್ಯಾದರ್ಶ’ದ ಆಚಾರ್ಯ ದಂಡಿಯನ್ನೂ ಅವನು ಅನುಸರಿಸಿರುವುದು ಸ್ಪಷ್ಟವಾಗಿಯೇ ಇದೆ. ಅನುಸರಿಸಿರುವುದೇನು, ಪ್ರಾಯಿಕವಾಗಿ ಅವರ ಲಕ್ಷ್ಯಲಕ್ಷಣಶ್ಲೋಕಗಳನ್ನು ಅನುವಾದಿಸಿದ್ದಾನೆ. ವಸ್ತುಸ್ಥಿತಿ ಹೀಗಿರುವಲ್ಲಿ, ತಾನು ರಚಿಸಲಿರುವ ಗ್ರಂಥಕ್ಕೆ ಪ್ರತ್ಯಕ್ಷ ಸಂಬಂಧವಿಲ್ಲದ ಸಂಸ್ಕೃತ ಕವಿಗಳನ್ನು ನೆನೆದಿರುವಲ್ಲಿ, ಯಾವ ನಿರ್ದಿಷ್ಟ ಪೂರ್ವಾಚಾರ್ಯರಿಗೆ ತಾನು ಋಣಿಯೋ ಆ ದಂಡಿಭಾಮಹರ ಹೆಸರುಗಳನ್ನು ಒಮ್ಮೆಯಾದರೂ ನೆನೆಯದಿರುವುದು ಸೋಜಿಗದ ಸಂಗತಿಯಲ್ಲವೆ? ‘ಗುಣೋದಯ’, ‘ಪರಗುಣ ಸಹನಶೀಲ’ ಎಂದು ನೃಪತುಂಗ ಸಭಾಸದರ

ಮನ್ನಣೆಗೆ ಪಾತ್ರನಾದ 'ಶ್ರೀವಿಜಯರ್ ದೇವರ್'ಗೆ ಇದು ಯೋಗ್ಯ ವರ್ತನೆಯೆ? ಹಾಗೆ ನೆನೆದರೆ, ಆತ್ಮಪ್ರತಿಷ್ಠೆಗೆ ಕುಂದು ಬರುವುದೆಂಬ ಎಣಿಕೆಯೊ? ಅಥವಾ, ಆಶ್ರಯದಾತ ನೃಪತುಂಗಭಕ್ತಿ ಕಾರಣವೊ? ಗ್ರಂಥದ ಮೊದಲಿಂದ ಕಡೆಯವರೆಗೆ—'ನರಲೋಕಚಂದ್ರಮತದಿಂ', 'ಎಂದ ನತಿಶಯಧವಳಂ', 'ನೃಪತುಂಗದೇವವಿದಿತಕ್ರಮದಿಂ', 'ಅತಿಶಯ ಧವಳೋಕ್ತಿಕ್ರಮದಿಂ', 'ಮಹಾನೃಪತುಂಗದೇವನಾದರದೊಳೆ ಪೇೞ್ದ ಮಾರ್ಗಗತಿ', 'ಅತಿಶಯಧವಳೋರ್ವಿಪೋಕ್ತಿಮಾರ್ಗ,' 'ಬೆಸಸಿದನಖಿಳ ಧರಾವಲ್ಲಭನಿಂತಮೋಘವರ್ಷನೃಪೇಂದ್ರಂ', 'ಅತಿಶಯಧವಳೋಪದೇಶ ಮಾರ್ಗಕ್ರಮ'—ಎಂದು ಮುಂತಾಗಿ, ಪ್ರತಿಪಾದಿಸಿರುವ ವಿಚಾರಗಳೆಲ್ಲ ನೃಪತುಂಗಮುಖೋದ್ಗೀತವೆಂಬಂತೆ ಪ್ರಭುಭಕ್ತಿಯನ್ನು ಪ್ರದರ್ಶಿಸಿದ್ದಾನೆ. ಗ್ರಂಥವು 'ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗ'ವೆಂಬು ದಂತೂ ಸ್ಪಷ್ಟವಾಗಿಯೆ ಇದೆ. ಆಶ್ರಯದಾತನಾದ ರಾಜನಿಗೆ ಸರ್ವ ಪ್ರಾಮುಖ್ಯವನ್ನು ಕೊಡಬೇಕೆಂಬ ಏಕೈಕ ಉದ್ದೇಶದಿಂದ ನೃಪತುಂಗನ ಹೆಸರನ್ನು ಹರಹಿ, ತನ್ನ ಹೆಸರನ್ನು ಹಿಂದಿಕ್ಕಿ, ಆಹಾರವಿತ್ತ ಆಕರಗ್ರಂಥಗಳ ಕರ್ತೃಗಳ ಹೆಸರುಗಳನ್ನು ಉದ್ದೇಶಪೂರ್ವಕವಾಗಿಯೆ ತನ್ನ ಗುಪ್ತಭಕ್ತಿ ಗಾಗಿ ಮಾರ್ಗಕಾರನು ಉಳಿಸಿಕೊಂಡನೆನ್ನೋಣವೆ? ಅಂತೂ, ಗ್ರಂಥ ಋಣವನ್ನು ಒಪ್ಪಿಕೊಳ್ಳದ ಒಂದು **ಕವಿರಾಜಮಾರ್ಗ**ವನ್ನೆ ಕನ್ನಡ ಕವಿ ಗಳಿಗೆ ಶ್ರೀವಿಜಯ ಹಾಕಿಕೊಟ್ಟನೆನ್ನಬೇಕಾಗುತ್ತದೆ ಅಥವಾ, ಕರ್ತೃವಿನ ವಿಷಯದಲ್ಲಿ ನಾವು ಉದಾರಮತಿಗಳಾಗಿ ಹೀಗೆ ತರ್ಕಿಸಬಹುದು: 'ಕವಿ ರಾಜಮಾರ್ಗ'ದ ಒಟ್ಟು ಪದ್ಯಸಂಖ್ಯೆ ೫೩೬ (ಪ್ರಕ್ಷಿಪ್ತವಾದುವನ್ನು ಬಿಟ್ಟು); ಇವುಗಳಲ್ಲಿ ಸುಮಾರು ೪೫ ಪದ್ಯಗಳಿಗೆ ಭಾಮಹನ ಕಾವ್ಯಾಲಂಕಾರವೂ ಸುಮಾರು ೨೩೦ಕ್ಕೆ ದಂಡಿಯ ಕಾವ್ಯಾದರ್ಶವೂ ಆಕರಗ್ರಂಥಗಳು. ಎಂದ ಮೇಲೆ, ಸುಮಾರು ಅರ್ಧದಷ್ಟು ಗ್ರಂಥ ಸ್ವಂತರಚನೆ. ಉಳಿದರ್ಧದಲ್ಲಿ ಮಾರ್ಗಕಾರನು ಮೂಲಶ್ಲೋಕಗಳನ್ನು ಪದಶಃ ಭಾಷಾಂತರ ಮಾಡಿಲ್ಲ; ಭಾವವನ್ನು, ವಿಚಾರವನ್ನು, ಸ್ವೀಕರಿಸಿ ತನ್ನದೇ ಆದ ಧಾಟಿಯಲ್ಲಿ ಅಚ್ಚು ಕಟ್ಟಾಗಿ ಬರೆದಿದ್ದಾನೆ; ಹಲವು ಕಡೆ ಮೂಲಶ್ಲೋಕದ ಲಕ್ಷಣ ಸ್ವರೂಪ ವನ್ನು ವಿಶದಪಡುವಂತೆ ವಿಸ್ತರಿಸಿದ್ದಾನೆ; ಸಂಕ್ಷೇಪ ಮಾಡಿರುವ ಸಂದರ್ಭ-

ಗಳೂ ಉಂಟು. ಶಾಸ್ತ್ರವಿಚಾರವಾದ್ದರಿಂದ, ಮೂಲದ ಶಾಸ್ತ್ರೀಯ ಪದಪುಂಜಗಳನ್ನು ಸಂದರ್ಭೋಚಿತವಾಗಿ ಇದ್ದಹಾಗೆಯೆ ಬಳಸಿಕೊಂಡಿದ್ದಾನೆ; ಇದು ಸಹಜ, ಅನಿವಾರ್ಯ. ಲಕ್ಷ್ಯಪದ್ಯಗಳನ್ನು ಅನುವಾದ ಮಾಡುವಾಗ ಸಾಕಷ್ಟು ಸ್ವಾತಂತ್ರ್ಯವಹಿಸಿದ್ದಾನೆ; ಮೂಲಶ್ಲೋಕದ ಕಲ್ಪನೆಗಳಿಗೆ ತನ್ನವನ್ನು ಬೆರಸಿದ್ದಾನೆ, ಕೆಲವು ಕಡೆ ಕಳೆಯೇರಿಸಿದ್ದಾನೆ. ಪ್ರತಿ ಪ್ರಕರಣದಲ್ಲಿಯೂ ಸ್ವಂತ ಲಕ್ಷ್ಯಪದ್ಯಗಳಿಗೆ ಕೊರತೆಯಿಲ್ಲ. ಲಕ್ಷಣ ಪದ್ಯವಾಗಲಿ ಲಕ್ಷ್ಯಪದ್ಯವಾಗಲಿ, ಅನುವಾದಮಾಡಿರುವ ಸಂದರ್ಭಗಳಲ್ಲಿ ಕೂಡ ಅವನ್ನು ಅನುವಾದ ಎಂದು ಹೇಳಲಾಗದಂತೆ 'ಸ್ವಂತಿಕೆ'ಯನ್ನು ಮೆರೆದು, ಮುಂದಿನ ಅನುವಾದಕರಿಗೆ ಮೇಲ್ಪಂಕ್ತಿಯೆನಿಸಿದ್ದಾನೆ. ಅನ-ಪೇಕ್ಷಣೀಯವೆಂದು ತೋರುವ ಸಂಸ್ಕೃತಭಾಷಾಪ್ರಾಚುರ್ಯ ಕೆಲವೆಡೆ (ವಿಶೇಷವಾಗಿ, III, ೨೦೯-೨೧೬; ೨೧೮-೨೨೭; ೨೨೬-೨೩೧) ಅವನ ಪಾಂಡಿತ್ಯಪ್ರವಣತೆಯನ್ನು ಸಾರುತ್ತಿದ್ದರೂ, ನೆಲ್ಲುಪ್ಪವೆತ್ತ ನುಡಿಗಳ ಅಚ್ಚಗನ್ನಡದ ಬರೆವಣಿಗೆ ಅವನಿಗೆ ಮೆಚ್ಚು. (ಉದಾ: I, ೧೫, ೩೮, ೪೫, ೧೧೨, ೧೨೪, ೧೪೯; II, ೪, ೫, ೨೮; III, ೧೪೩-೧೫೨; ೧೬೯; ೧೬೩-೧೮೧) ಅಂಥ ಬರೆವಣಿಗೆ ಅನೇಕ ವೇಳೆ ಪಂಪನ ಶೈಲಿಯನ್ನು ನೆನಪಿಗೆ ತರುತ್ತದೆ. "ಇಲ್ಲಿಗಿದು ತಕ್ಕುದಿಲ್ಲಿಗೆ ಪೊಲ್ಲದು" (II-೫) ಎಂಬ ತನ್ನ ಮಾತಿನಂತೆಯೆ ವಿಷಯಾನುಗುಣವಾಗಿ ಸಂದರ್ಭೋಚಿತವಾಗಿ ನುಡಿಯಿಡುವುದನ್ನೂ, ನುಡಿನಡೆಯನ್ನು ತಿರುಗಿಸುವುದನ್ನೂ ಬಲ್ಲ ಉಚಿತ ಪದಪ್ರಯೋಗ ವಿಜ್ಞಾನಿ, 'ವಾಗಧಿಪ'—ಶ್ರೀವಿಜಯ. "ಅನುವಾದದಲ್ಲಿ ಮೂಲದ ವಾಕ್ಯಗಳ ಸೊಗಸು ತಪ್ಪದೆ ಬಂದಿದೆಯೆಂದು ಎಲ್ಲ ಸಂದರ್ಭಗಳಲ್ಲೂ ಹೇಳಲಾಗುವುದಿಲ್ಲ" ಎಂಬ ಪ್ರೊ|| ತೀ. ನಂ. ಶ್ರೀ. ಯವರ ಮಾತಿನಲ್ಲಿಯೆ (ಭಾ.ಕಾ.ಮಿ., ಪು. ೪೪೨) 'ಕೆಲವು ಸಂದರ್ಭಗಳಲ್ಲಿಯಾದರೂ ಬಂದಿದೆ' ಎಂಬ ಧ್ವನಿ ಇದ್ದೇ ಇದೆ. ಮೂಲವಾಕ್ಯಗಳ ಸೊಗಸು ಮೂಡಿಬಂದಿಲ್ಲದ ಕೆಲವೆಡೆಗಳಲ್ಲಿಯಾದರೂ ಕನ್ನಡ ರಚನೆಯ ಸೊಗಸು ಹಾಗೆ ಆದ ನಷ್ಟವನ್ನು ತುಂಬಿಕೊಟ್ಟಿದೆ ಎನ್ನಲಡ್ಡಿಯಿಲ್ಲ. "ಸಂಸ್ಕೃತ ಸಮಾಸಗಳನ್ನು ಹೆಣೆದು ಕಂದಪದ್ಯದಲ್ಲಿ ಅಳವಡಿಸುವಾಗ ಒಮ್ಮೊಮ್ಮೆ ಅರ್ಥಕ್ಲೇಶಕ್ಕೆ ಆಸ್ಪದಕೊಟ್ಟಿರುವುದೂ ಉಂಟು" ಎಂಬ ತೀ.ನಂ.ಶ್ರೀ. ಯವರ

ಮಾತಿಗೆ, ಅವನು ಕನ್ನಡದಲ್ಲಿ ಬರೆದಾಗಲೂ ಕೆಲವೊಮ್ಮೆ ಅರ್ಥಕ್ಲೇಶಕ್ಕೆ ಎಡೆಗೊಟ್ಟಿದೆ ಎಂಬ ನಮ್ಮ ಮಾತನ್ನೂ ಕೂಡಿಸಬಹುದು. "ಕವಿರಾಜಮಾರ್ಗಕಾರನ ಸ್ವತಂತ್ರ ಶೈಲಿ"ಯನ್ನು ಮೆಚ್ಚಿಕೊಂಡಿರುವ ಅವರು, "ಒಟ್ಟಿನಲ್ಲಿ ಕವಿರಾಜಮಾರ್ಗದ ಬರೆವಣಿಗೆ ಲಲಿತವಾಗಿದೆಯೆಂದೇ ಒಪ್ಪಬೇಕು" ಎಂದು ಇತ್ತಿರುವ ತೀರ್ಪನ್ನು ಯಾರಾದರೂ ಒಪ್ಪಬೇಕು. ಲಾಲಿತ್ಯ ಕವಿರಾಜಮಾರ್ಗದ ಶೈಲಿಯ ಒಂದು ಮುಖ ಮಾತ್ರ; ಔಚಿತ್ಯ ಇನ್ನೊಂದು ಮುಖ ಅವನ 'ಸ್ವತಂತ್ರಶೈಲಿ'ಯ ಸೂತ್ರಪ್ರಾಯಗುಣವೆಂದರೆ, ಅದರ 'ನಾಣ್ನುಡಿಯ ಬೆಡಂಗು'. ಇಷ್ಟರ ಜೊತೆಗೆ, ಈ ಮೊದಲೇ ವಿಶದಪಡಿಸಿರುವಂತೆ (ನೋಡಿ : ಪು. LXvii–LXxi), ಸ್ವತಂತ್ರ ವಿಚಾರಮಾರ್ಗವೂ ಇದೆ. ಔಪಚಾರಿಕವಾಗಿ ಅದನ್ನವನು 'ನೃಪತುಂಗದೇವಮಾರ್ಗ', 'ನೃಪತುಂಗ ವಿಚಾರಕ್ರಮ' ಎಂದು ನಿರ್ದೇಶಿಸಿರುವುದು ತೀರ ಸಹಜವಷ್ಟೆ. ಸಂಸ್ಕೃತ ಕಾವ್ಯಮಾರ್ಗದ ಲಕ್ಷಣವನ್ನು ಕನ್ನಡಕ್ಕೆ ಹೊಂದಿಸಿ ಪ್ರತಿಪಾದಿಸುವಲ್ಲಿ ಅವನು ಮೆರೆದ ಸ್ವತಂತ್ರ ವಿಚಾರ ಕ್ರಮವನ್ನು ಈಚಿನ ಕನ್ನಡ ಲಾಕ್ಷಣಿಕರು ಅನುಸರಿಸಿದ್ದರೆ, ಕನ್ನಡ ಕಾವ್ಯಶಾಸ್ತ್ರ ಸಂಸ್ಕೃತಕ್ಕೆ ಹೊತ್ತ ಋಣಭಾರ ಎಷ್ಟೋ ಕಡಮೆಯಾಗುತ್ತಿತ್ತು. ಕಾವ್ಯಮೀಮಾಂಸೆಗೆ ಸಂಬಂಧಪಟ್ಟಿದೆಯೋ ಇಲ್ಲವೋ, ಕನ್ನಡ ನಾಡು ನುಡಿ ಜನ– ಈ ಕುರಿತು ಕವಿರಾಜಮಾರ್ಗಕಾರನು ತೊಳಗಿ ಬೆಳಗುವ ಕನ್ನಡದೊಲವಿನ ನುಡಿಗಳನ್ನಾಡಿ, ಮೊತ್ತಮೊದಲ ಬಾರಿಗೆ ಹೊತ್ತಿಸಿದ ಕನ್ನಡ ದೀವಟಿಗೆ ಅಂದಿನಿಂದ ಇಂದಿನವರೆಗೆ ಪ್ರಮುಖ ಕವಿಗಳ ಕೈಯಿಂದ ಕೈಗೆ ಕುಂದದೆ ನಂದದೆ ಸಾಗಿಬಂದಿರುವುದು ಹೆಮ್ಮೆಯ ಮಾತು. ಇಂಥ ಬಹುವಿಧಪ್ರಾಮುಖ್ಯವುಳ್ಳ ಗ್ರಂಥವನ್ನು ಕುರಿತು, 'Kavirajamarga is not a wonderful masterpiece in either matter or style' ಎಂದು ತಿಳಿಸುವಲ್ಲಿ ದಿವಂಗತ ಬಿ. ಎಂ. ಶ್ರೀ. ಯವರು ಕಾವ್ಯಮೌಲ್ಯ ಮಾಪನದಂಡದಿಂದ ಲಕ್ಷಣ ಗ್ರಂಥದ ಮೌಲ್ಯವನ್ನು ಅಳೆಯ ಹೊರಟು, ತಮ್ಮ ವಿಮರ್ಶನ ಪ್ರಜ್ಞೆಯನ್ನು ಸರಿಯಾಗಿ ವಿನಿಯೋಗಿಸಿಲ್ಲವೆಂದು ಹೇಳಬೇಕಾಗುತ್ತದೆ. "ಕನ್ನಡ ಭಾಷೆಯ ಅಂತಸ್ಸತ್ತ್ವವನ್ನು ಮರೆಯದೆ, ಸಂಸ್ಕೃತ ಆದರ್ಶಗಳ ಅಗತ್ಯವನ್ನು ತೃಣೀಕರಿಸದೆ, ಮುಂದಿನ ಕವಿಗಳಿಗೂ ಲಾಕ್ಷಣಿಕರಿಗೂ ಮಾರ್ಗದರ್ಶನಮಾಡಿದ

ಮಹಾಗ್ರಂಥವೇ ಕವಿರಾಜಮಾರ್ಗ. ಅದರ ಲಕ್ಷಣಗಳು ಸಂಸ್ಕೃತ ಪ್ರಸಿದ್ಧವಾಗಿದ್ದರೂ, ಲಕ್ಷ್ಯಗಳೇ ಮುಂದಿನವರ ಕನ್ನಡ ರಚನೆಗಳಿಗೆ ಕೈದೀವಿಗೆಗಳಾದುವು. ಕನ್ನಡದಲ್ಲಿ ಕಾವ್ಯಮೀಮಾಂಸೆಗೆ ಕವಿರಾಜಮಾರ್ಗಕಾರನೇ ಆದ್ಯಾಚಾರ್ಯ" ಎಂಬ ಡಾ|| ಕೆ. ಕೃಷ್ಣಮೂರ್ತಿಯವರ ಮಾತಿಗೆ, "ಕವಿರಾಜಮಾರ್ಗವು . . . ಅನುವಾದ ದೃಷ್ಟಿಯಿಂದ ಸ್ವತಂತ್ರವೆಂಬುದಲ್ಲದೆ ಅಂದಿನ ಕನ್ನಡ ನಾಡು ನುಡಿಗಳ ಸ್ವರೂಪ, ಸಾಹಿತ್ಯಸ್ಥಿತಿ, ಕವಿಗಳಿಗೆ ರಾಜಮಾರ್ಗವನ್ನು ತೋರುವ ವಿಮರ್ಶಾತ್ಮಕ ವಿಚಾರ ಪ್ರಣಾಲಿ ಎಂಬಿವುಗಳಿಂದ ಸ್ವತಂತ್ರವಾದ ಮತ್ತು ಬೆಲೆಯುಳ್ಳ ಪ್ರಮಾಣ ಗ್ರಂಥವಾಗಿದೆ" ಎಂಬ ಡಾ|| ರಂ. ಶ್ರೀ. ಮುಗಳಿಯವರ ಮಾತನ್ನೂ ಜೋಡಿಸಿಕೊಂಡರೆ ಗ್ರಂಥದ ಯಥಾರ್ಥವಾದ ಬೆಲೆಯ ಅರಿವಾಗುತ್ತದೆ. ಮೊತ್ತದಲ್ಲಿ, ಕವಿರಾಜಮಾರ್ಗ ಕಾವ್ಯರತ್ನವೇನಲ್ಲ; ಹೇಳಿಕೇಳಿ ಶಾಸ್ತ್ರಗ್ರಂಥ; ಆದರೆ, ತನ್ನ ಇತಿಮಿತಿಯಲ್ಲಿ ಅದು ಚಿನ್ನದಂಥ ಕೃತಿ. ಚಿನ್ನದ ಅರೆಪಾಲಿನ ಸ್ವಾಮ್ಯ ಸಂಸ್ಕೃತ ಲಾಕ್ಷಣಿಕರಿಗೆ ಸೇರಿದ್ದರೆ, ಉಳಿದ ಅರೆಪಾಲು ಸ್ವಂತ ಗಳಿಕೆಯ ಆಸ್ತಿ. ಟಂಕ ಪೂರ್ತಿಯಾಗಿ ಶ್ರೀವಿಜಯನದು. ನಾಣ್ಯದ ಒಂದು ಪಕ್ಕದಲ್ಲಿ ನೃಪತುಂಗನ ಪ್ರತಿಚಿತ್ರವಿದ್ದರೆ, ಇನ್ನೊಂದು ಬದಿಯಲ್ಲಿ ಶ್ರೀವಿಜಯನ ಕೃತಿಚಿತ್ರವಿದೆ. ರಾಜಮುದ್ರೆ ಬಿದ್ದ ಶ್ರೀವಿಜಯಾಂಕಿತ ನಾಣ್ಯ ಕವಿರಾಜಮಾರ್ಗ. ಈ ವಿಚಾರದಲ್ಲಿ—ಎಂದರೆ, ಮುಖ್ಯವಾಗಿ ಕವಿರಾಜಮಾರ್ಗದ ಕರ್ತೃತ್ವ ವಿಚಾರದಲ್ಲಿ—ಈ ವರೆಗಿನ ಅನಿಶ್ಚಿತಸ್ಥಿತಿಯನ್ನೇ ಮುಂದುವರಿಸಿಕೊಂಡು ಹೋಗುವುದು ನಿಜವಾದ ಕೃತಿಕಾರನಿಗೆ ಅನ್ಯಾಯ ಮಾಡಿದಂತೆ. 'ನೃಪತುಂಗನ ಕವಿರಾಜಮಾರ್ಗ' ಎನ್ನುವುದು ನಮಗೆ ಅಭ್ಯಾಸವಾಗಿಹೋಗಿದೆ; ಇನ್ನಾದರೂ 'ಶ್ರೀ ವಿ ಜ ಯ ನ ಕವಿರಾಜಮಾರ್ಗ' ಎನ್ನೋಣ. ಈ ನಿಶ್ಚಿತವನ್ನು ಮುಂದಿಡುವುದರಲ್ಲಿ ಪ್ರಕೃತ ಸಂಪಾದಕನ ಪಾತ್ರ ಇಷ್ಟೆ: ಕವಿರಾಜಮಾರ್ಗದ ಕರ್ತೃ ಶ್ರೀವಿಜಯ ಎಂದು ನಿಶ್ಚಯಿಸಿದ್ದ ವಿದ್ವಾಂಸರು ಕೂಡ ಹೆಸರಿನ ಮುಂದೆ ಒಂದು ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕುತ್ತಿದ್ದರು; ಈ ಸಂಪಾದಕನು ಅದನ್ನು ಅಳಿಸಿಹಾಕಲು ಪ್ರಯತ್ನಿಸಿದ್ದಾನೆ, ಅಷ್ಟೆ.

* * * *

ಪಾಠ ಪರಿಷ್ಕರಣ ವಿಚಾರದಲ್ಲಿ ಹೇಳಬೇಕಾದದ್ದು ಹೆಚ್ಚಿನದೇನೂ ಇಲ್ಲ. ಈ ಸಂಬಂಧದಲ್ಲಿ, ಪಾಠಾಂತರಗಳ ಅನುಬಂಧದಲ್ಲಿ ನಾಲ್ಕು ಮಾತು ಬರೆದಿದ್ದೇನೆ. ಪರಿಷ್ಕರಣ ಕಾರ್ಯ ಎಷ್ಟು ಶಾಸ್ತ್ರೀಯವಾಗಿ ಸಾಗಬೇಕೋ ಅಷ್ಟರ ಮಟ್ಟಿಗೆ ಸಾಗಿಲ್ಲ ಎಂಬುದರ ಪೂರ್ಣವಾದ ಅರಿವು ನನಗಿದೆ. ಅದಕ್ಕೆ ಮುಖ್ಯ ಕಾರಣ, ಹೊಸ ಹಸ್ತಪ್ರತಿಗಳು ದೊರಕದಿದ್ದುದು; ಅವುಗಳನ್ನು ದೊರಕಿಸಿಕೊಳ್ಳಲು ಅಗತ್ಯವಾದಷ್ಟು ಪ್ರಯತ್ನವನ್ನು ಮಾಡಲಿಲ್ಲ, ಗ್ರಂಥವನ್ನು ಸಾಧ್ಯವಾದಷ್ಟು ಬೇಗ ಹೊರಕ್ಕೆ ತರಬೇಕು ಎಂಬ ಆತುರದಿಂದಾಗಿ. ಪ್ರತಿಗಳನ್ನುಳ್ಳ ಮಹನೀಯರೂ ಸಂಸ್ಥೆಗಳೂ ಔದಾರ್ಯದಿಂದ ತಾವಾಗಿ ಮುಂದೆ ಬಂದು ಅವುಗಳ ಪ್ರಯೋಜನವನ್ನು ಸಂಪಾದಕನಿಗೆ ದೊರಕಿಸಿಕೊಡುವ ಕೃಪೆಮಾಡಬೇಕೆಂದು ಈ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ. ಪಾಠಪರಿಷ್ಕರಣ ಸಂಬಂಧವಾದ ಕುಂದುಕೊರತೆಗಳೂ ಇನ್ನಿತರ ಲೋಪದೋಷಗಳೂ ಮುಂದಿನ ಆವೃತ್ತಿಯಲ್ಲಿ ನಿವಾರಣೆಯಾಗುವಂತೆ ಪ್ರಯತ್ನಿಸಲು ಸಾಧ್ಯವಾಗುವ ಹಾಗೆ ಸಹೃದಯರಾದ ವಿದ್ವಾಂಸರು ತಮ್ಮ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿ, ಉಪಕಾರ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

ಪ್ರಕೃತ ಮುದ್ರಣದ ಸಂಪಾದನ ಕಾರ್ಯ ಸ್ವಲ್ಪಮಟ್ಟಿಗಾದರೂ ಉಪಯುಕ್ತವಾಗಿ ಪರಿಣಮಿಸಿದ್ದರೆ, ಪೂರ್ವವಿದ್ವಾಂಸರ ಪರಿಶ್ರಮವೇ ಅದಕ್ಕೆ ಮೂಲಾಧಾರ; ಅವರಿಗೆಲ್ಲ ನನ್ನ ಕೃತಜ್ಞತೆಯ ಪ್ರಣಾಮಗಳು.

ಬೆಂಗಳೂರು
೧೨-೨-೧೯೬೮

ಎಂ. ವಿ. ಸೀತಾರಾಮಯ್ಯ

ಪೀಠಿಕೆಯ ಟಿಪ್ಪಣಿಗಳು

1 ರಾಷ್ಟ್ರಕೂಟರು ನೇರವಾಗಿ ಚಂದ್ರವಂಶದ ಯದುಕುಲೋದ್ಭವರೆಂದು ಈಚಿನ ವಂಶಾವಳಿಯ ಉಲ್ಲೇಖಗಳು ಹೇಳುತ್ತವೆ. 'ರೆಡ್ಡಿ' ಗಳ ಕುಲ ಎಂದು ಡಾ|| ಬರ್ನೆಲ್. ಉತ್ತರ ದೇಶದಿಂದ ಬಂದವರೆಂದು ಡಾ|| ಫ್ಲೀಟ್. ರಾಷ್ಟ್ರಕೂಟರೂ ಶಿವಾಜಿಯೂ ಒಂದೇ ಕುಲ ಎಂದು ಕೆ. ಬಿ. ಪಾಠಕ್. ಈ ಹೇಳಿಕೆಗಳಿಂದ ರಾಷ್ಟ್ರಕೂಟರು ಮೂಲತಃ ತೆಲುಗರು, ಇಲ್ಲವೆ ರಾಜಪೂತರು ಇಲ್ಲವೆ ಮಹಾರಾಷ್ಟ್ರರು ಎಂಬ ಅಭಿಪ್ರಾಯಗಳು ಹುಟ್ಟುತ್ತವೆ. ಎ. ಎಸ್. ಅಳ್ತೇಕರರ ಹೇಳಿಕೆಯಂತೆ ರಾಷ್ಟ್ರಕೂಟರು ಹುಟ್ಟು ಕನ್ನಡಿಗರು. ಕರಹಾಡ ಶಾಸನವೊಂದರಲ್ಲಿ ೧ನೆಯ ಕಕ್ಕನು 'ರಟ್ಟ' ಎಂದು ಹೆಸರುಗೊಂಡಿದ್ದಾನೆ. 'ಲಟ್ಟನೂ(ಲೂ)ರ ಪುರವರಾಧೀಶ್ವರ' ಎಂಬ ಶಾಸನದ ಉಲ್ಲೇಖದಿಂದ, ಲಟ್ಟ = ರಟ್ಟ ಎಂದು ಊಹಿಸಲಾಗಿದೆ. 'ರಟ್ಟರ ಕೂಡಲು'=ರಾಷ್ಟ್ರಕೂಟ ಎಂದು ಮುಳಿಯ ತಿಮ್ಮಪ್ಪಯ್ಯನವರ ಊಹೆ. ರಾಷ್ಟ್ರಕೂಟ=ನಾಡಗೌಡ: ಪಿ. ಬಿ. ದೇಸಾಯಿ.

2 IIನೆಯ ಅಮೋಘವರ್ಷನ ಚಿತ್ರದುರ್ಗ ಶಾಸನ: (ಕಾಲ, ಶ. ೮೫೯, ಕ್ರಿ. ಶ. ೯೩೭) "... ಯಾದವ ಕುಲರೊಳ್ ಪಲರುಂ ಮೇದಿನಿಯಂ ಸುಖದಿನಾಳ್ದರ್; ಅವರಿಂ ಬಳಿಯಂ ಶ್ರೀದಯಿತಂ **ದಂತಿಗ**ನುದಿತೋದಿತನಾದಂ" ಎಂದು ಹೇಳಿ, ಈ ವಂಶದ ಕನ್ನರ, ನಿರುಪಮ, ಜಗತ್ತುಂಗ, ಅಮೋಘವರ್ಷ, ದೇವ, ಇಂದರ, ದೇವ, ಇಂದರ, ಇಱುವ ಕನ್ನರ—ಈ ದೊರೆಗಳ ಹೆಸರುಗಳನ್ನು ಉಲ್ಲೇಖಿಸಿ, "ನೆಗಬ್ದರೀ ರಾಷ್ಟ್ರಕೂಟಾನ್ವಯರ್ಕಳ್" ಎಂದು ಶಾಸನವನ್ನು ಮುಗಿಸಿದೆ. (S. K. H., Vol. I., pp. 85–86).

3 ಅಕಾಲವರ್ಷ ಧ್ರುವನಿಗೆ ನಾಲ್ವರು ಮಕ್ಕಳು. ಇವರಲ್ಲಿ ಹಿರಿಯ 'ರಣಾವಲೋಕ' ಕಂಭ. ಗೋವಿಂದನು ಮೂರನೆಯ ಮಗನೆಂಬ ಅಭಿಪ್ರಾಯವೂ ಇದೆ. ಅದು ಹೇಗಿದ್ದರೂ, ಇನ್ನಿಬ್ಬರೆಂದರೆ—ಕರ್ಕ ಮತ್ತು ಇಂದ್ರ. ಧ್ರುವನು ಗೋವಿಂದನಿಗೇ ಯುವರಾಜಪಟ್ಟ ಗಟ್ಟಬೇಕೆಂದು ನಿಶ್ಚಯಿಸಿದಾಗ, ಗೋವಿಂದನು ವಿನಯಪೂರ್ವಕವಾಗಿ ಆ ಗೌರವವನ್ನು ನಿರಾಕರಿಸಿದಂತೆ ಸಂಜನ ಶಾಸನದ ಉಲ್ಲೇಖವಿದೆ. ಆದರೆ, ಪಟ್ಟಗಟ್ಟಿದ ಅಥವಾ ಕಟ್ಟದೆ ಬಿಟ್ಟ ಬಗೆಗೆ ಸ್ಪಷ್ಟ ಸೂಚನೆಯಿಲ್ಲ. ಉದಾತ್ತನೂ ವಿನಯಶಾಲಿಯೂ ಆದ ಗೋವಿಂದನು ತಂದೆಯ ಮರಣಾನಂತರ ಹಿರಿಯಣ್ಣನನ್ನು ಮೂಲೆಗೊತ್ತಿ ಮಂತ್ರಿವರ್ಗದ ಬೆಂಬಲದಿಂದ

ಸಿಂಹಾಸನವೇರಿದನು ಎಂದರೆ ನಂಬುವುದು ಕಷ್ಟ. ಸಂಜನ ಶಾಸನಕಾರನು ಗೋವಿಂದನ ಗುಣಪ್ರಶಂಸೆಯ ಉದ್ದೇಶದಿಂದ ಯೌವರಾಜ್ಯಾಭಿಷೇಕ ಪ್ರಕರಣವನ್ನು ತೇಲಿಸಿಬಿಟ್ಟಿರುವಂತೆ ಕಾಣುತ್ತದೆ.

4 ಈ ಅಭಿಪ್ರಾಯವನ್ನು ದಿ॥ ಮುಳಿಯ ತಿಮ್ಮಪ್ಪಯ್ಯನವರು ಒಪ್ಪಿಲ್ಲ: ರಾಷ್ಟ್ರಕೂಟ ಸಾಮ್ರಾಜ್ಯದ ರಾಜಧಾನಿಯಾದ 'ಮಾನ್ಯಖೇಟ' ನಗರವು (ಈಗಿನ ಮಾಲಖೇಡ್ ಅಥವಾ ಮಳಖೇಡ) ನೃಪತುಂಗನಿಂದ ನಿರ್ಮಿತವಾಯಿತೆಂದು ಡಾ॥ ಫ್ಲೀಟರ ಅಭಿಪ್ರಾಯ; ಅವನಿಗಿಂತ ಹಿಂದೆಯೂ ಇದ್ದುದಕ್ಕೆ, ನೃಪತುಂಗನ ಗುರು ಎಂದು ಹೇಳಲಾದ ಜಿನಸೇನರಿಗಿಂತಲೂ ಹಿಂದಿನ ಪ್ರಭಾಚಂದ್ರರ 'ಕಮಲ ಮಾರ್ತಾಂಡ' ದಲ್ಲಿ ಉಲ್ಲೇಖವಿದೆ. "ದಂತಿದುರ್ಗಾದಿಗಳಾಗಿ ಗೋವಿಂದನವರೆಗಿನ ರಾಷ್ಟ್ರಕೂಟ ರಾಜರ ರಾಜಧಾನಿ ವಿಧ್ಯಾಂದ್ರಿ ಪಾದದಲ್ಲಿ ರೇವಾನದಿಯ ಹತ್ತಿರದಲ್ಲಿ ಆ ಹೆಸರನ್ನೊಂದಿದ ರೇವಾನಗರಿಯೆ ಆಗಿತ್ತು; ಅವರೆಲ್ಲರ ಅಥವಾ ಗೋವಿಂದರಾಜನ ಅರಮನೆಯ ಹೆಸರು 'ಶ್ರೀಭವನ' ಎಂದಾಗಿತ್ತು," ಎಂದು ತಿಳಿಸಿ, ಪುತ್ರ ನೃಪತುಂಗನು ತಂದೆ ಗೋವಿಂದನ ಬೀಡುದಾಣಗಳಲ್ಲೊಂದಾದ 'ಹೇಲಾಪುರ' (ವಿಲಾಸನಗರಿ) ವನ್ನೆ 'ಮಾನ್ಯಖೇಟ' ವೆಂಬ ಹೆಸರಿನಿಂದ ರಾಜಧಾನಿಯನ್ನಾಗಿ ಮಾರ್ಪಡಿಸಿಕೊಂಡನೆಂದು ಶಾಸನಗಳ ಆಧಾರದಿಂದ ತಿಮ್ಮಪ್ಪಯ್ಯನವರು ನಿರ್ಣಯಿಸಿದ್ದಾರೆ. ನೃಪತುಂಗನ ಕಾಲದಿಂದ ಮಾನ್ಯಖೇಟವೆ ರಾಷ್ಟ್ರಕೂಟ ರಾಜಧಾನಿ ಎಂಬುದಂತೂ ಖಚಿತ.

5 Eastern Chalukyas: D. C. Ganguli (pp. 57-64) (ಕವಿರಾಜಮಾರ್ಗ ವಿವೇಕ, ಭಾಗ ೧ರಲ್ಲಿ ಮುಳಿಯ ತಿಮ್ಮಪ್ಪಯ್ಯನವರು ಉಲ್ಲೇಖಿಸಿರುವ ಆಧಾರ).

ನೃಪತುಂಗನು ಕ್ರಿ. ಶ. ೮೧೪ ರಿಂದ ೮೮೦ರ ವರೆಗೆ ಆಳಿದನೆಂದೂ, ಅವನು ಪಟ್ಟಕ್ಕೆ ಬಂದಾಗ ೧೩-೧೪ ವರ್ಷಗಳ ಕಿರಿಯನೆಂದೂ ಚರಿತ್ರಕಾರರಲ್ಲಿ ಭಿನ್ನಮತವಿದೆ.

6 ಕವಿರಾಜಮಾರ್ಗ: III—ಪ. ೧೧೦ ; ೧೨೯-೧೩೦ ; ೧೪೪-೧೫೨ ; ೧೭೪-೧೮೧; ೧೯೭ ; ೨೦೪ ; ೨೦೬. (ಈ ಪದ್ಯಗಳನ್ನೂ ಇವುಗಳ ಮೇಲಣ ಟಿಪ್ಪಣಿಗಳನ್ನೂ ಪರಿಶೀಲಿಸಿರಿ.)

7 (i) "ವೀರನುದಾರಂ ಶುಚಿ ಗಂ| ಭೀರಂ ನಯಶಾಲಿ ಕೈದುವೊತ್ತರ ದೇವಂ॥ ಗಾರೆಜಗರ್ ನೃಪತುಂಗಂಗೆ—" (ಶ. ಮ. ದ., ಸೂ. ೧೫೧ರ ಉದಾಹರಣೆ).

(ii) "ಕರಿವೋಲ್ ಭದ್ರಗುಣಂ ಕೇ| ಸರಿವೋಲ್ ನಿರ್ವ್ಯಾಜ ಶೌರ್ಯ-

ನಂಭೋಽನಿಧಿವೋಲ್ ॥ ಶರಣಾಗತ ರಕ್ಷಣ ಪಟು। ಗಿರಿವೋಲ್ ನಿಷ್ಕಂಪ ಚಿತ್ತನಾ ನೃಪತುಂಗಂ." (ಕಾವ್ಯಾಲೋಕನ, ೩೩೯).

(iii) "ಕಾಯಲಿಂ ಬಲಗರ್ವದಿಂ ನೆಲನೆಲ್ಲನಂ ನೆಲಕೆಲ್ಲಮಾ। ತ್ರೈ ಯಲುಂ ತನಗಾ ಚತುರ್ಭುಜಮುಂ ಭುಜದ್ವಯಮಾದನಿ। ತ್ತಾಯದಾಯತಿ ತೋಳೊಳೊಪ್ಪಿರೆ ಮಿಕ್ಕ ಪೆಂಪಿನ ಕೀರ್ತಿನಾರಾಯಣಂ ದಯೆಗೆಯ್ಗೆ ಚಾಗ ಚತುರ್ಭುಜಂ ಗರುಡಧ್ವಜಂ ॥" (ಕಾವ್ಯಾವಲೋಕನ, ೩೫೮).

['ಕೀರ್ತಿನಾರಾಯಣ' ಎಂಬುದು ೩ನೆಯ ಗೋವಿಂದನ ಬಿರುದು. ಕವಿರಾಜಮಾರ್ಗದಲ್ಲಿ 'ವೀರನಾರಾಯಣ' ಎಂಬುದು ನೃಪತುಂಗನ ಬಿರುದಾಗಿರುವುದು ಸುಪ್ರಸಿದ್ಧ. 'ಗರುಡಧ್ವಜ' ವಂಶದ ರಾಜರೆಲ್ಲರ ಬಿರುದು. ಈ ಪದ್ಯವು ಗೋವಿಂದನನ್ನೆ ಕುರಿತಿದೆ ಎಂದು ಮುಳಿಯ ತಿಮ್ಮಪ್ಪಯ್ಯನವರ ಅಭಿಪ್ರಾಯ. (ಕವಿರಾಜಮಾರ್ಗ ವಿವೇಕ-೧; ಪು. ೩೪). ನೃಪತುಂಗನ ಕಾಲದ ಶಾಸನವೊಂದರಲ್ಲಿ 'ಕೀರ್ತಿನಾರಾಯಣ' ಎಂಬ ಬಿರುದೂ ಕಂಡುಬರುವುದರಿಂದ, ಈ ಪದ್ಯದಲ್ಲಿ ನೃಪತುಂಗನೇ ಕೀರ್ತಿತನಾಗಿರಬಹುದೆ ಎಂಬ ಊಹೆಗೂ ಅವಕಾಶವಿದೆ.] (ಹೋಲಿಸಿ : ಕವಿರಾಜಮಾರ್ಗ, ಪ. ೩-೧೭೪ ; ಗದಾಯುದ್ಧ, ೧-೧೫).

8 Sakatayana, a Swetambara scholar wrote his Grammar and a Vritti on it, at the court of Amoghavarsha. The Vritti is named Amogha Vritti after the patron. Sakatayana, in illustrating 'andyatanabhuta' tense, refers to the conquest over Pandyas and "the burning of enemies" (ಅದಹದಮೋಘವರ್ಷೋಽರಾತೀನ್) by ಅಮೋಘವರ್ಷ. (S. K. H., Vol, I, p. 69).

9 ಕೊಣ್ಣೂರ ಶಾಸನದ ೩೪ನೆಯ ಶ್ಲೋಕದ ಮೇಲಿನ ಗದ್ಯಭಾಗ: "ತೇನ ಏವಂಭೂತೇನ ಬಂಕೆಯಾಭಿಧಾನೇನ ಮುದಿಷ್ಟಭೃತ್ಯೇನ ಪ್ರಾರ್ಥಿತಸ್ಸನ್ ತತ್ಪ್ರಾರ್ಥನಯಾ ಮಾನ್ಯಖೇಟ ರಾಜಧಾನ್ಯಾಮುವಸ್ಥಿತೇನ ಮಯಾ ಮಾತಾ ಪಿತ್ರೋರಾತ್ಮನಶ್ಚೈಹಿಕಾಮುತ್ರಿಕ ಪುಣ್ಯಯಶೋಭಿವೃದ್ಧಯೇ ಕೋ ೞ ನೂ ರೇ ತದ್ಬಂಕೆಯ ನಿರ್ಮಾಪಿತ ಜಿನಾಲಯ ಪರಿಪಾಲನ ನಿಯುಕ್ತಾಯ . . ." (ದಿ॥ ಮುಳಿಯ ತಿಮ್ಮಪ್ಪಯ್ಯನವರ ಕವಿರಾಜಮಾರ್ಗ ವಿವೇಕ—೧, ಪು. ೭೩ರಲ್ಲಿ ಉದ್ಧೃತ).

10 (i) "ಮಾನ್ಯಖೇಟ ರಾಜಧಾನ್ಯವಸ್ಥಿತೇನ ಮಯಾ ಮಾತಾಪಿತ್ರೋರಾತ್ಮನಶ್ಚ ಐಹಿಕಾಮುತ್ರಿಕ ಪುಣ್ಯಯಶೋಭಿವೃದ್ಧಯೇ ಕರಹಡವಿನಿರ್ಗತ ಭರದ್ವಾಜಾಗ್ನಿ-

ವೇಶ್ಯಾಂಗಿರಸ ಬಾರ್ಹಸ್ಪತ್ಯಾನಾಂ ಬ್ರಾಹ್ಮಣಾನಾಂ ಗ್ರಾಮೋದತ್ತಃ . . . ” (ಅದೇ).

(ii) “ ರಟ್ಟವಂಶೋದ್ಭವಂ ಗರುಡಲಾಂಛನಂ . . . ಲಟ್ಟಲೂರಪುರ ಪರಮೇಶ್ವರಂ ಶ್ರೀ ನೃಪತುಂಗ ನಾಮಾಂಕಿತ ಲಕ್ಷ್ಮೀವಲ್ಲಭೇಂದ್ರಂ . . . ಮಹಾವಿಷ್ಣುವ ರಾಜ್ಯಂಬೋಲ್ . . . ಏಟ್ನೂಱೆಣ್ಭಂಟನೆಯ ವ್ಯಯಮೆಂಬ ಸಂವತ್ಸರಂ ಪ್ರವರ್ತಿಸೆ . . . ಶ್ರೀಮದಮೋಘವರ್ಷ ನೃಪತುಂಗ ನಾಮಾಂಕಿತಂ . . . ಸಂವತ್ಸರಂಗಳ್ ಅಯ್ವತ್ತೆರಡುವರ್ . . . ಸಲುತ್ತಿರೆ ಅತಿಶಯಧವಳ ನರೇಂದ್ರ ಪ್ರಸಾದದಿಂದಮಮೋಘವರ್ಷದೇವ ಪದಪಂಕಜಭ್ರಮರಂ . . . ” (ಶಾಸನದ ಕಾಲ: ಕ್ರಿ. ಶ. ೮೬೬, ಜೂನ್ ೧೬. (I. A., p. 218-19: ‘ನೃಪತುಂಗನ ಮತವಿಚಾರ’—ಗೋವಿಂದ ಪೈ; ಕ. ಸಾ. ಪ., ೧೨-೪).

11 ಯಸ್ಯ ಪ್ರಾಂಶುನಖಾಂಶುಜಾಲ ವಿಸರದ್ಧಾರಾಂತರಾವಿರ್ಭವತ್ |
ತಾದಾಂಭೋಜ ರಜಃಪಿಶಂಗ ಮುಕುಟ ಪ್ರತ್ಯಗ್ರರತ್ನದ್ಯುತಿಃ ||
ಸಂಸ್ಮರ್ತಾ ಸ್ವಯಮಮೋಘವರ್ಷ ನೃಪತಿಃ ಪೂತೋಹಮದ್ಯೇತ್ಯಲಂ |
ಸಶ್ರೀಮಾನ್ ಜಿನಸೇನ ಪೂಜ್ಯ ಭಗವತ್ಪಾದೋ ಜಗನ್ಮಂಗಲಮ್ ||೧೦||
(ನೃಪತುಂಗನ ಮತವಿಚಾರ: ಗೋವಿಂದ ಪೈ; ಕ.ಸಾ.ಪ., ೧೨-೪).

12 ಉಮಾಸ್ವಾತಿಯ ‘ತತ್ತ್ವಾರ್ಥಸೂತ್ರ’ ಎಂಬ ಜೈನಧರ್ಮ ಗ್ರಂಥಕ್ಕೆ ವೀರಸೇನಾಚಾರ್ಯರು ‘ಜಯಧವಲಾ’ ಟೀಕೆಯನ್ನು ಬರೆದಿದ್ದರು; ಅವರು ೨೦,೦೦೦ ಶ್ಲೋಕಗಳನ್ನು ಮಾತ್ರ ಬರೆದು ನಿರ್ವಾಣ ಹೊಂದಿದ್ದರು; ಜೀನಸೇನರು ಹೆಚ್ಚಿನ ೪೦,೦೦೦ ಶ್ಲೋಕಗಳನ್ನು ಬರೆದು, ಗ್ರಂಥವನ್ನು ಪೂರೈಸಿದರು. ಆ ವೇಳೆಗೆ, ಅವರಿಗೆ ಸುಮಾರು ೮೫ರ ವಯಸ್ಸು. (Jinasena II, author of Maha Purana, wrote Jayadhavala Tika on the work of Virasena in S. 759 when Amoghavarsa was ruling.—Dr. S. Srikantha Sastri : Sources of Karnataka History). ಅವರ ಇತರ ಗ್ರಂಥಗಳು: ೧. **ವರ್ಧಮಾನ ಪುರಾಣ,** ೨. **ಜಿನೇಂದ್ರಗುಣ ಸಂಸ್ತುತಿ.** ೩. **ಆದಿಪುರಾಣ** (ಅಥವಾ ಪೂರ್ವಪುರಾಣ): ಇದು ಅವರ ಕಟ್ಟಕಡೆಯ ಗ್ರಂಥ. ಇದನ್ನು ಬರೆದು ಮುಗಿಸುವ ವೇಳೆಗೆ ಸುಮಾರು ೯೫ರ ವಯಸ್ಸಾಗಿದ್ದು, ಸುಮಾರು ಕ್ರಿ. ಶ. ೮೪೪ರಲ್ಲಿ ಮರಣಹೊಂದಿರಬಹುದು ಎಂದು ಊಹಿಸಲಾಗಿದೆ. ೪. **ಪಾರ್ಶ್ವಾಭ್ಯುದಯ ಕಾವ್ಯ:** ಕಾಳಿದಾಸನ ‘ಮೇಘದೂತ’ ವನ್ನವಲಂಬಿಸಿದ ‘ಸಮಸ್ಯಾಪೂರ್ತಿ ರೂಪದ ಚಿಕ್ಕ ಕಾವ್ಯ’; ೪ ಸರ್ಗಗಳಿವೆ; ಪ್ರತಿ ಸರ್ಗಾಂತ ಗದ್ಯ ಹೀಗಿದೆ: “ ಇತ್ಯಮೋಘವರ್ಷ

ನಂಭೋನಿಧಿವೋಲ್ ॥ ಶರಣಾಗತ ರಕ್ಷಣ ಪಟು । ಗಿರಿವೋಲ್ ನಿಷ್ಕಂಪ ಚಿತ್ತನಾ ನೃಪತುಂಗಂ.” (ಕಾವ್ಯಾಲೋಕನ, ೩೩೯).

(iii) “ಕಾಯಲುಂ ಬಲಗರ್ವದಿಂ ನೆಲನೆಲ್ಲಸಂ ನೆಲಕೆಲ್ಲವಮಾ । ತ್ರೀರ್ಯಲುಂ ತನಗಾ ಚತುರ್ಭುಜವುಂ ಭುಜದ್ವಯುವಮಾದನಿ । ತ್ರಾಯುದಾಯತಿ ತೋಳೊಳೊಪ್ಪಿರೆ ಮಿಕ್ಕ ಪೆಂಪಿನ ಕೀರ್ತಿನಾರಾಯಣಂ ದಯೆಗೆಯ್ಗೆ ಚಾಗ ಚತುರ್ಭುಜಂ ಗರುಡಧ್ವಜಂ ॥” (ಕಾವ್ಯಾವಲೋಕನ, ೩೫೮).

[‘ಕೀರ್ತಿನಾರಾಯಣ’ ಎಂಬುದು ೩ನೆಯ ಗೋವಿಂದನ ಬಿರುದು. ಕವಿರಾಜಮಾರ್ಗದಲ್ಲಿ ‘ವೀರನಾರಾಯಣ’ ಎಂಬುದು ನೃಪತುಂಗನ ಬಿರುದಾಗಿರುವುದು ಸುಪ್ರಸಿದ್ಧ. ‘ಗರುಡಧ್ವಜ’ ವಂಶದ ರಾಜರೆಲ್ಲರ ಬಿರುದು. ಈ ಪದ್ಯವು ಗೋವಿಂದನನ್ನೆ ಕುರಿತಿದೆ ಎಂದು ಮುಳಿಯ ತಿಮ್ಮಪ್ಪಯ್ಯನವರ ಅಭಿಪ್ರಾಯ. (ಕವಿರಾಜಮಾರ್ಗ ವಿವೇಕ-೧; ಪು. ೩೪). ನೃಪತುಂಗನ ಕಾಲದ ಶಾಸನವೊಂದರಲ್ಲಿ ‘ಕೀರ್ತಿನಾರಾಯಣ’ ಎಂಬ ಬಿರುದೂ ಕಂಡುಬರುವುದರಿಂದ, ಈ ಪದ್ಯದಲ್ಲಿ ನೃಪತುಂಗನೇ ಕೀರ್ತಿತನಾಗಿರಬಹುದೆ ಎಂಬ ಊಹೆಗೂ ಅವಕಾಶವಿದೆ.] (ಹೋಲಿಸಿ: ಕವಿರಾಜಮಾರ್ಗ, ಪ. ೩-೧೭೪ ; ಗದಾಯುದ್ಧ, ೧-೧೫).

8 Sakatayana, a Swetambara scholar wrote his Grammar and a Vritti on it, at the court of Amoghavarsha. The Vritti is named Amogha Vritti after the patron. Sakatayana, in illustrating ‘andyatanabhuta’ tense, refers to the conquest over Pandyas and “the burning of enemies” (ಅದಹದಮೋಘವರ್ಷೋಽರಾತೀನ್) by ಅಮೋಘವರ್ಷ. (S. K. H., Vol, I, p. 69).

9 ಕೊಣ್ಣೂರ ಶಾಸನದ ೩೪ನೆಯ ಶ್ಲೋಕದ ಮೇಲಿನ ಗದ್ಯಭಾಗ: “ತೇನ ಏವಂ ಭೂತೇನ ಬಂಕೆಯಾಭಿಧಾನೇನ ಮದಿಷ್ಟಭೃತ್ಯೇನ ಪ್ರಾರ್ಥಿತಸ್ಸನ್ ತತ್ಪ್ರಾರ್ಥನಯಾ ಮಾನ್ಯಖೇಟ ರಾಜಧಾನ್ಯಾಮವಸ್ಥಿತೇನ ಮಯಾ ಮಾತಾ ಪಿತ್ರೋರಾತ್ಮನಶ್ಚೈಹಿಕಾಮುತ್ರಿಕ ಪುಣ್ಯಯಶೋಭಿವೃದ್ಧಯೇ ಕೋಲನೂರೇ ತದ್ಬಂಕೆಯ ನಿರ್ಮಾಪಿತ ಜಿನಾಲಯ ಪರಿಪಾಲನ ನಿಯುಕ್ತಾಯ . . .” (ದಿ॥ ಮುಳಿಯ ತಿಮ್ಮಪ್ಪಯ್ಯನವರ ಕವಿರಾಜಮಾರ್ಗ ವಿವೇಕ—೧, ಪು. ೭೩ರಲ್ಲಿ ಉದ್ಧೃತ).

10 (i) “ಮಾನ್ಯಖೇಟ ರಾಜಧಾನ್ಯವಸ್ಥಿತೇನ ಮಯಾ ಮಾತಾಪಿತ್ರೋರಾತ್ಮನಶ್ಚ ಐಹಿಕಾಮುತ್ರಿಕ ಪುಣ್ಯಯಶೋಭಿವೃದ್ಧಯೇ ಕರಹಡವಿನಿರ್ಗತ ಭರದ್ವಾಜಾಗ್ನಿ-

ವೇಶ್ಯಾಂಗಿರಸ ಬಾರ್ಹಸ್ಪತ್ಯಾನಾಂ ಬ್ರಾಹ್ಮಣಾನಾಂ ಗ್ರಾಮೋದತ್ತಃ . . . " (ಅದೇ).

(ii) "ರಟ್ಟವಂಶೋದ್ಭವಂ ಗರುಡಲಾಂಛನಂ . . . ಲಟ್ಟಲೂರಪುರ ಪರಮೇಶ್ವರಂ ಶ್ರೀ ನೃಪತುಂಗ ನಾಮಾಂಕಿತ ಲಕ್ಷ್ಮೀವಲ್ಲಭೇಂದ್ರಂ . . . ಮಹಾವಿಷ್ಣುವ ರಾಜ್ಯಂಬೋಲ್ . . . ಏೞ್ನೂಱೆಣ್ಭಂಟನೆಯ ವ್ಯಯಮೆಂಬ ಸಂವತ್ಸರಂ ಪ್ರವರ್ತಿಸೆ . . . ಶ್ರೀಮದಮೋಘವರ್ಷ ನೃಪತುಂಗ ನಾಮಾಂಕಿತಂ . . . ಸಂವತ್ಸರಂಗಳ್ ಅಯ್ವತ್ತೆರಡುಮಪ್ . . . ಸಲುತ್ತಿರೆ ಅತಿಶಯಧವಳ ನರೇಂದ್ರ ಪ್ರಸಾದದಿಂದಮಮೋಘವರ್ಷದೇವ ಪದಪಂಕಜಭ್ರಮರಂ . . . " (ಶಾಸನದ ಕಾಲ: ಕ್ರಿ. ಶ. ೮೬೬, ಜೂನ್ ೧೬. (I. A., p. 218-19: 'ನೃಪತುಂಗನ ಮತವಿಚಾರ'—ಗೋವಿಂದ ಪೈ; ಕ. ಸಾ. ಪ., ೧೨-೪).

11 ಯಸ್ಯ ಪ್ರಾಂಶುನಖಾಂಶುಜಾಲ ವಿಸರದ್ಧಾರಾಂತರಾವಿರ್ಭವತ್ |
ಪಾದಾಂಭೋಜ ರಜಃಪಿಶಂಗ ಮುಕುಟ ಪ್ರತ್ಯಗ್ರರತ್ನದ್ಯುತಿಃ ||
ಸಂಸ್ಮರ್ತಾ ಸ್ವಯಮಮೋಘವರ್ಷ ನೃಪತಿಃ ಪೂತೋಹಮದ್ಯೇತ್ಯಲಂ |
ಸಶ್ರೀಮಾನ್ ಜಿನಸೇನ ಪೂಜ್ಯ ಭಗವತ್ಪಾದೋ ಜಗನ್ಮಂಗಲಮ್ ||೧೦||

(ನೃಪತುಂಗನ ಮತವಿಚಾರ: ಗೋವಿಂದ ಪೈ; ಕ.ಸಾ.ಪ., ೧೨-೪).

12 ಉಮಾಸ್ವಾತಿಯ 'ತತ್ತ್ವಾರ್ಥಸೂತ್ರ' ಎಂಬ ಜೈನಧರ್ಮ ಗ್ರಂಥಕ್ಕೆ ವೀರಸೇನಾಚಾರ್ಯರು 'ಜಯಧವಲಾ' ಟೀಕೆಯನ್ನು ಬರೆದಿದ್ದರು; ಅವರು ೨೦,೦೦೦ ಶ್ಲೋಕಗಳನ್ನು ಮಾತ್ರ ಬರೆದು ನಿರ್ವಾಣ ಹೊಂದಿದ್ದರು; ಜೀನಸೇನರು ಹೆಚ್ಚಿನ ೪೦,೦೦೦ ಶ್ಲೋಕಗಳನ್ನು ಬರೆದು, ಗ್ರಂಥವನ್ನು ಪೂರೈಸಿದರು. ಆ ವೇಳೆಗೆ, ಅವರಿಗೆ ಸುಮಾರು ೮೫ರ ವಯಸ್ಸು. (Jinasena II, author of Maha Purana, wrote Jayadhavala Tika on the work of Virasena in S. 759 when Amoghavarsa was ruling.—Dr. S. Srikantha Sastri : Sources of Karnataka History). ಅವರ ಇತರ ಗ್ರಂಥಗಳು: ೧. **ವರ್ಧಮಾನ ಪುರಾಣ,** ೨. **ಜಿನೇಂದ್ರಗುಣಸಂಸ್ತುತಿ.** ೩. **ಆದಿಪುರಾಣ** (ಅಥವಾ ಪೂರ್ವಪುರಾಣ): ಇದು ಅವರ ಕಟ್ಟಕಡೆಯ ಗ್ರಂಥ. ಇದನ್ನು ಬರೆದು ಮುಗಿಸುವ ವೇಳೆಗೆ ಸುಮಾರು ೯೫ರ ವಯಸ್ಸಾಗಿದ್ದು, ಸುಮಾರು ಕ್ರಿ. ಶ. ೮೪೮ರಲ್ಲಿ ಮರಣಹೊಂದಿರಬಹುದು ಎಂದು ಊಹಿಸಲಾಗಿದೆ. ೪. **ಪಾರ್ಶ್ವಾಭ್ಯುದಯ ಕಾವ್ಯ:** ಕಾಳಿದಾಸನ 'ಮೇಘದೂತ' ವನ್ನವಲಂಬಿಸಿದ 'ಸಮಸ್ಯಾಪೂರ್ತಿ ರೂಪದ ಚಿಕ್ಕ ಕಾವ್ಯ'; ೪ ಸರ್ಗಗಳಿವೆ; ಪ್ರತಿ ಸರ್ಗಾಂತ ಗದ್ಯ ಹೀಗಿದೆ: "ಇತ್ಯಮೋಘವರ್ಷ

ಪರಮೇಶ್ವರ ಪರಮಗುರು ಶ್ರೀ ಜಿನಸೇನಾಚಾರ್ಯ ವಿರಚಿತ ಮೇಘದೂತವೇಷ್ಟಿತೇ ಪಾರ್ಶ್ವಾಭ್ಯುದಯೇ . . ." ಇದರಿಂದಲೂ, ಕಾವ್ಯದ "ಭುವನಮವತು ದವಸ್ಸರ್ವದಾಮೋಘವರ್ಷಃ" (IV-೭೦) ಎಂಬ ಆಶೀರ್ವಚನದಿಂದಲೂ 'ಅಮೋಘವರ್ಷ' ನೆಂಬ ರಾಜನ ಕಾಲದಲ್ಲಿ ಇದು ರಚಿತ, ಆತನ ಗುರು 'ಜಿನಸೇನಾಚಾರ್ಯ' ಎಂಬ ಸಂಗತಿ ತಿಳಿದುಬರುತ್ತದೆ. ಗೋವಿಂದ ಪೈ ಅವರ ಅಭಿಪ್ರಾಯದಂತೆ, ಜಿನಸೇನರು ಇದನ್ನು ತಮ್ಮ ೪೦-೪೫ರ ಪ್ರಾಯದಲ್ಲಿ, ಸುಮಾರು ಕ್ರಿ. ಶ. ೮೦೦ರಲ್ಲಿ, ಎಂದರೆ ನೃಪತುಂಗನು ಪಟ್ಟಕ್ಕೆ ಬರುವುದಕ್ಕೆ ೧೫ ವರ್ಷ ಮುಂಚೆ, (ಎಂದರೆ ನೃಪತುಂಗನು ಚಿಕ್ಕ ಮಗುವಾಗಿದ್ದಾಗ) ರಚಿಸಿರಬೇಕು ಎಂದು ಊಹಿಸಲಾಗಿದೆ. ಅಲ್ಲದೆ, ಈ ಕಾವ್ಯದ ಸರ್ಗಾಂತ ಗದ್ಯ ಪ್ರಕ್ಷಿಪ್ತವಾಗಿರಬೇಕೆಂದು ಗೋವಿಂದ ಪೈ ಅವರು ತೀರ್ಮಾನಿಸಿದ್ದಾರೆ. ಹೀಗಿರುವುದರಿಂದ, ಈ ಕಾವ್ಯದಲ್ಲಿನ ಅಮೋಘವರ್ಷ ಪರವಾದ ಉಲ್ಲೇಖಗಳನ್ನು ಪ್ರಮಾಣಭೂತವೆಂದು ಅಂಗೀಕರಿಸುವುದು ಕಷ್ಟ. ಅಲ್ಲದೆ, ಈ ಉಲ್ಲೇಖಗಳಿಂದ ನೃಪತುಂಗನು ಜಿನಸೇನರಿಂದ ಜೈನಧರ್ಮ ಸ್ವೀಕಾರಮಾಡಿ, ಅವರ ಶಿಷ್ಯನಾದನೆಂಬ ಸಂಗತಿ ಹೊರಪಡುವುದಿಲ್ಲ.

13 "ಶ್ರೀಮದಮೋಘವರ್ಷೇಣ ಯೇನಸ್ವೇಷ್ಟ ಹಿತೈಷಿಣಾ ॥
ವಿಧ್ವಸ್ತೈಕಾಂತಪಕ್ಷಸ್ಯ ಸ್ಯಾದ್ವಾದನ್ಯಾಯವಾದಿನಃ ।
ದೇವಸ್ಯ ನೃಪತುಂಗಸ್ಯ ವರ್ಧತಾಂ ತಸ್ಯ ಶಾಸನಂ ॥"

("Mahavira, the author of this Mathematical work, was the disciple of ವಿದ್ಯಾನಂದ ವಾದೀಂದ್ರ and the teacher to Amoghavarsha. Amoghavarsha had the titles Deva, Nripatunga"—Dr. S. Srikantha Sastry, Sources of Karnataka History, p. 71).

ಮುಳಿಯ ತಿಮ್ಮಪ್ಪಯ್ಯನವರು, "ಮಹಾವೀರಾಚಾರ್ಯನೇನೋ ನೃಪತುಂಗನ ಆಸ್ಥಾನದಲ್ಲೇ ಇದ್ದವನು" ಎಂದು ಅಭಿಪ್ರಾಯಪಟ್ಟು, "ಸ್ಯಾದ್ವಾದ ನ್ಯಾಯ ವಾದಿನಃ" ಎಂಬ ಕಡೆ "ಸ್ಯಾದ್ವಾದ ನ್ಯಾಯ ವೇದಿನಃ" ಎಂದು ಪಾಠವಿದ್ದಿರಬೇಕೆಂದು ಊಹಿಸಿ, ಜೈನಧರ್ಮವನ್ನು ಬಲ್ಲವನಾಗಿದ್ದನು ಎಂಬ ಅರ್ಥವನ್ನು ಹೊರಡಿಸಿದ್ದಾರೆ. ಇದು ವಿಚಾರಣೀಯವಾದ ಅಂಶ.

14 " . . . It is variously attributed to Sankaracharya, Sankaranada, and a Svetambara writer Vimala. But, the royal authorship of 'Ratnamala' is confirmed by a

Tibetan translation of it discovered by Schiefner in which the author is represented to have been a King, and his Tibetan name, as re-translated into Sanskrit by the same scholar, is Amoghodaya, which obviously stands for Amoghavarsha. This work was composed between Saka 797-99; in the former year Nripatunga abdicated in favour of his son Akalavarsha." (K. B. Pathak: (ಕವಿರಾಜಮಾರ್ಗದ ಮುನ್ನುಡಿ, ಪು. ೯).

15 "ನೃಪತುಂಗನು ೬೨ ವರ್ಷಗಳು ರಾಜ್ಯಭಾರ ಮಾಡಿದನು. ಬಳಿಕ ತಾನೇ ರಾಜ್ಯವನ್ನು ಬಿಟ್ಟಂತೆ ಅವನು ಸಂಸ್ಕೃತದಲ್ಲಿ ಬರೆದಿರುವ ಪ್ರಶ್ನೋತ್ತರ ಮಾಲೆಯೆಂಬ ಗ್ರಂಥದ ಅಂತ್ಯ ಶ್ಲೋಕದಿಂದ ತಿಳಿಯುತ್ತದೆ" (ಕ. ಕ. ಚರಿತೆ—ಪ್ರ. ಸಂಪುಟ, ೧೯೨೪; ಪು. ೧೮).

"He has written in Sanskrit a small work called Prasnottaramala, of which the concluding verse tells us that he voluntarily retired from the throne. It may be of some interest to learn that Ugraditya, the Jaina author of Kalyana Karaka, a Sanskrit work on medicine, says at the close of work that at the instance of this King he delivered at his court, in the presence of many physicians and doctors, a discourse on the evils of a flesh diet and on its avoidance in the treatment of disease. Nripatunga was a Jaina King, a disciple of Jinasena, the author of Adipurana." (History of Kannada Literature, 1940; p. 2).

16 ಪ್ರಶ್ನೋತ್ತರಮಾಲಿಕೆಯ ಮುಖ್ಯ ಪ್ರಸಕ್ತ ಶ್ಲೋಕಗಳು:

'ನಿರ್ಣಯಸಾಗರ' ಮುದ್ರಣಾಲಯದ ಮುದ್ರಿತ ಪ್ರತಿ ಎರಡು ಹಸ್ತಪ್ರತಿಗಳ ಪಾಠಗಳನ್ನು ಆಧರಿಸಿದೆ: 'ಕ' ಮತ್ತು 'ಖ'. ಈ ಎರಡು ಪ್ರತಿಗಳ ಕೊನೆಯ ಶ್ಲೋಕ ಮಾತ್ರ ಎರಡರಲ್ಲಿ ಭಿನ್ನವಾಗಿದೆ. ಎರಡಕ್ಕೂ ಸಮಾನವಾಗಿರುವ ಶ್ಲೋಕಗಳಲ್ಲಿ ಈ ಕೆಳಗಿನವು ಗಮನಾರ್ಹ.

ಪ್ರಣಿಪತ್ಯ ವರ್ಧಮಾನಂ ಪ್ರಶ್ನೋತ್ತರ ರತ್ನಮಾಲಿಕಾಂ ವಕ್ಷ್ಯೆ ।
ನಾಗನರಾಮರ ವಂದ್ಯಂ ದೇವಂ ದೇವಾಧಿಪಂ ವೀರಂ ॥ ೧ ॥

ಕಃಖಲು ನಾಲಂಕ್ರಿಯತೇ ದೃಷ್ಟಾದೃಷ್ಟಾರ್ಥ ಸಾಧನಪಟೀಯಾನ್ ।
ಕಂಠಸ್ಥಿತಯಾ ವಿಮಲ ಪ್ರಶ್ನೋತ್ತರ ರತ್ನಮಾಲಿಕಯಾ ॥ ೨ ॥

* * *

ಇತಿ ಕಂಠಗತಾ ವಿಮಲಾ ಪ್ರಶ್ನೋತ್ತರ ರತ್ನಮಾಲಿಕಾ ಯೇಷಾಮ್ ।
ತೇ ಮುಕ್ತಾಭರಣಾ ಅಪಿ ವಿಭಾಂತಿ ವಿದ್ವತ್ಸಮಾಜೇಷು ॥ ೨೮ ॥

'ನಿರ್ಣಯಸಾಗರ' ಮುದ್ರಣಾಲಯದ ಕ+ಖ ಹಸ್ತಪ್ರತಿಗಳಲ್ಲಿ 'ಕ' ಪ್ರತಿಯ ಕೊನೆಯ ಪದ್ಯ:

ರಚಿತಾ ಸಿತಪಟ ಗುರುಣಾ ವಿಮಲಾ ವಿಮಲೇನ ರತ್ನಮಾಲೇವ ।
ಪ್ರಶ್ನೋತ್ತರಮಾಲೇಯಂ ಕಂಠಗತಾ ಕಂ ನ ಭೂಷಯತಿ ॥ ೨೯ ॥

'ಖ' ಪ್ರತಿಯ ಪಾಠ:

ವಿವೇಕಾತ್ಯಕ್ತರಾಜ್ಯೇನ ರಾಜ್ಞೀಯಂ ರತ್ನಮಾಲಿಕಾ
ರಚಿತಾಮೋಘವರ್ಷೇಣ ಸುಧಿಯಾ ಸದಲಂಕೃತಿಃ ॥ ೨೯ ॥

(i) ಈ ಗ್ರಂಥವನ್ನು ಕುರಿತು ದಿ॥ ಗೋವಿಂದ ಪೈ ಅವರ ತೀರ್ಮಾನಗಳನ್ನು ಹೀಗೆ ಸಂಗ್ರಹಿಸಬಹುದು :

(೧) ಅದ್ವೈತವಿಚಾರ, ಭಕ್ತಿ, ವಿಷ್ಣುಶಿವಸ್ತುತಿ ಮುಂತಾದ ಯಾವ ವೈದಿಕ ಸಂಗತಿಗಳ ಪ್ರಸ್ತಾವವೂ ಇದರಲ್ಲಿ ಇಲ್ಲ. ಆದ್ದರಿಂದ, ಇದು ಶಂಕರಾಚಾರ್ಯ ಇಲ್ಲವೆ ಶಂಕರಾನಂದಗುರು ಕೃತವಲ್ಲ. (೨) 'ಖ' ಪ್ರತಿಯ ಕಡೆಯ ಶ್ಲೋಕ ('ವಿವೇಕಾತ್ತ್ಯಕ್ತ . . . ಸದಲಂಕೃತಿಃ') ಮಾತ್ರ ಅನುಷ್ಟುಪ್ ಛಂದಸ್ಸಿನಲ್ಲಿದ್ದು, ಉಳಿದ ೨೮ ಆರ್ಯಾವೃತ್ತ ಛಂದಸ್ಸಿನಲ್ಲಿವೆ; 'ಕ' ಪ್ರತಿಯ (ಕಡೆಯ ೨೯ನೆಯದೂ ಸೇರಿ) ಎಲ್ಲ ಶ್ಲೋಕಗಳೂ ಆರ್ಯಾವೃತ್ತಗಳಾಗಿವೆ. ಆದ್ದರಿಂದ, ಛಂದಸ್ಸಿನ ಪ್ರಯೋಗದ ದೃಷ್ಟಿಯಿಂದ 'ಕ' ಪ್ರತಿಯಲ್ಲಿ ಸುಸಾಂಗತ್ಯ ಕಂಡು ಬಂದು, ಅದರಲ್ಲಿ ಹೇಳಿರುವ ವಿಮಲನೇ ಕರ್ತೃವಾಗಿ ಕಂಡುಬರುತ್ತದೆ. (೩) ಎರಡು ಪ್ರತಿಗಳಿಗೂ ಸಮಾನವಾಗಿರುವ ಮೇಲ್ಕಂಡ (೧, ೨, ೨೮) ಶ್ಲೋಕಗಳಲ್ಲಿ ಎಲ್ಲೆಡೆಯೂ 'ಪ್ರಶ್ನೋತ್ತರ' ಎಂಬ ಪೂರ್ವಪದ ಸಮೇತವಾದ 'ಪ್ರಶ್ನೋತ್ತರ ರತ್ನಮಾಲಿಕಾ' ಎಂದಿದೆ. 'ಕ' ಪ್ರತಿಯ ೨೯ನೆಯ (ಕೊನೆಯ) ಶ್ಲೋಕದಲ್ಲಿ 'ಪ್ರಶ್ನೋತ್ತರಮಾಲಾ' ಎಂದಷ್ಟೇ ಇದ್ದರೂ, 'ರತ್ನಮಾಲೇವ' ಎಂಬ ಮೊದಲ ಪಾದದ ಉಪಮಾನದಿಂದಾಗಿ ಅದು ಸಮಂಜಸವಾಗಿಯೇ ಇದೆ.

ಆದರೆ, 'ಖ' ಪ್ರತಿಯು ೨೯ನೆಯ (ಕೊನೆಯ) ಅನುಷ್ಟುಪ್ ಶ್ಲೋಕದಲ್ಲಿ ಕೇವಲ 'ರತ್ನಮಾಲಿಕಾ' ಎಂದಷ್ಟೇ ಇದ್ದು, ಮುಖ್ಯವಾದ ಪೂರ್ವಪದ ಇಲ್ಲವಾಗಿದೆ. ಆದ್ದರಿಂದ, 'ಖ' ಪ್ರತಿಯ ಕೊನೆಯ ಪದ್ಯ ಮೂಲಪ್ರತಿಯಲ್ಲಿ ಇದ್ದಿರಲಾರದು. (೪) ೨-೩೮ ಪದ್ಯಗಳಲ್ಲಿ 'ವಿಮಲ' ಪದದಲ್ಲಿ ಕವಿ ತನ್ನ ಹೆಸರನ್ನೆ ಸೂಚಿಸಿ, ಕೊನೆಯ ಪದ್ಯದಲ್ಲಿ ಸ್ಪಷ್ಟವಾಗಿಯೇ ಹೇಳಿಕೊಂಡಿದ್ದಾನೆ. (೫) ನೃಪತುಂಗನು ಕ್ರಿ. ಶ. ೮೭೫ರಲ್ಲಿ ಅಕಾಲವರ್ಷನಿಗೆ ಪಟ್ಟಕಟ್ಟಿ ನಿವೃತ್ತನಾದನೆಂದು ಪಾಠಕರು ಹೇಳಿರುವುದಕ್ಕೆ ಆಧಾರವಿಲ್ಲ. ಕ್ರಿ. ಶ. ೮೭೭ರ ಸೊರಬ ಶಾಸನದಂತೆ, ಆ ಇಸವಿಯವರೆಗೂ ನೃಪತುಂಗನೇ ಆಳುತ್ತಿದ್ದನು. (೬) ತಿಬೆಟ್ ಭಾಷಾಂತರದಲ್ಲಿನ ಅಮೋಘೋದಯನನ್ನು ಅಮೋಘವರ್ಷನೊಂದಿಗೆ ಸಮೀಕರಣ ಮಾಡುವುದು ಸಲ್ಲದು. ಅಮೋಘೋದಯ=ಅಮೋಘವರ್ಷ ಎಂದಾದರೂ, ತಿಬೆಟ್ ಭಾಷಾಂತರ ಪ್ರಕ್ಷಿಪ್ತಶ್ಲೋಕವುಳ್ಳ ಪ್ರತಿಯ ಭಾಷಾಂತರವಾಗಿರಬಹುದು.

ಆದ್ದರಿಂದ ಈ ಕವಿತೆಯ ಕರ್ತೃ 'ವಿಮಲ'; ನೃಪತುಂಗನಲ್ಲ. "... ಈ 'ವಿವೇಕಾತ್‌ತ್ಯಕ್ತ ರಾಜ್ಯೇನ' ಎಂಬ ಶ್ಲೋಕವು ಐತಿಹಾಸಿಕ ತಥ್ಯವನ್ನೇ ಹೇಳುತ್ತದೆಂದು ನಿಷ್ಪ್ರಮಾಣವಾಗಿ ಒಪ್ಪಿದರೂ, ಇದರಿಂದ ನೃಪತುಂಗನು ಜೈನಮತವನ್ನು ಅವಲಂಬಿಸಿದನೆಂದೇನೂ ಅರ್ಥವಾಗುವುದಿಲ್ಲ; ವಿವೇಕದಿಂದ ತಾನೆ ರಾಜ್ಯಭಾರವನ್ನು ಬಿಟ್ಟನೆಂದು ಇದೆಯಲ್ಲದೆ, ಆ ವಿವೇಕೋದಯವು ಆತನಿಗೆ ಜೈನಧರ್ಮದಿಂದ ಆದುದೆಂದೇನೂ ಇಲ್ಲ. (ಆ ವೇಳೆಗೆ, ಸುಮಾರು ೮೦-೮೨ ವಯಸ್ಸಿನ ಆತನಿಗೆ ಇದು ನೈಸರ್ಗಿಕ. ಈತನಿಗಿಂತ ಮೊದಲು ಅಜ್ಜ ಧ್ರುವರಾಜನ ಮೇಲ್ಪಂಕ್ತಿ ಇದ್ದೇ ಇದೆ.)" ('ನೃಪತುಂಗನ ಮತವಿಚಾರ': ಕ. ಸಾ. ಪ., ೧೨-೪).

(ii) ಮುಳಿಯ ತಿಮ್ಮಪ್ಪಯ್ಯನವರ ತೀರ್ಮಾನ:

"ಈ ಎರಡೂ ಶಾಸನಗಳಿಂದಾಗಿ (ಸೊರಬ ಶಾಸನ ನಂ. ೮೫ ಮತ್ತು ಕನ್ಹೇರಿ ಶಾಸನ) ಕ್ರಿ. ಶ. ೮೭೭ (ಶಾ. ಶ. ೭೯೯) ರಲ್ಲಿಯೂ ನೃಪತುಂಗನು 'ವಿವೇಕಾತ್ತ್ಯಕ್ತರಾಜ್ಯ' ನಾಗಿಲ್ಲ, ರಾಜ್ಯಾಧಿರೂಢನಾಗಿಯೇ ಇದ್ದನು ಎಂಬುದು ಸಿದ್ಧವಾಗುತ್ತಿದೆ. ಇದರಿಂದ ಈ ಪ್ರಶ್ನೋತ್ತರಮಾಲಿಕೆ ಎಂಬ ಮತಗ್ರಂಥದ ಕರ್ತೃತ್ವವು ನೃಪತುಂಗನಿಂದ ಕಳಚಿಹೋಗಿ ತನ್ಮೂಲಕವಾಗಿ ಆತನು ಜೈನಮತೀಯನು ಎನ್ನುವ ಹೇಳಿಕೆಯೂ ಮಾಸಿಹೋಗುತ್ತದೆ." (ಕವಿರಾಜಮಾರ್ಗವಿವೇಕ-೧, ಪು. ೭೨).

17 ಕವಿರಾಜಮಾರ್ಗವನ್ನು ಪ್ರಪ್ರಥಮವಾಗಿ ೧೮೮೪ರಲ್ಲಿಯೆ ವಿದ್ವಜ್ಜನರ ಗಮನಕ್ಕೆ ತಂದವರು ಬಿ. ಎಲ್. ರೈಸ್‌ರವರು ('Early Kannada Authors'–

JRAS, N. S., Vol. XX, pp. 295-314) ಎಂಬುದಾಗಿ ಕೆ. ಬಿ. ಪಾಠಕರು ಆ ಗ್ರಂಥದ ಪ್ರಥಮ ಮುದ್ರಣದ ಮುನ್ನುಡಿಯಲ್ಲಿ ತಿಳಿಸಿದ್ದಾರೆ. ಆದರೆ, J. F. ಫ್ಲೀಟರು, ಆ ಲೇಖನದಲ್ಲಿ ರೈಸರು ಎಲ್ಲಿಯೂ ಕವಿರಾಜಮಾರ್ಗದ ಹೆಸರನು ಕೂಡ ಎತ್ತಿಲ್ಲವೆಂದು ಹೇಳಿ, ಪಾಠಕರ ಈ ನಿರಾಧಾರವಾದ ಉಲ್ಲೇಖವನ್ನು 'slovenly' (ಅಲಕ್ಷ್ಯದ್ದು ಮತ್ತು ಅಜಾಗರೂಕ) ಎಂದು ಕರೆದಿದ್ದಾರೆ! (Ind. Ant. XXXIII).

18 ". . . ಇದೇ ಪತ್ರಿಕೆಯಲ್ಲಿಯೂ ಇತರ ಪತ್ರಿಕಗಳಲ್ಲಿಯೂ (ಎಂದರೆ, ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ ಮತ್ತು ಪ್ರಬುದ್ಧ ಕರ್ಣಾಟಕ—ಸಂ.) ಕವಿರಾಜಮಾರ್ಗದ ಕರ್ತೃವಿನ ವಿಷಯವಾಗಿ ಅನೇಕ ವಾಗ್ಯುದ್ಧಗಳು ನಡೆದಿವೆ. ಈ ಯುದ್ಧದಲ್ಲಿ ಅನ್ವಯಿಸುವ ಶಕ್ತಿ ನನಗಿಲ್ಲ. ಶ್ರೀಮಾನ್ ನಾರಾಯಣ ಶ್ರೀನಿವಾಸ ರಾಜಪುರೋಹಿತರು ಈ ಯುದ್ಧದಲ್ಲಿ ವಿಶೇಷವಾಗಿ ಅನ್ವಯಿಸಿ ಹಲವು ಆಯುಧಗಳನ್ನು ಜಳಪಿಸಿದ್ದಾರೆ. ಆದರೆ ಇದರಿಂದ ಕನ್ನಡಿಗರಿಗೆ ವಿಶೇಷ ಪ್ರಯೋಜನವಾದಂತೆ ಕಾಣುವುದಿಲ್ಲ. ಈ ವಾದದ ಗುಣಾವಗುಣಗಳನ್ನು ವಿಚಾರಮಾಡಲು ಇಲ್ಲಿ ಅವಕಾಶವಿಲ್ಲ; ಇಷ್ಟು ಮಾತ್ರ ಹೇಳಬಹುದು: ಜೈನನಾದ ನೃಪತುಂಗನು ಬ್ರಾಹ್ಮಣರ ಭಗವದ್ಗೀತೆಯ—'ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ | ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ‖' ಎಂಬ ಶ್ಲೋಕದಲ್ಲಿ ಉಕ್ತವಾದ ಕೆಲವು ಪದಗಳನ್ನೇ ತನಗೆ ಬಿರುದುಗಳಾಗಿ ಮಾಡಿಕೊಳ್ಳಲು ಕುತೂಹಲಿಯಾದುದಕ್ಕೆ ಕಾರಣವು ಗೋಚರವಾಗುವುದಿಲ್ಲ. ಶ್ರೀವಿಜಯ ಎಂಬ ಬಿರುದು ನೃಪತುಂಗನಿಗೆ ಉಂಟೆಂದು ತೋರಿಸುವುದಕ್ಕೆ ಶ್ರೀಮಾನ್ ರಾಜಪುರೋಹಿತರು—'ವೀರಶ್ರೀ ವಿಜಯನ ಕೆ | ಯ್ಯಾರೆ ಸುರಾಂಗನೆಯರೊಸೆದು ಪರಸುವ ರವಮುಂ | ಭೋರೆಂದೆಸಗುವ ಕುಸುಮಾ | ಸಾರದ ಬಲ್ಸರಿಯುಮೆಸೆದುವಂಬರತಳದೊಳ್ ‖' ಎಂಬ ಪದ್ಯವನ್ನು ಉದಾಹರಿಸಿದ್ದಾರೆ (ಪರಿಷತ್ಪತ್ರಿಕೆ, ಜುಲೈ ೧೯೨೩). ಈ ಪದ್ಯದಲ್ಲಿ ಶ್ರೀವಿಜಯ ಎಂಬ ಬಿರುದೇ ಇಲ್ಲ. ವೀರಶ್ರೀ ಎಂಬುದು ಕರ್ತೃ. ವಿಜಯ ಎಂದರೆ ಅರ್ಜುನ. ವೀರಲಕ್ಷ್ಮಿ ಅರ್ಜುನನ ಕೈಸೇರಲು ಸುರಾಂಗನೆಯರು ಹರಸಿದರು, ಪುಷ್ಪವೃಷ್ಟಿಯಾಯಿತು ಎಂಬುದು ಈ ಪದ್ಯದ ಅರ್ಥವು." (ಕವಿಚರಿತೆ: ತಿದ್ದಿದ ಮುದ್ರಣ, ೧೯೨೪; ಅವತರಣಿಕೆ, ಪು. ೨೦).

19 "These passages establish Nripatunga's claims to authorship beyond dispute." (K. B. Pathak: ಕವಿರಾಜಮಾರ್ಗದ ಪೀಠಿಕೆ). III-೨೩೦, III-೨೨೫ ಈ ಪದ್ಯಗಳಲ್ಲಿನ ಉಲ್ಲೇಖ

ಗಳನ್ನು ಕುರಿತು: " These facts prove that Nripatunga composed the present work."

20 " . . . all the various allusions to the method, style, opinions and teaching of Nripatunga, Atisayadhavala, etc., have, of course, to be interpreted in accordance with any specific information that we can find elsewhere. And, in the colophons, we have the plainest possible intimation that the author of the work was at any rate not Nripatunga. And the colophons explain, in the clearest manner, the real nature of the various references in the body of the work to the method, style, opinions and teaching of Nripatunga etc." (Dr. Fleet: Ind. Ant., Vol. XXXIII) (ಇಲ್ಲಿ ಒಂದು ಸಂಗತಿಯನ್ನು ಗಮನಿಸಬಹುದು: ಫ್ಲೀಟರು 'ಕವೀಶ್ವರ' ಪಕ್ಷವಾದರೂ, ನೃಪತುಂಗಪಕ್ಷ ನಿರಸನಕ್ಕೆ ಅವರು ಹೂಡಿರುವ ಪ್ರತಿವಾದ ಬಲವತ್ತರವಾಗಿದೆ. ಆದ್ದರಿಂದ, ಕವಿರಾಜಮಾರ್ಗವು ನೃಪತುಂಗಕೃತವಲ್ಲ, ಅನ್ಯಕವಿ ಕೃತ ಎಂದು ವಾದಿಸುವವರಿಗೆ ಅದು ಪ್ರಯೋಜನಕರವಾಗಬಲ್ಲದು. —ಸಂ.)

21 " ಕವಿರಾಜಮಾರ್ಗದ ದ್ವಿತೀಯ ಪರಿಚ್ಛೇದದ ಪದ್ಯಗಳು ೨೮–೨೯–೩೦–೫೩ ಇವುಗಳಿಗೆ ವೃತ್ತಿ ಇದೆ. ಪದ್ಯ ೨೮ರ ವೃತ್ತಿಯಿಂದ ಹೊಸ ಅಂಶವೊಂದು ವ್ಯಕ್ತವಾಗುವುದರಿಂದ ಆ ಪದ್ಯವನ್ನೂ ಅದರ ವೃತ್ತಿಯನ್ನೂ ಇಲ್ಲಿ ಕೊಡಲಾಗಿದೆ . . . ವೃತ್ತಿ :—' ಕನ್ನಡ ಕವಿತೆಯೆಂಬ ಪೆಣ್ಗೆ ಪ್ರಾಸಮೆ ಪ್ರಾಣಮಾಪ್ರಾಸಂ ಶಬ್ದಾಳಂಕಾರದೊಳತಿಶಯಮ(ದ)ಜಿ ಪ್ರಪಂಚಮುಂ ನೃಪತುಂಗದೇವನ ಮತದಿಂ ಪೇೞ್ವೆಂ.'

ಈ ವೃತ್ತಿಯನ್ನು ಯಾರೇ ಬರೆದಿರಲಿ, ಇದರಿಂದ ದ್ಯೋತವಾಗುವ ಮಹತ್ತ್ವದಂಶವೆಂದರೆ ಕೃತಕೃತ್ಯಮಲ್ಲವಲ್ಲಭನೆಂದರೆ ನೃಪತುಂಗದೇವನೆಂದೂ, ಆ ನೃಪತುಂಗನೇ ಕವಿರಾಜಮಾರ್ಗವನ್ನು ಬರೆದಿರುವನೆಂದೂ ಅದೀಗ ಮತ್ತಷ್ಟು ಬಲಪಡುವುದೆಂಬುದು. ಮುಂದೆ ಬೇರೆ ಎಡೆಯಲ್ಲಿ ಬರುವ ಪ್ರಯೋಗದಿಂದ ಈ ಅಂಶವು ಇನ್ನೂ ದೃಢವಾಗುತ್ತದೆ. (ಪು. ೩೭).

[" ಗಱಿಯಿಸಿದರ್ಥಂ . . . " ಎಂದು ಮೊದಲಾಗುವ II–ಜನೆಯ ಪದ್ಯ].
" ಶ್ರೀವಿಜಯನ ಪ್ರಯೋಗಂ."

" ವ್ಯಾಖ್ಯಾನಕಾರನು ಈ ಪದ್ಯವನ್ನು ಉದಾಹರಿಸಿ ಅದನ್ನು ಶ್ರೀವಿಜಯನ ಪ್ರಯೋಗವೆಂದು ಕರೆದಿರುವುದರಿಂದ ಕವಿರಾಜಮಾರ್ಗವನ್ನು ಬರೆದವನು ಶ್ರೀ ವಿಜಯನೆಂಬಂಶವು ಮತ್ತಷ್ಟು ದೃಢಪಡುತ್ತದೆ. ಮೇಲೆ . . . ೨೮ನೆಯ ಪದ್ಯವನ್ನು ಉದಾಹರಿಸಿದೆಯಷ್ಟೆ. ಅಲ್ಲಿ ಕೃತಕೃತ್ಯಮಲ್ಲವಲ್ಲಭ ಎಂಬುದಕ್ಕೆ ವ್ಯಾಖ್ಯಾನಕಾರನು ನೃಪತುಂಗದೇವನೆಂದು ವ್ಯಾಖ್ಯಾನಾವಸರದಲ್ಲಿ ಬರೆದಿದ್ದಾನೆ. ಇಲ್ಲಿ ಶ್ರೀವಿಜಯನೆಂದು ಹೇಳಿದ್ದಾನೆ. ಕೃತಕೃತ್ಯಮಲ್ಲವಲ್ಲಭ, ನೃಪತುಂಗದೇವ, ಶ್ರೀವಿಜಯ ಎಂಬಿವುಗಳು ಒಬ್ಬನಿಗೇ ಇದ್ದ ಪರ್ಯಾಯ ನಾಮಗಳು. ಶ್ರೀವಿಜಯನು ಬೇರೆ ಎಂಬ ತಿಳಿವಳಿಕೆಯನ್ನು ಇದು ನಿರಸನಮಾಡುವುದು. ಕೇಶಿರಾಜನು ಪೂರ್ವಕವಿಗಳನ್ನು ಸ್ಮರಿಸುವ ಸಂದರ್ಭದಲ್ಲಿ ನೃಪತುಂಗನ ಹೆಸರನ್ನು ಹೇಳದೆ ಶ್ರೀವಿಜಯನ ಹೆಸರನ್ನು ಹೇಳಿರುವುದರಿಂದ ಇವು ಬೇರೆ ಬೇರೆ ಕವಿಗಳ ಹೆಸರಾಗಿರಬೇಕೆಂದು ಕೆಲವರು ಅಭಿಪ್ರಾಯಪಟ್ಟಿರುವುದನ್ನು ಪಂಡಿತರು ಬಲ್ಲರು. ಶ್ರೀವಿಜಯನೇ ನೃಪತುಂಗದೇವನೆಂಬುದು ಈ ವ್ಯಾಖ್ಯಾನಕಾರನ ಬರೆವಣಿಗೆಯಿಂದ ಸ್ಪಷ್ಟವಾಗಿದೆ. ಕೇಶಿರಾಜನು ಶ್ರೀವಿಜಯನ ಹೆಸರನ್ನು ಹೇಳಿರುವುದರಿಂದ ಅದು ನೃಪತುಂಗನ ಹೆಸರೆಂದು ನಿರ್ಧರಿಸಬೇಕು. ಈ ಎರಡು ಹೆಸರುಗಳು ಒಬ್ಬನಿಗೆ ಇದ್ದುದರಿಂದ, ನೃಪತುಂಗನು, ಎಂದರೆ ಶ್ರೀವಿಜಯನು ಕವಿರಾಜಮಾರ್ಗದ ಕರ್ತೃವೆಂದು ನಿರ್ಧರಿಸಿಕೊಳ್ಳಬೇಕು. ಕವಿರಾಜಮಾರ್ಗದಲ್ಲಿ ಪದ್ಯಕವಿಗಳನ್ನು ಹೆಸರಿಸುವ ಸಂದರ್ಭದಲ್ಲಿ ಶ್ರೀವಿಜಯನ ಹೆಸರೂ ಬಂದಿರುವುದರಿಂದ ಕವಿರಾಜಮಾರ್ಗವನ್ನು ಬರೆದ ಶ್ರೀವಿಜಯನು ತನ್ನ ಹೆಸರನ್ನು ಕವಿಗಳ ಗುಂಪಿಗೆ ಸೇರಿಸಿ ಹೇಳಿದುದು ಅಷ್ಟು ಯುಕ್ತವಾಗಲಾರದೆಂಬ ಆಕ್ಷೇಪಣೆ ಬಲವತ್ತರವಾಗಿಲ್ಲ. ನೃಪತುಂಗನು ಆಗಿನ ಕಾಲದಲ್ಲಿ ಸರ್ವಮಾನ್ಯನಾದ ಕವಿಯಾಗಿದ್ದನು. ಎಲ್ಲರ ಮಾನ್ಯತೆಗೆ ಪಾತ್ರನಾಗಿದ್ದ ರಾಜಕವಿ ತನ್ನ ಹೆಸರನ್ನೂ ಕವಿಗಳ ಶ್ರೇಣಿಯಲ್ಲಿ ಸೇರಿಸಿ ಹೇಳಿದುದರಿಂದ ಯಾವ ನ್ಯೂನತೆಯೂ ಇಲ್ಲ, ಅಹಂಕಾರವೂ ಇಲ್ಲ. ತಮ್ಮನ್ನು ತಾವೇ ಹೊಗಳಿಕೊಳ್ಳುವ ಕವಿಗಳ ಆತ್ಮಶ್ಲಾಘನೆಗಿಂತ ಇದೇನೂ ಅಧಿಕವಾಗಿಲ್ಲ. ಆದ್ದರಿಂದ ಕೇಶಿರಾಜನೂ ಅವನಿಗೆ ಮುಂಚೆ ಇದ್ದ ದುರ್ಗಸಿಂಹನೂ ಹೆಸರಿಸಿದ ಶ್ರೀವಿಜಯನು ನೃಪತುಂಗದೇವನೇ." ಪ್ರೊ॥ ಡಿ. ಕೆ. ಭೀಮಸೇನರಾವ್ : 'ಶಬ್ದಮಣಿದರ್ಪಣದ ಪಾಠಾಂತರಗಳು' (೧೯೫೧). (ಪು. ೪೧–೪೪).

22 "... ತಥಾಪಿ ಸ ಕೈಶ್ಚಿದೇವ ಅಂಗೀಕ್ರಿಯತೇ ಉತ್ತರಮಾರ್ಗಾನುಗಾಮಿಭಿಃ ಕವೀಶ್ವರೈಃ ನ ಸರ್ವೈಃ, ದಕ್ಷಿಣಮಾರ್ಗಾನುಯಾಯಿಭಿಸ್ತೈರನಂಗೀಕಾರಾತ್. 'ಎನ್' ಪಕ್ಷಪಾತಿನೋ ಹಿ ದಾಕ್ಷಿಣಾತ್ಯಾಃ ಕವಿಜನಾ ಇತಿ. ದಕ್ಷಿಣೋತ್ತರ ಮಾರ್ಗಭೇದ ಭಿನ್ನ ಪ್ರಯೋಗ ಚಾತುರೀಪ್ರಪಂಚೋ ನೃಪತುಂಗ ಗ್ರಂಥೇ

ದ್ರಷ್ಟವ್ಯ ಇತಿ."—ಶಬ್ದಾನುಶಾಸನ, ೨೮೮ನೆಯ ಸೂತ್ರದ ವ್ಯಾಖ್ಯಾನ; ಪು. ೨೬೩.

23 "It is apparently thought that no quotations from previous literature are to be found in this work (Preface, p. 22), the quotations under Prasa, etc., being interpolations (foot note, p. 22). But it has to be noticed that one merit in Kannada Lakshnagranthas is a careful and meticulous use of quotations from older writers by way of illustrations to rules and 'Nripatunga', whoever he is, is no exception." (Q. J. M. S, Vol. XXIII, No. 3, pp. 438–39). (ಈ ಉದ್ಧರಣದಲ್ಲಿ ನಿರ್ದೇಶಿಸಿರುವ ಪುಟಸಂಖ್ಯೆ ಮದ್ರಾಸು ಮುದ್ರಣವನ್ನು ಕುರಿತದ್ದು. —ಸಂ.)

24 'ಇವು ನಿಯತಂ ದಕ್ಷಿಣದೇಶವರ್ತಿ ಕವಿರಾಜಮಾರ್ಗದೊಳ್ ನೆಗಱ್ಗುಂ ಮ | ತ್ತವಱ ವಿಪರ್ಯಯ ವೃತ್ತಿಯೆ ಬವರಿಸುಗುಮುದೀಚ್ಯ ಮಾರ್ಗದೊಳ್ ಪ್ರಚುರತೆಯಿಂ ||' (ಕಾವ್ಯಾವಲೋಕನ, ಸೂ. ೧೨೪). 'ಇವು (ಎಂದರೆ ಈ ಹತ್ತು ಗುಣಗಳು) ದಕ್ಷಿಣ ದೇಶದಲ್ಲಿ ವರ್ತಿಸುವ (ಎಂದರೆ ರೂಢಿಯಾಗಿರುವ) ಕವಿಶ್ರೇಷ್ಠರ ಮಾರ್ಗದಲ್ಲಿ ನಿಯತವಾಗಿ ಕಂಡುಬರುತ್ತವೆ; ಅವುಗಳ ವಿಪರ್ಯಯ ಪ್ರಯೋಗವೆ ಉತ್ತರಮಾರ್ಗದಲ್ಲಿ ವಿಶೇಷವಾಗಿ ಸಲುವಳಿಯಾಗುತ್ತವೆ.'—ಇದು ಪದ್ಯದ ತಾತ್ಪರ್ಯ. ಇಲ್ಲಿ ಕಾವ್ಯಾವಲೋಕನಕಾರ 'ದಕ್ಷಿಣ ದೇಶವರ್ತಿ ಕವಿರಾಜಮಾರ್ಗ', 'ಉದೀಚ್ಯಮಾರ್ಗ' ಎಂಬುವನ್ನು ೧೨೫ನೆಯ ಸೂತ್ರದಲ್ಲಿ 'ವೈದರ್ಭಗೌಡಮಾರ್ಗ' ಎಂದೇ ಸ್ಪಷ್ಟಪಡಿಸಿದ್ದಾನೆ. 'ದಕ್ಷಿಣದೇಶವರ್ತಿ ಕವಿರಾಜಮಾರ್ಗ' ಎಂಬ ಮಾತಿಗೆ 'ದಕ್ಷಿಣ ದೇಶದಲ್ಲಿ ಪ್ರಚುರವಾಗಿರುವ ಕವಿಶ್ರೇಷ್ಠರ ಕಾವ್ಯಮಾರ್ಗ' ಎಂದು ಅರ್ಥಮಾಡಬೇಕು. ಆದ್ದರಿಂದ, "...'ಇವು ನಿಯತಂ ದಕ್ಷಿಣದೇಶವರ್ತಿ ಕವಿರಾಜಮಾರ್ಗದೊಳ್ ನೆಗಱ್ಗುಂ' ಎಂದಿರುವುದರಿಂದ (ನಾಗವರ್ಮನು) 'ಕವಿರಾಜಮಾರ್ಗ' ಗ್ರಂಥವನ್ನೂ ಓದಿರುವುದು ಸೂಚಿತವಾಗುತ್ತದೆ" ಎಂದು ಡಾ|| ಕೆ. ಕೃಷ್ಣಮೂರ್ತಿಗಳು ಅಭಿಪ್ರಾಯಪಟ್ಟಿರುವುದಕ್ಕೆ ('ಕನ್ನಡದಲ್ಲಿ ಕಾವ್ಯತತ್ತ್ವ', ಪು. ೪೨) ನಾಗವರ್ಮನ ಈ ಉಕ್ತಿ ಆಧಾರವಾಗಲಾರದು. ಇದರಿಂದ, ಅವನು ಕವಿರಾಜಮಾರ್ಗವನ್ನು ಓದಿರಲಾರ ಎಂದು ನಮ್ಮ ಅಭಿಪ್ರಾಯವಲ್ಲ. ಆ ಅಭಿಪ್ರಾಯವನ್ನು ಸಮರ್ಥಿಸಲು ಈ ಉಕ್ತಿ ಆಧಾರವಾಗಲಾರದಷ್ಟೆ; ಬೇರೆಯ ಆಧಾರಗಳನ್ನು ಹುಡುಕಬೇಕು.

ಪ್ರೊ॥ ತೀ. ನಂ. ಶ್ರೀ ಯವರೂ ಹೆಚ್ಚುಕೆಡಮೆ ಡಾ॥ ಕೃಷ್ಣಮೂರ್ತಿಯವರ ಅಭಿಪ್ರಾಯವನ್ನೆ ಹೊಂದಿದ್ದಾರೆ. (ಭಾ. ಕಾ. ಮೀ., ಪು. xxii, ತಿದ್ದುಪಡಿ). ಡಿ॥ ಆರ್. ನರಸಿಂಹಾಚಾರ್ಯರು, ' The context clearly shows that the expression *Kavirajamarga* does not refer to any work of that name; but that it simply means the path of excellent poets." ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. (ಕಾವ್ಯಾವಲೋಕನ, ದ್ವಿತೀಯ ಮುದ್ರಣ. ಪು. xxxii)—

25 " ಕನ್ನಡದ ದಕ್ಷಿಣೋತ್ತರ ಮಾರ್ಗಗಳಿಗೆ ಸಂಬಂಧಿಸುವ ವಿಷಯವು ಕವಿರಾಜಮಾರ್ಗದಲ್ಲಿ ಒಂದೇ ಒಂದು ಕಡೆ ದೊರೆಯುತ್ತದೆ. ಅದಾವುದೆಂದರೆ, ಕ್ರಿಯೆಗಳಲ್ಲಿ ನೋೞ್ಪೆಂ, ತರಿಸುವೆಂ ಇತ್ಯಾದಿ ರೂಪಗಳನ್ನು ದಕ್ಷಿಣಮಾರ್ಗದ ಕವಿಗಳೂ ಅವಕ್ಕೆ ಪ್ರತಿಯಾಗಿ ನೋಡುವೆಂ, ತರಿಪೆಂ ಇತ್ಯಾದಿ ರೂಪಗಳ್ನು ಉತ್ತರಮಾರ್ಗದ ಕವಿಗಳೂ ಪ್ರಯೋಗಿಸುತ್ತಾರೆ ಎಂಬುದೇ. ಏವಂಚ ಸಮಾನಾರ್ಥಕವಾದ ಕೆಲವು ದ್ವಿರೂಪ ಕ್ರಿಯೆಗಳಲ್ಲಿ ಒಂದು ಉತ್ತರಮಾರ್ಗದಲ್ಲಿಯೂ ಮತ್ತೊಂದು ದಕ್ಷಿಣ ಮಾರ್ಗದಲ್ಲಿಯೂ ವಿಶೇಷವಾಗಿ ಬಳಕೆಯಲ್ಲಿರುವುದೇ ಈ ಮಾರ್ಗಗಳಿಗೆ ಭೇದಕಗುಣವೆಂದು ಫಲಿತವಾಯಿತು. ನೃಪತುಂಗನ ಕಾಲದಲ್ಲಿ ಒಂದು ವೇಳೆ ಈ ಭೇದವು ಇದ್ದಿರಬಹುದು. ಆದರೆ ಈಚೆಯ ಗ್ರಂಥಗಳಲ್ಲಿ ಕ್ರಿಯೆಗಳ ರೂಪದ್ವಯವೂ ದೊರೆಯುತ್ತದೆ. ಉತ್ತರಮಾರ್ಗದಲ್ಲಿ ನೃಪತುಂಗನ ಹೇಳಿಕೆಯ ಪ್ರಕಾರ ' ಬಿ ' ಕಾರ ವಿಶಿಷ್ಟವಾದ ಕ್ರಿಯಾರೂಪವು ಬಳಕೆಯಲ್ಲಿಲ್ಲ. ತೆಲುಗಿನಲ್ಲೂ ' ಬಿ ' ಕಾರವಿಲ್ಲ. ಆದುದರಿಂದ ಉತ್ತರಮಾರ್ಗವು ತೆಲುಗಿನ ಸಂಪರ್ಕದಿಂದ ಹುಟ್ಟಿತು ಎಂದು ನಿರ್ಣಯಿಸುವುದು ಧಾರ್ಷ್ಟ್ಯವೇ ಸರಿ. ತೆಲುಗಿನಲ್ಲಿ ಈಗ ' ಬಿ ' ಕಾರವಿಲ್ಲದಿದ್ದರೂ ಒಂದಾನೊಂದು ಕಾಲದಲ್ಲಿ ಅದು ಇದ್ದಿರಬಹುದು ಎಂಬ ಊಹೆಗೆ ಸಾಧಕವಾದ ಗುರುತುಗಳು ಶಬ್ದಗಳಲ್ಲಿ ಕಾಣುತ್ತವೆ . . . " ಎಂದು ಹೇಳಿ, ಮಾರ್ಗಭೇದ ವಿಚಾರದಲ್ಲಿ ನಾಗವರ್ಮ ಭಟ್ಟಾಕಳಂಕರ ಮತಗಳನ್ನು ತಿಳಿಸಿ, ಆರ್. ನರಸಿಂಹಾಚಾರ್ಯರು ತಮ್ಮ ವಾದವನ್ನು ಹೀಗೆ ಮುಗಿಸಿದ್ದಾರೆ: " ಇದುವರೆಗೂ ಮಾಡಿದ ವಿಚಾರದಿಂದ ಕನ್ನಡದಲ್ಲಿ ದಕ್ಷಿಣೋತ್ತರ ಮಾರ್ಗಗಳುಂಟು; ಅವಕ್ಕೆ ಸಮಾನಾರ್ಥಕವಾದ ದ್ವಿರೂಪಕ್ರಿಯೆಗಳಲ್ಲಿಯೂ ಉತ್ತಮಪುರುಷ ದ್ವಿರೂಪ ಸರ್ವನಾಮಗಳಲ್ಲಿಯೂ ಅನ್ಯತರವನ್ನು ಪ್ರಯೋಗಿಸುವುದೇ ಭೇದಕಗುಣವು— ಎಂದು ಫಲಿತವಾಯಿತು. ಈ ಭೇದಕ್ಕೆ ತಮಿಳಾಗಲಿ ತೆಲುಗಾಗಲಿ ಕಾರಣವೆಂದು ಹೇಳಲು ಆಧಾರವಿಲ್ಲ. ಆದುದರಿಂದ ಅತ್ಯಲ್ಪವಾಗಿಯೂ ಅಮುಖ್ಯವಾಗಿಯೂ ಇರುವ ಭೇದವನ್ನು ಆಧಾರವಾಗಿಟ್ಟು

ಕೊಂಡು ದಕ್ಷಿಣೋತ್ತರ ಮಾರ್ಗಗಳಿಗಾಗಿ ಈಗ ಹೋರಾಡುವುದು ಅಷ್ಟು ಪ್ರಯೋಜನಕಾರಿಯಲ್ಲ." (ಕವಿಚರಿತೆ, ಸಂಪುಟ ೨ರ ಅವತರಣಿಕೆ, ಪು. ೨೩–೨೫).

26 " . . . ಕನ್ನಡ ತೆಲುಗು ತಮಿಳು—ಈ ಮೂರೂ ಒಂದೇ ಮೂಲಭಾಷೆಯಿಂದ ಹುಟ್ಟಿದುವಾದ್ದರಿಂದ ತೆಲುಗು ತಮಿಳುಗಳ ಸಂಪರ್ಕದಿಂದಲೇ ಉತ್ತರ ದಕ್ಷಿಣ ಮಾರ್ಗಭೇದವುಂಟಾಯಿತೆಂಬ ವಾದವು ಸಮರ್ಪಕವಾದುದಲ್ಲ. ಹಿಂದೆಯೇ ಹೇಳಿದಂತೆ ದೇಶವಿಸ್ತಾರದಿಂದ ಪೂರ್ವದಲ್ಲಿಯೂ ಪ್ರಾಂತಭೇದವಿತ್ತೆಂದು ಸ್ಥೂಲವಾಗಿ ಒಪ್ಪಿಕೊಳ್ಳಬಹುದು. ಆ ವ್ಯತ್ಯಾಸವು ಇಂಥದೇ ಎಂದು ನಿರ್ಧರಿಸುವುದಕ್ಕೆ ಪ್ರಯತ್ನಿಸುವುದು ಪ್ರಕೃತಸ್ಥಿತಿಯಲ್ಲಿ ಸಾಹಸಕಾರ್ಯವೆಂದು ತೋರುತ್ತದೆ." (ಕನ್ನಡ ಕೈಪಿಡಿ, ಪ್ರಥಮ ಸಂಪುಟ, ಪು, ೩೬೫).

27 ಮಱುಗು (೧-೫೮); ಉಲ್ಲಿಂ, ಊ (೧-೬೩), ಉಂತೆ (೩-೧೦೫); ಅಱ್ತಿಯೆ, ಅನುಕ್ರಮೋಕ್ತಿಯೆ (೧-೮೫, ೮೭); ಅದರಱಿಯೆ (೧-೮೭); ನೋೞ್ಪಿಗ (=ನೋಡಲಿ). (೧-೮೯); ಈ ತೆಱತ್ತು, ಎರೞ್ತೆಱತ್ತು (೧-೧೦೧, ೧೧೪); ನೋಡಲಿಂ (೧-೧೨೨), ಕಲ್ಲದರಿಂ (೨-೧೩); ಬಾರಾದೆ, ಬಗೆಯಾದೆ, ತಡೆದಾನ್, ಅವನಾನ್, ಅಟ್ಟಿದೇನ್, (೧-೧೨೮); ಸಯ್(=ಸಾಯ್) (೧-೧೩೦); ಒಪ್ಪುವವಳಾನ್ (೨-೧೪೫), ಗುಣಂಗಳಾನ್ (೩-೧೨), ಮತ್ತು ೨-೧೭, ೧೮ರಲ್ಲಿನ ಇಂಥವೇ ಪ್ರಯೋಗಗಳು; ಅಪ್ಪೊನ್ (೨-೧೪೮); ಕಿರಿ (೩-೧೪೪).

ಮೇಲ್ಕಂಡ ಪ್ರಯೋಗಗಳಲ್ಲಿ ಕೆಲವುಗಳ ಬಗೆಗೆ ಬಿ. ಎಂ. ಶ್ರೀ. ಅವರ ಅಭಿಪ್ರಾಯ ಗಮನಾರ್ಹ:

"In st. 128 he gives examples of ಗೌರವ ದೋಷ, making a syllable long when it should be short. These are: ಬಗೆಯಾದೆ for ಬಗೆಯದೆ, ಅವನಾನ್ for ಅವನನ್, ಅಟ್ಟಿದೇನ್ for ಅಟ್ಟಿದೆನ್, ಬಾರಾದೆ (the true reading which satisfies the metre) for ಬಾರದೆ (which is the corrupt reading, apparently corrected by a copyist), ತಡೆದಾನ್ for ತಡೆದನ್. These, especially the negative forms of the verb, are taken even by the author of *Kavirajamarga* as errors, and as objectionable, when really the negative forms were the older forms found in inscriptions and nearer the Tamil forms which still persist to our own days. The

older forms in the accusative is noted by Kesiraja: Sutra 118, example: ತನತ್ತು ಬಿಲ್ಲಾನದನಂತೆ ಕೀಸುವಂ. (Nripatunga himself in II–15, 16, 17, 362. See also II–104, p. 54) (೩೬೨ ಪದ್ಯಸಂಖ್ಯೆ ತಪ್ಪಾಗಿ ಅಚ್ಚಾಗಿರುವ ಹಾಗೆ ಕಾಣುತ್ತದೆ. ಉಳಿದವು ಮದರಾಸು ಮುದ್ರಣದಲ್ಲಿರುವಂತೆ.—ಸಂ.) A curious trace of this is preserved in Kesiraja: Sutra 61, Parishad pp. 48–49. ಬಗೆವೊಡಮಿನಿಸಿನಿಸಿರ ಅದೆ. ಇರ ಅದೆ, ಇರಾದೆ, ಇರದೆ." (Q. J. M. S., Vol. XXIII New Series, No. 3; p. 439).

[I–೧೨೮ನೆಯ ಪದ್ಯಸಂಬಂಧವಾಗಿ ನಮ್ಮ ಟಿಪ್ಪಣಿಯನ್ನು ನೋಡಿ: ಪು. ೧೭೯. ಈ ಪದ್ಯ ಗೌರವದೋಷಕ್ಕೆ ಉದಾಹರಣೆಯಾಗಿರದೆ, ನಿಜವಾಗಿ ಲಘುದೋಷಕ್ಕೆ ಉದಾಹರಣೆ ಎಂಬ ನಮ್ಮ ಊಹೆ ಸರಿಯಾಗಿರುವ ಪಕ್ಷಕ್ಕೆ, ದೀರ್ಘ ಅಕಾರವನ್ನುಳ್ಳ ನಿಷೇಧಾತ್ಮಕ (ಬಾರಾದೆ ಇತ್ಯಾದಿ) ಕ್ರಿಯಾರೂಪಗಳು ಕವಿರಾಜಮಾರ್ಗಕಾರನಿಗೂ ಸಮ್ಮತವೆಂದಾಗುತ್ತದೆ. —ಸಂ.]

ಪರಿಶಿಷ್ಟ

ಕವಿರಾಜಮಾರ್ಗದಲ್ಲಿ ಬಳಕೆಯಾಗಿರುವ ಛಂದಸ್ಸುಗಳು

೧. ಛಂದಸ್ಸುಗಳ ಸಂಖ್ಯಾವಿವರ

ಪರಿಚ್ಛೇದ I: ಒಟ್ಟು ಪದ್ಯಸಂಖ್ಯೆ: ೧೫೦—ಕಂದ ೧೧೦; ವೃತ್ತ ೩೬; ಗೀತಿಕೆ ೪.

ಪರಿಚ್ಛೇದ II: ಒಟ್ಟು ಪದ್ಯಸಂಖ್ಯೆ: ೧೫೫—ಕಂದ ೯೬; ವೃತ್ತ ೧೫; ಗೀತಿಕೆ ೧೬; ಶ್ಲೋಕ ೨೮.

ಪರಿಚ್ಛೇದ III: ಒಟ್ಟು ಪದ್ಯಸಂಖ್ಯೆ: ೨೩೧—ಕಂದ ೨೦೭; ವೃತ್ತ ೨೦; ಗೀತಿಕೆ ೪. (ಮದರಾಸು ಪ್ರತಿಯಲ್ಲಿ ಮಾತ್ರ ಇದೆಯೆಂದು ಹೇಳಲಾದ ಒಂದು ಕಂದವನ್ನು ಬಿಡಲಾಗಿದೆ).

ಅಧಿಕ ಪಾಠ: ಕಂದ ೫.

ಗ್ರಂಥದ ಒಟ್ಟು ಪದ್ಯಸಂಖ್ಯೆ: ೫೩೬+೫. ಇವುಗಳಲ್ಲಿ, ಕಂದ ೪೧೩+೫; ವೃತ್ತ ೭೧; ಶ್ಲೋಕ ೨೮; ಗೀತಿಕೆ ೨೪.

೨. ವರ್ಣವೃತ್ತಗಳ ವಿವರ

(೧) ಚಂಪಕ ಮಾಲೆ: ನಜಭಜ ಜಂಜರಂ ಬಗೆಗೊಳುತ್ತಿರೆ ಚಂಪಕಮಾಲೆಯೆಂದಪರ್.

I—೧೧೫, ೧೧೬, ೧೨೦, ೧೨೧, ೧೨೨, ೧೨೩, ೧೨೪, ೧೪೯; II—೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦: ಒಟ್ಟು ೧೫.

(೨) ಉತ್ಪಲಮಾಲೆ: ಉತ್ಪಲಮಾಲೆಯಪ್ಪುದು ಭರಂ ನಭಭಂ ರಲಗಂ ನೆಗಟ್ಟಿರಲ್.

I—೧೧೩, ೧೧೪, ೧೧೭, ೧೧೮, ೧೧೯; II—೯೯, ೧೦೦, ೧೦೧, ೧೦೨, ೧೦೩, ೧೫೫: ಒಟ್ಟು ೧೧.

(೩) ದ್ರುತವಿಲಂಬಿತ: ದ್ರುತವಿಲಂಬಿತಮೊಪ್ಪೆ ನಭಂ ಭರಂ.

I—೧೩೮, ೧೩೯, ೧೪೧, ೧೪೨, ೧೪೩, ೧೪೪, ೧೪೫, ೧೪೬; III—೨೧೮, ೨೧೯: ಒಟ್ಟು ೧೦.

(೪) ಮಣಿ(ವಿ)ಭೂಷಣ: ಅಪ್ಪುದಾಮಣಿವಿಭೂಷಣಮೀ ರನಭಂಭರಂ.

I—೧೨೬, ೧೨೭, ೧೨೮, ೧೨೯, ೧೩೧, ೧೩೨, ೧೩೪; III—೨೨೦, ೨೨೪: ಒಟ್ಟು ೯.

(೫) ಮಾಲಿನೀ: ನನಮಯಯಯುಗಣಂಗಳ್ ಮಾಲಿನೀವೃತ್ತಮಕ್ಕುಂ.

II—೧೫೪; III—೨೦೯, ೨೧೦, ೨೧೧, ೨೧೨, ೨೧೩, ೨೧೪, ೨೧೫, ೨೧೬: ಒಟ್ಟು ೯.

(೬) ಮಂಗಳ: ನಭಜ ಜಂಜಗಮುಮೊಂದಿರಲಪ್ಪುದು ಮಂಗಳಂ.

I—೧೩೦, ೧೩೩, ೧೩೫, ೧೩೬; III—೨೨೧, ೨೨೨: ಒಟ್ಟು ೬.

(೭) ವಿಧಿವೃತ್ತ: ಸಜಸಂಸಯುಂ ನೆರೆದಿರಲ್ ವಿಧಿವೃತ್ತಮಕ್ಕುಂ.

III—೨೨೬, ೨೨೭, ೨೨೮, ೨೨೯: ಒಟ್ಟು ೪.

(೮) ಪುಷ್ಪಿತಾಗ್ರ: ಇದು ಅರ್ಧಸಮವೃತ್ತ. 'ಇದರ ವಿಷಮಪಾದಗಳಲ್ಲಿ ನನರಯ ಗಣಗಳೂ, ಸಮಪಾದಗಳಲ್ಲಿ ನಜಜರಗಣಗಳೂ ಒಂದು ಗುರುವೂ ಬರುವುವು.

I—೧೪೭, ೧೪೮; III—೨೩೦: ಒಟ್ಟು ೩.

(೯) ಮತ್ತೇಭವಿಕ್ರೀಡಿತ: ಸಭರಂ ನಂ ಮಯಲಂಗಮುಂ ಬಗೆಗೊಳಲ್ ಮತ್ತೇಭ ವಿಕ್ರೀಡಿತಂ.

I—೧೫೦; III—೨೩೧: ಒಟ್ಟು ೨.

(೧೦) ಶಾರ್ದೂಲವಿಕ್ರೀಡಿತ: ಕಣ್ಗೊಪ್ಪಲ್ ಮಸಜಂಸತಂತಗಮುಮಾ ಶಾರ್ದೂಲ ವಿಕ್ರೀಡಿತಂ.

II—೧೪೨: ೧.

(೧೧) ವೀರವೃತ್ತ: ವೀರವೃತ್ತಮಿರಲ್ ರಸಸಂಲಗಂ.

I—೧೪೦: ೧.

(೧೨) (ಅನುಷ್ಟುಪ್) ಶ್ಲೋಕ: II—೧೧೨ ರಿಂದ ೧೩೬; .೧೩೯ರಿಂದ ೧೪೧. ಒಟ್ಟು ೨೮.

ಸಂಸ್ಕೃತದ ಅನುಷ್ಟುಪ್ ಶ್ಲೋಕದಲ್ಲಿ (೮+೮=೧೬) ಹದಿನಾರು ಅಕ್ಷರಗಳ ಎರಡು ಪಾದಗಳು. ಮಾರ್ಗಕಾರನು ಇದನ್ನು ಕನ್ನಡದ ಜಾಯಮಾನಕ್ಕೆ ಹೊಂದಿಸಲು ಆದಿಪ್ರಾಸವನ್ನೂ, ೮ ಅಕ್ಷರಗಳಾದ ಮೇಲೆ ಒಳಪ್ರಾಸವನ್ನೂ ಯೋಜಿಸಿರುವುದನ್ನು ಗಮನಿಸಬೇಕು.

೩. ಮಾತ್ರಾವೃತ್ತ

ಕಂದ: ಒಟ್ಟು ೪೧೩+೫. (ಕಂದಪದ್ಯವನ್ನು ಸುಲಭವಾಗಿ ಗುರುತಿಸಬಹುದಾದ್ದರಿಂದ ಪರಿಚ್ಛೇದ-ಪದ್ಯಸಂಖ್ಯಾನುಗುಣವಾಗಿ ಅವನ್ನು ಇಲ್ಲಿ ನಿರ್ದೇಶಿಸಿಲ್ಲ. ಒಟ್ಟು ಪದ್ಯಸಂಖ್ಯೆಯಲ್ಲಿ ಸು. ೪/೫ರಷ್ಟು ಕಂದಪದ್ಯಗಳಿರುವುದು ಗಮನಾರ್ಹ.) ಲಕ್ಷಣ: "ಚತುರ್ಮಾತ್ರಾಗಣವು ಒಂದು ಮೂರನೆಯ ಪಾದಗಳಲ್ಲಿ ಮೂರು ಮೂರೂ, ಎರಡು ನಾಲ್ಕನೆಯ ಪಾದಗಳಲ್ಲಿ ಐದೈದೂ ಇರಬೇಕು. ಇದರ ಪೂರ್ವೋತ್ತರಾರ್ಧಗಳ (೧-೩-೫-೭ನೆಯ) ವಿಷಮಸ್ಥಾನಗಳಲ್ಲಿ ಮಧ್ಯಗುರುವುಳ್ಳ (U-U) ಗಣಗಳು ಬರಕೂಡದು. ಆರನೆಯ ಸ್ಥಾನದಲ್ಲಿ (U-U) 'ಜ' ಗಣವಾಗಲಿ ನಾಲ್ಕು ಲಘುವುಳ್ಳ (UUUU) ಗಣವಾಗಲಿ ಬಂದು ಮೊದಲಿನ ಹ್ರಸ್ವದ ಮುಂದೆ ಯತಿ ಇರಬೇಕು." ಕವಿರಾಜಮಾರ್ಗಕಾರನೂ ಕಂದ

ಪದ್ಯಕ್ಕೆ ಯತಿ ನಿಯಮವನ್ನು ವಿಧಿಸಿದ್ದಾನೆ. (ನೋಡಿ : I—೭೭). ಮುಂದಿನ ಚಂಪೂಕಾವ್ಯಗಳಲ್ಲಿ ವೃತ್ತಗಳ ಬಳಕೆಗಿಂತ ಕಂದಕ್ಕೇ ಹೆಚ್ಚಿನ ಪ್ರಾಧಾನ್ಯ ಸಂದಿರುವುದಕ್ಕೆ ಮಾರ್ಗಕಾರನ ಮೇಲ್ಪಂಕ್ತಿಯೂ ಕಾರಣವಾಗಿರಬಹುದೆ?

೪. ಕನ್ನಡ ಛಂದಸ್ಸು : ಗೀತಿಕೆ

ನಾಗವರ್ಮನ ಪ್ರಕಾರ ಗೀತಿಕೆಯ ಲಕ್ಷಣ :

ಎರಡಱೊ | ಳಾಱಂ | ಬ ಸಂಖ್ಯೆಯೊಳ್ | (ಬಾ ?)
ಬರೆ ಪದ್ಮ | ಭವನುೞಿ | ದುವು ಮೆ | ಚ್ಚುವ ತೆರದಿಂ |
ದಿರೆ ಮುಂ | ದಣ ಪ | ದಂ ಮುನ್ನಿನಂ |
ತಿರೆ ಕರಂ | ಗೀತಿಕೆ | ಯಿಂತ | ಕ್ಕುಂ ಸಖೀ |

(i) ಈ ಪದ್ಯದ ಬಗೆಗೆ ಕನ್ನಡ ಕೈಪಿಡಿಯ ಟಿಪ್ಪಣಿ: "ಎರಡನೆಯ ಪಾದದಲ್ಲಿ 'ಬರೆ ಬ್ರಹ್ಮನುಳಿದೆಡೆಗಳೊಳು ವಿಷ್ಣುವುಂ' ಎಂದೂ, ಮೂರನೆಯ ಪಾದದಲ್ಲಿ 'ಒಪ್ಪುವ ಗೀತಗಣಂ' 'ಗೀತಿಕೆಗೇಳುಗಣಮುಕ್ಕುಂ' ಎಂದೂ ಪಾಠಾಂತರಗಳಿವೆ. ಇದ್ದಹಾಗೆ ನೋಡಿದರೆ:—

ವಿ | ಬ್ರ | ರು ‖ ವಿ | ವಿ | ಬ್ರ | ರು ‖
ಬ್ರ | ಬ್ರ | ರು ‖ ವಿ | ವಿ | ಬ್ರ | ವಿ. (ರು ?) ‖

ಏಳೇಳು ಗಣದ ಎರಡು ಪಾದ ಮಾತ್ರ, ನಾಲ್ಕನೆಯ ಗಣದಲ್ಲಿ ಒಳಪ್ರಾಸ, ಕಡೆಯಲ್ಲಿ ರುದ್ರ, ಮಿಕ್ಕ ಕಡೆ ವಿಷ್ಣು, (ರುದ್ರ ಪರ್ಯಾಯಗಣ), ೨, ೬ರಲ್ಲಿ ಬ್ರಹ ಎಂದು ಹೇಳಬಹುದೆ? ಗೀತಿಕೆ ಎಂಬುದರಿಂದ ಸಾಂಗತ್ಯಸಂಬಂಧಿಯಾಗಿರಬಹುದೆ?"

(ii) ಗೀತಿಕೆಯನ್ನು ಕುರಿತು ಡಾ॥ ಡಿ. ಎಸ್. ಕರ್ಕಿಯವರು ತಮ್ಮ 'ಛಂದೋವಿಕಾಸ' ದಲ್ಲಿ (ಪು. ೧೫೧–೧೫೨), "ಗೀತಿಕೆಯ ಲಕ್ಷಣವು ನಿರ್ದಿಷ್ಟವಾಗಿ ನಿರೂಪಿಸಲ್ಪಟ್ಟಿಲ್ಲ. ಅದರ ಗಣಯೋಜನೆಯು ಖಚಿತವಾಗಿದ್ದಂತೆ ತೋರುವುದಿಲ್ಲ" ಎಂದು ಹೇಳಿ, ನಾಗವರ್ಮನ ಲಕ್ಷಣ ನಿರೂಪಣೆಯೂ, ಅನಿರ್ದಿಷ್ಟವೆಂದು ಸೂಚಿಸಿ, ಜಯಕೀರ್ತಿ ತನ್ನ 'ಛಂದೋನುಶಾಸನ' ದಲ್ಲಿ ಹೇಳುವ ಗೀತಿಕೆಯ ಲಕ್ಷಣವನ್ನು ಹೀಗೆ ತಿಳಿಯಪಡಿಸಿದ್ದಾರೆ: "ಜಯ

ಕೀರ್ತಿಯು ಹೇಳುವ ಗೀತಿಕೆಯ ಲಕ್ಷಣದಲ್ಲಿ ಒಂದಿಷ್ಟು ವಿವರಗಳು ಕಾಣುವವೇನೋ ನಿಜ. ಆದರೆ ಅಲ್ಲಿಯೂ ಲಯದ ಸುಳುಹು ಸಂಪೂರ್ಣವಾಗಿ ಸಿಕ್ಕುವುದಿಲ್ಲ. ಗೀತಿಕೆಯ ಪ್ರತಿ ಅರ್ಧದ ೨ನೆಯ ಮತ್ತು ೬ನೆಯ ಗಣಗಳು ಬ್ರಹ್ಮಗಣಗಳಾಗಿರಬೇಕೆಂದೂ ಉಳಿದ ಗಣಗಳು ಲಯಕ್ಕೆ ಹೊಂದಿಕೆಯಾಗುವಂತೆ ವಿಷ್ಣು ಅಥವಾ ರುದ್ರಗಣಗಳಾಗಿರಬೇಕೆಂದೂ ಅವನು ಅಭಿಪ್ರಾಯಪಡುತ್ತಾನೆ.”

ಇನ್ನು ಕವಿರಾಜಮಾರ್ಗದ (೨೪) ಗೀತಿಕೆಗಳಲ್ಲಿ ಕೆಲವನ್ನು ಪರಿಶೀಲಿಸಿ ನೋಡಲಾಗಿ, ಪ್ರತಿ ಎರಡು ಪಾದಗಳ ಒಂದೊಂದು ಘಟಕದಲ್ಲಿಯೂ ಏಳೇಳು ಗಣದ ನಿಯಮವೇನೋ ಸ್ಥೂಲವಾಗಿ ಗೋಚರಕ್ಕೆ ಬರುತ್ತದೆ. (ಗಣಸಂಖ್ಯೆ ಹೆಚ್ಚಿರುವುದೂ ಉಂಟು. ಉದಾ. III—೨೨೩). ಸರ್ವಸಾಮಾನ್ಯವಾಗಿ ವಿಷ್ಣು ಗಣಗಳೂ ಪರ್ಯಾಯವಾಗಿ ಅನಿಯತ ಸ್ಥಳಗಳಲ್ಲಿ ಬ್ರಹ್ಮ ಅಥವಾ ರುದ್ರಗಣವೂ ಪ್ರಯೋಗವಾಗಿರುವುದು ಕಂಡುಬರುತ್ತದೆ. ಉದಾಹರಣೆಯಾಗಿ, ಗ್ರಂಥದಲ್ಲಿ ಮೊತ್ತಮೊದಲು ಕಣ್ಣಿಗೆ ಬೀಳುವ ಗೀತಿಕೆಯ ಲಕ್ಷಣವನ್ನು ಪರಿಶೀಲಿಸಬಹುದು:

– ∪ –   – – – –   – ∪ –
ಕಾಣನೇ | ಗೆಯ್ದುಂ ತ | ನ್ನ(ನ್ನಾ?) ದೋಷಮುಂ |
– ∪ –   – – –   – – ∪   – ∪ ∪ –
ಕಾಣದಂ | ತೆಂದುಂ ಕ | ಣ್ಗಳ್ತನ್ನ | ಕಾಡಿಗೆಯಂ ||
– ∪ ∪   – ∪ ∪   –   ∪ ∪ –
ಪೂಣಿಗ | ನಾದುದ | ಱಿಂ ಪೆಱರಿಂ |
– ∪ ∪   – ∪ ∪   – ∪ ∪   – ∪ –
ಜಾಣರಿ | ನೋದಿಸಿ | ಪೇೞ್ವುದು | ಕಬ್ಬಮುಂ |

(ವಿ | ವಿ | ರು || ವಿ | ವಿ | ವಿ | ರು || ವಿ | ವಿ | ರು || ವಿ | ವಿ | ವಿ | ವಿ ||)

‘ಗೀತಿಕೆ’ ಹಾಡುವ ಮಟ್ಟು ಎಂಬುದನ್ನು ನೆನೆದರೆ, ಕವಿರಾಜಮಾರ್ಗದ ಕಾಲದಲ್ಲಿ, ಬೇಕಾದಲ್ಲಿ ಎಳೆದು ಬೇಕಾದಲ್ಲಿ ನಿಲ್ಲಿಸಿ ಹಾಡಲನುಕೂಲವಾಗುವಂತೆ ಗಣಯೋಜನೆಯಲ್ಲಿಯೂ ಲಯವಿನ್ಯಾಸದಲ್ಲಿಯೂ ಸ್ವತಂತ್ರಗತಿಯೇ ಇದ್ದಿರಬೇಕೆಂದು ಕಾಣುತ್ತದೆ. ಮೇಲ್ಕಂಡ ಪದ್ಯದ ಮೊದಲ ಪಾದಕ್ಕೆ ಹೀಗೂ ಪ್ರಸ್ತಾರಮಾಡಬಹುದು:

– ∪   – – –   – ∪   – ∪ –
ಕಾಣ | ನೇಗೆಯ್ದುಂ | ತನ್ನ | ದೋಷಮುಂ ||
ಬ್ರ | ವಿ | ಬ್ರ | ವಿ ||

ಈ ಲಯ ವಿನ್ಯಾಸದಲ್ಲಿ ಗೀತಗುಣ ಮೊದಲಿಗಿಂತ ಹೆಚ್ಚು ಬಂಧುರವಾಗಿದೆಯೆಂದು ನಮ್ಮೆಣಿಕೆ.

ಇನ್ನೊಂದು ಗೀತಿಕೆಯ (II–೧೪೩) ಪೂರ್ವಾರ್ಧ :

∪ ∪ ∪ –   – ∪   ∪ ∪ –
ಅನುಗತಂ | ಪೂರ್ವ | ಕವಿಗಳ್ |

∪∪– –   – –   – ∪   – ∪ –
ನೆನೆದಿನ್ನುಂ | ಪೇೞ್ದಂ | ದುಷ್ಕ | ರೋಕ್ತಿಯ ‖ ನ್ನನುಗೆಆ—

ವಿ | ಬ್ರ | ವಿ ‖ ವಿ | ಬ್ರ | ಬ್ರ | ವಿ ‖

ಕವಿರಾಜಮಾರ್ಗದಲ್ಲಿ ಗೀತಿಕೆಗಳ ಪ್ರಯೋಗದಲ್ಲಿ ಕಂಡುಬರುವ ಗಮನಾರ್ಹ ಸಂಗತಿ ಎಂದರೆ, ಹೇಳಿಕೆಗಳ ಲಕ್ಷ್ಯಗಳನ್ನು (II, ೧೧೪–೧೫೨) ಹೊರತು ಪಡಿಸಿದರೆ, ವಿಶೇಷವಾಗಿ ಒಂದು ನಿರ್ದಿಷ್ಟ ಪ್ರಕರಣಾಂತ್ಯದಲ್ಲಿ ಉಪಸಂಹಾರ ವಾಕ್ಯವಾಗಿಯೂ, ಕ್ವಚಿತ್ತಾಗಿ ಪ್ರಕರಣಾದಿಯ ಪ್ರತಿಜ್ಞಾ ವಾಕ್ಯವಾಗಿಯೂ ಗೀತಿಕೆಯನ್ನು ಬಳಸಿರುವುದು ಕಂಡುಬರುತ್ತದೆ.

ಗೀತಿಕೆಯ ಛಂದಸ್ಸು ನಿಷ್ಕೃಷ್ಟವಾಗಿ ತಿಳಿಯದ ಕಾರಣ, ಗೀತಿಕೆಗಳಲ್ಲಿನ ಪಾಠದೋಷಗಳನ್ನು ಛಂದಸ್ಸಿನ ಆಧಾರದ ಮೇಲೆ ಗುರುತಿಸಿ, ಪಾಠ ಪರಿಷ್ಕರಣ ಮಾಡುವುದು ಕಷ್ಟಸಾಧ್ಯವೆಂದೇ ಹೇಳಬೇಕು.

[I–೧೩೦, ೧೩೫, ೧೩೬, ೧೪೦ ; II–೧೪೨; III–೨೨೦, ೨೨೧, ೨೨೪, ೨೨೬, ೨೨೭, ೨೨೮, ೨೨೯, ೨೩೧—ಈ ವೃತ್ತಗಳ ಹೆಸರುಗಳೂ ಲಕ್ಷಣವೂ ಯಾವ ಛಂದೋಗ್ರಂಥದಲ್ಲಿಯೂ ದೊರಕಲಿಲ್ಲವೆಂದು ಮದರಾಸು ಮುದ್ರಣದ ಸಂಪಾದಕರು ಸಂಬಂಧಪಟ್ಟ ಪದ್ಯಗಳ ಅಡಿ ಟಿಪ್ಪಣಿಗಳಲ್ಲಿ ತಿಳಿಸಿರುತ್ತಾರೆ. ಒಂದೆರಡು ವೃತ್ತಗಳ ನಾಮನಿರ್ದೇಶ ಸರಿಯಾಗಿರಲಿಲ್ಲ. ಈ ವೃತ್ತಗಳಿಗೆಲ್ಲಾ ಗಣಪ್ರಸ್ತಾರ ಹಾಕಿ ಕೂಲಂಕಷವಾಗಿ ಪರಿಶೀಲಿಸಲಾಗಿ, ಇವೆಲ್ಲವುಗಳ ಹೆಸರುಗಳೂ ಲಕ್ಷಣವೂ ಕನ್ನಡ ಕೈಪಿಡಿಯಲ್ಲಿಯೆ ದೊರೆತವು. ಈ ಸಂದರ್ಭದಲ್ಲಿಯೆ, I–೧೪೭ರ ಮತ್ತು I–೧೪೮ರ ೨ನೆಯ, ೪ನೆಯ ಪಾದಗಳಲ್ಲಿ ಅರ್ಥಪ್ರತೀತಿಯ ದೃಷ್ಟಿಯಿಂದ ಈ ಮೊದಲು ಮಾಡಿದ್ದ ತಿದ್ದುಪಾಟು ಛಂದಸ್ಸಿನ ದೃಷ್ಟಿಯಿಂದ ದೋಷಪೂರ್ಣವಾಗಿ ಕಂಡುಬಂದಿತು. ಈ ಸಂಬಂಧದ ಮರುತಿದ್ದುಪಾಟುಗಳನ್ನು ಶುದ್ಧಾಶುದ್ಧ ಪತ್ರಿಕೆಯಲ್ಲಿ ಕಾಣಿಸಿದೆ. ಈ ಪ್ರಮಾದಕ್ಕಾಗಿ ವಿಷಾದಿಸಬೇಕಾಗಿದೆ. ಈ ಎರಡು ಪದ್ಯಗಳ ಪುನಃಪರಿಷ್ಕರಣದ ಕಡೆಗೆ ನನ್ನ ಗಮನವನ್ನು ಸೆಳೆದದ್ದು, 'ಕನ್ನಡ ನುಡಿ' ಯಲ್ಲಿ ಪ್ರಕಟವಾಗಿದ್ದು, ಈಚೆಗೆ ನನ್ನ ನೆನಪಿಗೆ ಬಂದ 'ಕವಿರಾಜಮಾರ್ಗದ ಎರಡು ವೃತ್ತಗಳು' ಎಂಬ ಲೇಖನ, ಶ್ರೀ ಕೆ. ಪು. ಸೀತಾರಾಮ ಕೆದಿಲಾಯ ಅವರದ್ದು.—ಸಂ.]

ಸಂಕ್ಷಿಪ್ತಗಳು

ಉದಾ.	ಉದಾಹರಣೆ
ಉ.ವಿ.ವಿ.ನಿ.	ಉಸ್ಮಾನಿಯಾ ವಿಶ್ವವಿದ್ಯಾನಿಲಯ
ಕ.ಕಾ.	ಕನ್ನಡ ಕಾವ್ಯಾಲಂಕಾರ
ಕ.ಕೈ.	ಕನ್ನಡ ಕೈಪಿಡಿ
ಕ.ಚ.	ಕವಿಚರಿತೆ
ಕ.ಸಾ.ಚ.	ಕನ್ನಡ ಸಾಹಿತ್ಯ ಚರಿತ್ರೆ
ಕ.ಸಾ.ಪ.; ಪರಿಷತ್ಪತ್ರಿಕೆ	ಕನ್ನಡ (ಕರ್ಣಾಟಕ) ಸಾಹಿತ್ಯ ಪರಿಷತ್ಪತ್ರಿಕೆ
ಕ. (ರಾ.) (ಮಾರ್ಗ) ವಿವೇಕ	ಕವಿರಾಜಮಾರ್ಗವಿವೇಕ
ಕಾವ್ಯಾ.	ಕಾವ್ಯಾವಲೋಕನ
ಕಾವ್ಯಾಲಂ.	ಕಾವ್ಯಾಲಂಕಾರ
ಕ್ರಿ.ಶ.	ಕ್ರಿಸ್ತಶಕ
ಗದಾಯು.ಸಂ.	ಗದಾಯುದ್ಧ ಸಂಗ್ರಹ
ತ್ಭ.	ತದ್ಭವ
ಧಾ.	ಧಾತು
ಪ.	ಪದ್ಯ
ಪು.	ಪುಟ
ಪ್ರ.ಮು.	ಪ್ರಥಮ ಮುದ್ರಣ
ಭಾ.ಕಾ.ಮಿೀ.	ಭಾರತೀಯ ಕಾವ್ಯಮೀಮಾಂಸೆ
ಮ.ಮು.	ಮದರಾಸು ಮುದ್ರಣ
ಮಾರ್ಗಕಾರ	ಕವಿರಾಜಮಾರ್ಗಕಾರ (=ಶ್ರೀವಿಜಯ)
ಶ.	ಶಾಲಿವಾಹನ ಶಕಾ
ಶ.ಮ.ದ.	ಶಬ್ದಮಣಿದರ್ಪಣ

ಶ.ಶಾಸನ	ಶಬ್ದಾನುಶಾಸನ
ಸಂ.	(ಸಂದರ್ಭಾನುಸಾರ) ಸಂಪಾದಕ; ಸಂಪುಟ; ಸಂಸ್ಕೃತ
ಸು.	ಸುಮಾರು
ಸೂ.	ಸೂತ್ರ
Gr.K.L.	Grammar of Kannada Language
I.A.; Ind. Ant.	Indian Antiquary
P., PP.	Page, Pages
Q.J.M.S.	Quarterly Journal of the Mythic Society
S.K.H.	Sources of Karnataka History

[ವಿ. ಸೂ.—ಶಬ್ದಮಣಿದರ್ಪಣದ ಸೂತ್ರಸಂಖ್ಯೆಗಳು ಕನ್ನಡ ಸಾಹಿತ್ಯ ಪರಿಷತ್ತಿನ ಮುದ್ರಣದ ಸೂತ್ರ ಸಂಖ್ಯಾಕ್ರಮವನ್ನು ಅನುಸರಿಸಿವೆ.]

ಬೆಂಗಳೂರು

ಸರ್ಕಾರದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನ

ಕರ್ಣಾಟಕ ಸಂಘದ ಪ್ರಕಟನೆಗಳು

೧. **ವಿಕಾಸ**

ವಿದ್ಯಾರ್ಥಿಗಳ ಕಾವ್ಯಸಮೀಕ್ಷಾ ಸಂಪುಟ (ವಾರ್ಷಿಕ)

೨. **ಬಿರಿಮೊಗ್ಗು**

ಪ್ರಬಂಧ ಸಂಕಲನ

೩. **ಸೊಡರು**

ಕವನ ಸಂಕಲನ

೪. **ಹೊಳಪು ಝಳಪು**

ಸಮರಗೀತೆಗಳ ಸಂಕಲನ

೫. **ವೀರ ಅಭಿಮನ್ಯು**

ಕುಮಾರವ್ಯಾಸ ಭಾರತದಿಂದ ಆಯ್ದ ಪ್ರಕರಣ

ಸಂಪಾದಕ: ಎಂ. ವಿ. ಸೀತಾರಾಮಯ್ಯ

೬. **ಗುಂಡಿನೇಟು ಮತ್ತು ಇತರ ಕಥೆಗಳು**

ಎ. ಪುಷ್ಕಿನ್ ಎಂಬ ರಷ್ಯದ ಕಥೆಗಾರನ ಕಥೆಗಳು

ಅನುವಾದಕ: ಎಂ. ವಿ. ಸೀತಾರಾಮಯ್ಯ

೭. **ಕಾದಂಬರೀ ಕಥೆ**

ಶ್ರೀಮತಿ ಎಂ. ಎಲ್. ಲಲಿತಮ್ಮ

ರಾಷ್ಟ್ರಕೂಟ ವಂಶಾವಳಿ

(ಮುಂದುವರಿದುದು)

ಗುಜರಾತಿನ ಶಾಖೆ

1. ಇಂದ್ರ III

|

ಕರ್ಕ II (ಕಕ್ಕ)
(ಅಮೋಘವರ್ಷ)

|

ಧ್ರುವ II
(ನಿರುಪಮ)

|

ಅಕಾಲವರ್ಷ (ಶುಭತುಂಗ)

|

ಧ್ರುವ III
(ಅತಿತುಂಗ, ನಿರಪಮ, ಧಾರಾವರ್ಷ)

|

ಕೃಷ್ಣ
(ಅಮೋಘವರ್ಷ)

14. ಬಡ್ಡೆಗ (ವಡ್ಡಿಗ)
ಅಮೋಘವರ್ಷ III
[ರಾಷ್ಟ್ರಕೂಟ ದಕ್ಷಿಣಶಾಖೆಯ ದೊರೆ]

ಪರಿವಿಡಿ

		ಪುಟ
ಸಂಪಾದಕನ ಅರಿಕೆ	..	v
ಪ್ರಕಾಶಕರ ಅರಿಕೆ	..	ix
ಪೀಠಿಕೆ	..	xi
ಪೀಠಿಕೆಯ ಟಿಪ್ಪಣಿಗಳು	..	LXXViii
ಪರಿಶಿಷ್ಟ	..	xcii
ಸಂಕ್ಷಿಪ್ತಗಳು	..	xcviii

ಕವಿರಾಜಮಾರ್ಗಂ

೧. ಪ್ರಥಮ ಪರಿಚ್ಛೇದಂ	..	೧
೨. ದ್ವಿತೀಯ ಪರಿಚ್ಛೇದಂ	..	೩೫
೩. ತೃತೀಯ ಪರಿಚ್ಛೇದಂ	..	೬೭

ಅನುಬಂಧಗಳು

೧. ಪ್ರಾಸವಿಚಾರ : ಅಧಿಕಪಾಠ		೧೧೯
೨. ಟಿಪ್ಪಣಿಗಳು	..	೧೨೧
೩. ಪದ್ಯಗಳ ಅಕಾರಾದಿ	..	೩೭೯
೪. ಪಾರಿಭಾಷಿಕ ಪದಗಳ ಅಕಾರಾದಿ	..	೩೯೦
೫. ಹೆಸರುಗಳ ಅಕಾರಾದಿ	..	೩೯೮
೬. ಮುಖ್ಯ ಪಾಠಾಂತರಗಳು	..	೪೦೨

		ಪುಟ
೭. ಇತರ ಗ್ರಂಥಗಳಲ್ಲಿ ಉದಾಹೃತಗಳಾದ ಕವಿರಾಜಮಾರ್ಗದ ಪದ್ಯಗಳು	..	೪೨೨
ಗ್ರಂಥಋಣ	..	
ತಪ್ಪುನೆಪ್ಪೋಲೆ	..	

ನೃಪತುಂಗದೇವಾನುಮತಮಪ್ಪ

ಶ್ರೀವಿಜಯಕೃತ

ಕವಿರಾಜಮಾರ್ಗಂ

ಕವಿರಾಜಮಾರ್ಗಂ

ಶ್ರೀ ತಳ್ತುರದೊಳ್ ಕೌಸ್ತುಭ
ಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂ
ಪ್ರೀತಿಯಿನಾವನನಗಲಳ್
ನೀತಿನಿರಂತರನುದಾರನಾ ನೃಪತುಂಗಂ ೧

ಕೃತಕೃತ್ಯಮಲ್ಲನಪ್ರತಿ
ಹತವಿಕ್ರಮನೊಸೆದು ವೀರನಾರಾಯಣನ
ಪ್ಪತಿಶಯಧವಳಂ ನಮಗೀ
ಗತರ್ಕಿತೋಪಸ್ಥಿತ ಪ್ರತಾಪೋದಯಮಂ ೨

ಶ್ರೀ ವಿಶದವರ್ಣೆ ಮಧುರಾ
ರಾವೋಚಿತೆ ಚತುರರುಚಿರ ಪದರಚನೆ ಚಿರಂ
ದೇವಿ ಸರಸ್ವತಿ ಹಂಸೀ
ಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್ ೩

ಪರಮಾಲಂಕಾರೋಚಿತ
ವಿರಚನೆಗಳ್ ನೆಗೞ್ಗಮಾರ ವದನೋದರದೊಳ್
ನೆರವುಕ್ಕಾ ಪರನು ಕವೀ
ಶ್ವರರೆಮಗೀ ಕೃತಿಯೊಳಕೃತಕಾಚಾರಪರರ್ ೪

ಶ್ರುತದೊಳ್ ಭಾವಿಸಿ ನೋೞ್ಪೊಡೆ
ಸತತಂ ಕವಿವೃಷಭರಾ ಪ್ರಯೋಗಂಗಳೊಳಂ
ಕೃತಪರಿಚಯಬಲನಪ್ಪನ
ನತಿಶಯಧವಳನ ಸಭಾಸದರ್ ಮನ್ನಿಸುವರ್ ೫

ವ್ಯಾಕರಣ ಕಾವ್ಯ ನಾಟಕ
ಲೋಕಕಳಾ ಸಮಯಮಾದಳಂಕೃತಿಗಳೊಳಂ
ವ್ಯಾಕುಳನಲ್ಲದನೇಕೆ ವಿ
ವೇಕಬೃಹಸ್ಪತಿಯ ನಗರಮಂ ಪುಗುತರ್ಪಂ ೬

ಮೃಗಪಶುಶಕುನಿ ಗಣಂಗಳೊ
ಳಗಣಿತ ನಿಜಜಾತಿಜನಿತ ಭಾಷೆಗಳಿಂದಂ
ನೆಗೞ್ದಂತಿರೆ ನರರೊಳಮ
ಪ್ರಗಲ್ಭವಚನಪ್ರವೃತ್ತಿ ನೆಗೞ್ಗುಂ ಸಹಜಂ ೭

ಗುಣಮಿದು ದೋಷಮಿದೆಂಬೀ
ಗಣಿದಮನೆತ್ತಱಿಗುಮಶ್ರುತ ಪ್ರಕೃತಿಜನಂ
ತೃಣಸಸ್ಯಘಾಸವಿಷಯ
ಪ್ರಣಯಂ ಸಮವೃತ್ತಿಯಪ್ಪವೋಲ್ ಮೃಗಗಣದೊಳ್ ೮

ಪ್ರಥಮ ಪರಿಚ್ಛೇದಂ

ಲೌಕಿಕ ಸಾಮಯಿಕೋರು ವಿ
ವೇಕಮುಮಭ್ಯುದಯ ಪರಮ ನಿಃಶ್ರೇಯಸಮುಂ
ಪ್ರಾಕಟಮಕ್ಕುಂ ವಿದಿತಾ
ನೇಕ ಕವೀಶ ಪ್ರಯೋಗ ಪದಪದ್ಧತಿಯೊಳ್ ೧೯

ಅಧಿಕೃತ ಸತ್ಪುರುಷಾರ್ಥ
ಪ್ರಧಾನ ಧರ್ಮಾರ್ಥಕಾಮಮೋಕ್ಷಂಗಳವಾ
ಬುಧಜನ ವಿವಿಕ್ತ ಕಾವ್ಯ
ಪ್ರಧಾರಿತಾರ್ಥಂಗಳಖಿಳ ಭುವನಹಿತಂಗಳ್ ೨೦

ಲೋಕದೊಳದಱಿಂ ಕಾವ್ಯ
ಶ್ರೀಕರಣೋದ್ಯುಕ್ತನಕ್ಕೆ ಕವಿ ತನ್ನಱಿವಂ
ತಾಕಲ್ಪಾಂತಸ್ಥಾಯಿ
ಶ್ರೀಕೀರ್ತಿವಧೂಪ್ರಧಾನವಲ್ಲಭನಕ್ಕುಂ ೨೧

ಕವಿಭಾವಕೃತಾನೇಕ
ಪ್ರವಿಭಾಗ ವಿವಿಕ್ತ ಸೂಕ್ತಮಾರ್ಗಂ ಕಾವ್ಯಂ
ಸವಿಶೇಷ ಶಬ್ದರಚನಂ
ವಿವಿಧಾರ್ಥವ್ಯಕ್ತಿ ವರ್ತಿತಾಲಂಕಾರಂ ೨೨

ನರಲೋಕಚಂದ್ರ ಮತದಿಂ
ಪರಮಾಲಂಕಾರಮುಂ ಶರೀರಮುಮೆಂದಿಂ
ತೆರಡಕ್ಕುಂ ಭೇದಂ ಬಹು
ಪರಿಕರಮಾ ಕಾವ್ಯವಸ್ತುಪುರುಷಂಗೆಂದುಂ ೨೩

ಅವಱೊಳ್ ಶರೀರಮೆಂಬುದು
ಕವಿಪ್ರಧಾನ ಪ್ರಯೋಗ ಪದಪದ್ಧತಿಯೊಳ್
ದ್ವಿವಿಧಮೆನಿಕ್ಕುಮದತಿಶಯ
ಧವಳೋಕ್ತಕ್ರಮದೆ ಗದ್ಯಪದ್ಯಾಖ್ಯಾತಂ ೨೪

ಪದಪಾದ ವಿಯುತ ನಿಯಮಾ
ಸ್ಪದಮಲ್ಲದಳಂಕೃತಂ ಕ್ರಿಯಾಕಾರಕದೊಳ್
ಪುದಿದರ್ಥವ್ಯಕ್ತಿಯನೀ
ವುದು ಗದ್ಯಮನೇಕ ರೂಪಭೇದ ವಿವಿಕ್ತಂ ೨೫

ಸದಮುಳ ಸಮಸಂಸ್ಕೃತ ಕಾ
ವ್ಯದ ಹೃದಯಂ ಹರ್ಷಚರಿತ ಕಾದಂಬರಿಗಳ್
ಮೊದಲಾಗಿ ನೆಗಳ್ದವಿದಱೊಳ್
ಸದಳಂಕಾರಂಗಳಖಿಳ ಕವಿವಿದಿತಂಗಳ್ ೨೬

ಮಿಗೆ ಕನ್ನಡಗಬ್ಬಂಗಳೊ
ಳಗಣಿತಗುಣ ಗದ್ಯಪದ್ಯ ಸಮ್ಮಿಶ್ರಿತಮಂ
ನಿಗದಿಸುವರ್ಗದ್ಯಕಥಾ
ಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕಳ್ ೨೭

ಸಕಳಕಳಾ ಭಾಷಾ ಲೌ
ಕಿಕ ಸಾಮಯಿಕಾದಿ ವರ್ಣನಾನಿರ್ಣಿಕ್ತ
ಪ್ರಕಟತರ ವಸ್ತುವಿಸ್ತರ
ವಿಕಲ್ಪವಿದನಲ್ಲದಾಗದಾಗದು ಪೇೞಲ್ ೨೮

ಅದಱಿಂ ಪರಮಾಗಮ ಕೋ
ವಿದನಪ್ಪುದು ಪೂರ್ವಕಾವ್ಯರಚನೆಗಳಂ ತಾಂ
ಮೊದಲೊಳ್ ಕಲ್ತಂಗಲ್ಲದೆ
ಪದದೊಳ್ ಜಾಣುಂ ಬೆಡಂಗುಮಕ್ಕುಮೆ ಕೃತಿಯೊಳ್ ೯

ಜಡಜನಮುಮೆಲ್ಲಮೋದಂ
ತಡೆಯದೆ ಕಲ್ಗುಂ ಗುರೂಪದೇಶಕ್ರಮದಿಂ
ನುಡಿವಲ್ಮೆಯಲ್ತದೇಂ ಕ
ಲ್ತೊಡನೋದುವುವಲ್ತೆ ಗಿಳಿಗಳುಂ ಪುರುಳಿಗಳುಂ ೧೦

ಪ್ರತಿಭಾವತ್ವಮುಮಕೃತಕ
ಚತುರತೆಯುಂ ಪರಮಬುಧಜನೋಪಾಸನಮುಂ
ಶ್ರುತಪರಿಚಯಮುಂ ತರ್ಕಂ
ಪ್ರತೀತಿಯುಂ ವಾಗ್ವಿದಗ್ಧತಾ ನಿಪುಣತೆಯೊಳ್ ೧೧

ಪಸರಿಸಿದಾ ಬಗೆ ಮನಮಂ
ಪೊಸತಾಗೆ ನೆಗಳ್ಚಲಱಿಯನಾ ರಚನೆಯೊಳೇಂ
ಬಸನಂ ತನಗಿನಿತಱ ಬೇ
ವಸಮೇಂ ಕವರ್ದವರುಮೊಳರೆ ಕವಿಯಲ್ಲದರಂ ೧೨

ಬಗೆಬಗೆದು ಕೇಳ್ದು ಬುಧರೊಲ
ವೊಗೆದಿರೆ ಹೃದಯದೊಳೆ ತಾಳ್ದ ಮಣಿಹಾರಂಬೋಲ್
ಸೊಗಯಿಸುವ ವಚನವಿರಚನೆ
ನೆಗಳ್ಗುಂ ಭಾವಿಸುವೊಡದಱ ಪೆಂಪತಿಸುಲಭಂ ೧೩

ನೆನೆನೆನೆದು ಪೆಱರ ಮಾತುಗ
ಳನೆ ನೆಗೞ್ದಿರೆ ಕೃತಿಯೊಳಿಡುವವಂ ನಗದ ಗುಹಾ
ಧ್ವನಿಯುವೊಲನರ್ಥವಚನಂ
ತನಗಾಗಿಸಲಱಿಯನುಚಿತ ವಾಕ್ಚತುರತೆಯಂ ೧೪

ಕುಱಿತಂತು ಪೆಱರ ಬಗೆಯಂ
ತೆಱೆದಿರೆ ಪೆಱರ್ಗಱಿಪಲಾರ್ಪವಂ ಮಾತಱಿವಂ
ಕಿಱಿದಱೊಳೆ ಪಿರಿದುಮರ್ಥಮ
ನಱಿಪಲ್ ನೆಱೆವಾತನಾತನಿಂದಂ ನಿಪುಣಂ ೧೫

ನುಡಿಯಂ ಛಂದದೊಳೊಂದಿರೆ
ತೊಡರ್ಚಲಱಿವಾತನಾತನಿಂದಂ ಜಾಣಂ
ತಡೆಯದೆ ಮಹಾಧ್ವಕೃತಿಗಳ
ನೊಡರಿಸಲಾರ್ಪಾತನೆಲ್ಲರಿಂದಂ ಬಲ್ಲಂ ೧೬

ಮಾತಱಿವರ್ ಕೆಲಬರ್ ಜಗ
ತೀತಳಗತ ಮನುಜರೊಳಗೆ ಮಾತಱಿವವರೊಳ್
ನೀತಿವಿದರಮಳ ಕವಿತಾ
ನೀತಿಯುತರ್ ಕೆಲರೆ ಪರಮ ಕವಿವೃಷಭರ್ಕಳ್ ೧೭

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ
ಖೋಪಾತ್ತಮಿದೆಂದಱಿಪುಗು
ಮಾ ಪರಮ ಕವಿಪ್ರಧಾನರಾ ಕಾವ್ಯಂಗಳ್ ೧೮

ಕುಱಿತವರಲ್ಲದೆ ಮತ್ತಂ
ಪೆಱರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್
ಕಿಱುವಕ್ಕಳುಮಾ ಮೂಗರು
ಮಱಿಪಲ್ಕಱಿವರ್ ವಿವೇಕಮಂ ಮಾತುಗಳಂ ೩೯

ಜಾಣರ್ಕಳಲ್ಲದವರುಂ
ಪೂಣಿಗರಱಿಯದೆಯುಮಱಿವವೋಲವಗುಣದಾ
ತಾಣಮನಿನಿಸೆಡೆವೆತ್ತೊಡೆ
ಮಾಣದೆ ಪಿಡಿದದನೆ ಕೃತಿಗಳಂ ಕೆಡೆನುಡಿವರ್ ೪೦

ಸಕ್ಕದಮುಂ ಪಾಗದಮುಮ
ದಕ್ಕುಂ ಬಗೆದಂತೆ ಸಮಱ ಪೇಟಿಲ್ ಮುನ್ನಂ
ನಿಕ್ಕುವಮೊಳವಪ್ಪುದಱಿಂ
ತಕ್ಕಂತವಱವಱ ಲಕ್ಷ್ಯಮುಂ ಲಕ್ಷಣಮುಂ ೪೧

ಅರಿದಾದಂ ಕನ್ನಡದೊ
ಳ್ತಿರಿಕೊಱಿಗೊಂಡಱಿಯೆ ಪೇಟ್ವೆನೆಂಬುದಿದಾರ್ಗಂ
ಪರಮಾಚಾರ್ಯರವೋಲ್ ಸೈ
ತಿರಲಱಿಯರ್ ಕನ್ನಡಕ್ಕೆ ನಾಡವರೋಜರ್ ೪೨

ಅವಗುಣಮಿನಿತಾದೊಡಮಾ
ಕವಿತಾಬಂಧಮನಶೇಷಮುಂ ದೂಷಿಸುಗುಂ
ಸವಿಳಾಸಲೋಲಲೋಚನ
ವಿವರಮನೆಡೆವೆತ್ತ ಕಸದವೋಲನವರತಂ ೪೩

ಅದಱಿಂದಲಸದೆ ಪೀನಂ
ಪದೆಯದೆ ಪಾಂಗಱಿದು ದೋಷಮುಂ ಪಿಂಗಿಸಿ ತ
ಪ್ಪದೆ ಬಗೆದು ಪೇೞ್ವುದಾಗಮ
ಮುದಾರ ನೃಪತುಂಗ ದೇವ ವಿದಿತಕ್ರಮದಿಂ ೪೪

(ಗೀತಿಕೆ)

ಕಾಣನೇಗೆಯ್ದುಂ ತನ್ನ ದೋಷಮುಂ
ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯಂ
ಪೂಣಿಗನಾದುದಱಿಂ ಪೆಱರಿಂ
ಜಾಣರಿನೋದಿಸಿ ಪೇೞ್ವುದು ಕಬ್ಬಮಂ ೪೫

ದೋಸಮಿನಿತೆಂದು ಬಗೆದು
ದ್ಭಾಸಿಸಿ ತಱಿಸಂದು ಕನ್ನಡಂಗಳೊಳೆಂದುಂ
ವಾಸುಗಿಯುಮಱಿಯಲಾಱದೆ
ಬೇಸಱುಗುಂ ದೇಶಿ ಬೇಱೆವೇಱಪ್ಪುದಱಿಂ ೪೬

ಅಂತುಂ ಪುರಾಣಕವಿಗಳ
ಸಂತ[ತ]ಗತ ಮಾರ್ಗಗದಿತ ದೋಷಂಗಳುಮಂ
ಚಿಂತಿಸಿ ಮತ್ತೆನ್ನನಱಿವುದು
ಮಂ ತಱಿಸ[ಲೆ] ಬುಧಜನಕ್ಕೆ ಕೆಲವಂ ಪೇೞ್ವೆಂ ೪೭

ನೆಲಸಿದ ಕಾವ್ಯಂ ಕಾವ್ಯ
ಕ್ಕೆ ಲಕ್ಷಣಂ ಸತತಮೆಂದೆ ಪೞಗನ್ನಡಮುಂ
ಪೊಲಗೆಡಿಸಿ ನುಡಿವರಾಗಮ
ಬಲಹೀನರ್ ದೇಸಿಯಲ್ಲದೆಂದಱಿದಿರ್ದುಂ ೪೮

ವಿಮಳೋದಯ ನಾಗಾರ್ಜುನ
ಸಮೇತ ಜಯಬಂಧು ದುರ್ವಿನೀತಾದಿಗಳೀ
ಕ್ರಮದೊಳ್ ನೆಗಳ್ಚಿ ಗದ್ಯಾ
ಶ್ರಮಪದ ಗುರುತಾ ಪ್ರತೀತಿಯಂ ಕೆಯ್ಕೊಂಡರ್ ೨೯

ಪದ್ಯಂ ಸಮಸ್ತ ಜನತಾ
ಹೃದ್ಯಂ ಪದವಿದಿತಪಾದನಿಯಮ ನಿವೇದ್ಯಂ
ವಿದ್ಯಾಪಾರ ಪರಾಯಣ
ಮಾದ್ಯಂ ಸದ್ವೃತ್ತಿವೃತ್ತಜಾತ್ಯಾಯತ್ತಂ ೩೦

ಪ್ರಣುತ ಗುಣಸೂರಿ ನಾರಾ
ಯಣ ಭಾರವಿ ಕಾಳಿದಾಸ ಮಾಘಾದಿಗಳೀ
ಗಣಿದದೊಳೆ ಮಹಾಕಾವ್ಯ
ಪ್ರಣಯಮನಾಗಿಸಿದರಮಳ ಕವಿವೃಷಭರ್ಕಳ್ ೩೧

ಪರಮ ಶ್ರೀ ವಿಜಯಕವೀ
ಶ್ವರ ಪಂಡಿತ ಚಂದ್ರ ಲೋಕಪಾಲಾದಿಗಳಾ
ನಿರತಿಶಯ ವಸ್ತುವಿಸ್ತರ
ವಿರಚನೆ ಲಕ್ಷ್ಯಂ ತದಾದ್ಯ ಕಾವ್ಯಕ್ಕೆಂದುಂ ೩೨

ನುಡಿಗೆಲ್ಲಂ ಸಲ್ಲದ ಕ
ನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀ
ಗಡಿನ ನೆಗಳ್ತೆಯ ಕಬ್ಬದೊ
ಳೊಡಂಬಡಂ ಮಾಡಿದರ್ ಪುರಾತನ ಕವಿಗಳ್ ೩೩

ಕಂದಮುಮಮಳಿನ ವೃತ್ತಮು
ವೊಂದೊಂದೆಡೆಗೊಂ[ಡು] ಜಾತಿಜಾಣೆಸೆಯೆ ಬೆಡಂ
ಗೊಂದಿವಱೊಳಮರೆ ಪೇೞಲ್
ಸುಂದರ ರೂಪಾ ಬೆದಂಡೆಗಬ್ಬಮುದಕ್ಕುಂ ೩೪

ಕಂದಂಗಳ್ ಪಲವಾಗಿರೆ
ಸುಂದರ ವೃತ್ತಂಗಳಕ್ಕರಂ ಚವುಪದಿ ಮು
ಮತ್ತಂ ದಲ್ ಗೀತಿಕೆ ತಿವದಿಗ
ಳಂದಂಬೆತ್ತೆಸೆಯೆ ಪೇೞ್ದೊಡದು ಚತ್ತಾಣಂ ೩೫

ಕಾವೇರಿಯಿಂದಮಾ ಗೋ
ದಾವರಿವರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯವಿಲೀನ ವಿಶದ ವಿಷಯವಿಶೇಷಂ ೩೬

ಅದಱೊಳಗಂ ಕಿಸುವೊೞಲಾ
ವಿದಿತ ಮಹಾ ಕೊಪಣ ನಗರದಾ ಪುಲಿಗೆಱೆಯಾ
ಸದಭಿಸ್ತುತಮಪ್ಪೊಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ೩೭

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್ ೩೮

ಅರಸುಕುಮಾರನನಾಯತ
ತರ ಕಡೆಗಣ್ಣಿಂದೆ ನೋಡಿ ಕೆಳದಿಸಮೇತಂ
ಪರಿಗತನಗೆಯಿಂದಿರ್ದೆಂ
ಗುರುನಾಣ್ಭರದಿಂದಮೆಱಗಿ ಮುಖತಾಮರೆಯಂ ೫೯

ನರಪತಿತನಯನನಾಯತ
ತರಳಾಪಾಂಗದೊಳೆ ನೋಡಿ ಕೆಳದಿಯರೊಡನಾಂ
ಪರಿಗತ ಹಾಸ್ಯದೊಳಿರ್ದೆಂ
ಗುರುಲಜ್ಜಾಭರದಿನೆಱಗಿ ಮುಖಸರಸಿಜಮಂ ೬೦

ಎಂದಿಂತು ಸಮಾಸೋಕ್ತಿಯೊ
ಳೊಂದಾಗಿರೆ ಸಕ್ಕದಂಗಳುಂ ಕನ್ನಡಮುಂ
ಸುಂದರಮಕ್ಕುಂ ಕವಿಪದ
ಮೊಂದಿದವೋಲ್ ಕನಕರಚನೆಯೊಳ್ ಮಣಿನಿಕರಂ ೬೧

ಶ್ರುತದುಷ್ಟಮರ್ಥದುಷ್ಟಂ
ಶ್ರುತಿಕಷ್ಟಂ ಕಲ್ಪನೋಕ್ತಿಕಷ್ಟಮುಮೆಂದೀ
ಕೃತಕೃತ್ಯಮಲ್ಲವಲ್ಲಭ
ಮತದಿಂ ನಾಲ್ಕಕ್ಕುಮಿಲ್ಲಿ ಕೃತಿದೋಷಂಗಳ್ ೬೨

ನಿಲ್ತೋಳಂ ಬರ್ಪುದು ಸ
ಯ್ತುಲ್ತೂರುಂ [ದೂರಮೆನೆಡೆತುಡಗಪೂರ್ಗಂ]
ಕಲ್ತುಲ್ಲಿಂದೋಡುವಮೆಂ
ಬಲ್ತುಣ್ಣಿಂ ತಂದ ಕೂಟಿನೂ ಸಂಗಮದೊಳ್ ೬೩

ನೆರೆದೂರ್ಧ್ವರೇತನೊಳ್ ಪುರು
ಹಿರಣ್ಯರೇತೋತಿತೀವ್ರನೊಳ್ ಮುನಿವರನೊಳ್
ಪರಮಭಗಸಹಿತೆ ಮುದದಿರೆ
ಪರಿಶ್ರಮಕ್ಕೆನ್ನ ನಿರ್ವಿಶೇಷನೊಳಾಗಳ್ ೬೪

ಪರದರ್ಗಾ ಪಾರ್ವರ್ಗಾ
ಯ್ತ್ತರಸರ್ಗಾ ಕುಡಿಯರಪ್ಪ ನಾಲ್ವರ್ಗಾಗಳ್
ಸ್ಥಿರ ಗೋಪಾಧ್ಯಾಯ ಕ್ಷ್ಮಾ
ಪರಿಪಾಲ್ಯ ಕ್ಷೇತ್ರಕರ್ಷಣಂಗಳ್ ಕ್ರಿಯೆಗಳ್ ೬೫

ಮಸಗಿ ಬೆಸದಿರ್ದು ವಿವರಮ
ನಸಿಯದಱಿಡೆವೊತ್ತಿ ಪೊಕ್ಕು ಕೆಲನಂ ಕೊರ್ಬು
ತ್ತಿಸೆದು ಬಿದಿರ್ದಾರ್ದುವೋೞ್ಗೀ
ೞ್ಗಿ ಸಮಂಜಸನಿಕ್ಕಿ ಮಿಕ್ಕನರಿವಾಹಿನಿಯಂ ೬೬

ಕುಱಿತಂತೆ ಪೇೞ್ದ ನಾಲ್ಕುಂ
ಕುಱುಪುಗಳಿಂದಱಿದು ಪರರ ದೋಷಂಗಳುಮಂ
ಪೆಱವುಮನೀ ಮಾೞ್ಕೆಯೊಳಂ
ತೊಱೆವುದು ತೊಱೆವಂತಸಾಧುಜನ ಸಂಗತಿಯಂ ೬೭

ಮಿಗೆ ದುಷ್ಕರ ಕಾವ್ಯಂಗಳೊ
ಳಗರ್ಹಿತಪ್ರಾಯಮುಕ್ಕಮಾಶ್ರುತಿಕಷ್ಟಂ
ಪಗರಣದೊಳುೞಿದ ಮೂಱುಂ
ನಗಿಸುಗುಮಪ್ಪುದಱಿನಲ್ಲಿಗಂತವದೋಷಂ ೬೮

ಪೊಡವಿಪತಿ ಗೊರವನೆನೆ ಪೇ
ಟ್ಪಿಡೆಯುದುವದೆಕರಿಸಿ ಕಬ್ಬಿಗದೂರ್ಗಱಿನೆಯುಂ
ಹಡುವಸುಮುಱಿಸೆಟ್ಟೆಸು ಗೆಂ
ಮುಡಿಯೊಳವಾರ್ಗೆಂದು ನುಡಿವ ಪಟಿಗನ್ನಡಮಂ (?) ೪೯

ದೊರೆಕೊಂಡಿರೆ ಸೊಗಯಿಸುಗುಂ
ಪುರಾಣ ಕಾವ್ಯಪ್ರಯೋಗದೊಳ್ ತತ್ಕಾಲಂ
ವಿರಸಂ ಕರಮವು ದೇಸಿಗೆ
ಜರದ್ವಧೂವಿಷಯ ಸುರತ ರಸರಸಿಕತೆವೋಲ್ ೫೦

ಸಮಸಂಸ್ಕೃತಂಗಳೊಳ್ ಸ
ಯ್ತ್ತಮರ್ದಿರೆ ಕನ್ನಡಮನಱಿದು ಪೇೞ್ಗೆಂಬುದಿದಾ
ಗಮಕೋವಿದ ನಿಗದಿತ ಮಾ
ರ್ಗಮಿದಂ ಬೆರಸಲ್ಕಮಾಗದೀ ಸಕ್ಕದದೊಳ್ ೫೧

ಅಹರಹರುಚ್ಚೈರ್ನೀಚೈ
ರ್ಮುಹುರ್ಮುಹುರಿತಸ್ತತಃ ಪುನಃಪುನರಂತ
ರ್ಬಹಿರಾದಿಹ ಪ್ರಾದುರಹೋ
ಸಹಸಾದಿಗಳವ್ಯಯಂಗಳಸಹಾಯಂಗಳ್ ೫೨

ಬೆರಸಿರೆ ಕನ್ನಡದೊಳ್ ಬಂ
ಧುರಮಾಗದು ಕಾವ್ಯರಚನೆ ಪೇೞ್ದೊಡೆ ಪೀನಂ
ಪರುಷತರಮಕ್ಕುಮೊತ್ತಂ
ಗರಡೆಯ ಮದ್ದಳೆಯ ಜರ್ಝರ ಧ್ವನಿಗಳವೋಲ್ ೫೩

ಬಹಿರಂತರುಪವನಂಗಳೊ
ಳಹರಹಮಾ ಪರಭೃತಂಗಳುಲಿವ ರವಂಗಳ್
ಸಹಸಾ ತಳಮುಳಗೊಳಿಸಿದ
ಮಹೋ ಮನಂಗಳನಿತಸ್ತ್ರತಂ ವಿರಹಿಗಳಾ ೫೪

ವಿದಿತ ಸಮಸಂಸ್ಕೃತೋದಿತ
ಪದಂಗಳೊಳ್ ಪುದಿದು ಬೆರಸಿ ಬರೆ ಕನ್ನಡದೊಳ್
ಮುದಮನವು ತರ್ಕುಮತಿಶಯ
ಮೃದಂಗ ಸಂಗೀತಕಾದಿ ಮಧುರರವಂಬೋಲ್ ೫೫

ಬಹಿರುದ್ಯಾನಾಂತರದೊಳ್
ಸಹಸೋದಿತ ಮತ್ತ ಕೋಕಿಲೋಚ್ಚೈರ್ಧ್ವಾನಂ
ಮುಹುರಾಕರ್ಣಿಸೆ ಪಡೆದ
ತ್ತಹರ್ನಿಶಂ ಪೆರ್ಚನಂತರಂಗಕ್ಕೆನ್ನಾ ೫೬

ನೆಗಟ್ದಿರ್ದ ಕನ್ನಡಂಗಳೊ
ಳಗಣಿತ ಗುಣ ವಿದಿತ ಸಂಸ್ಕೃತೋಕ್ತಕ್ರಮಮಂ
ಬಗೆದೊಂದುಮಾಡಿ ಪೇೞ್ದೊಡೆ
ಸೊಗಯಿಸುಗುಂ ಕಾವ್ಯಬಂಧಮೆಂದುಮನಿಂದ್ಯಂ ೫೭

ತಱಿಸಂದಾ ಸಕ್ಕದಮುಮ
ನಱಿಯದೆ ಕನ್ನಡಮುಮಂ ಸಮಾಸೋಕ್ತಿಗಳೊಳ್
ಕುಱಿತು ಬೆರಸಿದೊಡೆ ವಿರಸಂ
ಮಱುಗುವ ಪಾಲ್ಗಳೆಯ ಪನಿಗಳಂ ಬೆರಸಿದವೋಲ್ ೫೮

ಯತಿಭಂಗಮರ್ಥಶೂನ್ಯಂ
ಸತತ ವಿರುದ್ಧಾರ್ಥಮುಕ್ತಪುನರುಕ್ತಾರ್ಥಂ
ಚ್ಯುತಯಾಥಾಸಂಖ್ಯಂ ವ್ಯವ
ಹಿತಮಚ್ಛಂದಂ ವಿಸಂಧಿಕಂ ನೇಯಾರ್ಥಂ ೧೯

ಆಗಮ ಸಮಯ ನ್ಯಾಯವಿ
ಭಾಗ ಕಳಾ ಕಾಲ ಲೋಕ ದೇಶ ವಿರುದ್ಧಂ
ಭೋಗಿವಿಷಂಬೋಲ್ ಪ್ರಾಣ
ತ್ಯಾಗಮನಾಗಿಸುಗುಮಮಳಕೃತಿವಧುಗಿನಿತುಂ ೨೦

ಯತಿಯೆಂಬುದುಸಿರ್ವ ತಾಣಂ
ಕೃತಾಸ್ಪದಂ ವೃತ್ತಜಾತಿ ಪದ ಪದ್ಧತಿಯೊಳ್
ಸತತಂ ಛಂದೋವಿದಿತ
ಪ್ರತೀತಶಾಸ್ತ್ರೋಕ್ತಮಾರ್ಗದಿಂದಱಿವುದದಂ ೨೧

ಕೇಡಡಸಿದಂದು ಬಗೆ[ಯು]ಂ
ಕೂಡದು ಕೂಡಿದುದುಮುಱಿದು ವಿಪರೀತಮುಮಂ
ಮಾಡುಗುಮದಱಿಂ ಕರ್ಮ
ಕ್ಕೋಡಿ ಬರ್ದುಂಕಲ್ಕುಮಱಿವರಾರ್ ಭೂತಳದೊಳ್ ೨೨

ತಡವಡಿಸಿ ಯತಿಯನಿಂತಿರೆ
ತೊಡರ್ಚೆ ಕೆಡೆಪೇೞ್ದೊಡಕ್ಕುಮದು ಯತಿಭಂಗಂ
ಸಡಲಿಸದಲಸದ[ದ]ಂ ಪೇ
ೞ್ವೆಡೆಯೊಳ್ ನಿಲೆಪೇೞಲಾರ್ಪೊಡಂತದದೋಷಂ ೨೩

ಕೇಡಡಸಿದೊಡಂ ಬಗೆ[ಯು]ಂ
ಕೂಡದು ಕೂಡಿದುದುಮುೞಿದು ವಿಪರೀತಮುಮಂ
ಮಾಡುಗುಮದಱಿಂ ಕರ್ಣ
ಕ್ರೋಡಿ ಬರ್ದುಂಕಲ್ಕೆ ಕಲ್ತರಾರ್ ಬಿನ್ನಣಮಂ ೭೪

ದೋಸಮನೆ ಗುಣದವೋಲು
ದ್ಭಾಸಿಸಿ ಕನ್ನಡದೊಳೊಲ್ದು ಪೂರ್ವಾಚಾರ್ಯರ್
ದೇಸಿಯನೆ ನಿಱಿಸಿ ಖಂಡ
ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್ ೭೫

ನಿರತಿಶಯಮಕ್ಕುಮದು ಬಂ
ಧುರ ಕವಿಜನತಾಪ್ರಯೋಗ ಸಂಬಂಧನದಿಂ
ಗುರುಜಘನಸ್ತನಭರಮಂ
ಥರಲೀಲಾಲಸವಿಳಾಸಿನೀ ಚಳಿತಂಬೋಲ್ ೭೬

ಅಂತುಂ ಯತಿಯಂ ಪೇೞ್ವಾ
ರ್ಪಂತಾದ್ಯದೊಳಲಸದಾರ್ಯೆಯೊಳ್ ಕಂದದೊಳಂ
ಸಂತಂ ದ್ವಿತೀಯ ಪಾದಗ
ತಾಂತದೊಳಕ್ಕದು ಚತುಷ್ಪದೀಪದವಿಗಳೊಳ್ ೭೭

ಸಮುದಾಯಾರ್ಥಮನಾರಯೆ
ಸಮನಿಸುವರ್ಥಪ್ರತೀತಿ ತೋಱದೊಡೆಲ್ಲಂ
ಕ್ರಮಮಕ್ಕುಮರ್ಥಶೂನ್ಯಂ
ಸಮಸ್ತ ಕವಿವೃಷಭ ದೂರದೂಷಿತಮಾರ್ಗಂ ೭೮

ಮುನಿ ವೀತರಾಗನೆಂದುಂ
ಬನಮಂ ಸಾರ್ತಕ್ಕುಮಾವ ತೆಱದಿಂ ಪೋಪಂ
ಮನಮುಂಜುಗುಮುಱಿಯದವಂ
ಮುನಿಗುಂ ಪಗೆವಂಗೆ ಪಾಪಕರ್ಮಂ ಪೊಲ್ಲಂ ೭೯

ಸ್ಥಿರಮರ್ಥಶೂನ್ಯಮೆಂಬುದು
ದುರುಕ್ತಮಿದನಿಂತು ಪೇೞ್ದೊಡೆಲ್ಲಂ ಪೀನಂ
ಮರುಳಂ ಮದಿರಾಪರವಶ
ಶರೀರನುಂ ಪೇೞ್ಗುಮಱಿವನಾವಂ ಪೇೞ್ಗುಂ ೮೦

ಪರಿಗೀತಾರ್ಥಂ ಪೂರ್ವಾ
ಪರದೊಳ್ ಬಗೆವಾಗಳೆಂದುಮೊಂದಱೊಳೊಂದುಂ
ದೊರೆಕೊಂಡೊಂದದೊಡದು ದು
ಷ್ಕರಮೆ ವಿರುದ್ಧಾರ್ಥಮೆಂಬುದಾದಂ ದೋಷಂ ೮೧

ಅರಿನೃಪಬಲಮಂ ಗೆಲ್ದುರು
ಪರಾಕ್ರಮುಕ್ರಮುದೆ ಶೌರ್ಯಮಂ ಪ್ರಕಟಿಸು ನೀಂ
ನರಮಹಿತಾ ನಿನಗೇನಹಿ
ತರುಮೊಳರೇ ಸತತ ಪರಹಿತಾಚಾರಪರಾ ೮೨

ಇದು ವಿದಿತ ವಿರುದ್ಧಾರ್ಥ
ಕ್ಕುದಾಹೃತಂ ಹರಣಮಾತ್ರಮಿನ್ನುಪ್ಪುವನುಂ
ಸದಭಿಮತ ಕಾವ್ಯಪದವಿಧಿ
ವಿದೂರಗತಮಾಗೆ ಪರಿಹರಿಕ್ಕೆ ಬುಧರ್ಕಳ್ ೮೩

ಪುನರುಕ್ತಮೆಂಬುದಕ್ಕುಂ
ನೆನೆಯದೆ ಪೂರ್ವೋದಿತಾರ್ಥಪದಪದ್ಧತಿಗೊಂ
ದಿನಿಸುಂ ವಿಶೇಷಮಿಲ್ಲದೆ
ಜನಿಯಿಸಿದ ಪದಾರ್ಥಮದಱದೀ ದೃಷ್ಟಾಂತಂ ೮೪

ತ್ರಿದಶಸುರಲೋಕವಾಸಾ
ಸ್ಪದಮಂ ಪೆಱುಗುಂ ಮನುಷ್ಯ ಮನುಜಂ ನಿನ್ನಾ
ಪದಚರಣ ಯುಗದ್ವಯಮಂ
ಮುದದಱ್ತಿಯೆ ಬಗೆದು ನೆನೆವನನುದಿನಮೆಂದುಂ ೮೫

ನಿಯತೋದ್ದೇಶಿಯುಮನುದೇ
ಶಿಯುಮನನುವಿನಂತು ಪೇೞೆ ಯಾಥಾಸಂಖ್ಯಾ
ಹ್ವಯಮಕ್ಕುಮಾಗಮೋಕ್ತಾ್ಯ
ಶ್ರಯದಿಂ ವ್ಯತಿರೇಕಮಕ್ಕುಮಲ್ಲದುವೆಲ್ಲಂ ೮೬

ಚ್ಯುತಯಾಥಾಸಂಖ್ಯಾರ್ಥ
ಪ್ರತೀತದೋಷಾನುವಸಥಮೆಂದಱೆಗೆ ಬುಧರ್
ಸತತಮದಱಯೆ ನಿದರ್ಶನ
ಗತಮಿಂತಕ್ಕುಂ ಪ್ರಮೋದದಿಂ ಕವಿಜನದೊಳ್ ೮೭

ಅಳಕಾನನ ನಯನಂಗಳೊ
ಳಳಿನಳಿನೋತ್ಪಳವಿಕಾಶಮಂ ಗೆಲ್ವುದಱಂ
ತಿಳಿಗೊಳನಂ ಪೋಲ್ತಿರ್ದುಂ
ತಿಳಿಯದಿದೇನೆಂಬುದುಂ ತದನ್ವಯಮದಱೊಳ್ ೮೮

ಅಳಿನಳಿನೋತ್ಪಳರುಚಿಗಳ
ನಳಕಾನನ ನಯನಯುಗಳದಿಂ ಗೆಲ್ದಿರ್ದುಂ
ಕೊಳದೊಳಗೇನಂ ನೋೞ್ಪಿಗ
ವಿಳಾಸಿನೀ ನಿನ್ನವೋಲದೇನತಿಶಯವೋ ೮೯

ಸವಿಶೇಷಾಲಂಕಾರೋ
ದ್ಭವವಾಗಿಯುಮೊಂದುವರ್ಥದೊಳ್ ಸಂಬಂಧ
ವ್ಯವಧಾನವಾದೊಡಕ್ಕುಂ
ವ್ಯವಹಿತದೋಷಂ ಪ್ರಯೋಗವಿಾ ತೆಱನದಱಾ ೯೦

ಮನದೆ ನೆನೆದವರ ಕಿಡುಗುಂ
ಜಿನಾಧಿಪಾ ನಿನ್ನ ಪಾಪನಿಚಯಂ ಗುಣಮುಂ
ಮುನಿಗಳುಮದಱಿಂ ತತ್ಸೇ
ವನೆಯಿಂ ಕಿಡಿಪಲ್ಕೆ ಪತ್ತಿದರ್ ಸಂಸೃತಿಯಂ ೯೧

ಗುರುಲಘುವಿನ್ಯಾಸಕ್ರಮ
ವಿರಚನೆಯೂನಾತಿರಿಕ್ತಮಾದೊಡೆ ಕೃತಿಯೊಳ್
ನಿರುತಂ ಛಂದೋಭಂಗಂ
ದುರುಕ್ತತರದೋಷಮದಱ ಪಾಂಗಿಂತಕ್ಕುಂ ೯೨

ವನರುಹದಳನಯನೆ ನಿ
ನ್ನನೆ ನೆನೆನೆನೆದಿರುಳೊಳೊಱಗದಿರೆ ಕಡೆಗಣ್ಗಳ್
ಮುನಿಸನಭಿನಯಿಪವೋಲ್ ಕೆ
ಮ್ಮನೆ ರಕ್ತಾಂಭೋಜರುಚಿಯನಿೞ್ಕುಳಿಗೊಳ್ಗುಂ ೯೩

ಮೊದಲ ಪದಂ ನ್ಯೂನಾಕ್ಷರ
ಮದಱಿಂದೆ ಬೞಿಕ್ಕಮರ್ಧಮಧಿಕಾಕ್ಷರದಿಂ
ತಿದಱಿಂ ಛಂದೋಭಂಗಂ
ಪದನಱಿದದನಿಂತು ಸಮಱಿ ಪೇೞ್ದೊಡೆ ಚೆಲ್ವಂ ೯೪

ಛಂದಕ್ಕೆ ಬಾರದೆಂದಱಿ
ದೊಂದೊಂದಱೊಳೊಂದಿ ಬಂದು ನಿಂದಕ್ಕರಮಂ
ಸಂಧಿಸದೆ ಪೇೞ್ದೊಡದು ಕೃತಿ
ನಿಂದಿತಮೆಂದುಂ ವಿಸಂಧಿಯೆಂಬುದು ದೋಷಂ ೯೫

ಜನಪತಿಗೆ ಒಸಗೆಯಂ ಪುರ
ಜನಮೆಲ್ಲಂ ಬೀಱುತಿರ್ಪ್ಪರಾಗಳ್ ತಾವುಂ
ಮನದುತ್ಸವದಿಂ ಕುಣಿವಂ
ತನಿಲಾಹತಕೇತನಾಳಿ ಸೊಗಯಿಸಿ ತೋರ್ಕ್ಕುಂ ೯೬

ಮುನ್ನಂ ಪೇೞ್ದಿರ್ದರ್ಥಂ
ಭಿನ್ನಪ್ರಸ್ತಾರಭಿತ್ತಿದೋಷಾನುಗತಂ
ಸನ್ನುತಮಪರಾರ್ಥಂ ಸಂ
ಪನ್ನಂ ಶ್ಲಿಷ್ಟಾಕ್ಷರೋಪರಚಿತಮದೋಷಂ ೯೭

ಸಂಧಿಗಳುಂ ಕೆಲವೆಡೆಯೊಳ್
ಬಂದು ವಿರೂಪಂಗಳಾಗಿ ಸಮನಿಸಿ ಕವಿತಾ
ಬಂಧನದೊಳಾಗೆ ದೋಷಾ
ಬಂಧುಗೆ ಶಶಲಕ್ಷ್ಮದಂತೆ ಕಱೆಯಂ ತರ್ಕ್ಕುಂ ೯೮

ಅರಮರಸಂ ಕೃತಕಾದ್ರಿಯೊ
ಳರಮರಮನೆಯೊಳಗೆ ಕಂದುಕ ಕ್ರೀಡೆಗಳೊಳ್
ಅರಮುದ್ಯಾನವನಂಗಳೊ
ಳರಮಂತಃಪುರದೊಳರಮದೆಂದುಂ ನಿಲ್ವಂ ೯೯

ದೋಷಂಗಳಿಂತು ಮಿಗೆ ಸಂ
ಶ್ಲೇಷದೊಳಾದಂದು ಸಕಲ ವಿದ್ವತ್ಸಭೆಯೊಳ್
ದೂಷಿಸುಗುಂ ಕೃತಿವಧುವಂ
ಭಾಷಾವಿದರದಱ ತೆಱನನುೞಗೀ ದೆಸೆಯಿಂ ೧೦೦

ಕುಱಿತಂತೆ ಪೇೞ್ದ ಪದದೊಳ್
ಮೆಱೆಯದೊಡೆಲ್ಲಂ ವಿವಕ್ಷಿತಾರ್ಥಮಶೇಷಂ
ಪೆಱತೊಂದಲ್ಲಿಲ್ಲದುಮುಮ
ನಱಿವವರಿಟ್ಟಱಿಯೆ ಪೇೞ್ದೊಡದು ನೇಯಾರ್ಥಂ ೧೦೧

ಪರೆದಿರೆ ರಾಗಂ ತನ್ನೊಳ್
ನಿರಂತರಂ ಗಗನವಿವರಮೊಪ್ಪಿತ್ತಾದಂ
ವರ ಪಾರಿಜಾತ ಕುಸುಮೋ
ತ್ಕರ ಸಾಂದ್ರ ಪರಾಗ ವಿಸರ ಪಿಂಜರಿತಂಬೋಲ್ ೧೦೨

ಪರೆದಿರೆ ಸಂಧ್ಯಾರಾಗಂ
ನಿರಂತರಂ ಗಗನವಿವರಮೊಪ್ಪಿತ್ತೆಂದಾ
ದರದಿಂ ಪೇೞಲ್ ಬಗೆದಂ
ತಿರೆ ಸಂಧ್ಯಾಪದಮನಿಡದೆ ಪೇೞ್ವುದು ದೋಷಂ ೧೦೩

ರಾಗಾದಿ ದೋಷ ವಿರಹಿತ
ವಾಗತಿಶಯುವಖಿಳವಸ್ತು ವಿಸ್ತರ ವಿಷಯಂ
ಯೋಗಿಗುಣಾನುಗತಂ ಮ
ತ್ತಾಗಮವೇತದ್ವಿರುದ್ಧ ವಚನಂ ದೋಷಂ ೧೦೪

ಆ ಕಪಿಲ ಸುಗತ ಕಣಚರ
ಲೋಕಾಯತಿಕಾದಿ ಮಾರ್ಗಭೇದಂ ಸಮಯಂ
ಪ್ರಾಕಟಮದಂ ವಿರುದ್ಧ ವಿ
ವೇಕದಿನಱಿವುದೊಡೆ ನಾಡೆ ಸಮಯವಿರುದ್ಧಂ ೧೦೫

ಉಕ್ತವಿಚಾರಂ ನ್ಯಾಯನಿ
ಯುಕ್ತಂ ಕ್ರಮವಿನ್ನದಕ್ಕೆ ಬಾರದುವೆಲ್ಲಂ
ವ್ಯಕ್ತಂ ನ್ಯಾಯವಿರುದ್ಧಂ
ಪ್ರೋಕ್ತ ಮಹಾದೋಷಮಂತು ಪೇೞಲ್ಕೆಂತುಂ ೧೦೬

ನಿರುಪಮ ಗಂಧರ್ವಗತಿ
ಸ್ವರಾದಿಕ ಕಳಾಗುಣಂ ಚತುಃಷಷ್ಟಿವಿಧಂ
ದೊರೆಕೊಳ್ಳದುದೆಲ್ಲಿ ಕಳಾ
ವಿರುದ್ಧದೋಷಂ ವಿಶಿಷ್ಟಜನತಾದೂಷ್ಯಂ ೧೦೭

ಕಾಲಮಹೋರಾತ್ರಾದಿಕ
ಮಾ ಲಕ್ಷಿತ ಭೇದಮದಱಿೊಳೊಂದದೊಡಕ್ಕುಂ
ಕಾಲವಿರುದ್ಧಂ ದೋಷ
ಕ್ಕಾಲಯಮದನಱಿದು ಕೃತಿಯೊಳಿಡದಿರ್ಕೆ ಬುಧರ್ ೧೦೮

ಲೋಕಮದೂರ್ಧ್ವಾಧೋಮ
ಧ್ಯಾಕಾಂಕ್ಷಿತಭೇದರೂಪದಿಂ ಮೂಱಕ್ಕುಂ
ಲೋಕವಿರುದ್ಧಂ ತದ್ವ್ಯತಿ
ರೇಕೋಕ್ತಿ ವಿವೇಕಿಲೋಕಗರ್ಹಿತ ಮಾರ್ಗಂ ೧೦೯

ದೇಶಂ ವರರಾಷ್ಟ್ರಾದಿ ನಿ
ವೇಶಾಂತಂ ತದ್ವಿರುದ್ಧವಚನಂ ಮಿಗೆ ಸಂ
ಕ್ಲೇಶಕರಂ ಕೃತಿಕರ್ತೃಗೆ
ಕೌಶಲಮಂ ಪಡೆಯದುಕ್ತ ದೇಶವಿರುದ್ಧಂ ೧೧೦

ಇಂತಿಂತೆ ಪೇೞ್ವೊಡೆಲ್ಲಮ
ನಂತಾತ್ಮಕಮಕ್ಕುಮಾ ವಿರುದ್ಧದ ಭೇದಂ
ಸಂತಯಿಸಿ ಬಲಿದು ಮನಮನ
ದಂ ತಱಿಸಲೆ ಪೇೞಲಾರ್ಪನೆಂಬವನೊಳನೇ ೧೧೧

(ಗೀತಿಕೆ)

ದೋಸಮೇನಾನುಂ ಸ್ವಲ್ಪಮಾದೊಡಂ
ಮಾಸಿಸಿರ್ಕ್ಕುಮಣಂ ಕೃತಿವಧುವಂ
ಪೇಸಡೆ ದುರ್ಜನದೊಳಾದ ಪರಿಚಯಂ
ಮಾಸಿಸಿ ಕಿಡಿಸುವವೊಲೊಪ್ಪುವ ಕುಲವಧುವಂ ೧೧೨

(ವೃತ್ತ)

ಕಾರಕದೋಷಮುಂ ವಚನದೋಷಮುಮಾ ಗುರುದೋಷಮುಂ ಲಘೂ
ಚ್ಚಾರಿತ ಶಬ್ದದೋಷಮುಮದಂತೆ ಸಮುಚ್ಚಯಜಾತದೋಷಮುಂ
ಭೂರಿ ವಿಕಲ್ಪದೋಷಮುಮದಿನ್ನವಧಾರಣದೋಷಮುಂ ವಿಶಂ
ಕಾ ರಚಿತೋರು ದೋಷಮುಮನೀ ತೆಱದಿಂ ತಱಿಸಲ್ಗೆ ಪಂಡಿತರ್ ೧೧೩

ಕಾರಕಮಾಱು ಕರ್ಮಕರಣಾದಿಕದಿಂ ಪ್ರಥಮಾದಿಭೇದನಿ
ರ್ಧಾರದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞನಿಕ್ಕುಮಾ
ಚಾರುಗುಣೋದಯಂ ವಚನಮೇಕಬಹುಕ್ರಮದಿಂದೆರಟ್ಟಿೞ
ಕ್ಕಾರಯೆ ಪೇೞ್ವೆನಿಂತಿವಱ ಜಾತಿವಿಭಾಗ ಗುಣಾಗುಣಂಗಳಂ ೧೧೪

ನರಪತಿ ಬಂದನಾ ನೃಪನನೞ್ತಿಯೆ ಕಾಣ್ಬುದು ತನ್ನರೇಂದ್ರನಿಂ
ಧರಣಿ ಸನಾಥೆ ಭೂಪತಿಗೆ ಕಪ್ಪವನಿತ್ತವನೀಶನತ್ತಣಿಂ
ಪರಿಭವಮಂ ಕಟಿಲ್ಕುವುದಧೀಶ್ವರನಾ ದಯೆಸಾಲ್ಗುಮಾ ಮಹೀ
ಶ್ವರನೊಳಿದಪ್ಪುದೆಂಬುದಿದು ಕಾರಕಯುಕ್ತ ವಿಭಕ್ತ್ಯನುಕ್ರಮಂ ೧೧೫

ಬರಮೆಮಗೀಗೆ ದೇವತೆಗಳಾದರದಿಂ ಕರುಣಿಪ್ಪುದಕ್ಕೆ ಬಂ
ಧುರಗುಣ ಬಂಧುಸಂತತಿಯನೆಂಬುದು ಕಾರಕದೋಷಮಾಗಳುಂ
ಬರವನವೋಘಮಾಗೆಮಗೆ ದೇವತೆಗಳ್ ಕರುಣಿಪ್ಪುದಕ್ಕೆ ಬಂ
ಧುರ ಗುಣಬಂಧುಸಂತತಿಗೆ ನಿಕ್ಕುವಮೆಂಬುದದುಷ್ಟಕಾರ[ಕಂ] ೧೧೬

ನಿಕ್ಕುವಮಿಂತುಮಲ್ಲದದ[ಱಾ] ಕ್ರಿಯೆ ಸಾರ್ದಿರೆ ಪತ್ತಿ ಮುಂದೆ ಸ
ಯ್ತುಕ್ಕುಮನುಕ್ರಮಾನುಗತದಿಂ ಬರಮಾಗೆಮಗೆಂಬ ಕಾರಕಂ
ಸಕ್ಕದವೇನೊ ಕಾರಕ ವಿಭಕ್ತಿಯೊಳೊಂದೆ ಸಮಾಸಯುಕ್ತಿ ಲೇ
ಸಕ್ಕುಮಭೇದರೂಪಗುಣಮಾಗಿ ತಗುಳ್ದಿರೆ ಮೇಣ್ ಕ್ರಿಯಾಪದಂ ೧೧೭

ಬಂದುವು ಪಾವುಡಂ ನೃಪತಿಗೆಂಬುದುಮಾನೆಗಳೀ ಪ್ರದೇಶದೊಳ್
ನಿಂದುದಿದೆಂಬುದುಂ ವಚನದೋಷವಿಶೇಷಮನೈಪುಣೋಕ್ತಿಯಿಂ
ಬಂದುದು ಪಾವುಡಂ ನೃಪತಿಗೆಂಬುದುಮಾನೆಗಳೀ ಪ್ರದೇಶದೊಳ್
ನಿಂದುವಿವೆಂಬುದು ಬಗೆದು ನೋಡೆ ಗುಣಂ ವಚನಕ್ಕೆ ನಿಕ್ಕುವಂ ೧೧೮

ಜಾತಿವಿಭಾಗಮಂ ಬಗೆದು ಪೇೞೆ ಬಹುತ್ವಮನೇಕ ವಾಕ್ಯ ಸಂ
ಜಾತ ಗುಣಂ ತದೇಕವಚನಂಗಳೊಳಂ ದೊರೆವೆತ್ತು ಕೂಡುಗುಂ
ಮಾತಿನೊಳೇನೊ ಸಂಖ್ಯೆಗಳೊಳೇಕ ಬಹುತ್ವ ವಿಪರ್ಯಯಕ್ಕಸಂ
ಖ್ಯಾತಗುಣಂ ವಿಕಲ್ಪಮದು ಕನ್ನಡದೊಳ್ ಗುಣಮಂ ತಗುಳ್ಚುಗುಂ ೧೯

ಕುದುರೆ ತಗುಳ್ದುವಾದೆಸೆಯ ಬಿಲ್ಲವರಂ ಸುೞಿದಾನೆ ನಿಂದು ಮೆ
ಟ್ಟಿದುವೆಲೆ ನೋಡಿಮೆಂಬುದಿದು ಜಾತಿಕೃತೈಕ ಬಹುತ್ವಮೊಂದುಗುಂ
ಕುದಿಕುದಿದತ್ತಣಿಂ ಕುದುರೆ ನೂಱಱೊಳಾ ಬಲದಾನೆ ಪತ್ತು ತಾ
ಗಿದುವೆನೆ ದೋಷಮಾ ಪಿರಿದು ಸಂಖ್ಯೆಯೊಳೇಕಬಹುತ್ವ ಸಂಗದಿಂ ೨೦

ಬೆರಸಿರೆ ಮುಂ ಸಮುಚ್ಚಯ ಪದದ್ವಿತಯೋಕ್ತಿ ವಿಭಕ್ತಿ ಕೂಡೆ ಬಂ
ದಿರದೆಯುಮೇಕ ವಾಕ್ಯದೊಳೆ ಕಾರಕ ಸಂಪದಮಂ ತಗುಳ್ಚುಗುಂ
ನರಪತಿಯುಂ ನೃಪಾಂಗನೆಯರುಂ ನೆರೆದೞ್ತಿಯಿಸಾಡಿಪೋದರಾ
ಪರಿಜನಮುಂ ಮಹೋತ್ಸವದೊಳೊಂದಿದುದೆಂಬುದಿದಲ್ಪ ದೂಷಿತಂ ೨೧

ಗಣಿದದೊಳೊಂದಿ ಬರ್ಪ ಪದವೊಂದೆಡೆಗೊಂ[ಡು] ವಿಶೇಷ್ಯಮುಂ ವಿಶೇ
ಷಣಮುಮನೊಂದಲೀಯದಿರೆಯುಂ ಮಿಗೆ ಕಾರಕ ದೋಷ[ಮಲ್ತುದು]
ಪ್ರಣುತ ಪದಾಂತರೀಕರಣಮಂತದೆ ತಾಣದೊಳಾದೊಡಂ ಮಹಾ
ಗುಣಮನೆ ತರ್ಕುಮೇಕ ಬಹು ಭೇದವಿಕಲ್ಪಮನಲ್ಲಿ ನೋಡಲಿಂ ೨೨

ಗುಣಯುತನಪ್ಪನಂ ಸುಭಟನಪ್ಪನನಾಯುಧಯುಕ್ತನಪ್ಪನಂ
ಪ್ರಣುತ ಸಮಸ್ತವೈರಿಗಣನಪ್ಪನನುಜ್ಜ್ವಲ ಕೀರ್ತಿಯಪ್ಪನಂ
ಗಣಿದಮನೇನುಮಂ ಬಗೆಯದಾಗಡುಮಂತೆ ಪರೋಪಕಾರಕಾ
ರಣಪರನಪ್ಪನಂ ಮಸದೆ ಮೆಚ್ಚದರಾರಭಿಮಾನಿಯುಪ್ಪನಂ ೨೩

ನೆಗೆದ ಮುಗಿಲ್ಗಳುಂ ಸುರಿವ ಪೆರ್ಮೞೆಯುಂ ಮಿಗೆ ನುಣ್ಣನಪ್ಪ ಕೇ
ಕಿಗಳ ಸರಂಗಳುಂ ಪೊಳೆವ ಮಿಂಚುಗಳುಂ ಕರಮುಚ್ಚಮಪ್ಪ ಬೆ
ಟ್ಟುಗಳ ತಟಂಗಳಿಂ ಸುರಿವ ನಿರ್ಝರಮುಂ ಪೊಸ ಕಾರೊಳಿಂತು ಬೆ
ಳ್ಪುಗೆ ಪಥಿಕಾಂಗನಾಜನಮನಂಜಿಸುವಂತಿರೆ ತೋಱೆ ಸುತ್ತಲುಂ ೧೨೪

(ಗೀತಿಕೆ)

ಇಂತು ಕಾರಕಂಗಳೊಳ್
ಸಂತಮಱಿಯೆ ಪೇೞ್ದ ಗುಣಮಂ ದೋಷಮುಮಂ
ಚಿಂತಿಸಿ ಪೆಱವುಮಿನ್ನಪ್ಪುವಂ
ಭ್ರಾಂತಿಲ್ಲದಱಿದುಕೊಳ್ಗೆ ಕವಿಗಳ್ ಕೃತಿಗಳೊಳ್ ೧೨೫

(ವೃತ್ತ)

ಆರುಮಿಾ ಗುರುಲಘೂದಿತ ದೋಷ ವಿಶೇಷಮಂ
ಧೀರಸತ್ವರಱಿದುಂ ಕುಱಿಗೊಂಡು ವಿಭಾಗಿಸರ್
ಕಾರಣಾಂತರಮನಂತದಱೊಳ್ ತಱಿಸಂದು ನಿ
ರ್ಧಾರಿತ ಕ್ರಮದೆ ಪೇೞ್ವೆನುದಾಹರಣಂಗಳಂ ೧೨೬

ಆಗಳುಂ ಗುರುಗಳಲ್ಲದ ತಾಣದೊಳಂ ಗುರೂ
ದ್ಯೋಗದಿಂ ಬಗೆಗೆ ಗೌರವ ದೋಷಮಿದೆಂಬುದಂ
ಬೇಗಮಾ ಲಘುಗಳಲ್ಲದ ತಾಣದೊಳಂ ಲಘೂ
ಪಾಗಮ ಕ್ರಮದೆ ನಂಬುಗೆ ಲಾಘವ ದೋಷಮಂ ೧೨೭

ಸಾದುಗೆತ್ತು ಬಗೆಯಾದವನಾನೋಡಲಟ್ಟಿದೆ
ನಾದಮಾನುಮುೞಿಮಾನಸನಾಗದೆ ಮಾಳದೊಳ್
ಮೋದದಾನುಡುವ ಸೀರೆಗಮೆನ್ನನದಿರ್ಪಿಬಾ
ರದೆ ಪೋದೆಡೆಯೊಳೆ ತಡೆದಾನವನೆಂದಪಂ ೧೨೮

ಇಂತು ಪೇೞ್ದೊಡಿದು ಗೌರವದೋಷದ ಮಾೞ್ಕೆ ನಿ
ಶ್ಚಿಂತನಿಾ ತೆಱದವಂ ಕಳೆಗಾ ಕೃತಿಯತ್ತಣಿಂ
ಮುಂತೆ ಪೇೞ್ವ ಕುಱಿಪಂ ಕುಱಿಗೊಂಡು ಕವೀಶರಾ
ರ್ಪಂತು ಪಿಂಗಿಸುಗೆ ಕಾವ್ಯದಿನಾ ಲಘುದೋಷಮಂ ೧೨೯

ನೆರೆದು ಬಂದಪರವರ್ ಸಯಲಾಬಲವೆಲ್ಲವೆ:
ೞ್ತರದೆ ಕೊಂದಪನಿವಂದಿರನೀಗಳೆ ನಿಕ್ಕುವಂ
ಪರಿದು ಬೀೞ್ವವೊಲಿವಂದಿರ ಪಾಡಱಿವಂದದಂ
ತಿರವೆ[ೞೊ]ಡ್ಡಱಿಯದಂತಿರೆ ನಮ್ಮವರೆಲ್ಲರಂ ೧೩೦

ಬೇಱೆವೇಱಿರೆ ವಿಕಲ್ಪ ಸಮುಚ್ಚಯಯುಗ್ಮದೊಳ್
ತೋಱುವೆಂ ಕ್ರಮವಿಕಲ್ಪನೆಯಿಂ ಗುಣದೋಷಮಂ
ಕೇಱಿಕೊಂಡು ಗುಣಮಂ ಕಳೆಗಲ್ಲಿಯ ದೋಷಮಂ
ತೋಱಿ ಪಿಂಗಿಸುವವೊಲ್ ಪೊಸ ನೆಲ್ಲಿರೆ [ಪೊಳ್ಗ]ಳಂ ೧೩೧

ದೇವರುಂ ಗೊರವರುಂ ಗುಣವೃದ್ಧರನಾರತಂ
ಕಾವರಕ್ಕರಸನಂ ಪ್ರಜೆಯುಂ ಪರಿವಾರಮುಂ
ಏವಮುಂ ಬಗೆಯದಂತಿರೆ ಪೇೞ್ಪ ಸಮುಚ್ಚಯೋ
ದ್ಭಾವಕಕ್ರಮವಿಚಾರದೆ ದೋಷಮಿದಗ್ಗಳಂ ೧೩೨

ನೃಪನುಮಂ ಪ್ರಜೆಯುಮಂ ಪರಿವಾರಮುಮಂ ಮಹಾ
ಕೃಪೆಯಿನಾ ಗೊರವರುಂ ಸುರರುಂ ಗುಣವೃದ್ಧರುಂ
ವಿಪುಳ ರಾಗಪರರಾಗಿಸುಗೆಂದು ಸಮುಚ್ಚಯ
ಕ್ಕುಪಚಿತೋರುಗುಣಮಂ ಮಿಗೆ ಪೇೞ್ಗೆ ಕವೀಶ್ವರರ್ ೧೩೩

ಬೇಱೆವೇಱೆ ನಿಲೆ ಕಾರಕದೊಳ್ ಕ್ರಿಯೆ ತಳ್ತು ಮುಂ
ತೋಱೆ ಪೇೞ್ದವಗುಣಂ ಗುಣರೂಪದೆ ಪೊರ್ದುಗುಂ
ಸಾಱುಗಾನೆಯುವರೆಲ್ಲರುಮಂ ನೃಪ[ತಾ]ನೆ ಮ
ತ್ತೇಱು[ವಂ] ಪಣಿದೊಡಾನೆಯನೆಂಬು[ದ]ದೂಷಿತಂ ೧೩೪

ಒಸೆಗೆ ಮೇಣ್ ಮುನಿಗೆ ಮೇಣವರೆಲ್ಲರುಮಂತೆ ಬ
ಗ್ಗಿಸುಗೆ ಮತ್ತುೞಿಯಲಾಗದು ನೆಟ್ಟನೆ ಪೂಣ್ದುದಂ
ಪುಸಿವರಾಗಿರದೆ ಮಾನಸರೆಂಬುದನಿಂತೆ ಶಂ
ಕಿಸದೆ ನಂಬುವುದು ಮಿಕ್ಕ ವಿಕಲ್ಪದ ದೋಷಮಂ ೧೩೫

ಪೞಿಗೆ ಮೇಣ್ ಪೊಗೞ್ಗೆ ಮೇಣ್ ನೆವಮಿಲ್ಲದೊಡಿಂತು ಕೈ
ಗೞಿಯೆ ಬಗ್ಗಿಸುಗೆ ಮೇಣವರೆಲ್ಲರುಮಂತುಮಾ
ನುೞಿವೆನಲ್ಲೆನೆನಿತಾದೊಡಮೆಂಬುದು ಚೆಲ್ವ ಪಾಂ
ಗೞಿಯ[ದ]ಂತಿದನಿಂತಿರೆ ಪೇೞ್ಗೆ ವಿಕಲ್ಪಮಂ ೧೩೬

(ಗೀತಿಕೆ)

ಕುಱಿತು ಸಮುಚ್ಚಯದಾ ಬೞಿ ವಿಕಲ್ಪದಾ
ತೆಱದೊಳೆ ದೋಷಮುಮನಂತೆ ಗುಣಮುಮಂ
ಕಿಱಿದಱೊಳಱಿಯೆ ಪೇೞ್ದೆನಿಂತೆ ಪೆಱವುಮನೀ
ಕುಱಿಪನೆ ಕುಱಿಮಾಡಿ ಪೇೞ್ಗೆ ಕಬ್ಬಮಂ ೧೩೭

(ವೃತ್ತ)

ನಿಯಮಿತಾ[ನ್ವಯ] ಜಾತಿ ಗುಣಕ್ರಿಯಾ
ಶ್ರಯಮಿದಾಯವಧಾರಣಲಕ್ಷಣಂ
ನಯ ನಿಯೋಗ ವಿಕಲ್ಪನೆಯೊಳ್ ವಿಶಂ
ಕೆಯ ವಿಶೇಷ ಗುಣಕ್ಕುಪಲಕ್ಷಣಂ ೧೩೮

ಕುಲಜನೀತನೆ ಪಂಡಿತನೀತನು
ಜ್ಜ್ವಲ ಯಶೋಧಿಕನೀತನೆ ತಿಬ್ಬವೆಂ
ದಲಸಿ ಪೇೞ್ವವಧಾರಣದೋಷಮಂ
ನೆಲಸಲೀಯದಿರಿಂ ಕೃತಿನಾರಿಯೊಳ್ ೧೩೯

ಶೂರನೀತನೆ ಪಂಡಿತನೀತನೇ
ಕ್ಷೀರಗೌರಯಶೋಧಿಕನೀತನೇ
ಧಾರಿಣೀತಳದೊಳ್ ಧ್ರುವಮೆಂಬುದಾ
ಧಾರಮಿಂತವಧಾರಣದೊಳ್ ಗುಣಂ ೧೪೦

ದಿವಿಜನೋ ಫಣಿನಾಯಕನೋ ಮನೋ
ಭವನಿವಂ ಕರಮೊಪ್ಪಿದನೆಂಬುದಂ
ಕವಿಗಳಿಟ್ಟ ವಿಶಂಕೆಯ ಪಾೞಿಯಂ
ತವಿಸಿ ನಿಲ್ಕೆ ಮನೋಹರ ಕಾವ್ಯದೊಳ್ ೧೪೧

ಸುರಗಣಾಧಿಪನೋ ಫಣಿನಾಥನೋ
ನಿರುತಮಾ ಸ್ಮರನೋ ಸೊಗಯಿಪ್ಪರೀ
ದೊರೆಯರಿಲ್ಲ ನರರ್ ಪೆಱರೆಂಬುದಾ
ದರದಿನಕ್ಕೆ ಗುಣೋದಯ ಕಾರಣಂ ೧೪೨

ಅಪರಿಮೇಯಮೆ ದೋಷಗುಣೌಘಮಿಂ
ತುಪಚಿತಕ್ರಮದಾರೆಯೆ ಕಾವ್ಯದೊಳ್
ವಿಪುಳ ವೃತ್ತಿಯೊಳೊಂದಿರೆ ಪೇೞ್ವಿನ
ಬ್ಯುಪ[ಮಿತೋ]ಕ್ತಿ ಗುಣಾವಗುಣಗಳಂ ೧೪೩

ಪೊಳೆವ ಮಿಂಚುಗಳಂತಿರೆ ಕೇತುಗಳ್
ಜಳದ ವೃಂದದವೋಲಿರೆ ಹಸ್ತಿಗಳ್
ಗಳಿತಧಾರೆಗಳಂತಿರೆ ಪತ್ತಿಗಳ್
ಬಳಸಿ ಕಾರ್ಗೆಣೆಯಾಯ್ತು ಮಹಾಹವಂ ೧೪೪

ನಿಯಮಿತಾಕ್ಷರದಿಂದುಪಮಾಪ್ರತಿ
ಜ್ಞೆಯನೆ ತಿರ್ದುವುದಟ್ಟಿಯಿನಿರ್ದುಮಾ
ಬಯಕೆ ತೀರದ ಕಾರಣದಿಂ ವಿಪ
ರ್ಯಯಮಿದಭ್ಯುಪಮೋಕ್ತ್ಯುಪದೂಷಣಂ ೧೪೫

ಉಪಮಿತಾಕ್ಷರಮೆಲ್ಲಿಯುಮೇಕರೂ
ಪ ಪರಿವೃತ್ತಿಯೊಳೊಂದಿದ ಮಾಟ್ಕೆಯಿಂ
ದುಪಚಿತ ಕ್ರಮಮಕ್ಕುಮಿದೆಂದುಮ
ಭ್ಯುಪ[ಮಿತ]ಕ್ಕೆ ಗುಣೋದಯ ಕಾರಣಂ ೧೪೬

ಸಮುಚಿತ ನೃಪತುಂಗದೇವ ಮಾರ್ಗ
ಕ್ರಮ[ಮುಮನ]ಭಿಮುಖರ್ಕಳಪ್ಪ[ರಾ]
ಕ್ರಮಸಹಿತಮಗಮ್ಯರೂಪ ಕಾ[ವ್ಯಾ]
ಶ್ರಮಮಂ ನಿರಪಾಯ[ದೆ]ಯ್ದಲಾರ್ಪರ್ ೧೪೭

ಅತಿಶಯಧವಳೋರ್ವಿಪೋದಿತಾಳಂ
ಕೃತಿಮತಿ[ಯೆ] ನಿರಂತರ ಪ್ರತೀತಂ
ಶ್ರುತಿಯುವತಿಕೃತೋಪಚಾರ ಸಾರ
ಸ್ವತಗುಣದಿಂದೆ ಕೃತಕೃತ್ಯಮಕ್ಕುಂ ೧೪೮

ನುಡಿಗಳೊಡಂಬಡಲ್ ಬಗೆದವೋಲ್ ಬಗೆಯಂ ಮಿಗಲೀಯದೊಂದೆ ನಾ
ಲ್ನುಡಿಯ ಬೆಡಂಗೆ ಕನ್ನಡದ ಮಾತಿನೊಳಾ ವಿಕಟಾಕ್ಷರಂಗಳೊಳ್
ತೊಡರದೆ ಸಕ್ಕದಂಗಳ ಪದಂ ಪವಣಾಗಿರೆ ಮೆಲ್ಪುವೆತ್ತು ದಾಂ
ಗುಡಿವಿಡುವಂತೆ ನೀಳ್ದ ನಿಲೆ ಪೇಳ್ವುದು ನೀತಿನಿರಂತರ ಕ್ರಮಂ ೧೪೯

ಸಕಳಾಳಾಪ ಕಳಾಕಳಾಪಕಥಿತವ್ಯಾವೃತ್ತಿಯೊಳ್ ಕೂಡಿ ಚಿ
ತ್ರಕರಂಬೋಲ್ ಪರಭಾಗಭಾವವಿಲಸದ್ವರ್ಣಕ್ರಮಾವೃತ್ತಿಯಂ
ಪ್ರಕಟಂ ಮಾಡಿರೆ ಪೇಟ್ದ ಚಿತ್ರಕೃತಿಯಂ ವ್ಯಾವರ್ಣಿಸುತ್ತುಂ ಕವಿ
ಪ್ರಕರಂ ಶ್ರೀವಿಜಯಪ್ರಭೂತಮನಿದಂ ಕೈಕೊಳ್ವುದೀ ಮಾಟ್ಕೆಯಿಂ ೧೫೦

(ಗದ್ಯ)

ಇದು ಪರಮ ಶ್ರೀ ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗದೊಳ್
ದೋಷಾದೋಷಾನುವರ್ಣನ ನಿರ್ಣಯಂ
ಪ್ರಥಮ ಪರಿಚ್ಛೇದಂ

ದ್ವಿತೀಯ ಪರಿಚ್ಛೇದಂ

ಪರಮ ಶ್ರೀಕೃತಿವಧುವಾ
ಶರೀರಶೋಭಾಕರಂಗಳಪ್ಪ ಗುಣಂಗಳ್
ನಿರತಿಶಯಾಲಂಕಾರ
ಪ್ರರೂಪಿತಂಗಳ್ ಪುರಾಣ ಕವಿ ವಿದಿತಂಗಳ್ ೧

ಚಾರು ಶ್ರೀ ನೃಪತುಂಗ ವಿ
ಚಾರ ಕ್ರಮ ಮಾರ್ಗಗಣನೆಯೊಳ್ ಪರಮಾಲಂ
ಕಾರವಿಭಾಗಂ ವಿವಿಧಾ
ಕಾರಂ ಶಬ್ದಾರ್ಥಭೇದದಿಂದೆರಡಕ್ಕುಂ ೨

ಅನ್ನೆಗಮುದಱೊಳಗೆ ಸಮು
ತ್ಪನ್ನ ಪ್ರಾಧಾನ್ಯಮನ್ಯಮರ್ಥಾಧಾರಂ
ಮುನ್ನಂ ಶಬ್ದಾಳಂಕಾ
ರನ್ನಿಶ್ಚಿತಮಕ್ಕೆ ಪೇೞ್ವ ಮಾೞ್ಕೆಯೊಳಿನ್ನಾ ೩

ಇಲ್ಲಿಗಿದು ತಕ್ಕುದಿಲ್ಲಿಗೆ
ಪೊಲ್ಲದಿದೆಂದಱಿದು ಸಮಱಿ ಬಲ್ಲಂತೆಲ್ಲಂ
ನೆಲ್ಲುಂ ಮೊಸರುಂ ಗುಡಿದಂ
ತಲ್ಲದೆ ತಲ್ಲಣಿಸದಲಸದಿಡು ಮೃದುಪದಮಂ ೪

ಗಱಿಯಿಸಿದರ್ಥಂ ಸಲೆ ಪಾಂ
ಗಱಿಯದೆಯುಂ ಶಬ್ದಮೊಂದದಿರ್ದೊಡೆ ಮುತ್ತುಂ
ಮೆಟಿಸುಂ ಕೋದಂತಿರ್ಕುಂ
ಕಟಿಲ್ಚಿ ಕಳೆಗೊಂದಿ ಮುಂದೆ ಬಾರದ ಪದಮಂ ೫

ನಿಲಿಸಿ ಲಘುಪದಮನದನ
ಗ್ಗಲಿಸಿರೆ ಮತ್ತೊತ್ತಿ ಬರ್ಪ ಪದಮಂ ತುದಿಯೊಳ್
ನಿಲೆ ಪೇಟ್ದಾಗಳ್ ಕೂಸಿನ
ತಲೆಯೊಳ್ ಬಿಣ್ಪೊಱೆಯನಿಟ್ಟವೋಲಸುಖಕರಂ ೬

ಬರಿಸಿ ಕ್ಷಿತಿಪತಿಯಂ ಸ
ಯ್ತಿರಿಸಿ ಪ್ರಿಯ ಕುಶಲವಾರ್ತೆಯಂ ಬೆಸಗೊಂಡು
ಸ್ಥಿರಮಿರ್ದು ಪ್ರಭು ನುಡಿಯೆ
ಪ್ರರೂಢಮುದನಾದನಾತನೆಂಬುದು ದೂಷ್ಯಂ ೭

ಕ್ಷಿತಿಪತಿಯಂ ಬರಿಸಿ ಜಗ
ನ್ನುತನಂ ಸಂತೈಸಿ ಕುಶಲವಾರ್ತಾಂತರಮಂ
ಮಿತವಚನಂ ಬೆಸಗೊಂಡತಿ
ವಿತೀರ್ಣಮುದನಾದನಾತನೆಂಬುದು ಮಾರ್ಗಂ ೮

ಒಂದಂ ಕ್ರಿಯಾವಿಶೇಷಣ
ಮಂ ದೊರೆಕೊಳೆ ಸಯ್ತು ಪೇೞದದಱೊಳೆ ಪೆಱತಂ
ಸಂದಿಸಿ ಪೇೞ್ದೊಡೆ ಕೃತಿಯೊಳ
ಗೊಂದಿರದೆರಡಕ್ಕೆ ಬಿಟ್ಟ ಕಱುವಂ ಪೋಲ್ಗುಂ ೯

ಪರಿವಾರ ವಾರವನಿತಾ
ಪರಿವೃತನರಮನೆಯೊಳರಸನಂಬರತಳದೊಳ್
ವರ ತಾರಾಪರಿಗತ ಶಶ
ಧರನಂತೊಪ್ಪಿರೆ ವಿನೋದದಿಂದುರುಮುದದಿಂ ೧೦

ಪದನಱಿದೊಂದಂ ಕ್ರಿಯೆಯೊಳ್
ಪುದಿದುೞಿದುದನೊಂದಿ ಬರೆ ವಿಶೇಷ್ಯದೊಳೊಂದಂ
ಸದಭಿಮತವಾಗಿ ನಿಲೆ ಪೇ
ೞ್ವುದು ಮಾರ್ಗಂ ನಿತ್ಯಮಲ್ಲವಲ್ಲಭಮತದಿಂ ೧೧

ಪರಿವಾರ ವಾರವನಿತಾ
ಪರಿವೃತನರಮನೆಯೊಳರಸನಂಬರತಳದೊಳ್
ವರ ತಾರಾಪರಿಗತ ಶಶ
ಧರನಂತೊಪ್ಪಿರೆ ವಿನೋದದಿಂ ಜನಿತಮುದಂ ೧೨

ಇಂನಂತೆ ಮತ್ತೆ ಬೞಿ ಮಿಗೆ
ಮುಂ ನಿಲೆ ತಾಂ ಮೇಣ್ ಪೆಱಂ ಗಡಂ ಗಳವಾದಂ
ಕೆಂನಂ ನಿಲ್ಲೆಂದಿವನೆಂ
ದುಂ ನಿಱಿಸಲ್ಕಲ್ಲದೆಡೆಗಳೊಳ್ ಕಲ್ಲದಿರಿಂ ೧೩

ನೃಪಕನ್ಯಕಾ ಸ್ವಯಂವರ
ವಿಪುಳ ಮಹೋತ್ಸವ ವಿವಾಹದೊಳ್‌ಬಂದಿರ್ ಮು
ನ್ನಪವಾದವಾದುದೆನಗೇಂ
ಚಪಲಾಧ್ವಜನೋಕ್ತಿಯಿಂದಮಿಂ ಬಾರದಿರಿಂ ೧೪

ಘನಮೆರಡನೆಯದಱೊಳಮಾ
ಱನೆಯ ವಿಭಕ್ತಿಯೊಳಮೊಳವು ಗುರುಲಘುಭೇದಂ
ಅನಿಯತ ವೃತ್ತಿಯನಱಿದಿದ
ನನುಮಾರ್ಗಕ್ರಮದೆ ಸಯ್ತು ಮಾಡುಗೆ ನಿಪುಣಂ ೧೫

ಆದಿಸ್ವರಪದಮಂತದೊ
ಳಾದೆಡೆಯೊಳ್ ದೀರ್ಘಮಕ್ಕುಮೆರಡನೆಯ ವಿಭ
ಕ್ತ್ಯಾದಾನಪದಂ ದೀರ್ಘಂ
ಪಾದಂತದೊಳುೞಿದ ತಾಣದೊಳ್ ಸ್ವಚ್ಛಂದಂ ೧೬

ನೃಪನನಭಿಮಾನಧನನನ
ನುಪಮನನತಿಶಯ ವಿಶಾಲ ಕೀರ್ತಿಧ್ವಜನಾ
ನುಪಚಿತಗುಣನಾನುಚಿತನ
ನಪೇತದೋಷನನುದಾರಚರಿತೋದಯನಂ ೧೭

ನೃಪನಾನಭಿನುತಮುನನಾ
ನುಪಮೇತರನಾನಪಾರಕೀರ್ತಿಧ್ವಜನಂ
ವಿಪುಲಗುಣಜ್ಞನನುಚಿತನ
ನಪಗತದೋಷನನುದಾರಚರಿತೋದಯನಂ ೧೮

ಎಂದಿಂತು ಪೇೞ್ದ ಮಾೞ್ಕೆಯೊ
ಳೊಂದುವುದುಮನೊಂದಿ ಬಾರದುದುಮಂ ಪೀನಂ
ಸಂದೆಯಮಿಲ್ಲದೆ ಸಲೆ ತಱಿ
ಸಂದೋಸಱಿಸುವುದು ಕಾವ್ಯರಚನಾಕ್ರಮದೊಳ್ ೧೯

ಪಲವುಮನೊಡಗೂಡಿರೆ ಸ
ಯ್ತಲಸದೆ ಪೇೞ್ವೆಡೆಯೊಳಂ ಸ್ವಪಾದಾಂತದೊಳಂ
ಪಲವಾಱನೆಯ ವಿಭಕ್ತಿಯೊ
ಳಲಘೂಚ್ಚಾರಣೆ ಯಥೇಷ್ಟಮುೞಿದೆಡೆಗಳೊಳಂ ೨೦

ನೃಪನಾ ನೃಪನಂದನನಾ
ನೃಪವಧುವರ್ ನೆರೆದು ಸುಖದೊಳಿರೆ ಕೈಕೊಂಡ
ತ್ರಿಪರಿಮಿತರಾಗಮೆರ್ದೆಯಂ
ನೃಪಬಾಂಧವರಾ ಸುಮಿತ್ರರಾ ಪರಿಜನದಾ ೨೧

ನೃಪನ ನರಪಾಲತನಯನ
ನೃಪವಧುವರ್ ನೆರೆದು ಸುಖದಿನಿರೆ ಕೈಕೊಂಡ
ತ್ರಿಪರಿಮಿತರಾಗಮೆರ್ದೆಯಂ
ನೃಪತಿ ಸನಾಭಿಗಳ ಬಂಧುಜನದಾ ಕೆಳೆಯಾ ೨೨

ಸಂಬೋಧನೆ ದೀರ್ಘೋಕ್ತಿಯೊ
ಳಿಂಬಾಗಿರೆ ಬರ್ಕುಮದನೆ ಪಲವೆಡೆಗಳೊಳಿಂ
ದುಂ ಬಲ್ಲವರಿಡದಿರ್ಕಾ
ದಂ ಬಾಯುೞಿದೊಳ್ಪವೋಲ್ ಕರಂ ವಿರಸತರಂ ೨೩

ನೃಪತೀ ಪರೋಪಕಾರೀ
ವಿಪುಳಗುಣೀ ವಿಶದ ಶಶಧರಾಯತಕೀರ್ತೀ
ವ್ಯಪಗತಭಯಾ ದಯಾಲೂ
ರಿಪುವರ್ಗಮನಲೆದು ಗೆಲ್ವೆಯಾ ಗಾಹವದೊಳ್ ೨೪

ಅಱಪಿದವರುಂ ವಿಭೀತರು
ಮಱಲ್ದರುಂ ಸಲೆ ವಿಯೋಗದಿಂ ನಿಜ ಜನದಿಂ
ಕಱಯೆ ಪರಾರ್ಥಿಗಳುಂ ಬಾ
ಯಱದೊಳ್ಪಿಂತಿದನೆ ಯುಕ್ತಪುನರುಕ್ತಿಕಮಂ ೨೫

ಪುಲಿಪುಲಿ ಪರಿಪರಿ ಪೋಪೋ
ಗೆಲೆಯೆಲೆ ಪೆಱಪಿಂಗುಪಿಂಗು ನಿಲ್‌ನಿಲ್ ಬಾಬಾ
ಬಲಿ ಮನಮನಂಜದಂಜದೆ
ತೊಲತೊಲಗೀ ಮೆಳೆಗೆ ಪುಲಿಯದೆಂಬುದು ಮಾರ್ಗಂ ೨೬

ರೂಪಕದೊಳಂ ವಿಶೇಷಾ
ಳಾಪೋದ್ದೇಶದೊಳಮಲ್ಲದುಱದೆಡೆಗಳೊಳಂ
ಚಾಪಳಮತಿಗಳ್ ವಿರಸ ಸ
ಮಾಪಮನಿಡದಿರ್ಕೆ ಬಹು ವಿಶೇಷಣಗಣಮಂ ೨೭

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್
ಅಭಿಮಾನಿಗಳತ್ಯುಗ್ರರ್
ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್ ೨೮

ಅಂತಧಿಕ ವಿಶೇಷಣ ಗಣ
ಮಂ ತಡೆಯದೆ ಪೇೞ್ವುದಂಕಚಾರಣೆಗಳೊಳಂ
ಸಂತಂ ಪೇೞ್ಗುೞಿದಾವೆಡೆ
ಯಂತರದೊಳವಾಗದೆಂದನತಿಶಯಧವಳಂ ೨೯

ನುತ ಶಬ್ದಾಲಂಕಾರದೊ
ಳತಿಶಯಮಿಾ ಕನ್ನಡಕ್ಕೆ ಸತತಂ ಪ್ರಾಸಂ
ಕೃತಕೃತ್ಯಮಲ್ಲವಲ್ಲಭ
ಮತದಿಂದದ[ಱಾ] ಪ್ರಪಂಚಮಿಾ ತೆಱನಕ್ಕುಂ ೩೦

ವಿನುತ ಪ್ರಾಸಂ ಶಾಂತೋ
ಪನತಂ ವರ್ಗೋದಿತಂ ಸಮಿಾಪಗತಂ ಮ
ತ್ತನುಗತಮಂತಗತಂ ಸಂ
ಜನಿತ ವಿಭೇದೋಕ್ತಿಯಿಂದಮಿಂತಾಱು ತೆಱಂ ೩೧

ಪಾದದೊಳೆರಡನೆಯಕ್ಕರ
ಮಾದರದಿಂದಾದುದಾವುದದನಱಿದನಿತಂ
ಪಾದದೊಳಿಡುವುದದಕ್ಕುಂ
ಭೇದೋಕ್ತಿಕ್ರಮ ವಿಚಾರಿತೋರು ಪ್ರಾಸಂ ೩೨

ಮನೆಗಿಂದು ಬರ್ಕುಮೆಂದಾ
ನನೇಕತರವಸ್ತುವಾಹನಾದಿಯನೊಸೆದಿಂ
ಬನೆ ಪಸರಿಸಿ ಕುಡಲಿರ್ದೆಂ
ಜನೇಶನಿಂತೇಕೆ ಕಱಿದು ಪೋದನೊ ಪೇೞಿಂ ೩೩

ಎಂಬುದು ವಿನುತ ಪ್ರಾಸಂ
ಸಂಬಂಧಾಕ್ಷರದೊಳಿಲ್ಲ ಮಾತ್ರೆಗಳುಂ ತ
ಳ್ತಿಂಬಾಗಿ ಬೆರಸಿ ಶೋಭಾ
ಡಂಬರಮಂ ಪಡೆಗುಮುಚಿತ ಕಾವ್ಯೋಕ್ತಿಗಳೊಳ್ ೩೪

ಬೆರಸಿರೆ ಮುಂ ಸಂಯೋಗಾ
ಕ್ಷರಂಗಳೇಕಸ್ವರಂಗಳಿಂ ಸುಪ್ರಾಸಂ
ನೆರೆದು ವಿಪರ್ಯಾಸಕ್ರಮ
ಮಿರೆ ಸತತಂ ಶಾಂತಪೂರ್ವಮಕ್ಕುಂ ಪ್ರಾಸಂ ೩೫

ಪತ್ತಿ ಪ್ರಮಾದಫಲಕಮ
ನತ್ಯುಗ್ರಗ್ರಾಹನಿವಹ ಸಂಕ್ಷೋಭಿತದೊಳ್
ಮತ್ತೀ ರತ್ನಾಕರದೊಳ್
ಪುತ್ರಿಕೆಯೆನೆ ಬಟ್ಟಿಳಿಂತು ಬಾಳ್ವುದೆ ಚೋದ್ಯಂ ೩೬

ಶಾಂತಪ್ರಾಸದ ಭೇದಮ
ದಿಂತಕ್ಕುಂ ವರ್ಗದಕ್ಕರಂಗಳ್ ನಾಲ್ಕುಂ
ಸಂತಮಿರೆ ಪೇಟ್ದು ತಾಣದೊ
ಳಂತಕ್ಕುಂ ಪ್ರಾಕ್ತನೋಕ್ತ ವರ್ಗ ಪ್ರಾಸಂ ೩೭

ಸಕಲಜನವಿನುತನಂ ಶತ
ಮುಖ ಸದೃಶ ವಿಶಾಲ ವಿವಿಧ ವಿಭವೋದಯನಂ
ಪ್ರಗತ ಗುಣಗಣನನರಿಬಲ
ವಿಘಟನನಂ ಕಂಡನಣುವನಾ ರಾಘವನಂ ೩೮

ಇದು ದಲ್ ವರ್ಗ ಪ್ರಾಸ
ಕ್ಕುದಾಹೃತಂ ಕುಱಿತು ಶಷಸ ವರ್ಣತ್ರಯಮುಂ
ವಿದಿತ ಪ್ರಾಸವಿವಿಕ್ತಾ
ಸ್ಪದದೊಳ್ ನಿಲೆ ಪೇೞ್ದೊಡದು ಸವಿಾಪ ಪ್ರಾಸಂ ೩೯

ಶಶಧರಬಿಂಬಾನನೆಯಂ
ಝಷಕೇತನ ಕೇತನಾಭತನುತನುವಂ ತಾಂ
ಬಿಸವಿಶದ ವರ್ಣೆಯಂ ಕಂ
ಡೊಸೆದಂ ಬನದೊಳಗೆ ಜನಕತನಯುಳನಣುವಂ ೪೦

ಎಂದಿಂತು ಸವಿಾಪ ಪ್ರಾ
ಸಂ ದರ್ಶಿತ ಭೇದವಾಯ್ತು ನುಪ್ರಾಸಮುಮಂ
ಸಂಧಿಸಿದೆಣೆಯಕ್ಕರಮೊಂ
ದೊಂದಱೊಳಳವಡಿಸಿ ಬಂದೊಡನುಗತಮಕ್ಕುಂ ೪೧

ಜನವಿನುತನನಘನನುಪಮ
ನನುನಯಪರನರಸನಿನಿಸು ನೆನೆನೆನೆದು ಮನೋ
ಜನಿತಮುದನನಿಲತನಯನ
ನನನೃತ ವಚನ ಪ್ರಪಂಚನಿಂತಿರೆ ನುಡಿದಂ ೪೨

ಇಂತಿದನುಪ್ರಾಸಂ ಪಾ
ದಾಂತದೊಳೊಂದಾವುದಾನುಮಿಟ್ಟಕ್ಕರಮಂ
ಮುಂತಣ ಪಾದಾಂತಂಗಳೊ
ಳುಂ ತಡೆಯದೆ ಪೇೞ್ದೊಡಂತದಂತ ಪ್ರಾಸಂ ೪೩

ಅತಿವಿಶದ ಯಶೋವೃತ್ತಂ
ನತಸಕಳಾರಾತಿಜನವಿತಾನಂ ಮತ್ತಂ
ವಿತತ ಶ್ರೀಸಂಪತ್ತಂ
ಶತಮುಖ ಸದೃಶಾನುಭಾವನೊಲವಿಂ ಪೆತ್ತಂ ೪೪

ಪ್ರಾಸಾನುಪ್ರಾಸಾಂತ
ಪ್ರಾಸಂಗಳ್ ಮೂಱುಮತಿಶಯಂಗಳ್ ಪ್ರಾಸಾ
ಭಾಸಂಗಳುೞಿದ ಮೂಱುಂ
ಭಾಸುರ ನೃಪತುಂಗದೇವ ವಿದಿತ ಕ್ರಮದಿಂ ೪೫

(ಗೀತಿಕೆ)

ಅಱಿದು ಪೀನಂ ಮಾರ್ಗಗತಿಯಂ
ತಱಿಸಲಾಗದಾರ್ಗಂ ಬಹು ವಿಕಲ್ಪದೊಳ್
ಕುಱಿತು ಪೂರ್ವಶಾಸ್ತ್ರ ಪದವಿಧಿಯಂ
ತೆಱೆದಿರೆ ಪೇೞ್ವೆನಿನಿಸಂ ಕನ್ನಡದೊಳ್ ೪೬

(ಕಂದ)

ಕರ ಚರಣ ಶರೀರ ಶಿರೋ
ದರ ವದನಾದ್ಯವಯವಂಗಳಿವು ತಂತಮ್ಮೊಳ್
ದೊರೆಕೊಂಡೆಡೆಗಳೊಳೊಳವಾ
ಗಿರೆಯುಂ ನರರೊರ್ವರೊರ್ವರಂ ಪೋಲದವೋಲ್ ೪೭

ವರ ಶಬ್ದಾಲಂಕಾರದ
ವಿರಚನೆಗಳ್ ನೋೞ್ಪೊಡೊಂದೆ ತೋರ್ಕೆಗಳಿಂತುಂ
ಪೊರೆದಿರಲೊಂದೊಂದಱೊಳಾ
ಪರಮ ಕವೀಶ ಪ್ರಯೋಗಗತಮಾರ್ಗಂಗಳ್ ೪೮

ಕವಿಗಳುಮನಾದಿಲೋಕೋ
ದ್ಭವರಪ್ಪುದಱಿಂದನಂತ ಗಣನಾನುಗತಂ
ಸವಿಶೇಷೋಕ್ತಿಗಳುಮನಂ
ತ ವಿಧಂಗಳನಂತ ಭೇದವದಱಿಂ ಮಾರ್ಗಂ ೪೯

ಜನಿತ ವಿಭಾಗಂಗಳ್ವಾ
ಙ್ಮನಸಾತೀತಂಗಳಿಂತು ಮಾರ್ಗೋಕ್ತಿಗಳೊಳ್
ನೆನೆದಱಿಪಲಾರ್ಪರಾರದ
ನನಿಶ್ಚಿತ ಕ್ರಮ ವಿಶೇಷ ಗುಣಯುಕ್ತಕಮಂ ೫೦

ಅಂತುಂ ಭೇದಮನಿನಿಸಾ
ರ್ಪಂತುತ್ತರ ದಕ್ಷಿಣೋರು ಮಾರ್ಗದ್ವಯದಾ
ಚಿಂತಿತ ಪುರಾಣ ಕವಿ ವಿದಿ
ತಾಂತರಮಂ ಪೇೞ್ವೆನಱಿವಮಾೞ್ಕೆಯೊಳಿನ್ನಾ ೫೧

ನಿಗದಿತ ಕಾವ್ಯೋಕ್ತಿಗಳೊಳ್
ನೆಗೞ್ದುವು ಮಾರ್ಗಂಗಳಿಂತುಮೆರಡುಕ್ತಿಗಳುಂ
ಬಗೆವಾಗಳೆರಡು ಮಾೞ್ಕೆಯೊ
ಳೊಗೆದುವು ವಕ್ರ ಸ್ವಭಾವ ನಿಯತಿಕ್ರಮದಿಂ ೫೨

ಸತತಂ ದಕ್ಷಿಣ ಮಾರ್ಗೋ
ದಿತೋಕ್ತಿಭೇದಕ ಗುಣಂ ಸ್ವಭಾವಾಖ್ಯಾನಂ
ವಿ[ತ]ತೋತ್ತರ ಮಾರ್ಗಗತಂ
ಪ್ರತೀತ ವಕ್ರೋಕ್ತಿಕೃತಮನಲ್ಪವಿಕಲ್ಪಂ ೫೩

ಸಮ ಮಧುರ ನಿಬಿಡ ಕಾಂತ ಸು
ಕುಮಾರ ಸುಸಮಾಹಿತ ಪ್ರಸನ್ನೋದಾರ
ಪ್ರಮಿತ ಗ್ರಾಮ್ಯೋಜಸ್ವಿ
ಕ್ರಮದಿಂ ದಶಭೇದಮಲ್ಲಿ ದಕ್ಷಿಣ ಮಾರ್ಗಂ ೫೪

ಅವಱ ವಿಪರ್ಯಯವೃತ್ತಿ
ಪ್ರವಿಭಕ್ತ ವಿಕಲ್ಪಮಕ್ಕುಮುತ್ತರ ಮಾರ್ಗಂ
ಸವಿಶೇಷ ಗುಣಮನತಿಶಯ
ಧವಳೋಕ್ತಿಕ್ರಮದಿನಱಿಪುವೆಂ ತದ್ಭವದೊಳ್ ೫೫

ಸಮಬಂಧಮೆಂಬುದಕ್ಕುಂ
ಸಮನಿಸಿ ಕಿವಿಗೆಡಱ ಬಾರ[ದಂದಂಬಟ್ಟಂ]
ಸಮೆದ ಪದದಾ ವಿಭೇದ
ಕ್ರಮಮೆರಡಕ್ಕುಂ ಮೃದುಸ್ಫುಟೋಕ್ತಿಯಿನದಱಿಂ ೫೬

ಮೃದುತರ ವರ್ಣಾನುಗಮಾ
ಸ್ಪದ ವಿರಚನೆಯೊಳಗೆ ತೋರ್ಪುದದು ಮೃದುಬಂಧಂ
ವಿದಿತ ಸ್ಫುಟಾಕ್ಷರಾಧಿಕ
ಪದವಿರಚಿತಮಪ್ಪುದಕ್ಕುಮಾ ಸ್ಫುಟಬಂಧಂ ೫೭

ದೊರೆಕೊಳೆ ನೋಡಿದನಾಯತ
ಕರುಣಾಪಾಂಗದೊಳೆ ಲೋಲಲೋಚನಯುಗೆಯಂ
ಗುರು ಜಘನ ಪಯೋಧರಯುಗ
ಭರ ವಿಧುರೆಯನಾ ಧರಾಧಿಪತಿ ವಿಧುಮುಖಿಯಂ ೫೮

ಇಂತಿದು ಸಮಬಂಧ ದ್ವಿತ
ಯಾಂತರಮಾ ವಿಷಮಬಂಧಮಿನ್ನಿಂತಕ್ಕುಂ
ಚಿಂತೈಕಸುಖಾಕ್ರಾಂತರ್
ಸಂತುಷ್ಟೈಕಾಗ್ರಚಿತ್ತರಾದರ್ ತಮ್ಮೊಳ್ ೫೯

ಸವಿವೊಡೆ ಮಧುರರಸಂಬೋಲ್
ಕಿವಿಗಿನಿದಾಗಿರ್ಪ ವಚನವಿರಚನೆ ಮಧುರಂ
ಸವಿಳಾಸಾಳಾಪದಿನವ
ಱ ವಿಶೇಷ ವಿಶೇಷ್ಯಮಿಂತು ಮಾರ್ಗದ್ವಯದೊಳ್ ೬೦

ದೆಸೆಗಳ್ ವಿಶಾಲಮಾದುವು
ಕೆಸಱಿಂ ಪಿಂಗಿತ್ತು ಧರಣಿ ತಿಳಿದುವು ಕೊಳಗಳ್
ಶ್ವಸನಪಥಮಮಳಮಾಯ್ತಿಂ
ದೊಸೆಗೆಗಳಂ ಬೀಱುವಂತೆ ಶರದಾಗಮದೊಳ್ ೬೧

ಇದು ದಕ್ಷಿಣಮಾರ್ಗವಿಭೇ
ದದ ಮಧುರರಸಪ್ರಯೋಗಮಾಚಾರ್ಯಮನೋ
ಮುದಿತವಿತಾನಂ ವಿದಿತಾ
ಸ್ಪದಮುತ್ತರಮಾರ್ಗವರ್ಗಮಧುರಾಳಾಪಂ ೬೨

ಧವಳ ಜಳಧರ ಕುಳಾಕುಳ
ಮವಿಕಳಮಂಬರತಳಂ ವಿನೀಳಚ್ಛಾಯಂ
ಕುವಳಯಕೀರ್ತಿಗೆ ಶಾರದ
ಮವಧಾರಿತಮಾಯ್ತುದೆಂಬುದುತ್ತರಮಾರ್ಗಂ ೬೩

ಮಿಗೆ ನಿಬಿಡಬಂಧಮೆಂಬುದು
ತಗುಳ್ಪುವು ವರ್ಣಂಗಳಗಲದಿರೆ ಮತ್ತಕ್ಕುಂ
ನೆಗಟ್ದ ಲ್ಪಪ್ರಾಣಾಕ್ಷರ
ನಿಗದಿತಮೇತದ್ವಿಪರ್ಯಯೋಕ್ತಂ ಶಿಥಿಲಂ ೬೪

ಅರವಿಂದೋತ್ಪಲಪುಷ್ಪೋ
ತ್ಕರಂಗಳೊಳ್ ಪಾಯ್ದುಗ್ಗಮುದ್ಭ್ರಮದ್ಭ್ರಮರಂಗಳ್
ವಿರತಮುದವಾದುವುರುಮದ
ವಿರಾಮವನಕರಿಕಪೋಲಫಲಕದೊಳಾಗಳ್ ೬೫

ಇದು ನಿಬಿಡಶಿಥಿಲಬಂಧಾ
ಸ್ಪದ ಮಾರ್ಗದ್ವಿತಯಗದಿತ ಲಕ್ಷ್ಯವಿಭಾಗಂ
ಸದಭಿಕಮನೀಯಗುಣಮ
ಪ್ಪುದು ನಿಯತಂ ಕಾಂತಮೆಂಬುದಭಿಗೀತಾರ್ಥಂ ೬೬

ದಿನಕರ ಕರನಿಕರಂಗಳ್
ಘನವಿವರ ಪ್ರಸರಮಾಗಿಯುಂ ತಮ್ಮಂ ಕಂ
ಡನಿತಱೊಳೆ ತೆರಳ್ದಿನ್ನಾ
ಮನೋಗತಧ್ವಾಂತಬಂಧಮುಳಱತ್ತಿಲ್ಲಂ ೬೭

ಇಂತಿದು ದಕ್ಷಿಣ ಮಾರ್ಗದ
ಕಾಂತಮಸಂಭಾವಿತಾರ್ಥಮುದ್ಭಾವೋಕ್ತಂ
ಸಂತತಮುತ್ತರ ಮಾರ್ಗಗ
ತಾಂತರಮದನಿಂತು ಕುಱಿತು ತಱಿಸಲ್ಗೆ ಬುಧರ್ ೬೮

ವಿಲಸಿತ ಭವದಭ್ಯಾಗಮ
ಜಲಧಾರೆಗಳೇನುಮುಱಿಯದಂತು ಮದಂತ
ರ್ಮಲಮಂ ಕರ್ಚಿದೊಡಾನೀ
ನೆಲಕೆಲ್ಲಂ ಪಾವನೀಯ ಚರಿತನೆನಾದೆಂ ೬೯

ಸುಕುಮಾರತರಾಕ್ಷರಪದ
ನಿಕರ ವಿಶಿಷ್ಟ ಪ್ರಯೋಗಗತಮಪ್ಪುದದಾ
ಸುಕುಮಾರಮೆಂಬುದಕ್ಕುಂ
ಪ್ರಕಟಿತಮದಱಾ ಪ್ರಯೋಗಮಿಾ ತೆಱನಕ್ಕುಂ ೭೦

ತೊಳಪೆಳವೆಱೆಯುಂ ಮೊರೆವಳಿ
ಕುಳಂಗಳುಂ ಮೆಲ್ಲನೆಸಪ ಮಳಯಾನಿಳನುಂ
ಮುಳಿಸಂ ಕಲ್ಚಿ ಕಳೆದುವು
ಕಳಿಕಾಂಕುರ ಚೂತತತಿಗಳುಂ ಕಾಮಿಗಳಾ ೭೧

ಇದಱ ವಿಪರ್ಯಯ ವಿವಿಧಾ
ಸ್ಪದಾಕ್ಷರ ವಿಕಲ್ಪಮಿಂತಿದುತ್ತರ ಮಾರ್ಗಂ
ತ್ರಿದಶಾಧೀಶ್ವರಭೂತ್ಯ
ತ್ಯುದಾರ ವಿವಿಧಾರ್ಥವಿಭವನೀ ಭೂಪೇಂದ್ರಂ ೭೨

ಒಂದಱ ಮಾತುಗಳಂ ಪೆಱ
ತೊಂದಱೊಳಱದಿಟ್ಟು ಕೂಡೆ ಪೇೞ್ದೊಡದಕ್ಕುಂ
ಸುಂದರತರಂ ಸಮಾಹಿತ
ಮೆಂದುಂ ಮತ್ತದಱ ಲಕ್ಷ್ಯಮಿಾ ತೆಱನಕ್ಕುಂ ೭೩

ವಿನಿಮೀಳಿತ ಕುಮುದವನಂ
ಜನಿತೋನ್ಮೀಲಾರವಿಂದವನಲಕ್ಷ್ಮೀಶಂ
ದಿನಕರನುದಯಂಗೆಯ್ದಂ
ವಿನಿಹತತಿಮಿರಂ ವಿಶಿಷ್ಟ ಸಂಧ್ಯಾಶ್ಲೇಷಂ ೭೪

ವಿನಿಮೀಳಾದಿಗಳಿವು ಲೋ
ಚನಾದಿ ಧರ್ಮಂಗಳಿವನೆ ಕುಮುದಾದಿಗಳೊಳ್
ನೆನೆದಿಂತು ಪೇೞ್ದೊಡಕ್ಕುಂ
ವಿನಿಶ್ಚಿತ ಕ್ರಮ ಸಮಾಹಿತಾಲಂಕಾರಂ ೭೫

ವಿನಿಹತ ಸಮಸ್ತರಿಪುಕುಳ
ನನಿಮಿಷಲೋಚನದೆ ನೋಡಿ ನೀಡುಂ ಪ್ರಿಯೆಯಂ
ವಿನಿಮೀಳಿತಲೋಚನೆಯಂ
ಜನಪತಿ ನಿಜಬಾಹುಯುಗದಿನಾಶ್ಲೇಷಿಸಿದಂ ೭೬

ಈ ಕುಱುಪುಗಳಿಂದಱುವುದ
ನೇಕ ಸಮಾಹಿತ ಪದ ಪ್ರಯೋಗಾಂತರಮಂ
ಲೋಕಪ್ರತೀತ ಸುಭಗ ವಿ
ವೇಕಾಳಾಪಂ ಪ್ರಸನ್ನಮದುಮಿಂತಕ್ಕುಂ ೭೭

ಶರದಮಲಾಂಬರದೊಳ್ ಹಿಮ
ಕರನೆಸೆದತ್ತೆಂಬುದಾ ಪ್ರಸನ್ನಮಿದಕ್ಕುಂ
ಕರಮೊಪ್ಪಿತ್ತುಷ್ಣೇತರ
ಕಿರಣಂ ವರ್ಷಾಂತಸಮಯ ಜಳಧರಪಥದೊಳ್ ೭೮

ಮಿಗೆ ವಸ್ತುಗತ ಸ್ಥಿತಿಯಂ
ಬಗೆದಗ್ಗಳವಾಗೆ ಪೇೞ್ದೊಡಕ್ಕುಮುದಾರಂ
ಬಗೆವೊಡೆ ಕಾವ್ಯದ ಪದವಿಯ
ನೆಗೞ್ತಿಗದು ಮೂಲಮುದಱ ಪಾಂಗಿಂತಕ್ಕುಂ ೭೯

ಪುರುಷೋತ್ತಮರಾರ್ ನಿನ್ನ
ನ್ನರುದಾ[ರರ]ರಾತಿಸಮಿತಿಯಂ ಕೊಂದಿರ್ದುಂ
ಸುರಸುಂದರಿ ಲೀಲಾಲಸ
ಪರಿರಂಭಾರಂಭ ಸುರತ ಸುಖದೊಳ್ ನಿಱೀಪರ್ ೮೦

ಇದು ದಾಕ್ಷಿಣಾತ್ಯ ಕವಿಮಾ
ರ್ಗದುದಾರಮುದೀಚ್ಯದುರು ವಿಶೇಷಣಯುತಮ
ಪ್ಪುದನೊಲ್ವರಿಂತು ಹೇಮಾಂ
ಗದ ಲೀಲಾಂಬುಜ ವಿಚಿತ್ರ ಚಿತ್ರಾಧಿಕಮಂ ೮೧

ಗೋಪಾಳ ಬಾಳ ಲಲನಾ
ಚಾಪಳ ವಾಚಾಳ ಕಿತವ ಬಾಹ್ಲೀಕಾದಿ
ವ್ಯಾಪಾರಂಗಳ್ ಗ್ರಾಮ್ಯಾ
ಳಾಪಂಗಳ್ ಮಾರ್ಗಯುಗಳ ಪರಿಹಾರ್ಯಂಗಳ್ ೮೨

ನೆನೆದಿರುಳುಂ ಪಗಲುಂ ನಿ
ನ್ನನೆ ಪೀನವೊಱಲ್ದು ಮಱುಗಿ ಕಾತರಿಸುತ್ತುಂ
ಮನದೊಳ್ ಸೈರಿಸಲಾಱೆಂ
ನಿನಗೆನಸುಂ ಕರುಣಮಿಲ್ಲ ಮರವಾನಿಸನಯ್ ೮೩

ಎಂದಿಂತೀ ಗ್ರಾಮ್ಯೋಕ್ತಿಯೊ
ಳೊಂದಾಗಿಸದದನೆ ಪೇೞ್ವುದಿಂತೀ ಸ್ಥಿತಿಯೊಳ್
ಕಂದರ್ಪಂ ಚಲದೆನ್ನೊಳ್
ನಿಂದಂ ಮುನಿಸಿಲ್ಲ ನಿನ್ನೊಳಾತಂಗಿನಿಸುಂ ೮೪

ಸಮಱಿ ಸಮಾಸ ಪದಂಗಳ
ನಮರ್ದಿರೆ ಸಯ್ತಾಗಿ ಬಗೆದು ಪೇೞ್ವೊಡದಕ್ಕುಂ
ಕ್ರಮದೋಜೋಲಕ್ಷಣಮು
ತ್ತಮಮಿದು ಗದ್ಯಕ್ಕಲಂಕ್ರಿಯಾನುಸಮೇತಂ ೮೫

ಮಿಗೆ ಪದ್ಯದೊಳಂ ಗುಣಮುಂ
ತಗುಳ್ಗುಂ ಸಮುಹಿತ ಪ್ರಯೋಗಾನುಗತಂ
ಸೊಗಯಿಸುವಂತಿರೆ ಬಗೆದಿದ
ನಗಾಧ ಮನರಿಡುಗೆ ಕೃತಿಯೊಳೋಜೋಗುಣಮುಂ ೮೬

ಕಾರಕಮುಂ ಕ್ರಿಯೆಯುಮನಱಿ
ದೋರಂತಿರೆ ಮುಂ ತಗುಳ್ಚಿ ಮುಕ್ತಕ ಪದದೊಳ್
ಸಾರಂ ಸಮಾಸಪದದು
ಚ್ಚಾರಣೆಯಂ ನೀಳ್ದು ನಿಲೆ ತಗುಳ್ಚುಗೆ ಕೃತಿಯೊಳ್ ೮೭

ಮೊದಲೊಳ್ ಸಮಾಸಪದಮುಮ
ನೊದವಿಸಿ ಪೇೞ್ದದಱ ತುದಿಯೊಳಸಮಾಸ ಪದಾ
ಸ್ಪದಮಾಗಿ ನಿಱಿಸೆ ಕರ್ವಿನ
ತುದಿಯಂತಿರೆ ವಿರಸಮಕ್ಕುಮದು ತೊದಳುಂಟೇ ೮೮

ಪರಮಾನುಭಾವ ಭಾಸುರ
ಸುರರಾಜೋಪಮಿತ ವಿವಿಧ ವಿಭವೋದಯನಂ
ನರಪತಿಯಂ ಕಪಿಪೃತನಾ
ಪರಿವೃತನಂ ಜಲಧಿತಟದೊಳಣುವಂ ಕಂಡಂ ೮೯

ಎಂದಿತು ಪೇಳ್ದ ಮಾಟ್ಕಿಯೊ
ಳೊಂದುವುದೋಜಸ್ವಿತಾ ಗುಣಂ ಕೈಕೊಳೆಯುಂ
ಸುಂದರವಾಗದು ಕವಿಪದ
ಮೆಂದುಂ ವ್ಯತ್ಯಯದಿನಿಡುವೊಡದು ಸುಕರತರಂ ೯೦

ನರಪತಿಯಂ ಕಪಿಪೃತನಾ
ಪರಿವೃತನಂ ಜಳಧಿತಟದೊಳಣುವಂ ಕಂಡಂ
ಪರಮಾನುಭಾವ ಭಾಸುರ
ಸುರರಾಜೋಪಮಿತ ವಿವಿಧ ವಿಭವೋದಯನಂ ೯೧

ಬೆರಸಿರೆ ಸಮಾಸದೊಳ್ ಬಂ
ಧುರವಾಗದು ಕಾವ್ಯಬಂಧಮೆಂದುಂ ಕೃತಿಯೊಳ್
ದೊರೆಕೊಳ್ವ ಪದವಿಶೇಷ್ಯಾಂ
ತರಮುದಱಿಂ ವ್ಯಸ್ತಮಾಗಿ ಪೇಳ್ಗಿದನೆಂದುಂ ೯೨

ಪರಿದೆಯ್ದಿ ತಾಗಿದಂ ಭಾ
ಸುರತರ ರಘುಕುಲಲಲಾಮ ಲಕ್ಷ್ಮೀಧರನೊಳ್
ಪರಿಕೋಪವಿಧೃತ ವಿಸ್ಫುರ
ದುರುರಕ್ತ ಕಠೋರ ನಯನಯುತ ದಶವದನಂ ೯೩

ಇಂತು ವಿಶೇಷ್ಯಂ ಕ್ರಿಯೆಯುಂ
ಸಂತಂ ನೋೞ್ಪುದಱಿನಕ್ಕುಮದು ಸಾಪೇಕ್ಷಂ
ಚಿಂತಿಸೆ ಸಮಾಸಮುಂ ಪೇ
ೞ್ವಂತಪ್ಪ ಪದಂ ಸಮರ್ಥಮಲ್ತಪ್ಪುದಱಿಂ ೯೪

ಸಮನಿಸೆ ಸಾಪೇಕ್ಷಮುಮಾ
ಸಮಾಸಮುಂ ಪೆಱುಗುಮೆಲ್ಲಿಯಾನುಂ ಗಮಕಂ
ಕ್ರಮಮುದಱೊಳೆಲ್ಲಮೆನಲಿನಿ
ತು ಮಾರ್ಗದೊಳ್ ಸಮಱುಗಿಂತು ಕವಿವೃಷಭರ್ಕಳ್ ೯೫

ಪರಿದೆಯ್ದಿ ತಾಗಿದಂ ಭಾ
ಸುರತರ ರಘುಕುಲಲಲಾಮನೊಳ್ ಲಕ್ಷ್ಮಣನೊಳ್
ಪರಿಕೋಪವಶಭ್ರಮಣೋ
ದ್ಧರ ರಕ್ತಕಠೋರಲೋಚನಂ ದಶವದನಂ ೯೬

ಇಂತಿರೆ ಮಾರ್ಗದ್ವಿತಯಗ
ತಾಂತರಮಂ ಪೇೞ್ದೆನೆಲ್ಲಿಯುಂ ಕ್ಷೀರಗುಡಾ
ದ್ಯಂತರರಸಾಂತರಂ ಜಾ
ತ್ಯಂತರಮಪ್ಪಂತನಂತಮಂತರ್ಭೇದಂ ೯೭

(ಗೀತಿಕೆ)

ಬಗೆದು ಮಾರ್ಗದ್ವಿತಯಗತಿಗಳಂ
ಪ್ರಗುಣಗುಣಗಣೋದಯರ್ಕಳ್ ವಿತರ್ಕದಿಂ
ಸೊಗಯಿಸುವಂತು ವಚನರಚನೆಯಿಂ
ನೆಗೞ್ದಿರೆ ಬೆರಸಿ ಪೇೞ್ಗೆ ರಸವಿಶೇಷದೊಳ್ ೯೮

(ವೃತ್ತ)

ವೀರರಸಂ ಸ್ಫುಟೋಕ್ತಿಯಿನುದಾರತಮಂ ಕರುಣಾರಸಂ ಮೃದೂ
ಚ್ಚಾರಣೆಯಿಂದಮದ್ಭುತರಸಂ ನಿಬಿಡೋಕ್ತಿಗಳಿಂದಮಲ್ತೆ ಶೃಂ
ಗಾರರಸಂ ಸಮಂತು ಸುಕುಮಾರತರೋಕ್ತಿಗಳಿಂ ಪ್ರಸನ್ನಗಂ
ಭೀರತರೋಕ್ತಿಯಿಂ ಪ್ರಕಟಮಕ್ಕೆ ರಸಂ ಸತತಂ ಪ್ರಶಾಂತ[ದ]ಂ ೯೯

ಉತ್ಸವದಿಂದೆ ಹಾಸ್ಯರಸಮಾ ಮಧುರೋಕ್ತಿಗಳಿಂದಮಲ್ತೆ ಬೀ
ಭತ್ಸರಸಾಂತರಂ ಶಿಥಿಲಬಂಧನದಿಂ ಸತತಂ ಭಯಾನಕೋ
ದ್ಯತ್ಸುರಸಂ ಕರಂ ವಿಷಮಬಂಧನದಿಂ ನೃಪತುಂಗದೇವ ಮಾ
ರ್ಗೋತ್ಸವಮೂರ್ಜಿತೋಕ್ತಿಗಳಿನಕ್ಕತಿರೌದ್ರರಸಂ ರಸಾವಹಂ ೧೦೦

ಮಾತುಗಳಾವುವಾನುಮುಪವರ್ಣಿತ ಮಾರ್ಗಯುತಪ್ರಯೋಗ ಸಂ
ಜಾತವಿಭಾಗದಿಂ ನೆಗಟ್ದ ಕನ್ನಡದೊಳ್ ಗುಣಮಂ ತಗುಳ್ಚುಗುಂ
ನೀತಿನಿರಂತರಾನುಗತ ವೃತ್ತಿವಿಕಲ್ಪಿತಮಂ ತದೀಯ ನಿ
ರ್ಣೀತಿಯನೀತೆಱತ್ತು ತಱಿಸಲ್ಗೆ ಬುಧೋತ್ತಮರುಕ್ತಿಪೂರ್ವಕಂ ೧೦೧

ನೋಡುವೆನಾ ಮಹೀಪತಿಯನರ್ಥಿಗಣಾರ್ಥಿತ ಕಲ್ಪವೃಕ್ಷನಂ
ಬೇಡುವೆನರ್ಥಸಂಚಯಮನೆಂಬುದಿದುತ್ತರಮಾರ್ಗವಾಚಕಂ
ನೀಡುಮುದಾತ್ತಚಾರುಗುಣನಂ ಮನದೊಳ್ ನೆಱೆ ನೋಟ್ಪೆನಟ್ತಿಯೊಳ್
ಕೂಡಿರವೇಟ್ಪೆನೆಂಬುದಿದು ದಕ್ಷಿಣಮಾರ್ಗವಿಚಕ್ಷಣೋದಿತಂ ೧೦೨

ಸೂಡುವೆನೆಂಬುದಲ್ಲದಣಮಾಗದು ಸೂಟ್ಪೆನಮೋಘಮೆಂಬುದುಂ
ಕೂಡುವೆನೆಂಬುದಲ್ಲದಿನಿಸಾವುದುಮಾಗದು ಕೂಟ್ಪೆನೆಂಬುದುಂ
ಕಾಡುವೆನೆಂಬುದಲ್ಲದೆ ಸುಮಾರ್ಗದೊಳಾಗದು ಕಾಟ್ಪೆನೆಂಬುದುಂ
ತೋಡುವೆನೆಂಬುದಲ್ಲದಿಡಲಾಗದು ನಿಕ್ಕುವ ತೋಟ್ಪೆನೆಂಬುದಂ ೧೦೩

ಬರಿಸುವೆನಿಂದು ನಂದನವನಾಂತರದಲ್ಲಿಗೆ ಕಾಂತನಂ ಸಮಂ
ತಿರಿಸುವೆನಂತನಂತ ಸುಖಸಂಗತ ಮಂಗಳಕಾರಣಂಗಳಂ
ತರಿಸುವೆನಾಂ ಮನೋನಯನವಲ್ಲಭನೊಳ್ ಮನದೊಂದಲಂಪಿನಿಂ
ನೆರೆವೆನಮೋಘಮೆಂಬುದಿದು ದಕ್ಷಿಣಮಾರ್ಗವಿಶೇಷಭಾಷಿತಂ ೧೦೪

ಬರಿಪೆನಮೋಘಮಿಂದುಪವನಾಂತರದಲ್ಲಿಗೆ ನಲ್ಲನಂ ತಗು
ಳ್ದಿರಿಪೆನನಾರತಂ ಸುರತರಾಗನಿರೂಪಣ ಕಾರಣಂಗಳಂ
ತರಿಪೆನನಾಕುಳಂ ಮನದಲಂಪಿನೊಳಾ ಮದನೋಪಮಾನನೊಳ್
ನೆರೆವೆನಭಂಗದೆಂಬ ವಚನಂಗಳಿವುತ್ತರಮಾರ್ಗವರ್ತಿಗಳ್ ೧೦೫

ಅನುಪಮನಂ ಬರಿಪ್ಪೆನನುರಾಗದೆ ನಲ್ಲನನಿಂದು ಮಿಕ್ಕ ನಂ
ದನವನದಲ್ಲಿಗಲ್ಲಿಗೆ ತರಿಪ್ಪೆನನಂಗ ಸುಖೋಚಿತಂಗಳಾ
ನನುನಯದಿಂದಿರಿಪ್ಪೆನನಿತುಂ ಸುರತಾಸವಸೇವನಾ ಸನಾ
ತನಸುಖದಿಂದಿರಿಪ್ಪೆನನುರಾಗದಿನೆಂಬುದಿದುತ್ತರೋತ್ತರಂ ೧೦೬

ಪರಸುವೆನೆನ್ನದಾಂ ಪರಪೆನೆಂಬುದಿದಾಗದು ಚಿತ್ತನಾಥನೊಳ್
ಬೆರಸುವೆನೆನ್ನದಾಂ ಬೆರಪೆನೆಂಬುದಿದಾಗದು ಮಾರ್ಗಯುಗ್ಮದೊಳ್
ನಿರತಿಶಯಾನುಭಾವಭವನಪ್ಪ ಮಹಾನೃಪತುಂಗ ದೇವನಾ
ದರದೊಳೆ ಪೇೞ್ದ ಮಾರ್ಗಗತಿಯಿಂ ತಱಿಸಲ್ಗಿದನಿಂತೆ ಕಬ್ಬಿಗರ್ ೧೦೭

ಮನದೊಳಗಾಗಳುಂ ನಿಱಿಸದಾ ಮುಳಿಸಂ ಗತರಾಗ ಮೋಹನೊ
ಯ್ಯನೆ ಮುನಿನಾಥನೆಂಬ ವಚನಾಂತರಮಿಂತಿದು ದಾಕ್ಷಿಣಾತ್ಯಕಂ
ಮನದೊಳಗಾಗಳುಂ ನಿಱಿಸದೊಯ್ಯನೆ ಮೋಹಮನಂತೆ ರಾಗಮುಂ
ಮುನಿಸುಮನೊಲ್ಲದಂ ಮುನಿಪನೆಂಬುದಿದಕ್ಕುಮುದೀಚ್ಯವಾಚಕಂ ೧೦೮

ತ್ರಿದಶಗಣೇಶಮೌಳಿಮಣಿಪೀಠನಿಷೇವಿಗಳೊಳ್ ಮುನೀಂದ್ರನಾ
ಪದಯುಗಳಂಗಳೊಳ್ ಮುದದೆ ಬಾಗುವೆನೆಂಬುದು ದಕ್ಷಿಣಾಯನಂ
ವಿದಿತಸುರಾಧಿರಾಜಮುಕುಟಾಗ್ರ ಸಮರ್ಪಿತದೊಳ್ ಮುನೀಂದ್ರನಾ
ಪದಯುಗದೊಳ್ ಮನೋಮುದದೆ ಬಾಗುವೆನೆಂಬುದಿದುತ್ತರಾಯಣಂ ೧೦೯

ವಿಳಸಿತ ಸಸ್ಯಸಂಪದಭಿರಾಮಗುಣೋದಯೆ ತಾಳ್ದಿದಳ್ ಧರಾ
ಲಳನೆ ವಿಶಾಲಲಕ್ಷ್ಮಿಯನನಾರತಮೆಂಬುದು ದಕ್ಷಿಣಾಪಥಂ
ಜಳನಿಧಿಮೇಖಲಾವಲಯಿತಾಂಗಿ ಕರಂ ಸೊಗಯಿಪ್ಪುದಾಯ್ತು ಭೂ
ಲಳನೆ ವಿಶಾಲಲಕ್ಷ್ಮಿಯನನಾಕುಳಮೆಂಬುದಿದುತ್ತರಾಪಥಂ ೧೧೦

(ಗೀತಿಕೆ)

ನಿಕ್ಕುವಮಿಂತು ಮಾರ್ಗಯುಗದೊಳ್
ತಕ್ಕುದನಱಿಯೆ ಪೇೞ್ದಿನಿಸೊಂದುದ್ದೇಶಮಂ
ಮಿಕ್ಕ ಗುಣೋದಯರ್ ಕಳೆಯದೆಂತು ಸ
ಯ್ತುಕ್ಕುಮಂತಾಗೆ ಬಗೆದು ಪೇೞ್ಗೆ ಕಬ್ಬದೊಳ್ ೧೧೧

(ಶ್ಲೋಕ)

[ಗೋಮೂತ್ರಿಕಂ] ಸಯಮಕಂ ಪ್ರೇಮದಿಂ ಗೋಪಿತಕ್ರಿಯಂ
ಶ್ರೀಮದರ್ಧಭ್ರಮಂ ಚಕ್ರನಾಮಂ ಮುರಜಬಂಧಕಂ ೧೧೨

ಇವು ದುಷ್ಕರ ಕಾವ್ಯಂಗಳ್ ಸವಿಶೇಷವರ್ತಿಗಳ್
ಸುವಿಚಾರಿತಮೀ ತೋರ್ಪೆ[ನಿ]ವಱ ಲಕ್ಷ್ಯಭೇದಮಂ ೧೧೩

ಪದಪಾದ ಸಮಸ್ತಾರ್ಥ[ಗತ]ಭೇದ ಚತುಷ್ಟಯಂ
ವಿದಿತಾಳಂಕ್ರಿಯಾಧಾರಂ ಮೊದಲ್ ಪೇ[ೞ್ವೆಡೆ] ದುಷ್ಕರಂ ೧೧೪

ಮುನ್ನಂ ತನ್ನಂ ತಾನೆ ತಾನೇಕೆನ್ನಂ ಕೆನ್ನಂ ನಿರಂತರಂ
ಭಿನ್ನಂ ಬಂದಿಪ್ಪನಂತಿನ್ನುಂ ತನ್ನಿಂ ತನಗಮೇವಳೊ ೧೧೫

ಪೀನಂ ಕಾಡು ಮದಕ್ಕೇಂ ಕೇಳನಮಾನಳಿನಂ ಮದಾ
ತಾನಿಂತಳಿಜನಂ ಕನಾ . . . ನದೆಸನೆದೇನನಾ ೧೧೬

ನಾದಭೇದನನಾದಾನಾ ನಾದಾನಾಮದನೋದನಾ
ನಾದನೋದಮನಾದಾನಾ ನಾದಾನಾನದಭೇದನಾ ೧೧೭

ನಾನಮಾನಮಸೇನಾಸೇ ಸೇನಾಸೇಮನಮಾನನಾ
ದೀನಮಾನ ಮನಾನಾದೀ ದೀನಾನಾಮನಮಾನದೀ ೧೧೮

ಗತಪ್ರತ್ಯಾಗತೋಪಾತ್ತ ಚತುಷ್ಟಯವಿಕಲ್ಪವಿಾ
ಪ್ರತೀತಿ ತೋರ್ಪೆನಾ ಗೂಢಚತುರ್ಥಂಗಳ ಲಕ್ಷ್ಯಮಂ ೧೧೯

ಘನಸ್ತನಿತಮುಂ ಕೇಕಿಸ್ವನಮುಂ ನೀರಧಾರೆಯುಂ
ಮನಂ ಬೆರ್ಚಿರ್ಕುಮಿಂತೆತ್ತಂ ಘನಮಿಂತು ಘನಸ್ತನಿ
(ಗೂಢಚತುರ್ಥಂ) ೧೨೦

ನಿನ್ನಿಂ ನಿಂನ್ನನೆನೆಂನಿನಾ ನಾನಾನನನಂ ನನನಂ
ನೀನೆಂನನ್ನಂನನಾನಾ ನಿಂನೆನೆನನನೂನನಂ ೧೨೧

ಮಾನಿನಿ ಮುನ್ನಮಾಂ ನೀನೆ ನೀನಾನಿನ್ನನುಮಾನಮೇಂ
ಮಾನಮಾನಾನೆ ಮುಂ ನಂನ್ನೈಮಾನಮಾನನಮುಂ ನಿಂನಾ
(ಇವು ಏಕಾಕ್ಷರದ್ವ್ಯಕ್ಷರಂಗಳ್) ೧೨೨

ಕಿಡಿಪಂ ಬಾರಗೇಮೆಯ್ಯಂ ಕಿಡಿಪಂ ಕಿಡಿಪಂತೆ ಮುಂ
ಕಿಡಿಪಂ ಪೋಕುಮೋ ತಾಮುಂ ಕಿಡಿಸಲ್ಸುಡಿಸೋಲಮೋ ೧೨೩

ಮಾರುತೀ ಪರಮೋದಾರದಾರನೊಳ್ ಕೂಡು ನಲ್ಲನೊಳ್
ಸಾರ ಕಾದಂಬಿನೀನಾಥನಾರೂಢ ಗುಣಧಾಮನೊಳ್
(ಅತಾಲವ್ಯಂ) ೧೨೪

ನರನಾಯಕನಂ ನಿಂದಾನಿರದೀಗಳೆ ಕಾಂತನಂ
ನೆರೆದೇನದಱಿಂದಿಲ್ಲಾ ನೆರೆದಿರ್ದಾಗೆನಾಗೆನೆ
(ನಿರೋಷ್ಠ್ಯಂ) ೧೨೫

ದೀನಾದೀನಾನಾದಿನಾದೀನಾನಿಂನಾನೇನೆನಾನಿನಾ
ದೀನಾದಾನಿನಿದಾನಾದೀನಾನೆನಿಂನನನಿಂನನಾ
(ಸರ್ವತೋಭದ್ರ) ೧೨೬

ಪೆಱ[ನಾ]ವಂ ಧರಾಚಕ್ರಕ್ಕೆಱೆಯಂ ಕೆಳೆಯಪ್ಪವಂ
ನೆಱೆಯಾರೆಣೆಯೆಂಬನ್ನಂ ಕುಱುತಬ್ಧಿಗೆ ಬನ್ನಮಂ
(ನಿರುತ್ತರಂ) ೧೨೭

ಜಲದಾಗಮದಿಂ ಚಿತ್ತಸ್ಖಲಿತಂ ಕೇಕಿನರ್ತನಂ
ಜಲದಾಗಮದಿಂ ಚಿತ್ತಸ್ಖಲಿತಂ ಕೇಳನಲ್ಲನಂ
(ಗೋಮೂತ್ರಿಕೆ) ೧೨೮

ಯಮಕಂ [ಪ]ದಾಪಾದಾರ್ಧ ಸಮಶ್ಲೋಕ[ಸು]ಗೋಚರಂ
ಪ್ರಮಿತಾದ್ಯಂತದೂಷ್ಯೋಪಕ್ರಮಾನೇಕ ಪ್ರಕಲ್ಪಿತಂ ೧೨೯

ತಾರಾ ಜಾನಕಿಯಂ ಪೋಗಿ ತಾರಾ ತರಳನೇತ್ರೆಯಂ
ತಾರಾಧಿಪತಿತೇಜಸ್ವಿ ತಾರಾದಿವಿಜಯೋದಯಾ ೧೩೦

ಕಟೀಪಂ ತಂದು ನಿಂಕವಿಂ ಕಟೀಪಂ ಕಳಿವಂ ಚಲ
ಕಟೀಪಂ ಕಂಜನೇತ್ರ . . . ಕಟೀಪಂ ಬಟೀಕಾತನಂ ೧೩೧

ದಾರುದಾರುಣನಂ ದಾನವಾರಿವಾರಿತಲೋಕನಂ
ಬಾರ ಬಾ ರಣಮಂ ನೋಡಾ ಸಾರಸಾರಾಂಬುದಾಭಮಂ ೧೩೨

ಸಾರಸಾರಸನಾದಾಮಸಾರಸಾರಾ ನಿತಂಬೆಯಂ
ತಾರಾತಾರಾತರಂಗಾಭಾಕಾರತಾ ರಮಣೀಯೆಯಂ ೧೩೩

ಅಜೇಯಂ ಪೋಲ್ಕುವಾ ಮತ್ತಗಜಂ ವಾರಿಜನಾಭನಂ
ತ್ರಿಜಗ[ನ್ಮ]ದನಂ ಮತ್ತಂ ನಿಜನೀಳಘನಾಭನಂ ೧೩೪

ಲೋಕವೈದಿಕ ಸಾಮ್ಯೈಕ ಲೋಕನಾಕಾರಕಾರಕಾ
ನಾಕಿ ನೂತಪದವ್ಯಕ್ತಿ ಶ್ರೀಕಾಂತಾ ಮಮಕಾಮದಾ ೧೩೫

ವಾರಿ ವಾರಿಯೊಳಾದಾನಂ ವಾರಿವಾರಿ ವಿತರ್ಕಮಂ
ವಾರಿವಾರಿ ಜವೋದಾನಂ ವಾರಿವಾರಿಜನಾಭನೊಳ್ ೧೩೬

(ಗೀತಿಕೆ)

ವರವಾರನಾರಿಯೊಳ್ ನೆರೆದೆವಾನೆಲ್ಲಿ ನೆ[ರೆ]ದೆ
ಪರವಾರನಾರಿಯೊಳ್ ನೆರೆದೆನಾನೆಲ್ಲಿ ನೀಂ
ಪರದ[ರಂ]ತರಿಸುವರಿಂತರಿಯ ನೆಲ್ಲಂ
ಪುರಿದು ಮಾಱದೆ ಕಾಣದಂತಿರಿಸಂಗಡಿಯೊಳ್ ೧೩೭

(ಯಮಕಂ)

ತಿಳಿಗೊಳನಂ ಪೂಗೊಳನನದಂ ನೆಗೞ್ದ
ಮುಳಿದುಕೊಳ್ವ ಬಳಸೆ ನಾನದಂ ನೆ
ಗಳೆ ತಾನೆಡೆಮನಂಗಜನೆದಪ್ಪಲಾ
ಗಳೆ ನಂಬವನದೊಪ್ಪುವಂ ವನೇಚರಮುದಾ ೧೩೮

(ಶ್ಲೋಕ)

ನರದಾನಪರೊನೆಂನೆ ನರದಾ ಕೆನರಾಕಮಾ
ಅರಿದ್ವೈತಂದಾದರಿಕ್ಕುಂ ಪರಿದಾನ ಪರಾದಿಯೆ ?

(ಅರ್ಧಭ್ರಮಣಂ) ೧೩೯

ವರದಾನ ಪರಾದನ್ಯಂ ಪರದಾನಪರಾದಮುಂ
ನೆರದಾವದಿರಾಜನ್ಯಂ ಪರಿಜನಪರಾದಮುಂ

(ಮುರಜಬಂಧಂ) ೧೪೦

ಅರಸಿಯ ದಿವ್ಯಸೇನಾದರದಿರದೀಗಡೆ ನಿ
ನ್ನರಸಿಯನೆಯ್ದುವಿನಂ ಪರಿಜನಮುಂ ಕಳಿಪಿಂ

(ಕ್ರಿಯಾಗೋಪಕ) ೧೪೧

(ವೃತ್ತ)

ಸಂತಂ ಬಾಟ್ಸ್ವದು ಮೀಱಿದಾ ನರಪನೊಳ್ ಸೌಜನ್ಯಲಕ್ಷ್ಮೀಮದಾಂ
ಧಂ ತನ್ನಿಷ್ಟಯ ಮೆಚ್ಚಿನಿಂ ಪರಗುಣೌದಾರ್ಯಾಭಿಮಾನಂಗಳಿಂ
ಪಿಂತಂ ನೋಡದೆ ಪಾಱಿಗೆಟ್ಟೞಿಪಿನಿಂ ಬಾಟ್ವಂತೆ ಬಾಟ್ದಯ್ಯನಾ
ಸಂತಂ ತಾಂ ಪಸತಂದನಟ್ಟಿ ಪೆಱುಗುಂ ದಾನಂಗಳಂ ಭೂಪನಾ ||
(ಚಕ್ರಶ್ಲೋಕ) ೧೪೨

(ಗೀತಿಕೆ)

ಅನುಗತಂ ಪೂರ್ವಕವಿಗಳ್
ನೆನೆದಿನ್ನುಂ ಪೇೞ್ದಿಂ ದುಷ್ಕರೋಕ್ತಿಯ-
ನ್ನನುಗತಕ್ರಮದೆ ಬಗೆದು ಹೇಳಿಕೆಯೊಳ್
ಜನಿತವಿಭೇದಮುಮಂ ಪೇೞ್ವೆಂ ಕಿಱಿದಂ ೧೪೩

ಭಾವೆಯಂ ನುಸುಳುಮಸ್ಪಷ್ಟಾಕ್ಷರಮು
ಮಾವರ್ಣವ್ಯತ್ಯಯಮಂ ಬಿಂದುಚ್ಯುತಿಯಂ
ಭಾವಿಸಿದೊರ್ನುಡಿಯಂ ವರ್ಣಚ್ಯುತಮಂ
ಕೇವಳಮವಱ ಭೇದಮಂ ಸುಸಮಸ್ತಕಮಂ ೧೪೪

ಸವಿಹಿತಮಪ್ಪ ಕರ್ಣಪೂರೋತ್ಪಳಮಂ
ಧವಳ ವಿಲೋಚನೆಯ ಗುಣ ಸುಂದರಮಂ
ಕಿವಿವರಂ ನೀಳ್ದ ನಯನಯುಗದೊಳೊ
ಪ್ಪುವವಳಾನವಯುವದೇಕೆ ಕಳೆಯುವೇೞ್ದಿಂ ಪ್ರಿಯೆಯಂ
(ಭಾವೆ) ೧೪೫

ತಿರಿವುದದೊಂದು ಚಕ್ರದೊಳೆ ನಿಂದು ದಿವಾ
ಕರನೆ ಮತ್ತ್ರ[ರಿ]ದು ಕಳೆವೊಡಂತದನಾವೆಡೆಯಿಂ
ದರವೆಯಾಗಿ ನೆಲಸಿ ಕೆಲಕಾಲದಿಂ
ಪೊರೆದಿರದಱಿದಬಱಿಕ ತಾ ನೆಲದೊಳ್
(ನುಸುಳು) ೧೪೬

ನೆಟ್ಟನೆ ತಾಂ ಸವಿಯೊಳೊಂದಿರೆ ಭೋಜನವಾ
ನಟ್ಟು ಬಡಿಸು ನಾವುಱಿಯದೆನಸುಂ ಸವಿಯಂ
ಪುಟ್ಟಿದಾರುವುಱಿಯದದಱ ಪೆಸರೊ
ಳಟ್ಟುದಂ ಪೇೞಿ ಕೇಳ್ವೆನೆಂದಱಿಯೆಂ
(ಅಸ್ಪಷ್ಟಾಕ್ಷರಂ) ೧೪೭

ಅವನಾವುಕತ್ವಕ್ಷುಚಯಂ
ಕ್ರವನೊಚರಾವುಯದಷ್ಟಪಾಯದೆಗಳೊಳ್
ಸೆವಿಸೆವಮುಲಹೈವಸುಮುಕ್ತಿಮುಹಾ
ದೆವ ನಿನ್ನನ್ನನಪ್ಪೊನಸಹಾಯಗುಣಂ
(ವರ್ಣವ್ಯತ್ಯಯಂ) ೧೪೮

ಸೊಗಯಿಸುಗುವಿುಂದ್ರನೀಲಮಣಿ ಸನ್ನಿಭದೊಳ್
ಮಿಗೆ ಜಳನಿಧಿಯೊಳಗುದಿತದಿಂದಿರದವೊಲ್
ನೆಗೆದತಿಧವಳಮೂರ್ತಿಗೆ ಘನವಳಯ ಸದಗ್ಧ
ಗಗನದೊಳುಱಿದುಱಿದು ವಿಶಾಳಿತಾಶಾವಳಯಂ
(ಬಿಂದುಚ್ಯುತಕಂ) ೧೪೯

ಆವುದು ಬಾಗಿದುದುವಧಿಕಂ ಬಸನಂ
ಕೇವಳವಾಗೆ ನೆಗೆವುದುಚಿತಾವಯವಂ
ದೀವದಿಂ ನಿಂದು ಸಿತಗನಂ ನುಡಿವುದು
ಭಾವಿಸಿ ಬಗೆಗೊಳ್ವೊಡಾರಕೊರ್ನದಿಯಂ
(ಒರ್ನುಡಿ) ೧೫೦

ತಳಮಳ[ಗೊ]ತ್ತುಂ ಜನಿತನಿಜಭೀತಿ ಮನಂ
ಗೊಳೆ ಕಳವಳಿಸಿ ಚಲಿತ ನಿಲಲಣ್ಮದೆ [ವೊ]
ಕ್ಕಳ[ವೊ]ಳಗೆ ಸುಟಿುದರರಸಂ ಮನದೊಳ್
ಮುಳಿದಸಿಯನೆ ನೋ[ಡೆ] ಪರಿವಾರದವರ್
(ವರ್ಣಚ್ಯುತಕಂ) ೧೫೧

ವಿಗಳಿತರಾಗನಾವೊಂ ನಿನ್ನಾವುದಱಿ
ಸೊಗಯಿಸುಗುಂ ಕಟಕತ್ವಮಂ ಸಮರ್ಥಬಲಂ
ಬಗೆದೆನಗೊಯ್ಯನೆಸಗೆಯಿದುವೊದಾ
ಲಗಲಲಾಟಿಸುಗುಮದೆಪೇೞ್ದಿಂ ಬನದೊಳ್
(ಸಮಂತಿ) ೧೫೨

ಅತಿಶಯಧವಳೋ[ರ್ವಿ]ಪನೀತಿಮಾರ್ಗೋ
ಚಿತಗತಿಭಾವಿತಮಾ[ಗಾ]ರ್ಗಳಂಕ್ರಿಯಾರ್ಥಂ
ಚತುರಕವಿಜನಾನುಯಾತ ಸಾರ
ಸ್ಪತಗುಣದೊಳ್ ಬಗೆದಂತೆ ಕೂಡಲಾರ್ಕುಂ ೧೫೩

(ವೃತ್ತ)

ಬುಧಗುಣಗಣನಾತೀತಾಂತರಂ ಶಬ್ದತತ್ತ್ವಂ
ಬುಧಿವಿವಿಧವಿಧಾನಾಲಂಕ್ರಿಯಾವೀ[ಚಿಮಾಲಾ]
ವಿಧುರಗತಿ ವಿಲೋಢ್ಯಂ ತಳ್ತು ನಿಲ್ತಪ್ಪುದಾವಾ
ಗಧಿಪವಚನಮಾಲಾಪಾವನೀಯಂ ಗ[ಭೀರಂ] ೧೫೪

ಭಾವಿಸಿ ಶಬ್ದತತ್ತ್ವಸಮಯಸ್ಥಿತಿಯಂ ಕುಱಿತೊಂದಶೇಷಭಾ
ಷಾವಿಷಯೋಕ್ತಿಯಂ ಬಗೆದುನೋಡಿ ಪುರಾಣಕವಿಪ್ರಭುಪ್ರಯೋ
ಗಾವಿಳ ಸದ್ಗುಣೋದಯಮನಾಯ್ವವಱಿಂ ಸಮೆದೊಂದು ಕಾವ್ಯದಿಂ
ಶ್ರೀ ವಿಜಯಪ್ರಭೂತಮುದಮಂ ತನಗಾಗಿಸಿದೊಂ ಕವೀಶ್ವರಂ ೧೫೫

(ಗದ್ಯ)

ಇದು ಶ್ರೀ ನೃಪತುಂಗ ದೇವಾನುಮತಮಪ್ಪ ಕವಿರಾಜಮಾರ್ಗದೊಳ್
ಶಬ್ದಾಲಂಕಾರ ವರ್ಣನಾ ನಿರ್ಣಯಂ
ದ್ವಿತೀಯ ಪರಿಚ್ಛೇದಂ.

ತೃತೀಯ ಪರಿಚ್ಛೇದಂ

ಶ್ರೀ ವಿದಿತಾರ್ಥಾಲಂಕಾ
ರಾವಳಿಯಂ ವಿವಿಧಭೇಧ ವಿಭವಾಸ್ಪದಮಂ
ಭಾವಿಸಿ ಬೆಸಸಿದನಖಿಳ ಧ
ರಾವಲ್ಲಭನಿಂತಮೋಘವರ್ಷ ನೃಪೇಂದ್ರಂ ೧

ವರಜಾತಿ ರೂಪಕಾರ್ಥಾಂ
ತರವಿನ್ಯಾಸಾತಿರೇಕ ಯಾಥಾಸಂಖ್ಯಾ
ಸ್ಥಿರದೀಪಕೋಪಮಾ ಬಂ
ಧುರಾತಿಶಯ ಸದೃಶಯೋಗಿತಾಕ್ಷೇಪಂಗಳ್ ೨

ಶ್ಲೇಷೋತ್ಪ್ರೇಕ್ಷಾ ಸೂಕ್ಷ್ಮ ವಿ
ಶೇಷ ಸಮಾಹಿತ ಸಮಾಸ ಪರ್ಯಾಯೋಕ್ತಾ
ನ್ವೇಷ ವಿರೋಧಾಪ್ರಸ್ತುತ
ಶೇಷನಿದರ್ಶನ ಸಹೋಕ್ತಿ ಸಂಕೀರ್ಣಂಗಳ್ ೩

ನುತಪರಿವೃತ್ತಿ ವ್ಯಾಜ
ಸ್ತುತಿ ಹೇತು ವಿಭಾವನಾ ಲವೋದಾತ್ತಾಪ
ಹ್ನುತಿ ರಸವದೂರ್ಜಿತ ವ್ಯಾ
ವೃತಿ ಪ್ರಿಯತರಾಶಿಗಳ್ ಕ್ರಮಾದ್ಯುಕ್ತಂಗಳ್ ೪

ವಿದಿತಾರ್ಥಾಲಂಕಾರಾ
ಸ್ಪದ ಭೇದಂಗಳ್ ಪುರಾಣ ಶಾಸ್ತ್ರೋಕ್ತಂಗಳ್
ತದನುಮತಲಕ್ಷ್ಯಲಕ್ಷಣ
ನಿದರ್ಶನಂಗಳನನುಕ್ರಮೋಕ್ತಿಯೆ ಪೇೞ್ವೆಂ ೫

(೧–ಜಾತಿ)

ಭಾವಿಸಿ ಸಮಸ್ತವಸ್ತು ವಿ
ಭಾವಿತ ಜಾತಿಕ್ರಿಯಾಗುಣದ್ರವ್ಯಸ್ವಾ
ಭಾವಿಕಗುಣಮಂ ಪೇೞ್ವುದು
ಕೇವಲಮಾ ಜಾತಿಯೆಂಬ ಸದಳಂಕಾರಂ ೬

ಧವಳಾಪಾಂಗಂ ಕೇಕಾ
ರವಮುಖರಂ ಹರಿತಶಾಬಲಾಂಕ ಕಳಾಪಂ
ನವಿಲಾಟಂ ಸೊಗಯಿಸುಗುಂ
ಸುವಿನೀಲಾಯತಗಳಂ ಪಯೋದಾಗಮದೊಳ್
(ಜಾತಿಸ್ವಭಾವಾಖ್ಯಾನಂ) ೭

ಅರೆಮುಚ್ಚಿ ಕಣ್ಗಳಂ ವನ
ಕರಿ ಮೆಲ್ಲದೆ ಲಲಿತ ಸಲ್ಲಕೀಪಲ್ಲವಮಂ
ಸ್ಮರವಶದಿಂದಿರ್ದುದು ನಿಜ
ಕರೇಣುಪೇಚಕನಿರೂಪಿತಾಯತಹಸ್ತಂ
(ಕ್ರಿಯಾಸ್ವಭಾವಾಖ್ಯಾನಂ) ೮

ಆಮೀಳನಮುಂ ಕಣ್ಗಳೊ
ಳಾ ಮನದೊಳಗೊಸಗೆಯುಂ ಶರೀರದೊಳೆತ್ತಂ
ರೋಮಾಂಚಕಂಚುಮಂ ಮದಿ
ರಾಮದವಾಗಿಸೆ ತೆಗಟ್ಟಿನಾಕೆಯ ನುಡಿಯೊಳ್
(ಗುಣಸ್ವಭಾವಾಖ್ಯಾನಂ) ೯

ತಳಮಿತಮಧ್ಯೆಯನಾಯತ
ವಿಳೋಳಲೋಚನೆಯನುನ್ನತಸ್ತನಯುಗೆಯಂ
ಲಳಿತವಿಲಾಸಿನಿಯಂ ಕೋ
ಮಳಾಂಗಿಯಂ ಪೃಥುನಿತಂಬಬಿಂಬೆಯನುಱದಂ
(ದ್ರವ್ಯಸ್ವಭಾವಾಖ್ಯಾನಂ) ೧೦

ಅತಿಶಯಧವಳಧರಾಧಿಪ
ಮತದಿಂದಂ ಜಾತಿಯೆಂಬಳಂಕಾರಮನಿಂ
ತತಿನಿಪುಣರಱಗೆ ತೋರ್ಪೆಂ
ಶ್ರುತಿಸುಭಗಮೆನಿಪ್ಪ ರೂಪಕಾಲಂಕೃತಿಯಂ ೧೧

(೨–ರೂಪಕಂ)

ರೂಪಕಮೆಂಬುದು ಪೆಱವಱ
ರೂಪಾದಿಗುಣಂಗಳಾನಭೇದೋಕ್ತಿಗಳಿಂ
ರೂಪಿಸುವುದಿಂತು ಬಾಹುಲ
ತಾ ಪಾದಾಂಬುಜ ಮುಖೇಂದು ನಯನಾಳಿಗಳಿಂ ೧೨

ಸ್ಮಿತಕುಸುಮಮಧರಪಲ್ಲವ
ಮತಿಶಯನಯನಾಳಿ ಬಾಹುಶಾಖಂ ಕಾಂತಾ
ಲತೆಯೆಂದಿಂತು ಸಮಸ್ತಾ
ಶ್ರಿತಂ ಸಮಸ್ತಂ ಸಮಸ್ತರೂಪಕಮಕ್ಕುಂ
(ಸಮಸ್ತರೂಪಕಂ) ೧೩

ಕುಸುಮಂ ಸ್ಮಿತಮಳಿ ನಯನಂ
ಕಿಸಲಯಮಧರಂ ಭುಜದ್ವಯಂ ವಿಟಪಂ ಮ
ತ್ತ್ರಸುವಲ್ಲಭೆ ಲತೆಯೆಂಬುದಿ
ದಸಮಸ್ತಂ ವ್ಯಸ್ತರೂಪಕಕ್ರಮಮಖಿಲಂ
(ವ್ಯಸ್ತರೂಪಕಂ) ೧೪

ಸ್ಫುರಿತಾಧರಪಲ್ಲವೆ ಬಂ
ಧುರಲೋಚನಕುಸುಮೆ ಲೋಲಭುಜಶಾಖೆ ಮನೋ
ಹರೆ ಕಾಂತೆಯೆಂಬುದವಯವ
ನಿರೂಪಣಕ್ರಮದಿನವಯವಂ ರೂಪಕದೊಳ್
(ಸಾವಯವ ರೂಪಕಂ) ೧೫

ತರಳತರಲೋಚನಂ ನಿ
ರ್ಭರರಾಗರಸಂ ಮುಖಾರವಿಂದಂ ನಿನ್ನಾ
ದೊರೆಕೊಳಿಸಿದೊಸಗೆಯೇಂ ಬಂ
ಧುರಮೆಂಬುದಿದವಯವಿ ಕ್ರಮಂ ರೂಪಕದೊಳ್
(ಅವಯವಿ ರೂಪಕಂ) ೧೬

ಮೃದುತರಕಪೋಲಫಳಕಂ
ವದನಾಂಬುಜಮಾಯತೋನ್ನತ ಭ್ರೂಚಾಪಂ
ಮುದಮಂ ಪಡೆದತ್ತೆನಗೆಂ
ಬುದು ವಿಷಮಿತರೂಪವಿಷಮರೂಪಕಮಕ್ಕುಂ
(ವಿಷಮ ರೂಪಕಂ) ೧೭

ಜಿನಚರಣನಖಾದರ್ಶಂ
ವಿನತಾಮರರಾಜರಾಜವದನಪ್ರತಿಮಂ
ಮನದೊಳ್ ಸಲೆ ನಿಲ್ಕೆಂಬುದು
ವಿನಿಶ್ಚಿತ ವಿಶೇಷಣೋರು ರೂಪಕಮಕ್ಕುಂ
(ವಿಶೇಷಣ ರೂಪಕಂ) ೧೮

ಕಮಲಾಕರದೊಳ್ ಸಂಕೋ
ಚಮನಟಿಲಂ ಚಕ್ರವಾಕದೊಳ್ ಮಾಡದು ನಿ
ನ್ನ ಮುಖೇಂದುಬಿಂಬಮಿಂದುಗೆ
ಸಮನೆಂಬುದು ಮಿಗೆ ವಿರುದ್ಧರೂಪಕಮಕ್ಕುಂ
(ವಿರುದ್ಧರೂಪಕಂ) ೧೯

ಕುಲಗಿರಿಯಯ್ ಗೌರವದಿಂ
ನೆಲನಯ್ ಸ್ಥೈರಣೆಯಿನಿಂದುವಯ್ ಶಾಂತಿಯಿನಾ
ಜಲನಿಧಿಯಯ್ ಗುಣ್ಪಿಂದೆಂ
ದಲಸದೆ ಪೇೞ್ಗಿಂತು ಹೇತುರೂಪಕ ವಿಧಿಯಂ
(ಹೇತುರೂಪಕಂ) ೨೦

ಕುಮುದಾನಂದನಕರವತಿ
ಕಮಲಾಕರರಾಗಹರಮುದಾರಂ ನಿನ್ನಾ
ವಿಮಳಯಶೋವಿಧುವೆಂಬುದು
ಕಮನೀಯಂ ಶ್ಲೇಷರೂಪಕಾಲಂಕಾರಂ
(ಶ್ಲೇಷರೂಪಕಂ) ೨೧

ಪರಿಚಿತಸನಾಭಿರಾಗಾಂ
ಕುರಜಲಸೇಚಂ ವಿರೋಧಿತರುದವದಹನಂ
ಪರವೋದಯರವಿಗಗನಂ
ಪರಾಕ್ರಮುವದೆನೆ ವಿಭಿನ್ನರೂಪಕಮಕ್ಕುಂ
(ವಿಭಿನ್ನರೂಪಕಂ) ೨೨

ವದನಾಂಬುಜರಂಗದೊಳೀ
ಮದಾಲಸಭ್ರೂಲತಾವಿಲಾಸಿನಿ ಲೀಲಾ
ಸ್ಪದ ನೃತ್ಯಮನಾಗಿಸಿದ
ಪ್ಪುದಿದೆಂಬುದು ರೂಪಕೋರುರೂಪಕಮಕ್ಕುಂ
(ರೂಪಕ ರೂಪಕಂ) ೨೩

ವದನಮಿದಲ್ತಂಬುರುಹಂ
ಮದಲೋಲವಿಲೋಚನಂಗಳಲ್ಲಮಿವಳಿಗಳ್
ಮುದಮಲ್ಲಿದು ವಿಕಸನಮೆಂ
ಬಿದನಿಂ[ಬೆ]ನೆ ಬಗೆಗೆ ರೂಪಕಾಪಹ್ನುತಿಯಂ
(ರೂಪಕಾಪಹ್ನುತಿ) ೨೪

ಮೊಗಮೆಂಬಂಬುಜದಲರಾ
ನಗೆಯೆಂಬ ವಿಕಾಸಮೊಪ್ಪುವದಱೊಳ್ಸಲೆಗುಂ
ಮಿಗೆ ಕಣ್ಗಳೆಂಬ ತುಂಬಿಗ
ಳೊಗೆದೊಸೆಗೆಯಿನೆನೆ ಸುಯುಕ್ತರೂಪಕಮಕ್ಕುಂ
(ಯುಕ್ತರೂಪಕಂ) ೨೫

ನಗೆಯೆಂಬ ನೆವದೆ ಬೆಳಗೀ
ಮೊಗಮೆಂಬೀ ನೆವದೆ ತಿಂಗಳೊಳಗೆಸೆದಾದಂ
ಸೊಗಯಿಸಿ ತೋರ್ಕುಂ ಲೋಚನ
ಯುಗಮೆಂಬೀ ನೆವದೆ ಲಕ್ಷ್ಮಮೆನೆ ತದ್ವ್ಯಾಜಂ
(ವ್ಯಾಜರೂಪಕಂ) ೨೬

ವರ ರೂಪಕ ಭೇದಮನಿಂ
ತಿರೆ ಪೇೞ್ದೆಂ ಕಿಱಿದನುೞಿದುದಂ ಲಕ್ಷ್ಯದೊಳಾ
ದರದಱಿಗೆ ತೊರ್ಪೆನರ್ಥಾಂ
ತರವಿನ್ಯಾಸಕ್ಕೆ ಲಕ್ಷ್ಯಲಕ್ಷಣ ಯುಗಮಂ ೨೭

(೩-ಅರ್ಥಾಂತರನ್ಯಾಸಂ)

ದೊರೆಕೊಳೆ ಪೇೞ್ದರ್ಥಮನಾ
ದರದಿಂ ಸಾಧಿಸಲೆವೇಡಿ ಪೆಱತೊಂದರ್ಥಾಂ
ತರಮಂ ಪೇೞ್ವುದದರ್ಥಾಂ
ತರವಿನ್ಯಾಸಾಖ್ಯಮದಱಿದೀ ಭೇದಂಗಳ್ ೨೮

ಸಕಲವ್ಯಾಪಿ ವಿಶೇಷ
ಪ್ರಕಾಶಕಂ ಯುಕ್ತಕಾರಿ ಯುಕ್ತಾಯುಕ್ತಂ
ಪ್ರಕಟಶ್ಲೇಷ ವಿರುದ್ಧಾ
ತ್ಮಕಂ ವಿರುದ್ಧಂ ವಿಪರ್ಯಯಂ ಯುಕ್ತಾರ್ಥಂ ೨೯

ಸತತೋದಯನಪ್ರತಿಹತ
ಗತಿತೀವ್ರಂ ತದ್ದಿನಾಧಿನಾಥನುಮಸ್ತಂ
ಗತನಾದನಂತೆ ಸಿಯತ
ಪ್ರತೀತಿಯಂ ಕಳೆಯಲಕ್ಕುಮೇ ವ್ಯಾಪಕಮಂ
(ಸಕಲವ್ಯಾಪಿ) ೩೦

ಸರಸಿಜಬಾಂಧವನಸ್ತಾಂ
ತರಗತನಾಗಿರೆ ಸರೋಜಿನೀವನಮಾದಂ
ಕೊರಗುತ್ತೆ ಮುಗಿಗುಮಿಾಶ್ವರ
ವಿರಹದೆ ಶೋಕಾಕುಲಂ ವಿಶೇಷಾಪ್ತಜನಂ
(ವಿಶೇಷಪ್ರಕಾಶಕಂ) ೩೧

ಮಲಯಾನಿಲನುಂ ಮಲಯಜ
ಜಲಮುಂ ಶಶಿಕಿರಣಮುಂ ವಿಯೋಗಿಗಳೆರ್ದೆಯೊಳ್
ನೆಲಸಿರ್ದುವಟಿಲೆ ಪಾಪದ
ಫಲಮಾದುವು ಯುಕ್ತಕಾರಿ ಕಾಮುಕ ಜನದಾ
(ಯುಕ್ತಕಾರಿ) ೩೨

ಹರಿಣಧರಂ ಸೊಗಯಿಸಿದಂ
ತಿರೆ ಕುಸುಮಿತಚೂತವಿತತಿ ಸೊಗಯಿಸಿತೆನಸುಂ
ಸುರಭಿಸುಮನಸ್ವಿ ದೋಷಾ
ಕರವಿಲಸಿತಮಪ್ಪುದಿಂತು ಯುಕ್ತಾಯುಕ್ತಂ
(ಯುಕ್ತಾಯುಕ್ತಂ) ೩೩

ದಿನನಾಯಕನಪರದಿಗಂ
ಗನೆಯೊಳ್ ನೆರೆದುದಿತರಾಗನಾದಂ ಪೀನಂ
ಜನಿಯಿಸುಗುಮಧಿಕಾರಾಗಮ
ನೆನಸುವುಪಕ್ರಮದೆ ವಾರುಣೀ ಸಂಶ್ಲೇಷಂ

(ಪ್ರಕಟಶ್ಲೇಷಂ) ೩೪

ಸರಿದಧಿಪತಿಯಂ ದೋಷಾ
ಕರನಂತರ್ಮಲಿನನಾಗಿಯುಂ ಪೆರ್ಚಿಸುಗುಂ
ಪರಿಣತ ಕಲಾಕಲಾಪಂ
ಪರಿವರ್ಧ[ಕ]ಮಕ್ಕುಮತಿ ವಿರುದ್ಧಾತ್ಮಕ[ಮುಂ]

(ವಿರುದ್ಧಾತ್ಮಕಂ) ೩೫

ಪರಿತಾಪಮನೆನಗೆ ನಿಶಾ
ಕರನಾಗಿಸುಗುಂ ವಸಂತಸಮಯಾನುಗತಂ
ಸುರಭಿಸಮಯೋದಿತಂ ಹಿಮ
ಕರನಟಿಲಂ ಪಡೆವನೆಂಬುದಿದು ವಿಪರೀತಂ

(ವಿಪರೀತಂ: ವಿಪರ್ಯಯಂ) ೩೬

ಉರುಪಿತ್ತಶೋಕಪಲ್ಲವ
ವಿರಚಿತಶಯನೀಯಮೆನ್ನ ಮೆಯ್ಯಂ ಪೀನಂ
ಸ್ಫುರದನಲಪ್ರತಿನಿಧಿ ತ
ತ್ಸ್ವರೂಪಗುಣಮಕ್ಕುಮೆಂಬುದೆಂದುಂ ಯುಕ್ತಂ

(ಯುಕ್ತಾರ್ಥಂ) ೩೭

ಸಂತತವಿಂತೆಸೆವಪ್ಪ
ರ್ಥಾಂತರ ವಿನ್ಯಾಸಭೇದಮಂ ಬಗೆಗೆ ಬುಧರ್
ಮುಂತಣ ಲಕ್ಷಣಲಕ್ಷ್ಯಯು
ಗಾಂತರ್ಗತಭೇದಮಕ್ಕುಮಾ ವ್ಯತಿರೇಕಂ ೩೮

(೪–ವ್ಯತಿರೇಕಂ)

ಆದಿಪ್ರತೀತಿ[ಯಿ]ಂ ಶ
ಬ್ದಾದರದಿಂ ಸದೃಶಮಾದ ವಸ್ತುದ್ವಯದೊಳ್
ಭೇದಮನಱಿಪುವುದುಚಿತ ಗು
ಣೋದಯ ಕೃತವಾಕ್ಯ ವಿಸ್ತರಂ ವ್ಯತಿರೇಕಂ ೩೯

ಶ್ರೀವನಿತಾಪ್ರಸವದಿನಾ
ಲಾವಣ್ಯಾದಿನತಿಗಭೀರಭಾವದೆ ನೀನಿಂ
ತಾ ವಾರಿಧಿಯಂ ಪೋಲ್ತಯ್
ಕೇವಲಭೇದಂ ದ್ವಿತೀಯ ಲಲಿತಾಕಾರಂ
(ಏಕ ವ್ಯತಿರೇಕಂ) ೪೦

ಪರಮೋದಯರಿರ್ ಕಮಲಾ
ಕರಬೋಧಕರಿರ್ ದಿನೇಶನುಂ ನೀನುಂ ಭಾ
ಸ್ಕರನನಿಯತ ವೃತ್ತಕ್ರಮ
ನರಸಾ ನಿನ್ನಂತೆ ನಿಯತವೃತ್ತಸ್ಥಿತ[ನೇಂ]
(ಉಭಯ ವ್ಯತಿರೇಕಂ) ೪೧

ಪರಿಣತಗುಣರಿರ್ ಕಾಂತೋ
ತ್ಕರರಿರ್ ನಿಜ ಸೌಖ್ಯರಿರ್ ನಿಶಾನಾಯಕನುಂ
ನರಪಾ ನೀನುಂ ದೋಷಾ
ಕರನಾ ಶಶಿ ನೀನುದಾರಗುಣಸಮುದಯನಯ್ ೪೨

ಅಲಘು ಭುಜನಾಗಿಯುಂ ನಿ
ಶ್ಚಲನಾಗಿಯುಮಖಿಳ ಭೂಭೃದುತ್ತುಂಗತೆಯೊಳ್
ನೆಲಸಿಯುಮೆಯ್ದದು ನಿನ್ನಾ
ವಿಲಸಿತಮಂ ಮೇರು ಕಠಿನಭೋಗಾಧಾರಂ ೪೩

ಪಾರ್ಥಿವ ಗುಣಯುತವಾಗಿಯು
ಮರ್ಥಿತಫಲದಾಯಿಯಾಗಿಯುಂ ನಿನ್ನೊಳ್ ತಾಂ
ವ್ಯರ್ಥತೆಯಂ ಪಡೆಗುಂ ಪರ
ಮಾರ್ಥವಚೇತನತೆಯಿಂದೆ ಕಲ್ಪಕುಜಾತಂ ೪೪

ಮದಮುದಿತಾಳಿ ಕದಂಬಂ
ಮೃದುವಿಳಸಿತ ಸರಸಕೇಸರಂ ಸರಸಿರುಹಂ
ವದನಮಿದು ಲೋಲಲೋಚನ
ಮುದಿತಂ ಸ್ಮಿತದಶನವಸನ ರಾಗೋಪಚಿತಂ ೪೫

ಶರದಂಬರಮುಂ ಮತ್ತೀ
ಸರವರಮುಂ ವಿಳಸದತನುಧವಳಚ್ಛವಿಗಳ್
ಹರಿಣಾಂಕಾಲಂಕೃತಮುಂ
ಬರಮೀ ಕೊಳಮುಚಿತರಾಜಹಂಸೋತ್ತಂಸಂ ೪೬

ಅಮದಾಲಸ ಲೋಚನಲೀ
ಲಮಪಾಸ್ತಭ್ರೂಲತಾವಿಲಾಸ ವಿಶೇಷಂ
ಕಮಲಮದು ಪೋಲದೀ ನಿ
ನ್ನ ಮುಖಮನಿಂತೆತ್ತಮುಕ್ತಗುಣಭೂಷಣಮಂ ೪೭

ಅನಲನಸಾಧ್ಯಾಕಳಂಕ
ಮನನಿಳತಪನೀಯ ಧೂಳಿಯಾನಜಲಕ್ಷಾ
ಲನಮನನಾಕಲಶೋಷ್ಯಮ
ನನಿಯತಕರ್ದಮಮನಯಶಮಂ ತೊಱೆಗಱಿವಂ ೪೮

(೫-ಯಾಥಾಸಂಖ್ಯ)

ವ್ಯತಿರೇಕ ವಿಕಲ್ಪಮನನು
ಗತಕ್ರಮ ವಿಶೇಷಗುಣಕೃತಾಂತಮನಱಿಗೀ
ಮತದಿಂ ಯಾಥಾಸಂಖ್ಯಾ
ಪ್ರತೀತಿಯಂ ತೋರ್ಪೆನನ್ವಿತಾನನ್ವಿತಮಂ ೪೯

ಅಳಕಾನನ ನಯನಂಗಳಿ
ನಳಿನಳಿನೋತ್ಪಲವಿಳಾಸಮಂ ಗೆಲ್ವುದಱಿಂ
ಕಳಹಂಸಲೀಲಗಮನೇ
ಕೊಳನಂ ನೀಂ ಪೋಲ್ವೆಯೆಂಬುದನುಗತಮಕ್ಕುಂ
(ಅನುಗತ ಯಾಥಾಸಂಖ್ಯ) ೫೦

ನಳಿನೋತ್ಪಳಾಳಿರುಚಿಗಳ
ನಳಕವಿಲೋಚನಮುಖಂಗಳೀಟ್ಸುಳಿಗೊಳೆ ನೀಂ
ತಿಳಿಗೊಳನನೆ ಪೋಲ್ತಿರ್ದುಂ
ತಿಳಿಯದುದೇಕೆಂಬುದಿಂತನನ್ವಯಮದಱೊಳ್
(ಅನನ್ವಿತ ಯಾಥಾಸಂಖ್ಯ) ೫೧

ನಿಗದಿತ ಯಥಾಸಂಖ್ಯಾ
ನುಗತವ್ಯತಿರೇಕಯುಗಳ ಲಕ್ಷ್ಯಮಿವಕ್ಕುಂ
ಬಗೆಗಾ ದೀಪಕದ ವಿಭಾ
ಗ ಗತಿಯನೀ ಭೇದಲಕ್ಷ್ಯಲಕ್ಷಣಯುಗದಿಂ ೫೨

(೬-ದೀಪಕ)

ಜಾತಿಕ್ರಿಯಾಗುಣದ್ರ
ವ್ಯಾತಿಶಯ ವಿಶೇಷಿಯಪ್ಪ ಪದವೊ[ರ್ಬುೞಿ]ನಿಂ
ದೀ ತೆಱದಿನುೞಿದ [ವಾಕ್ಯ]ಸ
ಮೇತಿಗಮುಪಕಾರಯೋಗ್ಯದೀಪಕಮಕ್ಕುಂ ೫೩

ಮಲಯಾನಿಲನೊಯ್ಯನೆ ಪ
ಣ್ತೆಲೆಯಂ ನೆಲೆಯಿಂ ಕಲಿಲ್ಚುಗುಂ ವಿಟಪಿಗಳೊಳ್
ವಿಲಸಿತ ಕಳಿಕಾಕುಳಕೋ
ಮಲಾಂಕುರಮನಂತೆ ಪಡೆಗುಮವಱಿಡೆಯೆಡೆಯೊಳ್
(ಜಾತ್ಯನುಗತ ಆದಿದೀಪಕಂ) ೫೪

ತಿರಿತರ್ಕುಮಮಳ ಜಳನಿಧಿ
ಪರಿಖಾವೃತಭೂಮಿಭಾಗಮಂಬರದೆ ಜಳಾ
ಕರವಿಕ್ಷೇಪಕ ಕಕುದಂ
ತರಮಂ ಸವಿಶೇಷರುಚಿರ ಸಂಭವ ವಿಧಿಯಂ
(ಕ್ರಿಯಾನುಗತ ಆದಿದೀಪಕಂ) ೫೫

ವಿಶದತರಮಾಯ್ತು ಗುಣಮಣಿ
ವಿಶೇಷ ಭೂಷಣದಿನೀ ತ್ವದೀಯಾಕಾರಂ
ಶಶಧರಕಿರಣಾಭಭವ
ದ್ಯಶೋವಿತಾನದಿನಶೇಷಮಾಶಾವಳಯಂ
(ಗುಣಾನುಗತ ಆದಿದೀಪಕಂ) ೫೬

ದಿವಸಕರನುದಯಗಿರಿಶಿಖ
ರವಿಶೇಷ ವಿಭೂಷಣಂ ತಮೋರಿಪುಬಳಮಂ
ಪ್ರವಿಲೀನಂ ಮಾಡಿದನವ
ಯವದೊಳ್ ತಾರಾವಿತಾನತೇಜಮನಱಿದಂ
(ದ್ರವ್ಯಾನುಗತ ಆದಿದೀಪಕಂ) ೫೭

ದೀಪಕಮಾಜಾತ್ಯಾದಿನಿ
ರೂಪಕಮಿಂತಕ್ಕುಮಾದಿಯೊಳ್ ಮಧ್ಯಾಂತ
ವ್ಯಾಪಕಮನದಂ ತಱಿಸ
ಲ್ಗಿಪೇೞ್ದ ವಿಕಲ್ಪಲಕ್ಷ್ಯದೊಳ್ ಕವಿ ಮುಖ್ಯರ್ ೫೮

(೭-ಉಪಮಾ)

ನಾನಾ ವಸ್ತುವಿಭೇದಮ
ನೇನಾನುಂ ತೆಱದೆ ಪೋಲ್ಕೆ ಮಾಡುವುದುಪಮಾ
ಮಾನಿತ ಸದಳಂಕಾರಮ
ನೂನ ವಿಕಲ್ಪಪ್ರಪಂಚಮಿಾ ತೆಱನದಱಾ ೫೯

ವನರುಹದಂತೆ ಮುಖಂ ಲೋ
ಚನಮೆಸೆವುತ್ಪಳದವೋಲ್ ತಳಂ ತಳಿರಂತೆಂ
ದನುರೂಪಮಾಗಿ ಪೇೞ್ವೊಡ
ದೆನಸುಂ ವಸ್ತೂಪಮಾನಮೆಂಬುದು ಪೆಸರಿಂ
(ವಸ್ತೂಪಮೆ) ೬೦

ತಳಿರ್ಗಳವೋಲ್ ಮೆಲ್ಲಿದುವೀ
ತಳಂಗಳಳಿಕುಳದವೋಲ್ ವಿನೀಳಂಗಳ್ ನಿ
ನ್ನಳಕಾಳಿಗಳೆಂಬುದನಾ
ಕುಳಮಿಲ್ಲದೆ ವಿಬುಧರಱಿಗೆ ಧರ್ಮೋಪಮೆಯಂ
(ಧರ್ಮೋಪಮೆ) ೬೧

ನಿನ್ನ ಮುಖದಂತೆ ಕಮಳಮಿ
ದುನ್ನಿದ್ರಂ ನಿನ್ನ ತಳದವೋಲಾರಕ್ತಂ
[ನನ್ನಿಯಿನೀ] ಪಲ್ಲವಮೆನೆ
ಸನ್ನುತರೂಪಿಂ ವಿಪರ್ಯಯೋಪಮುಮಕ್ಕುಂ
(ವಿಪರ್ಯಯೋಪಮೆ) ೬೨

ಕಮಳಮಿದು ನಿನ್ನ ಮುಖದಂ
ತೆ ಮುಖಮುಮಿಾ ಕಮಳದಂತೆ ನಿಕ್ಕುವಮೆಂದಿಂ
ತಮರ್ದಿರೆ ಪೇೞ್ವುದನಱಿಗು
ತ್ತಮರನ್ಯೋನ್ಯೋಪಮಾನ ನಾಮಾಂಕಿತಮಂ
(ಅನ್ಯೋನ್ಯೋಪಮೆ) ೬೩

ಸರಸಿಜದೊಳ್ ನಿನ್ನ ಮುಖಂ
ತರುಣೀ ಸದೃಶಂ ಸಮಂತು ಪೋಲದು ಪೆಱತಂ
ನಿರುತಮಿದೆಂಬುದು ನಿಯಮಾಂ
ತರಿತಂ ನಿಯಮೋಪಮಾವಿಕಲ್ಪಿತಭಾಗಂ
(ನಿಯಮೋಪಮೆ) ೬೪

ಕಮಳಮಿದನ್ನೆಗಮಿಾ ನಿ
ನ್ನ ಮುಖದೊಳೋರಂತೆ ಪೆಱದುಮಿದಱೊಳ್ ಸದೃಶಂ
ಸಮವಾಯಮುಳ್ಳೊಡೆಲ್ಲಂ
ಸಮನಿಸುಗಂತೆಂಬುದನಿಯಮೋಪಮೆಯಕ್ಕುಂ
(ಅನಿಯಮೋಪಮೆ) ೬೫

ವದನಂ ಮದೀಯಲೋಚನ
ಮುದಾವಹಂ ಕಮಳಮಳಿಕುಳೋತ್ಸವಜನಕಂ
ವಿದಿತ ವಿಭೇದಕ್ರಮಮಿಂ
ತಿದಲ್ಲದಿಲ್ಲೆಂಬುದತಿಶಯೋಪಮೆ ಸತತಂ
(ಅತಿಶಯೋಪಮೆ) ೬೬

ಈಕೆಯ ವದನಾಕಾರಮ
ನೇಕಾಂತಂ ಪೋಲ್ವೆನೆಂಬುದರ್ಕಾಗಿ ಕನ
ತ್ಕೋಕನದಕ್ಕಿಂದುಗಮುಂ
ಟಾಕಾಂಕ್ಷಣಮಿದಱೊಳೆಂಬುದುಪಮೋತ್ಪ್ರೇಕ್ಷಂ
(ಉಪಮೋತ್ಪ್ರೇಕ್ಷೆ) ೬೭

ಕಮಳಂ ಲಲಿತಭ್ರೂವಿ
ಭ್ರಮಮುಂ ವಿಸ್ಮಿತವಿಲೋಲಲೋಚನಯುಗಮುಂ
ಸಮವಾಯಮುಳ್ಳೊಡದು ನಿ
ನ್ನ ಮೊಗಕ್ಕೆಣೆಯೆಂಬುದದ್ಭುತೋಪಮೆ ನಿಯತಂ
(ಅದ್ಭುತೋಪಮೆ) ೬೮

ಕಮಳವಿಮೋಹದಿನೀ ನಿ
ನ್ನ ಮೊಗಕ್ಕೆಱಗುವುದು ತೊಱೆವುದಾ ಸರಸಿಜಮಂ
ಭ್ರಮರಂ ವದನಮಿದಲ್ತೆಂ
ದು ಮೋಹದಿಂದೆಂಬುದಿದುವೆ ಮೋಹೋಪಮಿತಂ
(ಮೋಹೋಪಮೆ) ೬೯

ಸರಸಿಜಮೋ ಮೊಗಮೋ ಮೇಣ್
ದ್ವಿರೇಫಮೋ ಲೋಲನಯನಯುಗಮೋ ಮನದೊಳ್
ಪಿರಿದುಂ ಸಂಶಯಮೆಂಬುದು
ನಿರಂತರಂ ಸಂಶಯೋಪಮಾಲಂಕಾರಂ
(ಸಂಶಯೋಪಮೆ) ೭೦

ಸರಸಿರುಹಮಿಂದುದೀಧಿತಿ
ಪರಾಜಿತಶ್ರೀವಿಲಾಸಮಿ ನಿನ್ನ ಮುಖಂ
ಹರಿಣಧರವಿಜಯಶೋಭಾ
ಕರಮೆಂಬುದಿದೂರ್ಜಿತೋಪಮಾನ ವಿಭಾಗಂ
(ಊರ್ಜಿತೋಪಮೆ) ೭೧

ಪರಮಶ್ರೀನಿಳಯಂ ಶಶ
ಧರಕಾಂತಿವಿರೋಧಿರೋಚಿ ವದನಂ ನಿನ್ನಾ
ಸರಸಿರುಹದವೋಲೆಂಬುದು
ನಿರುತಂ ಶ್ಲೇಷೋಪಮಾವಿಕಲ್ಪವಿಶೇಷಂ
(ಶ್ಲೇಷೋಪಮೆ) ೭೨

ಸರಸೀಜಂ ಸರಜಂ ಶಶ
ಧರ ಬಿಂಬಮುದತಿ ಕಳಂಕಿತಂ ನಿನ್ನ ಮೊಗಂ
ನಿರುಪಮಮಾಗಿಯುಮವಱೊಳ್
ದೊರೆಯೆಂಬುದನಱಿದುಕೊಳ್ಗೆ ನಿಂದೋಪಮೆಯಂ
(ನಿಂದೋಪಮೆ) ೭೩

ಅಮೃತಭವಂ ಶಿಶಿರಕರಂ
ಕಮಳಂ ಜಗದೇಕಪಾವನೀಯ ಶ್ರೀಕಂ
ಸಮನವಱಿೊಳ್ ನಿನ್ನ ಮೊಗಂ
ಕ್ರಮದೆಂಬುದನಱಿವುದಾ ಪ್ರಶಂಸೋಪಮೆಯಂ
(ಪ್ರಶಂಸೋಪಮೆ) ೭೪

ಶರದುದಿತ ಶಿಶಿರಕರನುಂ
ಸರಸಿರುಹಮುಮಿಾ ತ್ವದೀಯ ವದನಮುಮಿನಿತುಂ
ದೊರೆಕೊಳಿಸುವೊಡೆ ಪರಸ್ಪರ
ವಿರೋಧಿಗಳ್ ನಿರುತಮೆನೆ ವಿರೋಧೋಪಮಿತಂ
(ವಿರೋಧೋಪಮೆ) ೭೫

ಅಳಿಗಳಿವು ಕಣ್ಗಳಲ್ಲಿವು
ನಳಿನಮಿದೀ ವದನಮಲ್ತು ನಿಜಕಾಮಿನಿಯಾ
ತಿಳಿದಿಂತು ಪೇೞ್ವೊಡಿದು ಮೊ
ಕ್ಕಳಮುಪಮಾಖ್ಯಾತಮಪ್ಪ ತತ್ತ್ವಾಖ್ಯಾನಂ
(ತತ್ತ್ವಾಖ್ಯಾನೋಪಮೆ) ೭೬

ಹರಿಣಧರ ಸರಸಿಜಂಗಳ್
ದೊರೆಯಲ್ಲಿವು ತನಗೆ ತಾನೆ ದೊರೆ ನಿನ್ನ ಮೊಗಂ
ನಿರುಪಮಮೆಂಬುದನಱಿವುದು
ನಿರುತಮಸಾಧಾರಣೋಪಮೋದಯ ವಿಧಿಯಂ
(ಅಸಾಧಾರಣೋಪಮೆ) ೭೭

ನುತ ಶಿಶಿರಕಿರಣಕಾಂತಿ
ಪ್ರತತಿಯನೊಡಗೂಡಿ ಮಾಡಿದವೊಲಾಯಿತ್ತಿಂ
ತತಿಶಯಮಿಾ ನಿನ್ನ ಮುಖಂ
ನಿತಾಂತಮೆಂಬಾಗಳಱಿಗಭೂತೋಪಮೆಯಂ
(ಅಭೂತೋಪಮೆ) ೭೮

ಹರಿಣಧರನೊಳ್ ವಿಷಂ ಮಲ
ಯರುಹದೊಳನಲಾರ್ಚಿ ನಿನ್ನ ವದನೋದರದೊಳ್
ಪರುಷತರವಚನಮುಪ್ಪುದು
ದುರವಾಪಮಿದಿಂತಸಂಭವೋಪಮಮಕ್ಕುಂ
(ಅಸಂಭವೋಪಮೆ) ೭೯

ಮಲಯರುಹ ಶಿಶಿರಕರ ಶೀ
ತಲಿಕಾ ಕರಕೇಂದುಕಾಂತಜಲಶೀತಳಮಿಾ
ಲಲನಾಲಿಂಗನ ಸುಖಕರ
ವಿಲಾಸಮೆಂಬುದು ಬಹೂಪಮಾನವಿಕಲ್ಪಂ
(ಬಹೂಪಮೆ) ೮೦

ಜನಿತ ಪ್ರಗಲ್ಭದೊಳ್ [ಮಾ
ನ]ದೊಳ್ ಮಾಹಾತ್ಮ್ಯದೊಳ್ ನಿಜೋದಾರತೆಯೊಳ್
ಅನುಪಮಗುಣದೊಳ್ ಶ್ರೀಶಂ
ಘನಮೆನೆ ಮಾಲೋಪಮಾನ ಭೇದಮಿದಕ್ಕುಂ
(ಮಾಲೋಪಮೆ) ೮೧

ಭವದೀಯ ವದನಮಾ ಲೋ
ಲವಿಲೋಚನಮುದಿತರಾಗಮಣಿವಿಳಸಿತಮುಂ
ಪ್ರವಿಕಸಿತಾಂಬುಜವನಮುಂ
ಸವಿಶೇಷಂ ಪೋಲ್ಗುಮೆನ್ಗೆ ವಾಕ್ಯೋಪಮೆಯುಂ
(ವಾಕ್ಯೋಪಮೆ) ೮೨

ವಿಪರೀತಂ ತರುತತಿಯು ಪೊ
ಲಪರಾಗಂ ಶುದ್ಧಭೂಮಿವೋಲ್ ಪದ್ಮಿನಿವೋ
ಲುಪಗತವಿಭ್ರಮ ರಹಿತಂ
ಕುಪಿತಾಕೃತಿಯೆಂಬುದುಪಮೆ ಸಂಧಾನಾಂಕಂ
(ಸಂಧಾನೋಪಮೆ) ೮೩

ಪ್ರತಿವಸ್ತೂಪಮಿತಾಲಂ
ಕೃತಮಿಂತಕ್ಕುಂ ಧರಾಧಿಪಾ ನಿನ್ನನ್ನಂ
ವಿತತಯಶನಿಲಯ ತಾರಾ
ಪತಿ ದಿನಕರ ಸದೃಶತೇಜನೆಂಬುದುಮುಂಟೇ
(ಪ್ರತಿವಸ್ತೂಪಮೆ) ೮೪

ಸುರಗಿರಿವೋಲ್ ಧೈರ್ಯದಿನಂ
ಬರಮಣಿವೋಲ್ ತೇಜದಿಂ ಶಶಾಂಕಂಬೋಲ್ ಬಂ
ಧುರ ಕಾಂತಿಗುಣದಿನೆಂದಿಂ
ತಿರೆ ಪೇೞ್ವುದನಱಿದುಕೊಳ್ಗೆ ಹೇತೂಪಮೆಯಂ
(ಹೇತೂಪಮೆ) ೮೫

(ಉಪಮಾ ಗುಣದೋಷಂಗಳ್)
ಹೀನಾಧಿಕಗುಣದೋಷ ವಿ
ತಾನಮುಮಂ ಲಿಂಗವಚನ ಭೇದಂಗಳುಮಂ
ಮಾನಧನರಱಿದು ಪೇೞ್ಗನು
ಮಾನಕ್ಕವಿರುದ್ಧಮಾಗೆ ಲಕ್ಷ್ಯಾಗಮದೊಳ್ ೮೬

ನಿನ್ನಂತೆ ಸುರೇಶ್ವರನು
ತ್ಪನ್ನಮಹೈಶ್ವರ್ಯನೆಂಬುದುಂ ಜಲನಿಧಿ ತಾಂ
ಸನ್ನುತ ಗಭೀರನೆಂಬುದು
ಮಿನ್ನದು ಹೀನಾಧಿಕಪ್ರಶಂಸಾನುಗುಣಂ ೮೭

ಕೊಳದಂತಂಬರಮತಿನಿ
ರ್ಮಳಮಾತಂ ಸ್ವಾಮಿಭಕ್ತನೆಂದುಂ ನಾಯ್ವೋ
ಲಿಳೆ[ಯೊಳ್]ಯಂಕರಮೆಂಬುದಿದ
ಗ್ಗಳಮಾ ಹೀನಾಧಿಕಪ್ರಶಂಸಾದೋಷಂ ೮೮

ಪುರುಷಂಬೋಲೀಕೆ ಕರಂ
ಪುರುಷಾಕೃತಿಯೆಂಬುದಿಂತು ನಾನಾ ಲಿಂಗಂ
ನಿರುತಂ ಪ್ರಾಣಂಗಳವೋಲ್
[ನ]ರಪಂ ಪ್ರಿಯನೆಂಬುದಿಂತು ನಾನಾ ವಚನಂ ೮೯

ಇಂತುಪಮಾಕ್ರಮಮನಪ
ಯಂಂತಂ ಗುಣಗಣಮನಱಿದು ಪೇೞ್ಗೆ ಕವೀಶರ್
ಸಂತತಮಿಂತಕ್ಕು ಕಾಂ
ತಾಂತಿಕಮತಿಶಯದ ಲಕ್ಷ್ಯಲಕ್ಷಣಯುಗದಿಂ ೯೦

(೮-ಅತಿಶಯೋಕ್ತಿ)

ಮೇರೆಗಳೆದಿರೆ ವಿಶೇಷ ವಿ
ಚಾರಮನಧಿಕೋಕ್ತಿಯೊಳ್ ತಗುಳ್ಚುವುದಕ್ಕುಂ
ಸಾರತರಮತಿಶಯಾಲಂ
ಕಾರಂ ಮತ್ತದಱ ಲಕ್ಷ್ಯಮಿಾ ತೆಱನಕ್ಕುಂ ೯೧

ಗೈರಿಕರಸಾರ್ದ್ರಮುಂ ಸಿಂ
ಧೂರದೆ ತಲೆವ[ಱಿ]ದುದಂ ಕರಂ ಕಂಡಾಂ ಸಂ
ಧ್ಯಾರಾಗದೊಳಱಿಯದೆ ಮದ
ವಾರಣಮುಂ ಸೋಂಕಿ ಕೆಲದೊಳೊಯ್ಯನೆ ಪೋದೆಂ ೯೨

ಮಲಯಜಚರ್ಚಿತೆಯುಂ ಕೇ
ವಲ ಧವಳಾಭರಣೆಯುಂ ದುಕೂಲಾಂಬರೆಯುಂ
ಕೆಲದೊಳ್ ನಿಲೆಯುಂ ಜ್ಯೋತ್ಸ್ನಾ
ವಿಲಾಸದೊಳ್ ಬಗೆದೆನಿಲ್ಲ ನಲ್ಲಳನಿನಿಸಂ ೯೩

ಆಶಾವಳಯಿತಲೋಕಾ
ಕಾಶಮಿದೇನತಿವಿಶಾಲವೋ ನಿನ್ನ ಯಶೋ
ರಾಶಿಯನಿಂದುದ್ಯುತಿಯ ನಿ
ಕಾಶಮನೊಳಕೊಳ್ಗುಮಳವಿಗೞಿದಿರ್ದುದುಮಂ ೯೪

(೯–ಸದೃಶಯೋಗಿತಾ)

ಸ್ತುತಿನಿಂದೆಗಳಿಂ ಸವಿವ
ಕ್ಷಿತ ಗುಣದೊಳ್ ಸದೃಶಮಾಗಿ ಪೇೞ್ವುದು ಪೆಱತಂ
ನುತ ಸದೃಶಯೋಗಿತಾಲಂ
ಕೃತಿಲಕ್ಷಣಮಕ್ಕುಮಿಂತು ತದುದಾಹರಣಂ ೯೫

ಅಮರಾಧಿರಾಜ ಹುತವಹ
ಯಮ ನೈಋತ ವರುಣ ವಾಯು ಯಕ್ಷೇಶಾನ
ಕ್ರಮದಿನವರೆಣ್ಬರಂತು
ತ್ತಮನಯ್ ನೀಂ ನವಮಲೋಕಪಾಳನೆ ಅವರೊಳ್ ೯೬

ಜಲದದ ನೆೞಲುಂ ಪರಪುಂ
ವಿಲಾಸಮುಂ ಬೆಳಗುವುದಿತ ವಿದ್ಯುಲ್ಲತೆಯುಂ
ನೆಲಸವು ಚಲಂಗಳಾದಂ
ವಿಲಾಸಿನೀಜನದ ನಲ್ಮೆಯುಂ ಸಂಗಮುಮುಂ ೯೭

ಉಪಮಿತ ಭೇದೋಕ್ತಿಕ್ರಮ
ಮುಪರಿಮಿತಾಖ್ಯಾಕೃತಿ ಪ್ರಯೋಗಾನುಗತಂ
ನೃಪತುಂಗ ದೇವಮತದಿಂ
ದುಪಮಾ ಭೇದಂಗಳಿಂದೆ ತಱಿಸಲ್ಗಱಿವಂ ೯೮

(೧೦-ಆಕ್ಷೇಪ)

ವಿದಿತಾರ್ಥವಿಪರ್ಯಾಸಾ
ಸ್ಪದವೆ ದಲಾಕ್ಷೇಪವೆಂಬಳಂಕಾರಂ ಮ
ತ್ತದಱ ವಿಶೇಷ ವಿಭಾಗಮ
ನುದಾಹರಣ ಮಾರ್ಗದಿಂ ಪ್ರಯೋಗಿಸಿ ತೋರ್ಪೆಂ ೯೯

ಮೃದುತರಮಾರ್ಗದೆ ಕೆನ್ನಂ
ಮದನಶರಾನೀಕಮೊಯ್ಯನೊಲವಂ ಪಡೆಗುಂ
ಹೃದಯಮನ[ಟಿಲ]ಳವಿಂದುಱೆ
ವಿದಾರಿಸುವುದಿಂತು ಕುಸುಮಮಯಮಲ್ತದಱಿಂ
(ವೃತ್ತಾಕ್ಷೇಪ) ೧೦೦

ಧನಮಂ ನೆರಪದೆ ವಿದ್ಯಾ
ಧನಮಂ ಮಾಡದೆ ತಗುಳ್ದು ನೆಗೞದೆ ತಪದೊಳ್
ಮನುಜತ್ವಮಫಲಮಾಯ್ತೆಂ
ತೆನಗೆಂಬುದನಱಿವುದನುಶಯಾಕ್ಷೇಪಕಮಂ
(ಅನುಶಯಾಕ್ಷೇಪ) ೧೦೧

ಸರಸಿಜವಿರೋಧಿ ಕಾಂತ್ಯಾ
ಕರಮಮೃತಮಯಂ ತ್ವದೀಯ ಮುಖಶಶಿಯುಂಟಾ
ಗಿರೆ ಶಶಿಯದೇವುದೆಂಬುದು
ನಿರುತಂ ಶ್ಲೇಷಾನುವಿದ್ಧಮಪ್ಪಾಕ್ಷೇಪಂ
(ಶ್ಲೇಷಾಕ್ಷೇಪ) ೧೦೨

ವರ ಹಂಸಕದಂಬಕಮುದು
ಶರದಂಬುದಮಲ್ತು ಮುಖರನೂಪುರ ಸಂಮಾ
ದಿರವಂ ನೆಗೞ್ದಿಪ್ಪುದು ಬಂ
ಧುರಮುದಱಿಂದಿದಱೊಳೆಂಬುದುಪಮಾಕ್ಷೇಪಂ
(ಉಪಮಾಕ್ಷೇಪ) ೧೦೩

ಮದಕರಿಯೋ ಘನಸಮಯಾಂ
ಬುದಮೋ ಘನಮಲ್ತು ನೆಗೞ್ದಿದದಱೊಳ್ ಸಪ್ತ
ಚ್ಛದಗಂಧಸುರಭಿ ಪದುಳಂ
ಮದಕರಿಯೆನೆ ನೆನೆಗೆ ಸಂಶಯಾಕ್ಷೇಪಕಮಂ

(ಸಂಶಯಾಕ್ಷೇಪ) ೧೦೪

ಮಾನಧನಾ ಪೊಗೞಿಸಲೇಂ
ಪಾನಿಯೆ ನೀನುಂತೆ ನಿನ್ನ ಕಸವರಮೆಂದುಂ
ದೀನಾನಾಥರ ಕೆಯ್ಯ್ದು
ದಾನಿಯದೆಂತೆಂಬುದಿಂತು ಹೇತ್ವಾಕ್ಷೇಪಂ

(ಹೇತ್ವಾಕ್ಷೇಪ) ೧೦೫

ವ್ಯತಿರೇಕವಿಕಲ್ಪಮಿದೆಂ
ದತಿಶಯಧವಳೋಪದೇಶಮಾರ್ಗಕ್ರಮದಿಂ
ದತಿನಿಪುಣರಱಿದುಕೊಳ್ಗನು
[ವಿ]ತಿಯಿಂದಾಕ್ಷೇಪಮೆಂಬಳಂಕಾರಮುಮಂ ೧೦೬

(ಗೀತಿಕೆ)

ಪ್ರತಿಪದಾರ್ಥತತ್ತ್ವಭೇದದೊಳ್
ಪ್ರತಿಷೇಧಮುಂ ನೆಗೞ್ಗುಮನಿತೆ ಮಾೞ್ಕೆಯಿಂ
ದತಿಶಯಾಕ್ಷೇಪಗಣನಾವ್ಯತಿ
ಗತಿ ನೃಪತುಂಗದೇವಮಾರ್ಗದೊಳ್ ೧೦೭

(೧೧–ಶ್ಲೇಷೆ)
(ಕಂದ)

ನಾನಾರ್ಥಮೇಕರೂಪಾ
ಧೀನವಚೋರಚಿತಮಪ್ಪೊಡಕ್ಕುಂ ಶ್ಲೇಷಂ
ಮಾನಿತಮಳಂಕ್ರಿಯಾನುವಿ
ಧಾನಂ ಮತ್ತಿಂತು ತದುಪಲಕ್ಷ್ಯವಿಕಲ್ಪಂ ೧೦೮

ಉದಯಾರೂಢಂ ಕಾಂತ್ಯಾ
ಸ್ಪದನನುರಕ್ತಾತ್ಮಮಂಡಳಂ ಕುಮುದಕರಂ
ಮೃದುತರಕರಂಗಳಿಂದತಿ
ಮುದಮಂ ಲೋಕಕ್ಕೆ ಪಡೆಗುಮಿಂತೀ ರಾಜಂ ೧೦೯

ವಿಪುಳತರಕಟಕನುದ್ಯದ್
ದ್ವಿಪಹ[ರಿ]ಮಹಿಷೀನಿಷೇವ್ಯನುನ್ನತಪಾದಂ
ವ್ಯಪನೀತಶ್ರೀಫಲದಂ
ವಿಪರೀತಕನಪ್ಪನಂತು ಭೂಭೃನ್ನಾಥಂ ೧೧೦

ನೆರೆದ ವಿಸಂವಾದಂ ಪಂ
ಜರಶುಕತತಿಯೊಳ್ ಕುಲಾಲಗೇಹಂಗಳೊಳಂ
ಪರಚಕ್ರಭ್ರಾಂತಿಗಳ
ಧ್ವರದೊಳೆ ನೆಗಟ್ದುಂ ಮಹಾಹವಧ್ವನಿನಿಯತಂ ೧೧೧

ಅರಿಗೋತ್ರಭೇದಿ ವಿಬುಧೇ
ಶ್ವರನಲ್ಲಂ ಧೃತಕಳಾಕಳಾಪಂ ದೋಷಾ
ಕರನಲ್ಲಂ ವಿದಿತೋಮಾ
ವರನಾತ್ತ ಭುಜಂಗನಲ್ಲನೀ ಭೂಪಾಳಂ ೧೧೨

ವರರೂಪಕಾದ್ಯಳಂಕಾ
ರರಚನೆಯೊಳ್ ಮುನ್ನೆ ಪೇಟ್ದು ಬಂದೆಂ ಕೆಲವಂ
ದೊರೆಕೊಳೆ ಬಗೆಗೀ ತೆಱದಿಂ
ನಿರಂತರವಿರುದ್ಧನಿಯಮಿತ ಶ್ಲೇಷೆಗಳಂ ೧೧೩

(೧೨-ಉತ್ಪ್ರೇಕ್ಷೆ)

ತಱಿಸಂದು ಪಲವು ತೆಱದಿಂ
ತೆಱೆದಿರೆ ನೆಗೞ್ದಿರ್ದುದೊಂದು ವಸ್ತುಸ್ಥಿತಿಯಂ
ಮಱಸಿ ಪೆಱತೊಂದು ಮಾೞ್ಕೆಯಿ
ನಱಿಪುವುದುತ್ಪ್ರೇಕ್ಷೆಯೆಂಬುದಿಂತದಱ ತೆಱಂ ೧೧೪

ನಡುವಗಲ ಬಿಸಿಲ್ ತನ್ನಂ
ಸುಡೆ ವನಕರಿ ಕಮಳಬಂಧುವೊಳ್ ದಿನಕರನೊಳ್
ಕಡುಗಾಯ್ಪಿನೆ ಸರಸಿಜಮಂ
ಕಿಡಿಸಲ್ ತಾಂ ಪೊಕ್ಕುದಾಗ ಬಗೆ[ದಾ] ಕೊಳನಂ ೧೧೫

ನೆಲಸಿ ಕಿವಿಯೊಳ್ ಮದಾಯತ
ವಿಲೋಕದೊಳ್ ಪೊಳೆವುದೊಳ್ಪಿನೆಂದೀ ಕರ್ಣೋ
ತ್ಪಲಮುಮನಾಕ್ರಮಿಸುವುದಿದು
ವಿಲಾಸಿನೀ ನಿನ್ನ ಲೋಲಲೋಚನಯುಗಳಂ ೧೧೬

(೧೩-ಸೂಕ್ಷ್ಮ)

ಬಗೆದಿಂಗಿತಚೇಷ್ಟಾಕಾ
ರಗತಂಗಳಿನಂತರಂಗದೊಳ್ ಮಱಸಿದುದಂ
ಮಿಗೆ ಸೂಚಿಸುವುದು ಸೂಕ್ಷ್ಮಾ
ನುಗತಾಳಂಕಾರಮಿಂತು ತದುದಾಹರಣಂ ೧೧೭

ತಿಳಿಪಲಡಿಗೆಱಗಿದೋಪನ
ತಳಂಗಳಾ ತೀಟದಿಂ ಪದಂಗಳೊಳೊಗೆದಾ
ಪುಳಕಚಯಂಗಳ್ ಕಳೆದುವು
ಮುಳಿಸಂ ನಲ್ಲಳ್ಗೆ ಬೆಳ್ಮೊಗಂಗೆಯ್ದಿರೆಯುಂ ೧೧೮

ಪರುಷಾಳಾಪಮುಮತಿನಿ
ಷ್ಠುರವೀಕ್ಷಣಮುಖವಿಕಾರಮುಂ ಮಱಿಸಿರೆಯುಂ
ತರಳಾಪಾಂಗಮುಮಾಕೆಯ
ದರಹಸಿತಮುಮಱಿಯೆ ಪೇೞ್ಗುಮೆಱಿಕಮನೆರ್ದೆಯೊಳ್ ೧೧೯

(೧೪-ವಿಶೇಷ)

ಗುಣಜಾತ್ಯಾದಿಗಳೊಳಗನು
ಗುಣಮಾಗಿರೆ ಪೇೞ್ದವಱ ವಿಕಳತೆಯಂ ಸ
ಯ್ತೆಣಿಸಿ ವಿಶೇಷಮನಱಿಪುವ
ಗಣನೆ ವಿಶೇಷಾನುಭಾವ ಸದಳಂಕಾರಂ ೧೨೦

ಅಲರಂಬು ಕರ್ಬುವಿಲ್ ಕೋ
ಮಲ ಸರಸಿಜನಾಳತಂತುತಿರು ಮತ್ತಿವಱಾ
ಬಲದಿನಗಲ್ದರನೆಚ್ಚಾ
ತ್ರಿಲೋಕಮಂ ಕಂತು ಬಸಕೆ ಬರಿಸುವನೆಂತುಂ ೧೨೧

ಸ್ಫುರಿಯಿಸದೆ ದಶನವಸನಾಂ
ತರಮಾರಕ್ತಂಗಳಾಗದೆನಸುಂ ಕಣ್ಗಳ್
ಭರಿತ ಭ್ರೂಕುಟಿ ಕಲಮಾ
ಗಿರದೆ ಮುಖಂ ಗೆಲ್ದನಿಂತುವರಿನೃಪಬಲಮಂ ೧೨೨

(೧೫-ಸಮಾಹಿತ)

ಪರ[ವ]ಸದ ಬಗೆಯೊಳೊಂದಂ
ದೊರೆಕೊಳಿಸುವುದಱಿಗತರ್ಕಿತೋಪಸ್ಥಾನಂ
ನಿರುತಂ ಸಮಾಹಿತಾಳಂ
ಕರಣಾಂತರಮಕ್ಕುಮಿಂತು ತದುದಾಹರಣಂ ೧೨೩

ಮುಳಿದಿರ್ದ ನಲ್ಲಳಲ್ಲಿಗೆ
ತಿಳಿಪಲ್ ಪೋಪೆನ್ನ ಬಗೆಗೆ ದೊರೆಕೊಳೆ ಮತ್ತಿಂ
ತೆಳವೆಱೆ ಗಗನಾಂತರದೊಳ್
ಪೊಳೆದತ್ತೆತ್ತಂ ವಸಂತಸಮಯೋತ್ತಂಸಂ ೧೨೪

ತಡೆತಡೆದು ಕಾಂತನಲ್ಲಿಗೆ
ನಡೆಯಲ್ ಬಗೆದೆನಗೆ ಕಾರ ಕಾರಿರುಳೊಳ್ ಸ
ಯ್ತುಡವಡಿಕೆಗಳಂ ತೊಡೆದ
ತ್ತೆಡೆವಱಿಯದೆ ಪೊಳೆವ ಮಿಂಚು ಮುಗಿಲೆಡೆಯೆಡೆಯೊಳ್ ೧೨೫

(೧೬–ಸಮಾಸೋಕ್ತಿ)

ತಱಿಸಂದು ಮನದೊಳೊಂದಂ
ಪೆಱತಂ ಮತ್ತದನೆ ಪೋಲ್ವುದಂ ಕುಱುಪುಗಳಂ
ಕುಱುಮಾಡಿ ಮಾಡಿ ಪೇೞ್ವುದು
ನೆಱೆಯೆ ಸಮಾಸೋಕ್ತಿಯೆಂಬುದಿಂತದಱ ತೆಱಂ ೧೨೬

ತಾಮರೆಯರಲೊಳ್ ಸರಸನಿ
ಜಾಮೋದದೊಳೊಂದಿ ನಲಿದು ಮಕರಂದರಜೋ
ವ್ಯಾಮುಗ್ಧದೊಳೀ ಮುಗುಳೊಳ
ಮಾ ಮಾೞ್ಕೆಯನಱಿಸಿ ಸುೞಿವುದಳಿ ಕೆಲಕೆಲದೊಳ್ ೧೨೭

ನೆರೆದತಿವಿದಗ್ಧಗಣಿಕಾ
ಸುರತಾಸವಸೇವನಾಕೃತೋದನನಾಗಿ
ರ್ದಿರದೆ ತರುಣೀರತಾಂತರ
ಸರಾಗಮಂ ಪೇೞ್ವುದಲ್ಲಿ ತುಂಬಿಯ ನೆವದಿಂ ೧೨೮

ದಾನಪರನಂ ನಿಜೋನ್ನತ
ಮಾನನನಾರೂಢವಿಪುಳ ವಂಶನನಂತೊಂ
ದಾನೆಯನಪಾಯಪಂಕದೊ
ಳೀನುಂ ತಳ್ವಿಲ್ಲದಿರ್ದುದಂ ಕಾಣಿಸಿದಂ ೧೨೯

ತ್ಯಾಗಾದಿಗುಣಗಣೋದಯ
ಭಾಗಿಯನೇನಾನುಮೊಂದುಪಾಯಾಂತರಮ[ದಿ]ಂ
ನೀಗಲ್ ನೆಱೆಯದೆಯನುಪಮ
ನೀ ಗಣಿದದಿನಾನೆ ಮಾಡಿ ನುಡಿದಂ ಬಗೆಯಂ ೧೩೦

(೧೭-ಪರ್ಯಾಯೋಕ್ತ)

ಬಗೆದರ್ಥಮನಱಿಪದೆ ಮೆ
ಲ್ಲಗೆ ತಿರ್ದುವ ಬಗೆಯನದಱ ನೆವದಿಂ ಪೆಱತಂ
ನಿಗದಿಸುವುದು ಪರ್ಯಾಯೋ
ಕ್ತಗತಾಳಂಕಾರಮದಱ ಪಾಂಗಿಂತಕ್ಕುಂ ೧೩೧

ನೀಮಿರ್ವರುಮನ್ನೆಗಮಿಂ
ತೀ ಮಾೞ್ಕೆಯೊಳಿನಿಸು ಪೊೞ್ತು ನುಡಿವುತ್ತಿರಿಮಾ
ನಾವೋದ ಕುಸುಮಸಮಿತಿಯ
ನಾ ಮರಗಳೊಳಾಯ್ದು ಕೊಯ್ದುಮಿಲ್ಲಿಗೆ ಬರ್ಪೆಂ ೧೩೨

ಕೆಳದಿಯುಮಭಿಮತಮುಮನೊ
ರ್ಬುಳಿಗೂಡೆ ವಿದಗ್ಧ ಸುರತಸೇವನಮುಂ ಮೊ
ಕ್ಕಳಮವರ್ಗೆ ಮಾಡಲೆಂದಾ
ಗಳೆ ಪೋಗಲ್ ಬಗೆದು ನುಡಿದಳಿಂತೀ ಮಾತಂ ೧೩೩

(೧೮–ವಿರೋಧ)

ಒಂದೊಂದಱೊಳೊಂದದುವಂ
ತಂದೊರ್ಬುಳಿಮಾಡಿ ತದ್ವಿಶೇಷಾಂತರಮಂ
ಸಂದೇಹಮಿಲ್ಲದಱಿಪುವು
ದೊಂದೆ ವಿರೋಧಾಭಿಧಾನಮದುಮಿಂತಕ್ಕುಂ ೧೩೪

ಶರದಾಗಮದೊಳ್ ಕಳಹಂ
ಸರವಂ ಪೆರ್ಚಿತ್ತು ಕಿವಿಗೆ ಸೊಗಯಿಸಿ ಪೀನಂ
ವಿರಳತರಮಾಯ್ತು ಬರ್ಹಿಣ
ವಿರಾವಮುರುಮುದವಿರಾಮ ವಿರಸ ವಿರಾಗಂ ೧೩೫

ಮಲಯಾನಿಳನೆಸಕದಿನುದಿ
ರ್ಚಲರ್ಗಳ ಮಕರಂದಮಾಲೆಗಳ್ ಪರೆದೆತ್ತಂ
ನೆಲದೊಳ್ ಬಿಟ್ಟುಂ ಪಡೆದುವು
ವಿಲೋಚನಾಂಬುಗಳನಗ್ಗಳಂ ವಿರಹಿಗಳಾ ೧೩೬

ದೊರೆಕೊಳ್ವಂತಿರೆ ಮುನ್ನಂ
ವಿರೋಧಿಗತಮಾರ್ಗಭೇದಮಂ ತೋಱಿದೆನಾ
ದರದಿನುಪಮಾದಿಗಳೊಳಂ
ನಿರುತಮನುಕ್ತಮುಮನಱಿಗೆ ಲಕ್ಷ್ಯಾಂತರದೊಳ್ ೧೩೭

(೧೯–ಅಪ್ರಸ್ತುತ)

ಪ್ರಸ್ತುತಮಲ್ಲದುದನೆ ಮಿಗೆ
ವಿಸ್ತಾರಿಸಿ ನೆಗೞ್ಚಿ ಪೇೞ್ದೊಡಕ್ಕುಂ ಮತ್ತ
ಪ್ರಸ್ತುತಮೆಂಬುದಳಂಕೃತಿ
ವಿಸ್ತರಮಿಂತಕ್ಕುಮದಱ ಲಕ್ಷ್ಯವಿಭಾಗಂ ೧೩೮

ಮೃಗಗಣಮೆ ಸುಖಂ ಬಾೞ್ಗುಂ
ಸೊಗಯಿಸುವ ವನಾಂತರಾಳದೊಳ್ ಬಹುತೃಣದೊಳ್
ಬಗೆದಳಿಪಿ ಸುೞಿದು ನೋಡದೆ
ಮೊಗಮಂ ವಸುಮುದವಿರಾಮ ಕಲುಷಾಯತರಾ ೧೩೯

ಸಂತಂ ಮೃಗಗಣವೃತ್ತಿಯ
ನಿಂತಪ್ರಸ್ತುತಮನಱಿಪಿದಂ ಪರಸೇವಾ
ಚಿಂತಾವಿಷಾದಿತಾಂತ
ಸ್ಸ್ವಾಂತಂ ಸಂತೈಸಲೆಂದು ತನ್ನಂ ತಾನೇ ೧೪೦

(೨೦–ನಿದರ್ಶನ)

ಗುಣದೋಷಾದಿಗಳಿಂದನು
ಗುಣಮಾಗಿರೆ ಪೇೞ್ದು ತದನುಸದೃಶದಿನೊಂದಂ
ಪ್ರಣಿಹಿತ ನಿದರ್ಶನಕ್ರಮ
ದೆಣಿಸುವುದಕ್ಕುಂ ನಿದರ್ಶನಾಲಂಕಾರಂ ೧೪೧

ಅಮಳಿನ ಗುಣವೃತ್ತಿಗಳಿಂ
ಸಮುಪಸ್ಥಿತ ಸಕಳಜನಗತೋಚಿತಗುಣಮಂ
ಸಮನಾಗಿಸುವರ್ ಕನ್ನಡಿ
ಕಮನೀಯಾಕಾರ ಬಿಂಬಮಂ ತಾಳ್ದುವವೋಲ್ ೧೪೨

ಜನಮುಱಿಯದನ್ನೆಗಂ ಮು
ನ್ನಂ ನಯಮುಱಿದಱಿಪಲಾರ್ಪೊಡದು ಮಂತ್ರಿಗುಣಂ
ಜನವಾದಂ ನೆಗೞೆ ನಗ
ಧ್ವನಿವೋಲನುಕರಣವಾರ್ತೆ ಮಂತ್ರಿಯ ಗುಣಮೇ ೧೪೩

ತಲೆಸೂಡಿ ಮುನ್ನೆ ಕಜ್ಜದ
ಫಲಮಂ ಬೆಸಗೊಂಡುಮೆ[ೞ]ವನಲ್ಲಿಂ ಬೞಿಯಂ
ತಲೆಯಂ ಕಿ[ಡಿ]ಯಿಸಿ ದಿವಸಮ
ನಲಸದೆ ಬೆಸಗೊಳ್ವನಂತು ಗಾವಿಲನಕ್ಕುಂ ೧೪೪

ಪ್ರತಿಕೂಲನಾಗಿ ನಿಲೆ ವಿಧಿ
ಮತನಯಮನುಕೂಲಮಾಗಿ ನಿಲೆಯುಂ ಕಾರ್ಯ
ಸ್ಥಿತಿಯಂ ಸಾಧಿಸಲಾಗದು
ಮೃತಕಕೃತೋಪಕೃತಿಯವೊಲನರ್ಥಾಯಾಸಂ ೧೪೫

ಪದೆದುದಯಿಸಲೆಂದುಂ ಕಾ
ಲದೊಳಲ್ಲದುದಾರತೇಜನರ್ಕನುಮಲ್ಲಂ
ಸದುದಿತ ಗುಣನದಱಿಂ ನಯ
ವಿದನಪ್ಪಂ ಕಾಲಮಂ ನೆರಂ ತೋಱ್ಕೆ ನೃಪಂ ೧೪೬

ಪಡೆಯಱಿಯುಲಾದೊಡ[ರಿ]ಯಂ
ಕಿಡಿಸುಗುಮಂತಃಕಳಂಕ ನೃಪಮಂಡಲಮಂ
ತಡೆಯದೆ ತಮುಸ್ಸ್ವಭಾವಂ
ಕಿಡಿಸುವವೋಲಱಿದು ರಾಹು ಶಶಿಮಂಡಲಮಂ ೧೪೭

ಕಿಱಿದೆಂದೇಳಿಸಿ ಪಗೆಯಂ
ಪಱಿಪಡೆ ಕಿಡಿಸದೊಡೆ ಪೆತ್ತು ಕಾಲದ ಬಲಮಂ
ನೆಱೆದಿಱಿಗುಂ ನೆ[ರೆ]ದನುವಂ
ಮುಱಿಸುವವೊಲ್ದಿವಸಕರನನಂಬುದನಿವಹಂ ೧೪೮

ಒಳಗಿರ್ದ ವೈರಿಗಳ್ ಮೊ
ಕ್ಕಳಮಿಾಯರ್ ಪೆರ್ಚಲಧಿಕವಿಭವರ್ಕಳುಮಂ
ತಳರದೊಡನಿರ್ದು ಬಡಬಾ
ನಳನೆಂದುಂ ಪೆರ್ಚಲೀಯ[ದಂ]ತಂಬುಧಿಯುಂ ೧೪೯

ಪರಪಕ್ಷಮುಳ್ಳಿನಂ ತನ
ಗಿರವುಬ್ಬಸಮುದಱಿನ[ಱಿ]ವುದದನೇಗೆಯ್ದುಂ
ಪರೆದ ಪುಡಿಯೆಲ್ಲಮಂ ನೀರ್
ನೆರೆದು ಕೆಸರ್ಮಾಡದನ್ನೆಗಂ ನೆಲಸುಗುಮೇ ೧೫೦

ಕುಱಿಗೊಂಡು ನೆಗಟ್ದನಿಚ್ಛೆಯ
ನಱಿಯದೆ ತನ್ನಿಚ್ಛೆಯಿಂದೆ ಕಜ್ಜಂಬೇಟ್ವಂ
ತಱಿಸಲಿಸಲಾಱನಾರ್ತನ
ತೆಱನಱಿಯದೆ ಮದ್ದುವೇಟ್ವ ಬೆಜ್ಜನ ತೆಱದಿಂ ೧೫೧

ಪರಿಣಾಮಪಥ್ಯಮಂ ಸುಖ
ಪರಿಕರಮಂ ಮೆಚ್ಚದನ್ನರಾರೀ ಮಾತಂ
ನಿರತಿಶಯ ರಸಸಮೇತಮ
ನರೋಚಕಂ ಮೆಚ್ಚದಂತೆ ಸೊಗಯಿಸುವುಣಿಸಂ ೧೫೨

ಇಂತುದಿತ ಭೇದಮಂ ದೃ
ಷ್ಟಾಂತಾಳಂಕಾರಮಾರ್ಗಮಂ ಕನ್ನಡದೊಳ್
ಸಂತತಗುಣಮಂ ಕೈಕೊ
ಳ್ವಂತಾಗಿರೆ ಬಗೆದು ಪೇೞ್ಗೆ ಪರಮ ಕವೀಶರ್ ೧೫೩

(೨೧-ಸಹೋಕ್ತಿ)

ಗುಣಜಾತ್ಯಾದಿಗಳಿಂ ದೊರೆ
ಯೆಣಿಸುವುದು ಸಹೋಕ್ತಿಯೆಂಬುದಕ್కుಂ ನಾನಾ
ಗಣನಾವಿಶೇಷಮಾಗೀ
ಗಣಿದದಿನಾರ್ಯೆದುಕೊಳ್ಗೆ ಲಕ್ಷ್ಯಮನದಱಾ ೧೫೪

ಅತಿಧವಳಮಾಯ್ತು ಗುಣಸಂ
ತತಿಯೊಡನೆ ಯಶೋವಿತಾನಮಾಶಾಧೀನಂ
ಸತತಂ ಪೆರ್ಚಿತ್ತು ನಿಜಾ
ಯತಿಯೊಡನೆ ಮಹಾವಿಭೂತಿ ಪರಮೋದಯನಾ ೧೫೫

(೨೨-ಸಂಕೀರ್ಣ)

ಸಂಕೀರ್ಣಮೆಂಬುದುಕ್ತಾ
ಳಂಕಾರಸಮೂಹ ಸಂಕರ ಕ್ರಮಮಕ್కుಂ
ಶಂಕಾವಿರಹಿತಚಿತ್ತರ
ದಂ ಕಾವ್ಯದೊಳಿಂತು ಪೇೞ್ಗೆ ಕವಿವೃಷಭರ್ಕಳ್ ೧೫೬

ಅಪರಾಗಂ ಮುನಿಪತಿವೋ
ಲಪಗತಗುಣನಾಗಿಯುಂ ನಿಜಾಯತದೋಷಂ
ವಿಪುಳ ಯಶೋಧನಲೋಭಂ
ನೃಪವೃಷಭನರಾತಿನಿಕರತರುದವದಹನಂ ೧೫೭

(೨೩-ಪರಿವೃತ್ತಿ)

ಪರಿವೃತ್ತಿಯೆಂಬುದಕ್కుಂ
ನಿರುಪಮಮರ್ಥಸ್ವರೂಪ ವಿನಿಮಯ ವಚನಂ
ಪರಮಗುಣೋದಯಮದಱಾ
ಸ್ವರೂಪಮಂ ಬಗೆದುಕೊಳ್ಗೆ ಮತ್ತೀ ತೆಱದಿಂ ೧೫೮

ಅರಿಗೆ ದುರಾಹವರಂಗಾಂ
ತರದೊಳಭೀತಂ ನಿಜಾರಿಸಮಿತಿಗಳಿಂದಂ
ನೆರೆದ ಜಯಂಗೊಂಡಾಗಡೆ
ಸುರಾಂಗನಾಸುರತವಿಷಯಸುಖಮಂ ಕೊಟ್ಟಂ ೧೪೯

(೨೪-ವ್ಯಾಜಸ್ತುತಿ)

ಅತಿಶಯಮಾಗಿರೆ ಗುಣಸಂ
ತತಿಯಂ ದೋಷಮನೆ ಪೇೞ್ದವೋಲ್ ಪೇೞ್ವುದು ನಿ
ಶ್ಚಿತ ಶಬ್ದಾರ್ಥಂ ವ್ಯಾಜ
ಸ್ತುತಿಯೆಂಬುದುಮದಱ ಮಾೞ್ಕೆ ಮತ್ತಿಂತಕ್ಕುಂ ೧೫೦

ಜಲರಾಶಿಪ್ರಭವೆಯನವಿ
ಕಲ ಕೃಷ್ಣಗುಣಾನುರಕ್ತೆಯಂ ಮಿಗೆ ಲಕ್ಷ್ಮೀ
ಲಲನೆಯನಾಂತುಂ ವಕ್ಷ
ಸ್ಥಲದೊಳ್ ಪೇೞಿಂತುದಾರಚರಿತನೆ ಅಪ್ಪಯ್ ೧೫೧

ಸತತಂ ಭುಜಂಗಭೋಗಾ
ಶ್ರಿತೆ ನಿನ್ನ ಕಳತ್ರಮೀ ಧರಾವಧು ಮತ್ತೆಂ
ತತಿಶಯದೆ ಮಹಾಪುರುಷ
ವ್ರತಮಂ ತಾಳ್ದುವಳುದಾರಚರಿತಕ್ರಮದಿಂ ೧೫೨

(೨೫-ಹೇತೂಕ್ತಿ)

ಕಾರಣಮಾಗಿರ್ಪುದಳಂ
ಕಾರಂ ಹೇತೂಕ್ತಿಯೆಂಬುದದು ತಾಂ ನಾನಾ
ಕಾರಂ ಜ್ಞಾಪಕ ಸದಳಂ
ಕಾರಸುಮಾರ್ಗಪ್ರಯೋಗಮಿಾ ತೆಱನದಱಾ ೧೫೩

ಇಂದುಕಿರಣಂಗಳಿಂದಂ
ಚಂದನರಸದಿಂದೆ ಮಾಗಿಯಾ ನೀರಿಂದಂ
ನಂದದು ಪರಿತಾಪಾನಳ
ನಿಂದಱದೆಂ ನಿನ್ನ ಮೆಯ್ಯ ಕಾಮಜ್ವರಮಂ ೧೬೪

ಅಱವುಳ್ಳವರೊಳ್ ಬೆರಸದು
ದಱಂದಮಱಯದರೊಳಪ್ಪ ಪರಿಚಯದಿಂದಂ
ನೆಱೆಯಿಂದ್ರಿಯಮಂ ಗೆಲ್ಲದು
ದಱಂದಮಕ್ಕುಂ ಜನಕ್ಕೆ ಪೀನಂ ಬೆಸನಂ ೧೬೫

ಬೆಳೆದೊಱಗಿದ ಕಟಿವೆಗಳುಂ
ತಿಳಿಗೊಳದೊಳಗಲರ್ದ ಸರಸಿಜಪ್ರತತಿಗಳುಂ
ಕಳಹಂಸೆಗಳ್ಗೆ ಕೋಮಳ
ವಿಳಾಸವತಿಗಳ್ಗೆ ಪಡೆಗುವೊಸಗೆಯನಾಗಳ್ ೧೬೬

ತಿಳಿಗೊಳಗಳುಮಮಳಾಶಾ
ವಳಯಮುಮತಿಧವಳ ಜಳದ ಜಳಧರಪಥಮುಂ
ತೊಳಪೆಳವೆಱೆಯುಂ ಕಳೆದುವು
ಮುಳಿಸಂ ಕಾಮಿಗಳ ಚಿತ್ತದೊಳ್ ನೆಲಸಿದುದಂ ೧೬೭

(೨೬-ವಿಭಾವನಾ)

ಕಾರಣಮನಱಪೆ ನಿಜ ಸಂ
ಸ್ಕಾರಗುಣಾತಿಶಯದೊಳ್ ತಗುಳ್ಚುವುದಕ್ಕುಂ
ಸಾರಂ ವಿಭಾವನಾಳಂ
ಕಾರಂ ಮತ್ತದಱ ಲಕ್ಷ್ಯಮೀ ತೆಱನಕ್ಕುಂ ೧೬೮

ಸಮಱುಗೆಯಿಲ್ಲದ [ಮುಱಿ]ಕಮು
ಮಮರ್ದಿರೆ ಕೆಯ್ಗ್ಗಯ್ಯದೊಪ್ಪುವಂದಮುಮವಳಾ
ನೆವಮಿಲ್ಲದ ದರಹಸಮುಂ
ಸಮುದಾಲಸಲಲಿತಗಮನಮುಂ ಸೊಗಯಿಸುಗುಂ ೧೬೯

(೨೭-ಲೇಶ)

ಗುಣದೊಳಮಱಿಪುವುದಿನಿಸವ
ಗುಣಮುಂ ದೋಷದೊಳಮಿನಿಸು ಗುಣಮುಂ ತಂದಿ
ರ್ದೆಣಿಸುವುದು ಲೇಶಮೆಂಬುದು
ಗಣಿದದಿನಿಂತಕ್ಕುಮುದಱ ಲಕ್ಷ್ಯವಿಭಾಗಂ ೧೭೦

ಮಾನಿಯುಮುದಾರಚರಿತನು
ಮಾನತರಿಪುನಿಕರನುಂ ಮನಸ್ವಿಯುಮಂತಾ
ಮಾನಸರನಾರುಮಂ ಮನ
ಕೇನುಂ ಮುಟ್ಟಲ್ಲದಂತು ಬಗೆವುದು ದೋಷಂ ೧೭೧

ಕುಲಜನುಮಲ್ಲಂ ನಣ್ಪಿನ
ಬಲಮುಂ ತನಗಿಲ್ಲ ಕಣ್ಗವೇಳಿದನಾರೊಳ್
ನೆಲಸಿರನೆಲ್ಲಿಯುಮ[ವನ]ಂ
ಚಲವೆಂದುಂ ಪತ್ತುವಿಡದದೊಂದುಂಟು ಗುಣಂ ೧೭೨

(೨೮-ಉದಾತ್ತ)

ಮಿಗೆ ಮನದ ಪೆಂಪುಮಂ ಕೈ
ಮಿಗೆ ವಿಭವದ ಪೆಂಪುಮಂ ವಿಶೇಷಿಸಿ ಪೇೞಲ್
ಬಗೆವುದುದಾತ್ತಾಲಂಕಾ
ರ ಗುಣೋದಯಮುದಱದಿಂತು ಸದುದಾಹರಣಂ ೧೭೩

ಚಲದೆಡೆಗೆ ಪಿರಿದು ರಜಮುಂ
ನೆಲನುಂ ಪ್ರಿಯದೆಡೆಗೆ ಕಿಱಿದು ಕೊಳ[ನು]ಂ ಕಡಲುಂ
ಚಲಮುಂ ಪ್ರಿಯಮುಂ ಬೞಿ ಸಮ
ಬಲಮಾಗಿರೆ ನೆಗೞ್ವ ಬಗೆಗೆ ಕಿಱಿದೇಂ ಪಿರಿದೇಂ ೧೭೪

ಅೞಿದೞಿಪಿ ಬೞಿಯನುೞಿಯದೆ
ಪೞಿವರುಮಂ ತವಿಸಿ ಕೞಿಯದುೞಿವಳನಾದಂ
ಪೞಿಕೆಯ್ದು ತೊೞ್ತುನುೞಿದಂ
ತುೞಿದ ಮಹಾಪುರುಷರಱಿಯದುೞಿದರೆ ಸಿರಿಯಂ ೧೭೫

ಕಸವರಮೆಂಬುದು ನೆಱೆ ಸೈ
ರಿಸಲಾರ್ಪೊಡೆ ಪರವಿಚಾರಮುಮಂ ಧರ್ಮಮುಮಂ
ಕಸವೇಂ ಕಸವರಮೇನು
ಬ್ಬಸಮಂ ಬಸಮಲ್ಲದಿರ್ದು ಮಾಡುವರೆಲ್ಲಂ ೧೭೬

ಪಾೞಿ ನಿಲೆ ನೆಗೞಿ ಬಾೞ್ವುದು
ಬಾೞೆಂಬುದು ನಿಕ್ಕುವಂ ಗುಣಗ್ರಾಮಣಿಗಳ್
ಪಾೞಾಗೆ ತೆಗೞೆ ಬಾೞ್ವಾ
ಬಾೞೇನಾಚಂದ್ರತಾರಮೋ ಮಾನಸರಾ ೧೭೭

ಪೊಲ್ಲಮೆಯುಂ ಗುಣಮುಂ ತಮ
ಗಲ್ಲದೆ ಪುದುವಲ್ಲ ಮತ್ತೆ ತನಗುಂ ಪೆಱರ್ಗಂ
ನಿಲ್ಲದೆ ಜನಮುಂತಾಗಿಯು
ಮೆಲ್ಲಂ ಮುನಿಸೊಸಗೆವೆರಸು ಪೞಿಗುಂ ಪೊಗೞ್ಗಂ ೧೭೮

ಮಿಗೆ ಪೞೞವರೆನ್ನನೆನ್ನದೆ
ಪೊಗೞ್ವರ್ ನೆರೆದೆಲ್ಲರೆನ್ನನೆನ್ನದೆ ತನ್ನೊಳ್
ಬಗೆದುಭಯಲೋಕಹಿತದೊಳ್
ನೆಗೞೆ ಜನಂ ಪೞಗೆ ಪೊಗೞ್ಗೆ ತನಗೇನದಱೊಳ್ ೧೭೯

ಪ್ರಣತಾರಿ[ಘ]ಟಿತಮುಕ್ತಾ
[ಮಣಿಗಣಮು]ತ್ತಂಸದಿಂ ಕಟಿಲ್ದುದುರೆ ಸಭಾಂ
ಗಣಮೊಪ್ಪೆ ವೀರನಾರಾ
ಯಣನಾ ತಾರಕಿತನಭದವೋಲ್ ಸೊಗಯಿಸುಗುಂ ೧೮೦

ಪರಚಕ್ರಭೂಪರಟ್ಟಿದ
ಕರಿಗಳ್ ಬಿಡುತಪ್ಪ ಮದದ ಪೊನಲಿಂದೆತ್ತಂ
ನರಲೋಕಚಂದ್ರನಾ ಮಂ
ದಿರದೊಳಗೊಳಗೆಲ್ಲ ಕಾಲಮುಂ ಕೆಸಱಿಕ್ಕುಂ ೧೮೧

(೨೯-ಅಪಹ್ನುತಿ)

ಅತಿಶಯಿತ ವಸ್ತುವಿಷಯ
ಪ್ರತೀತಿಯಂ ಮಱಸಿ ನಿಱೂಸಿ ಪೇೞ್ವುದು ಪೆಱತಂ
ಸತತಮುಪಹ್ನುತಿ ಸದಳಂ
ಕೃತಿ ಮತ್ತಿಂತಕ್ಕುಮದಱ ಲಕ್ಷ್ಯವಿಕಲ್ಪಂ ೧೮೨

ಅಮೃತಮಯಕಿರಣನೆಂಬುದು
ಮಮರದು ಶಿಶಿರಾಂಶುವೆಂಬುದುಂ ಶಶಿಗೆಂದುಂ
ಸಮನಿಸಿ ವಿಷಕಿರಣನುಮನ
ಲಮರೀಚಿಯುಮೆಂದೆನಲ್ಕೆ ಮೋಹಾಪೋಹಂ
(ಮೋಹಾಪೋಹಂ) ೧೮೩

ಕುಸುಮಂಗಳೆಂಬ ಮಾತದು
ಪುಸಿ ದಹನಮಯಂಗಳಂಬುಗಳ್ ಮನಸಿಜನಾ
ಜಸಮುೞಿಯೆ ಸುಡುವು[ವೆ]ರ್ದೆಯಂ
ಬಿಸಿಯುವಿವೆಂದಿಂತೆ ಪೇೞ್ ಧರ್ಮಾಪೋಹಂ ೧೮೪

ಸ್ಮರನಸ್ತ್ರಸಮಿತಿಯದು ನಿ
ರ್ಭರಮಂಗಮನುರ್ಚಿ ಪೋಗೆಯುಂ ಪೋಬೞಿಯಂ
ದೊರೆಕೊಳಿಸಲಾಗದದಱಿಂ
ಶರತತಿಯಲ್ತೆಂಬುದಿಂತು ಧರ್ಮಾಪೋಹಂ
(ಧರ್ಮಾಪೋಹಂ) ೧೮೫

ಸ್ಮರನೈದಂಬುಗಳಲ್ಲಿವು
ಶರಕೋಟಿಗಳಲ್ಲದಾಗಳಿಂತೀ ಲೋಕಾಂ
ತರವರ್ತಿ ವಿರಹಿಗಣಮಂ
ನಿರುತಂ ಮರ್ದಿಸುವುವವೆನೆ ಸುಗುಣಾಪೋಹಂ
(ಸುಗುಣಾಪೋಹಂ) ೧೮೬

(೩೦–ರಸವದಲಂಕಾರಂ)

ನವವಿಧರಸಂಗಳಂ ಮನ
ಕೆ ವರೆ ನಿರೂಪಿಸುವ ವಚನವಿರಚನೆ ರಸವ[ದ್
ವಿವಿ]ಧಾಳಂಕಾರಂ ಕುಱಿ
ತು ವಿಕಲ್ಪಿಸಿ ತೋರ್ಪೆನದಱ ಲಕ್ಷ್ಯಕ್ರಮಮಂ ೧೮೭

ವೀರಾದ್ಭುತ ಕರುಣಾ ಶೃಂ
ಗಾರ ಭಯಾನಕ ಸರೌದ್ರ ಬೀಭತ್ಸ ಮಹಾ
ಸಾರತರ ಹಾಸ್ಯ ಶಾಂತಾ
ಧಾರಂ ನವವಿಧವಿಕಲ್ಪಮಾ ರಸಮಾರ್ಗಂ ೧೮೮

ರಾವಣನಂ ಕೊಂದು ಜಯ
ಶ್ರೀವಧುವಂ ತಾಳ್ದಿ ಮುಯ್ವಿನೊಳ್ ವರ ಸೀತಾ
ದೇವತೆಯಂ ತರ್ಪನ್ನೆಗ
ವೋವದೆ ಪುರುಷವ್ರತೋಚಿತಂ ವೀರರಸಂ
(ವೀರ) ೧೮೯

ಜಲನಿಧಿಯಂ ಪಾಯ್ದೊರ್ವನೆ
ನಿಲಿಕಿ ದಶಾನನನ ಪೊಲನಾ ಲಂಕೆಯನಾ
ಕುಲಮಿಲ್ಲದಿಱಿದು ನಿಂದಂ
ಕಲಿಯಾ[ದ]ಂ ಬಗೆದು ನೋಟ್ಪೊಡದ್ಭುತಮಾದಂ
(ಅದ್ಭುತ) ೧೯೦

ಕರೆಕರೆದು ಮನೋಧೃತಿಯಂ
ನೆರೆವಾಸೆಯೊಳಿರ್ದಳಲ್ಲದುೞಿದೊಡೆ ನಿನ್ನಾ
ವಿರಹಾನಳನಾ ತಾಪದೆ
ಕರಗುಗುಮಿನ್ನಾಕೆಗಿನಿಸು ಕರುಣಿಸು ಮನದೊಳ್
(ಕರುಣಾ) ೧೯೧

ಪುಳಕಿತ ಕಪೋಳಫಳಕಂ
ವಿಳಸಿತ ಮದಿರಾರುಣೇಕ್ಷಣಂ ಸ್ಫುರಿತೋಷ್ಠಂ
ಕೆಳದೀ ನಿನ್ನ ಮುಖಂ ತಳ
ಮಳಗೊಳಿಸುಗುಮಿಂತು ನಿಭೃತ ಶೃಂಗಾರರಸಂ
(ಶೃಂಗಾರ) ೧೯೨

ತಾಳತರುವಿತತಿಯೊಳ್ ಬೇ
ತಾಳಂಗಳ್ ಮೊಱೆದು ತೆಱೆದು ಬಾಯ್ಗಳನಾ ಪಾ
ತಾಳಬಿಲಂಗಳವೋಲ್ ತಳ
ತಾಳಲಯಕ್ರಮದೆ ಕುಣಿಯೆ ಭಯಮಯನಾದಂ
(ಭಯಾನಕ) ೧೯೩

ಕೊಂದು ಜಟಾಯುವನಾತಂ
ಮುಂದಿಟ್ಟಾ ಜನಕಸುತೆಯನೊಯ್ವಂ ಮತ್ತಾ
ಪಂದೆಯನಂತಕಮುಖದೊಳ್
ತಂದಿಟ್ಟಂದಲ್ಲದುಱುಗುಮೇ ರೌದ್ರರಸಂ

(ರೌದ್ರ) ೧೯೪

ನವವಿವರಾವೃತ ಪೂ[ತಿ]
ದ್ರವ ತ್ವಗಾವೃತವಿಮಿಶ್ರಮಾಂಸೋಪಚಿತಮ
ಧ್ರುವಮುಸುಚಿತ್ರಭ್ರುವಿಃ[ತಾ]
[ಸ್ಥಿ]ವಹಂ ಮೆಯ್ ಬಗೆವೊಡಿಂತು ಕಿಸುಗುಳಮಾದಂ

(ಬೀಭತ್ಸ) ೧೯೫

ಪರಪುರುಷ ಸೇವನಾಕೃತ
ಸುರತವಿಕಾರಂಗಳೆಲ್ಲಮಂ ನಿಜಪತಿಯೊಳ್
ನೆರೆದಾಗಳೆ ಮಱೆಯಲ್ಬಗೆ
ದಿರವದು ನಗಿಸಿತ್ತು ಪೀನಮಭಿಸಾರಿಕೆಯಾ

(ಹಾಸ್ಯ) ೧೯೬

[ಮಿಗೆ ರ]ಣದೊಳ್ ಪರಿಚಿತ[ಮಾ]
ದ್ವಿಗುಣಮದೋರಂತೆ ಮಟ್ಟಮಿರ್ದುದು ಮತ್ತಂ
ವಿಗತವಿಕಾರಾಕಾರಂ
ಸೊಗಯಿಸುಗುಂ ನಿನ್ನ ರೂಪು ಶಾಂತಾಧಾರಂ

(ಶಾಂತ) ೧೯೭

(೩೧-ಊರ್ಜಿತ)

ಆರೂಢನಿಜಮನೋಹಂ
ಕಾರೋತ್ಕರ್ಷಪ್ರಕಾಶಮೂರ್ಜಿತ ಸದಳಂ
ಕಾರಂ ತದಿ[ೕಯ ವಸ್ತು]ವಿ
ಚಾರಮನೀ ತೆಱದಿನಱಿದುಕೊಳ್ಗೆ ಕವೀಶರ್ ೧೯೮

ಕೊಲ್ಲೆಂ ಬಿಸುಡಾಯುಧಮಂ
ಪುಲ್ಲಂ ಕರ್ಚೇಱು ಪುತ್ತ್ರನಡಿಗೆಱಗೆನ್ನಾ
ನಿಲ್ಲದೆ ತೊಲಗಿದಿರಿಂದಂ
ತಲ್ಲದೊಡೆೞ್ದರ್ದು ಕೈದುಗೆಯ್ ನೀನೀಗಳ್ ೧೯೯

(೩೨-ವ್ಯಾವೃತ್ತಿ)

ಮುಗುೞ್ದುಂ ಮ[ಗುೞ್ದಾ]ಮಾತಂ
ನೆಗೞ್ದಿರೆ ಪೇೞ್ದಾಗಳಕ್ಕುಮಾ ವ್ಯಾವೃತ್ತಿ
ಸ್ವಗತಾಳಂಕಾರಂ ಬಗೆ
ಗಗಾಧಮನರದಱ ತೆಱನನೀ ಕುಱುಪುಗಳಿಂ ೨೦೦

ವಿರಹಂ ಪರಿತಾಪಮನಾ
ಪರಿತಾಪಮುಮಳಿಪನಳಿಪು[ಮಾ]ವಲ್ಲಭನೊಳ್
[ನೆರೆ]ದಿರ್ಪ ಬಗೆಯನಾ ನೆರೆ
ದಿರವುಂ ಸುರತಾನುರಾಗಮುಂ ಪೆರ್ಚಿಸುಗುಂ ೨೦೧

ನುಡಿಯುಂ ತಗುಳ್ಚಿ ನೋಟಂ
ನುಡಿ ಪರಿಚಯಮುಂ ತಗುಳ್ಚಿ ಪರಿಚಯಮಳಿಪಂ
ತಡೆಯದೆ ತಗುಳ್ಚಿ ಮನದಳಿ
ಪೊಡಗೂ[ಡಿದು]ದಂ ತಗುಳ್ಚುಗುಂ ಕಾಮಿಗಳಾ ೨೦೨

(೩೩-ಪ್ರಿಯತರ)

ಪ್ರಿಯಕುಶಲಪೂರ್ವಕೋಚಿತ
ನಯವಿನಯೋದಾರ ರುಚಿರ ವಚನಪ್ರಾಯಂ
ಪ್ರಿಯತರಮೆಂಬುದು ಸಕಳ
ಕ್ರಿಯಾನುಗಮಿತಾರ್ಥಮಿಂತು[ಟಿ]ದುದಾಹರಣಂ ೨೦೩

ಗು[ರುಜನ]ದ ಪರಕೆ[ಯು]ಂ ಬಂ
ಧುರ ಪುಣ್ಯಫಳಾನುಬಂಧ[ಮು]ಂ ನೆರೆದೆನ್ನೊಳ್
ಪರಮಾನುಭಾವಭರಮುಂ
ದೊರೆಕೊಂ[ಡು]ವ[ವಿ]ಂದು ಬರವಿನೊಳ್ ನಿಮ್ಮಡಿಯಾ ೨೦೪

(೩೪-ಆಶೀರಲಂಕಾರಂ)

ದೊರೆಕೊಂಡು ಮನದ ಬಗೆಯಂ
ಪಿರಿದಾಗಿರೆ ಪಿರಿಯರೊಸಗೆಯಂ [ಪೇೞ್ವೊಡ]ದುಂ
ಪರಮಾಶೀರರ್ಥಾಳಂ
ಕರಣಾಂತರಮುದಱ ಲಕ್ಷ್ಯಮೀ ತೆಱನಕ್ಕುಂ ೨೦೫

ಆಯುಂ ಶ್ರೀಯುಂ ವಿಜಯಮು
ಮಾಯತಿಯುಂ ನೃಪತಿ ನಿನಗೆ ನಿಜಸಂತತಿಯುಂ
ನ್ಯಾಯದೆ ಪೆರ್ಚುವುದಕ್ಕೀ
ತೋಯಧಿಧರ[ಣೀಧ]ರಾಧರಸ್ಥಿತಿವರೆಗಂ ೨೦೬

(೩೫-ಭಾವಿಕಾಲಂಕಾರಂ)
(ಗೀತಿಕೆ)

ಭಾವಮೆಂಬುದಕ್ಕುಂ ಕವಿಗಳಾ
ಭಾವಿಸಿ ಮನದ ಬಗೆಯೊಂದಿದರ್ಥಂ
ಕೇವಲಮುದಱೊ[ಳ]ಳಂಕೃತಿ
ಭಾವಿಕಮೆಂಬುದಕ್ಕುಂ ನೃಪತುಂಗದೇವಮತದಿಂ ೨೦೭

ಧ್ವನಿಯೆಂಬುದಳಂಕಾರಂ
ಧ್ವನಿಯಿಸುಗುಂ ಶಬ್ದದಿಂದಮರ್ಥದೆ ದೂಷ್ಯಂ
ನೆನೆವುದಿದನಿಂತು ಕಮಳದೊ
ಳನಿಮಿಷಯುಗಮೊಪ್ಪಿ ತೋರ್ಪುದಿಂತಿದು ಚೋದ್ಯಂ ೨೦೮

(ವೃತ್ತ)

ಅತಿಶಯಮಿತಿಹಾಸೋಪಾಶ್ರಯಂ ಮೇಣ್ ಕಥಾವಿ
ಶ್ರುತಚತುರವಿ[ಕಾ]ಶೋತ್ಪಾದಿತಾರ್ಥೋತ್ಕರಂ ಮೇ
ಣತಿಕುಶಲ[ಸ]ಲೀಲಾಚಾರಲೋಕೋಪಕಾರೋ
ದಿತ ಪರಮಗುಣ್ಯೈಕೋದಾರಧೀರಾಧಿಕಾರಂ ೨೦೯

ಪರಮಸುಖಪದಶ್ರೀಧರ್ಮಕಾಮಾರ್ಥಮೋಕ್ಷ
ಸ್ಥಿರವಿಷಯ ವಿಶೇಷಾಖ್ಯಾನ ವಿಖ್ಯಾತ ತತ್ತ್ವಂ
ಪುರ ಜನಪದ ಶೈಲಾದಿತ್ಯ ಚಂದ್ರೋದಯಾಸ್ತಾಂ
ತರ ಸಮೃಗಗಣವ್ಯಾವರ್ಣನಾನಿರ್ಣಯಾರ್ಥಂ ೨೧೦

ಸಮುದಿತ ಕುಸುಮಾಮೋದೋದಯೋದ್ಯಾನಲೀಲಾ
ಕ್ರಮವಿಹಿತ ಜಲಕ್ರೀಡಾವಿನೋದಾದಿನೀತಂ
ಪ್ರಮದಮದನಮಾದ್ಯದ್ಯೌವನೋದ್ಯಾನ ರಾಮಂ
ರಮಣರಣಿ[ತ]ಗೋಷ್ಠೀಬಂಧ ಸಂಧಿಪ್ರಬಂಧಂ ೨೧೧

ವಿವಿಧ ವಿಭವ ಶೋಭಾರಂಭ ಲಂಭಪ್ರಲಂಭೋ
ದ್ಭವ ವಿಹಿತ ವಿವಾಹೋತ್ಸಾಹ ಸಾಕಲ್ಯ ಕಲ್ಪಂ
ಪ್ರವರ ನೃಪಕುಮಾರಾತ್ಮೋದಯಾ[ದಿ] ಪ್ರಮೋದಾ
ಸವಸಮುದಿತ ಸೇವಾರಾತಿ ವೃತ್ತಾಂತ ವೃತ್ತಂ ೨೧೨

ನಯವಿನಿಮಯ ನಾನಾ ಮಂತ್ರ ದೂತ ಪ್ರಯಾಣಾ
ಕ್ಷಯ ಸಮಯ ವಿಳಾಸೋಲ್ಲಾಸಿ ಸಂಗ್ರಾಮಿತಾಂಗಂ
ಭಯವಿರಹಿತ ವೀರ್ಯೌದಾರ್ಯ ಗಂಭೀರ ಕಾರ್ಯಾ
ಶ್ರಯ ವಿಶದಗುಣಶ್ರೀನಾಯಕೋತ್ಕರ್ಷವೇದ್ಯಂ ೨೧೩

ವಿಳಸಿತ ಸದಳಂಕಾರಾದಿ ಸಂಸಾಧಿತಾರ್ಥಂ
ಕುಳವಿದಿತಪದೋದ್ಯತ್ಕೋಮಳಾಳಾಪಶೀಲಂ
ಸುಳಲಿತಗುಣ ನಾನಾ ವೃತ್ತ ಜಾತಿಪ್ರವೃತ್ತಾ
ಸ್ಖಳಿತರಸವಿಶೇಷೋಪಾಶ್ರಯ ಶ್ರೀನಿವೇಶಂ ೨೧೪

ನಯವಿದುದಿತಯುಕ್ತಿವ್ಯಕ್ತಿಲೋಕ ಪ್ರತೀತ್ಯಾ
ಶ್ರಯ ಸಕಳಕಳಾಲೀಲಾಕರಾಲ್ಪೋಪಜಲ್ಪಂ
ನಿಯತಸಮಯಸಾರಾಸಾಧನೀಯಾದಿತಾರಾ
ನ್ವಯಪರಮ ತಪೋನುಷ್ಠಾನನಿಷ್ಠಾರ್ಥಸಿದ್ಧಂ ೨೧೫

ವಿಗತಮಳಮುಪಾತ್ತಾರಾತಿ[ಸಾ]ರ್ಥಾರ್ಥವೀರಂ
ಸ್ಥಗಿತಮಮಿತ ನಾನಾ ಶಬ್ದವೀಚಿ ಪ್ರ[ಪಂ]ಚಂ
ನಿಕಧಿತಗುಣರತ್ನೈಕಾಕ[ರಂ] ಸಾಗರಂಬೋಲ್
ಸೊಗಯಿಸಿ ಧರಣೀ[ಚಕ್ರಾಂಬ]ರಾಕ್ರಾಂತಮಕ್ಕುಂ ೨೧೬

(ಗೀತಿಕೆ)

ಇಂತು ಮಿಕ್ಕ ವರ್ಣನೆಗಳ್
ಸಂತತವೊಂದಾಗಿ ಪೇಟ್ದ ಕಾವ್ಯಂ ಧರೆಯೊಳ್
ಸಂತತಿ ಕೆಡದೆ ನಿಲ್ಕುಮಾಕ
ಲ್ಪಾಂತಂಬರಮಮೋಘವರ್ಷಯಶಂಬೋಲ್ ೨೧೭

(ವೃತ್ತ)

ಸಕಳ ಲೌಕಿಕ ಸಾಮಯಿಕೋರು ವೈ
ದಿಕ ವಿಶೇಷ ವಿವೇಕ ಪರಾಯಣಂ
ಪ್ರಕಟಿತೋಕ್ತಿ ವಿವಿಕ್ತ ಕಳಾಕಳಾ
ಪಕ[ನು]ಪಾಹಿತ ಸಾಹಿತ್ಯವಿದ್ಯೆಯೊಳ್ ೨೧೮

ಅತಿಶಯ ಪ್ರತಿಭಾವಿಭವಂ ಮಹಾ
ಚತುರವೃತ್ತಿ ನಿತಾಂತಮನಾಕುಳಂ
ಪ್ರತಿವಿತರ್ಕಿತ ಲಕ್ಷಣಲಕ್ಷ್ಯ[ನಾ]
ಶ್ರಿತ ಮಹಾನೃಪತುಂಗ ಸಭಾಸದಂ ೨೧೯

ಭಾವಿಸಲ್ ಬಗೆದವಂ ಮಿಗೆ ಜಾಣನಶೇಷ ಭಾ
ಷಾವಿಶೇಷವಿಷಯಾತಿಶಯಾಮಳ ಕೌಶಳಂ
ದೇವತಾಗುರುಗುಣೋದಯ ವೃದ್ಧಜನೋಪಸಂ
ಸೇವನಾಪರನಪಾಕೃತವೈಕೃತಚಾಪಳಂ ೨೨೦

ಪರಮಕಾರುಣಿಕನಪ್ಪನಪಾಕೃತದೋಷನಾ
ದರಮನಾಗಿಸುವನಪ್ಪನಶೇಷಜನಂಗಳೊಳ್
ಪರಗುಣಾಸಹನನಲ್ಲದನಾತ್ಮಗುಣೋದಯಾಂ
ತರಸರೂಪನ[ಖಿಲಾಗಮ]ಪಾರಪರಾಯಣಂ ೨೨೧

ಬಗೆದು ಮೇಣ್ ಪರಮ ಧರ್ಮಮನ[ಱಿ]ಯಿನನ್ವಯ
ಪ್ರಗಣಿತಾಭ್ಯುದಯ ಮೋಕ್ಷಸುಖಾಶ್ರಯ ಹೇತುವಂ
ನೆಗೞೆ ಮೇಣುದಿತ ನಿರ್ಮಳಕೀರ್ತಿವಿತಾನಮಂ
ಜಗದಗಾಧ ವಿವರೋದರ ದೀಪವಿಕಲ್ಪಮಂ ೨೨೨

(ಗೀತಿಕೆ)

ಕೂಡೆ ಪೇೞ್ದ ನುತಕಾವ್ಯಮನಿಂತಭಿಮಾನಿ ತಾಂ ನಿರ
ಗೀಡಿತ ಮಹಾಪುರುಷವ್ರತನಿಶ್ಚಿತಂ
ಕೂಡದಂತೆ ಪೆಱರೊಳ್ ಮೆಚ್ಚಿನೊಳೇತೆಱನಪ್ಪೊಡಂ
ನೋಡದಂ ಕುಱಿತಾವ[ನು]ಮೇನುಮಂ ೨೨೩

(ವೃತ್ತ)

ಅಂತು ಬಿೞ್ದ ತೆಱದಿಂ ವರಗೀತಗುಣೋದಯ್ಯೈ
ಕಾಂತ[ಕಾಂತ]ವಿಷಯಾಶಯರಾಗಿ ನಿರಾಕುಳಂ
ಸಂತತಂ ನುಡಿಗಳೊಳ್ ಬಗೆ ಪೆರ್ಚಿರೆ ಪೇೞ್ವವರ್
ಸಂತಸಂಬಡಿಸುವರ್ ನೃಪತುಂಗಸಭಾ[ಸದರ್] ೨೨೪

(ಗೀತಿಕೆ)

ಪಾರ್ಥಿವಲೋಕನಪ್ಪನೆಂದುಂ ಕವಿ ವರ್ಣಕುಂ
[ಸಾ]ರ್ಥಚಯಂ ನುತಸರಸ್ವತೀ
ತೀರ್ಥಾವತಾರಮಾರ್ಗನೆಸಕಂ
[ಸಾರ್ಥಮಪ್ಪಂತು ಚಿಂತಿತಕಾರ್ಯತತ್ಪರಂ] ೨೨೫

(ವೃತ್ತ)

ಕುಲಜಾತಿದೇಶವಿಶದಂ ವಿನಯೋಪಚಾರಂ
ನಿಲಯೈಕವೃತ್ತಿ[ಕೃತಿಬಿಂಬಿತ ಸತ್ತ್ವಸಾರಂ]
ವಿಲಸದ್ಗುಣಾಗುಣ ವಿವರ್ತಿ ಗುರೂಪದೇಶಾ
ಮಲಿನಾವಬೋಧ ವಿದಿತಾಖಿಳಚೋದ್ಯ[ವೃಂದಂ] ೨೨೬

ಮದಮಾನಮಾಯಭಯಲೋಭವಿಷಾದಹರ್ಷಾ
ಭ್ಯುದಿತಾಂತರಂಗರಿಪುವರ್ಗ ಜಯಾವತಾರಂ
ವಿದಿತ[ಸ್ವಧೀ]ವಿಭವ ಭಾವಿತ ವಿಶ್ವಲೋಕಂ
ಬುಧಗೋರ್ತು ಕಾವನನುನೀತ ಗೃಹೀತವಾಕ್ಯಂ ೨೨೭

ಪರಮಾನುಭಾವನಭಿಮಾನಿ ವಿನೋದಶೀಲಂ
ಪರನತ್ಯುದಾರಚರಿತೋದಯನೇಕರೂ[ಪ]ಂ
ಸರಸಾಶ್ರಯಪ್ರವರಮೂರ್ತಿ ಪರೋ[ಪಕಾರ]ಂ
ನಿರತಂ ಗುಣೋದಯನಕಾರಣಧುರ್ಯಮಿತ್ರಂ ೨೨೮

ಅಸಹಾಯಸಾಹಸ ವಿನೋದಿ ವಿವಿಕ್ತಚಿತ್ರ
ಪ್ರಸಹ ಪ್ರಕಾಶಿತ ಮಹೋದಯತತ್ತ್ವಸತ್ತ್ವಂ
ವ್ಯಸನವ್ಯಪೇತ[ಸು]ಪನೀತ ಕಲಾಕಲಾಪಂ
ಶಶಿಖಂಡ ನಿರ್ಮಲಯಶೋವಿವಿಧಾವತಂಸಂ ೨೨೯

ಪರಿವೃತ ನೃಪತುಂಗದೇವಮಾರ್ಗಂ
ತರಗತಬೋಧ ವಿಶೇಷಯಾನಪಾತ್ರಂ
ಪರಮಗುಣ ಪರೀತಕಾವ್ಯರತ್ನಾ
ಕರದುರುಪಾರಮನೆಯ್ದುಗುಂ ಮಹಾತ್ಮಂ ೨೩೦

(ವೃತ್ತ)

ನಿರವದ್ಯಾನ್ವಯ[ಮು]ದ್ಧಮುದ್ಧತವ[ಹಾಕ್ಷೀ]ರಾಬ್ಧಿಡಿಂಡೀರ ಪಾಂ
ಡುರಮಾಕ್ರಾಂತ[ಸು]ಶೈಲ ಸಾಗರಧರಾಶಾಚಕ್ರವಾಳಾಂಬರಂ
ಪರಮ ಶ್ರೀವಿಜಯಪ್ರಭೂತಿಜ ಯಶ[ಂ]ಸ್ತ್ರೀಬಾಲವೃದ್ಧಾಹಿತಂ
ಪರಮಾನಂದಿತಲೋಕಮೊಪ್ಪೆ ನೆಲೆಗೊಳ್ಗಾ ಚಂದ್ರತಾರಂಬರಂ ೨೩೧

ಇದು ಪರಮ ಸರಸ್ವತೀ ತೀರ್ಥಾವತಾರ
ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗದೊಳ್
ಅರ್ಥಾಲಂಕಾರ ಪ್ರಕರಣಂ
ತೃತೀಯ ಪರಿಚ್ಛೇದಂ

ಕವಿರಾಜಮಾರ್ಗಾಲಂಕಾರಂ

ಸಮಾಪ್ತಂ.

ಅನುಬಂಧಗಳು

ಅನುಬಂಧ – ೧

ಪ್ರಾಸವಿಚಾರ: ಅಧಿಕ ಪಾಠ

(ಕಂದ)

ದ್ವಿಪ್ರಾಸಂ ಸುಭಗ ದ್ವಂ
ದ್ವಪ್ರಾಸಂ ಕಾವ್ಯರಚನೆಗುಚಿತ[ಮೆನಿ]ಪ್ಪಾ
ತ್ರಿಪ್ರಾಸಂ[ಸಲೆಯಂತಾ
ದಿಪ್ರಾಸಂ] ಬೇಱೆ ನಾಲ್ಕು ತೆಱನಾಗಿರ್ಕ್ಕುಂ ೧

ಅರಸರೊಳಿಲೆ ನೀಂ ಸರಸಮ
ನರಸಿಯವೋಲಾಡುತಿರ್ಪೆ ನಿನಗಿದು ಗುಣಮೇ
ಅರಸರ್ ಸರಸಮನಱಿವರೆ
ಸರಸಮನಾಡರಸರಲ್ಲದವರೊಳ್ ಮಗಳೇ ೨

ಒಂದೊಂದಱ ಸೌಂದರ್ಯಮ
ನೊಂದೊಂದೀಕ್ಷಿಸಲೊಡರ್ಚೆ ನಾಸಿಕಮಡ್ಡಂ
ಬಂದಂದಮನೀಕ್ಷಿಸಿ ಪೆಱ
ನಿಂ[ದಂ]ದೀಕ್ಷಿಸ[ವು]ವಳ ನಿಡಿಯೆಸಳ್ಗಣ್ಗಳ್ ೩

ನುಡಿಸಿದನೆನ್ನಂ ನಲ್ಲಂ
ಬಿಡಿಸಿದನೆನ್ನಂತರಂಗದನುತಾಪಮನೊ
ಲ್ದುಡಿಸಿದನೊಳ್ಪುಳ್ಪುಡೆಯಂ
ತುಡಿಸಿದನೆನಗಱಿಕೆಯುಪ್ಪ ಮಣಿಭೂಷಣಮಂ ೪

(ಗೀತಿಕೆ)

ತಾರಾಪತಿವತ್ಕೀರ್ತಿವಿಹಾರಾ
[ಹಾರಾ]ಪ್ರಭಯಾ ನಿಜತನುಪೂರಾ
ಪೂರಾಶ್ರಿತ ಹೃತ್ಕ್ಲೇಶ ವಿದೂರಾ
ದೂ[ರಾವೃ]ತಬಲವಿಸ್ತಾರಾ ೫೫

ಇವು ಕ್ರಮದಿಂ ದ್ವಿಪ್ರಾಸ ದ್ವಂದ್ವಪ್ರಾಸ ತ್ರಿಪ್ರಾಸ ಅಂತಾದಿ ಪ್ರಾಸ[ಂಗಳ್]. ಈ ನಾಲ್ಕು ಬೇಱೆ ಅನ್ಯಮಾರ್ಗಲಕ್ಷಣಂ.*

---

* [" ಈ ಪ್ರಾಸ ವಿಚಾರವು ಗ್ರಂಥದ ಉಪಸಂಹಾರಸ್ಥಳದಲ್ಲಿ ಉಕ್ತವಾಗಿರುವುದು ಅಸ್ಥಾನದೋಷಕ್ಕೆ ಗುರಿಯಾಗಿರುವುದು. ಆದುದರಿಂದ ಇದನ್ನು ಆಧುನಿಕರು ಸೇರಿಸಿರಬಹುದು. ಹಾಗಿಲ್ಲದಿದ್ದರೆ ಈ ಭಾಗವು ಎರಡನೆಯ ಪರಿಚ್ಛೇದದ ೪೩ನೆಯ ಕಂದದ ಮುಂದಾದರೂ ಇರಬೇಕು" ಎಂದು ಮುದ್ರಾಸು ಮುದ್ರಣದ ಸಂಪಾದಕರು ಅಭಿಪ್ರಾಯಪಟ್ಟಿದ್ದಾರೆ. ೨ನೆಯ ಪದ್ಯವು ಶಬ್ದಾನುಶಾಸನದಲ್ಲಿಯೂ ೩ನೆಯದು ' ಲೀಲಾವತಿ 'ಯಲ್ಲಿಯೂ ಉದ್ಧೃತವಾಗಿವೆ ಎಂದೂ ಸೂಚಿಸಿದ್ದಾರೆ. ಇದು ವಿಚಾರಣೀಯವಾದ್ದರಿಂದ, ನಾವು ಈ ಪದ್ಯಗಳನ್ನು ಅನುಬಂಧವಾಗಿ ಸೇರಿಸಿ ಕೊಟ್ಟಿದ್ದೇವೆ. – ಸಂ]

ಅನುಬಂಧ – ೨

ಟಿಪ್ಪಣಿಗಳು

ಪರಿಚ್ಛೇದ ೧

ಪದ್ಯ ೧–೨ : ಈ ಎರಡು ಪದ್ಯಗಳನ್ನೂ ಒಟ್ಟಿಗೆ ಅನ್ವಯಿಸಿಕೊಂಡು ಅರ್ಥ ಮಾಡಿಕೊಳ್ಳಬೇಕು. ಅನ್ವಯಕ್ರಮ : ಶ್ರೀ . . . ಕಾಂಡಪಟದಂತಿರೆ, ಸಂಪ್ರೀತಿಯಿಂ, ಆವನನ್, ಅಗಲಳ್, ಆ ನೃಪತುಂಗಂ, **ನೀತಿ ನಿರಂತರಂ, ಉದಾರಂ, ಕೃತಕೃತ್ಯಮಲ್ಲಂ, ಅಪ್ರತಿಹತ ವಿಕ್ರಮಂ, ವೀರನಾರಾಯಣನಪ್ಪ ಅತಿಶಯಧವಳಂ,** ಒಸೆದು, ನಮಗೆ, ಅತರ್ಕಿತೋಪಸ್ಥಿತ ಪ್ರತಾಪೋದಯಮಂ, ಈಗೆ.

ಈ ಪದ್ಯಗಳಲ್ಲಿ ಕವಿ ನಾರಾಯಣನಿಗೂ ನೃಪತುಂಗನಿಗೂ ಅಭೇದ ವನ್ನು ಕಲ್ಪಿಸಿ ದೇವತಾಸ್ತೋತ್ರವನ್ನೂ ಪ್ರಭುಪ್ರಶಂಸೆಯನ್ನೂ ಮಾಡಿ ದ್ದಾನೆ. ರಾಷ್ಟ್ರಕೂಟವಂಶದ ರಾಜರು ವಿಷ್ಣುಭಕ್ತರು. ವೈದಿಕ ಮತಾನುಯಾಯಿಯಾಗಿದ್ದ ನೃಪತುಂಗನು ಜೈನಮತಾವಲಂಬಿ ಯಾದನೆಂದು ಬಹುಮಂದಿ ವಿದ್ವಾಂಸರ ಅಭಿಪ್ರಾಯ. ಕವಿರಾಜ ಮಾರ್ಗದ ರಚನೆಯ ಕಾಲದಲ್ಲಿಯಂತೂ ನೃಪತುಂಗನು ಇನ್ನೂ ವೈದಿಕ ಮತಸ್ಥನಾಗಿಯೆ ಇದ್ದನೆಂದು ಈ ಪದ್ಯಗಳಿಂದ ಅನುಮಾನಿಸ ಬಹುದಾಗಿದೆ.

ಮೇಲೆ ನೃಪತುಂಗನಿಗೆ ಹೇಳಿರುವ ವಿಶೇಷಣಗಳೆಲ್ಲವೂ ಆತನ ಬಿರುದುಗಳು.

ಕಾಂಡಪಟ = ತೆರೆ.

ಪದ್ಯ ೩ : ಇದು ದಂಡಿಯ 'ಕಾವ್ಯದರ್ಶ'ದ ಶ್ಲೋಕದ ಭಾವಾನುವಾದ. ಆ ಶ್ಲೋಕ ಹೀಗಿದೆ :

ಚತುರ್ಮುಖ ಮುಖಾಂಭೋಜವನಹಂಸವಧೂರ್ಮಮ |
ಮಾನಸೇ ರಮತಾಂ ನಿತ್ಯಂ ಸರ್ವಶುಕ್ಲಾ ಸರಸ್ವತೀ ||

(ಚತುರ್ಮುಖನಾದ ಬ್ರಹ್ಮನ ಮುಖಕಮಲವನದ ಹೆಣ್ಣು ಹಂಸವೂ ಸರ್ವಧವಳವರ್ಣೆಯೂ ಆದ ಸರಸ್ವತಿ ನನ್ನ ಮನಸ್ಸಿನಲ್ಲಿ ನಿತ್ಯವೂ ನಲಿಯಲಿ.)

ಇಲ್ಲಿ, ಕವಿರಾಜಮಾರ್ಗಕಾರನು ಬ್ರಹ್ಮಪರವಾದ ಪದಪುಂಜವನ್ನು ಬಿಟ್ಟುಬಿಟ್ಟಿರುವುದನ್ನು ಗಮನಿಸಬೇಕು. ಮಂಗಲಾಚರಣದ ಮೊದಲ ಪದ್ಯಗಳಲ್ಲಿ ಆಶ್ರಯದಾತನಾದ ನೃಪತುಂಗನ ಪ್ರೀತ್ಯರ್ಥವಾಗಿ ವಿಷ್ಣುಸ್ತುತಿಯನ್ನು ಮಾಡಿದ್ದರೂ, ತಾನು ಜೈನನಾದ್ದರಿಂದ ಸರಸ್ವತೀ ಸ್ವರೂಪವರ್ಣನೆಯಲ್ಲಿ ವೈದಿಕ ಕಲ್ಪನೆಯ ಅಂಶವನ್ನು ಕಳೆದುಹಾಕಿದ್ದಾನೆ.

ಅತರ್ಕಿತ + ಉಪಸ್ಥಿತ + ಪ್ರತಾಪೋದಯಮಂ = ನಿಶ್ಚಿತವಾಗಿ ನೆಲಸಿರುವ ಪ್ರತಾಪದ ಏಳ್ಗೆಯನ್ನು.

ಪದ್ಯ ೪ : ನೆಗಲ್ಗುಂ =(ಧಾ., ನೆಗಲ್ = "ಉದ್ಯೋಗ ಖ್ಯಾತಯೋಃ"; ಪ್ರಸಿದ್ಧಿ ; ಚರಿತ್ರಂ–ಶ. ಮ. ದ. ಉಂಟಾಗು, ರಚನೆಗೊಳ್ಳು). ವದನೋದರ = ಬಾಯಿ.

ಪದ್ಯ ೫–೬ : ಈ ಎರಡು ಪದ್ಯಗಳಲ್ಲಿ ಕವಿ ಸ್ವವಿಷಯವನ್ನು ಹೇಳಿಕೊಂಡಿರುವಂತೆ ತೋರುತ್ತದೆ. ತಾನು ಅತಿಶಯಧವಳನ ಸಭಾಸದರ ಮನ್ನಣೆಗೆ ಪಾತ್ರನಾಗುವ ಯೋಗ್ಯತೆಯುಳ್ಳವನೆಂದೂ, ವ್ಯಾಕರಣ ಕಾವ್ಯ ನಾಟಕಾದಿ 'ಅಲಂಕೃತಿ' ಗಳಲ್ಲಿ ಪ್ರವೀಣನಾಗಿರದಿದ್ದರೆ 'ವಿವೇಕ ಬೃಹಸ್ಪತಿ'ಯ (ಎಂದರೆ ನೃಪತುಂಗನ) ನಗರವನ್ನು (ಮಾನ್ಯಖೇಟವನ್ನು) ಪ್ರವೇಶಿಸುತ್ತಿರಲಿಲ್ಲವೆಂದೂ ಹೇಳಿಕೊಂಡಿದ್ದಾನೆ. ಇದರಿಂದ, ಕವಿಗಳೂ ವಿದ್ಯಾವಂತರೂ ರಾಜಾಶ್ರಯವನ್ನು ಬಯಸಿ ಮಾನ್ಯಖೇಟಕ್ಕೆ ಹೋಗುತ್ತಿದ್ದರೆಂದು ಧ್ವನಿತವಾಗುತ್ತದೆ.

ಶ್ರುತ = ಜ್ಞಾನ, ಪಾಂಡಿತ್ಯ. ಲೋಕಕಲೆ = ವ್ಯಾವಹಾರಿಕ ವಿದ್ಯೆ. ಸಮಯ = ಸಿದ್ಧಾಂತತತ್ತ್ವ (ಉದಾ., ಜಿನಸಮಯ), ಅಳಂಕೃತಿ = (ಅಲಂಕೃತಿ: ಇಂಥಲ್ಲೆಲ್ಲ ಸಾಮಾನ್ಯವಾಗಿ ಮೂಲ ಪ್ರತಿಗಳಲ್ಲಿ

ಇರುವಂತೆ 'ಕ್ಷಳ' ಳಕಾರವನ್ನೆ ಬಳಸಲಾಗಿದೆ). ಇಲ್ಲಿ ಕಾವ್ಯದ 'ಅಲಂಕಾರ' ಎಂದು ಅರ್ಥವಾಗದು; 'ಭೂಷಣ ಪ್ರಾಯ ವಾದದ್ದು' ಎಂದು ಗ್ರಹಿಸಬೇಕು.

ಪದ್ಯ ೭: ಶಕುನಿ = ಪಕ್ಷಿ. ಅಪ್ರಗಲ್ಭವಚನ ಪ್ರವೃತ್ತಿ = ಪ್ರೌಢವಲ್ಲದ, ಸಂಸ್ಕಾರ ಪಡೆಯದ, ಒಪ್ಪವಿಲ್ಲದ, ಮಾತಿನ ರೀತಿ.

ಪದ್ಯ ೮: ಗಣಿದ = (ಗಣಿತ) ಗಣನೆ, ಎಣಿಕೆ. ಅಶ್ರುತ ಪ್ರಕತಿ ಜನ = ಅವಿದ್ಯಾವಂತರಾದ ಸಾಮಾನ್ಯ ಜನ, ಹೇಗೆ ಹುಟ್ಟಿದರೋ ಹಾಗೆಯೆ ಇರುವವರು. ತೃಣ ಸಸ್ಯ ಘಾಸ: ತೃಣ = ಸಾಮೆ, ನವಣೆ ಮುಂತಾದ ಧಾನ್ಯದ ಹುಲ್ಲು; ಸಸ್ಯ = ಧಾನ್ಯ, ಕಾಳು; ಘಾಸ = ದನಕರು ಮೇಯುವ ಹುಲ್ಲು; ಒಟ್ಟಿನಲ್ಲಿ, 'ಕಾಳು ಕಡ್ಡಿ ಹುಲ್ಲು.'

ದಂಡಿಯ ವಾಕ್ಯ ಹೀಗಿದೆ:

ಗುಣದೋಷಾನಶಾಸ್ತ್ರಜ್ಞಃ ಕಥಂ ವಿಭಜತೇ ಜನಃ |
ಕಿಮಂಧಸ್ಯಾಧಿಕಾರೋಽಸ್ತಿ ರೂಪಭೇದೋಪಲಬ್ಧಿಷು ||

(ಅಶಾಸ್ತ್ರಜ್ಞರು ಗುಣದೋಷಗಳನ್ನು ಹೇಗೆ ಬೇರ್ಪಡಿಸಬಲ್ಲರು? ರೂಪಭೇದಗಳನ್ನು ತಿಳಿಯಲು ಕುರುಡನಿಗೆ ಸಾಮರ್ಥ್ಯವೆಲ್ಲಿ?)

ಕವಿರಾಜಮಾರ್ಗಕಾರನು ಹೋಲಿಕೆಯಲ್ಲಿ ಮಾಡಿಕೊಂಡಿರುವ ಮಾರ್ಪಾಟು ಹೆಚ್ಚು ಪರಿಣಾಮಕಾರಿಯಾಗಿದೆ.

ಪದ್ಯ ೯: ಪರಮಾಗಮ = (ಆಗಮ = ಮತಸಂಬಂಧವಾದ ಶಾಸ್ತ್ರ: ಉದಾ., ಶೈವಾಗಮ, ಜೈನಾಗಮ) ಇಲ್ಲಿ, ಶ್ರೇಷ್ಠವಾದ ಕಾವ್ಯಶಾಸ್ತ್ರ, ಕಾವ್ಯಲಕ್ಷಣ ಎಂದೇ ಅರ್ಥ.

ಪದ್ಯ ೧೦: ಈ ಪದ್ಯದಲ್ಲಿ ಭಾಮಹನ 'ಕಾವ್ಯಾಲಂಕಾರ' ದ ಉಕ್ತಿಯ ಪ್ರಭಾವವನ್ನು ಕಾಣಬಹುದು:

ಗುರೂಪದೇಶಾದಧ್ಯೇತುಂ ಶಾಸ್ತ್ರಂ ಜಡಧಿಯೋಽಪ್ಯಲಮ್ |
ಕಾವ್ಯಂ ತು ಜಾಯತೇ ಜಾತು ಕಸ್ಯಚಿತ್ ಪ್ರತಿಭಾವತಃ ||

(ಮಂದಬುದ್ಧಿಗಳು ಬೇಕಾದರೂ ಗುರುಗಳ ಉಪದೇಶದಿಂದ ಶಾಸ್ತ್ರವನ್ನು ಅಭ್ಯಾಸಮಾಡಬಹುದು. ಆದರೆ ಕಾವ್ಯ ಹುಟ್ಟು ವುದು ಮಾತ್ರ ಯಾವನೋ ಒಬ್ಬ ಪ್ರತಿಭಾವಂತನಿಂದ.)

ಪದ್ಯದಲ್ಲಿರುವ ದೃಷ್ಟಾಂತವಾಕ್ಯ ಮಾತ್ರ ಗ್ರಂಥಕಾರನ ಸ್ವತಂತ್ರ ರಚನೆಯಾಗಿ ಕಾಣುತ್ತದೆ.

ನುಡಿವಲ್ಮೆ = (ನುಡಿ + ಬಲ್ಮೆ) ಭಾಷಾಜ್ಞಾನ, ಭಾಷಾಪ್ರೌಢಿಮೆ. ಓದು = ನುಡಿ; ಹೇಳು; ವಾಚಿಸು. ಪುರುಳಿ = ಶಾರಿಕೆ, ಮೈನಾ ಹಕ್ಕಿ (?).

ಪದ್ಯ ೧೧: ದಂಡಿಯ ಶ್ಲೋಕ:

"ನೈಸರ್ಗಿಕೀ ಚ ಪ್ರತಿಭಾ ಶ್ರುತಂ ಚ ಬಹು ನಿರ್ಮಲಂ।
ಅಮಂದಶ್ಚಾಭಿಯೋಗೋಽಸ್ಯಾಃ ಕಾರಣಂ ಕಾವ್ಯಸಂಪದಃ॥

(ನೈಸರ್ಗಿಕವಾದ ಪ್ರತಿಭೆ, ಪರಿಶುದ್ಧವಾದ ವಿದ್ಯೆ, ನಿಲುಗಡೆಯಿಲ್ಲದ ಅಭ್ಯಾಸ- ಇವು ಕಾವ್ಯಸಂಪತ್ತಿಗೆ ಕಾರಣ.)

ಇವುಗಳ ಜೊತೆಗೆ 'ಮಾರ್ಗಕಾರನು' ವಿದ್ವಾಂಸರ ಸೇವೆಯನ್ನೂ ಸಹಜ ಚಾತುರ್ಯವನ್ನೂ ಸೇರಿಸಿದ್ದಾನೆ.

ಪದ್ಯ ೧೨: "ಓದುಗನ ಮನಸ್ಸನ್ನು ತನ್ನ ಕೃತಿಯಲ್ಲಿ ವ್ಯಾಪಿಸಿರುವ ಭಾವ ದಿಂದ ಹೊಸತಾಗಿಸಲರಿಯದವನ ರಚನೆಯನ್ನು ಓದುವ 'ವ್ಯಸನ' ವಾದರೂ ಏಕೆ? ಇಂಥ ಕೃತಿಯನ್ನು ಓದುವ ಕ್ಲೇಶವಾದರೂ ಏಕೆ? ಕವಿಯಲ್ಲದವರನ್ನು ಪುರಸ್ಕರಿಸುವವರೂ ಉಂಟೆ?" – ಇದಿಷ್ಟು ಪದ್ಯದ ತಾತ್ಪರ್ಯವಾಗಿ ತೋರುತ್ತದೆ. ಬಸನ(ತ್ಭ) = ವ್ಯಸನ, ಕೆಟ್ಟ ಅಭ್ಯಾಸ. ಬೇವಸ = ದುಃಖ, ಚಿಂತೆ, ಕ್ಲೇಶ. ಕವರ್ = (ಬಳಿಗೆ) ಸೆಳೆ, ಆಕರ್ಷಿಸು; ಬರಮಾಡಿಕೊ (?).

ಪದ್ಯ ೧೪: "ಇತರ ಕವಿಗಳ ಮಾತುಗಳನ್ನೆ ನೆನೆನೆನೆದು ತನ್ನ ಕೃತಿಯಲ್ಲಿ ಇಡುವವನು ಬೆಟ್ಟದ ಗುಹೆಯ ಪ್ರತಿಧ್ವನಿಯ ಹಾಗೆ ವ್ಯರ್ಥವಾದ

ವಾತಿನವನು. (ಅವನ ಸ್ವಂತದ್ದು ಏನೂ ಇಲ್ಲದ್ದರಿಂದ) ತನ್ನದಾದ ತಕ್ಕ ವಾಕ್ಚಾತುರ್ಯವನ್ನು ಪಡೆಯಲರಿಯನು." (ಇಂಥವನು ಅನುಕರಣ ಶೀಲ, ಸ್ವೋಪಜ್ಞನಲ್ಲ ಎಂದು ತಾತ್ಪರ್ಯ.)

ಪದ್ಯ ೧೫-೧೯: ವಾತರಿವವನ ನುಡಿಬಲ್ಮೆ ಕವಿವೃಷಭರ ಮಹಾಧ್ವಕೃತಿಯಾಗಿ ಪರಿಣಮಿಸಬೇಕಾದರೆ ಆತನು ಕ್ರಮಿಸಬೇಕಾದ ಪದಪದ್ಧತಿಯ ಸೋಪಾನವನ್ನು 'ಮಾರ್ಗಕಾರನು' ಇಲ್ಲಿ ನಿರೂಪಿಸಿದ್ದಾನೆ. ಈ ಸೊಗಸಾದ ನಿರೂಪಣೆಯೆಲ್ಲ ಆತನ ಸ್ವಂತ ರಚನೆಯಾಗಿ ಕಂಡು ಬರುತ್ತದೆ.

ಮಹಾಧ್ವಕೃತಿ = ಪೂರ್ವಕವಿಗಳ ಕಾವ್ಯಮಾರ್ಗವನ್ನು ಅನುಸರಿಸಿ ರಚಿತವಾದ ಕೃತಿ, ಕಾವ್ಯಲಕ್ಷಣಕ್ಕೆ ಅನುಗುಣವಾಗಿ ರಚಿತವಾದ 'ಮಾರ್ಗ' ಕೃತಿ; 'ದೇಸಿ'ಯ ಕಾವ್ಯವಲ್ಲ.

ಪದ್ಯ ೧೮-೨೦: ಈ ಪದ್ಯಗಳಲ್ಲಿ ಕಾವ್ಯದ ಕಾರ್ಯವನ್ನೂ (Function) ಪ್ರಯೋಜನವನ್ನೂ (Use) ತಿಳಿಸಿದೆ.

ಪದ್ಯ ೨೦-೨೧: ಇಲ್ಲಿ ಕವಿರಾಜಮಾರ್ಗಕಾರನು ತಿಳಿಸುವ ಕಾವ್ಯಪ್ರಯೋಜನಗಳಾದ ಚತುರ್ವಿಧ ಪುರುಷಾರ್ಥಗಳು 'ಅಖಿಳ ಭುವನ ಹಿತಗಳು', ವಾಚಕನಿಗೆ (ಸಹೃದಯನಿಗೆ) ದೊರೆಯುವ ಪ್ರಯೋಜನಗಳು. ಕವಿಗೆ ಲಭಿಸತಕ್ಕದ್ದು, ಆಕಲ್ಪಾಂತ ಸ್ಥಾಯಿಯಾದ ಕೀರ್ತಿ. ಕಾವ್ಯದ ಪರಮ ಪ್ರಯೋಜನವಾದ ಆನಂದದ (ಅಥವಾ ಪ್ರೀತಿಯ) ಪ್ರಸಕ್ತಿಯಿಲ್ಲ ಇಲ್ಲಿ. ಈ ಪದ್ಯಗಳ ಆಕರವಾದ ಭಾಮಹನ ಶ್ಲೋಕ:

> ಧರ್ಮಾರ್ಥ ಕಾಮ ಮೋಕ್ಷೇಷು ವೈಚಕ್ಷಣ್ಯಂ ಕಲಾಸು ಚ |
> ಪ್ರೀತಿಂ ಕರೋತಿ ಕೀರ್ತಿಂ ಚ ಸಾಧು ಕಾವ್ಯನಿಬಂಧನಂ ||

ಇದನ್ನು ನಾಗವರ್ಮನು ಹೀಗೆ ಕನ್ನಡಿಸಿದ್ದಾನೆ:

ಪರಮ ಪ್ರೀತಿ ನಿಮಿತ್ತಂ
ನಿರತಿಶಯ ಯಶೋನಿದಾನಮುಪ್ಪುದಜಿಸಿಹಂ
ಪರಮೆಂಬೆರಡರ್ಕಂ ಬಂ-
ಧುರ ಕಾವ್ಯನಿಬಂಧದಿಂ ಹಿತಂ ಪೆರತುಂಟೇ

—ಕಾವ್ಯಾವಲೋಕನ, II, ೪, (೪೨೬)

ಭಾಮುಹನ ಶ್ಲೋಕವನ್ನು ಅನುವಾದಿಸುತ್ತ, ಡಾ|| ಕೆ. ಕೃಷ್ಣಮೂರ್ತಿಯವರು 'ಪ್ರೀತಿ' ಎನ್ನುವುದಕ್ಕೆ ಸಂದರ್ಭೋಚಿತವಾಗಿ 'ಆನಂದ' ಎಂದು ಅರ್ಥಮಾಡಿದ್ದಾರೆ.[1] ನಾಗವರ್ಮನು ಪ್ರೀತಿ ಎಂಬ ಮಾತನ್ನು ಹಾಗೆಯೇ ಉಳಿಸಿಕೊಂಡಿದ್ದಾನೆ.

ಪದ್ಯ ೨೨: "ಶಬ್ದಾರ್ಥೌ ಸಹಿತೌ ಕಾವ್ಯಂ . . . ."–ಭಾಮಹ (ಕ. ಕಾ, I-೧೬). (ಶಬ್ದ, ಅರ್ಥ–ಎರಡೂ ಕೂಡಿ ಕಾವ್ಯ.)

ತೈಃ ಶರೀರಂ ಚ ಕಾವ್ಯಾನಾಮಲಂಕಾರಶ್ಚ ದರ್ಶಿತಾಃ |
ಶರೀರಂ ತಾವದಿಷ್ಟಾರ್ಥವ್ಯವಚ್ಛಿನ್ನಾ ಪದಾವಲಿಃ ||

(ಕಾವ್ಯದ ಶರೀರ, ಅದರ ಅಲಂಕಾರಗಳು–ಇವು ಯಾವುವೆಂಬುದನ್ನು ಅವರು–ಎಂದರೆ ವಿದ್ವಾಂಸರು–ತೋರಿಸಿಕೊಟ್ಟಿದ್ದಾರೆ ಕುರಿತ ಅರ್ಥದಿಂದ ಕೂಡಿರುವ ಪದಗಳ ಸಮೂಹವೇ ಆ ಶರೀರ.)

---

1 "ಭಾಮಹಾದಿ ಪ್ರಾಚೀನರು ಈ ಅರ್ಥದಲ್ಲಿ 'ಪ್ರೀತಿ' ಎಂಬ ಶಬ್ದವನ್ನು ಬಳಸುತ್ತಿದ್ದರೇ ಹೊರತು 'ರಸ' ಎಂಬ ಪದವನ್ನಲ್ಲ. ಈ ಅರ್ಥದಲ್ಲಿ ರಸ ಶಬ್ದದ ರೂಢಿ ಅಭಿನವಗುಪ್ತರ ಕಾಲದಿಂದೀಚೆಗೆ ಪ್ರಚಾರದಲ್ಲಿ ಬಂದಂತೆ ತೋರುತ್ತದೆ. Vide Hirianna: Art Experience." (ಡಾ|| ಕೆ. ಕೃಷ್ಣಮೂರ್ತಿಯವರ ಕನ್ನಡ ಕಾವ್ಯಾಲಂಕಾರ: ಪೀಠಿಕೆ, ಪು. xxxvii ಅಡಿ ಟಿಪ್ಪಣಿ).

"ಇದೇ ರಸಾನುಭವ. 'ಪ್ರೀತಿ', 'ಆನಂದ', 'ಆಹ್ಲಾದ', 'ಚಿತ್ತವಿಶ್ರಾಂತಿ'–ಇವೆಲ್ಲವೂ ಇದನ್ನೇ ನಿರ್ದೇಶಿಸುವ ಬೇರೆಬೇರೆ ಹೆಸರುಗಳು." (ಭಾ. ಕಾ. ಮೀ., ಪು. ೨೧೧).

'ಮಾರ್ಗಕಾರನು' ಭಾಮಹ ದಂಡಿ ಇವರಿಬ್ಬರ ಆಶಯಗಳನ್ನೂ ಅಳವಡಿಸಿಕೊಂಡಿದ್ದಾನೆ ತನ್ನ ನಿರೂಪಣೆಯಲ್ಲಿ. ಅಲ್ಲದೆ, ಕಾವ್ಯಕ್ಕೆ ಸಂಬಂಧಪಟ್ಟಂತೆ 'ಶಬ್ದ' ಮತ್ತು 'ಅರ್ಥ' ಎಂಬ ಪದಗಳ ಅರ್ಥ ವ್ಯಾಪ್ತಿಯನ್ನು ಸೂಕ್ಷ್ಮವಾಗಿ ವಿಶದಪಡಿಸಿದ್ದಾನೆ. ಇದು ಅವನ ಕಾವ್ಯಶಾಸ್ತ್ರಾಭಿಜ್ಞತೆಗೆ ಕುರುಹು.

ಪದ್ಯ ೨೩ : ನರಲೋಕಚಂದ್ರ : ನೃಪತುಂಗನ ಬಿರುದುಗಳಲ್ಲಿ ಒಂದು. ಇಲ್ಲಿ ಕಾವ್ಯವನ್ನು 'ಪುರುಷ' ಎಂದು ರೂಪಕ ಮಾಡಿದೆ. ಮುಂದೆಲ್ಲ, 'ಕೃತಿವಧು', 'ಕೃತಿನಾರಿ' ಎಂದು ಮಾರ್ಗಕಾರನು ಹೇಳುತ್ತ ಹೋಗುವುದನ್ನು ಗಮನಿಸಬೇಕು. ('ಕೃತಿಸತಿ'– ನಾಗವರ್ಮ). ಈಚಿನ ಸಂಸ್ಕೃತ ಲಾಕ್ಷಣಿಕರೂ ಕಾವ್ಯವನ್ನು ಪುರುಷನಿಗೆ ಹೋಲಿಸುವುದು ರೂಢಿ.

ಪದ್ಯ ೨೫ : ಕಾವ್ಯಪುರುಷನ ಶರೀರವು ಗದ್ಯ ಪದ್ಯ ಎಂದು ಎರಡು ವಿಧ. (ಪ. ೨೪). ಪದಪಾದ ನಿಯಮವಿಲ್ಲದಿದ್ದರೂ, ಅದು 'ಅಲಂಕೃತಂ'. (ಪದ್ಯಕಾವ್ಯದಂತೆಯೆ ಗದ್ಯಕಾವ್ಯವೂ ಅಲಂಕಾರಗಳಿಂದ ಕೂಡಿದ್ದು). 'ಕ್ರಿಯಾಕಾರಕದೊಳ್ ಪುದಿದು ಅರ್ಥವ್ಯಕ್ತಿಯನೀವುದು ಗದ್ಯಂ' ಎಂಬ ಈ ಹೆಚ್ಚಿನ ವಿವರಣೆ ವಿಚಾರಕ್ಕೆ ಎಡೆಗುಡುವಂಥದು. ಮುಂದೆ ಕಾರಕ ದೋಷಗಳನ್ನು ವಿವರಿಸುವಾಗ 'ಮಾರ್ಗಕಾರನು' ಪದ್ಯಗಳಲ್ಲಿಯೇ ಲಕ್ಷ್ಯ ಲಕ್ಷಣ ಸಮನ್ವಯ ಮಾಡಿರುವುದರಿಂದ, ಪದ್ಯಕ್ಕೆ ಈ ನಿಯಮವಿಲ್ಲ ಎಂಬುದು ಅವನ ಆಶಯವಲ್ಲ. 'ಪುದಿದು' (ಸರಿಯಾಗಿ ಸೇರ್ಪಡೆಯಾಗಿ) ಎಂಬ ಮಾತಿನಿಂದ, ಗದ್ಯದಲ್ಲಿ ಕ್ರಿಯಾಕಾರಕ ಸಂಬಂಧವು ನೇರವಾಗಿ ಅನ್ವಯವಾಗಿ ಅರ್ಥವ್ಯಕ್ತಿಯಾಗುವಂತೆ ಇರಬೇಕೆಂಬುದೇ ಆತನ ಆಶಯ. ('ಕಾರಕ'ದ ವಿವರಣೆಯನ್ನು ಮುಂದೆ ಕೊಟ್ಟಿದೆ.)

ಪದ್ಯ ೨೬ : ನೆಗಳ್ದುವಿದಱೊಳ್ = ಈ ಗದ್ಯ ಪ್ರಕಾರದಲ್ಲಿ ಪ್ರಸಿದ್ಧವಾದವು. ಸಮಸಂಸ್ಕೃತ ಕಾವ್ಯ : 'ಸಮಸಂಸ್ಕೃತ' ಎಂಬ ಪದದ ಅರ್ಥದ

ವಿವೇಚನೆಯನ್ನು ಮುಂದೆ ಕನ್ನಡ ಸಮಸಂಸ್ಕೃತ ಪದಗಳ ಮಿಶ್ರಣದ ವಿಚಾರವನ್ನು ಪ್ರಸ್ತಾವಿಸುವಾಗ ಕೈಗೊಂಡಿದೆ. ಆ ಸಂದರ್ಭ ದಲ್ಲಿ ವಿವಕ್ಷಿತವಾದ ಅರ್ಥ ಇಲ್ಲಿಗೆ ಹೊಂದದು. 'ಸಮಸಂಸ್ಕೃತಕಾವ್ಯ' ಎಂದರೇನು ಎಂಬುದು ತೊಡಕಿನ ಪ್ರಶ್ನೆಯಾಗಿಯೇ ಉಳಿಯುವುದು.

ಪದ್ಯ ೨೭ : **ಗದ್ಯಕಥೆ :** ಚಿರಂತನ ಆಚಾರ್ಯರು ಅಗಣಿತಗುಣ 'ಗದ್ಯ ಪದ್ಯ ಸಮ್ಮಿಶ್ರಿತ'ವನ್ನು ಗದ್ಯಕಥೆ ಎಂದು ನಿಗದಿಸುವರೆಂದು ಮಾರ್ಗ ಕಾರನ ಹೇಳಿಕೆ. ಇದು 'ಕನ್ನಡಗಬ್ಬ' ಎಂದೂ ಸ್ಪಷ್ಟಪಡಿಸಿದ್ದಾನೆ. ಭಾಮಹನು ಈ ಗದ್ಯಪದ್ಯ ಮಿಶ್ರಿತಪ್ರಕಾರವನ್ನು ಹೆಸರಿಸಿಲ್ಲ. ದಂಡಿಯೇನೋ 'ಪದ್ಯಂ ಗದ್ಯಂ ಚ ಮಿಶ್ರಂ ಚ ತತ್ ತ್ರಿಧೈವ ವ್ಯವಸ್ಥಿತಮ್' ಎಂದು ಮೂರು ಬಗೆಗಳನ್ನು ಹೆಸರಿಸಿದ್ದಾನೆ. ನಮ್ಮ ಮಾರ್ಗಕಾರನು ಕೇವಲ ದಂಡಿಯ ಲಕ್ಷಣವನ್ನು ಮಾತ್ರ ಅನು ಸರಿಸದೆ, 'ಕನ್ನಡಗಬ್ಬ'ದ ಲಕ್ಷ್ಯವನ್ನೂ ಗಮನದಲ್ಲಿರಿಸಿಕೊಂಡಿರು ವುದು ಸ್ಪಷ್ಟವಾಗಿದೆ. ಈಗ ನಾವು ಯಾವುದನ್ನು 'ಚಂಪೂಕಾವ್ಯ' ವೆಂದು ನಿರ್ದೇಶಿಸುತ್ತೇವೆಯೋ ಅದೇ ಈ ಗದ್ಯಕಥೆಯಾಗಿರಬಹುದು. ಸಂಸ್ಕೃತದಲ್ಲಿ ಕೂಡ ಚಂಪೂ ಎಂಬ ಮಾತು ದಂಡಿಗಿಂತ ಈಚೆಗೆ ಬಳಕೆಗೆ ಬಂದಿರಬೇಕು. ಈ ಗದ್ಯಕಥೆಯಲ್ಲಿ ಗದ್ಯದ ಪ್ರಾಚುರ್ಯ ಹೆಚ್ಚಾಗಿದ್ದಿರಬಹುದು.

ಗದ್ಯ ಗ್ರಂಥಕಾರರು

ಪದ್ಯ ೨೯ : (೧) **ವಿಮಳೋದಯ :** ವಿಮಲ, ಉದಯ – ಇವರಿಬ್ಬರು ಬೇರೆ ಬೇರೆ ಎಂಬ ಮತ ಕವಿಚರಿತೆಕಾರರಾದ ಆರ್. ನರಸಿಂಹಾ ಚಾರ್ಯರದು. ಅವರ ಅಭಿಪ್ರಾಯದ ಮೇರೆಗೆ, ಸು. ಕ್ರಿ. ಶ. ೭೭೭ ರಲ್ಲಿದ್ದ ವಿಮಲಚಂದ್ರನು ಕ. ರಾ. ಮಾರ್ಗದಲ್ಲಿ ಉಕ್ತನಾಗಿರುವ ಗದ್ಯಕವಿ. ಆದರೆ ಈತನು ಯಾವ ಕಾವ್ಯವನ್ನು ಬರೆದಿರುವ ನೆಂಬುದಕ್ಕೆ ಯಾವ ಆಧಾರವೂ ಇಲ್ಲ.

ವಿಮಲೋದಯ ಎಂಬುದು ಒಂದೇ ಹೆಸರೆಂದೂ, ನೃಪತುಂಗನು ಬರೆದನೆಂದು ಹೇಳಲಾದ 'ಪ್ರಶ್ನೋತ್ತರ ಮಾಲಿಕೆ' ಯ ಕರ್ತೃ ಈತನೇ ಎಂದೂ ಗೋವಿಂದ ಪೈ ಅಭಿಪ್ರಾಯಪಟ್ಟಿದ್ದಾರೆ. ಈ ಕೃತಿಯ ತಿಬೆಟ್ ಭಾಷೆಯ ಅನುವಾದದಲ್ಲಿ 'ಅಮೋಘೋದಯ' ಎಂದು ಕರ್ತೃವಿನ ಉಲ್ಲೇಖವಿರುವುದೇ ಅವರ ವಾದಕ್ಕೆ ಕಾರಣ.

'ಪ್ರಶ್ನೋತ್ತರಮಾಲಿಕೆ'ಯ ಕರ್ತೃ ಯಾರೇ ಆಗಿದ್ದರೂ, ವಿಮಲ ಉದಯ ಎಂಬ ಇಬ್ಬರ ಹೆಸರನ್ನೂ ಒಂದಾಗಿ ಸಂಧಿಮಾಡಿ 'ಮಾರ್ಗ ಕಾರ'ನು ಪ್ರಯೋಗಿಸುತ್ತಿದ್ದನೇ ಎಂದು ಶಂಕೆಪಡಬೇಕಾಗುತ್ತದೆ. ಅಲ್ಲದೆ, ಉದಯನೆಂಬ ಒಬ್ಬ ಕವಿ ನೃಪತುಂಗನಿಗಿಂತ ಹಿಂದೆ ಇದ್ದನೆಂದು ಹೇಳಲು ಯಾವ ಆಧಾರವೂ ಇಲ್ಲ. ಹೀಗಿರುವಲ್ಲಿ, ವಿಮಲೋದಯ ಒಬ್ಬ ಕವಿಯೆ ಆಗಿರಬೇಕೆಂದು ಅನುಮಾನಿಸಲು ಅವಕಾಶವಿದೆ. 'ಪ್ರಶ್ನೋತ್ತರಮಾಲಿಕೆ'ಯ ಕರ್ತೃ ಇವನಹುದೇ ಅಲ್ಲವೆ ಎಂಬುದು ವಿಚಾರಣೀಯ.

(೨) **ನಾಗಾರ್ಜುನ:** ಈ ಹೆಸರಿನವರು ಇಬ್ಬರಿದ್ದಾರೆ. ಇವನೊಬ್ಬ ವೈದ್ಯ; ರಸವಾದದಲ್ಲಿ ಗಟ್ಟಿಗ; ಬೆಟ್ಟಗಳನ್ನು ಬಂಗಾರವಾಗಿ ಮಾಡಿದ ಎಂದು ಪ್ರತೀತಿ. ದೇವಚಂದ್ರನ ರಾಜಾವಳೀ ಕಥೆಯಲ್ಲಿಯೂ ಇವನ ಪ್ರಸ್ತಾಪವಿದೆ. ಪೂಜ್ಯಪಾದನ ಸೋದರಳಿಯನಿವನು ಎಂದು ಅಲ್ಲಿಯ ಹೇಳಿಕೆ. 'ನಾಗಾರ್ಜುನ ಕಕ್ಷಪುಟ'ವೆಂಬ ವೈದ್ಯಗ್ರಂಥವು ಉಪಲಬ್ಧವಾಗಿದೆ. 'ನಂದಿ ಸೂತ್ರ' ಗಳ ಮತ್ತು 'ಆವಶ್ಯಕ ಸೂತ್ರ' ಗಳ ಆದಿಯಲ್ಲಿ ಒಬ್ಬ ನಾಗಾರ್ಜುನನ ಸ್ತುತಿಯಿದೆ. ಕ.ರಾ. ಮಾರ್ಗದಲ್ಲಿ ಉಕ್ತನಾದ ನಾಗಾರ್ಜುನ 'ಇವರಲ್ಲಿ ಒಬ್ಬನಾಗಿರಬಹುದೋ ಏನೋ ತಿಳಿಯದು.' (ಕವಿಚರಿತೆ, ಸಂ. ೧, ಪು. ೧೧-೧೨ ನೋಡಿ). ಒಬ್ಬನಾಗಿದ್ದರೂ, ಅವನ ಕನ್ನಡ ಗ್ರಂಥವಂತೂ ಯಾವುದೋ ತಿಳಿಯದು.

(೩) **ಜಯಬಂಧು**: ಚಂಪೂ ರೂಪದ ಸೂಪಶಾಸ್ತ್ರ ಗ್ರಂಥವೊಂದರ ಕೆಲವು ಪದ್ಯಗಳಲ್ಲಿ 'ಜಯಬಂಧು ನಂದನ' ಎಂಬ ಉಲ್ಲೇಖವಿರು

ವುದರಿಂದ, ಕ.ರಾ. ಮಾರ್ಗದಲ್ಲಿ ಉಕ್ತನಾದ 'ಜಯಬಂಧು' ವಿನ ಮಗ ಅವನು ಎಂದು ಕವಿಚರಿತೆಕಾರರ ಊಹೆ. (ಕ. ಚ., ಸಂ. ೧, ಪು. ೧೨). ಈ ಸೂಪಶಾಸ್ತ್ರ ಪ್ರತ್ಯೇಕ ಗ್ರಂಥವಲ್ಲ, ಚಾವುಂಡ ರಾಯನ 'ಲೋಕೋಪಕಾರ' ಎಂಬ ಗ್ರಂಥದ ಒನೆಯ ಆಶ್ವಾಸ, 'ಜಯಬಂಧುನಂದನ' ಎಂಬುದು ಅವನಿಗೆ ಆಶ್ರಯದಾತನಾದ ದೊರೆಯ ಹೆಸರಿರಬೇಕು', ಈ ಚಾವುಂಡರಾಯ(೧೦೨೪) 'ಚಾವುಂಡ ರಾಯ ಪುರಾಣ'ದ ಚಾವುಂಡರಾಯನಲ್ಲ, ಹೇಗೂ 'ಜಯಬಂಧು ನಂದನ' ಕ.ರಾ. ಮಾರ್ಗದಲ್ಲಿ ಹೇಳಿರುವ 'ಜಯಬಂಧು' ವಿನ ಮಗನಲ್ಲ, "ಜಯಬಂಧು ಯಾರೆಂದು ತಿಳಿದೇ ಇಲ್ಲ"—ಎಂಬ ತೀರ್ಮಾನಕ್ಕೆ ಬಂದಿದ್ದಾರೆ ಡಾ. ರಂ. ಶ್ರೀ. ಮುಗಳಿ. (ಕನ್ನಡ ಸಾಹಿತ್ಯ ಚರಿತ್ರೆ, ಪು. ೧೬, ನೋಡಿ.)

(೪) **ದುರ್ವಿನೀತ:** ಗಂಗರಾಜರಲ್ಲಿ ಹೆಸರಾಂತ ದೊರೆ; ಕಾಲ ಸು.ಕ್ರಿ.ಶ. ೬೦೦. ಗಂಗಶಾಸನಗಳಲ್ಲಿ ಈತನನ್ನು ಕುರಿತು 'ಅನೇಕ ಕಾವ್ಯ ಕಥಾ ನಾಟಕ ಪ್ರಣಯನ ಪ್ರರೂಢ ಪಾಟವೇನ' ಎಂಬ ಪ್ರಶಂಸೆಯೊಂದಿಗೆ, 'ಶಬ್ದಾವತಾರಕಾರಃ', 'ದೇವಭಾರತೀನಿಬದ್ಧ ಬೃಹತ್ಕಥಃ', 'ಕಿರಾತಾರ್ಜುನೀಯ ಪಂಚದಶಸರ್ಗಟೀಕಾಕಾರಃ' ಎಂಬ ಸ್ಪಷ್ಟ ಉಲ್ಲೇಖಗಳಿವೆ. (೧) ಶಬ್ದಾವತಾರ: ಇದು ಪಾಣಿನಿಯ ವ್ಯಾಕರಣದ ಟೀಕೆ ಎಂದು ಆರ್. ನರಸಿಂಹಾಚಾರ್ಯರ ಮತ. ವ್ಯಾಕರಣ ಸಂಬಂಧವಾದ ಗ್ರಂಥ ಎಂಬುದಂತೂ ಸ್ಪಷ್ಟ. ಇದು ಕನ್ನಡದಲ್ಲಿ ಬರೆದದ್ದಾಗಿರಬಹುದು. (೨) ಬೃಹತ್ಕಥೆ: ಗುಣಾಢ್ಯನ 'ಬೃಹತ್ಕಥೆ' ಯನ್ನು ಪೈಶಾಚೀಭಾಷೆಯಿಂದ ಸಂಸ್ಕೃತಕ್ಕೆ ಮಾಡಿರುವ (ಬಹುಶಃ) ಮೊತ್ತಮೊದಲಿನ ಅನುವಾದ. ಆದರೆ, ಈ ಗ್ರಂಥ ಉಪಲಬ್ಧವಿಲ್ಲ. "ಕನ್ನಡ ಗದ್ಯಕಾರನೆಂದು ಹೆಸರಾದ ದುರ್ವಿನೀತನು ಈ ಬೃಹತ್ಕಥೆಯನ್ನು 'ವಡ್ಡಕಥಾ' ಎಂಬ ಹೆಸರಿನಲ್ಲಿ ಕನ್ನಡಿಸಿರಬೇಕೆಂದೂ ಪಂಚತಂತ್ರಗಳ ಮೂಲ ಪರಂಪರೆ ದಕ್ಷಿಣದಲ್ಲಿಯೇ ಆರಂಭವಾಯಿತೆಂದೂ" ಶ್ರೀ ದ. ರಾ. ಬೇಂದ್ರೆಯವರ ಊಹೆ.

(ಕ.ಸಾ.ಚ., ಪು. ೧೭). (೩) ಭಾರವಿಯ (ಕ್ರಿ. ಶ. ಸು. ೬೦೦) 'ಕಿರಾತಾರ್ಜುನೀಯ' ಕಾವ್ಯದ ೧೫ನೆಯ ಸರ್ಗದ ಟೀಕೆ: ಇದು ಕನ್ನಡದಲ್ಲಿಯೆ ಇದ್ದಿರಬೇಕೆಂದು ಬಿ. ಎಲ್. ರೈಸರ ತೀರ್ಮಾನ. ಭಾರವಿ ದುರ್ವಿನೀತನ ಆಸ್ಥಾನದಲ್ಲಿ ಸ್ವಲ್ಪ ಕಾಲ ಇದ್ದನೆಂದು 'ಅವಂತೀಸುಂದರೀ ಕಥಾಸಾರ'ದಿಂದ ತಿಳಿಯಬರುತ್ತದೆ.

"ಈ ಎಲ್ಲ ಗದ್ಯಕಾರರ ಕನ್ನಡ ಗ್ರಂಥಗಳ ವಿಷಯವಾಗಿ ಏನೂ ನಿಶ್ಚಿತವಾಗಿ ತಿಳಿಯದೆ ಹೋದರೂ ಅವರಲ್ಲಿ ಒಬ್ಬನಾದ ದುರ್ವಿನೀತನು ೬ನೆಯ ಶತಮಾನದ ಗಂಗರಾಜನಾಗಿದ್ದು ಸ್ವತಃ ಬಹುಶ್ರುತನೂ ಸಂಸ್ಕೃತ-ಕನ್ನಡ ಗ್ರಂಥಕಾರನೂ ಕವಿಗಳಿಗೆ ಆಶ್ರಯ ದಾತನೂ ಆಗಿ ಹೆಸರುಪಡೆದನೆಂಬ ಸಂಗತಿ ಕನ್ನಡ ಸಾಹಿತ್ಯ ಚರಿತ್ರೆಯ ಆರಂಭಕಾಲದ ನಿರೂಪಣೆಯಲ್ಲಿ ನೆನೆಯತಕ್ಕದಾಗಿದೆ" ಎಂದು ಡಾ. ಮುಗಳಿಯವರು ಹೇಳಿರುವುದರಲ್ಲಿ ಅತ್ಯುಕ್ತಿಯಿಲ್ಲ.

ಪದ್ಯ ೩೦ : ಪದಪಾದನಿಯಮಗಳಿಂದ ಕೂಡಿದ್ದು ಪದ್ಯ. 'ಪದ್ಯಂ ಸಮಸ್ತ ಜನತಾ ಹೃದ್ಯಂ' ಎಂಬುದರಿಂದ ಪದ್ಯದ ಬಗೆಗೆ 'ಮಾರ್ಗಕಾರ'ನ ಒಲವು ಸ್ಪಷ್ಟ. ವಿದ್ಯೆಯ ತಡಿಯನ್ನು ಮುಟ್ಟತಕ್ಕದ್ದು ಅದು, ಎಂದರೆ ವಿದ್ಯಾಪಾರಂಗತನಾಗದವನು ಪದ್ಯಕವಿಯಾಗಲಾರ. 'ವಿದ್ಯೆ'= 'ಲೋಕಾಗಮ ಸಕಲ ಕಲಾವೇದನಂ'. (ಕಾವ್ಯಾ. II, ೧-೪೨೪). ವೃತ್ತಜಾತ್ಯಾಯತ್ತಂ=(ವೃತ್ತಜಾತಿ + ಆಯತ್ತಂ) ವೃತ್ತ ಜಾತಿ ಯಿಂದ ಘಟಿತವಾದದ್ದು. 'ವೃತ್ತಜಾತಿ'ಯ ಬಗೆಗೆ ದಿವಂಗತ ಪಂಡಿತ ಮುಳಿಯ ತಿಮ್ಮಪ್ಪಯ್ಯನವರ ವಿವರಣೆ ಹೀಗಿದೆ: ". . . . ವೃತ್ತಜಾತಿ ಎಂಬುದಕ್ಕೆ ವೃತ್ತಸ್ವರೂಪವೂ ಮಾತ್ರಾಗಣಬದ್ಧವೂ ಆದ 'ಜಾತಿ' ಎಂಬ ಛಂದಸ್ಸಿಗೆ ಸೇರಿದ ಮದನವತಿ-ಅಕ್ಕರಂ-ಚೌಪದಿ-ಗೀತಿಕೆ-ಏಳೆ-ತಿವದಿ-ಉತ್ಸಾಹಂ-ಅಕ್ಕರಿಕೆ-ಛಂದೋವತಂಸ ಎಂಬ ಜಾತಿನಾಮಕ ಪದ್ಯಗಳಲ್ಲಿ ಸೇರಿದುದು ಎಂಬುದೇ ಅರ್ಥವಾಗಿರಬೇಕು. ಅಕ್ಷರಗಣಬದ್ಧವಾದ ವೃತ್ತ ಮತ್ತು ಮಾತ್ರಾ

ಗಣಾತ್ಮಕವಾದ ಜಾತಿ ಇವುಗಳ ಕೂಟ ಎಂಬ ಅರ್ಥವಾಗಿರಲಾರದು." (ಕ. ವಿವೇಕ-ಭಾಗ ೧; ಪು. ೧೨೦).

ಪದ್ಯ ಗ್ರಂಥಕಾರರು

(೧) **ಶ್ರೀ ವಿಜಯ-ಕವೀಶ್ವರ:** ಇವರ ವಿಚಾರವನ್ನು ಪೀಠಿಕೆಯಲ್ಲಿ ಪರಿಶೀಲನೆಮಾಡಿರುವುದರಿಂದ ಇಲ್ಲಿ ಮತ್ತೆ ಆ ವಿಚಾರವನ್ನು ಕುರಿತು ಹೇಳಿಲ್ಲ. ('ಕವೀಶ್ವರ' ಎಂಬುದು ಬಿರುದೇ ಹೊರತು ಹೆಸರಲ್ಲ ಎಂಬುದು ಕವಿಚರಿತೆಕಾರರ ನಿಶ್ಚಿತ).

(೨) **ಪಂಡಿತ**: "ಇದೂ ಬಿರುದಿನಂತೆ ಕಾಣುತ್ತದೆಯೆ ಹೊರತು ಹೆಸರಿನಂತೆ ಕಾಣುವುದಿಲ್ಲ." (ಕ.ಚ., ಸಂ. ೧, ಪು. ೧೪). ಹಾಗಿದ್ದಲ್ಲಿ, ಯಾರ ಬಿರುದು ? ಪದ್ಯ ೩೨ರಲ್ಲಿ ಉಕ್ತನಾಗಿರುವ 'ಚಂದ್ರ' ಕವಿಯ ಹಿಂದೆ ವಿಶೇಷಣವಾಗಿ ಸೇರಬೇಕು, ಇಲ್ಲವೆ, 'ಪರಮಶ್ರೀ ವಿಜಯ ಕವೀಶ್ವರ'ನನ್ನೆ 'ಪಂಡಿತ' ಎಂದೂ ಹೊಗಳಿರಬೇಕು.

(೩) **ಚಂದ್ರ**: ದುರ್ಗಸಿಂಹ (ಸು. ೧೧೪೫), ರುದ್ರಭಟ್ಟ (ಸು. ೧೧೮೦), ಕೇಶಿರಾಜ (ಸು. ೧೨೬೦), ಅರ್ಹದ್ದಾಸ (ಸು. ೧೩೦೦)- ಇವರೆಲ್ಲ ಒಬ್ಬ ಚಂದ್ರಭಟ್ಟನನ್ನು ಹೊಗಳಿದ್ದಾರೆ. ಆದ್ದರಿಂದ, ಇವರಿಗಿಂತ ಸು. ಒಂದು ಶತಕದ ಹಿಂದೆ, ಅಥವಾ ಅದಕ್ಕೂ ಹಿಂದೆ, ಒಬ್ಬ ಚಂದ್ರಕವಿ ಇದ್ದನೆಂದು ಊಹಿಸಬಹುದು. ಸು. ೧೦೬೭ರಲ್ಲಿ ಒಬ್ಬ ಚಂದ್ರಭಟ್ಟ ಕವಿ ಇದ್ದುದಾಗಿ ತಿಳಿದುಬರುತ್ತದೆ. 'ಮದನತಿಲಕ'ದ ಕರ್ತೃ ಒಬ್ಬ ಚಂದ್ರರಾಜನಿದ್ದಾನೆ. (ಸು. ೧೦೨೯). 'ಜಾತಕತಿಲಕ'ದ ಶ್ರೀಧರಾಚಾರ್ಯನು (ಸು. ೧೦೫೦) 'ಅಂಬುಜಾರಿ' ಎಂಬ ಪದದಿಂದ ಒಬ್ಬ 'ಚಂದ್ರ'ನನ್ನು ಸೂಚಿಸಿದ್ದಾನೆ. ಚೌಂಡರಸನು (ಸು. ೧೩೫೦) ಒಬ್ಬ ಚಂದ್ರನನ್ನು ಹೆಸರಿಸಿದ್ದಾನೆ. ಈ 'ಚಂದ್ರ' ಮಾಲಿಕೆಯಲ್ಲಿ 'ಮಾರ್ಗಕಾರ'ನು ನೆನೆದ ಚಂದ್ರ ಯಾರೆಂದು ಹೇಳುವುದು ಕಷ್ಟ. (ಹೆಚ್ಚಿನ ವಿಚಾರ ವಿಮರ್ಶೆಗೆ ಕ.ಸಾ.ಚ-ಪು. ೨೦-೨೧ ನೋಡಿ.)

(೪) **ಲೋಕಪಾಲ:** ಈತನು ನೃಪತುಂಗನ ಸಾಮಂತನಾಗಿದ್ದ ಬಂಕರಸನ ಮಗನಾದ ಲೋಕಾದಿತ್ಯನಾಗಿರಬಹುದೆಂದು ಬಿ. ಎಲ್. ರೈಸ್ ಅವರ ಊಹೆ (ಶ. ಶಾಸನದ ಉಪೋದ್ಘಾತ, ಪು. ೨೨). ಎರಡು ಹೆಸರುಗಳಿಗೂ ಬಹಳ ವ್ಯತ್ಯಾಸವಿರುವುದರಿಂದ ಅವು ಒಬ್ಬನೆ ವಲ್ಲ ಎಂದು ಕವಿಚರಿತೆಕಾರರ ಅಭಿಪ್ರಾಯ. ಅಂತೂ, ಈತನ ವಿಷಯವಾಗಿ ಏನೂ ತಿಳಿದುಬಂದಿಲ್ಲ.

ಪದ್ಯ ೩೪-೩೫: **ಬೆದಂಡೆ-ಚತ್ತಾಣ** : ಬೆದಂಡೆ (ಸಂ., ವೈದಂಡಿಕಾ), ಚತ್ತಾಣ (ಸಂ., ಚಿತ್ರಾಯತನ).

ಕಂದ ಪದ್ಯವೂ 'ಅಮಳಿನ' (ದೋಷರಹಿತವಾದ) ವೃತ್ತವೂ ಒಂದೊಂದು ಎಡೆಗೆ ಒಂದೊಂದರಂತೆ ಕೂಡಿ, 'ಜಾತಿಜಾಣು' (ದೇಸಿಗೆ ವಿಶಿಷ್ಟವಾದ ಕೌಶಲ) ಇವುಗಳಲ್ಲಿ ಬೆಡಗಿನಿಂದ ಸೇರಿ ಕೊಂಡಿದ್ದರೆ, ಅದು ಬೆದಂಡೆಗಬ್ಬವೆನಿಸುವುದು.

ಹಲವು ಕಂದಗಳು, ಚೆಲುವಾದ ವೃತ್ತ ಅಕ್ಕರ ಚೌಪದಿ ಗೀತಿಕೆ ತ್ರಿಪದಿ- ಇವು ಸೊಗಸುವಡೆದು ಮೆರೆಯುತ್ತಿದ್ದರೆ ಅದು ಚತ್ತಾಣ.

ಬೆದಂಡೆ-ಚತ್ತಾಣಗಳು ಹಿಂದಿನ ದೇಸಿಗಬ್ಬದ ವಿಶಿಷ್ಟ ನಾಮ ಗಳಾಗಿರಬಹುದೆಂದೂ, ಎರಡನೆಯ ನಾಗವರ್ಮನು ತನ್ನ 'ಕಾವ್ಯಾವ ಲೋಕನ'ದಲ್ಲಿ ವಿವರಿಸಿರುವ 'ಬಾಜನೆಗಬ್ಬ'ವು 'ಚತ್ತಾಣ'ದ ನಾಮಾಂತರವಾಗಿರಬಹುದೆಂದೂ, ಅವನು ಹೇಳುವ 'ಪಾಡು ಗಬ್ಬ'ದ ಒಳಪ್ರಭೇದಗಳಿವೆಂದೂ,[2] ಈ ಬಾಜನೆಗಬ್ಬ ಮುಂತಾದ

2 ಪಾಡುಗಳಿಂದಂ ತಱಿಸಲೆ
ಮಾಡಿದುದಂ ಪಾಡುಗಬ್ಬಮೆಂದು ಬುಧರ್ ಕೊಂ
ಡಾಡುವರದಱಿಂ ದಲ್ ಮ
ಲ್ವಾಡುಂ ರೂಢಿಯ ಬೆದಂಡೆಗಬ್ಬಮುಮಕ್ಕುಂ

ಪಲತೆಱದ ಪದ್ಯದಿಂದಂ
ಲಲಿತವಚೋರಚನನಿಚಯ ಪದ್ಧತಿಕೆಗಳಿಂ
ಸಲೆ ನಿಲೆ ಸಮೆದುದು ಸರಸಾ
ಖಿಲ ವರ್ಣನಮಾದೊಡದುವೆ ಬಾಜನೆಗಬ್ಬಂ

—ಕಾವ್ಯಾವಲೋಕನ, V-೯೩೪, ೯೩೫

ದೇಸಿಗಬ್ಬದ ಸಂತತಿಯಲ್ಲಿಯೆ ಇಂದಿನ 'ಯಕ್ಷಗಾನ ಪ್ರಬಂಧ' ಇಲ್ಲವೆ 'ಬಯಲಾಟದ ಪ್ರಬಂಧ'ವು ತಲೆದೋರಿರಬೇಕೆಂದೂ, ಒಟ್ಟಿನ ಮೇಲೆ 'ಬೆದಂಡೆ-ಚತ್ತಾಣ'ಗಳೆಂದರೆ ಹಿಂದಣ ದೇಸಿಯಾದ ದೃಶ್ಯ-ಶ್ರವ್ಯಗಳೆಂಬ ಕಾವ್ಯಭೇದಗಳಾಗಿದ್ದಿರಬೇಕೆಂದೂ ಮುಳಿಯ ತಿಮ್ಮಪ್ಪಯ್ಯನವರು ಅಭಿಪ್ರಾಯ ಪಟ್ಟಿದ್ದಾರೆ. (ಕ. ರಾ. ವಿವೇಕ-೧, ಪು. ೧೧೯-೧೨೩ ನೋಡಿ.)

'ಬೆದಂಡೆ' ಎಂಬುದು "ಕೇಳಲಿಕ್ಕೂ ನೋಡಲಿಕೂ ಇರುವ ದೇಸೀ ಗಾನದ ದೃಶ್ಯಕಲೆ" ಎಂದು ಕೆ. ಪಿ. ವೆಂಕಟಪ್ಪಶೆಟ್ಟಿ ಅವರ ಮತ; 'ನಾಟ್ಯಪಗರಣ'ಗಳಲ್ಲಿ ರೂಢಿಗೊಂಡ ಅತ್ಯುತ್ತಮವಾದ 'ಮೋಹಿನೀ ಕಲೆ'ಯಾದ ಯಕ್ಷಗಾನವೇ ಈ ಬೆದಂಡೆಯಾಗಿರಬಹುದು. ('ಸಮರ್ಪಣೆ' ಗ್ರಂಥದಲ್ಲಿ 'ಯಕ್ಷಗಾನ ಕಲೆ' ಎಂಬ ಅವರ ಲೇಖನ ವನ್ನು ನೋಡಿ.) 'ನಾಡ ಹಗರಣ' ದೇಸೀ ನಾಟಕವೆ ಇದ್ದಿರಬೇಕು. (ಕ. ಮಾರ್ಗದಲ್ಲೂ 'ಪಗರಣ'ದ ಉಲ್ಲೇಖವಿದೆ. ಪ. I-೬೮)

"ಚತ್ತಾಣ (= ಚಿತ್ರಾಯತನ), ಬೆದಂಡೆ (= ವೈದಂಡಿಕ) ಎಂಬ ಪದ್ಯ ಬಂಧ ಜಾತಿಗಳು, ನಮಗೆ ತಿಳಿದಮಟ್ಟಿಗೆ, ಸಂಸ್ಕೃತದ ಅಲಂಕಾರ ಗ್ರಂಥಗಳಲ್ಲಿ ಕೂಡ ಎಲ್ಲಿಯೂ ಉಕ್ತವಾಗಿಲ್ಲ." (ತೀ.ನಂ.ಶ್ರೀ. : ಭಾ. ಕಾ. ಮೀ., ಪ್ರ. ಮು., ಪು. ೪೫೯).

ಪದ್ಯ ೩೬ : ವಿಷಯ=ಪ್ರಾಂತ, ಪ್ರದೇಶ, ದೇಶವಿಭಾಗ.

ಪದ್ಯ ೩೭ : ಕಿಸುವೊಳಲ್=ಬಿಜಾಪುರ ಜಿಲ್ಲೆಯ ಈಗಿನ ಪಟ್ಟದಕಲ್ಲು; ಕೊಪಣ=ಈಗಿನ ಕೊಪ್ಪಳ. ಗದಗು ಬಳ್ಳಾರಿ ನಡುವಣ ರೈಲು ನಿಲ್ದಾಣ; ಪುಲಿಗೆಱೆ=ಧಾರವಾಡ ಜಿಲ್ಲೆಯ (ಈಗಿನ) ಲಕ್ಷ್ಮೇಶ್ವರ; ಒಂಕುಂದ=ಬೆಳಗಾವಿ ಜಿಲ್ಲೆಯಲ್ಲಿನ (ಈಗಿನ) ಒಕ್ಕುಂದ. ಈ ನಾಲ್ಕು ಪಟ್ಟಣಗಳ ನಡುವಣ ನಾಡೆ ಸಂಪೂರ್ಣವಾಗಿ ಅಚ್ಚಗನ್ನಡ ಮಾತಾಡುವ ಜನರ ಪ್ರದೇಶವಾಗಿತ್ತು ಎಂದು ಮಾರ್ಗಕಾರನ ಹೇಳಿಕೆ. ಈ ಸಂದರ್ಭದಲ್ಲಿ, "ರಾಜಸುಧಾನಿಯ ಪುಟವಹ ಸಾಜದ

ಪುಲಿಗೆಱೆಯ ತಿರುಳ ಕನ್ನಡದೊಳ್" ತನ್ನ ಗ್ರಂಥವನ್ನು ಬರೆದಿರುವುದಾಗಿ ಹೇಳಿರುವ ಪಂಪನ ಉಕ್ತಿಯನ್ನೂ ನೆನೆಯಬಹುದು.

ಪದ್ಯ ೪೦: ಪೂಣಿಗ=(ಪೂಣ್=ಪ್ರತಿಜ್ಞೆಮಾಡು) ಪ್ರತಿಜ್ಞೆಮಾಡಿದವನು,-ಮಾಡಬಲ್ಲವನು; ಎಂದರೆ, ಸಮರ್ಥ, ಗಟ್ಟಿಗ (?).

ಪದ್ಯ ೪೧: ಸಕ್ಕದ=ಸಂಸ್ಕೃತ; ಪಾಗದ=ಪ್ರಾಕೃತ; ಸಮಱೆ ಪೇೞ್= ಖಚಿತವಾಗಿ, ನಿಶ್ಚಿತವಾಗಿ, ಹೊಂದಿಕೆಯಾಗುವಂತೆ. ಹೇಳು. ನಿಕ್ಕುವಂ=ನಿಶ್ಚಯವಾಗಿ, ನಿಜವಾಗಿ; ಒಳವು=ಇವೆ (ಉಳ್ ಧಾತು). ಈ ಪದ್ಯಕ್ಕೆ ಮುಳಿಯ ತಿಮ್ಮಪ್ಪಯ್ಯನವರ ವ್ಯಾಖ್ಯಾನ ಹೀಗಿದೆ:— "ಸಂಸ್ಕೃತ ಪ್ರಾಕೃತ ಸಾಹಿತ್ಯಗಳಲ್ಲಾದರೆ ಆ ಬಗೆಯೇ ಬೇರೆ. ಅವುಗಳಲ್ಲಿ ಲಕ್ಷ್ಯಗ್ರಂಥಗಳಂತೆ ಲಕ್ಷಣ ಗ್ರಂಥಗಳೂ ಬೇಕಾದಷ್ಟಿವೆ. ಪರಮಾಚಾರ್ಯರಿಂದ ರಚಿತಗಳಾದ ಆ ಲಕ್ಷ್ಯಲಕ್ಷಣ ಪ್ರಬಂಧಗಳಿಂದಾಗಿ ಸಂಸ್ಕೃತ ಪ್ರಾಕೃತ ಸಾಹಿತ್ಯ ಸ್ವರೂಪವು ಸುಗಮವಾಗಿದ್ದುದು." (ಕ. ರಾ. ವಿವೇಕ,-ಭಾಗ ೧, ಪು. ೧೧೫).

ಪದ್ಯ ೪೨: ಅನ್ವಯ: ಕನ್ನಡದೊಳ್, ತಿರಿಕೊಱೆಗೊಂಡು=(ತಿರಿದು ಕೊಱೆಗೊಳ್=ಭಿಕ್ಷೆಬೇಡಿ ಬಟ್ಟೆ ಸಂಪಾದಿಸಿಕೊ, ಎಂದರೆ ಭಿಕ್ಷೆ ಬೇಡು, ಅವರಿವರನ್ನು ಕೇಳಿ ತಿಳಿದುಕೊ) (ಅವರಿವರನ್ನು) ಬೇಡಿ ತಿಳಿದುಕೊಂಡು, ಅಱೆಯೆ ಪೇೞ್ವೆನೆಂಬುದಿದು, ಅರ್ಗಂ, ಆದಂ ಅರಿದು=ಬಹಳ ಕಷ್ಟ; ಕನ್ನಡಕ್ಕೆ=ಕನ್ನಡದ ವಿಷಯದಲ್ಲಿ, ನಾಡವರ್=(ಲಕ್ಷಣಜ್ಞರಲ್ಲದ) ಸಾಮಾನ್ಯ ಜನರು, ಒವಜರ್=ಉಪಾಧ್ಯಾಯರು; ಪರಮಾಚಾರ್ಯರವೋಲ್=(ಸಂಸ್ಕೃತ ಪ್ರಾಕೃತಗಳಲ್ಲಿ) ಶ್ರೇಷ್ಠರಾದ ಲಕ್ಷಣಜ್ಞರ ಹಾಗೆ, ಸ್ಥಿತಿರಲ್ ಅಱೆಯರ್=ನಿಶ್ಚಿತ ಜ್ಞಾನವನ್ನು ಹೊಂದಿಲು (?) ತಿಳಿಯರು. (ಅವರಿವರನ್ನು ಕೇಳಿಯಾದರೂ ತಿಳಿದು ಕಾವ್ಯಲಕ್ಷಣವನ್ನು ಹೇಳೋಣವೆಂದರೆ, ಸಂಸ್ಕೃತ ಪ್ರಾಕೃತಗಳಲ್ಲಿಯಂತೆ ಲಕ್ಷಣವನ್ನು ಚೆನ್ನಾಗಿ ಬಲ್ಲವರು ಕನ್ನಡದಲ್ಲಿ ಇರಲಿಲ್ಲ. ಕನ್ನಡದ ಓಜರು ಅವರಷ್ಟು ಬಲ್ಲಿದರಾಗಿರಲಿಲ್ಲ.)

ಪದ್ಯ ೪೬: ಉದ್ಭಾಷಿಸಿ=ಉತ್+ಭಾಷಿಸಿ (ಸ್ಪಷ್ಟವಾಗಿ ಹೇಳಿ) ಅಥವಾ ಉತ್+ಭಾಸಿಸಿ (ವಿಶೇಷವಾಗಿ ಬೆಳಗಿ, ಪ್ರಕಾಶಗೊಳಿಸಿ ಎಂದರೆ ಮೇಲೆ ಕಾಣುವಂತೆ ಹೊರಪಡಿಸಿ) (?). ತಱಸಂದು=(ಧಾ., ತಱಸಲ್) ನಿಶ್ಚಯಿಸಿ, ಗೊತ್ತುಮಾಡಿ. 'ಕನ್ನಡಂಗಳೊಳ್', 'ದೇಶಿ ಬೇಱವೇಱಪುದಱಂ': ಪ್ರಪಂಚದ ಎಲ್ಲ ಭಾಷೆಗಳಲ್ಲಿಯೂ ಪ್ರಾದೇಶಿಕ ವ್ಯತ್ಯಾಸಗಳು ಇದ್ದುವು, ಈಗಲೂ ಇವೆ. ಅಂತೆಯೆ, ಕನ್ನಡದಲ್ಲಿ ಈಗ ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರ್ವಾಡದ ಕನ್ನಡ ಎಂದು ಸ್ಥೂಲವಾಗಿ (ವಿಶೇಷವಾಗಿ ಆಡುಮಾತಿನಲ್ಲಿ) ಮೂರು ಬಗೆಯ 'ಕನ್ನಡಂಗಳು' ಇರುವಂತೆ ಆಗಲೂ ಕೆಲಕೆಲವು ಪ್ರಾದೇಶಿಕ ಲಕ್ಷಣಗಳುಳ್ಳ 'ಕನ್ನಡಂಗಳ್' ಇದ್ದಿರಬೇಕು; ಅವುಗಳ 'ದೇಶಿ' ಎಂದರೆ ಪ್ರಾದೇಶಿಕ ವೈಲಕ್ಷಣ್ಯ ಬೇರೆಬೇರೆಯಾಗಿದ್ದಿರಬೇಕು. ಒಂದು ಪ್ರಾಂತದಲ್ಲಿ ನಿರ್ದುಷ್ಟವೆನಿಸಿದ ಭಾಷಾಪ್ರಯೋಗ ಇನ್ನೊಂದರಲ್ಲಿ ದೋಷವಾಗಿ ಕಾಣುತ್ತಿದ್ದಿರಬೇಕು. ಹೀಗೆ, ಸರ್ವಸಾಮಾನ್ಯವಾದ ದೋಷಗಳು ಹಾಗೂ ಪ್ರಾಂತ ಭೇದಗಳಿಂದ ಸಂಜನಿಸುತ್ತಿದ್ದ ದೋಷಗಳು—ಇವು ಕೂಡಿ, ದೋಷಪ್ರಮಾಣ ಅಪರಿಮಿತವಾಗಿದ್ದಿರಬೇಕು. ಸಾವಿರ ನಾಲಗೆಯುಳ್ಳ ಆದಿಶೇಷನೂ ಅವನ್ನು ತಿಳಿಯಹೇಳಲಾರದಷ್ಟು ಅಗಣಿತವಾಗಿದ್ದುವು ಎಂದು 'ಮಾರ್ಗಕಾರ' ಉತ್ಪ್ರೇಕ್ಷಿಸಿ ಹೇಳುವ ಮಟ್ಟಿಗೆ ಕನ್ನಡದ ಪರಿಸ್ಥಿತಿ ಶೋಚನೀಯವಾಗಿತ್ತು.

ಪದ್ಯ ೪೭: 'ಅಂತುಂ ಪುರಾಣಕವಿಗಳ ಸಂತತಗತ ಮಾರ್ಗಗದಿತ ದೋಷಂಗಳ್'; 'ಚಿಂತಿಸಿ ಮತ್ತೆನ್ನಱವುದುಮಂ': ಹಿಂದಿನ ಕವಿಗಳು ಲಕ್ಷಣಬದ್ಧವಾಗಿ ರಚಿಸಿದ 'ಮಾರ್ಗ' ಕಾವ್ಯಗಳಲ್ಲಿ ಕಂಡುಬಂದ ದೋಷಗಳನ್ನೂ, ಕಾವ್ಯರಚನೆಯಲ್ಲಿ ಸಂಭವಿಸಬಹುದೆಂದು ತಾನು ಅರಿತಿರುವ ದೋಷಗಳನ್ನೂ 'ಬುಧಜನಕ್ಕೆ' ಹೇಳುವುದಾಗಿ ಮಾರ್ಗಕಾರನು ತಿಳಿಸುತ್ತಾನೆ.

ಪದ್ಯ ೪೮ : 'ನೆಲಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ ಸತತಂ'=ಪ್ರಚಾರಕ್ಕೆ ಬಂದು ರೂಢಿಯಲ್ಲಿ ನೆಲೆನಿಂತ ಕಾವ್ಯವು ಮುಂದಿನ ಕಾವ್ಯರಚನೆಗೆ ಯಾವಾಗಲೂ ಮಾರ್ಗದರ್ಶಕವಾದ ಲಕ್ಷಣ, ಎಂದೆ=ಎಂಬ (ತಪ್ಪು) ಎಣಿಕೆಯಿಂದ, ಆಗಮಬಲಹೀನರ್=ಕಾವ್ಯಶಾಸ್ತ್ರದ ಪಾಂಡಿತ್ಯವಿಲ್ಲದವರು, ದೇಸಿಯಲ್ಲದೆಂದಱಿದಿರ್ದುಂ (ದೇಸಿಯಲ್ಲ+ಅದು+ಎಂದು+ಅಱಿದಿರ್ದುಂ)=ಅದು, ಎಂದರೆ ಒಂದು ಕಾಲದಲ್ಲಿ 'ದೇಸಿ' ಯೆನಿಸಿದ್ದ (ರೂಢಿಯಲ್ಲಿದ್ದ) ಹಳಗನ್ನಡವು, ಇಂದು ದೇಸಿಯಲ್ಲ (ರೂಢಿಯಲ್ಲಿಲ್ಲ) ಎಂದು ತಿಳಿದಿದ್ದರೂ ಕೂಡ, ಪೞಗನ್ನಡಮಂ=(ಆ ರೂಢಿ ತಪ್ಪಿದ) ಹಳಗನ್ನಡವನ್ನು, ಪೊಲಗೆಡಿಸಿ=(ಅದರ) ಸ್ವರೂಪವನ್ನು ಹಾಳುಮಾಡಿ, ನುಡಿವರ್=ಹೇಳುವರು, ಪ್ರಯೋಗಮಾಡುವರು.

ಮಾರ್ಗಕಾರನ ಕಾಲದಲ್ಲಿ ಬಳಕೆಯಲ್ಲಿದ್ದ ಕನ್ನಡ ಅವನ ಕಾಲದ 'ಹೊಸಗನ್ನಡ'; ತದ್ಭಿನ್ನವಾದ 'ಹಳಗನ್ನಡ' ವೊಂದು ಇದ್ದಿತು; ಆ ಹಳಗನ್ನಡದಲ್ಲಿ ಹಿಂದೆ ರಚಿತವಾದ ಕಾವ್ಯವನ್ನೇ ಮಾದರಿಯಾಗಿ ಇಟ್ಟುಕೊಂಡು ಕಾವ್ಯಲಕ್ಷಣವನ್ನು ಅರಿಯದವರು ಕಾವ್ಯರಚನೆ ಮಾಡಿ, ಹಳಗನ್ನಡದ ಸ್ವರೂಪವನ್ನೆ ಹಾಳುಮಾಡುತ್ತಿದ್ದರೆಂದು ಕಾಣುತ್ತದೆ. ಅಂಥವರು, ತತ್ಕಾಲಕ್ಕೆ 'ದೇಸಿ' ಯಾಗಿದ್ದ ಹೊಸಗನ್ನಡದಲ್ಲಿಯಾದರೂ ಕಾವ್ಯರಚನೆ ಮಾಡಿದ್ದರೆ ಎಷ್ಟೋ ಲೇಸಾಗಿರುತ್ತಿದ್ದಿತು. (ಇದಿಷ್ಟು ಮಾರ್ಗಕಾರನ ಆಶಯವೆಂದು ನಮ್ಮ ಗ್ರಹಿಕೆ.)

[ಕಂದ, ವೃತ್ತ, ಷಟ್ಪದಿ, ಮುಂತಾದ ಛಂದಸ್ಸುಗಳಲ್ಲಿಯೂ ಹಳಗನ್ನಡ ಸಂಸ್ಕೃತಗಳಲ್ಲಿಯೂ ಪಾಂಡಿತ್ಯವಿಲ್ಲದಿದ್ದರೂ ದೋಷಪೂರ್ಣವಾಗಿ ಪದ್ಯರಚನೆ ಮಾಡುವವರು ಈಗಿಗೂ ನಮ್ಮಲ್ಲಿ ಇಲ್ಲದೆ ಇಲ್ಲ. . ಇಂಥವರು ಎಲ್ಲ ಕಾಲದಲ್ಲಿಯೂ ಇರುತ್ತಾರೆ.]

ಪದ್ಯ ೪೯ : ಮಾರ್ಗಕಾರನ ಕಾಲಕ್ಕೇ 'ದೇಸಿಯಲ್ಲ' ಎನ್ನಿಸಿದ್ದ, 'ಪೊಲಗೆಡಿಸಿದ', ಹಳಗನ್ನಡದ ಸ್ವರೂಪಕ್ಕೆ ಇದು ಉದಾಹರಣೆ. ಮಾರ್ಗ

ಕಾರನೇ ಅರ್ಥವಾಗದೆನ್ನುವ ಈ 'ಕನ್ನಡ' ನಮಗೆ ಹೇಗೆ ಅರ್ಥವಾಗಬೇಕು? 'ಅರ್ಥವಾಗಬಾರದು' ಎಂದೇ ಆತನ ಗುರಿಯಿರಬೇಕು. 'ಹಡುವಸುಮಱಿಸೆಟ್ಟಿಸು....'-ಇಲ್ಲಿನ 'ಹ' ಕಾರದ ಪ್ರಯೋಗ ಗಮನಾರ್ಹ. ಮಾರ್ಗಕಾರನ ಕಾಲಕ್ಕೆ ಆಗಲೇ 'ಪ' ಕಾರ 'ಹ' ಕಾರವಾಗಿ ಮಾರ್ಪಡುತ್ತಿತ್ತೆಂದು ಇದರಿಂದ ಊಹಿಸಬೇಕಾಗುತ್ತದೆ.

ಪದ್ಯ ೫೦: 'ಇಂಥ ಹಳಗನ್ನಡದ ಪ್ರಯೋಗವು ಹಿಂದಿನ ಕಾವ್ಯಗಳಲ್ಲಿ ಪ್ರಯುಕ್ತವಾಗಿದ್ದರೆ ಆ ಕಾಲಕ್ಕೆ ಅದು ಶೋಭಿಸುವುದು. ಹೊಸಗನ್ನಡದ ಇಂದಿನ ದೇಸಿಗೆ ಅದು ಬಹು ರಸಹೀನ.' [ಮುಂದಿನ ಉಪಮಾನದ ಮೂಲಕ ದೇಸಿಯಲ್ಲದ ಹಳಗನ್ನಡದ ಪ್ರೇಮವನ್ನು ಪರಿಹಾಸಮಾಡಿದ್ದಾನೆ ಮಾರ್ಗಕಾರ.]

ಪದ್ಯ ೫೧-೬೧: ಈ ಹನ್ನೊಂದು ಪದ್ಯಗಳಲ್ಲಿ ಮಾರ್ಗಕಾರನು ಕನ್ನಡ ಕಾವ್ಯರಚನೆಯಲ್ಲಿ ಕನ್ನಡ ಪದಗಳೊಂದಿಗೆ ಸಂಸ್ಕೃತ ಪದಗಳನ್ನು ಹೇಗೆ ಪ್ರಯೋಗಮಾಡಬಹುದು, ಹೇಗೆ ಮಾಡಕೂಡದು ಎಂದು ಮಾರ್ಗದರ್ಶನಮಾಡಿದ್ದಾನೆ. [ಸಂಸ್ಕೃತದ ಬಗೆಗೆ ಅವನು ಇತ್ತಿರುವ ಸಲಹೆಯನ್ನು ನಾವು ಇಂದು ಇಂಗ್ಲೀಷಿನ ಬಗೆಗೆ ಅನ್ವಯಿಸಿಕೊಳ್ಳಬಹುದು.]

ಪದ್ಯ ೫೧: ಕನ್ನಡ ಪದಗಳನ್ನು ಸಮ ಸಂಸ್ಕೃತಪದಗಳೊಂದಿಗೆ ಹೊಂದಿಕೆಯಾಗುವಂತೆ ಅರಿತು ಬೆರಸಿ ಹೇಳಬಹುದು; ಇದು ಕಾವ್ಯಾಗಮ ಪಂಡಿತರು ಹೇಳುವ ಮಾರ್ಗಕ್ಕೆ ಅನುಗುಣವಾಗಿರುವುದು; 'ಸಮ ಸಂಸ್ಕೃತ' ವಾಗಿ ಪರಿವರ್ತನೆಗೊಂಡಿರದ 'ಈ' ಸಂಸ್ಕೃತ ಪದಗಳೊಂದಿಗೆ (ಎಂದರೆ ಮುಂದಿನ ಪದ್ಯದಲ್ಲಿ ನಿರ್ದೇಶಿಸಿರುವ ಅಚ್ಚ ಸಂಸ್ಕೃತಾವ್ಯಯುಗಳೊಂದಿಗೆ) 'ಇದಂ' (ಎಂದರೆ ಕನ್ನಡವನ್ನು) 'ಬೆರಸಲ್ಕಮಾಗದು'.

ಇಲ್ಲಿ, 'ಸಮ ಸಂಸ್ಕೃತ' ಎಂದರೇನು? ಇದನ್ನು ಮಾರ್ಗಕಾರನು ವಿವರಿಸಿಲ್ಲ.

'ಸಕ್ಕದಮುಮನಱಿಯದೆ ಕನ್ನಡಮುಮಂ ಸಮಾಸೋಕ್ತಿಗಳೊಳ್ ಕುಱಿತು ಬೆರಸಿದೊಡೆ ವಿರಸಂ' ಎಂಬ ಸಮಾಸೋಕ್ತಿ ದೋಷಕ್ಕೆ ಮಾರ್ಗಕಾರನು ಕೊಟ್ಟಿರುವ ಲಕ್ಷ್ಯ ಪದ್ಯವನ್ನೆ ಕೇಶಿರಾಜನೂ ೮೦ನೆಯ ಸೂತ್ರಕ್ಕೆ ಲಕ್ಷ್ಯವಾಗಿ ಉದ್ಧರಿಸಿದ್ದಾನೆ. ಆ ಸೂತ್ರ ಹೀಗಿದೆ:

ಸಮುದಿತ ಸಂಖ್ಯಾವ್ಯಯ ರಹಿ
ತಮೆನಿಸಿ ವರ್ತಿಪ ನಿಘಂಟುವಿನ ನಾಮಪದೋ
ತ್ತಮ ವರ್ಣಪ್ರಕೃತಿಗಳಂ
ಸಮಸಂಸ್ಕೃತವೆಸರನಿಟ್ಟು ಲಿಂಗಂ ಮಾಳ್ಪರ್

ಕೇಶಿರಾಜನು,—(ಕಾಮ) ಕಾಮಂ, (ಭೀಮ) ಭೀಮಂ ಇತ್ಯಾದಿಯಾಗಿ ಪ್ರಯೋಗಗಳನ್ನು ಕೊಟ್ಟು, "ಆ ಸಮಸಂಸ್ಕೃತಂಗಳನಚ್ಚಗನ್ನಡದೊಳ್ ಬೆರಸಿ ಸಮಾಸಮಂ ಮಾಡಲಾಗದು; ಅದರ್ಕುದಾಹರಣೆ—ಮುಖತಾವರೆ, ಕಣ್ಕಮಲ ಎಂಬಂತೆ"[3] ಎಂದೂ ಸೇರಿಸಿ ಹೇಳಿದ್ದಾನೆ. ಸೂತ್ರದ ಪ್ರಕಾರ, ಯಾವ ಯಾವ ಸಂಸ್ಕೃತ

3 ಪ್ರೊ|| ಡಿ. ಕೆ. ಭೀಮಸೇನರಾಯರು ಉಸ್ಮಾನಿಯ ವಿಶ್ವವಿದ್ಯಾನಿಲಯದ ಹಸ್ತಲಿಖಿತ ಪ್ರತಿಗಳ ಸಂಗ್ರಹದಲ್ಲಿ ಕೇಶಿ೦ಃಜನ 'ಶಬ್ದಮಣಿದರ್ಪಣ' ದ ಹಸ್ತಪ್ರತಿಯೊಂದನ್ನು ಕಂಡುಹಿಡಿದು, ಅದರ ಆಧಾರದಮೇಲೆ 'ಶಬ್ದಮಣಿ ದರ್ಪಣದ ಪಾಠಾಂತರಗಳು' ಎಂಬ ವಿದ್ವತ್ಪೂರ್ಣವಾದ ಉಪನ್ಯಾಸವನ್ನು ಬರೆದಿಟ್ಟಿರುವರಷ್ಟೆ. ಅವರಲ್ಲಿ, ೮೦ನೆಯ ಸೂತ್ರದ ಪಾಠವನ್ನು ವಿವೇಚಿಸುತ್ತಾ, "ಇದರ ವಿವರಣೆಯಲ್ಲಿ ವ್ಯಾಖ್ಯಾನಕಾರನು 'ಸಮಸಂಸ್ಕೃತ ಪದಂಗಳನಚ್ಚಗನ್ನಡದೊಳ್ ಬೆರಸಿ ನಡಸುವುದು' ಎಂದಿರುವುದನ್ನು ಉಲ್ಲೇಖಿಸಿದ್ದಾರೆ. ಈ ಉಕ್ತಿ ಮೇಲೆ ಉದ್ಧರಿಸಿಕೊಟ್ಟಿರುವ 'ಸಮಸಂಸ್ಕೃತಂಗಳನಚ್ಚಗನ್ನಡದೊಳ್ ಬೆರಸಿ ಸಮಾಸಮಂ ಮಾಡಲಾಗದು' ಎಂಬ ಉಕ್ತಿಗೆ ವಿರುದ್ಧವಾಗಿರುವುದಾಗಿ ಕಂಡುಬರುತ್ತದೆ ಎಂದು ಭಾವಿಸಿ, "ಆದ್ದರಿಂದ ಅಚ್ಚಾದ ಪ್ರತಿಗಳಲ್ಲಿಯ ವಿವರಣೆ, ಪ್ರಯೋಗಗಳೆರಡೂ ಪ್ರಕ್ಷಿಪ್ತವಾಗಿರಬೇಕು. ಕೇಶಿರಾಜಃನು ಅವುಗಳನ್ನು ಆ ಸಂದರ್ಭದಲ್ಲಿ ಬರೆದಿರಲಾರನು" ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಸಂದರ್ಭದಲ್ಲಿ, 'ಬೆರಸಿ ನಡಸುವುದು' ಮತ್ತು 'ಬೆರಸಿ ಸಮಾಸಮಂ ಮಾಡ

ನಾಮಪ್ರಕೃತಿಗಳನ್ನು ಕನ್ನಡದ ವಿಭಕ್ತಿ ಪ್ರತ್ಯಯಗಳನ್ನು ಹತ್ತಿಸಲು ಯೋಗ್ಯವೆನಿಸುವ ಲಿಂಗಗಳನ್ನಾಗಿ (Nominal bases or stems) ಮಾಡಿಕೊಳ್ಳಬಹುದೋ ಅವೆಲ್ಲಾ ಸಮಸಂಸ್ಕೃತಗಳು. ಇಂತು, ಯಾವ ಬಗೆಯ ಸಂಸ್ಕೃತ ಪದಗಳು ಕನ್ನಡ ಲಿಂಗಗಳಾಗಿ ಸಮ ಸಂಸ್ಕೃತಗಳೆನಿಸಬಲ್ಲವು, ಯಾವವು ಹಾಗೆ ಎನಿಸಲಾರವು ಎಂಬು ದನ್ನು ಕೇಶಿರಾಜನು ಇನ್ನು ಮುಂದಿನ ಸೂತ್ರಗಳಲ್ಲಿ (೮೧–೮೭) ವಿವರವಾಗಿ ತಿಳಿಯಹೇಳಿದ್ದಾನೆ. ೮೧ನೆಯ ಸೂತ್ರದಲ್ಲಿ, "ಪ್ರಸಿದ್ಧ ಮಪ್ಪವ್ಯಯಂಗಳುಂ ತ್ಯದಾದಿಯುಂ ಶತೃಇಂತಮುಂ ಸಂಸ್ಕೃತ ದೊಳ್ ಸಮಾಸಮಂ ಪಡೆದಲ್ಲದೆ ಕನ್ನಡದೊಳ್ ಸ್ವಭಾವದಿಂ ಲಿಂಗಮಾಗವು" (ವೃತ್ತಿ) ಎಂದು ಹೇಳಿ, ಬಹುಮಟ್ಟಿಗೆ ಮಾರ್ಗ ಕಾರನ ಮತವನ್ನೆ ಅನುಮೋದಿಸಿದ್ದಾನೆ.

ಪದ್ಯ ೫೨: ಮಾರ್ಗಕಾರನು ಅವ್ಯಯಗಳ ವಿಚಾರವಾಗಿ ಹೀಗೆ ಹೇಳಿದ್ದಾನೆ; ಆ ಪದ್ಯದ ಅರ್ಥ:

'ಅಹರಹಃ, ಉಚ್ಚೈಃ, ನೀಚೈಃ, ಮುಹುರ್ಮುಹುಃ (ಮುಹುಃ ಮುಹುಃ), ಇತಸ್ತತಃ (ಇತಃ ತತಃ), ಪುನಃ ಪುನಃ, ಅಂತಃ, ಬಹಿಃ, ಆದ್, ಇಹ, ಪ್ರಾದುಃ, ಅಹೋ, ಸಹಸಾ—ಇವೇ ಮೊದಲಾದುವು ಅವ್ಯಯಗಳು, ಅಸಹಾಯಗಳು.'

ಲಾಗದು' ಎಂಬ ಉಕ್ತಿಗಳನ್ನು ಹೋಲಿಸಿ ಪರಿಶೀಲಿಸಬೇಕಾಗಿದೆ. 'ಬೆರಸಿ ಸಮಾಸಮಂ ಮಾಡಲಾಗದು' ಎನ್ನುವುದರಿಂದ, ಸಮಸಂಸ್ಕೃತಪದಗಳನ್ನು ಕನ್ನಡ ಲಿಂಗಗಳಾಗಿ ಮಾಡಿಕೊಂಡು ಕನ್ನಡ ಪದಗಳೊಂದಿಗೆ ವಾಕ್ಯಗಳಲ್ಲಿ ಹೊಂದಿಕೆಯಾಗುವಂತೆ ಬೆರಸಿ ಹೇಳಬಹುದೇ ಹೊರತು ಬೆರಸಿ ಸಮಾಸವನ್ನು ಮಾಡಲಾಗದು' ಎಂಬ ಅರ್ಥವು ವಿವಕ್ಷಿತವಾಗಿದೆ. ಇದು 'ಕವಿರಾಜಮಾರ್ಗ' ಕಾರನ ಮತಕ್ಕೆ ಹೊಂದಿಕೆಯಾಗುವುದೇ ಹೊರತು ವಿರುದ್ಧವೇನೂ ಆಗದೆಂದು ನಮ್ಮ ಅಭಿಪ್ರಾಯ. ಉ.ವಿ.ವಿ.ನಿ.ದ. ಪ್ರತಿಯ ವ್ಯಾಖ್ಯಾನಕಾರನು ಈ ಅರ್ಥ ವಿವಕ್ಷೆಯನ್ನು ಗ್ರಹಿಸದೆ, ಅದನ್ನು ಯಥೋಚಿತವಾಗಿ ಮಾರ್ಪಡಿಸಿಕೊಂಡು ತನ್ನ ವಿವರಣೆಯಾಗಿ ಕೊಟ್ಟಿರುವಹಾಗೆ ಕಂಡುಬರುತ್ತದೆ.

'ಅಸಹಾಯಂಗಳ್': ೮೧ನೆಯ ಸೂತ್ರದ ಕೆಳಗೆ, ಅವ್ಯಯಗಳು ಲಿಂಗಗಳಾಗುವುದಿಲ್ಲ ಎಂಬುದಕ್ಕೆ ಪ್ರಯೋಗಭಾಗದಲ್ಲಿ 'ಅಂತರ್, ಬಹಿರ್, ಉಚ್ಚೈಸ್, ನೀಚೈಸ್, ಮುಹುರ್, ಪುನರ್, ಅಹಸ್, ಈಷತ್, ಯುಗಪತ್, ಪೃಥಕ್-ಇವು ಮೊದಲಾದ ಸಹಜಾವ್ಯಯಂಗಳನಿರಿಸಿ ವಿಭಕ್ತಿಯಂ ಪತ್ತಿಸಲಾಗದು' ಎಂದು ಕೇಶಿರಾಜನು ಸ್ಪಷ್ಟವಾಗಿ ಹೇಳಿದ್ದಾನೆ. ಎಂದರೆ, ಸಂಸ್ಕೃತಾವ್ಯಯಗಳಿಗೆ ಕನ್ನಡ ವಿಭಕ್ತಿಗಳನ್ನು ಹತ್ತಿಸಕೂಡದು ಎಂದು ತಾತ್ಪರ್ಯ. ಕವಿರಾಜಮಾರ್ಗಕಾರನ 'ಅಸಹಾಯಂಗಳ್' ಎಂಬುದರ ವಿವರಣೆಯಂತಿದೆ ಇದು.

ಪದ್ಯ ೫೩-೫೫: 'ಬೆರಸಿರೆ ಕನ್ನಡದೊಳ್ ಬಂಧುರವಾಗದು ಕಾವ್ಯರಚನೆ.'—ಇಲ್ಲಿ 'ಬೆರಸಿರೆ' ಎಂಬ ಮಾತು ಗಮನಾರ್ಹ. ಎಂದರೆ, ಮೇಲ್ಕಂಡ ಸಂಸ್ಕೃತಾವ್ಯಯಗಳನ್ನು ಇದ್ದ ವಿದ್ದಂತೆ ಹಾಗೆ ಹಾಗೆಯೆ ಎಂದರೆ 'ವ್ಯಸ್ತ'ವಾಗಿ ಕನ್ನಡ ಪದಗಳೊಂದಿಗೆ ಬೆರಸಿದರೆ ಕಾವ್ಯರಚನೆ ಚೆಲುವಾಗದು. ಆದರೆ, ಈ ಅವ್ಯಯಗಳನ್ನು 'ಸಮಸ್ತ'ವಾಗಿ ಮಾಡಿ ಪ್ರಯೋಗಿಸಬಹುದು. ಈ ಅಭಿಪ್ರಾಯವನ್ನು (ಪದ್ಯ ೫೫ರಲ್ಲಿ) "ವಿದಿತ ಸಮಸಂಸ್ಕೃತೋದಿತ ಪದಂಗಳೊಳ್ **ಪುದಿದು ಬೆರಸಿ** ಬರೆ ಕನ್ನಡದೊಳ್ ಮುದಮನವು ತರ್ಕುಂ" ಎಂದು ವಿಸ್ತರಿಸಿ ವಿವರಿಸಿ ಹೇಳಿದ್ದಾನೆ. ಲಕ್ಷ್ಯ ಪದ್ಯಗಳನ್ನು ಪರಿಶೀಲಿಸಿದಲ್ಲಿ ಈ ಅಭಿಪ್ರಾಯವು ಮನದಟ್ಟಾಗುವುದು. ಬೆರಸಬಾರದುದಕ್ಕೆ ಲಕ್ಷ್ಯವಾದ ೫೪ನೆಯ ಪದ್ಯದಲ್ಲಿ—'**ಬಹಿರ್ ಅಂತರ್** ಉಪವನಂಗಳೊಳ್ **ಅಹರಹಂ** ಆ ಪರಭೃತಂಗಳುಲಿವ ರವಂಗಳ್ **ಸಹಸಾ** ತಳಮಳಗೊಳಿಸಿದವು **ಅಹೋ** ಮನಗಳಂ **ಇತಸ್ತತಂ** ವಿರಹಿಗಳಾ'—ಅವ್ಯಯಗಳೆಲ್ಲವೂ ತನಿಯಾಗಿ ಪ್ರಯೋಗವಾಗಿವೆ, ಇಲ್ಲವೆ ಕನ್ನಡ ಪ್ರತ್ಯಯದೊಂದಿಗೆ (ಮ್) ಪ್ರಯೋಗವಾಗಿವೆ. ಇದು 'ಅಮಾರ್ಗ'ಕ್ಕೆ ಲಕ್ಷ್ಯ. 'ಮಾರ್ಗ'ಕ್ಕೆ—ಸರಿಯಾದ ಕ್ರಮಕ್ಕೆ—ಕೊಟ್ಟಿರುವ ತಿದ್ದುಪಾಟಾದ ಲಕ್ಷ್ಯದಲ್ಲಿ—'ಬಹಿರುದ್ಯಾ

ನಾಂತರ', 'ಸಹಸೋದಿತಮತ್ತಕೋಕಿಲೋಚ್ಚೈರ್ಧ್ವಾನಂ', 'ಮುಹುರಾಕರ್ಣಿಸು', 'ಅಹರ್ನಿಶಂ' ಮುಂತಾದ ಪದಗಳೆಲ್ಲವೂ ಸಂಸ್ಕೃತ ವ್ಯಾಕರಣದ ಪ್ರಕಾರ (೫೭ನೆಯ ಪದ್ಯದಲ್ಲಿ 'ವಿದಿತ ಸಂಸ್ಕೃತೋಕ್ತಕ್ರಮಮಂ ಬಗೆದೊಂದುಮಾಡಿ ಪೇಳ್ದ' ರೀತಿಯಲ್ಲಿ) 'ಸಮಸಂಸ್ಕೃತೋದಿತ ಪದಂಗಳೊಳ್ **ಪುದಿದು ಬೆರಸಿ**' ಬಂದಿವೆ, ಎಂದರೆ ಸಮಸ್ತ ಪದಗಳಾಗಿ ರೂಪಪಡೆದಿವೆ. ಈ ಸಮಸ್ತ ಪದಗಳಲ್ಲಿ ಅಂತರ್ಗತಗಳಾದ ಅವ್ಯಯಗಳು ಈಗ 'ಅಸಹಾಯಂಗಳ್' ಅಲ್ಲ. ಸಮಸಂಸ್ಕೃತಗಳ ಸಹಾಯವನ್ನು ಪಡೆದಿವೆ; ಅವುಗಳ ಬೆಂಬಳಿಯಲ್ಲಿ ಪ್ರಯೋಗಾರ್ಹತೆಯನ್ನು ಪಡೆದಿವೆ. ಈ ಸಮಸ್ತ ಪದಗಳಲ್ಲಿ ಅವ್ಯಯಗಳು ಪೂರ್ವ ಪದಗಳಾಗಿರುವುದನ್ನು ಗಮನಿಸಬೇಕು.[4]

ಒತ್ತುಂಗರಡೆ= ಒತ್ತಿ ಬಾಜಿಸುವ ಕರಡೆ (ಕರಡಿ) ವಾದ್ಯ. (ಎರಡೂ ಕಡೆಯ ಬಾಯಿಗಳ ಚರ್ಮದ ಮುಚ್ಚಿಗೆಗಳನ್ನು ಬಿಗಿದು ಕಟ್ಟಿರುವ ಉದ್ದವಾದ ಬಾರುಪಟ್ಟಿಗಳನ್ನು ವಾದ್ಯದ ನಡುಭಾಗದಲ್ಲಿ ಎಡಗೈಯಿಂದ ಒತ್ತುತ್ತ ಬಲಗೈಯಲ್ಲಿ ಕಡ್ಡಿಯಿಂದ ಬಾಜಿಸುವ ವಾದ್ಯವಿಶೇಷ.) ('ಮೋದುಂಗರಡೆ' ಎಂಬ ಪಾಠವೂ ಇದೆ: 'ಪರುಷತರಮಕ್ಕು ಮೋದುಂಗರಡೆಯ—' ಇದಕ್ಕೆ, 'ಹೊಡೆದು ಬಾಜಿಸುವ ಕರಡೆ' ಎಂದು ಅರ್ಥಮಾಡಬಹುದು. ಈ ಪಾಠವನ್ನು ಸ್ವೀಕರಿಸಿದರೆ, 'ಅಕ್ಕುಂ' ಎನ್ನುವೆಡೆ 'ಅಕ್ಕು' ಎಂಬ ಅಸಾಧುವಾದ ಹಳಗನ್ನಡ ಕ್ರಿಯಾಪದ ರೂಪವನ್ನು ಇಟ್ಟುಕೊಳ್ಳಬೇಕಾಗುತ್ತದೆ. 'ಅಕ್ಕುಮ್ಮೋದುಂ' ಎಂದರೆ ಛಂದಸ್ಸು ಕೆಡುತ್ತದೆ.)

---

4 Samskrita particles (avyayas) as ಅನ್ತರ್, ಬಹಿರ್, ಪುನರ್ ... cannot form by themselves declinable bases in kannada ; but compound bases (samasalinga) with a final vowel, of which they form the first member, are declinable, e. g. ಅನ್ತರ್ಮುಖ, ಬಹಿರಂಗ, ಪುನಃಪಾಕ.—Grammar of the Kannada Language by F. Kittel, p. 31.

ಪರುಷ – ಕರ್ಕಶ. (ಉ. ವಿ. ವಿ. ನಿ. ದ ಶಬ್ದಮಣಿ ದರ್ಪಣ ಪ್ರತಿಯ ವ್ಯಾಖ್ಯಾನಕಾರನು 'ನಿಷ್ಠುರಂ, ಪರುಷಂ, ಗ್ರಾಮ್ಯಂ ಎಂದು ಪರುಷ ಎಂಬ ಶಬ್ದಕ್ಕೆ ನಿಘಂಟು' ಎಂದು ಅರ್ಥಹೇಳಿದ್ದಾನೆ.) (ಶ. ಪಾ., ಪು. ೬೯)

ಪದ್ಯ ೫೪ : ಉ. ವಿ. ವಿ. ನಿ. ದ ಶ. ಮ. ದ. ಪ್ರತಿಯಲ್ಲಿ ಉದ್ಧರಿಸಿರುವ ಈ ಪದ್ಯದ ಪಾಠ ಹೀಗಿದೆ:—

ಬಹಿರಿತರಮುಪವನಂಗಳೊ
ಳಹರಹಮಾ ಪರಭೃತಂಗಳಳಿಯ ರವಂಗಳ್
ಸಹಸಂ ತಳವೆಳಗೊಳಿಸಿದ
ವಹೋ ಮನಂಗಳನಿತಸ್ತತಂ ವಿರಹಿಗಳಾ ‖

ಈ ಪಾಠವನ್ನು ಕುರಿತು ಪ್ರೊ|| ಡಿ. ಕೆ. ಭೀ. ರವರ ಟೀಕೆ: "ಇಲ್ಲಿ ಪಾಠಾಂತರವನ್ನು ಗಮನಿಸಬೇಕು. ಮೂಲದಲ್ಲಿ ಸಹಸಾ ಎಂದಿದೆ. ಇಲ್ಲಿ ಸಹಸಂ ಎಂದಿದೆ. ಇಲ್ಲಿ ಕನ್ನಡ ಪ್ರತ್ಯಯವಿರುವುದರಿಂದ ಅಪಪ್ರಯೋಗಕ್ಕಾಗಿ ಈ ಪಾಠವೇ ಸರಿಯಾಗಿದೆ." ೫೦ನೆಯ ಪದ್ಯದಲ್ಲಿ ಕೊಟ್ಟಿರುವ ಸಂಸ್ಕೃತದ ಅವ್ಯಯಗಳನ್ನು ಕನ್ನಡದೊಂದಿಗೆ ಹಾಗೆಯೇ ಸ್ವತಂತ್ರವಾಗಿ ಬೆರಸಕೂಡದೆಂಬುದು ಮಾರ್ಗಕಾರನ ಆಶಯವಾಗಿರುವುದರಿಂದ, ದೋಷಕ್ಕೆ ಕೊಡುವ ಲಕ್ಷ್ಯ ಪದ್ಯದಲ್ಲಿ 'ಸಹಸಾ' ಎಂಬ ಅವ್ಯಯವನ್ನು ಅದರ ಸ್ವಸ್ವರೂಪದಲ್ಲಿಯೇ ಪ್ರಯೋಗಿಸುವುದರಲ್ಲಿ ಬಾಧಕವೇನಿಲ್ಲ. ಸಂಸ್ಕೃತಾವ್ಯಯಗಳಿಗೆ ಕನ್ನಡ ಪ್ರತ್ಯಗಳನ್ನು ಹತ್ತಿಸಿದರೂ ದೋಷವಾಗುವುದೆಂಬ ಅವನ ಆಶಯಕ್ಕೆ 'ಅಹರಹಮ್', 'ಇತಸ್ತತಂ' ಎಂಬಿವು ದೃಷ್ಟಾಂತಗಳಾಗುತ್ತವೆ. ಹೀಗಿರುವುದರಿಂದ, ಮೂಲದ ಪಾಠಕ್ಕಿಂತ ಮೇಲ್ಕಂಡ ಪಾಠವೇ ಸರಿ ಎಂದು ನಿರ್ಣಯಿಸಬೇಕಾದ ಆವಶ್ಯಕತೆಯಿಲ್ಲ. ಅಲ್ಲದೆ, 'ಪರಭೃತಂಗಳ' ಎಂಬ ಬಹುವಚನ ಪ್ರಯೋಗವಾದಮೇಲೆ 'ಅಳಿಯ' ಏಕವಚನ ಪ್ರಯೋಗವು ಸಮಂಜಸವಾಗಿ ಕಾಣುವು

ದಿಲ್ಲ. ಜೊತೆಗೆ, 'ಪರಭೃತಂಗಳಳಿಯ' ಎಂಬುದು ಸಮಾಸೋಕ್ತಿಯಲ್ಲ; ಪದದ ಸಂಧಿಯನ್ನು ಬಿಡಿಸಿದರೆ, 'ಪರಭೃತಂಗಳ್+ಅಳಿಯ' ಎಂದಾಗಿ, 'ರವಂಗಳ್' ಎಂಬ ಪದದೊಂದಿಗೆ ಅನ್ವಯವಾಗುವುದಿಲ್ಲ. ಆದ್ದರಿಂದ, ಮೇಲ್ಕಂಡ ಪಾಠವು ಅಷ್ಟು ವಿಶ್ವಸನೀಯವಾಗಿ ಕಾಣದು.

ಪದ್ಯ ೫೬ : ಈ ಲಕ್ಷ್ಯಪದ್ಯವು ಸಂಸ್ಕೃತಾವ್ಯಯಗಳು 'ವಿದಿತ ಸಮಸಂಸ್ಕೃತೋದಿತ ಪದಂಗಳೊಳ್ ಪುದಿದು ಬರೆ ಕನ್ನಡದೊಳ್ ಮುದಮನವು ತರ್ಕುಂ' ಎಂಬ (೫೫ನೆಯ ಪದ್ಯದಲ್ಲಿನ) ನಿರ್ದೇಶಕ್ಕನುಗುಣವಾಗಿದೆ. 'ಅಹರ್ನಿಶಂ' ಎಂಬ ಪದವು ಸ್ವಲ್ಪ ಸಂದೇಹಕ್ಕೆಡೆಗೊಡಬಹುದು. "ಇದು ಸಂಸ್ಕೃತದಲ್ಲಿ ಇದೇ ರೂಪದಲ್ಲಿದೆ. ಆದರಿಂದ ಸಮಸಂಸ್ಕೃತತ್ವಕ್ಕೆ ಭಂಗವಾಯಿತು ಎನ್ನಬಾರದು . . . ಇಂಥ ದೃಷ್ಟಾಂತವು ಗ್ರಾಹ್ಯವೆಂದು ಗ್ರಂಥಾದಿಯಲ್ಲಿ ಸರಸ್ವತಿಯನ್ನು ಸ್ತುತಿಸುವ ೩ನೆಯ ಪದ್ಯದೊಳಗಿನ 'ಚಿರಂ| ದೇವಿ ಸರಸ್ವತಿ . . .' ಎಂಬ ಭಾಗದಲ್ಲಿರುವ 'ಚಿರಂ' ಪದದಿಂದಲೂ ಸಿದ್ಧವಾಗುತ್ತಿದೆ." (ಕ.ರಾ. ವಿವೇಕ—ಭಾಗ ೨)

ಪದ್ಯ ೫೭-೫೮ : 'ನೆಗಳ್ದಿರ್ದ ಕನ್ನಡಂಗಳೊಳ್'–೪೬ನೆಯ ಪದ್ಯದಲ್ಲಿ ಪ್ರಯೋಗಿಸಿರುವ 'ಕನ್ನಡಂಗಳ್' ಎಂಬ ಬಹುವಚನ ಪ್ರಯೋಗದ ಅರ್ಥವೇ ಬೇರೆ, ಇಲ್ಲಿನದೇ ಬೇರೆ ಎಂಬುದು ಸ್ಪಷ್ಟ. "'ನೆಗಳ್ದಿರ್ದ ಕನ್ನಡಂಗಳೊಳ್' ಎಂದರೆ 'ಪ್ರಸಿದ್ಧವಾದ ಸಮಸಂಸ್ಕೃತಗಳೆನ್ನಿಸಿದ ಕನ್ನಡ ಮಾರ್ಗೀಯ ಪದಗಳಲ್ಲಿ' ಎಂಬ ಅರ್ಥ. ಅಂಥ ಪದಗಳು ಅನೇಕವಾಗಿರುವುದರಿಂದಲೇ 'ಕನ್ನಡಂಗಳೊಳ್' ಎಂದು ಬಹುವಚನ ಪ್ರಯೋಗವನ್ನೆಸಗಿರಬೇಕು. ಹಾಗಿಲ್ಲದೆ, 'ದೇಸಿಗನ್ನಡಂಗಳೊಳ್' ಎಂದಾಗುತ್ತಿದ್ದರೆ ಅವುಗಳ ವಿವೇಚನೆಗೆ 'ಅಗಣಿತಗುಣ ವಿದಿತ ಸಂಸ್ಕೃತೋಕ್ತ ಕ್ರಮಮುಂ' ಬಗೆವುದಾದರೂ ಯಾಕೆ?" ಎಂದು ಮುಳಿಯ ತಿಮ್ಮಪ್ಪಯ್ಯನವರು ವ್ಯಾಖ್ಯಾನಿಸಿದ್ದಾರೆ.

ಸಮಸಂಸ್ಕೃತವನ್ನೇ 'ತತ್ಸಮ' ಎಂದು ತಿಳಿಯುವುದು ಈಗಿನ ರೂಢಿ. ಆದರೆ, ಕೇಶಿರಾಜನ ಪ್ರಕಾರ ತತ್ಸಮ ಶಬ್ದಗಳೇ ಬೇರೆ. (ಶ.ಮ.ದ. ಸೂತ್ರಗಳು ೨೯೭–೨೯೮). ಅವನ ಅಭಿಪ್ರಾಯದಂತೆ, 'ಈ ಶಬ್ದಂಗಳ್ ಕನ್ನಡಕ್ಕಂ ಸಂಸ್ಕೃತಕ್ಕಂ ಸರಿ.' ಎಂದರೆ, ಈ ಪದಗಳನ್ನು ಸಂಸ್ಕೃತ ಪದಗಳೊಂದಿಗಾಗಲಿ ಕನ್ನಡ ಪದಗಳೊಂದಿಗಾಗಲಿ ಕೂಡಿಸಿ ಸಮಾಸೋಕ್ತಿಮಾಡಬಹುದು. ಮಾರ್ಗಕಾರನು ಈ ತತ್ಸಮ ವಿಚಾರವನ್ನು ಕುರಿತು ಹೇಳಿಲ್ಲ. ಆದರೆ, ಸಂಸ್ಕೃತ ಪದಗಳನ್ನೂ ಕನ್ನಡ ಪದಗಳನ್ನೂ ಸಮಾಸೋಕ್ತಿಗಳಲ್ಲಿ ಬೆರಸಬಾರದೆಂದು ಎಚ್ಚರಿಕೆ ನೀಡಿದ್ದಾನೆ. ಮಾರ್ಗಕಾರನು ಕೊಟ್ಟಿರುವ ದೋಷಲಕ್ಷ್ಯವನ್ನೆ ಕೇಶಿರಾಜನೂ ಉದಾಹರಿಸಿದ್ದಾನೆ.

'ಮಱುಗುವ ಪಾಲ್ಗಳೆಯ ಪನಿಗಳಂ ಬೆರಸಿದವೋಲ್'—ಕುದಿಯುವ ಹಾಲಿಗೆ ಮಜ್ಜಿಗೆಯ ಹನಿಗಳನ್ನು ಬೆರಸಿದ ಹಾಗೆ. (ಈ ಮಾತಿನ ಅರ್ಥವು ಕೇಶಿರಾಜನ ಕಾಲಕ್ಕಾಗಲೇ ಬೆಳೆದಿರುವುದು ಗಮನಾರ್ಹ: ಮಱುಗು–ಸಂತಾಪೇ.)

ಪದ್ಯ ೬೨: ಈ ಪದ್ಯವು ಭಾಮಹನ 'ಕಾವ್ಯಾಲಂಕಾರ' ಶ್ಲೋಕದ (I–೪೭)[5] ಅನುವಾದ.

ಪದ್ಯ ೬೩: ಇದು 'ಶ್ರುತದುಷ್ಟ' ಕ್ಕೆ ಉದಾಹರಣೆ. ಇದರ ಎರಡನೆಯ ಚರಣಭಾಗವು ಪಾಠಕರ ಪ್ರತಿಯಲ್ಲಾಗಲಿ, ಮದ್ರಾಸು ಮುದ್ರಣದ ಪ್ರತಿಯಲ್ಲಾಗಲಿ ಅರ್ಥವಾಗುವಂತಿಲ್ಲ (ಅನುಬಂಧವನ್ನು ನೋಡಿ). ಮುಳಿಯ ತಿಮ್ಮಪ್ಪಯ್ಯನವರು ಅದನ್ನು ಹೀಗೆ ತಿದ್ದಿರುತ್ತಾರೆ: '—ದೂರ[ಮೋಡಲಾಱ] ಪೂರ್ಣರಂ'. ನಾವು ದೊರೆತ ಪಾಠಗಳಲ್ಲಿನ ಅಕ್ಷರಗಳನ್ನೆ ಸ್ಥಾನಾಂತರಗೊಳಿಸಿ ಅರ್ಥವ್ಯಕ್ತಿಯಾಗುವಂತೆ

---

5 ಭಾಮಹನ ಇನ್ನೊಂದು ಶ್ಲೋಕದಲ್ಲಿ (I–೩೭) 'ನೇಯಾರ್ಥ', 'ಕ್ಲಿಷ್ಟ', 'ಅನ್ಯಾರ್ಥ', 'ಅವಾಚಕ', 'ಅಯುಕ್ತಿಮತ್', 'ಗೂಢಶಬ್ದಾಭಿದಾನ'– ಈ ದೋಷಯುಕ್ತಪದಗಳನ್ನು ಕವಿಗಳು ಪ್ರಯೋಗಿಸರೆಂದು ಹೇಳಿದ್ದಾನೆ.

ಪುನಸ್ಸಂಯೋಜನೆ ಮಾಡಿರುತ್ತೇವೆ, ಅಷ್ಟೆ. ಇದು ಕವಿಯ ಮೂಲ ಪಾಠಕ್ಕೆ ಅತ್ಯಂತ ಸಮೀಪವೆಂದು ನಮ್ಮ ನಂಬುಗೆ.

ಅನ್ವಯ ಕ್ರಮದಲ್ಲಿ ಈ ಪದ್ಯದ ಪದವಿಭಾಗ:

'ನಿಲ್, ತೋಳಂ ಬರ್ಪುದು, ಸಯ್ತುಲ್ತು, ಊರುಂ ದೂರಂ ಎನ್, ಎಡೆತುಡಗರ್ ಪೂರಂ, ಕಲ್ತು ಉಲ್ಲಿಂದೆ ಓಡುವಂ ಎಂಬಂತು ಅಲ್ತು, ತಂದ ಕೂಟಿಂ ಊ ಸಂಗಮದೊಳ್ ಉಣ್ಣಿಂ.'

(ಕಾಡುದಾರಿಯಲ್ಲಿ ಒಬ್ಬ ಪ್ರಯಾಣಿಕನು ತನ್ನ ಜೊತೆಯವರಿಗೆ ಹೇಳುವ ಎಚ್ಚರಿಕೆಯ ಮಾತಿನಂತಿದೆ: ನಿಲ್ಲು; ತೋಳ ಬರುತ್ತಿದೆ; ನಮ್ಮ ಪಾಡು ಈಗ ನೆಟ್ಟಗಿಲ್ಲ; ಊರಿಗೆ ಹಿಂದಿರುಗೋಣವೆಂದರೆ, ಅದು ಕೂಡ ದೂರವೆನ್ನು; ಇತ್ತ, ಹಾದಿಯ ಕಳ್ಳರು (ಎಡೆತುಡಗರ್) ಹೆಚ್ಚಾಗಿದ್ದಾರೆ; ಈಗ ಓಡುವುದನ್ನು ಕಲಿತು ಇಲ್ಲಿಂದ ಓಡೋಣವೆಂದರೆ, ಅದು ಅಷ್ಟು ಸುಲಭವಲ್ಲ; ತಂದಿರುವ ಬುತ್ತಿಯ ಅನ್ನವನ್ನು ಆ ನದಿಯ ಸಂಗಮದಲ್ಲಿ ಉಣ್ಣಿರಿ.) (ಅಲ್ಲಿ ಇಲ್ಲಿ ಎನ್ನುವ ಹಾಗೆ 'ಉಲ್ಲಿ' ಎಂಬ ಪ್ರಯೋಗವನ್ನೂ, ಆ ಈ ಎನ್ನುವ ಹಾಗೆ 'ಊ' ಎಂಬ ಪ್ರಯೋಗವನ್ನೂ ಗಮನಿಸಿ.)

ಈ ಪದ್ಯದ ಅರ್ಥದಲ್ಲಿ ಯಾವ ಬಗೆಯ ದೋಷವೂ ಇಲ್ಲದಿದ್ದರೂ, ಪದಸಂಯೋಜನೆಯಲ್ಲಿ ಎಂದರೆ ಪದಗಳನ್ನು ಕೂಡಿಸಿ ಹೇಳುವಾಗ ಒಂದೆರಡು ಕಡೆ ಅವು ಕಿವಿಗೆ ಬೀಳುವ ತೆರದಲ್ಲಿ ಅಸಭ್ಯವಾದ ಅರ್ಥವು ಬೋಧೆಯಾಗುತ್ತದೆ. ಆದ್ದರಿಂದ ಇದು 'ಶ್ರುತದುಷ್ಟ' ಕಾವ್ಯ ದೋಷ. (ಹೇ+ಲತಾಂಗಿ ಎಂದ ಹಾಗೆ.) ಈ ರೀತಿ ಪದ್ಯ ರಚನೆ ಮಾಡಬಾರದು.

ಪದ್ಯ ೬೪: ಇದು 'ಅರ್ಥದುಷ್ಟ'ಕ್ಕೆ ಉದಾಹರಣೆ. ಈ ಪದ್ಯದ ಪದ ಸಂಯೋಜನೆಯಲ್ಲಿ ಯಾವ ದೋಷವೂ ಇಲ್ಲ. ಆದರೆ, 'ಊರ್ಧ್ವ

ರೇತಂ', 'ಹಿರಣ್ಯರೇತೋತಿತೀವ್ರಂ', 'ಪರಮಭಗಸಹಿತೆ'- ಈ ಪದಗಳು ಅಸಭ್ಯವಾದ ಅರ್ಥಪ್ರತೀತಿಗೂ ಎಡೆಗೊಡುತ್ತಿವೆ.

ಪದ್ಯ ೬೫ : ಇದರಲ್ಲಿ ಅರ್ಥದೋಷವಾವುದೂ ಇಲ್ಲ. ಆದರೆ, ಮೊದಲಿಂದ ಕಡೆಯುವರೆಗೆ ರೇಫಯುಕ್ತವಾದ ಮತ್ತು ಇತರ ಬಗೆಯ ಪರುಷವರ್ಣಗಳಿಂದ ಕೂಡಿದ ಸಂಯುಕ್ತಾಕ್ಷರಗಳು ಶ್ರುತಿಗೆ ಕಷ್ಟವಾಗಿ (ಕರ್ಕಶವಾಗಿ) ಪರಿಣಮಿಸಿವೆ.

ಈ ಪದ್ಯದ ಅನ್ವಯಕ್ರಮ : ಆಗಳ್, ಪರದರ್ಗೆ (ವರ್ತಕರಿಗೆ, ವೈಶ್ಯರಿಗೆ), ಆ ಪಾರ್ವರ್ಗೆ (ಆ ಬ್ರಾಹ್ಮಣರಿಗೆ), ಅರಸರ್ಗೆ (ರಾಜರಿಗೆ, ಕ್ಷತ್ರಿಯರಿಗೆ), ಕುಡಿಯರಪ್ಪ (ಕಡೆಯ ವರ್ಣದವರಾದ ಒಕ್ಕಲಿಗರಿಗೆ), ಆ ನಾಲ್ವರ್ಗೆ, ಸ್ಥಿರ, ಗೋಪ (ಪಶುಪಾಲನ), ಅಧ್ಯಾಯ (ಅಧ್ಯಯನ ಎಂದರೆ ವೇದಾಧ್ಯಯನ ಮುಂತಾದ ಓದುವಿಕೆ), ಕ್ಷ್ಮಾಪರಿಪಾಲ್ಯ, (ಭೂ ಪರಿಪಾಲನ), ಕ್ಷೇತ್ರಕರ್ಷಣಂಗಳ್ (ನೆಲವನ್ನು ಉಳುವಿಕೆ), ಕ್ರಿಯೆಗಳ್, ಆಯ್ತು.

ಪದ್ಯ ೬೭ : ಕವಿಯ ಆಶಯವೇನೆಂಬುದನ್ನು ಕಲ್ಪನೆಮಾಡಿಕೊಳ್ಳುವುದೂ ಕಷ್ಟವಾಗಿರುವಲ್ಲಿ, 'ಕಲ್ಪನೋಕ್ತಿ ಕಷ್ಟ'ವೆಂಬ ದೋಷವುಂಟಾಗುವುದು. ಈ ದೋಷಕ್ಕೆ ಲಕ್ಷ್ಯವಾದ ಈ ಪದ್ಯದಲ್ಲಿ, 'ಸಮಂಜಸನೆಂಬವನು ಶತ್ರು ಸೈನ್ಯವನ್ನು ಸದೆಬಡಿದು ಮಾರಿಸಿದನು' ಎಂಬ ನಾಲ್ಕನೆಯ ಪಾದದ ಅರ್ಥದೊಂದಿಗೆ ಉಳಿದ ಪದ್ಯಭಾಗವನ್ನು ಅರ್ಥೈಸಿ ಅನ್ವಯಮಾಡುವುದು ಕಷ್ಟವಾಗಿದೆ. ಈ ಕ್ಲೇಶವನ್ನೊಡ್ಡಬೇಕೆಂದೇ ಈ ಲಕ್ಷ್ಯಪದ್ಯದ ರಚನೆಯಾಗಿರುವಾಗ, ಅದನ್ನು ಅರ್ಥಮಾಡಿಕೊಳ್ಳಬೇಕೆಂಬ ಸಾಹಸ ಅಪೇಕ್ಷಣೀಯವಾದರೂ ಅನಾವಶ್ಯಕ!

ಪದ್ಯ ೬೮ : ಮೇಲೆ ಹೇಳಿದ ನಾಲ್ಕು ಬಗೆಯ ದೋಷಗಳು ಯಾವ ಸಂದರ್ಭಗಳಲ್ಲಿ ದೋಷಗಳೆನಿಸುವುದಿಲ್ಲ ಎಂಬುದನ್ನು ಈ ಪದ್ಯದಲ್ಲಿ ಮಾರ್ಗಕಾರನು ನಿರ್ದೇಶಿಸಿದ್ದಾನೆ: 'ಚಕ್ರಬಂಧ', 'ಮುರಜಬಂದ', 'ಗೋಮೂತ್ರಿಕಾ' ಮುಂತಾದ 'ಚಿತ್ರಕಾವ್ಯ' ಅಥವಾ

'ದುಷ್ಕರ ಕಾವ್ಯ'ಗಳಲ್ಲಿ (ವಿಸ್ಮಯಕಾರಿಯೂ ರಚಿಸಲು ಕಷ್ಟಕರವೂ ಆದ ಕವಿತಾಬಂಧಕ್ಕೆ 'ಚಿತ್ರಕಾವ್ಯ', 'ದುಷ್ಕರಕಾವ್ಯ' ಎಂಬ ಹೆಸರು). 'ಶ್ರುತಿಕಷ್ಟ' ಎಂಬುದು ದೋಷವಾಗಿ ಪರಿಣಮಿಸುವುದಿಲ್ಲ. ಏಕೆಂದರೆ, ಅಂಥ ರಚನೆಗಳಲ್ಲಿ ಶ್ರುತಿಕಷ್ಟಗಳಾದ ಅಕ್ಷರ ಯೋಜನೆ ಅನೇಕ ವೇಳೆ, ಅನಿವಾರ್ಯವಾಗುತ್ತದೆ. ಉಳಿದ ಮೂರು ದೋಷಗಳೂ 'ಪಗರಣ' ಎಂದರೆ 'ಪ್ರಕರಣ' (ಉದಾ: 'ಮೃಚ್ಛಕಟಿಕಾ') ಎಂಬ ದೃಶ್ಯ ಕಾವ್ಯಪ್ರಭೇದದಲ್ಲಿ ನಗೆಯನ್ನು ತರುವವಾದ್ದರಿಂದ ಅಲ್ಲಿ ಅವು ದೋಷಗಳೆನಿಸುವುದಿಲ್ಲ.

ನಾಟ್ಯಶಾಸ್ತ್ರದ ಪ್ರಕಾರ, 'ಪ್ರಕರಣ'ದಲ್ಲಿ ಹಾಸ್ಯ ಪ್ರಧಾನ ರಸವಲ್ಲ; ಅದು ಶೃಂಗಾರ ವೀರಗಳಿಗೆ ಪೋಷಕವಾಗಿ ಬರಬಹುದು. 'ಮೃಚ್ಛಕಟಿಕ'ದಲ್ಲಿ ಶಕಾರ ಹಾಸ್ಯಪಾತ್ರ. ಸಂಸ್ಕೃತದ 'ಪ್ರಕರಣ'ವು ಹಾಸ್ಯರಸ ಪ್ರಧಾನವಾದ 'ಪಗರಣ'ವಾಗಿ ಪರಿಣಮಿಸಿ ಕನ್ನಡ ನಾಡಿನಲ್ಲಿ ಬಳಕೆಗೆ ಬಂದಿದ್ದಿತೆ ಎಂಬುದು ವಿಚಾರಣೀಯ. ನಕಲಿ ನಾಟಕ, ನಕಲಿಯ ಪಾತ್ರ ಎಂಬ ಅರ್ಥಗಳಲ್ಲಿ, 'ಪಗರಣ', 'ಪಗರಣಿಗ' ಎಂಬ ಮಾತುಗಳು 'ವಡ್ಡಾರಾಧನೆ'ಯಲ್ಲಿ ಪ್ರಯೋಗವಾಗಿವೆ.

ದುಷ್ಕರ ಕಾವ್ಯ=ವಿಸ್ಮಯಕಾರಿಯೂ ರಚಿಸಲು ಕಷ್ಟಕರವೂ ಆದ ಕವಿತಾಬಂಧ. ಅಗರ್ಹಿತಪ್ರಾಯ=ಅನಿಂದ್ಯ; ನಿರ್ದುಷ್ಟ.

ಪದ್ಯ ೬೯-೭೦: ಯತಿಭಂಗ, ಅರ್ಥಶೂನ್ಯ, ವಿರುದ್ಧಾರ್ಥ, ಉಕ್ತ ಪುನರುಕ್ತ, ಚ್ಯುತಯಾಥಾಸಂಖ್ಯ, ವ್ಯವಹಿತ, ಅಚ್ಛಂದ, ವಿಸಂಧಿ, ನೇಯಾರ್ಥ, ಆಗಮವಿರುದ್ಧ, ಸಮಯವಿರುದ್ಧ, ನ್ಯಾಯವಿರುದ್ಧ, ಕಳಾವಿರುದ್ಧ, ಕಾಲವಿರುದ್ಧ, ಲೋಕವಿರುದ್ಧ, ದೇಶವಿರುದ್ಧ—ಈ ೧೬ ದೋಷಗಳು ಮೇಲೆ ಹೇಳಿದ ೪ ದೋಷಗಳಿಂದ ಸ್ವರೂಪದಲ್ಲಿ ಭಿನ್ನವಾದ ಇತರ ದೋಷಗಳು.

ಈ ದೋಷವರ್ಣನ ವಿಭಾಗದಲ್ಲಿ ಮಾರ್ಗಕಾರನು ಬಹುಮಟ್ಟಿಗೆ ಭಾಮಹನನ್ನೇ ಅನುಸರಿಸಿದ್ದಾನೆ. ಭಾಮಹನ ಶ್ಲೋಕಗಳು :

"ಅಪಾರ್ಥಂ ವ್ಯರ್ಥಮೇಕಾರ್ಥಂ ಸಸಂಶಯಮಪಕ್ರಮಮ್ |
ಶಬ್ದಹೀನಂ ಯತಿಭ್ರಷ್ಟಂ ಭಿನ್ನವೃತ್ತಂ ವಿಸಂಧಿ ಚ ||
ದೇಶ ಕಾಲ ಕಲಾ ಲೋಕ ನ್ಯಾಯಾಗಮ ವಿರೋಧಿ ಚ |
ಪ್ರತಿಜ್ಞಾಹೇತುದೃಷ್ಟಾಂತಹೀನಂ ದುಷ್ಟಂ ಚ ನೇಷ್ಯತೇ || "(IV-೧, ೨)

(ಅಪಾರ್ಥ, ವ್ಯರ್ಥ, ಏಕಾರ್ಥ, ಸಂದಿಗ್ಧ, ಅಪಕ್ರಮ, ಶಬ್ದಹೀನ, ಯತಿಭ್ರಷ್ಟ, ಭಿನ್ನವೃತ್ತ, ವಿಸಂಧಿ, ದೇಶವಿರುದ್ಧ, ಕಾಲವಿರುದ್ಧ, ಕಲಾವಿರುದ್ಧ, ಲೋಕವಿರುದ್ಧ, ನ್ಯಾಯವಿರುದ್ಧ, ಆಗಮವಿರುದ್ಧ, ಪ್ರತಿಜ್ಞಾಹೀನ, ಹೇತುಹೀನ, ದೃಷ್ಟಾಂತಹೀನ—ಈ ದೋಷಗಳು ಬರಕೂಡದು.)

ಕೆಲವು ದೋಷಗಳ ಹೆಸರುಗಳು ಕ. ರಾ. ಮಾರ್ಗದಲ್ಲಿ ಬೇರೆಯಾಗಿವೆ.

ಪದ್ಯ ೭೧: ಯತಿ ಎಂದರೆ 'ಉಸಿರ್ವ ತಾಣ'; ಪದ್ಯವನ್ನು ಓದುವಾಗ ಉಸಿರು ನಿಲ್ಲುವ (ಅಥವಾ ನಿಲ್ಲಿಸಬೇಕಾದ) ವಿಶ್ರಾಮಸ್ಥಾನ.[6] ವೃತ್ತಜಾತಿಗಳ 'ಪದಪದ್ಧತಿ'ಯಲ್ಲಿ ಇದನ್ನು ಗಮನಿಸಬೇಕು. (ಬೇರೆ ಬೇರೆ ಛಂದಸ್ಸಿನ ಪದ್ಯಗಳನ್ನು—ಅದರಲ್ಲಿ ವಿಶೇಷವಾಗಿ ಸಂಸ್ಕೃತ ವೃತ್ತಗಳನ್ನು—ಓದುವಾಗ ಪ್ರತಿಪಾದದಲ್ಲಿಯೂ ಒಂದು ನಿಯತ ಸ್ಥಾನದಲ್ಲಿ ಓದನ್ನು ನಿಲ್ಲಿಸಿ, ಉಸಿರನ್ನು ತೆಗೆದುಕೊಂಡು, ಮತ್ತೆ ಓದನ್ನು ಮುಂದುವರಿಸಬೇಕೆನ್ನಿಸುತ್ತದೆ. ಈ ಸಹಜಕ್ರಿಯೆಗೆ 'ಯತಿ' ಎಂಬುದು ಸಂಸ್ಕೃತದಲ್ಲಿ ಎಷ್ಟು ಉಚಿತವಾದ ಹೆಸರೋ

---

6 "ಶ್ಲೋಕೇಷು ನಿಯತಸ್ಥಾನಂ ಪದಚ್ಛೇದಂ ಯತಿಂ ವಿದುಃ"

—ದಂಡಿ IV—೨೯.

"ಯತಿಯೆಂದರೆ ಪದ್ಯಗಳನ್ನು ಓದುವಾಗ ಅರ್ಥಸ್ಫೂರ್ತಿ ಕೆಡದಂತೆ ಪದ್ಯಪಾದದ ನಿಯತವಾದ ಒಂದೊಂದೆಡೆಯಲ್ಲಿ ನಿಲ್ಲಿಸುವುದು. ಹಾಗೆ ನಿಲ್ಲಿಸುವುದು ಪದದ ಮಧ್ಯದಲ್ಲಿಯಾದರೆ ಅರ್ಥಸ್ಫೂರ್ತಿ ಕೆಡುವುದರಿಂದ ಪದದ ಕೊನೆಯಲ್ಲಿಯೇ ನಿಲ್ಲಿಸಬೇಕು."

—ಕ. ಕೈ. I—ಪು. ೯೧.

ಕನ್ನಡದಲ್ಲಿ 'ಉಸಿರ್ವತಾಣ' ಎಂಬ ಸಂಕ್ಷಿಪ್ತ ವಿವರಣೆ ಅಷ್ಟೇ ಉಚಿತ. ಇಂಗ್ಲಿಷಿನಲ್ಲಿ ಇದು Caesura ಎಂದು ಛಂದಶ್ಶಾಸ್ತ್ರದಲ್ಲಿ ಪ್ರಸಿದ್ಧ.)

ಪದ್ಯ ೭೨: ಇದು ಯತಿಭಂಗಕ್ಕೆ ಉದಾಹರಣೆ: ಕಂದ ಪದ್ಯದಲ್ಲಿ ಪೂರ್ವೋತ್ತರಾರ್ಧಗಳಲ್ಲಿ ಆರನೆಯ ಗಣಸ್ಥಾನವಲ್ಲಿ 'ಜ' ಗಣವಾಗಲಿ (᳴—᳴) ಸರ್ವಲಘುವುಳ್ಳ ಗಣವಾಗಲಿ (᳴ ᳴ ᳴ ᳴) ಬಂದು, ಮೊದಲಿನ ಲಘುವಿನ ಮುಂದೆ ಯತಿ ಇರಬೇಕು. ಈ ಪದ್ಯದ ನಾಲ್ಕನೆಯ ಪಾದದಲ್ಲಿ ಯತಿ ಭಂಗವಾಗಿದೆ:

- ᳴᳴ - - ᳴᳴᳴᳴ - - ᳴᳴ -
—ಕ್ಕೋಡಿ ಬ | ದ್ದಂಕ | ಲ್ಕಮುಱಿವ | ರಾರ್ಭೂ | ತಳದೊಳ್

ಆರನೆಯ ಗಣದಲ್ಲಿ 'ಲ್ಕ | ಮುಱಿವ' ಎಂಬಂತೆ ನಿಲ್ಲಿಸಿ ಓದಿದರೆ, ಅರ್ಥ ಕೆಡುವ ರೀತಿಯಲ್ಲಿ ಪದಚ್ಛೇದವಾಗುತ್ತದೆ. ಇದೇ ಪಾದವನ್ನು ೭೪ನೆಯ ಪದ್ಯದಲ್ಲಿ ಯತಿಭಂಗವಾಗದಂತೆ ತಿದ್ದಿ ಬರೆದಿರುವುದನ್ನು ಗಮನಿಸಿ:

- ᳴᳴ - - ᳴ - ᳴ - - ᳴᳴ -
— ಕ್ಕೋಡಿಬ | ದ್ದಂಕ | ಲ್ಕೆ ಕಲ್ತ | ರಾರ್ಬಿ | ನ್ನಣಮುಂ

ಪದ್ಯ ೭೩: ೭೨ನೆಯ ಪದ್ಯದಲ್ಲಿ ಯತಿಭಂಗವಾಗಿದೆಯೆಂದು ತಿಳಿಸಿ, ಯತಿಯನ್ನು ಹೇಳಿದ ಕಡೆ ನಿಲ್ಲುವಂತೆ ಹೇಳಿದರೆ ಅದು ಅದೋಷವೆಂದು ಹೇಳಿದೆ. ತಡವಡಿಸಿ=ತೆಡಬಡಿಸಿ (ಹೊ.ಗ.?), ತಪ್ಪುಮಾಡಿ (?).

ಪದ್ಯ ೭೫: **ಯತಿಭಂಗ**: "ಯತಿಭಂಗವು ದೋಷವೇ ಸರಿ. ಆದರೂ, ಪೂರ್ವದ ಲಕ್ಷಣಾಚಾರ್ಯರು ಕನ್ನಡದಲ್ಲಿ ಆ ದೋಷವನ್ನೇ ಎತ್ತಿ ಹಿಡಿದು, ದೇಸಿಗೆ ಹೊಂದಿಕೊಂಡ ಆ ಯತಿಭಂಗವನ್ನು ಒಪ್ಪಿಕೊಂಡು, ಕನ್ನಡದಲ್ಲಿ ಖಂಡಪ್ರಾಸವು ಅತಿಶಯ(ವಿಶಿಷ್ಟ)ವೆಂದು ಅದನ್ನೇ ನೆಲೆಗೊಳಿಸಿ, ಯತಿಯನ್ನು ಮೀರಿದರು."—ಇದು ಪದ್ಯದ ಅಭಿಪ್ರಾಯ.

"ಯತಿವಿಲಂಘನದಿಂದರಿದಲ್ತೆ ಕನ್ನಡಂ" ಎಂದು ಕೇಶಿರಾಜನೂ ಹೇಳಿದ್ದಾನೆ. ಸಂಸ್ಕೃತದಿಂದ ಕನ್ನಡಕ್ಕೆ ಬಂದ ವೃತ್ತಗಳಲ್ಲಿ ಯತಿ ನಿಯಮವನ್ನು ಪಾಲಿಸದಿರುವುದೇ ರೂಢಿಯಾಯಿತು. ಆದರೆ ಕಂದ ಪದ್ಯಗಳಲ್ಲಿಯೂ, ತ್ರಿಪದಿ ಮುಂತಾದ ಕೆಲವು ಕನ್ನಡ ಪದ್ಯಜಾತಿ ಗಳಲ್ಲಿಯೂ ಯತಿನಿಯಮ ಕಂಡುಬರುತ್ತದೆ.

ವೃತ್ತ ಕಂದ ಮೊದಲಾದ ಕನ್ನಡ ಪದ್ಯಗಳಲ್ಲಿ ಸಂಸ್ಕೃತದಲ್ಲಿ ಯಂತೆ ಪ್ರತಿ ಪಾದಕ್ಕೂ ವಾಕ್ಯವು ನಿಲುಗಡೆಯಾಗದೆ ಮುಂದು ವರಿಯುತ್ತದೆ; ಕನ್ನಡದಲ್ಲಿ ರೂಢಿಗೆ ಬಂದ ಆದಿಪ್ರಾಸವು ಅಂತಹ ವಾಕ್ಯಗಳನ್ನು ಪಾದಾಂತ ಪಾದಾದಿಗಳ ನಡುವೆ ಖಂಡಿಸುವುದರಿಂದ, ಆದಿಪ್ರಾಸವನ್ನೆ ಖಂಡಪ್ರಾಸವೆಂದು ಮಾರ್ಗಕಾರನು ಕರೆದಿರುವಂತೆ ನಮಗೆ ತೋರುತ್ತದೆ. ಆದರೆ, ಈ ವಿಚಾರದಲ್ಲಿ ಮುಳಿಯ ತಿಮ್ಮಪ್ಪಯ್ಯನವರ ಅಭಿಪ್ರಾಯ ಸ್ವಲ್ಪ ಬೇರೆಯಾಗಿದೆ.[7]

ಪದ್ಯ ೭೬ : ಕವಿಪ್ರಯೋಗದಲ್ಲಿ ಬಂಧುರವಾಗಿ ಕೈಗೂಡಿ ಬಂದರೆ ಖಂಡ ಪ್ರಾಸವು ಮಂದಗಮನೆಯಾದ ಚೆಲುವೆಯ ನಡೆಯಂತೆ ಅತ್ಯತಿ ಶಯವಾಗಿ ಸೊಗಸುವುದು.

ಪದ್ಯ ೭೭ : "ಅದು ಹೇಗಿದ್ದರೂ, ಕೂಡಿದ ಮಟ್ಟಿಗೂ ಮೊದಲು ಆರ್ಯಾ ವೃತ್ತದಲ್ಲಿಯೂ ಕಂದದಲ್ಲಿಯೂ ಉದಾಸೀನ ಮಾಡದೆ ಯತಿಯನ್ನು ಹೇಳಬೇಕು; ಚತುಷ್ಪದಿಗಳಾದ ಈ ಪದ್ಯ ಪಾದಗಳಲ್ಲಿ ಎರಡನೆಯ ಪಾದದಲ್ಲಿ ಯತಿ ಸಲ್ಲುತ್ತದೆ" ಎಂದು ಮಾರ್ಗಕಾರನು ಆರ್ಯೆಗೂ

---

7 ಮುಂದೆ ಕವಿರಾಜಮಾರ್ಗಕಾರನು ವಿವರಿಸುವ ಆರು ಬಗೆಯ ಪ್ರಾಸಗಳಲ್ಲಿ ಆದಿಪ್ರಾಸಗಳಾದ ಪ್ರಾಸ, ಶಾಂತ, ವರ್ಗ ಇವು ಒಂದು ಖಂಡವೆಂದೂ, ಉಳಿದ ಮೂರು ಇನ್ನೊಂದು ಖಂಡವೆಂದೂ, ಎರಡನೆಯ ಖಂಡದ ಪ್ರಾಸ ಗಳು ಪ್ರಾಸಾಭಾಸಗಳಾದ್ದರಿಂದ "ಖಂಡಪ್ರಾಸ ಎಂದರೆ ಕನ್ನಡ ನಾಡುಗಳೊ ಳಗೆಲ್ಲ ದೇಸಿಯಾಗಿ ಏಕರೀತಿಯಲ್ಲಿ ನೆಲೆಗೊಂಡ ಆದಿಖಂಡದ ಪ್ರಾಸಗಳು ಎಂದು ಭಾವಿಸಬೇಕು" ಎಂದು ಮುಳಿಯ ತಿಮ್ಮಪ್ಪಯ್ಯನವರು ವಿವರಿಸಿ ದ್ದಾರೆ. (ಕ. ರಾ. ವಿವೇಕ—ಭಾಗ ೨.)

ಕಂದಪದ್ಯಕ್ಕೂ (ಖಂಡಪ್ರಾಸದ ಜೊತೆಗೆ) ಯತಿಯನ್ನು ವಿಧಿಸಿದ್ದಾನೆ. (ಆರ್ಯೆ ಕನ್ನಡದಲ್ಲಿ ಬಳಕೆಗೆ ಬರಲಿಲ್ಲ. ಆದರಿಂದಲೇ ಹುಟ್ಟಿದ ಕಂದ ಪದ್ಯ ಕನ್ನಡದಲ್ಲಿ ವಿಶೇಷ ಪ್ರಾಚುರ್ಯಕ್ಕೆ ಬಂದಿತು. ಮೊನ್ನೆ ಮೊನ್ನೆಯವರೆಗೂ ಕಂದ ಪದ್ಯದ ಕವಿಗಳು ಅದರ ರಚನೆಯಲ್ಲಿ ಯತಿ ನಿಯಮವನ್ನು ಪಾಲಿಸಿಕೊಂಡು ಬಂದಿದ್ದಾರೆ. ಮಾರ್ಗಕಾರನ ಕಟ್ಟಳೆಗೆ ಇಂದಿಗೂ ಮನ್ನಣೆಯುಂಟು.)

ಪದ್ಯ ೭೮-೮೦ : **ಅರ್ಥಶೂನ್ಯ :** ಪದ್ಯದ ಸಮುದಾಯಾರ್ಥವನ್ನು ಎಂದರೆ ಒಟ್ಟಿನ ಅರ್ಥವನ್ನು ಕುರಿತು ವಿಚಾರ ಮಾಡಿದಾಗ ತೋರಬೇಕಾದ ಅರ್ಥಪ್ರತೀತಿಯೆಲ್ಲವೂ ತೋರದೆ ಹೋದರೆ 'ಅರ್ಥಶೂನ್ಯ' ದೋಷ. ಈ ದೋಷಕ್ಕೆ ಕೊಟ್ಟಿರುವ ಲಕ್ಷ್ಯ ಪದ್ಯದಲ್ಲಿ (ಪ. ೭೯), ಅಂತರ್ಗತವಾದ ಪ್ರತಿವಾಕ್ಯಕ್ಕೂ ಅರ್ಥವಾದರೂ ಒಟ್ಟು ಪದ್ಯದ ಅರ್ಥ ಏನೆಂಬುದು ಬೋಧೆಯಾಗುವುದಿಲ್ಲ. ಆದ್ದರಿಂದ, "ಇಂಥ ಅರ್ಥಶೂನ್ಯ ವಾಕ್ಯಸಮುದಾಯ ದುರುಕ್ತ (ಹೇಳತಕ್ಕದ್ದಲ್ಲ). ಹೇಳಿದರೆ, ಇಂಥದನ್ನು ಹುಚ್ಚನೂ ಹೆಂಡ ಕುಡಿದು ವೈಮರೆತವನೂ ಹೇಳಿಯಾನು. ಬಲ್ಲವನು ಯಾವನು ತಾನೆ ಹೇಳುತ್ತಾನೆ." (ಪ. ೮೦). ('ಕಾವ್ಯಾಲಂಕಾರ' ದಲ್ಲಿ ಇದು 'ಅಪಾರ್ಥಕ.')

ಪದ್ಯ ೮೧-೮೩ : **ವಿರುದ್ಧಾರ್ಥ :** ಒಂದು ವಾಕ್ಯದಲ್ಲಿ ಉಕ್ತವಾದ ಪೂರ್ವಾರ್ಧದ ಅರ್ಥಕ್ಕೂ ಅಪರಾರ್ಧದ ಅರ್ಥಕ್ಕೂ ಹೊಂದಿಕೆಯಾಗದೆ ವಿರೋಧವು ಕಂಡುಬಂದರೆ, ಅದು ವಿರುದ್ಧಾರ್ಥ. "ನರಶ್ರೇಷ್ಠನೇ, ಶತ್ರುರಾಜರ ಸೈನ್ಯವನ್ನು ಗೆದ್ದು ಪರಾಕ್ರಮದಿಂದ ಶೌರ್ಯವನ್ನು ಪ್ರಕಟಿಸು; ಯಾವಾಗಲೂ ಪರಹಿತವನ್ನು ನಡಸುವುದರಲ್ಲಿಯೆ ಆಸಕ್ತನಾದ ನಿನಗೆ ಶತ್ರುಗಳೂ ಇದ್ದಾರೆಯೇನು?" (ಪ ೮೨). ಇಲ್ಲಿನ ಪೂರ್ವಾಪರ ವಿರುದ್ಧಾರ್ಥವು ಸ್ಪಷ್ಟ. ಇದು ಕೇವಲ ಉದಾಹರಣ, ಇಂಥವನ್ನು ವಿದ್ವಾಂಸರು ಕಾವ್ಯದಲ್ಲಿ ಬಾರದಂತೆ ಪರಿಹರಿಸಬೇಕು—ಎಂದು ಮಾರ್ಗಕಾರನು ಸೂಚಿಸಿದ್ದಾನೆ. (ಪ. ೮೩). ('ಕಾವ್ಯಾಲಂಕಾರ'ದಲ್ಲಿ ಇದಕ್ಕೆ 'ವ್ಯರ್ಥ' ಎಂದು ಹೆಸರು.)

ಪದ್ಯ ೮೪-೮೫ : **ಪುನರುಕ್ತ :** ಮೊದಲು ಹೇಳಿದ ಪದದ ಅರ್ಥಕ್ಕೆ ಸ್ವಲ್ಪವಾದರೂ ವಿಶೇಷಾರ್ಥವನ್ನು ಸೇರಿಸದೆ ಅದೇ ಅರ್ಥವನ್ನು ಕೊಡುವ ಪದಗಳನ್ನು ಪ್ರಯೋಗಿಸುತ್ತಾ ಹೋಗುವುದು ಪುನರುಕ್ತದೋಷ. 'ತ್ರಿದಶ ಸುರಲೋಕವಾಸಾಸ್ಪದ', 'ಮನುಷ್ಯ-ಮನುಜಂ', 'ಯುಗ-ದ್ವಯಂ', 'ಅಟ್ಟಿಯೆ-ಮುದದೆ', 'ಬಗೆದು-ನೆನೆವಂ', 'ಅನುದಿನಂ-ಎಂದುಂ' ಈ ಏಕಾರ್ಥಕ ಪದಗಳ ಪುನರುಕ್ತಿಯನ್ನು ಲಕ್ಷ್ಯಪದ್ಯದಲ್ಲಿ (೮೫) ಗಮನಿಸಬಹುದು. (ಭಾಮಹನು ಇದನ್ನು 'ಏಕಾರ್ಥ' ವೆಂದು ಹೆಸರಿಸಿದ್ದಾನೆ. ಮಾರ್ಗಕಾರನು ದಂಡಿಯ ಶ್ಲೋಕವನ್ನೇ ಹೆಚ್ಚಾಗಿ ಅನುಸರಿಸಿದ್ದಾನೆ). ದಂಡಿಯ ಶ್ಲೋಕ :

> " ಅವಿಶೇಷೇಣ ಪೂರ್ವೋಕ್ತಂ ಯದಿ ಭೂಯೋಽಪಿ ಕೀರ್ತ್ಯತೇ |
> ಅರ್ಥತಃ ಶಬ್ದತೋ ವಾಪಿ ತದೇಕಾರ್ಥಂ ಮತಂ ಯಥಾ || "

ಪದ್ಯ ೮೬-೮೯ : **ಚ್ಯುತ ಯಾಥಾಸಂಖ್ಯ :** ಯಾಥಾಸಂಖ್ಯಾ ಎಂದರೆ ಕ್ರಮ, ಯಾಥಾಸಂಖ್ಯ ಎಂದರೇನೆಂಬುದನ್ನು ಮೊದಲು ವಿವರಿಸಿದೆ (ಪ. ೮೬) : "ನಿಯತವಾದ ಉದ್ದೇಶಿಯನ್ನೂ ಅನುದೇಶಿಯನ್ನೂ ಅನುವಾಗಿ ಹೇಳಿದರೆ ಯಥಾಸಂಖ್ಯ." ಉದ್ದಿಷ್ಟವಾದ ಕ್ರಮದಲ್ಲಿ ಅರ್ಥಗಳನ್ನುಳ್ಳ ಪದವರ್ಗ ಉದ್ದೇಶಿ; ಅರ್ಥಾನುಗುಣವಾಗಿ ಅದೇ ಕ್ರಮಸಂಖ್ಯೆಯನ್ನು ಅನುರಿಸಿ ಬರುವ ಪದವರ್ಗ ಅನುದೇಶಿ. ಉದ್ದೇಶಿ ಅನುದೇಶಿಗಳ ಕ್ರಮಾನುಸರಣೆ ಯಾಥಾಸಂಖ್ಯ; ಆ ಕ್ರಮ ತಪ್ಪಿದರೆ, ಕ್ರಮ ಚ್ಯುತಿಯಾಗಿ, 'ಚ್ಯುತ ಯಥಾಸಂಖ್ಯ' ವೆಂಬ ದೋಷವಾಗುತ್ತದೆ.

೮೮ನೆಯ ಪದ್ಯ ಯಾಥಾಸಂಖ್ಯಕ್ಕೆ ಲಕ್ಷ್ಯ : ಅಳಕ, (ಮುಂಗುರುಳು), ಆನನ (ಮುಖ), ನಯನಗಳು (ಕಣ್ಣುಗಳು) - ಅಳಿ (ದುಂಬಿ), ನಳಿನ (ತಾವರೆ), ಉತ್ಪಳವಿಕಾಶ (ನೈದಿಲೆಯ ಕಾಂತಿ)- ಇವುಗಳಲ್ಲಿ 'ಉದ್ದೇಶಿ' ಉಪಮೇಯವಾದ ಮೊದಲ ಪದವರ್ಗ; ಉಪಮಾನವಾದ ಎರಡನೆಯ ಪದವರ್ಗ 'ಅನುದೇಶಿ'. ಅಳಕ-ಅಳಿ, ಆನನ-ನಳಿನ, ನಯನ-ಉತ್ಪಲ—ಇವುಗಳ ಅರ್ಥಾನುಗುಣವಾದ

ಕ್ರಮ ತಪ್ಪಿದರೆ ದೋಷ. ಆದರೆ, ದೋಷಕ್ಕೆ ಲಕ್ಷ್ಯವಾದ ೮೯ನೆಯ ಪದ್ಯದಲ್ಲಿ, ಈ ಕ್ರಮ ತಪ್ಪಿರುವಂತೆ ಕಂಡುಬರುವುದಿಲ್ಲ. 'ಉದ್ದೇಶಿ' 'ಅನುದೇಶಿ'ಗಳ ಕ್ರಮವು ಮಾತ್ರ ಹಿಂದುಮುಂದಾಗಿದೆ. (ಭಾಮಹ, ದಂಡಿ- ಇಬ್ಬರೂ ಈ ದೋಷವನ್ನು 'ಅಪಕ್ರಮ' ಎಂದು ನಿರ್ದೇಶಿಸಿದ್ದಾರೆ.)

ಪದ್ಯ ೯೦-೯೧: **ವ್ಯವಹಿತ**: "ಅರ್ಥವು ವಿಶೇಷ ಅಲಂಕಾರ ಸಹಿತವಾಗಿದ್ದರೂ, ಅರ್ಥಸಾಧಕಗಳಾದ ಪದಗಳು ಅಸ್ತವ್ಯಸ್ತವಾಗಿ ಅವುಗಳ 'ಸಮಾಹಿತ'ತ್ವಕ್ಕೆ (ಅನ್ಯೋನ್ಯ ಸಂಬಂಧಕ್ಕೆ) ಭಂಗವುಂಟಾದರೆ, ಅದು ವ್ಯವಹಿತ ದೋಷ."

ಲಕ್ಷ್ಯಪದ್ಯದಲ್ಲಿ-ಜಿನಾಧಿಪನಿಗೆ ಪಾಪನಿಚಯವುಂಟೆಂದೂ, ಆದರ ಸೇವನೆಯಿಂದ ಮುನಿಗಳು ತಮ್ಮ ಸಂಸೃತಿಯನ್ನು ನೀಗಿಕೊಳ್ಳಲು ತೊಡಗಿದರೆಂದೂ ವಿಪರೀತಾರ್ಥ ಕಲ್ಪನೆಯುಂಟಾಗುತ್ತದೆ. ಸರಿಯಾದ ಅರ್ಥಕಲ್ಪನೆಗಾಗಿ, ಪದಗಳನ್ನು ಈ ರೀತಿ ಯೋಜನೆ ಮಾಡಬೇಕು: 'ಜಿನಾಧಿಪಾ! ನಿನ್ನ ಗುಣಮುಂ ಮನದೆ ನೆನೆದವರ ಪಾಪನಿಚಯುಂ ಕಿಡುಗುಂ; ಅದಱಿಂ ಮುನಿಗಳುಂ ತತ್‌ಸೇವನೆಯಿಂ ಸಂಸೃತಿಯುಂ ಕಿಡಿಪಲ್ಕೆ ಪತ್ತಿದರ್."

ಪದ್ಯ ೯೨-೯೩: **ಛಂದೋ ಭಂಗ:** ಪದ್ಯರಚನೆಯ ಗುರು ಲಘುವಿನ್ಯಾಸ ಕ್ರಮದಲ್ಲಿ ಹೆಚ್ಚು ಕಡಮೆಗಳಾಗುವುದು ಛಂದೋಭಂಗ ದೋಷಕ್ಕೆ ಎಡೆಗೊಡುವುದು. (ಭಾಮಹ, ದಂಡಿ-ಇಬ್ಬರೂ ಈ ದೋಷವನ್ನು 'ಭಿನ್ನವೃತ್ತ' ಎಂದು ನಿರ್ದೇಶಿಸಿದ್ದಾರೆ.)

ಲಕ್ಷ್ಯಪದ್ಯದಲ್ಲಿ (೯೩), ಮೊದಲ ಪಾದದಲ್ಲಿ ಒಂದು ಮಾತ್ರೆ ಕಡಮೆಯಾಗಿಯೂ, ಎರಡನೆಯ ಪಾದದಲ್ಲಿ ಒಂದು ಮಾತ್ರೆ ಅಧಿಕವಾಗಿಯೂ ಇವೆ. ಹೇಗೆಂದರೆ:

⏑⏑⏑⏑ ⏑⏑⏑⏑ ⏑ —
ವನರುಹ | ದಳನಯ | ನೆ ನಿ |
⏑⏑ ⏑⏑ ⏑⏑⏑⏑ ⏑ ⏑ ⏑ ⏑ ⏑⏑⏑ — — —
ನ್ನನೆ ನೆನೆ | ನೆನೆದಿರು | ಳೊಳಗೊಱ | ಗದಿರೆ ಕ | ಡೆಗಣ್ಗಳ್ |

(ಪು. ೨೧ರಲ್ಲಿ ಅಚ್ಚಾಗಿರುವಂತೆ, ಗುರುಲಘುವಿನ್ಯಾಸ ಸರಿಯಾಗಿದೆ. ದೋಷವಿರಬೇಕಾದದ್ದರಿಂದ, '—ಳೊಳೊಱಗದಿರೆ' ಎಂದೆಂಬುದನ್ನು '—ಳೊಳಗೊಱಗದಿರೆ' ಎಂದು ಮದ್ರಾಸು ಮುದ್ರಣದಲ್ಲಿ ತಿದ್ದಿರುವಂತೆ ತಿದ್ದಿಕೊಳ್ಳಬೇಕು.)

ದೋಷವನ್ನು ಸರಿಪಡಿಸಿದರೆ, ಪದ್ಯಭಾಗ ಹೀಗಿರುವುದು:

∪∪∪∪ ∪∪∪∪ — —
ವನರುಹ | ದಳನಯ | ನೇ ನ |
∪∪∪∪ ∪∪∪∪ ∪∪∪∪ ∪∪∪∪ — —
ನ್ನನೆನೆನೆ | ನೆನೆದಿರು | ಳೊಳೊಱಗ | ದಿರೆಕಡೆ | ಗಣ್ಗಳ್ |

ಪದ್ಯ ೯೫–೯೬ : **ವಿಸಂಧಿ ದೋಷ:** ಪದಗಳನ್ನು ಕೂಡಿಸಿ (ಸಂಧಿಮಾಡಿ) ಹೇಳಿದರೆ ಛಂದಸ್ಸು ಕೆಡುವುದೆಂದು ತಿಳಿದು, ಸಂಧಿಯಾಗಬೇಕಾದ ಸ್ಥಳದಲ್ಲಿ ಸಂಧಿಯನ್ನು ಬಿಡಿಸಿಹೇಳಿದರೆ, ಅದು ವಿಸಂಧಿ ದೋಷ. ೯೬ನೆಯ ಲಕ್ಷ್ಯಪದ್ಯದ ಪೂರ್ವಾರ್ಧ ದೋಷಯುಕ್ತವಾಗಿರುವುದನ್ನೂ, ಉತ್ತರಾರ್ಧ ದೋಷರಹಿತವಾಗಿರುವುದನ್ನೂ (೯೭ನೆಯ ಪದ್ಯದಲ್ಲಿ) ಮಾರ್ಗಕಾರನು ನಿರ್ದೇಶಿಸಿದ್ದಾನೆ. 'ಜನಪತಿಗೆ ಒಸಗೆಯುಂ ಪುರ–' ಎಂಬ ಮೊದಲ ಪಾದದಲ್ಲಿ 'ಜನಪತಿಗೊಸಗೆಯುಂ' ಎಂದು ಸಂಧಿಮಾಡಿ ಹೇಳಿದರೆ ಛಂದಸ್ಸು ಕೆಡುವುದೆಂದು, 'ಗೊ' ಎಂಬ ಅಕ್ಷರವನ್ನು 'ಗೆ + ಒ' ಎಂದು ಬಿಡಿಸಿದೆ. ಇದು ವಿಸಂಧಿ ದೋಷ.

ಪದ್ಯ ೯೮–೯೯: ಕೆಲವೆಡೆಗಳಲ್ಲಿ ಸಂಧಿಗಳಾಗುವುದೂ ಕವಿತೆಗೆ ಕುಂದು ತರುತ್ತದೆ. ಇವು ವಿರೂಪ ಸಂಧಿಗಳು. ಲಕ್ಷ್ಯಪದ್ಯದಲ್ಲಿ (೯೯), 'ಆರಂ' ಎಂಬ ಅವ್ಯಯವು ಅರಸಂ, ಅರಮನೆ, ಉದ್ಯಾನ, ಅಂತಃಪುರ—ಈ ಪದಗಳೊಂದಿಗೆ ಸಂಧಿಯಾಗಿ, 'ಮರಸಂ', 'ಮರಮನೆ', 'ಮುದ್ಯಾನ', 'ಮಂತಃಪುರ' ಎಂಬ ವಿರೂಪಗಳು ಕಿವಿಗೆ ಬೀಳುವಂತಾಗಿ, ಕವಿತಾಬಂಧ ಶ್ರುತಿಕಷ್ಟವೆನಿಸಿದೆ.

ಪದ್ಯ ೧೦೦ : ಇಂಥ ಸಂಧಿ ದೋಷಗಳುಂಟಾದರೆ, ವಿದ್ವತ್ಸಭೆಯಲ್ಲಿ ಕೃತಿ ವಧುವನ್ನು ನಿಂದಿಸುತ್ತಾರೆ. ಆದ್ದರಿಂದ, ಭಾಷಾವಿದರು ಅವನ್ನು ಬಿಡಬೇಕು.

ಪದ್ಯ ೧೦೧: **ನೇಯಾರ್ಥ:** ವಿವಕ್ಷಿತವಾದ ಅರ್ಥವೆಲ್ಲವೂ ಪ್ರಯೋಗಿಸಿದ ಪದದಿಂದ ಪ್ರತೀತವಾಗದೆ, ಅರ್ಥವಿವಕ್ಷೆಗಾಗಿ ಬಲ್ಲವರು ಅಲ್ಲಿಲ್ಲದ ಬೇರೊಂದು ಪದವನ್ನು (ಅಧ್ಯಾಹಾರಮಾಡಿಕೊಂಡು) ಇಟ್ಟು ಅರ್ಥ ವಾಗುವಂತೆ ಹೇಳಿದರೆ ಅದು 'ನೇಯಾರ್ಥ.'

ಪದ್ಯ ೧೦೨: ನೇಯಾರ್ಥದೋಷಕ್ಕೆ ಲಕ್ಷ್ಯ:

"ಗಗನವಿವರವು ತನ್ನಲ್ಲಿ ಎಡೆಬಿಡದೆ ಕೆಂಬಣ್ಣವು (ರಾಗ) ಹರಡಿರಲು, ಅದು ಪಾರಿಜಾತ ಪುಷ್ಪಗಳ ದಟ್ಟವಾದ ಪರಾಗಧೂಳಿಯ ಪ್ರಸಾರದಿಂದ ಕೆಂಪಾಗಿರುವ ಹಾಗೆ ಒಪ್ಪುತ್ತಿತ್ತು."

ಆಕಾಶದಲ್ಲಿ ಎಲ್ಲೆಲ್ಲಿಯೂ ಕೆಂಬಣ್ಣ ಹರಡಿರಲು ಕಾರಣವೇನು ?

ಬಿರುಗಾಳಿ ಬೀಸಿ, ತತ್ಪರಿಣಾಮವಾಗಿ ಮೇಲಕ್ಕೆದ್ದ ಕೆಂದೂಳಿ ಯಿಂದ ಕೆಂಪಾಗಿರಬಹುದೆಂಬ ಸಂದೇಹವು ಯಾರಿಗಾದರೂ ಮೊದಲು ಹುಟ್ಟಬಹುದು. "ಪರೆದಿರೆ ಸಂಧ್ಯಾರಾಗಂ ನಿರಂತರಂ ಗಗನವಿವರ ಮೊಪ್ಪಿತ್ತು" (ಪ. ೧೦೩) ಎಂದು ಸ್ಪಷ್ಟವಾಗಿ ಹೇಳದಿದ್ದುದರಿಂದ, ಈ ಬಗೆಯ ಸಂದೇಹಕ್ಕೆ ಅವಕಾಶವಾಗುವುದು. ಇಲ್ಲವೆ, 'ಸಂಧ್ಯಾ ರಾಗ'ದಿಂದ ಎಂದು ಊಹಿಸಿಕೊಳ್ಳಬೇಕು. ಹೇಗೂ, 'ಸಂಧ್ಯಾ' ಪದವನ್ನು ಇಡದೆ ಹೇಳಿದುದು ಇಲ್ಲಿ ದೋಷವೆನಿಸಿದೆ.

[ಕೇಶಿರಾಜನು ಕಾರಕಕ್ಕೂ ಕ್ರಿಯೆಗೂ ಅಧ್ಯಾರೋಪವು[8] ಶ್ರೇಷ್ಠ

---

8 ಕಿಟ್ಟೆಲರವರು 'ಅಧ್ಯಾರೋಪ'ಕ್ಕೂ 'ಅಧ್ಯಾಹಾರ'ಕ್ಕೂ ವ್ಯತ್ಯಾಸವನ್ನು ಸೂಚಿಸಿದ್ದಾರೆ. 'ಅಧ್ಯಾರೋಪ' ಎಂದರೆ 'attributing or assigning (ಆರೋಪಿಸುವುದು); 'ಅಧ್ಯಾಹಾರ' ಎಂದರೆ supplying (ಭರತಿಮಾಡುವುದು). 'ನೇಯ' ಎಂದರೆ logical inference (ಅನುಮಾನ). Gr. K. L. ಪು. 412–413.

ವಾಗಿರುವುದೆಂದು ಹೇಳಿ, ಅದು ಹೊಂದಿಕೆಯಾಗದಿರುವಾಗ ನೇಯದ ದೋಷವು ಸಂಭವಿಸುವುದೆಂದು ತಿಳಿಸುತ್ತಾನೆ. ನೇಯಕ್ಕೆ ಅವನು ಕೊಡುವ ಉದಾಹರಣೆ ಬಹುಮಟ್ಟಿಗೆ ಕ. ರಾ. ಮಾರ್ಗದ ಲಕ್ಷ್ಯ ಪದ್ಯವನ್ನೆ ಹೋಲುತ್ತದೆ :

" ಆರಕ್ತಮಾಗಿ ನೇಱಿಲ
ದೋರೆಯುನನುಕರಿಪುದಾದುದಾಗಸಮೆನೆ ಸಂ
ಧ್ಯಾರುಚಿಯಿನಕ್ಕುಮೆಂದವ
ಧಾರಿಸಿ ನೆಱೆಯುಱುದುಕೊಳ್ವುದಿದು ನೇಯಾರ್ಥಂ."

" ಸಂಧ್ಯಾರುಚಿಯಿನೆಂದು ಬಗೆವುದು ನೇಯಂ, ಕೆಂಧೂಳಿಯಿಂದಾಗಸಂ ಕೆಂಪಾದುದಾಗಿ."

ಇಲ್ಲಿ, 'ಕೆಂಧೂಳಿಯಿಂದ' ಎಂದು ಹೇಳದೆ ಇರುವುದರಿಂದ 'ಸಂಧ್ಯಾರುಚಿಯಿಂದ' ಎಂದು ತಿಳಿದರೆ ನೇಯವಾಗುತ್ತದೆ.]

ಪದ್ಯ ೧೦೪-೧೧೦ : ಈ ಪದ್ಯಗಳಲ್ಲಿ ಮಾರ್ಗಕಾರನು ಆಗಮ-ಸಮಯ-ನ್ಯಾಯ-ಕಳಾ-ಕಾಲ-ಲೋಕ-ದೇಶ ವಿರುದ್ಧಗಳಾದ ದೋಷಗಳ ಲಕ್ಷಣಗಳನ್ನು ಮಾತ್ರವೇ ಸೂಚಿಸಿದ್ದಾನೆ; ಅವುಗಳ ಲಕ್ಷ್ಯಗಳನ್ನು ಕೊಟ್ಟಿಲ್ಲ.

ಆಗಮ ವಿರುದ್ಧ : " ರಾಗಾದಿ ದೋಷರಹಿತವಾಗಿರುವುದೂ, ಅಖಿಲ ವಸ್ತುಗಳ ಪರಿಜ್ಞಾನವೂ ಯೋಗಿಗುಣ; ಇದನ್ನು ಅನುಸರಿಸಿರತಕ್ಕದ್ದೇ ಆಗಮ. ಎಂದರೆ ಯೋಗಿಗಳಿಂದ ಪ್ರೋಕ್ತವಾಗಿ ಆಚರಿಸಲ್ಪಟ್ಟಿರುವುದೇ ಆಗಮ. ಇದಕ್ಕೆ ವಿರುದ್ಧವಾದ ವಚನವು ದೋಷ." ಭಾಮಹ, ದಂಡಿ-ಇವರ ಉಕ್ತಿಗಳನ್ನು ಇದರೊಂದಿಗೆ ಹೋಲಿಸಿದರೆ, ಮಾರ್ಗಕಾರನು ಆಗಮ ಎಂದರೆ ಜೈನಾಗಮ ಎಂದೇ ಕುರಿತಿರುವಂತೆ ಭಾಸವಾಗುತ್ತದೆ.

ಶ್ರುತಿಸ್ಸ್ಮೃತಿರಾಗಮಃ-ದಂಡಿ
“ ಆಗಮೋ ಧರ್ಮಶಾಸ್ತ್ರಾಣಿ ಲೋಕಸೀಮಾ ಚ ತತ್ಕೃತಾ |
ತದ್ವಿರೋಧಿ ತದಾಚಾರವ್ಯತಿಕ್ರಮಣತೋ ಯಥಾ ‖ ”
—ಕಾವ್ಯಾಲಂಕಾರ, iv-೪೭

[ಲೋಕವ್ಯವಹಾರದ ಕಟ್ಟುಕಟ್ಟಳೆಗಳಿಗೆ ಮೂಲಭೂತವಾದ ಧರ್ಮಶಾಸ್ತ್ರಗಳೇ ಆಗಮ. ಅವುಗಳಲ್ಲಿ ಹೇಳಿರುವ ಆಚಾರವನ್ನು ಉಲ್ಲಂಘಿಸುವುದು ಆಗಮವಿರೋಧಿ.]

ಸಮಯ ವಿರುದ್ಧ : “ ಪ್ರಸಿದ್ಧರಾದ ಕಪಿಲ, ಸುಗತ, ಕಣಚರ, ಲೋಕಾಯತಿಕ ಮುಂತಾದವರ ದರ್ಶನ ಸಿದ್ಧಾಂತಗಳ ಮಾರ್ಗ ಭೇದಗಳೇ ಬೇರೆ ಬೇರೆ ಸಮಯಗಳು. ಅವುಗಳನ್ನು ‘ ವಿರುದ್ಧವಿವೇಕದಿಂದ’ ಎಂದರೆ ತಪ್ಪುತಿಳಿವಳಿಕೆಯಿಂದ ತಿಳಿಸುವುದು ಸಮಯ ವಿರುದ್ಧ ದೋಷ. ಕಪಿಲ=ಸಾಂಖ್ಯದರ್ಶನಕಾರ; ಸುಗತ=ಗೌತಮ ಬುದ್ಧ ; ಕಣಚರ=ವೈಶೇಷಿಕ ಸಿದ್ಧಾಂತದ ಪ್ರವರ್ತಕ (ಕಣಾದ, ಕಣಭಕ್ಷ-ಇವು ಈತನ ಇತರ ಹೆಸರುಗಳು.) ; ಲೋಕಾಯತಿಕ=ಚಾರ್ವಾಕನು ಬೋಧಿಸಿದ ಚಾರ್ವಾಕ (ನಾಸ್ತಿಕ)ವಾದವೆ ಲೋಕಾಯತ; ಇದರ ಅನುಯಾಯಿ ಲೋಕಾಯತಿಕ.

ನ್ಯಾಯವಿರುದ್ಧ : ಉಕ್ತ ಎಂದರೆ ಹೇಳಿದ ವಿಚಾರಗಳೆಲ್ಲವೂ ನ್ಯಾಯಶಾಸ್ತ್ರದ ಪ್ರಮಾಣಗಳಿಗೆ ಸಮ್ಮತವಾಗಿರಬೇಕು. ಈ ಪ್ರಮಾಣಗಳು ನಾಲ್ಕು : ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಬ್ದ. ನ್ಯಾಯವಿರುದ್ಧವನ್ನು ಮಾರ್ಗಕಾರನು ‘ ಮಹಾದೋಷ ’ ವೆಂದು ಕರೆದಿದ್ದಾನೆ.

ಕಲಾವಿರುದ್ಧ : “ ನಿರುಪಮವಾದ ಗಂಧರ್ವಗತಿ ಸ್ವರಾದಿಕ ಎಂದರೆ ಗಾಂಧರ್ವ ವಿದ್ಯೆಯೆಂದು ಪ್ರಸಿದ್ಧವಾದ ನೃತ್ತ ಗೀತ ಚಿತ್ರ ಶಿಲ್ಪವೇ ಮುಂತಾಗಿ ಕಲೆಗಳು ಚತುಷ್ಷಷ್ಟಿ ವಿಧಗಳು. ಇವು ಎಲ್ಲಿ ದೊರೆಕೊಳ್ಳದೋ ಅಲ್ಲಿ ಕಲಾವಿರುದ್ಧದೋಷವು ಸಂಘಟಿಸುವುದು. ಜನರೆಲ್ಲ ಇದನ್ನು ನಿಂದಿಸುವರು.”

" ಕಲಾ ಸಂಕಲನಾಪ್ರಜ್ಞಾ ಶಿಲ್ಪಾನ್ಯಸ್ಯಾಶ್ಚ ಗೋಚರಃ |
ವಿಪರ್ಯಸ್ತಂ ತಥೈವಾಹುಸ್ತದ್ವಿರೋಧಕರಂ ಯಥಾ ॥ "
—ಭಾಮಹ, iv-೩೨

[ಬಿಡಿಬಿಡಿಯಾದ ಅಂಶಗಳನ್ನೆಲ್ಲ ಚೆನ್ನಾಗಿ ಒಂದೆಡೆ ಕೂಡಹಾಕುವುದೇ ಕಲೆ. ಇತರರಿಗೆ ಗೋಚರವಾಗುವುದು ಶಿಲ್ಪ. ಇವಕ್ಕೆ ವಿರುದ್ಧವಾಗಿ ಹೇಳುವುದು ಕಲಾವಿರುದ್ಧ ದೋಷ.]

" ನೃತ್ಯಗೀತ ಪ್ರಭೃತಯಃ ಕಲಾಃ ಕಾಮಾರ್ಥ ಸಂಶ್ರಯಾಃ "
—ದಂಡಿ, iv-೪೦

[ಕಾಮಾರ್ಥಗಳನ್ನು ಆಶ್ರಯಿಸಿರುವ ನೃತ್ಯಗೀತಾದಿಗಳೆ ಕಲೆಗಳು.][9]

ಕಾಲವಿರುದ್ಧ : "ಕಾಲ ಎಂದರೆ ಹಗಲು ಇರುಳು ಮುಂತಾದ ಕಾಲ ವಿಭಾಗಗಳು. ಇದಕ್ಕೆ ಹೊಂದದಿದ್ದರೆ ಕಾಲವಿರುದ್ಧ ದೋಷಕ್ಕೆ ಅವಕಾಶವಾಗುತ್ತದೆ."

---

9 ಶೈವತಂತ್ರದಲ್ಲಿ ಉಕ್ತವಾದ ಚತುಃಷಷ್ಟಿಕಲಾ (ಒಂದೆರಡು ಮಾರ್ಪಾಡುಗಳೊಂದಿಗೆ ಶ್ರೀ ಭಾಗವತ ಟೀಕೆಯಲ್ಲಿ ಶ್ರೀಧರಸ್ವಾಮಿಯೂ ಇದನ್ನೆ ಹೇಳಿರುವನು) :—

೧. ಗೀತಂ, ೨. ವಾದ್ಯಂ, ೩. ನೃತ್ಯಂ, ೪. ನಾಟ್ಯಂ, ೫. ಆಲೇಖ್ಯಂ, ೬. ವಿಶೇಷಕಚ್ಛೇದ್ಯಂ, ೭. ತಂಡುಲಕುಸುಮ ಬಲಿವಿಕಾರಾಃ, ೮. ಪುಷ್ಪಾಸ್ತರಣಂ, ೯. ದಶನವಸನಾಂಗರಾಗಾಃ, ೧೦. ಮಣಿಭೂಮಿಕಾ ಕರ್ಮ, ೧೧. ಶಯನ ರಚನಂ, ೧೨. ಉದಕವಾದ್ಯಂ, ೧೩. ಉದಕಘಾತಃ, ೧೪. ಚಿತ್ರಾಯೋಗಾಃ, ೧೫. ಮಾಲ್ಯಗ್ರಥನವಿಕಲ್ಪಾಃ, ೧೬. ಶೇಖರಾಪೀಡಯೋಜನಂ, ೧೭. ನೇಪಥ್ಯ ಯೋಗಾಃ, ೧೮. ಕರ್ಣಪತ್ರಭಂಗಾಃ, ೧೯. ಗಂಧಯುಕ್ತಿಃ, ೨೦. ಭೂಷಣ ಯೋಜನಂ, ೨೧. ಐಂದ್ರಜಾಲಂ, ೨೨. ಕಾಚುಮಾರಯೋಗಾಃ, ೨೩. ಹಸ್ತ ಲಾಘವಂ, ೨೪. ಚಿತ್ರಶಾಕಾಪೂಪ ಭಕ್ಷ್ಯವಿಕಾರಕ್ರಿಯಾಃ, ೨೫. ಪಾನಕ ರಸರಾಗಾಸವ ಯೋಜನಂ, ೨೬. ಸೂಚೀವಾಸಕರ್ಮಾಣಿ, ೨೭. ಸೂತ್ರಕ್ರೀಡಾ, [ಪಾಠಾಂತರ: ೨೬. ಸೂಚೀವಾಪ-ಸೂತ್ರಕ್ರೀಡಾ-ಕರ್ಮಾಣಿ, ೨೭. ವೀಣಾ ಡಮರುಕವಾದ್ಯಾನಿ], ೨೮, ಪ್ರಹೇಲಿಕಾ, ೨೯. ಪ್ರತಿಮಾಲಾ, ೩೦. ದುರ್ವಚಕ ಯೋಗಾಃ, ೩೧. ಪುಸ್ತಕ ವಾಚನಂ, ೩೨. ನಾಟಕಾಖ್ಯಾಯಿಕಾದರ್ಶನಂ,

[ಭಾಮಹನು "ಷಣ್ಣಾಂ ಋತೂನಾಂ ಭೇದೇನ ಕಾಲಃ ಷೋಢೇವ ಭಿದ್ಯತೇ" ಎಂದು ಕಾಲವನ್ನು ಆರು ಋತುಗಳಾಗಿ ಆರು ಭಾಗಗಳಾಗಿ ಮಾಡಿದೆ ಎನ್ನುತ್ತಾನೆ. ಮಾರ್ಗಕಾರನು ದಂಡಿಯ ಉಕ್ತಿಯನ್ನು ('ಕಾಲೋ ರಾತ್ರಿಂದಿವಃ') ಅನುಸರಿಸಿದ್ದಾನೆ. 'ಅಹೋರಾತ್ರಾದಿಕಂ' ಎಂದಿರುವುದ ರಿಂದ ಪಕ್ಷ ಋತು ಮುಂತಾದ ವಿಭಾಗಗಳೂ ಸೂಚಿತವಾಗಿವೆ ಎಂದು ಭಾವಿಸಬಹುದು. ಭಾಮಹನು ಕೊಟ್ಟಿರುವ ಲಕ್ಷ್ಯದಂತೆ, 'ಕಾಡಿನಲ್ಲಿ ಹೂತ ಮಾವಿನಮರಗಳು ಮಳೆಯಿಂದ ತೊಯ್ದು ಗಾಳಿಯನ್ನು ಸುಗಂಧಿತ ವನ್ನಾಗಿ ಮಾಡಿದುವು' ಎಂದರೆ ಕಾಲವಿರೋಧಿಯಾಗುತ್ತದೆ. ಏಕೆಂದರೆ, ಮಳೆಗಾಲದಲ್ಲಿ ಮಾವು ಹೂಬಿಡುವುದಿಲ್ಲ.]

ಲೋಕವಿರುದ್ಧ: ಲೋಕಗಳು ಮೂರು; ಊರ್ಧ್ವಲೋಕ, ಅಧೋಲೋಕ, ಮಧ್ಯಲೋಕ. ಇವು ವೈದಿಕ ಪುರಾಣೋಕ್ತಗಳಾದ ಸ್ವರ್ಗ, ಪಾತಾಳ, ಮರ್ತ್ಯಗಳಾಗಬಹುದು; ಇಲ್ಲವೆ ಜೈನಸಿದ್ಧಾಂತದ ಊರ್ಧ್ವ, ಮಧ್ಯ, ಅಧೋಲೋಕಗಳಾಗಬಹುದು.

---

೩೩. ಕಾವ್ಯಸಮಸ್ಯಾಪೂರಣಂ, ೩೪. ಪಟ್ಟಿಕಾನೇತ್ರಬಾಣವಿಕಲ್ಪಾಃ, ೩೫. ತರ್ಕುಕರ್ಮಾಣಿ, ೩೬. ತಕ್ಷಣಂ, ೩೭. ವಾಸ್ತುವಿದ್ಯಾ, ೩೮. ರೂಪರತ್ನಪರೀಕ್ಷಾ, ೩೯. ಧಾತುವಾದಃ, ೪೦. ಮಣಿರಾಗಜ್ಞಾನಂ, ೪೧. ಆಕಾರಜ್ಞಾನಂ, ೪೨. ವೃಕ್ಷಾಯುರ್ವೇದಯೋಗಾಃ, ೪೩. ಮೇಷಕುಕ್ಕುಟಲಾವಕಯುದ್ಧವಿಧಿಃ, ೪೪. ಶುಕಶಾರಿಕಾಪ್ರಲಾಪನಂ, ೪೫. ಉತ್ಸಾದನಂ, ೪೬. ಕೇಶಮಾರ್ಜನ ಕೌಶಲಂ, ೪೭. ಅಕ್ಷರಮುಷ್ಟಿಕಾಕಥನಂ, ೪೮. ಮ್ಲೇಚ್ಛಿತಕವಿಕಲ್ಪಾಃ, ೪೯. ದೇಶಭಾಷಾಜ್ಞಾನಂ, ೫೦. ಪುಷ್ಪಶಕಟಿಕಾನಿಮಿತ್ತಜ್ಞಾನಂ, ೫೧. ಯಂತ್ರ ಮಾತೃಕಾ, ೫೨. ಧಾರಣಮಾತೃಕಾ, ೫೩. ಸಂಪಾಠ್ಯಂ, ೫೪. ಮಾನಸೀಕಾವ್ಯ ಕ್ರಿಯಾ, ೫೫. ಕ್ರಿಯಾವಿಕಲ್ಪಾಃ, ೫೬. ಛಲಿತಕಯೋಗಾಃ, ೫೭. ಅಭಿಧಾನ ಕೋಶಛಂದೋಜ್ಞಾನಂ, ೫೮. ವಸ್ತ್ರಗೋಪನಾನಿ, ೫೯. ದ್ಯೂತವಿಶೇಷಃ, ೬೦. ಆಕರ್ಷಕ್ರೀಡಾ, ೬೧. ಬಾಲಕಕ್ರೀಡನಕಾನಿ, ೬೨. ವೈನಾಯಿಕೀನಾಂ ವಿದ್ಯಾನಾಂ ಜ್ಞಾನಂ, ೬೩. ವೈಜಯಿಕೀನಾಂ ವಿದ್ಯಾನಾಂ ಜ್ಞಾನಂ, ೬೪. ವೈತಾಲಿಕೀನಾಂ ವಿದ್ಯಾನಾಂ ಜ್ಞಾನಂ [ಪಾಠಾಂತರ: ವೈಯಾಪಿಕೀನಾಂ ವಿದ್ಯಾನಾಂ ಜ್ಞಾನಂ.] ('ಚೌರ್ಯ'ವೂ ೬೪ ಕಲೆಗಳಲ್ಲಿ ಒಂದೆಂದು ಪ್ರಸಿದ್ಧವಾಗಿದೆ. ಮೇಲಿನ ಪಟ್ಟಿ ಯಲ್ಲಿ ಇದು ಸೇರಿಲ್ಲ. ಬೇರೆ ಬೇರೆ ಆಕರಗಳಲ್ಲಿ ಕೆಲಕೆಲವು ಮಾರ್ಪಾಟುಗಳುಳ್ಳ ಬೇರೆಬೇರೆ ಪಟ್ಟಿಗಳು ದೊರಕಬಹುದು. 'ಶಬ್ದಕಲ್ಪದ್ರುಮ'ದಿಂದ ಮೇಲ್ಕಂಡ ಪಟ್ಟಿಯನ್ನು ಸಂಗ್ರಹಿಸಿಕೊಟ್ಟವರು ಮಿತ್ರರಾದ ಶ್ರೀ ಎಂ. ಕೆ. ಭಾರತೀ ರಮಣಾಚಾರ್, ಎಂ.ಎ. ಅವರು. ಅವರಿಗೆ ನಾವು ಋಣಿಗಳು.—ಸಂ.)

ಭಾಮಹನ ಪ್ರಕಾರ ಲೋಕವು ಸ್ಥಾವರ, ಜಂಗಮ ಎಂದು ಎರಡು ಬಗೆಯೆಂದಿದೆ. ದಂಡಿ, 'ಚರಾಚರಾಣಾಂ ಭೂತಾನಾಂ ಪ್ರವೃತ್ತಿರ್ಲೋಕಸಂಜ್ಞಿತಾ' ಎಂದು ನಿರ್ದೇಶಿಸಿದ್ದಾನೆ. ಇವರಿಬ್ಬರ ಅಭಿಮತದಂತೆ, ಸ್ಥಾವರ - ಜಂಗಮ ಲೋಕದ ವ್ಯವಹಾರವೇ 'ಲೋಕ.' ಜೈನ ಪುರಾಣದಲ್ಲಿಯೂ ಲೋಕಗಳು ಮೂರು ಎಂದು ಉಕ್ತವಾಗಿರುವುದರಿಂದ, ಮಾರ್ಗಕಾರನು ತಾನು ಅನುಸರಿಸುತ್ತಿರುವ ಇಬ್ಬರು ಆಲಂಕಾರಿಕರನ್ನೂ ಇಲ್ಲಿ ಅನುಸರಿಸದೆ, 'ಲೋಕ' ಎಂಬುದಕ್ಕೆ ತನ್ನ ಮತಾನುಸಾರವಾದ ವಿವರಣೆಯನ್ನು ಕೊಟ್ಟಿದ್ದಾನೆ ಎಂದು ಊಹಿಸಬಹುದಾಗಿದೆ.

ದೇಶವಿರುದ್ಧ : 'ದೇಶಂ ವರ ರಾಷ್ಟ್ರಾದಿ ನಿವೇಶಾಂತಂ'–ಇದು ಮಾರ್ಗಕಾರನ ಉಕ್ತಿ. 'ದೇಶೋಽದ್ರಿ ವನ ರಾಷ್ಟ್ರಾದಿಃ'–ಇದು ದಂಡಿಯ ಹೇಳಿಕೆ. 'ಬೆಟ್ಟ ಕಾಡು ರಾಷ್ಟ್ರ ಮೊದಲಾದುವು ದೇಶ' ಎಂಬ ದಂಡಿಯ ಹೇಳಿಕೆಯನ್ನು ಗಮನಿಸಿದರೆ, 'ವನ ರಾಷ್ಟ್ರಾದಿ' (ಕಾಡು ನಾಡು) ಎಂದು ಕ. ರಾ. ಮಾರ್ಗದ ಪಾಠವಿರಬಹುದೇ ಎಂಬ ಶಂಕೆಯುಂಟಾಗುತ್ತದೆ. ಅದು ಹೇಗಾದರೂ ಇರಲಿ. ರಾಷ್ಟ್ರ ಮೊದಲಾದ ನಿವೇಶ ಎಂದರೆ ಸ್ಥಳಗಳಿಗೆ ವಿರುದ್ಧವಾದುದನ್ನು ತಿಳಿಸುವುದು ದೇಶವಿರುದ್ಧ. (ಉದಾ., ಶ್ರೀಗಂಧದ ಮರಗಳು ಹಿಮಾಚಲದಲ್ಲಿಯೂ, ದೇವದಾರುಗಳು ಮಲಯಪರ್ವತದಲ್ಲಿಯೂ ಬೆಳೆಯುತ್ತಿವೆ ಎಂದರೆ 'ದೇಶ ವಿರುದ್ಧ' ದೋಷ.) (ಸ್ಥಲವರ್ಣನೆ ಸ್ವಾಭಾವಿಕವಾಗಿರಬೇಕು ಎಂದಾಯಿತು. ಆಧುನಿಕ ಕಾವ್ಯ ಮೀಮಾಂಸೆಯ ಪರಿಭಾಷೆಯಲ್ಲಿ, Local Colour ಎಂಬುದು ಯಥಾರ್ಥವಾಗಿರಬೇಕು.)

ಪದ್ಯ ೧೧೧–೧೧೨: ಈ 'ವಿರುದ್ಧ' ಭೇದಗಳಿಂದಾದ ದೋಷಗಳನ್ನು ಒಕ್ಕಣಿಸುತ್ತಾಹೋದರೆ ಅವಕ್ಕೆ ಕೊನೆಮೊದಲಿಲ್ಲವೆಂದು ಹೇಳಿ, ಕುಲವಧು ದುರ್ಜನರ ಪರಿಚಯಮಾಡಿಕೊಂಡ ಮಾತ್ರದಿಂದಲೇ ಅವಳ ನಡತೆ ಹೇಗೆ ಶಂಕಾಸ್ಪದವಾಗುವುದೋ ಹಾಗೆ ಕಾವ್ಯ

ದೋಷವು ಎಷ್ಟೇ ಅತ್ಯಲ್ಪವಾದರೂ ಅದು ಕೃತಿವಧುವಿನ ಕಾಂತಿಯನ್ನು ಮಸುಳಿಸುತ್ತದೆ ಎಂದು ಮಾರ್ಗಕಾರನು ಬಹು ಮನೋಜ್ಞವಾದ ರೀತಿಯಲ್ಲಿ ಕವಿಗಳಿಗೆ ಎಚ್ಚರಿಕೆ ನೀಡಿದ್ದಾನೆ.

ಪದ್ಯ ೧೧೩ : [ಇಲ್ಲಿಯವರೆಗೆ ಮಾರ್ಗಕಾರನು ಸಂಸ್ಕೃತ ಕಾವ್ಯಲಕ್ಷಣಕಾರರು ಹೇಳಿದ ದೋಷಗಳನ್ನು ಕನ್ನಡ ಕಾವ್ಯಮಾರ್ಗಕ್ಕೆ ಅನ್ವಯವಾಗುವಂತೆ ವಿವರಿಸಿ, ಇಲ್ಲಿಂದ ಮುಂದಕ್ಕೆ ಕನ್ನಡ ಭಾಷೆಗೆ ವಿಶಿಷ್ಟವಾದ, ಎಂದರೆ, ಕನ್ನಡ ಭಾಷಾಪ್ರಯೋಗ ಸಂಬಂಧವಾಗಿ ಉದ್ಭವಿಸಬಹುದಾದ ದೋಷಗಳನ್ನು ಕುರಿತು ವಿವೇಚಿಸಿದ್ದಾನೆ. ಈ ಗ್ರಂಥ ವಿಭಾಗವು ಸಂಪೂರ್ಣವಾಗಿ ಮಾರ್ಗಕಾರನ ಸ್ವತಂತ್ರ ರಚನೆ ಎಂಬುದು ನೆನೆಯತಕ್ಕದ್ದು ; ಹಾಗೂ ಕನ್ನಡ ಕಾವ್ಯಮೀಮಾಂಸೆಗೆ ಅವನ ಬೆಲೆಯುಳ್ಳ ಕೊಡುಗೆ.]

ಕಾರಕದೋಷ, ವಚನದೋಷ, ಗುರುದೋಷ, ಲಘುದೋಷ, ಸಮುಚ್ಚಯದೋಷ, ವಿಕಲ್ಪದೋಷ, ಅವಧಾರಣಾದೋಷ, ವಿಶಂಕಾ ದೋಷ–ಇವು ಇತರ ದೋಷಗಳು.

ಕಾರಕ ವಿಚಾರ

ಪದ್ಯ ೧೧೪ : "ಕರ್ಮ ಕರಣ ಇವೇ ಮೊದಲಾಗಿ **ಕಾರಕಗಳು ಆರು ;** ಇವುಗಳನ್ನು ಅವಲಂಬಿಸಿ ನಿಲ್ಲುವ **ವಿಭಕ್ತಿಗಳು ಏಳು.** ಏಕವಚನ, ಬಹುವಚನ ಎಂಬುದಾಗಿ ವಚನ ಎರಡು ತೆರ. ಇವುಗಳ ಜಾತಿ ವಿಭಾಗಗಳನ್ನೂ, ಗುಣದೋಷಗಳನ್ನೂ ಹೇಳುತ್ತೇನೆ."–ಇದು ಪದ್ಯದ ತಾತ್ಪರ್ಯ.

ಕಾರಕದೋಷ : "ಕಾರಕಗಳು ಆರು, ಇವುಗಳನ್ನು ಅವಲಂಬಿಸಿ ನಿಲ್ಲುವ ವಿಭಕ್ತಿಗಳು ಏಳು" ಎಂಬ ಮೇಲಿನ ಹೇಳಿಕೆಯಲ್ಲಿ ಕಂಡು ಬರುವ ವಿರೋಧಾಭಾಸವನ್ನು ಪರಿಹರಿಸಿ ವಿವರಿಸುವುದು ಕ್ಲೇಶಕರ

ವೆನ್ನುವುದರಲ್ಲಿ ಸಂದೇಹವಿಲ್ಲ.[10] ಈ ಕುರಿತು ಟಿಪ್ಪಣಿ ಬರೆಯುತ್ತಾ, ಮದ್ರಾಸು ಮುದ್ರಣದ ಸಂಪಾದಕರು ಹೀಗೆ ಟೀಕಿಸಿದ್ದಾರೆ:

"ಷಷ್ಠಿಗೆ ಕಾರಕತ್ವವಿಲ್ಲವಾಗಿ ಕಾರಕಗಳು ಆರಾದುದರಿಂದ ಇಲ್ಲಿ 'ವಿಭಕ್ತಿಗಳಾಱೆನಿಕ್ಕುಂ' ಎಂದಿರಬಹುದೆಂದು ತೋರುವುದು. ಆದರೆ ಲಕ್ಷ್ಯದಲ್ಲಿ ಷಷ್ಠಿಯ ವಿಭಕ್ತಿಯನ್ನೂ ಕಾರಕಕ್ಕೆ ಉದಾಹರಣೆಯಾಗಿ ಕವಿಯು ಕೊಟ್ಟಿರುವನು :–'ಅಧೀಶ್ವರನಾ ದಯೆ.' ಈ ಕವಿಗೆ ಕಾರಕವೆಂದರೆ ನಾಮವಿಭಕ್ತಿ ಪ್ರತ್ಯಯವೆಂಬ ಅಭಿಪ್ರಾಯವಿದ್ದಂತೆ ಕಾಣುವುದು."

ಮಾರ್ಗಕಾರನ ಈ ಹೇಳಿಕೆಯ ಬಗೆಗೆ ವಿಚಾರ ವಿಮರ್ಶೆ ಅಗತ್ಯವಾಗಿದೆ. ಮೊದಲು, ಈ ಸಂಬಂಧದಲ್ಲಿ ಅವನು ಕೊಟ್ಟಿರುವ ಲಕ್ಷ್ಯ ಪದ್ಯವನ್ನು ನಾವು ವಿಶೇಷವಾಗಿ ಗಮನಿಸಬೇಕು (ಪದ್ಯ ೧೫):

"ನರಪತಿ ಬಂದಂ, ಆ ನೃಪನನಟ್ಟಿಯೆ ಕಾಣ್ಬುದು, ತನ್ನರೇಂದ್ರನಿಂ
ಧರಣಿ ಸನಾಥೆ, ಭೂಪತಿಗೆ ಕಪ್ಪವನಿತ್ತವನೀಶನತ್ತಣಿಂ
ಪರಿಭವಮುಂ ಕಟಿಲ್ಚುವುದು, ಅಧೀಶ್ವರನಾ ದಯೆ ಸಾಲ್ಗುಂ, ಆ ಮಹೀ
ಶ್ವರನೊಳಿದಪ್ಪುದು—ಎಂಬುದಿದು ಕಾರಕಯುಕ್ತ ವಿಭಕ್ತ್ಯನುಕ್ರಮಂ."

ಲಕ್ಷಣ ಪದ್ಯದಲ್ಲಿ (೧೧೪) 'ಕಾರಕಮಾಱು ಕರ್ಮಕರಣಾದಿಕದಿಂ' ಎಂದಿರುವಲ್ಲಿ ಮಾರ್ಗಕಾರನು 'ಕರ್ತೃ'ಕಾರಕವನ್ನು ಹೆಸರಿಸದೆ

---

10 The earliest reference to the case system in Kannada is found in Kavirājamārga of Nṛpatunga (?). He states that there are six 'Kārakās' as distinct from seven cases, which are distinguished by their relationship with the verb, such as 'Karma' (Objective), 'Karaṇa' (Instrumental) etc. By implication he seems to have omitted the genitive case from the 'Kāraka' group. But in the following 'Lakshya Padya' (illustrative stanza) he has includud the genitive case also in its

ಬಿಟ್ಟಿರುವುದು ಕಂಡುಬರುತ್ತದೆ. ಎಂದರೆ, ಅವನು 'ಷಷ್ಠಿ' ಗೆ ಕಾರಕತ್ವವನ್ನು ಆರೋಪಿಸಿದಂತಾಯಿತು. ಇದು ಸಮಸ್ಯೆಯನ್ನು ಇನ್ನಷ್ಟು ಜಟಿಲವನ್ನಾಗಿ ಮಾಡಿದೆ.

ಕೆಲವು ವ್ಯಾಕರಣ ವಿಚಾರಗಳಲ್ಲಿ ಕೇಶಿರಾಜನು ಮಾರ್ಗಕಾರನನ್ನು ಅನುಸರಿಸಿರುವುದು ಕಂಡುಬರುತ್ತದೆಯಾದ್ದರಿಂದ, ಈ ವಿಚಾರದಲ್ಲಿ ಅವನ ಉಕ್ತಿಗಳನ್ನು ಗಮನಿಸುವುದಗತ್ಯ :

" ಸಂದಿಸಿ ಮುಮಿಂಕೆಯುದದೊಳೆ
ಯೆಂದಿರ್ಪುವು ಸಪ್ತವಿಧ ವಿಭಕ್ತಿಗಳವು ಮಾ
ರ್ಗಂದಪ್ಪದರ್ಥವಶದಿಂ
ಪಿಂದೆಣಿಸಿದ ವಿವಿಧ ವಿಧದ ಲಿಂಗಕ್ಕೆಲ್ಲಂ."

ವೃತ್ತಿ—ಪಿಂತೆ ಪೇೞ್ದ ನಾನಾ ತೆಱದ ಲಿಂಗಂಗಳ್ಗೆ ಪರವಾಗಿ ನಾವು ವಿಭಕ್ತಿಗಳ್, ಮ್, ಅಮ್, ಇಮ್, ಕೆ, ಅತ್, ಅತ್, ಒಳ್ ಎಂದು ಪ್ರಥಮೆಗಂ ದ್ವಿತೀಯೆಗಂ ತೃತೀಯೆಗಂ ಚತುರ್ಥಿಗಂ ಪಂಚಮಿಗಂ ಷಷ್ಠಿಗಂ ಸಪ್ತಮಿಗಂ—ಏೞಾಗಿ ಕಾರಕವಶದಿಂ ಪತ್ತುಗುಂ. ಆ ಕಾರಕಮೆಂಬುದು ಕ್ರಿಯಾನಿಮಿತ್ತಂ ; ಅದು ಕರ್ತೃವೆಂದುಂ, ಕರ್ಮಮೆಂದುಂ, ಕರಣಮೆಂದುಂ, ಸಂಪ್ರದಾನಮೆಂದುಂ, ಅಪಾದಾನಮೆಂದುಂ, ಅಧಿಕರಣಮೆಂದುಂ ಷಡ್ವಿಧಮಾಗಿರ್ಪುದು ; ಷಷ್ಠಿಯೆಂದು ಸಂಬಂಧಾರ್ಥಂ.

---

indirect relationship with the verb ; by his statement at the end of the stanza, "idu Kārakayukta Vibhaktaynu kramaṁ," he has assigned 'Kārakatva' (verbal relationship) to the genitive also. It is difficult to explain this inconsistency. Nāgavarma also holds the same view." (Vide Sabdasmṛti : Sūtras 15-16)—'The Case System': Paper by M. V. Seetha Ramaiah ; Vide Proceedings of the Seminar on "Grammatical Theories in Kannada" (October 1965). Annamalai University, Annamalainagar.

ಪ್ರಯೋಗಂ–ಮರಂ, ಮರನಂ, ಮರದಿಂ, ಮರಕ್ಕೆ, ಮರದತ್ತಣಿಂ, ಮರದ, ಮರದೊಳ್, ಇಂತರ್ಥವಶದಿಂ ವಿಭಕ್ತಿ ಪರಿಣಮಿಪುವು. ವಿಭಕ್ತಿ ಕಾರಕಮನೆಯ್ದುವುದಱಿಂ ಪದಂ ನಾನಾ ರೂಪಮಪ್ಪುದು.

"ಮರನಿರ್ದುದು ಮರನಂ ಕಡಿ
ಮರದಿಂ ಮಾಡಾನೆಯಂ ಮರಕ್ಕೆಱೆ ನೀರಂ
ಮರದತ್ತಣಿನೆಲೆಯುದಿರ್ದುದು
ಮರದಡು ಪಣ್ ಮರದೊಳಿರು ತಳಿರ್ತಿರು ಮರನೇ"

[ಸೂತ್ರದಲ್ಲಿಯೂ ವೃತ್ತಿಯಲ್ಲಿಯೂ ಸಂಬೋಧನಾ ವಿಭಕ್ತಿಯ ಪ್ರಸಕ್ತಿಯಿಲ್ಲದಿದ್ದರೂ ಪ್ರಯೋಗದಲ್ಲಿ ಕೇಶಿರಾಜನು ಅದನ್ನು ಸೇರಿಸಿದ್ದಾನೆ.]

ಕೇಶಿರಾಜನು ನಾಗವರ್ಮನನ್ನೆ ಅನುಸರಿಸಿರುವುದು ಸ್ಪಷ್ಟ:

"ಧಾತುವಿವರ್ಜಿತಮರ್ಥೋ
ಪೇತಂ ಲಿಂಗಂ ಮಮಿಂಕೆಯುದದೊಳ್ ಎಂದಿಂ
ತೀತೆಱದಿಂದೇೞಿಕ್ಕುಂ
ಖ್ಯಾತ ವಿಭಕ್ತಿಗಳದರ್ಕೆ ಕಾರಕವಶದಿಂ."

"ಪರಿವಿಡಿಯೆ ಕರ್ತೃ ಕರ್ಮಂ
ಕರಣಾಖ್ಯಂ ಸಂಪ್ರದಾನಮುಪನಯನಾಖ್ಯಾ
ನಿರತಮುಪಾದಾನಮುಮಧಿ
ಕರಣಮುಮೆನೆ ಕಾರಕಂಗಳಾಱುಂ ನೆಗೞ್ಗುಂ." [11]

---

11 ಈ ಕನ್ನಡ ವೈಯಾಕರಣರ ಅಭಿಪ್ರಾಯವನ್ನು ಕಿಟ್ಟೆಲ್‌ರವರು ತಮ್ಮ ಇಂಗ್ಲಿಷು ವ್ಯಾಕರಣದಲ್ಲಿ ಹೀಗೆ ಸಂಗ್ರಹಿಸಿದ್ದಾರೆ:

"The ancient Kannada grammars which the author of the present grammar has consulted, do not use a particular word to express *syntax or the construction of sentences*; however the Saṁskṛita term Vākyavinyāsa which expresses it, may be adopted.

"Regarding the construction of a sentence (Vākya) *Kāraka*, i.e. the relation of the noun to the verb, is to

ನಾಗವರ್ಮ ಕೇಶಿರಾಜರಿಬ್ಬರೂ ಕರ್ತೃ ಮೊದಲಾಗಿ ಕಾರಕಗಳು ಆರು ಎಂದೂ, ವಿಭಕ್ತಿಗಳು ಏಳು ಎಂದೂ ಸ್ಪಷ್ಟವಾಗಿ ಹೇಳಿದ್ದಾರೆ; ಷಷ್ಠಿಗೆ ಕಾರಕತ್ವವಿಲ್ಲ ಎಂಬ ಬಗೆಗೂ ಅವರದ್ದು ಏಕಾಭಿಪ್ರಾಯ. ಕಾರಕ-ವಿಭಕ್ತಿ ವ್ಯವಸ್ಥೆಯ ವಿಚಾರದಲ್ಲಿ ಮಾರ್ಗಕಾರನಂತೆ ಇವರೂ ಸಂಸ್ಕೃತ ವ್ಯಾಕರಣವನ್ನೆ ಅನುಸರಿಸಿದ್ದರೂ, ಇವರಿಗೂ ಮಾರ್ಗಕಾರನಿಗೂ ಒಂದು ಮುಖ್ಯ ಅಭಿಪ್ರಾಯಭೇದವು ಸ್ಪಷ್ಟ ಗೋಚರವಾಗಿದೆ. ಮಾರ್ಗಕಾರನು ಕರ್ತೃವನ್ನು ಕಾರಕಾನುಕ್ರಮದಲ್ಲಿ ಸೇರಿಸಿಲ್ಲ; ಹಾಗೂ, ಕಾರಕಗಳು ಆರೆಂದು ಸ್ಪಷ್ಟವಾಗಿ ಹೇಳಿ, ‘ ಇದು ಕಾರಕಯುಕ್ತ ವಿಭಕ್ತ್ಯನುಕ್ರಮಂ’ ಎಂದು ಉಪಲಕ್ಷಿಸುವಲ್ಲಿ ಷಷ್ಠಿಯನ್ನೂ ಆ ‘ಅನುಕ್ರಮ’ದಲ್ಲಿ ಸೇರಿಸಿಕೊಂಡಿರುವುದರಿಂದ ಅವನು ಷಷ್ಠಿಗೂ ಕಾರಕತ್ವವನ್ನು ಆರೋಪಿಸಿರುವನೆಂದು ಅನುಮಾನಿಸಬೇಕಾಗುತ್ತದೆ. ಅವನ ಅಭಿಪ್ರಾಯದಂತೆ, ಕರ್ತೃ ಕಾರಕವಲ್ಲದಿದ್ದರೂ ಅದು ಪ್ರಥಮಾ ವಿಭಕ್ತಿಯಿಂದ ನಿರ್ದಿಷ್ಟವಾಗಿ, ವಿಭಕ್ತಿಗಳು ಏಳು; ಇದರಲ್ಲಿ ಸಂದೇಹವಿಲ್ಲ. (ಹೀಗಿರುವುದರಿಂದ, ಮದರಾಸು ಮುದ್ರಣದ ಸಂಪಾದಕರ ಅನುಮಾನವು ಸೋಪಪತ್ತಿಕವಾಗಿಲ್ಲ ಎಂದು ಹೇಳಬೇಕಾಗುತ್ತದೆ). ಷಷ್ಠೀ ವಿಭಕ್ತಿಗೆ ಉದಾಹರಣೆಯನ್ನು ಕೊಡುವಲ್ಲಿ, **‘ಅಧೀಶರನಾ ದಯೆ ಸಾಲ್ಗುಂ’** ಎಂದು ಮಾರ್ಗ

---

be considered. Kēśava says that Kāraka is on account of the verb (Kriyānimitta), and that the case terminations (nāmavibhaktis) are suffixed by the power of Kāraka (Kāraka Vaśadiṁ) . . . . . There are six such Karakas or relations, *viz.*, Kartṛi, Karma, Karaṇa, sampradāna, apādāna, adhikaraṇa.

“The idea of a genitive case is not considered a Karaka, because it expresses the relation of two nouns to each other (sambandhārtha), but not the relation of a noun and verb.”

ಕಾರನು ಷಷ್ಠಿಗೆ ಕ್ರಿಯಾಸಂಬಂಧವನ್ನು ಸ್ಪಷ್ಟವಾಗಿ ತಗುಳ್ಚಿರುವುದೂ, '**ಮರದದು ಪಣ್**' ಎಂದು ಕೇಶಿರಾಜನು ಸಂಬಂಧಾರ್ಥವಷ್ಟನ್ನೆ ಎತ್ತಿ ಕಾಣಿಸಿರುವುದೂ ಅವರಿಬ್ಬರೂ ಅನುಸರಿಸುತ್ತಿರುವ ವ್ಯಾಕರಣಪದ್ಧತಿ ಭೇದಗಳನ್ನು ಸೂಚಿಸುತ್ತವೆ ಎಂದು ನಮಗೆ ತೋರುತ್ತದೆ. ಅದು ಹೇಗಿದ್ದರೂ, ಮಾರ್ಗಕಾರ ಮೊದಲ್ಗೊಂಡು ಎಲ್ಲ ವ್ಯಾಕರಣಕಾರರೂ ಕನ್ನಡ ನುಡಿಯ ಜಾಯಮಾನವನ್ನು ಗನುನಿಸದೆ ಅದರ ವ್ಯಾಕರಣ ಪ್ರಕ್ರಿಯೆಗಳನ್ನು ಸಂಸ್ಕೃತ ವ್ಯಾಕರಣದ ಚೌಕಟ್ಟಿಗೆ ಅಳವಡಿಸಿರುವುದೇ ಇಂಥ ಗೊಂದಲಗಳಿಗೆ ಕಾರಣವಾಗಿದೆ. ಪ್ರಕೃತದಲ್ಲಿ, ಮಾರ್ಗಕಾರನು ಸಂಸ್ಕೃತವ್ಯಾಕರಣದ ಕಾರಕ ವ್ಯವಸ್ಥೆಯನ್ನು ಅನುಸರಿಸಿರುವುದರಿಂದ ಅವನು ಕರ್ತೃವನ್ನು ಕಾರಕಾನುಕ್ರಮದಲ್ಲಿ ಸೇರಿಸಿಲ್ಲವೆಂದು ಶ್ರೀ ಕೆ. ಟಿ. ಪಾಂಡುರಂಗಿಯವರು ಅಭಿಪ್ರಾಯಪಟ್ಟಿದ್ದಾರೆ. ಅವರು ತಿಳಿಸುವಂತೆ, ಸಂಸ್ಕೃತ ವ್ಯಾಕರಣದ ಪ್ರಕಾರ ಪ್ರಥಮಾ ವಿಭಕ್ತಿ ಕಾರಕಾಧೀನವಲ್ಲ; ಹಾಗೂ (ಕರ್ಮಣಿ ಪ್ರಯೋಗದಲ್ಲಿ) ತೃತೀಯಾ ವಿಭಕ್ತಿಯ 'ಕರಣ' ಕಾರಕವೇ 'ಕರ್ತೃ'ಕಾರಕತ್ವವನ್ನೂ ಒಳಗೊಳ್ಳುತ್ತದೆ. ಮಾರ್ಗಕಾರನ ಉಕ್ತಿಯನ್ನು ಅವರು ಈ ರೀತಿ ಸಮರ್ಥಿಸಿರುವುದು ಗ್ರಾಹ್ಯವಾಗಿ ಕಂಡುಬಂದರೂ, ಮಾರ್ಗಕಾರನು ಹೇಳುವ 'ಕರ್ತೃ' ಕಾರಕ ರಹಿತವಾದ ಆರು ಕಾರಕಗಳಲ್ಲಿ ಷಷ್ಠಿಯೂ ಸೇರುವುದೇ ಇಲ್ಲವೇ ಎಂಬ ಸಮಸ್ಯೆಗೆ ಅವರಿಂದ ಪರಿಹಾರ ಸೂಚಿತವಾಗಿಲ್ಲ.[12]

---

12 "In Kavirājamārga Nṛpatunga enumerates six Kārakas and seven vibhaktis. He begins his enumeration with Karmakāraka instead of Kartṛkāraka. This is because the order followed is that of vibhaktis. According to Sanskrit grammarians, the first case termination does not convey any Karaka. The second conveys Karma, the Karaṇa and Kartā and so on. The verbal termination conveys Kartā in active construction. Therefore

ಕೇಶಿರಾಜನೂ ತೃತೀಯೆಗೆ ಕರ್ತೃಕಾರಕತ್ವವನ್ನು ಹೇಳಿದ್ದಾನೆ. ('ತೃತೀಯೆ ಪೇೞಲ್ ಪಡೆಗುಂ ಕರ್ತೃ ಕರಣ ಹೇತು ಸ್ಥಿತಿಯೊಳ್'—ಸೂ. ೧೨೮. ಉದಾ., ಕಾವ್ಯಮೆನ್ನಿಂ ಪೇೞಿಪಟ್ಟುದು.)

[ಆಧುನಿಕ ಭಾಷಾ ಶಾಸ್ತ್ರಜ್ಞರ ಪ್ರಕಾರ, ಕನ್ನಡದಲ್ಲಿ ಪ್ರಥಮಾ ವಿಭಕ್ತಿ ಯಿದ್ದರೂ ಆದನ್ನು ಸಂಕೇತಿಸುವ ಪ್ರತ್ಯಯ ನುಡಿಯ ಜಾಯಮಾನಕ್ಕೆ ಹೊರತು. ನಾಮಪ್ರಕೃತಿಯೇ ಪ್ರಥಮೆಯ ಅರ್ಥದಲ್ಲಿ ಪ್ರಯೋಗವಾಗುತ್ತದೆ. ಮಾರ್ಗ ಕಾರನ ಲಕ್ಷ್ಯಪದ್ಯದಲ್ಲಿಯೇ—'ನರಪತಿ ಬಂದಂ'—ಎಂಬ ಪ್ರಯೋಗ ಇದಕ್ಕೆ ನಿದರ್ಶನ. ಅಲ್ಲದೆ, ವಾಕ್ಯದ ಕ್ರಿಯಾಪದದಲ್ಲಿಯ ಧಾತುವಿಗೆ ಹತ್ತಿರುವ ಆಖ್ಯಾತ ಪ್ರತ್ಯಯವೇ ಕರ್ತೃಸೂಚಕವೂ ಆಗಿ ಕೆಲಸ ಮಾಡುತ್ತದೆ: (ಬರು+ಅನ್, ಅಳ್, ಉದು, ಅರ್, ಉವು, ಇತ್ಯಾದಿ. 'ಬಂದನ್' ಎಂದರೆ 'ಅವನ್ ಬಂದನ್' ಎಂದೇ ಅರ್ಥ. ಹೀಗಿರುತ್ತ, ಕನ್ನಡದಲ್ಲಿ ಸಹಜವಾಗಿಯೆ (ಮೇಲೆ ಶ್ರೀ ಪಾಂಡುರಂಗಿಯವರು ಸಂಸ್ಕೃತ ವ್ಯಾಕರಣ ವಿಷಯಕವಾಗಿ ಹೇಳಿರುವಂತೆ) ಪ್ರಥಮಾ ಮೂಲಕವಾದ ಕರ್ತೃಕಾರಕತ್ವಕ್ಕೆ ಎಡೆಯಿಲ್ಲವೆಂದು ಕಂಡುಬರುತ್ತದೆ. ಮಾರ್ಗಕಾರನು ಇದನ್ನೆಲ್ಲ ಮನಗಂಡೆ 'ಕರ್ತೃ' ವನ್ನು 'ಕಾರಕವರ್ಗ' ದಿಂದ ಹೊರತುಪಡಿಸಿರಬೇಕೆಂದು ನಮಗೆ ತೋರುತ್ತದೆ.]

'ಕವಿರಾಜಮಾರ್ಗ' ವನ್ನು ಆಳವಾಗಿ ಅಭ್ಯಾಸಮಾಡಿರುವ ದಿ|| ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರು ಈ ಸಂಬಂಧದಲ್ಲಿ ಮಾಡಿರುವ ವಿವೇಚನೆ ('ಕವಿರಾಜಮಾರ್ಗ ವಿವೇಕ'-ಭಾಗ ೨: ಅಪ್ರಕಟಿತ) ಮನನೀಯವಾಗಿದೆ. ಅವರ ತೀರ್ಮಾನವು ನಮ್ಮ

---

the first case termination is added purely for technical reasons . . . . a plan of reference to Kartā or Karma on his basis cannot hold good to Kannada. The demarcation of Kārakas as in Sanskrit cannot also be applied mutatis mutandis to Kannada."–' Influences of Sanskrit and Prakrit Grammars on Kannada Grammarians': Paper by Sri K. T. Pandurangi, M.A.; *Vide* Proceedings of the Seminar on Grammatical "Theories in Kannada" (October 1965), Annamalai University, Annamalainagar.

ತೀವರ್ಶನಕ್ಕೆ ಪೋಷಕವಾಗಿರುವುದರಿಂದಲೂ, ಅವರ ವಾದಸರಣಿ ಯುಕ್ತಿಯುಕ್ತವಾಗಿದ್ದು ಸ್ವಾರಸ್ಯವಾಗಿರುವುದರಿಂದಲೂ 'ಕಾರಕ' ಸಂಬಂಧವಾದ ಅವರ ವಿವೇಚನೆಯ ಕೆಲವು ಭಾಗಗಳನ್ನು ಇಲ್ಲಿ ಉದ್ಧರಿಸಿಕೊಟ್ಟಿದೆ.

'ಕಾರಕ' 'ಲಿಂಗ' 'ವಿಭಕ್ತಿ'— ಈ ಪದಗಳ ಅರ್ಥ ನಿರ್ವಚನವನ್ನು ಮಾಡಿ, ಮಾರ್ಗಕಾರನು ಕಾರಕಯುಕ್ತ ವಿಭಕ್ತ್ಯನುಕ್ರಮಕ್ಕೆ ಕೊಟ್ಟಿರುವ ಲಕ್ಷ್ಯಪದ್ಯದ ಆಶಯವನ್ನು ಮುಳಿಯ ತಿಮ್ಮಪ್ಪಯ್ಯನವರು ಹೀಗೆ ತಿಳಿಸಿದ್ದಾರೆ:

"ಸ್ವಲಿಂಗಾಂತರ್ಗತವಾದ ಅರ್ಥವನ್ನು ಆಯಾ ಕಾರಕಾರ್ಥವನ್ನಾಗಿ ವಿಭಾಜಿಸಿ, ಅದನ್ನು ಆಯಾ ಕಾರಕ ಸಂಬಂಧಕ್ಕನ:ವಾಗಿ ಕ್ರಿಯಾಪದದತ್ತ ಕೊಂಡೊಯ್ಯುವ ಅಕ್ಷರ ವರ್ಗವೇ ವಿಭಕ್ತಿಪತ್ಯಯ. ಉದಾ., 'ನರಪತಿ ಬಂದಂ' ಎಂಬಲ್ಲಿ ಕರ್ತೃತ್ವ ಸಂಬಂಧದಿಂದ ಪದವು ತನ್ನ ಪ್ರತ್ಯಯಮೂಲಕವಾಗಿ ಕ್ರಿಯಾಪದವನ್ನೊಂದುತ್ತಿದೆ. ಅದರಂತೆ 'ನೃಪನಂ ಕಾಣ್ಬುದು. ನರೇಂದ್ರನಿಂ ಧರಣಿ ಸನಾಥೆ (ಯಾದಳ್), ಭೂಪತಿಗೆ ಕಪ್ಪಮನೀಗೆ, ಅವನೀಶನತ್ತಣಿಂ ಪರಿಭವಮಂ ಕಟಿಲ್ಪುವುದು, ಅಧೀಶ್ವರನಾ ದಯೆ ಸಾಲ್ಗುಂ, ಮಹೀಶ್ವರನೊಳ್ ಇದು ಅಪ್ಪುದು' ಎಂಬಲ್ಲಿ ಕ್ರಮವಾಗಿ ಕರ್ಮ, ಕರಣ, ಸಂಪ್ರದಾನ, ಅಪಾದಾನ, ಸಂಬಂಧ, ಅಧಿಕರಣಗಳೆಂಬ ಸಂಬಂಧ ಮೂಲಕವಾಗಿ ನಾಮಪದವು ಕ್ರಿಯಾಪದವನ್ನೊಂದುವ ವ್ಯಾಕರಣಮಾರ್ಗವನ್ನು ಕಾಣಬಹುದು . . . ಸಂಸ್ಕೃತ ವ್ಯಾಕರಣಾನುಸಾರವಾಗಿ ನೋಡಿದರೆ 'ಕರ್ತೃ' ಮೊದಲಾಗಿ, 'ಸಂಬಂಧ' (ಷಷ್ಠೀವಿಭಕ್ತಿ ಪ್ರತ್ಯಯದಿಂದ ಸೂಚಿತವಾಗುವ ಪದ)ವನ್ನುಳಿದು ಆರು ಕಾರಕಗಳು ಈ ಗ್ರಂಥಕಾರನ 'ಕಾರಕಮಾಱು' ಎಂಬ ಹೇಳಿಕೆಗೇನೊ ಸರಿಯಾಗುತ್ತಿದೆ"

—ಎಂದು ಹೇಳಿ, ಮದ್ರಾಸು ಮುದ್ರಣದ ಸಂಪಾದಕರ 'ಟಿಪ್ಪಣಿ'ಯನ್ನು ಕುರಿತು ಹೀಗೆ ಟೀಕಿಸಿದ್ದಾರೆ:

"ಸಂಪಾದಕರು ತಮ್ಮ ಅಭಿಪ್ರಾಯಗಳೆರಡರೊಳಗೆ ಮೊದಲಿನದನ್ನು ತಳ್ಳಿ ಮತ್ತಿನದನ್ನು ನೆಲೆಗೊಳಿಸಿದಂತೆ ನಮಗೆ ಕಾಣುವುದು. ಷಷ್ಠಿಗೆ ಕಾರಕತ್ವವಿಲ್ಲದಿರುವುದು ಸಂಸ್ಕೃತ ವ್ಯಾಕರಣ ಪದ್ಧತಿಗನುವಾಗಿ. ಅದನ್ನು ಅನುಸರಿಸಿದಲ್ಲಿ 'ವಿಭಕ್ತಿಗಳಾಱು' ಎನ್ನುವುದು ಹೇಗೆ? ಸಂಸ್ಕೃತದಲ್ಲಿ ನಾಮವಿಭಕ್ತಿ

ಗಳು ಆರಲ್ಲ, ಏಳು. ಅವರು ತಮ್ಮ ಆ ಸಂದೇಹ ನಿವೃತ್ತಿಯನ್ನು, "ಆದರೆ ಲಕ್ಷ್ಯದಲ್ಲಿ ಷಷ್ಠಿಯ ವಿಭಕ್ತಿಯನ್ನು ಕಾರಕಕ್ಕೆ ಉದಾಹರಣೆಯಾಗಿ ಕವಿಯು ಕೊಟ್ಟಿರುವನು" ಎಂಬುದರಿಂದ ಮಾಡಿಕೊಳ್ಳುತ್ತಾರೆ. ಷಷ್ಠೀವಿಭಕ್ತಿಯನ್ನು ಕ್ರಮವಾಗಿ ಕಾರಕಾಧಾರವೆನ್ನಿಸಿದ ವಿಭಕ್ತಿನಿರೂಪಣೆಯಲ್ಲಿ ಒಟ್ಟಿಗೆ ಸೇರಿಸಿದುದು ಮಾತ್ರ—ಎಂದೇಕೆ ಭಾವಿಸಬಾರದು? ಸಂಬಂಧದ ಷಷ್ಠಿಗೆ ಕಾರಕತ್ವವಿಲ್ಲ ವಾದರೂ ಕಾರಕಗಳ ಸಾಲಿನಲ್ಲಿರುವುದರಿಂದ ಅದನ್ನು ಅವುಗಳೊಡನೆ ನಿರೂಪಿಸಿದ್ದಾನೆ ಎಂದೇ ಭಾವಿಸತಕ್ಕದ್ದು. ಷಷ್ಠಿಗೆ ಸಂಬಂಧ ವಾಚಕತೆ ಮಾತ್ರವೇ ಇರುವುದು, ಕಾರಕತ್ವವಿಲ್ಲ ಎಂಬ ಸಂಸ್ಕೃತ ವೈಯಾಕರಣ ಮಾರ್ಗವನ್ನೊಂದಿದರೆ 'ವಿಭಕ್ತಿಗಳಾಱು' ಎನ್ನುವುದಾದರೂ ಹೇಗೆ? ಷಷ್ಠಿಗೆ ವಿಭಕ್ತಿ ಪ್ರತ್ಯಯವೂ ಇಲ್ಲವಾಗದು. ಆ ವಿಭಕ್ತಿಯ ಸ್ವರೂಪವನ್ನೂ ತಿಳಿಸಲಿಕ್ಕಾಗಿ ಷಷ್ಠಿಯನ್ನೂ ಅಲ್ಲಿ ಸೂಚಿಸಿರಬೇಕು, ಎನ್ನುವ."

ಮುಳಿಯ ತಿಮ್ಮಪ್ಪಯ್ಯನವರು ತಮ್ಮ ಸೂಕ್ಷ್ಮವಾದ ವಿವೇಚನೆಯನ್ನು ಮುಂದುವರಿಸಿ, ಮಾರ್ಗಕಾರನ ನಿಲುವೇನಿರಬಹುದೆಂಬುದನ್ನು ಹೀಗೆ ಅನುಮಾನಿಸಿದ್ದಾರೆ:

"ಗ್ರಂಥಕಾರನು 'ಕಾರಕಮಾಱು ಕರ್ಮಕರಣಾದಿಕದಿಂ' ಎಂದೂ 'ಪ್ರಥಮಾದಿಭೇದ ನಿರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞೆನಿಕ್ಕುಂ' ಎಂದಿದ್ದಾನಷ್ಟೆ. ಇದನ್ನು ಅವಗಾಹಿಸಿ ನೋಡಿದಲ್ಲಿ ಅವನೆಣಿಕೆಯಂತೆ 'ಕರ್ಮ'ವನ್ನು ಹಿಡಿದು ಮೊದಲ್ಗೊಂಡು 'ಅಧಿಕರಣ'ದ ವರೆಗಿನವೆಲ್ಲ-ಎಂದರೆ 'ಸಂಬಂಧ' (ಷಷ್ಠಿ) ಸಹಿತವಾಗಿ–ಕಾರಕಗಳು ಎಂಬ ಭಾವನೆ ಹೊಳೆಯುತ್ತದೆ. ಅಲ್ಲವಾಗಿದ್ದರೆ, 'ಕಾರಕಮಾಱು ಕರ್ತೃಕರ್ಮಾದಿಕದಿಂ' ಎನ್ನಬೇಕಾಗಿತ್ತು. ಹಾಗೆಂದರೆ, ಛಂದೋಭಂಗವಾಗುತ್ತಿತ್ತು ಎಂದೆನ್ನಬಾರದು. 'ಇಲ್ಲಿಗಿದು ತಕ್ಕುದಿಲ್ಲಿಗೆ ಪೊಲ್ಲದೆಂದಱುದು' ಪದಗಳನ್ನು ಬಳಸಬೇಕು ಎಂದು ಬೋಧಿಸಿದ 'ವಾಗಧಿಪ'ನಿಗೆ ತಕ್ಕಂತೆ ಪದಗಳನ್ನು ಪ್ರಯೋಗಿಸಲು ತಿಳಿಯುತ್ತಿದ್ದಿಲ್ಲವೆ? ನಾವು ಮೇಲೆ ಸೂಚಿಸಿದುದು ಅರ್ಥಾನುಸಾರವಾಗಿ ಮಾತ್ರವಲ್ಲದೆ ಛಂದೋಭಂಗವನ್ನು ಅಲ್ಲಗಳೆದಲ್ಲ. ಆದರಿಂದ, ಅವನ ಭಾವನೆಯಲ್ಲಿ ಪ್ರಥಮಾ ವಿಭಕ್ತಿ ಪ್ರತ್ಯಯಯುತ 'ಕರ್ತೃ' ಪದವೊಂದು ಮಾತ್ರ 'ಕಾರಕ'ವಲ್ಲ; ಉಳಿದುವೆಲ್ಲ ಕಾರಕಗಳು ಎಂಬ ಭಾವನೆ ಇದ್ದಂತೆ ತೋರುತ್ತದೆ. ಮತ್ತಿನ ಕನ್ನಡ ವೈಯಾಕರಣರು ಈ ಭಾವನೆಯನ್ನು ಸಂಸ್ಕೃತಾನುಸಾರವಾಗಿ ಒಪ್ಪದಿದ್ದರೂ, ಅಭಿನ್ನವಾದ ದೇಸಿಯಲ್ಲಿ ಯತಿಭಂಗವನ್ನು ಗುಣ

ವನ್ನಾಗಿ ಬಳಿಸಂದ ಪೂರ್ವಾಚಾರ್ಯರನ್ನು ಅನುಸರಿಸಿದಂತೆ, ಅಭಿನ್ನವಾದ ದೇಸಿಯೆಂದೇ ಕಾರಕನಿರ್ಣಯವನ್ನು ಹೀಗೆ ಮಾಡಿದುದಾಗಿರಬೇಕು. ಈ ನಿರ್ಧಾರದಲ್ಲಿ ಸಕಾರಣತೆಯೂ ಇಲ್ಲವೆಂದಲ್ಲ. 'ಕಾರಕಂ' ಎಂಬ ಪದವು ಸಂಸ್ಕೃತ ವ್ಯಾಕರಣಾನುಸಾರವಾದ ವ್ಯುತ್ಪತ್ತಿಯಂತೆ 'ಮಾಡಿಸುವ ವ್ಯಕ್ತಿ'ಯನ್ನು ಸೂಚಿಸುವುದಲ್ಲದೆ, 'ಮಾಡುವ ವ್ಯಕ್ತಿ'ಯನ್ನಲ್ಲ, ('ಕಾರಯತಿ ಇತಿ ಕಾರಕಃ'). 'ಕರೋತಿ ಇತಿ ಕರ್ತಾ' ಎಂದು 'ಕರ್ತೃ'ಪದವು ರೂಪಿತವಾಗಿದೆ. ಇಂಥ 'ಕರ್ತೃ' ಎಂಬ ಪದವು ಕಾರಕವೆನ್ನಿಸುವುದು ಹೇಗೆ? 'ನರಪತಿ ಬಂದಂ' ಎಂಬ ದೃಷ್ಟಾಂತವನ್ನು ನೋಡಿರಿ. ಅದಕ್ಕೆ "ನರಪತಿಯು ಬರುವಿಕೆ ಎಂಬ ಕಾರ್ಯವನ್ನು 'ಮಾಡಿದನು'" ಎಂದಲ್ಲದೆ 'ಮಾಡಿಸಿದನು' ಎಂದು ಅರ್ಥವಲ್ಲ... ಈಗ ಬೇರೆಯವುಗಳನ್ನು ಬಿಟ್ಟು 'ಅಧೀಶ್ವರನಾ ದಯೆ ಸಾಲ್ಗುಂ' ಎಂಬುದನ್ನು ಮನನವೆಸಗುವ. ಇಲ್ಲಿ 'ಅಧೀಶ್ವರನಾ' ಎಂಬ ಷಷ್ಠೀವಿಭಕ್ತಿಯುತವಾದ ಪದವು 'ಸಾಲ್ಗುಂ' ಎಂಬ ಕ್ರಿಯೆಯ ಕಾರಕವಲ್ಲವೆಂಬುದೇನೋ ಸರಿ. ಆ ಕ್ರಿಯೆಗೆ ಕರ್ತೃ 'ದಯೆ'. ಅಂತಹ ಕರ್ತೃರೂಪದ ದಯೆ ಅಧೀಶ್ವರನ ಸಂಬಂಧವಾದುದು. ಮೇಲಿನ ವಿವೇಚನೆಗನುವಾಗಿ 'ಕರ್ತ' ಕಾರಕವಾಗದು ಎಂಬುದು ಸರಿಯಾದರೆ, ಈ ವಾಕ್ಯದಲ್ಲಿ ಕಾರಕವೇ ಇಲ್ಲವೆನ್ನಿಸುತ್ತಿದೆ. ಅದರಿಂದ ಮುಂದಿನ ನಾಮಪದಕ್ಕೆ ತನ್ನ ಸಂಬಂಧವನ್ನು ಮಾತ್ರ ಕೊಡುವ 'ಅಧೀಶ್ವರನಾ' ಎಂಬ ಪದವು ಆ ಸ್ವಸಂಬಂಧಿಯಾದ 'ದಯೆ' ಎಂಬ ಕರ್ತೃವಿನ ಮೂಲಕವಾಗಿ 'ಸಾಲ್ಗುಂ' ಎಂಬ ಭಾವನಾತ್ಮಕ ಕ್ರಿಯೆಯನ್ನು ಮಾಡಿಸುವುದಲ್ಲವೆ? ಇನ್ನೊಬ್ಬನ 'ದಯೆ'ಯಾದರೆ, ಅದು 'ಸಾಲ್ಗುಂ' ಎಂಬುದಕ್ಕೆ ಕರ್ತೃವಾಗಲಾರದು. ಅದರಿಂದಲೇ ಷಷ್ಠೀವಿಭಕ್ತಿಯುಕ್ತಪದವು ಮುಂದಿನ ನಾಮಪದಕ್ಕೆ ತನ್ನ ಸಂಬಂಧವನ್ನಿತ್ತು ಆ ಮೂಲಕವಾಗಿ ಕ್ರಿಯೆಗೆ ಕಾರಕವಾಗುವುದು. ಅದನ್ನು ಬೇಕಾದರೆ 'ಸಂಬದ್ಧಕಾರಕ' ಎಂದು ಕರೆಯಬಹುದು. ಇಷ್ಟು ಮಾತ್ರವಲ್ಲ. ಪ್ರಾಕೃತ ದೇಶಿಗಳಲ್ಲಿ ಷಷ್ಠೀ ವಿಭಕ್ತಿ ಪದಕ್ಕೆ ಕರ್ಮಾದಿಯಾದ ಕೆಲವು ಕಾರಕಗಳ ಅಧಿಕಾರವೂ ಇದ್ದಂತೆ ಗೊತ್ತಾಗುತ್ತಿದೆ...[13] ಕನ್ನಡ ವೈಯಾಕರಣರೂ ಈ ವಿಚಾರವನ್ನು 'ವಿಭಕ್ತಿಪಲ್ಲಟ' ಎಂಬ ಹೆಸರಿನಿಂದ ವಿಸ್ತರಿಸಿದ್ದಾರಷ್ಟೆ. ಇದು ದೇಸಿಯಲ್ಲಿ ಪುರಾತನ ಕಾಲದಿಂದಲೂ ನಡೆದುಬಂದು ಈಗಲೂ ನೆಲೆಗೊಂಡಿರುವ ಪದ್ಧತಿಯೆಂಬುದನ್ನು

---

13 ಇಲ್ಲಿ ತಿಮ್ಮಪ್ಪಯ್ಯನವರು ಲಕ್ಷ್ಮೀಧರನ 'ಷಡ್ಭಾಷಾಚಂದ್ರಿಕೆ'ಯಿಂದ ಶ್ಲೋಕಖಂಡಗಳನ್ನು ಎತ್ತಿಕೊಟ್ಟಿದ್ದಾರೆ. ಗ್ರಂಥವಿಸ್ತಾರಭಯದಿಂದ ಅವನ್ನು ನಾವಿಲ್ಲಿ ಉದ್ಧರಿಸುತ್ತಿಲ್ಲ.—ಸಂ.

ಮರೆಯಬಾರದು. ಮಾತ್ರವೇ ಅಲ್ಲ; ಈ ವಿಚಾರವನ್ನೆಲ್ಲ ಮಥನವೆಸಗಿಯೆ ಆಗಿರಬೇಕು–ನಾಗವರ್ಮನು ತನ್ನ ಭಾಷಾಭೂಷಣದಲ್ಲಿ 'ಕಾರಕ'ವನ್ನು ಲಕ್ಷಿಸುವ ರೀತಿಯನ್ನೀಕ್ಷಿಸಿರಿ:

"ಸೂತ್ರ: ಅಥ ಕಾರಕಂ ನಿರೂಪ್ಯತೇ.

ವೃತ್ತಿ: ಸಂಜ್ಞಾಸಂಧಿನಿಯಮಾನಂತರಂ ಕರ್ತೃ ಕರ್ಮ ಕರಣ ಸಂಪ್ರ ದಾನಾಪಾದಾನ ಸ್ವಾಮ್ಯಧಿಕರಣಾಖ್ಯಂ ಕಾರಕಂ ಯಥಾಕ್ರಮಂ ನಿರೂಪ್ಯತೆ."

ಈ ಸೂತ್ರ ವೃತ್ತಿಗಳಿಂದ ಸ್ವಾಮಿ ಸಂಬಂಧದ ಷಷ್ಠಿಯೂ ಕಾರಕವೆಂದು ಸೂಚಿಸಿದಂತಾಗುತ್ತಿದೆ. ಆವರೆ, ಆದರೊಡನೆ ಕರ್ತೃವೂ ಕಾರಕವೆಂಬುದನ್ನು ಸಂಸ್ಕೃತ ವೈಯಾಕರಣ ಮಾರ್ಗದಲ್ಲಿ ಅವನೇ ಸೂಚಿಸಿದ್ದಾನೆ. ಇಲ್ಲಿ 'ಕರ್ಮ ಕರಣಾದಿಕದಿಂ' ಎಂಬ ಗ್ರಂಥಕಾರನ ಹೇಳಿಕೆಯನ್ನಾಧರಿಸಿ ಕಾರಕ ಕರ್ತೃಗಳ ವ್ಯುತ್ಪತ್ತಿ ಕ್ರಮವನ್ನು ಬಿಡಿಸಿ, ಕರ್ತೃ ಕಾರಕವಾಗದೆಂದೂ ಕರ್ಮಾದಿಗಳು ಮಾತ್ರವೇ ಕಾರಕಗಳೆಂದೂ ನಿರ್ಧರಿಸಿಕೊಂಡುದು ನಾವೆ. ಇದರ ತಪ್ಪೊಪ್ಪು ಗಳನ್ನು ವಿದ್ವಾಂಸರೇ ನಿರ್ಧರಿಸಿ ನಿರೂಪಿಸಬೇಕು."

ಮೇಲಿನ ವಿಚಾರ ವಿಮರ್ಶೆಯ ಫಲಿತಾಂಶವಾಗಿ ನಾವು ನಿರ್ಣ ಯಿಸಬೇಕಾದದ್ದು–ಕನ್ನಡ ವ್ಯಾಕರಣದಲ್ಲಿ ಕಾರಕಗಳೆಷ್ಟು, ವಿಭಕ್ತಿ ಗಳೆಷ್ಟು ಎಂಬುದನ್ನಲ್ಲ. ಅಲ್ಲದೆ, ವಿಭಕ್ತಿ ಪ್ರತ್ಯಯಗಳು ಪಲ್ಲಟ ವಾಗುವುವಾದರೂ ಕಾರಕಗಳು ನಿಯತ. ('ಇಂತು ನುಡಿವ ಬಿನ್ನಣದಿಂ ಕಾರಕಮಂ ನಿಯತಾರ್ಥಮೆಂದಱಿವುದು' ಎಂಬ ಕೇಶಿ ರಾಜನ ಉಕ್ತಿಯನ್ನು ಇಲ್ಲಿ ಗಮನಿಸಬಹುದು. ಶ. ಮ. ದ., ಸೂ ೧೩೬, ಪ್ರಯೋಗಾಂತ್ಯದ ವಾಕ್ಯ). ಈ ಬಗೆಗೆ ಮಾರ್ಗಕಾರನ ಮತವೇನೆಂಬುದಷ್ಟೆ ನಮಗೆ ಪ್ರಕೃತವಾದದ್ದು. ಅವನ ಮತ ದಂತೆ,–ಕಾರಕಗಳು ಆರು, ಅವುಗಳಲ್ಲಿ ಕರ್ತೃ ಸೇರುವುದಿಲ್ಲ; ಷಷ್ಠಿಗೂ ಕಾರಕತ್ವ ಉಂಟು. ಪ್ರಥಮಾದಿಯಾಗಿ ವಿಭಕ್ತಿಗಳು ಏಳು. (ಹೀಗಿದ್ದರೂ, ಲಕ್ಷ್ಯದಲ್ಲಿ ಪ್ರಥಮಾ ವಿಭಕ್ತಿ ಪ್ರತ್ಯಯವನ್ನು ಮಾರ್ಗ ಕಾರನು ನಿರ್ದೇಶಿಸಿಲ್ಲ. ಪ್ರಕೃತಿಯೇ ಪ್ರಥಮಾರ್ಥದಲ್ಲಿ ಪ್ರಯೋಗ

ವಾಗಿರುವುದರಿಂದ, ಅದಕ್ಕೆ ಪ್ರತ್ಯಯದ ಅಗತ್ಯತೆ ಇಲ್ಲವೆಂಬ ಆಧುನಿಕ ಭಾಷಾಶಾಸ್ತ್ರ ಸಮ್ಮತವಾದ ಅಭಿಪ್ರಾಯ ಮಾರ್ಗಕಾರನಿಗಿದ್ದಿತೇ ಎಂಬುದು ವಿಚಾರಣೀಯ.)

ಪದ್ಯ ೧೧೬ : 'ಬರವೆಮಗೀಗೆ ದೇವತೆಗಳ್' ಎಂಬುದೂ, 'ಕರುಣಿಪ್ಪುದಕ್ಕೆ ... ಸಂತತಿಯಂ' ಎಂಬುದೂ ಕಾರಕ ದೋಷವೆಂದು ಹೇಳಿ, 'ಬರವನವೋಘವಿಾಗೆ....' ಮತ್ತು 'ಕರುಣಿಪ್ಪುದಕ್ಕೆ .... ಸಂತತಿಗೆ' ಎಂಬುದು 'ಅದುಷ್ಟಕಾರಕ' ವೆಂದೂ ತಿಳಿಸಿದ್ದಾನೆ. ('ಕಾರಕವಾಱು ಕರ್ಮಕರಣಾದಿಕದಿಂ' ಎಂದು ಲಕ್ಷಣ ಪದ್ಯದಲ್ಲಿ ಹೇಳಿರುವ ಮೇರೆಗೆ, ಲಕ್ಷ್ಯ ಪದ್ಯದಲ್ಲಿ ಕರ್ಮಕಾರಕದಿಂದಲೇ ದೋಷನಿದರ್ಶನಕ್ಕೆ ತೊಡಗಿರುವುದು ಗಮನಾರ್ಹ). 'ಈಗೆ' (ಕೊಡಲಿ) ಎಂಬ ಕ್ರಿಯಾಪದಕ್ಕೆ 'ದೇವತೆಗಳ್' ಎಂಬುದು ಕರ್ತೃಸ್ಥಾನದಲ್ಲಿದ್ದು, 'ಬರಂ' (ವರವು) ಎಂಬುದು ಕರ್ಮಕಾರಕ (ಸಂಬಂಧ)ವನ್ನು ಹೊಂದಬೇಕಾದ್ದರಿಂದ, ಈಗ ಇರುವಂತೆ ಅದು ದುಷ್ಟ. 'ಬರವಂ'ಎಂದು ಕರ್ಮಕಾರಕ ಸೂಚಕವಾದ ದ್ವಿತೀಯಾ ವಿಭಕ್ತಿ ಪ್ರತ್ಯಯವನ್ನು ಹೊಂದಿದಾಗ ಅದು ಅದುಷ್ಟವೆನಿಸುತ್ತದೆ. (ಮೇಲಣ ಇನ್ನೊಂದು ನಿದರ್ಶನವನ್ನೂ ಇದೇ ರೀತಿ ಸಮನ್ವಯ ಮಾಡಿಕೊಳ್ಳಬೇಕು). (ಇನ್ನುಳಿದ ಕಾರಕಗಳಿಗೆ ಉದಾಹರಣೆಗಳನ್ನು ಕೊಟ್ಟಿಲ್ಲ). ನಿಕ್ಕುವಂ=ನಿಶ್ಚಯ, ದಿಟ, ಸತ್ಯ.

ಪದ್ಯ ೧೧೭ : 'ಬರವೆಮಗೀಗೆ' ಎಂಬ ದುಷ್ಟ ಪ್ರಯೋಗವನ್ನು ಇನ್ನೊಂದು ರೀತಿಯಲ್ಲಿ ಹೇಗೆ ದೋಷರಹಿತವನ್ನಾಗಿ ಮಾಡಬಹುದೆಂಬುದನ್ನು ಈ ಪದ್ಯದಲ್ಲಿ ಸೂಚಿಸಿದ್ದಾನೆ. 'ಬರವಿಾಗೆ' ಎಂಬಲ್ಲಿ 'ಬರಂ' ಎಂಬ ಪದದ ಮುಂದೆ (ಆ ಕಾರಕ 'ಸಕ್ಕದವೇನೊ'-ಸಂಸ್ಕೃತವಾದರೂ ಬಾಧಕವಿಲ್ಲ) ಕ್ರಿಯಾಪದವನ್ನು ತಗುಳ್ಚಿ ಕ್ರಿಯಾ ಸಮಾಸವನ್ನು (ಬರವಂ+ಈಗೆ) ಮಾಡಿಕೊಂಡರೆ ದೋಷವಾಗದು. ('ಬರವಿಾಗೆಮಗೆ ದೇವತೆಗಳ್' ಎಂದು ಹೇಳಬಹುದು). ('ವರವನ್ನು ಎಮಗೆ ಈಯಲಿ ದೇವತೆಗಳು' ಅಥವಾ 'ವರವೀಯಲಿ ಎಮಗೆ ದೇವತೆಗಳು'—ಈ ಎರಡೂ ಸಾಧು ಪ್ರಯೋಗಗಳು.)

ಪದ್ಯ ೧೧೮ : ಈ ಪದ್ಯದಲ್ಲಿ ' ವಚನ 'ದ ಗುಣದೋಷಗಳನ್ನು ಕಾಣಿಸಿದೆ. ' ಪಾವುಡಂ ನೃಪತಿಗೆ ಬಂದುವು '; ' ಆನೆಗಳ್ ಈ ಪ್ರದೇಶದೊಳ್ ನಿಂದುದು '–ಇವೆರಡೂ ವಚನ ದೋಷಗಳು. ಪದ್ಯದ ಉತ್ತರಾರ್ಧ ದಲ್ಲಿ ಈ ದೋಷವನ್ನು ಹೀಗೆ ಸರಿಪಡಿಸಿದೆ: ' ಪಾವುಡಂ ನೃಪತಿಗೆ ಬಂದುದು ; ಆನೆಗಳ್ ಈ ಪ್ರದೇಶದೊಳ್ ನಿಂದುವು. ' ಕರ್ತೃ ಪದವು ಯಾವ ವಚನದಲ್ಲಿರುತ್ತದೆಯೋ ಅದೇ ವಚನದಲ್ಲಿ ಕ್ರಿಯಾ ಪದವೂ ಇರಬೇಕೆಂಬುದು ಈ ದೃಷ್ಟಾಂತಗಳಿಂದ ಸ್ಪಷ್ಟವಾಗುತ್ತದೆ. (ಬಹುತೇಕ ಎಲ್ಲ ಭಾಷೆಗಳಿಗೂ ಅನ್ವಯವಾಗುವ ಸಾಮಾನ್ಯ ನಿಯಮವಿದು.)

ಪಾವುಡಂ = (ಸಂ., ಪ್ರಾಭೃತ) ಉಪಾಯನ, ಕಾಣಿಕೆ. ವಚನ ದೋಷ ವಿಶೇಷಮನ್ನೈಪುಣೋಕ್ತಿಯಿಂ = (ವಿಶೇಷಂ + ಅನ್ನೈಪುಣೋಕ್ತಿಯಿಂ) ಉಕ್ತಿಯಲ್ಲಿ ನಿಪುಣತೆಯಿಲ್ಲದ್ದರಿಂದ ಉಂಟಾದ ವಚನ ದೋಷಪ್ರಕಾರ.

ಪದ್ಯ ೧೧೯-೧೨೦ : ಈ ಎರಡು ಪದ್ಯಗಳಲ್ಲಿ ' ಜಾತ್ಯೇಕ ವಚನ ' ಪ್ರಯೋಗಕ್ಕೂ ' ಸಂಖ್ಯಾ ಬಹುವಚನ ' ಪ್ರಯೋಗಕ್ಕೂ ಲಕ್ಷ್ಯಲಕ್ಷಣ ಸಮನ್ವಯವನ್ನು ಕಾಣಿಸಿದೆ.

ಪ. ೧೧೯ರ ಪೂರ್ವಾರ್ಧದ ವಿವರಣೆ: ಯಾವುದೇ ಪ್ರಾಣಿ ಜಾತಿಯ ವಿಭಾಗವನ್ನು ಎಂದರೆ ಒಟ್ಟು ಜಾತಿಯನ್ನು ಅಥವಾ ಸಮುದಾಯವನ್ನು ಗಮನದಲ್ಲಿರಿಸಿಕೊಂಡು ಹೇಳುವಾಗ, ಅನೇಕ ವಾಕ್ಯಗಳಲ್ಲಿ ಅಥವಾ ಉಕ್ತಿಗಳಲ್ಲಿ ಹೇಳಿದರೆ ' ಗುಣ ' ಎನ್ನಬಹುದಾದ ಬಹುತ್ವವು (ಎಂದರೆ ಬಹುವಚನವು) ಏಕವಚನದಲ್ಲಿಯೂ ' ದೊರೆವೆತ್ತು ಕೂಡುಗುಂ ' (ಚೆನ್ನಾಗಿ ಹೊಂದಿಕೊಳ್ಳುತ್ತದೆ).

ಉದಾಹರಣೆ (ಪ. ೧೨೦): ' ಕುದುರೆ ಆ ದೆಸೆಯ ಬಿಲ್ಲವರಂ ತಗುಳ್ದುವು', ' ಸುಟಿದಾನೆ ನಿಂದು ಮೆಟ್ಟಿದುವು, ಎಲೆ, ನೋಡಿಂ '–

ಇಲ್ಲಿ ಕುದುರೆ ಆನೆ ಎಂಬ ಕರ್ತೃ ಪದಗಳು ಏಕವಚನದಲ್ಲಿದ್ದರೂ ಜಾತಿವಾಚಕವಾದ್ದರಿಂದ, 'ಬಗೆಬಗೆಯ ಅನೇಕ ಕುದುರೆಗಳು' ಇತ್ಯಾದಿಯಾಗಿ ಅನೇಕ ವಾಕ್ಯಗಳಲ್ಲಿ ಹೇಳಬಹುದಾದ ಬಹುತ್ವದ ಅರ್ಥವನ್ನೆ ಒಳಗೊಂಡು, ಬಹುವಚನದ ಕ್ರಿಯಾಪದದೊಂದಿಗೆ 'ದೊರೆವೆತ್ತು' ಕೂಡಿಕೊಂಡಿದೆ. ಕನ್ನಡದ ದೇಸೀ ಪ್ರಯೋಗದಲ್ಲಿ ಇದು ದೋಷವೆನಿಸದೆ ಗುಣವೇ ಆಗುವುದು. ಹೇಗೆಂದರೆ-'ಕುದುರೆ ತಗುಳ್ದುದು' ಎಂದು ಏಕವಚನ ಪ್ರಯೋಗವಾದರೆ, 'ಒಂದೇ ಕುದುರೆ' ಎಂದಾಗಿ ಅರ್ಥ ಕೆಡುವುದು; 'ಕುದುರೆಗಳ್ ತಗುಳ್ದುವು' ಎಂದರೆ, ಕೆಲವೋ ಹಲವೋ ಕುದುರೆಗಳಾಗಬಹುದು. ಜಾತ್ಯೇಕ ವಚನ ಪ್ರಯೋಗದಿಂದ, 'ಒಂದನ್ನೂ ಬಿಡದೆ ಎಲ್ಲ ಕುದುರೆಗಳು' ಎಂದಾಗಿ ಅರ್ಥಸೌಂದರ್ಯವು ನೆಲೆಗೊಳ್ಳುವುದು. (ಆಂಗ್ಲಭಾಷೆ ಯಲ್ಲಿಯೂ ಇದು collective singular ಎಂದು ರೂಢಿಗೊಂಡಿದೆ). (ನೋಡಿ: ಶ. ಮ. ದ., ಸೂ. ೧೩೮-೧೩೯)

ಪ. ೧೧೯ರ ಉತ್ತರಾರ್ಧ: ಜಾತಿವಾಚಕವಾದ ಏಕವಚನವೆ ಬಹುತ್ವ ಸೂಚಕವಾದ ಸಂಖ್ಯಾ ಪದದಿಂದ ವಿಶಿಷ್ಟವಾದಾಗ, ಬಹು ವಚನದ ಅರ್ಥದಲ್ಲಿ ಏಕವಚನದ ಪ್ರಯೋಗವು ('ಏಕಬಹುತ್ವ ವಿಪರ್ಯಯಂ') ಮೇಲ್ಕಂಡ ಗುಣವನ್ನು ವಿಕಲ್ಪವಾಗಿ ಹೊಂದ ಬಹುದೆ ಹೊರತು ಸಾಮಾನ್ಯವಾಗಿ ದೋಷವೆ ಎನಿಸುವುದು.

ಉದಾ. (ಪ. ೧೨೦): 'ಕುದುರೆ ನೂಱಱೊಳ್ ಆ ಬಲದ ಆನೆ ಪತ್ತು ತಾಗಿದುವು' ಎಂದರೆ ದೋಷ; ಏಕೆಂದರೆ, 'ಪಿರಿದು ಸಂಖ್ಯೆ ಯೊಳ್ ಏಕಬಹುತ್ವ ಸಂಗದಿಂ.' 'ನೂರು, ಹತ್ತು' ಎಂಬ ಸಂಖ್ಯಾ ವಾಚಕಗಳು ಒಂದು ಕಡೆ ಹಿಂದಿನ 'ಕುದುರೆ ಆನೆ' ಎಂಬ ಏಕ ವಚನದೊಂದಿಗೂ, ಇನ್ನೊಂದು ಕಡೆ ಮುಂದಿನ 'ತಾಗಿದುವು' ಎಂಬ ಬಹುವಚನದ ಕ್ರಿಯೆಯೊಂದಿಗೂ ಸಂಗವಡೆದಿವೆ. ಈ ರೀತಿ, 'ಪಿರಿದು ಸಂಖ್ಯೆ' ಯಲ್ಲಿ ಏಕಕಾಲದಲ್ಲಿ ಏಕವಚನ ಬಹುವಚನಗಳ ಸಂಘಟನೆ ದೋಷ. (ಕೇವಲ 'ಆನೆ ಪತ್ತು'

ಎಂದರೆ ದೋಷವಾಗದು; 'ತಾಗಿದುವು' ಎಂಬ ಕ್ರಿಯಾಪದ ದೊಂದಿಗೆ ಕಾರಕವಾದಾಗಲೇ ದೋಷ.)

ಪದ್ಯ ೧೨೧: ಪೂರ್ವಾರ್ಧದ ಅನ್ವಯಪೂರ್ವಕ ಅರ್ಥ: 'ಎರಡು ಸಮುಚ್ಚಯಯುಕ್ತ ಪದಗಳ ಉಕ್ತಿ ಮೊದಲು ಬೆರಸಿ ಬಂದಿದ್ದು, (ಆ ಎರಡು ಪದಗಳಲ್ಲಿ) ಒಂದೇ ವಿಭಕ್ತಿ (ಇಲ್ಲಿ ವಿಭಕ್ತಿ ಎಂದರೆ ವಚನಸೂಚಕ ಪ್ರತ್ಯಯ) ಕೂಡಿ ಕಾಣಬರದಿದ್ದರೂ, ಅವು ಏಕ ವಾಕ್ಯದಲ್ಲಿ 'ಕಾರಕ ಸಂಪದ'ವನ್ನು ಪಡೆಯುವುವು. ಉತ್ತರಾರ್ಧ ದಲ್ಲಿ ಲಕ್ಷ್ಯವಿದೆ: 'ನರಪತಿಯೂ ನೃಪಾಂಗನೆಯರೂ ನೆರೆದು ಅಟ್ಟಿಯಿಂ (ಪ್ರೀತಿಯಿಂದ) ಆಡಿಪೋದರು; ಆ ಪರಿಜನವೂ ಮಹೋತ್ಸವದಲ್ಲಿ ಒಂದಿದುದು' (ಕೂಡಿಕೊಂಡಿತು; ಭಾಗಿಯಾ ಯಿತು).–'ಎಂಬುದು. ಇದು, ಅಲ್ಪದೂಷಿತಂ' (ಇಲ್ಲಿ ಕಾಣ ಬರುವ ವಚನಸಂಬಂಧವಾದ ವ್ಯಾಕರಣದೋಷ ಅಲ್ಪ: ಕಾರಕ ದೃಷ್ಟಿಯಿಂದ ಅರ್ಥಸಂಪತ್ತು ಕೂಡಿಬಂದಿರುವುದರಿಂದ ದೋಷ ಗಮನಾರ್ಹವಲ್ಲ–ಎಂದು ಮಾರ್ಗಕಾರನ ಅಭಿಪ್ರಾಯ.)

ಮೇಲಿನ ದೃಷ್ಟಾಂತದಲ್ಲಿ, 'ನರಪತಿ ಆಡಿ ಪೋದಂ, ನೃಪಾಂಗನೆ ಯರ್ ಆಡಿಪೋದರ್; ಪರಿಜನಂ ಮಹೋತ್ಸವದೊಳ್ ಒಂದಿ ದುದು'–ಎಂಬೀ ಬೇರೆ ಬೇರೆ ವಾಕ್ಯಗಳು ಸಮುಚ್ಚಯ ('ಉಂ') ಬಲದಿಂದ ಏಕವಾಕ್ಯವಾಗಿ ಪರಿಣಮಿಸಿದೆ. 'ನರಪತಿ' ಏಕವಚನ; 'ನೃಪಾಂಗನೆಯರ್' ಬಹುವಚನ; ಕ್ರಿಯಾಪದವು ಬಹುವಚನ ದಲ್ಲಿದ್ದು, ಬಹುವಚನದ ಕರ್ತೃವಿನೊಂದಿಗೆ (ನೃಪಾಂಗನೆಯರ್) ಅನ್ವಯವಾಗುತ್ತದೆ, ಆದರೆ ಏಕವಚನದ ಕರ್ತೃವಿನೊಂದಿಗೆ (ನರಪತಿ) ಅನ್ವಯವಾಗುವುದಿಲ್ಲ. ವ್ಯಾಕರಣವು ಸರಿಹೋಗ ಬೇಕೆಂದು ಮೇಲೆ ಸೂಚಿಸಿರುವ ರೀತಿಯಲ್ಲಿ ಬೇರೆ ಬೇರೆ ವಾಕ್ಯ ಗಳಾಗಿ ಒಡೆದರೆ, 'ನರಪತಿ ತನ್ನ ಪಾಡಿಗೆ ತಾನು ಆಡಿಹೋದ,' 'ನೃಪಾಂಗನೆಯರು ತಮ್ಮ ಪಾಟ್ಟಿಗೆ ತಾವು ಆಡಿ ಹೋದರು' ಎಂದಾಗಿ, ಅರ್ಥ ಸೌಂದರ್ಯಕ್ಕೇ ಊನಬರುತ್ತದೆ. ಆದ್ದರಿಂದ,

ಎರಡು ಕರ್ತೃಗಳನ್ನು 'ಉಂ' ಎಂಬ ಸಮುಚ್ಚಯದಿಂದ ಬೆರಸಿದರೆ, ವಚನವಿಭಕ್ತಿಗಳು (ಪ್ರತ್ಯಯಗಳು) ಕೂಡಿಬರದಿದ್ದರೂ, 'ನರಪತಿಯೂ ನೃಪಾಂಗನೆಯರೂ ಒಟ್ಟಿಗೆ ನೆರೆದು ಆಡಿಹೋದರು' ಎಂಬ ಉದ್ದಿಷ್ಟಾರ್ಥವು ಸುವಿವಕ್ಷಿತವಾಗುತ್ತದೆ.[14]

ಪದ್ಯ ೧೨೨: 'ಎಣಿಕೆಗೆ ಅನುಸಾರವಾಗಿ ಕೂಡಿಕೊಂಡು ಬರುವ ಪದವೊಂದು ನಡುವೆ ಬಂದು, ವಿಶೇಷ್ಯವನ್ನೂ ವಿಶೇಷಣವನ್ನೂ ಹೊಂದಿಕೆಯಾಗುವಂತೆ ಸೇರಿಸದಿದ್ದರೂ ಅದು ಕಾರಕದೋಷವಲ್ಲ.' (ಇಲ್ಲಿ ಲಕ್ಷ್ಯಪದ್ಯವನ್ನು-ಪ. ೧೨೩-ಗಮನಿಸಬೇಕು: ಗುಣಯುತನಪ್ಪನಂ ಸುಭಟನಪ್ಪನಂ . . . ಇತ್ಯಾದಿ ವಿಶೇಷಣ ಮಾಲೆಯಲ್ಲಿ 'ಅಪ್ಪನಂ' ಎಂಬ ಪದವು 'ಎಡೆಗೊಂಡು' ಬಂದಿದೆ. ಪ್ರತಿ ವಿಶೇಷಣದ ಮುಂದೆಯೂ ಇರಬೇಕಾದ ವಿಶೇಷ್ಯವು ಯಾವುದೆಂಬುದು ಪದ್ಯದಲ್ಲಿ ಎಲ್ಲಿಯೂ ಉಕ್ತವಾಗಿಲ್ಲ. 'ಅದೆ ತಾಣದೊಳ್' ಎಂದರೆ 'ಆ ವಿಶೇಷ್ಯವು ಇರಬೇಕಾದ ಎಡೆಯಲ್ಲಿ' 'ಪದಾಂತರೀಕರಣ'ವಾಗಿದೆ, ಎಂದರೆ 'ಅಪ್ಪನಂ' ಎಂಬ ಬೇರೆಯ ಪದದಿಂದ ಸೂಚಿತವಾಗಿದೆ). ಹೀಗೆ, 'ಅಂತು ಅದೆ ತಾಣದೊಳ್ ಪದಾಂತರೀಕರಣಂ ಆದೊಡಂ ಮಹಾಗುಣಮನೆ ತರ್ಕುಗಂ;' 'ಏಕಬಹುಭೇದವಿಕಲ್ಪಮಂ ಅಲ್ಲಿ ನೋಡಲಿಂ'

14 ಮಾರ್ಗಕಾರನು ಕರ್ತೃವನ್ನು ಕಾರಕವರ್ಗದಲ್ಲಿ ಸೇರಿಸಿಲ್ಲ ಎಂದು ಹಿಂದೆ ಕಂಡುಕೊಂಡಿದ್ದೇವೆ. ಇಲ್ಲಿ, 'ನರಪತಿ ಮತ್ತು ನೃಪಾಂಗನೆಯರ್'—ಇವೆರಡೂ ಕರ್ತೃಗಳು; ಇವು 'ಕಾರಕಸಂಪದಮಂ ತುಗುಳ್ಚುಗುಂ' ಎಂದದ್ದರಿಂದ ಕರ್ತೃವಿಗೆ ಕಾರಕತ್ವವನ್ನು ಆರೋಪಿಸಿದಂತಾಗುವುದಲ್ಲವೆ?—ಎಂಬ ಸಂದೇಹ ತಲೆದೋರುವುದು ಸಹಜ. ಮುಳಿಯ ತಿಮ್ಮಪ್ಪಯ್ಯನವರು ತಮ್ಮದೇ ಆದ ಜಾಣ್ಮೆಯ ರೀತಿಯಲ್ಲಿ ಈ ಸಂದೇಹವನ್ನು ನಿವಾರಿಸಲು ಪ್ರಯತ್ನಪಟ್ಟಿದ್ದಾರೆ. ಅವರ ವಾದದ ಸಾರಾಂಶ: ಕ್ರಿಯಾಪದವು ಬಹುವಚನದಲ್ಲಿರುವುದರಿಂದ 'ನರಪತಿ' ಎಂಬುದೊಂದೇ ಏಕವಾಕ್ಯದಲ್ಲಿ ಅದರ ಕರ್ತೃವಾಗಲಾರದು. "ಅದನ್ನು ಉಳಿದ ಕರ್ತೃಪದದ ಅಥವಾ ಕರ್ತೃಪದಗಳ ಜತೆಗೆ ಸೇರಿಸುವುದು ಆ ಸಮುಚ್ಚಯಪದ. ಹಾಗೆ ಸಮುಚ್ಚಯ ಪದಗಳ ಕೂಟದಿಂದ ಆಯಾ ಪದಗಳು ಏಕವಾಕ್ಯದಲ್ಲಿ ತಂತಮ್ಮ ಕರ್ತೃತ್ವವನ್ನುಳಿದು ಕಾರಕಗಳೇ ಆಗಿ

(ನೋಡಲಿಂ = ನೋಡಬೇಡಿ). ಇಲ್ಲಿ ಬೇರೆ ಬೇರೆ ವಿಶೇಷಣಗಳು ಬಹುವಚನವನ್ನು ಸೂಚಿಸುತ್ತಿದ್ದರೂ, ಎಲ್ಲ ವಿಶೇಷಣಗಳಿಗೂ ಸರ್ವಸಮಾನವಾಗಿ ತಗುಳಿಕೊಂಡಿರುವ 'ಅಪ್ಪನಂ' ಎಂಬ ಕರ್ಮ ಕಾರಕವು ಏಕವಚನದಲ್ಲಿದ್ದರೂ, ಇದು ಕಾರಕದೋಷವಲ್ಲ; ಇದು 'ಮಹಾಗುಣ'ವೇ ಆಗಿದೆ; ಇಲ್ಲಿ ವಚನಭೇದವನ್ನು ಗಮನಿಸ ಬೇಕಾಗಿಲ್ಲ.

ಪದ್ಯ ೧೬೪: ಈ ಲಕ್ಷ್ಯಪದ್ಯದಲ್ಲಿ, 'ಮುಗಿಲ್ಗಳುಂ' 'ಪೆರ್ಮುಱೆಯುಂ' ಮುಂತಾಗಿ ಕರ್ತೃಗಳಾಗಿರುವ ವಿಶೇಷ್ಯಗಳೆಲ್ಲವೂ ತಮ್ಮ ತಮ್ಮ ('ನೆಗೆದ', 'ಸುರಿವ' ಇತ್ಯಾದಿ) ವಿಶೇಷಣಗಳೊಡನೆ ಬೇರೆ ಬೇರೆ ವಚನಗಳಲ್ಲಿದ್ದರೂ 'ತೋಱುಗುಂ' ಎಂಬ ಕ್ರಿಯೆಯೊಂದಿಗೆ (ಏಕ ಬಹುತ್ವ ವಿಕಲ್ಪವನ್ನು ಹೊಂದಿದ್ದರೂ) ಸಮುಚ್ಚಯ ಬಲದಿಂದ ಕಾರಕತ್ವವನ್ನು ಹೊಂದಿವೆ.

ಪದ್ಯ ೧೬೫: ಇದುವರೆಗೆ ಹೇಳಿದ ಕಾರಕ ಗುಣದೋಷಗಳನ್ನು ಪರಿಭಾವಿಸಿ, ಇಂಥ ಬೇರೆಯವುಗಳನ್ನು ಕವಿಗಳು ಕೃತಿಗಳ ಪರಿಶೀಲನೆಯಿಂದ ತಿಳಿದುಕೊಳ್ಳಲಿ ಎಂದು ಸೂಚಿಸಿದ್ದಾನೆ.

ಪರಿಣಮಿಸುವುದು ನ್ಯಾಯವಿದೆ. ಎಂದರೆ ಕ್ರಿಯೆಯನ್ನು ಒಂದೊಂದಾಗಿ ಮಾಡ ಲಾರದೆ ಎರಡೂ ಕೂಡಿ ಮಾಡಿಸುವ ಕಾರಕತ್ವವನ್ನೊಂದಿದುವು ಎನ್ನಬೇಕು."

'ನರಪತಿ ಆಡಿಪೋದಂ,' 'ನೃಪಾಂಗನೆಯರ್ ಆಡಿಪೋದರ್'–ಎಂಬುದಾಗಿ ಬೇರೆ ಬೇರೆ ವಾಕ್ಯಗಳಲ್ಲಿಯಾಗಿದ್ದರೆ, ನಾವು ಹಿಂದೆ ಸೂಚಿಸಿರುವ ಪ್ರಕಾರ (ಪು. ೧೬೮, ೧೬೨–ನೋಡಿ), ಈ ಕರ್ತೃಪದಗಳು ಕಾರಕಗಳೆನಿಸುವುದಿಲ್ಲ. ಆದರೆ, ಸಮುಚ್ಚಯ ವಶದಿಂದ ಎರಡು ಕರ್ತೃಗಳೂ ಒಂದೇ ವಾಕ್ಯದಲ್ಲಿ ಸೇರ್ಪಡೆ ಯಾಗಿರುವುದರಿಂದ, ಏಕವಚನದ 'ನರಪತಿ' ಎಂಬ ಕರ್ತೃಪದವು 'ಆಡಿ ಪೋದರ್' ಎಂಬ ಬಹುವಚನದ ಕ್ರಿಯೆಯೊಂದಿಗೆ ಸಂಬಂಧಪಡೆದಿದೆ. ಕ್ರಿಯಾ ಪದದ 'ಅರ್' ಎಂಬ ಪ್ರತ್ಯಯ 'ನರಪತಿ' ಎಂಬ ಕರ್ತೃವನ್ನು ಎಷ್ಟು ಮಾತ್ರಕ್ಕೂ ಸೂಚಿಸುವುದಿಲ್ಲ. ಇಲ್ಲಿ, ಸಮುಚ್ಚಯದ ಬಲದಿಂದ 'ನರಪತಿ'ಎಂಬ ಕರ್ತೃವಿಗೂ 'ಆಡಿಪೋಗು' ಎಂಬ ಕ್ರಿಯೆಗೂ ನ್ಯಾಯವಾಗಿ ಇಲ್ಲದ ಸಂಬಂಧ ವೊಂದು ಏರ್ಪಟ್ಟಿದೆ. ಇದೆ ಇಲ್ಲಿನ 'ಕಾರಕ ಸಂಪದ'– ಇದು ನಮ್ಮ ವಿವರಣೆ.

ಪದ್ಯ ೧೨೬-೧೩೦ : ಈ ಪದ್ಯಗಳಲ್ಲಿ ಮಾರ್ಗಕಾರನು ಗುರುಲಘು ದೋಷಗಳ ಲಕ್ಷ್ಯಲಕ್ಷಣಗಳನ್ನು ಕೊಟ್ಟಿದ್ದಾನೆ. ಛಂದೋದೋಷಕ್ಕೆ ಸಂಬಂಧಪಟ್ಟ ವಿವೇಚನೆಯಿದು. ಗುರು ಇರಬಾರದ (ಎಂದರೆ ಲಘು ಇರಬೇಕಾದ) ಕಡೆ ಗುರುವನ್ನು ಇಟ್ಟರೆ ಅದು ಗುರುದೋಷ ; ಅದೇ ರೀತಿಯಲ್ಲಿ, ಲಘು ಇರಬಾರದ (ಎಂದರೆ ಗುರು ಇರಬೇಕಾದ) ಕಡೆ ಲಘುವನ್ನು ಉಪಯೋಗಿಸಿದರೆ ಅದು ಲಘುದೋಷ.

ಗುರುದೋಷಕ್ಕೆ ಉದಾಹರಣೆ (ಪ. ೧೨೮) : (ಇದು 'ಮಣಿಭೂಷಣ' ವೃತ್ತ). ಈ ವೃತ್ತದ ಗಣಪ್ರಸ್ತಾರ :

– ∪ – | ∪ ∪ ∪ | – ∪ ∪ | – ∪ ∪ | – ∪ – |

ಪಾದ ೧ರ ಪ್ರಸ್ತಾರ :

– ∪ – | ∪ ∪ ∪ | – ∪ ∪ | – ∪ ∪ | – ∪ ∪ |

ಪಾದ ೪ರ ಪ್ರಸ್ತಾರ :

∪ ∪ – | ∪ ∪ ∪ | ∪ ∪ ∪ | – ∪ ∪ | – ∩ – |

೧ನೆಯ ಪಾದದಲ್ಲಿ ಕೊನೆಯ ಗಣದಲ್ಲಿಯೂ, ೪ನೆಯ ಪಾದದಲ್ಲಿ ಮೊದಲನೆಯ ಹಾಗೂ ಮೂರನೆಯ ಗಣಗಳಲ್ಲಿಯೂ ಗುರು ಇರಬೇಕಾದ ಕಡೆ ಲಘು ಪ್ರಯೋಗವಾಗಿರುವುದನ್ನು ಕಾಣಬಹುದು. **ಆದ್ದರಿಂದ, ನಿಜವಾಗಿ ಇದು ಲಘುದೋಷಕ್ಕೆ ಉದಾಹರಣೆ.**

ಲಘುದೋಷಕ್ಕೆ ಉದಾಹರಣೆ (ಪ. ೧೩೦) : (ಇದು 'ಮಂಗಳ' ವೃತ್ತ).[15] ಈ ವೃತ್ತದ ಗಣಪ್ರಸ್ತಾರ :

∪ ∪ ∪ | – ∪ ∪ | ∪ – ∪ | ∪ – ∪ | ∪ – ∪ | –

---

15 'ಈ ವೃತ್ತದ ಹೆಸರು ಯಾವ ಛಂದಶ್ಶಾಸ್ತ್ರದಲ್ಲಿಯೂ ಉಕ್ತವಾಗಿಲ್ಲ' ಎಂದು ಮದ್ರಾಸು ಮುದ್ರಣದ ಸಂಪಾದಕರು ಸೂಚಿಸಿದ್ದಾರೆ. (ಮ. ಮು., ಪು. ೨೭, ಅಡಿಟಿಪ್ಪಣಿ)

ಈಗಿರುವಂತೆ ಈ ವೃತ್ತದಲ್ಲಿ ಛಂದೋದೋಷವಾವುದೂ ಇಲ್ಲ; ಎರಡು ಮುದ್ರಿತ ಪ್ರತಿಗಳ ಪಾಠವೂ ಒಂದೇ ತೆರನಾಗಿದೆ. ಮಾರ್ಗಕಾರನು—'ಸಾಯುಲಾಬಲಮೆಲ್ಲಂ' (೧ನೆಯ ಪಾದ), 'ಬೀಟ್ವವೋಲ್' (೩ನೆಯ ಪಾದ), 'ತಿರವೇಟ್' ಎಂದು ಛಂದೋದೋಷವಾಗುವಂತೆಯೆ ಬರೆದಿದ್ದಿರಬೇಕು. (ತದನುಗುಣವಾಗಿ ಪದ್ಯದ ಪಾಠವನ್ನು ನಾವೀಗ ತಿದ್ದಿಕೊಳ್ಳಬೇಕು). ಪಂಡಿತ ಪ್ರತಿಕಾರನೊಬ್ಬನು ಈ ಪದ್ಯವು ಛಂದೋದೋಷಕ್ಕೆ ಲಕ್ಷ್ಯ ಎಂಬುದನ್ನು ಬಗೆಯದೆ, ಗುರುವಾಗಿದ್ದ ಅಕ್ಷರಗಳನ್ನೆಲ್ಲ ಲಘುವಾಗಿ ಮಾರ್ಪಡಿಸಿರಬೇಕು. ಮೇಲೆ ಸೂಚಿಸಿರುವಂತೆ ಪಾಠವನ್ನು ತಿದ್ದಿದರೆ, ಲಘು ಇರಬೇಕಾದೆಡೆಯಲ್ಲಿ ಗುರು ಪ್ರಯೋಗವಾಗಿರುವುದನ್ನು ಕಾಣಬಹುದು. ಆಗ, ಇದು ವಾಸ್ತವವಾಗಿ ಗುರುದೋಷಕ್ಕೆ ಉದಾಹರಣೆಯಾಗಿ ಕಂಡುಬರುತ್ತದೆ.

ಪ್ರತಿಕಾರರ ದೋಷದಿಂದಲೋ ಮತ್ತಾವ ಕಾರಣದಿಂದಲೋ ಲಕ್ಷ್ಯ ಪದ್ಯಗಳು (೧೨೮ ಮತ್ತು ೧೩೦) ಹಿಂದುಮುಂದಾಗಿರುವಂತೆ ಕಂಡುಬರುತ್ತದೆ.

(ಮೇಲೆ ಸೂಚಿಸಿರುವಂತೆ ತಿದ್ದುಪಡಿಗಳನ್ನು ಮಾಡಿಕೊಳ್ಳದೆ ಹೋದರೆ, ಲಕ್ಷ್ಯಲಕ್ಷಣ ಸಮನ್ವಯ ಮಾಡಲಾಗುವುದಿಲ್ಲ).

ಪ. ೧೨೯ : ಕುಱುಪು = ಲಕ್ಷಣ, ಕುರುಹು. ಕುಱುಗೊಂಡು = ಗುರಿಯಾಗಿಟ್ಟುಕೊಂಡು, ಲಕ್ಷಿಸಿ, ಗಮನಿಸಿ. ಪಿಂಗಿಸು = ಹೋಗಲಾಡಿಸು, ಕಳೆ.

ಪದ್ಯ ೧೩೧ : ಈ ಪದ್ಯದಲ್ಲಿ 'ಸಮುಚ್ಚಯ ದೋಷ'ವನ್ನು ಪ್ರಸ್ತಾವ ಮಾಡಲಾಗಿದೆ. ಕಾರಕಗಳನ್ನು ಸಮುಚ್ಚಯಗಳೊಂದಿಗೆ ಪ್ರಯೋಗಿಸುವಾಗ ಸಮುಚ್ಚಯ ವಿಕಲ್ಪಮಾಡುವುದರಿಂದಲೂ, 'ಸಮುಚ್ಚಯ ಯುಗ್ಮ'ಗಳಲ್ಲಿ ಕ್ರಮಭಂಗವಾಗುವುದರಿಂದಲೂ ಈ ದೋಷ ಸಂಘಟಿಸುತ್ತದೆ. ಲಕ್ಷ್ಯಪದ್ಯದಿಂದ (೧೩೨) ಇದು ಸ್ಪಷ್ಟವಾಗುತ್ತದೆ: 'ದೇವರುಂ ಗೊರವರುಂ ಗುಣವೃದ್ಧರ್ ಅನಾರತಂ ಕಾವರ್

ಅಕ್ಕೆ ಅರಸನಂ ಪ್ರಜೆಯಂ ಪರಿವಾರಮಂ.' ಇದು ದೋಷಯುಕ್ತ ವಾದ ಪ್ರಯೋಗ. ಮಾರ್ಗಕಾರನೇ ತಿದ್ದಿ ಬರೆದಿರುವ ಲಕ್ಷ್ಯದಿಂದ (ಪ. ೧೩೩) ದೋಷವೇನೆಂಬುದು ಸ್ಪಷ್ಟವಾಗುತ್ತದೆ: 'ನೃಪನುಮಂ ಪ್ರಜೆಯುಮಂ ಪರಿವಾರಮುಮಂ ಆ ಗೊರವರುಂ ಸುರರುಂ ಗುಣ ವೃದ್ಧರುಂ ರಾಗಪರರಾಗಿಸುಗೆ.' ದೇವರುಂ – ಗೊರವರುಂ – ಗುಣ ವೃದ್ಧರ್: ಇದೊಂದು ಕರ್ತೃಪದಗಳ ಸಮುಚ್ಚಯ; 'ಗುಣ ವೃದ್ಧರ್' ಎಂಬುದಕ್ಕೆ 'ಉಂ' ಎಂಬ ಸಮುಚ್ಚಯ ಸೇರದಿರು ವುದು ಒಂದು ದೋಷ. ಅರಸನಂ – ಪ್ರಜೆಯಂ – ಪರಿವಾರಮಂ: ಇದು ಇನ್ನೊಂದು ಕರ್ಮಕಾರಕಗಳ ಸಮುಚ್ಚಯ; ಮೂರು ಕರ್ಮಪದಗಳಿಗೂ 'ಉಂ' ಸೇರದಿರುವುದು ಮತ್ತೊಂದು ದೋಷ. ದುಷ್ಟವಾದ ಲಕ್ಷ್ಯದಲ್ಲಿ—'ದೇವರು ಅರಸನನ್ನೂ, ಗೊರವರು ಪ್ರಜೆ ಯನ್ನೂ, ಗುಣವೃದ್ಧರು ಪರಿವಾರವನ್ನೂ ಕಾಪಾಡಲಿ' ಎಂಬ ಕ್ರಮ ಕಲ್ಪನೆಯಿದೆ. ತಿದ್ದಿದ ಲಕ್ಷ್ಯದಲ್ಲಿ, 'ನೃಪನನ್ನು ಗೊರವರೂ ಪ್ರಜೆ ಯನ್ನು ಸುರರೂ ಪರಿವಾರವನ್ನು ಗುಣವೃದ್ಧರೂ ರಾಗಪರರಾಗಿಸಲಿ' ಎಂದು ಕ್ರಮದಲ್ಲಿ ವ್ಯತ್ಯಾಸಮಾಡಲಾಗಿದೆ. ಸಮುಚ್ಚಯ ಯುಗ್ಮ ಗಳಲ್ಲಿ ಕರ್ತೃ–ಕರ್ಮಗಳ ಕ್ರಮಭಂಗವಾದರೆ ಅರ್ಥಪ್ರತೀತಿಗೆ ಭಂಗ ವುಂಟಾಗುತ್ತದೆ. (ಹಿಂದೆ, ಚ್ಯುತ ಯಾಥಾಸಂಖ್ಯ ದೋಷದಲ್ಲಿಯೂ ಈ ಕ್ರಮಭಂಗವನ್ನು ಕಾಣಿಸಿದೆ. ಪ. ೮೬–೮೯ ನೋಡಿ).

ಕೀಱಿಕೊಳ್ = [ಧಾ., ಕೀಱು (= ಕೇಱು ?)] ಸಂಗ್ರಹಿಸು, ಬೇರ್ಪಡಿಸು (?). ನೆಲ್ಲು = ಬತ್ತ. ಪೊಳ್ = ಹೊಳ್ಳುಗಾಳು, ಜೊಳ್ಳು. ಗೊರವ = ಗುರು, ಮುನಿ (?); ಶೈವಭಿಕ್ಷುಕ, ಬೈರಾಗಿ. (ಈಚಿನ ಕಾವ್ಯಪ್ರಯೋಗಗಳಲ್ಲಿ 'ಗೊರವ' ಎಂಬುದಕ್ಕೆ 'ಶಿವ' ಎಂಬ ಅರ್ಥವೂ ಬಂದಿದೆ. 'ಗೊರವ': 'ಗುರವಃ' ಎಂಬ ಸಂಸ್ಕೃತ ಬಹುವಚನ ಶಬ್ದದ ರೂಪಾಂತರವೆಂಬ ಊಹೆಯೂ ಇದೆ. ಏವ= ಅಸಹ್ಯಕರವಾದದ್ದು, ಜುಗುಪ್ಸೆಯುಂಟುಮಾಡತಕ್ಕದ್ದು.

ಪದ್ಯ ೧೩೪: ಈ ಪದ್ಯದಲ್ಲಿ ಸಮುಚ್ಚಯ ಗುಣದೋಷ ವಿಚಾರವನ್ನು ಮುಂದುವರಿಸಲಾಗಿದೆ. ಈ ಮುಂಚಿನ ಲಕ್ಷ್ಯಗಳಲ್ಲಿ ಹಲವು ಕಾರಕ

ಗಳಲ್ಲಿ ಒಂದು ಕ್ರಿಯಾಪದವು ಪ್ರವರ್ತಿಸಿದಾಗ ಸಮುಚ್ಚಯ ದೋಷವು ಹೇಗೆ ಸಂಘಟಿಸುತ್ತದೆಯೆಂಬುದನ್ನು ನಿರ್ದೇಶಿಸಿದೆ. ಈ ಪದ್ಯದ ಲಕ್ಷ್ಯಭಾಗದಲ್ಲಿ,[16] 'ಕಾರಕದಲ್ಲಿ ಕ್ರಿಯೆ ತಳ್ತು (ಜೊತೆ ಗೂಡಿ), ಬೇರೆ ಬೇರೆಯಾಗಿ ನಿಂತ ಸಂದರ್ಭದಲ್ಲಿ, ಈ ಮೊದಲು ತಿಳಿಯಹೇಳಿದ ಅವಗುಣವೇ (ಎಂದರೆ, ಸಮುಚ್ಚಯಾಭಾವದ ದೋಷವೇ) ಗುಣವಾಗಿ ಪರಿಣಮಿಸುವುದು' ಎಂಬ ವಾಕ್ಯರಚನಾ ವೈಶಿಷ್ಟ್ಯವನ್ನು ಮಾರ್ಗಕಾರನು ಸ್ಪಷ್ಟಪಡಿಸಿದ್ದಾನೆ.

ಲಕ್ಷ್ಯಭಾಗದ ಅನ್ವಯ: 'ಆನೆಯುವರೆಲ್ಲರುಮಂ ಸಾಱುಗೆ; ಆನೆಯಂ ಪಣಿದೊಡೆ, ನೃಪ ತಾನೆ ಮತ್ತೇಱುವಂ.' ಇದು ಸೇನಾಧಿಕಾರಿಯೊಬ್ಬನ ಆಣತಿಯಂತಿದೆ: 'ಆನೆಯುವರೆಲ್ಲರಿಗೂ ಘೋಷಿಸಲಿ (ಡಂಗೂರದ ಮೂಲಕ ಸಾರಲಿ); ಆನೆಯನ್ನು ಸಜ್ಜು ಗೊಳಿಸಿದರೆ, ಅದನ್ನು ನೃಪನು ತಾನೇ ಮತ್ತೆ ಏರುವನು'—ಇದಿಷ್ಟು ಲಕ್ಷ್ಯದ ತಾತ್ಪರ್ಯ. ('ಆನೆಯುವರೆಲ್ಲರುಮಂ' ಎಂಬಲ್ಲಿ ಚತುರ್ಥ್ಯರ್ಥದಲ್ಲಿ ದ್ವಿತೀಯಾ ವಿಭಕ್ತಿ ಪಲ್ಲಟವಾಗಿದೆಯೆಂದು ತಿಳಿಯ

---

16 ಎರಡು ಮುದ್ರಿತ ಪ್ರತಿಗಳಲ್ಲಿಯೂ ಇರುವ ಪಾಠ:

" ಸಾಱುಗಾನೆಯುವರೆಲ್ಲರುಮಂ ನೃಪನಾನೆ ಮ
ತ್ತೇಱುವೆಂ ಪಣಿದೊಡಾನೆಯುನೆಂಬುದು ದೂಷಿತಂ."

ಮದ್ರಾಸು ಮುದ್ರಣದಲ್ಲಿ ಮಾತ್ರ, 'ನೃಪನಾನೆ' ಎಂಬಲ್ಲಿ 'ನೃಪತಾನೆ' ಎಂಬ ಪಾಠವಿದೆ. 'ಏಱುವೆಂ' ಎಂದು ಪಾಠವನ್ನು ಇಟ್ಟುಕೊಂಡರೆ, ಅದಕ್ಕೆ ಉತ್ತಮ ಪುರುಷದ ಕರ್ತೃ ಯಾವುದೂ ಇಲ್ಲ. 'ಏಱುವಂ' ಎಂದು ತಿದ್ದಿದರೆ, 'ನೃಪತಾನೆ' ಕರ್ತೃವಾಗುತ್ತದೆ. ಮಾರ್ಗಕಾರನು ಪದ್ಯದ ಪೂರ್ವಾರ್ಧದಲ್ಲಿ 'ಅವಗುಣಂ ಗುಣರೂಪದೆ ಪೊರ್ದುಗುಂ' ಎಂದು ಸ್ಪಷ್ಟವಾಗಿ ಹೇಳಿರುವುದ ರಿಂದ, 'ಎಂಬುದು ದೂಷಿತಂ' ಎಂಬ ಪಾಠ ಅವನ ಆಶಯಕ್ಕೆ ಭಂಗ ತರು ತ್ತದೆ; ಆದ್ದರಿಂದ, 'ಎಂಬುದದೂಷಿತಂ' (ಎಂಬುದು + ಅದೂಷಿತಂ) ಎಂಬ ಅಲ್ಪವ್ಯತ್ಯಾಸವನ್ನು ಮಾಡಿದೆ. ದ್ವಿತೀಯಾಕ್ಷರ ಪ್ರಾಸ ಶಕಟರೇಫವಾದ್ದರಿಂದ, 'ಸಾಱುಗೆ' ಎಂಬ ಪದವನ್ನು 'ಸಾರುಗೆ' (ಸಮೀಪಿಸಲಿ) ಎಂದು ಬೇರೆಯ ಅರ್ಥಬರುವಂತೆ ಮಾರ್ಪಡಿಸಲು ಅವಕಾಶವಿಲ್ಲ.

ಬೇಕು). ಇಲ್ಲಿ ಕ್ರಿಯೆ (ಸಾಱುಗೆ, ಪಣಿದೊಡೆ, ಏಱುವಂ—ಎಂಬ ಕ್ರಿಯಾಪದಗಳು) ಬೇರೆ ಬೇರೆ ಕಾರಕಗಳನ್ನು ತಳ್ತು ಬೇರೆ ಬೇರೆ ನಿಂತು, ಸಮುಚ್ಚಯದ ಅಭಾವದಿಂದ ಬೇರೆ ಬೇರೆ ವಾಕ್ಯಗಳಾಗಿದ್ದರೂ, ಏಕವಾಕ್ಯದಂತೆಯೇ ಅಖಂಡವಾದ ಅರ್ಥಪ್ರತೀತಿಯನ್ನು ಕೊಡುವ ಗುಣರೂಪವನ್ನೆ ಹೊಂದಿದೆ—ಎಂದು ಅರಿಯಬೇಕು.

ಪದ್ಯ ೧೩೫-೧೩೬ : ಈ ಎರಡು ಪದ್ಯಗಳಲ್ಲಿ ‘ ವಿಕಲ್ಪ ’ದ (alternation) ದೋಷಕ್ಕೂ ಗುಣಕ್ಕೂ ಲಕ್ಷ್ಯಗಳನ್ನು ಕೊಟ್ಟಿದೆ. ಲಕ್ಷ್ಯಗಳಿಂದ ಲಕ್ಷಣದ ಸ್ವರೂಪವನ್ನು ಅರಿತುಕೊಳ್ಳಬೇಕು.

“ ಅವರೆಲ್ಲರುಂ ಒಸೆಗೆ **ಮೇಣ್,** ಮುನಿಗೆ **ಮೇಣ್,** ಬಗ್ಗಿಸುಗೆ **ಮತ್ತೆ,** ಮಾನಸರ್ ನೆಟ್ಟನೆ ಪೂಣ್ದುದಂ ಪುಸಿವರಾಗಿರದೆ ಉಱಿಯಲಾಗದು ”-ಇದು ದೋಷಕ್ಕೆ ಉದಾಹರಣೆ. ‘ ಮೇಣ್ ’ (ಇಲ್ಲವೆ, ಅಥವಾ) ಎಂಬ ವಿಕಲ್ಪಾರ್ಥವನ್ನು ಕೊಡುವ ಪದವನ್ನು ಬಳಸುವಲ್ಲಿ ‘ ಮತ್ತೆ ’ (ಇನ್ನು, ಪುನಃ) ಎಂಬ ಬೇರೆಯ ಪದವನ್ನು ಬಳಸಿರುವುದರಿಂದ ವಿಕಲ್ಪಾರ್ಥ ಪ್ರತೀತಿಗೆ ಕೊನೆಯಲ್ಲಿ ಭಂಗವುಂಟಾಗಿದೆ. ಮುಂದಿನ ಲಕ್ಷ್ಯ ಪದ್ಯದಲ್ಲಿ ಈ ದೋಷವನ್ನು ಸರಿಪಡಿಸಿರುವ ರೀತಿಯನ್ನು ಗಮನಿಸಿ: ‘ ಅವರೆಲ್ಲರುಂ ಪೞಿಗೆ **ಮೇಣ್,** ಪೊಗೞ್ಗೆ **ಮೇಣ್,** ನೆವಮಿಲ್ಲದೊಡಿಂತು ಕೈಗೞಿಯೆ ಬಗ್ಗಿಸುಗೆ **ಮೇಣ್,** ಅಂತುಂ ಆನುಱಿವೆನಲ್ಲೆಂ.’

ಒಸೆ=ಸಂತೋಷಿಸು, ಪ್ರೀತಿಸು (‘ ಪ್ರಸನ್ನತ್ವೇ ’ : ಶ. ಮ. ದ.). ಬಗ್ಗಿಸು = ಝಂಕಿಸು, ಆಕ್ಷೇಪಿಸು. ಪೂಣ್ = ಪ್ರತಿಜ್ಞೆಮಾಡು. ಪೞಿ = ನಿಂದಿಸು. ಕೈಗೞಿ = ಮಿತಿಮೀರು (‘ ಅತಿಕ್ರಮಣೇ ’ = ಶ. ಮ. ದ.)

ಪದ್ಯ ೧೩೮ : ಇದರಲ್ಲಿ ‘ ಅವಧಾರಣೆ ’ ಹಾಗೂ ‘ ವಿಶಂಕೆ ’ಯ ಗುಣ ದೋಷಗಳನ್ನು ನಿರೂಪಿಸಿದೆ. ‘ ಅವಧಾರಣವು (ಒತ್ತಿಹೇಳುವುದು, emphasis) ಅನ್ವಯ (ವಂಶ), ಜಾತಿ, ಗುಣ, ಕ್ರಿಯೆ ಇವುಗಳನ್ನು ಅವಲಂಬಿಸಿರುತ್ತದೆ.’ ವ್ಯಕ್ತಿ ವಿಶಿಷ್ಟವಾದ

ಲಕ್ಷಣವನ್ನು ಒತ್ತಿ ಇಲ್ಲವೆ ಎತ್ತಿ ಹೇಳಬೇಕಾದ ಸಂದರ್ಭದಲ್ಲಿ 'ಅವಧಾರಣ'ವನ್ನು ಪ್ರಯೋಗಿಸುವುದು ರೂಢಿ. ಸಂಸ್ಕೃತದಲ್ಲಿ 'ಏವಂ', 'ಮಾತ್ರಂ' ಮುಂತಾದ ಅವ್ಯಯಗಳ ತೆರದಲ್ಲಿ 'ಕನ್ನಡದ 'ಎ', 'ಏ' ಎಂಬ ಅಕ್ಷರಗಳನ್ನು ಬಳಸಲಾಗುತ್ತದೆ. ಪದ್ಯದ ಉತ್ತರಾರ್ಧ 'ವಿಶಂಕಾ' ಗುಣ ದೋಷಕ್ಕೆ ಸಂಬಂಧಪಟ್ಟದ್ದು. 'ನಯ ನಿಯೋಗ ವಿಕಲ್ಪನೆ'=ಅದೋ ಇದೋ ಎಂದು ವಿಕಲ್ಪನೆ ಮಾಡುವಲ್ಲಿ, ಸಂದೇಹಾರ್ಥವೃತ್ತಿಯನ್ನು ಸುಸಂಬದ್ಧವಾಗಿ ಪದದಿಂದ ಪದಕ್ಕೆ ಕೊಂಡೊಯ್ಯುವುದು. (?) 'ವಿಶಂಕೆ' ಎಂದರೆ 'ಸಂದೇಹ' ಸೂಚನೆ.

ಪದ್ಯ ೧೪೯–೧೫೦: 'ಅವಧಾರಣೆ'ಯ 'ದೋಷ–ಗುಣ'ಗಳಿಗೆ ಲಕ್ಷ್ಯಗಳು: 'ಕುಲಜನೀತನೆ ಪಂಡಿತನೀತಂ ಉಜ್ಜ್ವಲ ಯಶೋಧಿಕನೀತನೆ ತಿಬ್ಬಂ.'–ಒಬ್ಬ ವ್ಯಕ್ತಿಯ ವಂಶ ಜಾತಿ ಗುಣಗಳನ್ನು ಇಲ್ಲಿ ಒತ್ತಿಹೇಳುವಾಗ ಎರಡನ್ನು ಒತ್ತಿಹೇಳಿ ಒಂದನ್ನು 'ಪಂಡಿತನೀತಂ' ಎಂದು ಅವಧಾರಣ ಮಾಡದಿರುವುದು ದೋಷ. ಇದರಿಂದ, ವಾಕ್ಯಬಂಧವು ಶಿಥಿಲವಾಗಿರುವುದು ಮಾತ್ರವಲ್ಲ, ವ್ಯಕ್ತಿಯ ವ್ಯಕ್ತಿತ್ವವೇ ಮುಕ್ಕಾದಂತೆ ಭಾಸವಾಗುತ್ತದೆ. ಇದು 'ಅಲಸಿ ಪೇೞ್ದ ಅವಧಾರಣ ದೋಷ.' ತಿಬ್ಬ (ತ್ಭ)=ತೀವ್ರ; ಬೇಗನೆ.

ಮಾರ್ಗಕಾರನೆ ತಿದ್ದಿರುವ ಲಕ್ಷ್ಯ: 'ಶೂರನೀತನೆ, ಪಂಡಿತನೀತನೇ, ಹಾಲಿನಂತೆ ಬೆಳ್ಳಗಿರುವ ಹೆಚ್ಚಾದ ಯಶಸ್ಸುಳ್ಳವನೀತನೇ.'

ಪದ್ಯ ೧೫೧–೧೫೨: 'ವಿಶಂಕೆ'ಯ 'ದೋಷ–ಗುಣ'ಗಳಿಗೆ ಲಕ್ಷ್ಯಗಳು: 'ದಿವಿಜನೋ ಫಣಿನಾಯಕನೋ ಮನೋಭವಂ ಇವಂ ಕರಂ ಒಪ್ಪಿದಂ.' 'ಅವಧಾರಣೆ'ಯಂತೆ ಇಲ್ಲಿಯೂ 'ವಿಶಂಕೆ'ಯನ್ನು ಸೂಚಿಸುವ 'ಓ' ಎಂಬಕ್ಷರವನ್ನು ಒಬ್ಬ ವ್ಯಕ್ತಿಯನ್ನೇ ಕುರಿತು ಸಂದೇಹವನ್ನು ವ್ಯಕ್ತಪಡಿಸುವ ಎಲ್ಲ ಪದಗಳಿಗೂ ಹತ್ತಿಸಬೇಕು. ಈಗ ಇರುವಂತೆ, 'ದಿವಿಜನೋ ಫಣಿನಾಯಕನೋ' ಎಂಬ ವಿಶಂಕಾ ಸೂಚಕ ಪದದ್ವಯವು ಬೇರೆಯಾಗಿ ನಿಂತು, 'ಮನೋಭವಂ ಕರಂ ಒಪ್ಪಿದಂ' ಎಂದು ವರ್ಣಿಸಬೇಕಾದ ವ್ಯಕ್ತಿಯನ್ನು

ಮನ್ಮಥನೆಂದೇ ಹೇಳಿದಂತಾಗಿದೆ. ಆ ವ್ಯಕ್ತಿ, ಮನ್ಮಥನೂ ಅಲ್ಲ; ಮನ್ಮಥನಿರಬಹುದೆ ಎಂಬ ಸಂದೇಹಕ್ಕೆಡೆಗೊಡುವಂಥವನು. ಹೀಗೆ, ಕುರಿತ ಆಶಯಕ್ಕೇ ಭಂಗ ಬರುತ್ತಿದೆ. ಸಂದೇಹಸೂಚನೆಯಾದ ಮೇಲೆ, ಅದು ಪರಿಹಾರವೂ ಆಗಬೇಕು. ('ಇಟ್ಟ ವಿಶಂಕೆಯ ಪಾಟಿಯುಂ ತವಿಸಿ ನಿಲ್ಕೆ'). ಈ ದೋಷವನ್ನು ತಿದ್ದಿರುವ ಲಕ್ಷ್ಯ ಪದ್ಯದಲ್ಲಿ, ಸಂದೇಹವನ್ನು ಸೂಚಿಸಿದಮೇಲೆ ಅದನ್ನು ಪರಿಹರಿಸುವ ವಿವರಣೆಯೂ ಬಂದಿರುವುದನ್ನು ಗಮನಿಸಬೇಕು.

ಪಾಟಿ=ಕ್ರಮ, ನಿರಿಗೆ. ತವಿಸು=ಹೋಗಲಾಡಿಸು, ನಾಶಪಡಿಸು, ಕ್ಷೀಣಿಸುವಂತೆಮಾಡು ('ಕ್ಷಯೇ'–ಶ.ಮ.ದ.)

ಪದ್ಯ ೧೪೩: 'ಗ್ರಾಹ್ಯವಾದ ರೀತಿಯಲ್ಲಿ ವಿಚಾರಮಾಡಿದರೆ, ಗುಣ ದೋಷಗಳ ಸಮುದಾಯ ಅಳತೆಗೆ ಮೀರಿದ್ದು. ಇನ್ನು, ವೃತ್ತಿ (ವಿವ ರಣ)ಸಮೇತವಾಗಿ ಉಪಮಿತೋಕ್ತಿಯ(ಉಪಮಾವಾಚಕ ಸಂಬಂಧ ವಾದ)ಗುಣಾವಗುಣಗಳನ್ನು ಹೇಳುತ್ತೇನೆ.'–ಇದು ಪದ್ಯದ ತಾತ್ಪರ್ಯ.

ಪದ್ಯ ೧೪೪–೧೪೬: ಈ ಮೂರು ಪದ್ಯಗಳಲ್ಲಿ, ಮೊದಲು 'ಉಪಮಿತೋಕ್ತಿ' ಪ್ರಯೋಗದ ದೋಷಕ್ಕೆ ಲಕ್ಷ್ಯವನ್ನು ಕೊಟ್ಟು, ಬಳಿಕ ಉಳಿದೆರಡು ಪದ್ಯಗಳಲ್ಲಿ ಕ್ರಮವಾಗಿ ಈ ಸಂಬಂಧವಾದ ದೋಷ–ಗುಣ ಸ್ವರೂಪ ವನ್ನು ವಿವರಿಸಿದ್ದಾನೆ. 'ಉಪಮಿತಾಕ್ಷರಮೆಲ್ಲಿಯುಂ ಏಕರೂಪ ಪರಿವೃತ್ತಿ'ಯಲ್ಲಿದ್ದರೆ ಅದು ಸರಿಯಾದ ಕ್ರಮ (ಪ. ೧೪೬). ಕನ್ನಡ ದಲ್ಲಿ ಆ ಉಪಮಿತಾಕ್ಷರಗಳು (ಉಪಮಾವಾಚಕಗಳು) 'ಅಂತೆ, ಅಂತಿರೆ, ಪೊಲ್, ಪೋಲ್, ಅಂತೆವೊಲ್' ಎಂದು ಮುಂತಾಗಿವೆ. ಉಪಮೇಯಕ್ಕೆ ಬೇರೆ ಬೇರೆ ಉಪಮಾನಗಳನ್ನು ಕೊಡುವಾಗ ಎಲ್ಲ ವನ್ನೂ ಒಂದೇ ಬಗೆಯ 'ನಿಯಮಿತಾಕ್ಷರ'ದಿಂದ ನಿರ್ದೇಶಿಸಬೇಕು; ಇದು 'ಗುಣೋದಯಕಾರಣಂ.' ಬೇರೆ ಬೇರೆ ಉಪಮಾವಾಚಕ ಗಳನ್ನು ಉಪಯೋಗಿಸುವುದು ದೋಷ. ಲಕ್ಷ್ಯಪದ್ಯದಲ್ಲಿ (ಪ. ೧೪೪) 'ಅಂತಿರೆ', 'ಪೋಲಿರೆ' ಎಂಬುದಾಗಿ ಎರಡು ಬಗೆಯ 'ಉಪ ಮೋಕ್ತಿ'ಗಳನ್ನು ಉಪಯೋಗಿಸಿದೆ. ಇದು ದೋಷ. "ನಿರ್ದಿಷ್ಟ

ಉಪಮಾವಾಚಕಗಳಿಂದ 'ಉಪಮಾಪ್ರತಿಜ್ಞೆ'ಯನ್ನು ತಿದ್ದುವುದಕ್ಕೆ ಅವಕಾಶವಿದ್ದರೂ ಅದನ್ನು ತಿದ್ದದಿರುವುದು ದೋಷ" (ಪ. ೧೮೫). ಲಕ್ಷ್ಯದಲ್ಲಿ, 'ಪೋಲಿರೆ' ಎಂಬ ಪದದೆಡೆಯಲ್ಲಿ ಛಂದಸ್ಸು ಕೆಡದಂತೆ 'ಅಂತಿರೆ'ಎಂಬ ಪದವನ್ನು ಪ್ರಯೋಗಮಾಡುವುದಕ್ಕೆ ಅವಕಾಶವಿದೆ.

ಕೇತು = ಧ್ವಜ, ಬಾವುಟ. ಜಳದ = ಮೋಡ. ಹಸ್ತಿ = ಆನೆ. ಪತ್ತಿ = ಕಾಲಾಳು; ಕಾಲಾಳಿನ ಸೈನ್ಯ, ಪದಾತಿದಳ. ಕಾರ್ = ಮಳೆ (ಗಾಲ). ಆಹವ = ಯುದ್ಧ.

ಪದ್ಯ ೧೮೭ : ನೃಪತುಂಗದೇವ ಮಾರ್ಗಕ್ರಮು = ನೃಪತುಂಗದೇವನು ಅನುಮೋದಿಸಿರುವ ಕಾವ್ಯಶಾಸ್ತ್ರಪದ್ಧತಿ : ಇದನ್ನು ಅನುಸರಿಸುವ ಕವಿಗಳು ಸಾಮಾನ್ಯರು ಸಾಧಿಸಲಾಗದ ಕಾವ್ಯಸಿದ್ಧಿಯನ್ನು ಸುರಕ್ಷಿತವಾಗಿ ಪಡೆಯುವರೆಂಬ ನಂಬುಗೆಯನ್ನು ಇಲ್ಲಿ ಮಾರ್ಗಕಾರನು ವ್ಯಕ್ತಪಡಿಸಿದ್ದಾನೆ.

ಪದ್ಯ ೧೮೮ : ಅತಿಶಯಧವಳೋರ್ವಿಪೋದಿತಾಳಂಕೃತಿಮತಿ (ಅತಿಶಯಧವಳ + ಉರ್ವಿಪ + ಉದಿತ + ಅಳಂಕೃತಿಮತಿ) = ಅತಿಶಯಧವಳ ಬಿರುದಾಂಕಿತನಾದ ನೃಪತುಂಗ ನೃಪನಿಂದ ಉದಿಸಿದ (ಎಂದರೆ, ಅವನ ನಿಮಿತ್ತವಾಗಿ ಹುಟ್ಟಿದ, ಅವನು ಅನುಮೋದಿಸಿರುವ) ಅಲಂಕಾರಶಾಸ್ತ್ರದ ಜ್ಞಾನ, ತಿಳಿವಳಿಕೆ. ನಿರಂತರ ಪ್ರತೀತಂ = ಎಡೆಬಿಡದ, ಯಾವಾಗಲೂ ಇರತಕ್ಕ, ವಿಶದತೆಯನ್ನುಳ್ಳದ್ದು. ಶ್ರುತಿಯುವತಿ=ಸರಸ್ವತಿ (?).

ಪದ್ಯ ೧೮೯ : ಕಾವ್ಯರಚನೆಯಲ್ಲಿ 'ನೀತಿ ನಿರಂತರ ಕ್ರಮ' ವಾವುದೆಂಬುದನ್ನು ಮಾರ್ಗಕಾರನು ಬಹು ಮನೋಜ್ಞವಾಗಿ ಇದರಲ್ಲಿ ನಿರೂಪಿಸಿದ್ದಾನೆ.[17] ಕುರಿತ ಭಾವಕ್ಕೆ ಅನುಗುಣವಾಗಿ ನುಡಿಗಳು ಕೂಡಿ

17 ಇದರೊಂದಿಗೆ ಪಂಪನ ಉಕ್ತಿಯನ್ನು ಹೋಲಿಸಬಹುದು :

ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊ[ಕ್ಕು] ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧಮೊ
ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊಜೆಯಿಂ ಬಟಿಲ್ದು ತುಂ
ಬಿಗಳಿನೆ ತುಂಬಿ ಕೋಗಿಲೆಯ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್.

ಬರಬೇಕು; ಅವು ಹೇಳಬೇಕೆಂದಿರುವ 'ಬಗೆ'ಯನ್ನು (ಭಾವವನ್ನು) ಮೀರದಂತಿರಬೇಕು (ಎಂದರೆ, ಒಂದು ನುಡಿಯೂ ವ್ಯರ್ಥವಾಗಿ ಬಳಕೆಯಾಗಕೂಡದು); ಆ ಕನ್ನಡ ಮಾತುಗಳಲ್ಲಿ ನಾಣ್ನುಡಿಯ ಬೆಡಗಿರಬೇಕು: (ಇದು ಮಾರ್ಗಕಾರನ ಮನಸ್ಸಿನಲ್ಲಿರುವ 'ದೇಸಿ'ಯ ರೀತಿ ಎಂದು ಗ್ರಹಿಸಬಹುದು); (ಕನ್ನಡ ನುಡಿಯೊಂದಿಗೆ) ಬಳಸುವ ಸಂಸ್ಕೃತದ ಪದಗಳು ಕರ್ಕಶವಾದ ಪರುಷಾಕ್ಷರಗಳಿಂದ ಕೂಡಿರ ಕೂಡದು, ಮತ್ತು ಅವುಗಳ ಪ್ರಮಾಣ ಮಿತವಾಗಿರಬೇಕು (ಹವಣಾಗಿರಬೇಕು); ಒಟ್ಟಿನ ರಚನೆ 'ಮೆಲ್ಪು'ವೆತ್ತಿರಬೇಕು, ಮೃದುಬಂಧದಿಂದ ಕೂಡಿರಬೇಕು. ಹೀಗೆ, ಸಹಜವಾಗಿ ಕೋಮಲ ವಾಗಿ ಬಳ್ಳಿ ಕುಡಿಚಾಚುವಂತೆ ನಿರರ್ಗಳವಾದ ಓಟದಿಂದ ಕೂಡಿ ರುವ ಉಕ್ತಿರೀತಿ 'ನೀತಿ ನಿರಂತರಕ್ರಮ'. ('ನೀತಿ ನಿರಂತರ': ನೃಪತುಂಗನ ಬಿರುದು.) (ಪರಿಚ್ಛೇದ II-ಪ. ೪ನ್ನು ಹೋಲಿಸಿ).

ಪದ್ಯ ೧೫೦: ಅನ್ವಯಕ್ರಮ: 'ಕವಿಪ್ರಕರಂ, ಶ್ರೀ ವಿಜಯ ಪ್ರಭೂತ ಮನಿದಂ, ಸಕಳಾಳಾಪ . . . ಚಿತ್ರಕೃತಿಯಂ, ಈ ಮಾಟ್ಕೆಯಿಂ, ವ್ಯಾವರ್ಣಿಸುತ್ತುಂ, ಕೈಕೊಳ್ವುದು'.

'ಶ್ರೀ ವಿಜಯನಿಂದ ರಚಿತವಾದ ಇದು ಅಪೂರ್ವಲಕ್ಷಣಗಳಿಂದ ಕೂಡಿರುವ ವೈವಿಧ್ಯಪೂರ್ಣವಾದ ಕೃತಿ (=ಚಿತ್ರಕೃತಿ); ಕಾವ್ಯ ಶಾಸ್ತ್ರದಲ್ಲಿ ಹೇಳಿರುವ ಎಲ್ಲ ಭೇದ ವಿಭೇದಗಳ ವಿವರಣೆಯನ್ನೂ (=ವ್ಯಾವೃತ್ತಿ) ಇದು ಒಳಗೊಂಡಿದೆ; ಹಾಗೂ, ಚಿತ್ರಕಾರನು ಯಾವ ಪ್ರಕಾರದಲ್ಲಿ ಚಿತ್ರದ ಶ್ರೇಷ್ಠವಾದ ಭಾಗದಿಂದ ಬೆಳಗುವ ಬಣ್ಣ ಬಣ್ಣಗಳ ವಿನ್ಯಾಸವನ್ನು (=ವರ್ಣಕ್ರಮ) ಪ್ರದರ್ಶಿಸಿರುತ್ತಾನೆಯೋ ಆ ಪ್ರಕಾರದಲ್ಲಿ (ಕಾವ್ಯಕಲೆಯ) ಶ್ರೇಷ್ಠವಾದ ಭಾಗದ ಸಾರದಿಂದ ಬೆಳಗುವ 'ವರ್ಣಕ್ರಮಾವೃತ್ತಿಯಿಂದ' (ಅಕ್ಷರ ವಿನ್ಯಾಸ ಕ್ರಮದಿಂದಾದ ನಿರೂಪಣೆಯಿಂದ) ಸುವ್ಯಕ್ತವಾಗುವಂತೆ ಹೇಳಿದ ಕೃತಿಯಿದು; 'ಈ ಮಾಟ್ಕೆಯಿಂದ' (ಈ ಪ್ರಕಾರವಾಗಿ ರಚಿತ ವಾದದ್ದೆಂಬ ದೃಷ್ಟಿಯಿಂದ) ಕೊಂಡಾಡುತ್ತ 'ಕವಿಪ್ರಕರ'ವು

ಇದನ್ನು ('ಶ್ರೀ ವಿಜಯ ಪ್ರಭೂತಮನಿದಂ'= ಈ 'ಕವಿರಾಜ ಮಾರ್ಗ'ವನ್ನು) ಸ್ವೀಕರಿಸಬೇಕು.'

ಆಲಾಪ ಕಲೆ=(ಮಾತಿನ ಮೂಲಕ ಹೇಳುವ) ಕಾವ್ಯಕಲೆ, ಕಾವ್ಯ ಶಾಸ್ತ್ರ; 'ಅಲಂಕಾರಗ್ರಂಥ.' ವ್ಯಾವೃತ್ತಿ = ವಿವರಣೆ. ಚಿತ್ರಕರ = ಚಿತ್ರಕಾರ. ಪರಭಾಗ = ಶ್ರೇಷ್ಠವಾದ ಭಾಗ. ವರ್ಣಕ್ರಮ = (ಶ್ಲೇಷಾರ್ಥ) ಬಣ್ಣ ಹಾಕುವ ಬಗೆ; ಅಕ್ಷರವಿನ್ಯಾಸ. ಚಿತ್ರಕೃತಿ = ವೈವಿಧ್ಯಪೂರ್ಣವಾದ, ವೈಚಿತ್ರ್ಯದಿಂದ ಕೂಡಿದ, ಅಪೂರ್ವತೆ ಯಿಂದ ವಿಸ್ಮಯಕಾರಿಯಾದ, ಗ್ರಂಥ (ವಾಚ್ಯಾರ್ಥ ಪ್ರಧಾನವಾದ, 'ಚಿತ್ರಕಾವ್ಯ' ಅಥವಾ 'ಅಧಮಕಾವ್ಯ' ಎಂದು ಅರ್ಥವಲ್ಲ.) ವ್ಯಾವರ್ಣಿಸು = ವಿಶೇಷವಾಗಿ ಬಣ್ಣಿಸು, ಕೊಂಡಾಡು. ಪ್ರಭೂತ = ಉಂಟಾದ, ಹುಟ್ಟಿದ.

ಪರಿಚ್ಛೇದ ೨

ಪದ್ಯ ೧: ಪರಮ ಶ್ರೀಕೃತಿವಧುವಾ . . . . . . ಪ್ರರೂಪಿತಂಗಳ್=ಶ್ರೇಷ್ಠ ಳಾದ ಕಾವ್ಯಕನ್ನಿಕೆಯ ಒಡಲಿಗೆ ಚೆಲುವನ್ನು ಉಂಟುಮಾಡುವ ಗುಣಗಳೇ (ಆಕೆಯ) ಉತ್ತಮವಾದ 'ಅಲಂಕಾರ'ಗಳು (ಒಡವೆ ಗಳು). (ವಧುವಾ ಶರೀರ: ವಧುವ+ಆ ಶರೀರ, ವಧುವಾ ಶರೀರ ಎಂದು ಇಬ್ಬಗೆಯಾಗಿ ಪದವಿಭಾಗ ಮಾಡಬಹುದು).

ಪದ್ಯವು ದಂಡಿಯ ಶ್ಲೋಕದ ಪೂರ್ವಾರ್ಧದ ಭಾವಾನುವಾದ. ಆ ಶ್ಲೋಕ ಹೀಗಿದೆ :

"ಕಾವ್ಯಶೋಭಾಕರಾನ್ ಧರ್ಮಾನಲಂಕಾರಾನ್ ಪ್ರಚಕ್ಷತೇ |
ತೇ ಚಾದ್ಯಾಪಿ ವಿಕಲ್ಪ್ಯಂತೇ ಕಸ್ತಾನ್ ಕಾರ್ತ್ಸ್ನ್ಯೇನ ವಕ್ಷ್ಯತಿ ||"

—II, ೧.

'ಕಾವ್ಯಕ್ಕೆ ಶೋಭೆಯನ್ನುಂಟುಮಾಡುವ ಧರ್ಮಗಳನ್ನು ಅಲಂ ಕಾರಗಳೆಂದು ಹೇಳಲಾಗುತ್ತದೆ. ಇಂದಿಗೂ ಅವು ವಿಶೇಷವಾಗಿ

ಕಲ್ಪಿತಗಳಾಗುತ್ತಲೇ ಇವೆ. ಅವುಗಳನ್ನು ಸಾಕಲ್ಯವಾಗಿ ಹೇಳ ಬಲ್ಲವರಾರು ?'

ದಂಡಿಯ ಹೇಳಿಕೆಯನ್ನು ಮಾರ್ಗಕಾರನು ರೂಪಕಾಲಂಕಾರ ದಿಂದ ನಿರೂಪಿಸಿರುವುದರಿಂದ ಅದಕ್ಕೆ ಹೆಚ್ಚಿನ ಸೌಂದರ್ಯವು ಒದಗಿದ್ದರೂ, 'ಧರ್ಮ' ಎನ್ನುವ ಮಾತಿನ ವಿಶಾಲವಾದ ಅರ್ಥವ್ಯಾಪ್ತಿಯನ್ನು 'ಗುಣ' ಎಂಬ ಮಾತು ಹೊಂದಿಲ್ಲ. ಆದರೆ, 'ಶರೀರ' ಎಂಬ ಪದದೊಂದಿಗೆ 'ಗುಣ' ಎಂಬ ಮಾತೇ ಹೆಚ್ಚು ಉಚಿತವೆಂದು ತೋರುತ್ತದೆ. ಅಲ್ಲದೆ, 'ದೋಷ'ವಲ್ಲದ 'ಗುಣ' ಕಾವ್ಯಕ್ಕೆ ಅಲಂಕಾರಪ್ರಾಯವಾದಾಗ ಅದು ಕಾವ್ಯದ ಧರ್ಮವೂ ಆಗಬಹುದು.

ಪದ್ಯ ೨ : ಮೇಲೆ ಉದಾಹರಿಸಿರುವ ದಂಡಿಯ ಶ್ಲೋಕದ ಉತ್ತರಾರ್ಧದ ಛಾಯೆ ಈ ಪದ್ಯದಲ್ಲಿ ಸ್ವಲ್ಪ ಹರಿದುಬಂದಿದೆ. 'ಅಲಂಕಾರ ವಿಭಾಗವು ವಿವಿಧ ಪ್ರಕಾರಗಳಾಗಿವೆ. ಶಬ್ದಾರ್ಥಭೇದಗಳಿಂದ ಅವು ಶಬ್ದಾಲಂಕಾರಗಳೆಂದೂ ಅರ್ಥಾಲಂಕಾರಗಳೆಂದೂ ಎರಡು ವಿಭಾಗಗಳೆನಿಸುವುವು.'

ಪದ್ಯ ೩ : ತಾತ್ಪರ್ಯ : 'ಇವುಗಳಲ್ಲಿ ಪ್ರಾಧಾನವಾದದ್ದು ಅರ್ಥಾಲಂಕಾರ. ಮೊದಲು ಶಬ್ದಾಲಂಕಾರವನ್ನು ತಿಳಿಸುತ್ತೇನೆ.'

ಪದ್ಯ ೪-೫ : ಶಬ್ದಾಲಂಕಾರ ಪ್ರಕರಣದ ವಿವರಣೆಗೆ ತೊಡಗುವ ಮುನ್ನ, ಮಾರ್ಗಕಾರನು ಪದಪ್ರಯೋಗದ ಔಚಿತ್ಯದ ವಿಷಯವಾಗಿ ಕೆಲವು ಸಲಹೆ ಸೂಚನೆಗಳನ್ನು ನೀಡಿದ್ದಾನೆ: 'ಈ ಪದ ಇಲ್ಲಿಗೆ ಉಚಿತ, ಈ ಪದ ಇಲ್ಲಿಗೆ ಸರಿಯಲ್ಲ-ಎಂಬ ತಿಳಿವಳಿಕೆಯಿಂದ ಬಲ್ಲಮಟ್ಟಿಗೆ ನಿಶ್ಚಯಿಸಿ ('ಸಮಜಿ') ಎಲ್ಲವೂ ಬತ್ತವನ್ನೂ ಮೊಸರನ್ನೂ ಬೆರಸಿ ಕುಡಿದಂತಾಗದೆ, ಗೊಂದಲಕ್ಕೆ ಒಳಗಾಗದೆ, ಬೇಸರಪಡದೆ ಮೆಲ್ನುಡಿಗಳನ್ನು ಉಪಯೋಗಿಸಬೇಕು.' (ಅವಲಕ್ಕಿ, ಅರಳು, ಅರಳಹಿಟ್ಟು, ರಾಗಿಯ ಹುರಿಹಿಟ್ಟು ಮುಂತಾದುವನ್ನು ಮೊಸರಿನೊಂದಿಗೆ ಕಲಸಿ

ಸೇವಿಸಿದರೆ ತಿನ್ನಲು ಯೋಗ್ಯವಾಗಿರುತ್ತದೆ. ಬತ್ತವನ್ನು ಬೆರಸಿದ ಮೊಸರನ್ನು ಕುಡಿಯುವುದೂ ಕಷ್ಟ, ಕುಡಿದರೆ ಅರಗಿಸಿಕೊಳ್ಳುವುದೂ ಕಷ್ಟ! ನೆಲ್ಲು ಮೊಸರುಗಳ ಬೆರಕೆಯಂತೆ, ಅನುಚಿತ ಪದಪ್ರಯೋಗ). ಇಷ್ಟು ಮಾತ್ರವಲ್ಲ. ಶಬ್ದಾರ್ಥ ಸಾಂಗತ್ಯವಿರಬೇಕು; ಎಂದರೆ, ಕುರಿತ ಅರ್ಥಕ್ಕೂ ಬಳಸಿದ ಪದಕ್ಕೂ ಹೊಂದಿಕೆಯಿರಬೇಕು. 'ಪ್ರಕಟಗೊಂಡ ಅರ್ಥವು ಸಕ್ರಮವಾಗಿದ್ದರೂ ಕೂಡ, ಅದನ್ನು ವ್ಯಕ್ತಪಡಿಸುವ ಶಬ್ದವು ಅದರೊಡನೆ ಹೊಂದದಿದ್ದರೆ ಮುತ್ತನ್ನೂ ಮೆಣಸನ್ನೂ[18] ಪೋಣಿಸಿದಂತಾಗುವುದು. (ಮುತ್ತು ಹವಳ ಹೊಂದುವಂತೆ ಮುತ್ತು ಮೆಣಸು ಹೊಂದುವುವೆ?) ಆದ್ದರಿಂದ ಹೊಂದಿಕೆಯಾಗದ ಪದವನ್ನು ತೆಗೆದು ಹಾಕಬೇಕು.' ('ಕಟಿಲ್ಚಿ ಕಳೆಗೆ ಒಂದಿ ಮುಂದೆ ಬಾರದ ಪದಮಂ').

ಪದ್ಯ ೬: 'ಲಘುಪದ'ದ ಮುಂದೆ 'ಒತ್ತಿಬರ್ಪ ಪದಮಂ' ಇರಿಸಕೂಡದು. 'ಲಘುಪದ' ಎಂದರೆ ತೇಲಿಸಿ ಹಗುರವಾಗಿ ಉಚ್ಚರಿಸಬಹುದಾದ, ಲಘುವಾದ ಅಕ್ಷರಗಳಿಂದ ಕೂಡಿದ, ಹ್ರಸ್ವಾಂತವಾದ ಕಿರುನುಡಿ. ಲಕ್ಷ್ಯಪದ್ಯದ (ಪ. ೭)[19] 'ಬರಿಸಿ', 'ಇರಿಸಿ', 'ಬೆಸಗೊಂಡು', 'ನುಡಿಯೆ' ಮುಂತಾದ ಕನ್ನಡ ನುಡಿಗಳನ್ನು ಗಮನಿಸಿದರೆ ಈ 'ಲಘುಪದ'ದ ಸ್ವರೂಪವು ಮನವರಿಕೆಯಾಗುತ್ತದೆ. 'ಒತ್ತಿ ಬರ್ಪಪದ' ಎಂದರೆ ಒತ್ತಕ್ಷರದಿಂದ ಮೊದಲಾಗುವ ದೀರ್ಘ

---

18 ಹೋಲಿಸಿ—"ಪಟಿಗನ್ನಡದೆ ಪುದುಂಗೊಳೆ
ಕೊಟಿಸಕ್ಕದಮಂ ತಗುಳ್ಚಿ ಜಾಣ್ಕೆಡೆ ಮುತ್ತುಂ
ಮೆಣಸುಂ ಕೋದಂತಿರೆ ಪೇ
ಟ್ವಿಟಿಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ."

ಕೇಶಿರಾಜನು ಈ ಪದ್ಯವನ್ನು ಉದಾಹರಿಸಿದ್ದಾನೆ. (ಸೂ. ೬೫)

19 ಕೇಶಿರಾಜನು ಈ ಪದ್ಯವನ್ನು ಸಂಧಿದೋಷಕ್ಕೆ ಉದಾಹರಣೆಯಾಗಿ ಕೊಟ್ಟಿದ್ದಾನೆ. (ಶ. ಮ. ದ.–ಸೂ. ೫೯). (ಈ ಪದ್ಯದ ೪ನೆಯ ಪಂಕ್ತಿಯ-' ಎಂಬುದು ದೂಷ್ಯಂ' ಎಂಬುದಕ್ಕೆ–' ಎಂಬುದಮಾರ್ಗಂ' ಎಂಬ ಪಾಠವಿದೆ).

ಪದ ಇಲ್ಲವೆ ಸಮಸ್ತಪದ;' 'ಕ್ಷಿತಿಪತಿ', 'ಪ್ರಿಯಕುಶಲವಾರ್ತೆ', 'ಪ್ರಭು', 'ಪ್ರರೂಢಮುದಂ'–ಇಂತಹ ಪದಗಳು. ಸಾಮಾನ್ಯವಾಗಿ ಇವೆಲ್ಲವೂ ಸಮಸಂಸ್ಕೃತ ಪದಗಳು. ಈ ಬಗೆಯ ಪದಗಳನ್ನು 'ಲಘುಪದ'ಗಳ ಮುಂದೆ ನಿಲಿಸಿದರೆ 'ಮಗುವಿನ ತಲೆಯಮೇಲೆ ಭಾರವಾದ ಹೊರೆಯನ್ನು ಹೊರಿಸಿದಂತೆ 'ಅಸುಖಕರ' ವಾಗುವುದು;[20] ಇದು ದೂಷ್ಯ. ಬಿಣ್ಪೊಱೆ=ಭಾರವಾದ ಹೊರೆ.

ಪದ್ಯ ೮: ಮೇಲೆ ವಿವರಿಸಿದ 'ದೂಷ್ಯ' ಪ್ರಯೋಗವನ್ನು 'ಮಾರ್ಗ' ಸಮ್ಮತವಾಗಿ ಮಾಡಿ, ಈ ಲಕ್ಷ್ಯಪದ್ಯದಲ್ಲಿ ಸರಿಪಡಿಸಲಾಗಿದೆ.

ಪದ್ಯ ೯–೧೨: ಈ ನಾಲ್ಕು ಪದ್ಯಗಳಲ್ಲಿ ಕ್ರಿಯಾ ವಿಶೇಷಣವನ್ನು ಹೇಗೆ ಬಳಸಬೇಕೆಂಬುದನ್ನು ವಿವರಿಸಿದೆ.

(ಪ. ೯) (ಎರಡನೆಯ ಪಂಕ್ತಿಯ 'ಪೇಟದದಱೊಳೆ' ಎಂಬಲ್ಲಿ ಪಾಠದೋಷವಿರಬಹುದು. ಮದ್ರಾಸು ಮುದ್ರಣದಲ್ಲಿ ಇದನ್ನು 'ಪೇಟ್ದುಮದಱೊಳೆ' ಎಂದು ತಿದ್ದಿರುವುದು ಗ್ರಾಹ್ಯವಾಗಿ ಕಾಣುತ್ತದೆ). ಒಂದು ಕ್ರಿಯೆಯೊಂದಿಗೆ ಎರಡು ಕ್ರಿಯಾ ವಿಶೇಷಣಗಳನ್ನು ಒಟ್ಟಿಗೆ ಪ್ರಯೋಗಿಸಕೂಡದು. ಹಾಗೆ ಮಾಡಿದರೆ, 'ಎರಡಕ್ಕೆ ಬಿಟ್ಟ ಕಱುವಂ ಪೋಲ್ಗುಂ.' ಲಕ್ಷ್ಯ ಪದ್ಯದಲ್ಲಿ (ಪ. ೧೦), 'ಒಪ್ಪಿರೆ ವಿನೋದದಿಂದುರುಮುದದಿಂ' ಎಂಬುದೇ ಪ್ರಸಕ್ತ ವಾಕ್ಯ. ೧೧ನೆಯ ಪದ್ಯದಲ್ಲಿ, ಇದನ್ನು ಹೇಗೆ ಸರಿಪಡಿಸಬೇಕೆಂಬುದನ್ನು ಸೂಚಿಸಿದ್ದಾನೆ: ಒಂದು ಕ್ರಿಯಾ ವಿಶೇಷಣವನ್ನು ಕ್ರಿಯೆಯೊಂದಿಗೆ ಸೇರಿಸಿ, ಮತ್ತೊಂದನ್ನು ವಿಶೇಷ್ಯಕ್ಕೆ (ನಾಮಪದಕ್ಕೆ) ಹೊಂದುವಂತೆ ವಿಶೇಷಣವಾಗಿ (ಗುಣವಾಚಕವಾಗಿ) ಮಾರ್ಪಡಿಸಿ, ಪ್ರಯೋಗಿಸುವುದು ಸರಿಯಾದ ಮಾರ್ಗ. ತಿದ್ದಿದ ಲಕ್ಷ್ಯಪದ್ಯದಲ್ಲಿ (ಪ. ೧೨), 'ಒಪ್ಪಿರೆ' ಎಂಬ ಕ್ರಿಯೆಯೊಂದಿಗೆ 'ವಿನೋದದಿಂ' ಎಂಬ ಒಂದೇ

---

20 ಈ ಉಪಮಾನವಾಕ್ಯವನ್ನು ಕೇಶಿರಾಜನು ಉದಾಹರಿಸಿದ್ದಾನೆ. ಇದರ ಸೊಗಸು ಪರಿಭಾವಿಸತಕ್ಕದ್ದು.

ಕ್ರಿಯಾ ವಿಶೇಷಣವನ್ನು ಉಳಿಸಿಕೊಂಡು, 'ಉರುಮುದದಿಂ' ಎಂಬುದನ್ನು 'ಜನಿತಮುದಂ' ಎಂದು ನಾಮವಿಶೇಷಣವಾಗಿ ಮಾರ್ಪಡಿಸಿ, 'ಅರಸಂ' ಎಂಬ ವಿಶೇಷ್ಯಕ್ಕೆ ಅನ್ವಯವಾಗುವಂತೆ ಮಾಡಿದೆ. (ಎರಡು ಕ್ರಿಯಾ ವಿಶೇಷಣಗಳನ್ನೂ ಸಮುಚ್ಚಯಾತ್ಮಕ ವಾಗಿ—'ವಿನೋದದಿಂದಲೂ ಮುದದಿಂದಲೂ ಒಪ್ಪಿರೆ' ಎಂಬಂತೆ ಹೇಳುವುದರ ಮೂಲಕವೂ ದೋಷವನ್ನು ಪರಿಹರಿಸಬಹುದು.) (ಕರುವನ್ನು ಎರಡು ಹಸುಗಳ ಬಳಿಗೆ ಬಿಟ್ಟರೆ ತನ್ನ ತಾಯ ಬಳಿಗೇ ಧಾವಿಸುತ್ತದೆ; ಇನ್ನೊಂದು ಹಸು ಕರುವಿಲ್ಲದೆ ನಿಂತಿರುತ್ತದೆ. ಕ್ರಿಯೆ ಒಂದು ಕ್ರಿಯಾ ವಿಶೇಷಣವನ್ನು ಮಾತ್ರ ಹೊಂದಲು ಸಮರ್ಥ— ಎಂಬುದು ಮಾರ್ಗಕಾರನ ಅಭಿಪ್ರಾಯವಿರಬಹುದು).

ಪದ್ಯ ೧೩: ಇನ್, ಅಂತೆ, ಮತ್ತೆ, ಬಱಿ, ಮಿಗೆ, ಮುನ್, ನಿಲೆ, ತಾನ್, ಮೇಣ್, ಪೆಱಂ, ಗಡಂ, ಗಳಂ, ಆದಂ, ಕೆನ್ನಂ, ನಿಲ್-ಎಂಬೀ ತೆರನಾದ ಪದಗಳನ್ನು "ಎಂದುಂ ಅಲ್ಲದೆಡೆಗಳೊಳ್ ನಿಱಿಸಲ್ಕೆ ಕಲ್ಲದಿರಿಂ' ('ಅನಾವಶ್ಯಕವಾದ ಸ್ಥಳಗಳಲ್ಲಿ ಉಪಯೋಗಿಸುವುದನ್ನು ಕಲಿಯಬೇಡಿರಿ') ಎಂದು ಕವಿಗಳಿಗೆ ಎಚ್ಚರಿಕೆ ನೀಡಿದ್ದಾನೆ ಮಾರ್ಗ ಕಾರ. ಇಂಥ ಪದಗಳನ್ನು ಉಪಯೋಗಿಸಲೇಕೂಡದೆಂದು ಅವನ ಅಭಿಪ್ರಾಯವಲ್ಲ; ವ್ಯರ್ಥವಾಗಿ, (ಪದ್ಯದಲ್ಲಿ) ಪಾದಪೂರಕ ಪದ ಗಳಾಗಿ, ಉಪಯೋಗಿಸಕೂಡದೆಂಬುದಷ್ಟೇ ಅವನ ಆಶಯ.

ಪದ್ಯ ೧೪: ಇದು ಮೇಲಿನ 'ವ್ಯರ್ಥಪದ ಪ್ರಯೋಗ ದೋಷ'ಕ್ಕೆ ಉದಾ ಹರಣೆಯಾಗಿ ಕಾಣುತ್ತದೆ. ಪದ್ಯದ ಅರ್ಥವನ್ನು ಪರಿಶೀಲಿಸಿದರೆ, ಇದರಲ್ಲಿ ಬಳಸಲಾದ 'ಮುನ್', 'ಏನ್', 'ಇನ್' ಎಂಬ ಪದಗಳು 'ವ್ಯರ್ಥವಾದ ಪಾದಪೂರಕ'ಗಳಾಗಿ ಕಾಣುವುದಿಲ್ಲ. ದೋಷವನ್ನು ತಿದ್ದಿಬರೆದ ಲಕ್ಷ್ಯವಿದು, ದೋಷಯುಕ್ತವಾದ ಲಕ್ಷ್ಯವು ಮೂಲಮಾತೃಕೆಯಲ್ಲಿದ್ದು ದೊರಕಿರುವ ಹಸ್ತಪ್ರತಿಗಳಲ್ಲಿ ಅದು ಬಿಟ್ಟುಹೋಗಿರಬೇಕು-ಎಂಬ ದಿ. ಮುಳಿಯ ತಿಮ್ಮಪ್ಪಯ್ಯ ನವರ ಊಹೆ ಸರಿಯೆಂದು ಕಾಣುತ್ತದೆ.

ಚಪಲಾಧ್ವಜನೋಕ್ತಿ = (ಚಪಲ+ಅಧ್ವ+ಜನೋಕ್ತಿ) ಚಂಚಲ ಚಿತ್ತರಾದ ದಾರಿಹೋಕರ ಮಾತು; ಅಧ್ವ = ಮಾರ್ಗ, ದಾರಿ. ('ಚಪಲಧ್ವಜನೋಕ್ತಿ' ಎಂದು ಪಾಠಾಂತರ: ಮದ್ರಾಸು ಮುದ್ರಣ).[21]

ಪದ್ಯ ೧೫–೨೪: ದ್ವಿತೀಯ, ಷಷ್ಠೀ ಮತ್ತು ಸಂಬೋಧನಾ ವಿಭಕ್ತಿ ಪ್ರತ್ಯಯಗಳನ್ನು ವಿಕಲ್ಪವಾಗಿ ದೀರ್ಘವಾಗಿ ಪ್ರಯೋಗಿಸುವ ವಿಚಾರ.

(೧) ದ್ವಿತೀಯೆಯಲ್ಲಿಯೂ ಷಷ್ಠಿಯಲ್ಲಿಯೂ ಗುರುಲಘು ಭೇದ ವುಂಟು (ಎಂದರೆ, ಹ್ರಸ್ವ ಸ್ವರಗಳು ದೀರ್ಘವಾಗಬಹುದು: ಅನ್(ಂ) > ಆನ್(ಂ); ಅ > ಆ). ಆದರೆ, 'ಅನಿಯತ ವೃತ್ತಿ ಯುನಜುದು' (ಎಂದರೆ, ಈ ಗುರುಲಘು ಭೇದವು ವಿಕಲ್ಪ ಎಂಬುದನ್ನು ಅರಿತು) ನಿಪುಣನಾದವನು ಪೂರ್ವಕವಿಗಳ 'ಮಾರ್ಗಕ್ರಮ'ವನ್ನು ಅನುಸರಿಸಿ ಇದನ್ನು ಮಾಡತಕ್ಕದ್ದು. (ಪ. ೧೫).

(೨) ಆದಿಸ್ವರವುಳ್ಳ ಪದವು ದ್ವಿತೀಯಾ ವಿಭಕ್ತಿಯುಳ್ಳ ಪದದ ಮುಂದೆ ಬಂದಾಗಲೂ, ಪಾದಾಂತದಲ್ಲಿಯೂ ದ್ವಿತೀಯಾ ವಿಭಕ್ತಿ ಪ್ರತ್ಯಯವು ದೀರ್ಘವಾಗಬಹುದು; ಉಳಿದ ಕಡೆಗಳಲ್ಲಿ 'ಸ್ವಚ್ಛಂದಂ'. ಉದಾಹರಣೆ: ಪಾದಾಂತಕ್ಕೆ-ಕೀರ್ತಿಧ್ವಜನನ್ > ಕೀರ್ತಿಧ್ವಜ ನಾನ್. (ಪ. ೧೭).

---

21 ಈ ಪಾಠವನ್ನು ಆಧಾರವಾಗಿಟ್ಟುಕೊಂಡು, "೨-೧೪ರಲ್ಲಿ ಒಬ್ಬ ರಾಜಕನ್ಯೆಯ ಸ್ವಯಂವರ ಸಂದರ್ಭವುಳ್ಳ ಪದ್ಯವಿದೆ. ಅದನ್ನು ಯಾವುದೋ ಮೊದಲಿನ ಕಾವ್ಯದಿಂದ ಎತ್ತಿರಬೇಕು. 'ಚಪಲಧ್ವಜ' ಎಂಬರೆ ಅರ್ಜುನ ಎಂದಾದರೆ ಅದು ಹಿಂದೆ ಇದ್ದ ಕನ್ನಡ ಭಾರತವೊಂದರಿಂದ ತೆಗೆದುಕೊಂಡ ಪದ್ಯವಾಗಿರ ಬಹುದು" ಎಂದು ಡಾ. ಮುಗಳಿಯವರ ಊಹೆ. (ಕ.ಸಾ. ಚ., ಪು. ೨೩). 'ಚಪಲಧ್ವಜನ+ಉಕ್ತಿ'='ಚಪಲಧ್ವಜನುಕ್ತಿ' ಎಂದು ಸಂಧಿಯಾಗಬೇಕು. ಈಗಿರುವಂತೆ ಸಮಾಸೋಕ್ತಿ ಸರಿಯಾಗಿದೆ. ಆದಕಾರಣ, ಈ ಊಹೆ ನಿಲ್ಲುವುದಿಲ್ಲ.

ಆದಿಸ್ವರವುಳ್ಳ ಪದ ಪರವಾದಾಗ-ನೃಪನನ್, ಅಭಿನುತಮುನನನ್, ಅನುಪಮೇತರನನ್, ಅಪಾರಕೀರ್ತಿಧ್ವಜನಂ>ನೃಪನಾನ್, ಅಭಿನುತಮುನನಾನ್ ಇತ್ಯಾದಿ. (ಪ. ೧೮)

(೩) ಷಷ್ಠೀ ವಿಭಕ್ತಿ ಪ್ರತ್ಯಯವನ್ನುಳ್ಳ ಹಲವು ಪದಗಳನ್ನು ಒಡಗೂಡಿ ಹೇಳುವಾಗಲೂ, ಪಾದಾಂತದಲ್ಲಿಯೂ ಆ ಪ್ರತ್ಯಯವು ದೀರ್ಘವಾಗಬಹುದು; ಉಳಿದ ಕಡೆಗಳಲ್ಲಿ ಯಥೇಷ್ಟ[22]. (ಅ>ಆ) (ಪ. ೨೦). ಲಕ್ಷ್ಯಗಳಾಗಿ ಕೊಟ್ಟಿರುವ ಎರಡು ಪದ್ಯಗಳಲ್ಲಿ (ಪ. ೨೧, ೨೨) ಷಷ್ಠೀ ದೀರ್ಘವು ಹಲವು ಪದಗಳು ಅನುಗೂಡಿ ಬಂದಾಗ ವಿಕಲ್ಪವಾಗಿಯೂ ('ನೃಪನಾ ನೃಪನಂದನನಾ ನೃಪವಧುವರ್'- 'ನೃಪನ ನರಪಾಲತನಯನ ನೃಪವಧುವರ್'), ಪಾದಾಂತದಲ್ಲಿ ಬಂದಾಗ ನಿಯತವಾಗಿಯೂ ಪ್ರಯೋಗವಾಗಿರುವುದು ಕಂಡುಬರುತ್ತದೆ. (ಕಂದ ಪದ್ಯದ ೨ನೆಯ-೪ನೆಯ ಪಾದಾಂತಗಳು ಗುರುವಾಗಿರಬೇಕಾದ್ದರಿಂದ, ಪಾದವು ಷಷ್ಠೀ ವಿಭಕ್ತಿಯ ಪದಾಂತ

---

22 ಲಕ್ಷಣ ಪದ್ಯದಲ್ಲಿ (೧೫) ದೀರ್ಘೀಕರಣಕ್ಕೆ 'ಅನಿಯತವೃತ್ತಿ'ಯನ್ನು ಹೇಳಿ, ಬಳಿಕ ಎರಡು ವಿಭಕ್ತಿಗಳಿಗೂ ಪ್ರತ್ಯೇಕವಾಗಿ ಲಕ್ಷಣವನ್ನು ಹೇಳುವಾಗ ದೀರ್ಘೀಕರಣದ ಸ್ಥಾನ ನಿರ್ದೇಶಮಾಡಿ, ಉಳಿದ ಕಡೆಗಳಲ್ಲಿ 'ಸ್ವಚ್ಛಂದ' 'ಯಥೇಷ್ಟ' ಎಂದು ಹೇಳಿರುವುದು ದೋಷಯುಕ್ತವಾಗಿ ಕಾಣುತ್ತದೆ.

ಈ ವಿಷಯವಾಗಿ ಕೇಶಿರಾಜನ ಉಕ್ತಿಗಳು ಖಚಿತವಾಗಿವೆ. (ಸೂ. ೧೧೭, ೧೧೮). ಪ್ರಯೋಗಗಳನ್ನು ಕೊಡುವಾಗ, 'ವೋಲ್ ಪರಮಾದಲ್ಲಿಯುಂ ದೀರ್ಘಮುಂಟು-ಈಂದ ಪುಲಿಯಾವೋಲಿರ್ದಳ್, ನೊಂದ ಪುಲ್ಲೆಯಾವೋಲ್ ಒಳರ್ದನ್ (ಗುಣವರ್ಮನ ಹರಿವಂಶ ಪ್ರಯೋಗಂ)'-ಎಂಬುದಾಗಿ ಹೆಚ್ಚಿನ ಪ್ರಯೋಗವೊಂದನ್ನು ಕೊಟ್ಟಿರುವುದು ಗಮನಾರ್ಹ.

'ಕವಿರಾಜಮಾರ್ಗ'ಕ್ಕೂ ಹಿಂದಿನ ಗದ್ಯ ಪದ್ಯ ಶಾಸನಗಳಲ್ಲಿ (ಪೂರ್ವದ ಹಳಗನ್ನಡದಲ್ಲಿ) ಈ ಎರಡು ವಿಭಕ್ತಿಗಳಲ್ಲಿಯೂ ದೀರ್ಘಸ್ವರದ ಪ್ರಯೋಗ ವಿಶೇಷವಾಗಿ ಕಂಡುಬರುತ್ತದೆ. ಅಂದಿನ ಬಳಕೆಮಾತಿನಲ್ಲಿಯೂ ಈ ಪ್ರಯೋಗ ಇದ್ದಿರಬಹುದು. 'ಮಾರ್ಗಕಾರ'ನ ಲಕ್ಷ್ಯಲಕ್ಷಣಗಳು ಪದ್ಯರಚನೆಗೆ ಮಾತ್ರ ಅನ್ವಯಿಸುವಂತೆ ಕಾಣುತ್ತದೆ.

ವಾಗಿದ್ದರೆ ಅಲ್ಲಿ ದೀರ್ಘವು ಅನಿವಾರ್ಯ; ವೃತ್ತಜಾತಿಗಳಿಗೂ ಇದು ಅನ್ವಯಿಸುತ್ತದೆ).

(೪) ಸಂಬೋಧನೆಯಲ್ಲಿಯೂ ದೀರ್ಘಸ್ವರದ ಪ್ರಯೋಗವುಂಟು. ಆದರೆ, ಅದು ಇಂಬಾಗಿರುವಲ್ಲಿ ಬರತಕ್ಕದ್ದು; ಬಲ್ಲವರು ಅದನ್ನು ಪಲವೆಡೆಗಳಲ್ಲಿ ಅನುಚಿತವಾಗಿ ಬಳಸಿದರೆ ಅಳುತ್ತಾ ಕೂಗಿ ಕರೆದಂತೆ ಬಹು ವಿರಸವಾಗಿರುವುದೆಂದು ಉದಾಹರಣ ಪೂರ್ವಕ (ಪ. ೨೪) ಮಾರ್ಗಕಾರನು ಎಚ್ಚರಿಕೆ ನೀಡಿದ್ದಾನೆ.

ಪದ್ಯ ೨೫-೨೬: ಆಶೆಯುಳ್ಳವರೂ, ಹೆದರಿದವರೂ, ತಮ್ಮ ಇಷ್ಟ ಜನರ ಅಗಲಿಕೆಯಿಂದ ತುಂಬ ದುಃಖಗೊಂಡವರೂ 'ಬಾಯಟೂದೊಳ್ದು' ಈ ಯುಕ್ತವಾದ ಪುನರುಕ್ತಿಯನ್ನು ಹೇಳುವುದು 'ಮಾರ್ಗ'ವೆ ಆಗುವುದೆಂದು ಉದಾಹರಣ ಪೂರ್ವಕ (ಪ. ೨೬)-'ಪುನರುಕ್ತಿ ಪ್ರಯೋಗ ಕ್ರಮ'ವನ್ನು ಇಲ್ಲಿ ವಿವರಿಸಿದೆ.

ಬಾಯಟೂ=ಮಿತಿಮೀರಿ ದುಃಖಿಸು. ಊಳ್=ಕೂಗು, ಕೂಗಿ ಕರೆ.

ಪದ್ಯ ೨೭-೨೯: ಈ ಪದ್ಯಗಳಲ್ಲಿ 'ಬಹು ವಿಶೇಷಣಗಣ'ದ ಪ್ರಯೋಗದ ಗುಣದೋಷಗಳನ್ನು ಕುರಿತು ಹೇಳಿದೆ.

ರೂಪಕಾಲಂಕಾರದಲ್ಲಿಯೂ, ವಿಶೇಷವಾದ ಉಕ್ತಿ ಪ್ರಯೋಗ ದಲ್ಲಿಯೂ ಅನೇಕ ವಿಶೇಷಣಗಳನ್ನು ಒಟ್ಟಿಗೆ ಬಳಸುವುದು ದೋಷ ವೆನಿಸದು. 'ನಾಡವರ್ಗಳ್' ಅನೇಕ ಗುಣಗಳಿಂದ ಕೂಡಿದ್ದರು ಎಂದು ವರ್ಣಿಸುವಲ್ಲಿ ವಿಶಿಷ್ಟವಾದ ಉದ್ದೇಶವಿದೆ; ಆದ್ದರಿಂದ, ಇಲ್ಲಿ 'ಸುಭಟರ್ಕಳ್' ಇತ್ಯಾದಿಯಾಗಿ ಅನೇಕ ವಿಶೇಷಣಗಳನ್ನು ಬಳಸಿದೆ (ಪ. ೨೮). ಇದೇ ರೀತಿಯಲ್ಲಿ, 'ಅಂಕಚಾರಣೆ'ಗಳಲ್ಲಿಯೂ ಅನೇಕ ವಿಶೇಷಣಗಳನ್ನು ಉಪಯೋಗಿಸಬಹುದು; ಉಳಿದೆಡೆಗಳಲ್ಲಿ ಕೂಡದು (ಪ. ೨೯).

ಅಂಕಚಾರಣೆ=ವ್ಯಕ್ತಿಯ ಅಥವಾ ಪದಾರ್ಥದ ಕುರುಹುಗಳನ್ನು, ವಿಶೇಷ ಲಕ್ಷಣಗಳನ್ನು, ನಿರೂಪಿಸುವುದು (?).

ಪದ್ಯ ೩೦ : 'ಪ್ರಾಸವು ಕನ್ನಡಕ್ಕೆ ಅತಿಶಯವಾದುದು' ಎಂದು ಹೇಳಿ, ಇಲ್ಲಿಂದ ಮುಂದಕ್ಕೆ ಕನ್ನಡದಲ್ಲಿ ಪ್ರಚುರವಾಗಿದ್ದ 'ಶಬ್ದಾಲಂಕಾರ' ಗಳನ್ನು ಮಾರ್ಗಕಾರನು ವಿವರಿಸುತ್ತಾ ಹೋಗುತ್ತಾನೆ. ಪ್ರಾಸವೂ ಶಬ್ದಾಲಂಕಾರದಲ್ಲಿಯೇ ಅಡಕವಾಗಿದೆ. ('ಯತಿಭಂಗ' ವಿಚಾರವನ್ನು ಪ್ರಸ್ತಾವಿಸುವಲ್ಲಿ, 'ದೇಸಿಯನೆ ನಿಱಿಸಿ ಖಂಡ ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್' ಎಂದು ಮಾರ್ಗಕಾರನು ಹಿಂದೆ ಹೇಳಿರುವುದನ್ನು ಇಲ್ಲಿ ನೆನೆಯಬಹುದು.) (I-೭೫)

ಪ್ರಾಸ ವಿಚಾರ

ಪದ್ಯ ೩೧ : ಇಲ್ಲಿ ಆರು ಬಗೆಯ ಪ್ರಾಸಗಳನ್ನು ಮಾರ್ಗಕಾರನು ಹೆಸರಿಸಿದ್ದಾನೆ. ಅವು ಯಾವುವೆಂದರೆ : ೧. ವಿನುತಪ್ರಾಸ, ೨. ಶಾಂತ ಪ್ರಾಸ, ೩. ವರ್ಗಪ್ರಾಸ, ೪. ಸಮೀಪಪ್ರಾಸ, ೫. ಅನು(ಗತ) ಪ್ರಾಸ, ೬. ಅಂತ(ಗತ) ಪ್ರಾಸ.

ಪದ್ಯ ೩೨-೩೪ : (೧) **ವಿನುತ ಪ್ರಾಸ:** ಪಾದದ ಎರಡನೆಯ ಅಕ್ಷರ ಯಾವುದೋ ಅದನ್ನು ಎಲ್ಲ ಪಾದಗಳಲ್ಲಿಯೂ ಇಡುವುದೆ ವಿನುತ ಪ್ರಾಸ. ಪರಿ. I-೭೫ನೆಯ ಪದ್ಯದಲ್ಲಿ ಹೆಸರಿಸಿರುವ 'ಖಂಡಪ್ರಾಸ'ವೂ ಬಹುಶಃ ಇದೇ ಎಂದು ತೋರುತ್ತದೆ. ಈಗ ಇದು ಸಹಜವಾಗಿಯೇ ಆದಿಪ್ರಾಸವೆಂದು ಪ್ರಸಿದ್ಧವಾಗಿದೆ. ಪದ್ಯದ ಕಡೆಯಲ್ಲಿ ಇದನ್ನು 'ಉರು' ಪ್ರಾಸ ಎಂದು ನಿರ್ದೇಶಿಸಿದೆ. 'ಉರು' (ಶ್ರೇಷ್ಠ) ಎಂಬುದು ವಿಶೇಷಣ ಪದವಷ್ಟೆ. ಅದೇ ರೀತಿಯಲ್ಲಿ 'ವಿನುತ' (ಸ್ತುತ್ಯ) ಎಂಬುದೂ ವಿಶೇಷಣ ಪದವೇ ಇರಬೇಕು ಎಂದೆನ್ನುವಂತಿಲ್ಲ. ಏಕೆಂದರೆ, ೩೪ನೆಯ ಪದ್ಯದಲ್ಲಿ, ಹಿಂದಿನ ಲಕ್ಷ್ಯ ಪದ್ಯವನ್ನು ಅನುಲಕ್ಷಿಸಿ (ಪ. ೩೩) 'ಎಂಬುದು ವಿನುತ ಪ್ರಾಸಂ'

ಎಂದು ಸ್ಪಷ್ಟವಾಗಿ ಹೇಳಿ, ಅದರಲ್ಲಿ 'ಸಂಬಂಧಾಕ್ಷರದೊಳೆಲ್ಲ ಮಾತ್ರೆಗಳುಂ ತಳ್ತು ಇಂಬಾಗಿ ಬೆರಸಿ ಶೋಭಾಡಂಬರಮುಂ ಪಡೆಗುಂ' ಎಂದು ವಿವರಿಸಿದ್ದಾನೆ. ಲಕ್ಷ್ಯಪದ್ಯದಲ್ಲಿ, ಎಲ್ಲ ಪಾದಗಳಲ್ಲಿಯೂ 'ನೆ' ಕಾರವೇ ಇರುವುದು ಗಮನಾರ್ಹ; ಇದೇ ಅದರ 'ಶೋಭಾಡಂಬರ.' ಎಲ್ಲ ಪದ್ಯರಚನೆಗಳಲ್ಲಿಯೂ ಈ ಬಗೆಯ ಪ್ರಾಸವನ್ನು ಕಾದುಕೊಳ್ಳುವುದು ಅಸಾಧ್ಯವೆಂದೇ ಇದು 'ವಿನುತ'.

ಪದ್ಯ ೩೫–೩೬ : (೨) **ಶಾಂತಪ್ರಾಸ :** ಸಂಯೋಗಾಕ್ಷರಗಳು (ಸಂಯುಕ್ತಾಕ್ಷರಗಳು) ಒಂದೊಂದೇ ಸ್ವರಗಳಿಂದ ಕೂಡಿಕೊಂಡಿದ್ದು, ಪ್ರಾಸಶ್ರೇಣಿಯಲ್ಲಿ ವಿಪರ್ಯಾಸಕ್ರಮವಿದ್ದರೆ, ಅದು ಶಾಂತಪ್ರಾಸವೆನಿಸುವುದು. ಲಕ್ಷ್ಯಪದ್ಯದಲ್ಲಿ[23] (ಪ. ೩೬), 'ತ್ತಿ–ತ್ಯ–ತ್ತೀ–ತ್ರಿ'— ಇವು ಪ್ರಾಸಸ್ಥಾನದ ಸಂಯುಕ್ತಾಕ್ಷರಗಳು. ಈ ಸಂಯುಕ್ತಾಕ್ಷರಗಳಲ್ಲಿ ಪ್ರಥಮ ವ್ಯಂಜನಾಕ್ಷರವು ಎಲ್ಲೆಡೆಯೂ ಒಂದೇ ಬಗೆಯಾಗಿದ್ದರೂ, ತರುವಾಯದ ವ್ಯಂಜನ ಸ್ವರಾಕ್ಷರಗಳು ಬೇರೆಯಾಗಿರುವು

---

23 ಲಕ್ಷ್ಯಪದ್ಯದ 'ಪತ್ತಿ' ಎಂಬುದರ ಪಾಠ 'ಪತ್ತೀ' ಎಂದಿರಬಹುದೆಂದು ದಿ॥ ಮುಳಿಯ ತಿಮ್ಮಪ್ಪಯ್ಯನವರು ಸೂಚಿಸಿದ್ದಾರೆ. (ಕ. ರಾ. ವಿವೇಕ–ಭಾಗ ೨). ಹಾಗೆ ತಿದ್ದಿಕೊಳ್ಳುವುದು (ಮಾರ್ಗಕಾರನೇ II–೬ರಲ್ಲಿ ವಿಧಿಸಿರುವ ಪ್ರಕಾರ) ಸಮರ್ಥನೀಯವಾಗಿ ಕಾಣುತ್ತದೆ.

"ಪದ್ಯವಿದರೊಳಗೆ, ತತ್ಪೂರ್ವದ ಹರ್ಷರಚಿತ 'ರತ್ನಾವಳೀ ನಾಟಿಕೆ'ಯ ಕಥಾಂಶವೇ ಹೊಳೆಯುತ್ತಿದೆ. ನಾಟಕವೇ ಆಗಿ ಅಲ್ಲವೆ ಶ್ರವ್ಯಕಾವ್ಯವೇ ಆಗಿ ಯಾವನೋ ಕನ್ನಡ ಕವಿಯಿಂದ ಭಾಷಾಂತರಿತವಾದ ಪ್ರಬಂಧವೇ ಈ ಪದ್ಯದ ಆಕರವೆಂಬಲ್ಲಿ ಸಂಶಯವಿಲ್ಲ" ಎಂದು ತಿಮ್ಮಪ್ಪಯ್ಯನವರು ಹೇಳುತ್ತಾರೆ. ಆದರೆ, ಡಾ॥ ರಂ. ಶ್ರೀ. ಮುಗಳಿಯವರು "೭–೩೬ರಲ್ಲಿ ಹರ್ಷನ ರತ್ನಾವಲಿ ನಾಟಕದ ಕಥಾಂಶವಿದೆ. ಅದನ್ನು ನಾಟಕ ಇಲ್ಲವೆ ಕಾವ್ಯರೂಪಕ್ಕೆ ಇಳಿಸಿದ ಕನ್ನಡ ಕೃತಿ ಯಾವುದಾದರೂ ಇದ್ದಿತೇ? ನಮಗೆ ಈಗ ಎನಿಸುವುದೆಂದರೆ ರತ್ನಾವಳಿಯನ್ನೋದಿ ಬಲ್ಲ ಕವಿರಾಜಮಾರ್ಗಕಾರನೇ ಸ್ವತಂತ್ರವಾಗಿ ಅದನ್ನು ರಚಿಸಿರಬಹುದು" ಎಂದು ಅಭಿಪ್ರಾಯಪಟ್ಟಿದ್ದಾರೆ. (ಕ.ಸಾ.ಚ., ಪು. ೨೩). ಡಾ॥ ಮುಗಳಿಯವರ ಹೇಳಿಕೆಯೆ ಸರಿಯೆಂದು ನಮ್ಮ ಮತ.

ದನ್ನು (ವಿಪರ್ಯಾಸಕ್ರಮದಲ್ಲಿರುವುದನ್ನು) ಕಾಣಬಹುದು. ಇದು ಶಾಂತಪ್ರಾಸದ ಲಕ್ಷಣ.

ಪ್ರಮಾದ ಫಲಕ=ಹಡಗಿನಲ್ಲಿ ಸಮುದ್ರ ಪ್ರಯಾಣ ಮಾಡು ವಂದು ಯಾವುದಾದರೂ 'ಪ್ರಮಾದ' ಸಂಭವಿಸಿ, ಹಡಗು ಒಡೆದು, ಪ್ರಯಾಣಿಕರು ನೀರುಪಾಲಾಗಬೇಕಾದ ಅಪಾಯಸಂಭವವು ಒದಗಿದಾಗ, ಜೀವವನ್ನು ಸಂರಕ್ಷಿಸಿಕೊಳ್ಳಲು ಉಪಯೋಗಿಸುವ, ಫಲಕ (ಹಲಗೆ) (Life-saving plank). ಲಕ್ಷ್ಯಪದ್ಯದಲ್ಲಿ, ಸಿಂಹಳದ್ವೀಪದ ರಾಜಕುಮಾರಿಯಾದ ರತ್ನಾವಳಿಯೆ ಇಂಥ 'ಪ್ರಮಾದ ಫಲಕವನ್ನು ಹತ್ತಿ, ಬಹಳ ಉಗ್ರವಾದ ಮೊಸಳೆಗಳಿಂದ ಕೂಡಿ ಅಲ್ಲಕಲ್ಲೋಲವಾದ ಸಮುದ್ರದಲ್ಲಿ ಒಂದು ಬೊಂಬೆಯೋ ಎಂಬಂತೆ ಸುರಕ್ಷಿತವಾಗಿ ಬದುಕಿದಳು. ಹೀಗೆ ಬದುಕುವುದೂ ಸೋಜಿಗವೆ' ಎಂಬ ಕಥಾಂಶವಿದೆ. ಈ ಪದ್ಯದ ಅಕ್ಷರ ಸಂಯೋಜನೆ ಸಮುದ್ರದ ಕ್ಷೋಭೆಯನ್ನು ಸಮರ್ಥ ರೀತಿಯಲ್ಲಿ ವ್ಯಂಜಿಸುತ್ತಿವೆ; ಕಡೆಯ ಪಾದ, ಅಪಾಯದ ಕ್ಷೋಭೆಗೆ ಸಿಲುಕಿದ ಕನ್ಯೆ ಶಾಂತಸ್ಥಿತಿಯನ್ನು ತಲುಪಿದ ಅಂಶವನ್ನು ಸೂಚಿಸುತ್ತಿದೆ. ಇದನ್ನು ಅನುಲಕ್ಷಿಸಿ, ಈ ಶಾಂತಭಾವವನ್ನು ಸೂಚಿಸುವ ಪದ್ಯದಲ್ಲಿ ಅಳವಟ್ಟ ಪ್ರಾಸವು 'ಶಾಂತ' ಎಂಬ ಹೆಸರಿಗೆ ಯೋಗ್ಯ-ಎಂಬ ದಿ|| ತಿಮ್ಮಪ್ಪಯ್ಯನವರ ಊಹೆ ಮನೋಜ್ಞವಾಗಿದೆ; ಆದರೆ ಅದನ್ನು ಸಮರ್ಥಿಸುವುದು ಕಷ್ಟ.

ಪದ್ಯ ೩೭-೩೮ : (೩) **ವರ್ಗಪ್ರಾಸ:** "ವರ್ಗಾಕ್ಷರಗಳು ನಾಲ್ಕೂ ನಿಯತ ಪ್ರಾಸಸ್ಥಾನದಲ್ಲಿ ಕ್ರಮವಾಗಿ ನೆಲೆಗೊಂಡಿದ್ದರೆ ಅದು 'ಪ್ರಾಕ್ತನೋಕ್ತ' ವರ್ಗಪ್ರಾಸವೆನಿಸುವುದು."

ಲಕ್ಷ್ಯಪದ್ಯದಲ್ಲಿ (ಪ. ೩೮), 'ಕ' ವರ್ಗದ ನಾಲ್ಕು ಅಕ್ಷರಗಳೂ ಕ್ರಮವಾಗಿ ಪ್ರಾಸಸ್ಥಾನದಲ್ಲಿ ಬಂದಿವೆ. (ಇನ್ನುಳಿದ ಚ-ಟ-ತ-ಪ ವರ್ಗಾಕ್ಷರಗಳನ್ನೂ ಇದೇ ರೀತಿಯಲ್ಲಿ ಪ್ರಾಸಸ್ಥಾನದಲ್ಲಿ ಉಪಯೋಗಿಸಬಹುದೆಂದು ಊಹಿಸಿಕೊಳ್ಳಬೇಕು). 'ಪ್ರಾಕ್ತನೋಕ್ತ

ವರ್ಗಪ್ರಾಸ' ಎಂದಿರುವುದರಿಂದ, ಈ ವರ್ಗಪ್ರಾಸ ವಿಚಾರವನ್ನು ಮಾರ್ಗಕಾರನಿಗಿಂತ ಹಿಂದಿನ ಪೂರ್ವಾಚಾರ್ಯರು ಯಾರಾದರೂ ಒಂದು ಲಕ್ಷಣ ಗ್ರಂಥದಲ್ಲಿ ಹೇಳಿದ್ದರೇ ಎಂಬುದು ವಿಚಾರಣೀಯ. ಪ್ರಾಸವು ಕನ್ನಡಕ್ಕೆ ವಿಶಿಷ್ಟವಾದ್ದರಿಂದ, ಆ ಲಕ್ಷಣಗ್ರಂಥವೂ ಕನ್ನಡದ್ದಾಗಿರಬೇಕಾಗುತ್ತದೆ. ಇವೆಲ್ಲಾ ಕೇವಲ ಊಹಾತ್ಮಕ.

ಪದ್ಯ ೩೯-೪೦: (೪) **ಸಮೀಪಪ್ರಾಸ:** 'ಶ ಷ ಸ' ಎಂಬೀ ಮೂರು ವರ್ಣಗಳು ಕ್ರಮವಾಗಿ ಪ್ರಾಸಸ್ಥಾನದಲ್ಲಿ ಬಂದರೆ, ಅದು ಸಮೀಪ ಪ್ರಾಸ. ಉಚ್ಚಾರಣೆಯ ದೃಷ್ಟಿಯಿಂದ ಈ ಮೂರು ಅಕ್ಷರಗಳೂ ಸಮೀಪ ಸಂಬಂಧದವಾದ್ದರಿಂದ (?), ಪ್ರಾಸಕ್ಕೆ ಆ ಹೆಸರು ಬಂದಿರ ಬಹುದು. (೪ನೆಯ ಪಾದದಲ್ಲಿ 'ಸ' ಕಾರವೇ ಪುನರುಕ್ತವಾಗಿದೆ.)

ಪದ್ಯ ೪೧-೪೨: (೫) **ಅನುಪ್ರಾಸ:** 'ಎಣೆಯಕ್ಕರಂ' (ಎಂದರೆ, ಸಮಾನಾ ಕ್ಷರಗಳು) ಒಂದು ಇನ್ನೊಂದರಲ್ಲಿ ಅಳವಟ್ಟು (ಅನುಗೂಡಿ ಅಥವಾ ಜೊತೆಜೊತೆಯಾಗಿ) ಬಂದಲ್ಲಿ, ಅದು ಅನು(ಗತ) ಪ್ರಾಸವೆನಿಸುವುದು. ಲಕ್ಷ್ಯಪದ್ಯದಲ್ಲಿ (ಪ. ೪೨), 'ನನ', 'ನನು', 'ನನುನ', 'ನಿನಿ', 'ನೆನೆ'-ಹೀಗೆ 'ನ'ಕಾರವು 'ಎಣೆಯಕ್ಕರ'ವಾಗಿ ಸಾಲುವಿಡಿದು ಕಾಣಿಸಿಕೊಂಡಿರುವುದಲ್ಲದೆ, ಅದೇ 'ನ'ಕಾರವು ಪಾದದ ದ್ವಿತೀಯಾಕ್ಷರ ಪ್ರಾಸವಾಗಿಯೂ ಬಂದಿದೆ. ಇದು ಗಮನಾರ್ಹ.

ಪದ್ಯ ೪೩-೪೪: (೬) **ಅಂತಪ್ರಾಸ:** ಪಾದದ ಕಡೆಯಲ್ಲಿ ಇಟ್ಟ ಅಕ್ಷರ ವನ್ನೇ ಮುಂದಣ ಪಾದಗಳ ಕಡೆಯಲ್ಲಿಯೂ ಇಟ್ಟರೆ, ಅದು ಅಂತ ಪ್ರಾಸ. ಲಕ್ಷ್ಯಪದ್ಯದಲ್ಲಿ (ಪ. ೪೪), ಪ್ರತಿಪಾದದ ಅಂತ್ಯದಲ್ಲಿಯೂ 'ತ್ರಂ' ಎಂಬ ಅನುಸ್ವಾರಯುಕ್ತ ಸಂಯುಕ್ತಾಕ್ಷರವು ಪ್ರಾಸವಾಗಿ ಬಂದಿರುವುದು ಕಂಡುಬರುತ್ತದೆ. (ಅಂತಪ್ರಾಸವಿದ್ದರೂ, ದ್ವಿತೀಯಾ ಕ್ಷರ ಪ್ರಾಸವನ್ನು ಬಿಡುವಂತಿಲ್ಲ. ಇಲ್ಲಿ 'ತ'ಕಾರವೇ ದ್ವಿತೀಯ ಪ್ರಾಸಾಕ್ಷರವಾಗಿರುವುದು ಬಹುಶಃ 'ಕಾಕತಾಳೀಯ' ಎಂದು ಕಾಣುತ್ತದೆ).

ಪದ್ಯ ೪೫: ಪ್ರಾಸ, ಅನುಪ್ರಾಸ, ಅಂತಪ್ರಾಸ–ಇವು ಮೂರೂ ಕನ್ನಡಕ್ಕೆ 'ಅತಿಶಯಂಗಳ್' (ಎಂದರೆ, ಸಂಸ್ಕೃತ ಭಿನ್ನವಾಗಿ ಕನ್ನಡಕ್ಕೆ ಮಾತ್ರ ವಿಶಿಷ್ಟವಾದ ಶಬ್ದಾಲಂಕಾರಗಳು) ಎಂದು ಹೇಳಿ, ಇನ್ನುಳಿದ ಮೂರೂ (ಎಂದರೆ, ಶಾಂತ ಸಮೀಪ ವರ್ಗಪ್ರಾಸಗಳು) 'ಪ್ರಾಸಾಭಾಸಂಗಳ್' ಎಂದರೆ ಪ್ರಾಸದಂತೆ ತೋರುವವೇ ಹೊರತು ನಿಜವಾದ ಪ್ರಾಸಗಳಲ್ಲ ಎಂದು ಹೇಳಿದ ಮಾರ್ಗಕಾರನ ನಿರ್ಣಯೋಕ್ತಿ ಇಂದಿಗೂ ಊರ್ಜಿತವಾಗಿದೆ. (ಏಕೆಂದರೆ, ಆಧುನಿಕ ಕನ್ನಡ ಕವಿತೆಯಲ್ಲಿ ವಿಶೇಷವಾಗಿ ಕವಿಜನಪ್ರಿಯವಾಗಿರುವವು ಈ ಮೂರು ಬಗೆಯ ಪ್ರಾಸಗಳೆ).

ಪದ್ಯ ೪೬–೫೧: ತಾತ್ಪರ್ಯ: ಕಾವ್ಯಮಾರ್ಗದ ಅನೇಕಾನೇಕ ಭೇದಗಳನ್ನು ಅರಿತುಕೊಂಡು ನಿಶ್ಚಯಿಸಲು ಯಾರಿಗೂ ಸಾಧ್ಯವಿಲ್ಲ. 'ಪೂರ್ವಶಾಸ್ತ್ರ'ದಲ್ಲಿ ಉಕ್ತವಾದ 'ಪದವಿಧಿ'ಯನ್ನು (ಪದಪ್ರಯೋಗ ಸಂಬಂಧವಾದ ನಿಯಮಗಳನ್ನು) ಲಕ್ಷಿಸಿ ('ಕುಱಿತು') ಸ್ಪಷ್ಟವಾಗುವಂತೆ ('ತೆಱೆದಿರೆ') ಕನ್ನಡದಲ್ಲಿ ಸಂಗ್ರಹವಾಗಿ ('ಇನಿಸಂ') ತಿಳಿಸುತ್ತೇನೆ (ಪ. ೪೬). ಎಲ್ಲ ಮನುಷ್ಯರ ಅಂಗೋಪಾಂಗಗಳೂ ಪ್ರತಿಯೊಬ್ಬ ಮನುಷ್ಯನಲ್ಲಿಯೂ ತಮ್ಮ ತಮ್ಮ ನಿಯತಸ್ಥಾನಗಳಲ್ಲಿದ್ದರೂ ಕೂಡ, ಮನುಷ್ಯರು ಒಬ್ಬರಂತೆ ಇನ್ನೊಬ್ಬರಿರುವುದಿಲ್ಲ (ಪ. ೪೭). ಅದೇ ರೀತಿಯಲ್ಲಿ, ಶ್ರೇಷ್ಠಕವಿಗಳ ಪ್ರಯೋಗಗಳಿಂದ ಉಪಲಕ್ಷಿತಗಳಾದ ಮಾರ್ಗಗಳು (ಶಬ್ದಾಲಂಕಾರ ಪ್ರಯೋಗ ರೀತಿಗಳು) ಒಂದು ಇನ್ನೊಂದರೊಡನೆ ಸಮೀಪವರ್ತಿಯಾಗಿದ್ದು, ಶಬ್ದಾಲಂಕಾರದ ರಚನೆಗಳು ನೋಡುವುದಕ್ಕೆ ಒಂದೇ ಬಗೆಯಾಗಿ ಕಾಣುತ್ತವೆ. (ಪ. ೪೮). ಕವಿಪರಂಪರೆ ಲೋಕದಲ್ಲಿ ಅನಾದಿಕಾಲದಿಂದ ನಡೆದು ಬಂದಿದೆ; ಆದ್ದರಿಂದ, ಕವಿಗಳ ವಿಶಿಷ್ಟ ಲಕ್ಷಣದ ಉಕ್ತಿಗಳಿಗೂ ಲೆಕ್ಕವಿಲ್ಲ; ಕಾವ್ಯಮಾರ್ಗದ ಪ್ರಕಾರಗಳೂ ಭೇದಗಳೂ ಅನಂತ. (ಪ. ೪೯). ಕಾವ್ಯಮಾರ್ಗದ ಉಕ್ತಿ ಪ್ರಭೇದಗಳು ವಿಶೇಷ ಗುಣಗಳಿಂದ ಕೂಡಿದ್ದರೂ, ಅವುಗಳ ಕ್ರಮ ಅನಿಶ್ಚಿತ; ಯೋಚಿಸು

ವುದಕ್ಕೂ ಹೇಳುವುದಕ್ಕೂ ಹೊರಟರೆ ಇತಿಮಿತಿಯಿಲ್ಲದವು; ಹೀಗಿರುವುದರಿಂದ, ಅವುಗಳನ್ನೆಲ್ಲಾ ವಿಚಾರಮಾಡಿ ತಿಳಿಸಲು ಯಾರುತಾನೆ ಸಮರ್ಥರಾದಾರು? (ಪ. ೫೦). ಹಾಗಿದ್ದರೂ ಕೂಡ, ಪುರಾತನ ಕವಿಗಳು ಬಲ್ಲ 'ಉತ್ತರ' ಮತ್ತು 'ದಕ್ಷಿಣ' ಎಂಬ ಎರಡು ಮಾರ್ಗಗಳಿಗಿರುವ ಭೇದವನ್ನು – ಪುರಾತನ ಕವಿಗಳು ಅರಿತು ಕಲ್ಪಿಸಿರುವ ಮಾರ್ಗಾಂತರವನ್ನು ಕುರಿತು ವಿಚಾರಮಾಡಿ ನಾನು ತಿಳಿದ ಮಟ್ಟಿಗೆ ಹೇಳುತ್ತೇನೆ." (ಪ. ೫೧.)[24]

ಪದ್ಯ ೪೬ : ಪೂರ್ವಶಾಸ್ತ್ರ ಪದವಿಧಿ : I–೪೨, ೪೮ ಪದ್ಯಗಳಿಂದ, ಕವಿರಾಜಮಾರ್ಗಕ್ಕಿಂತ ಹಿಂದೆ ಕನ್ನಡ ಲಕ್ಷಣ ಗ್ರಂಥವಾವುದೂ ಬಹುಶಃ ಇದ್ದಿರಲಾರದು ಎಂದು ಅನುಮಾನಿಸಲು ಅವಕಾಶವಿದೆ. ಆದ್ದರಿಂದ ಇಲ್ಲಿ 'ಪೂರ್ವಶಾಸ್ತ್ರ' ಎಂದರೆ ಭಾಮಹ ದಂಡಿ ಇವರ ಕಾವ್ಯಶಾಸ್ತ್ರಗಳನ್ನು ಅನುಲಕ್ಷಿಸಿಯೆ ಮಾರ್ಗಕಾರನು 'ಮಾರ್ಗಗತಿ'ಯ ಭೇದಗಳನ್ನು ಹೇಳ ಹೊರಟಿದ್ದಾನೆ ಎಂದು ಗ್ರಹಿಸಬೇಕು. ಅಲ್ಲದೆ, ಮಾರ್ಗ ವಿಚಾರದಲ್ಲಿ ಅವನು ದಂಡಿಯ 'ಕಾವ್ಯಾದರ್ಶ'ವನ್ನು ಅನುಸರಿಸಿರುವುದು ಸ್ಪಷ್ಟವಾಗಿದೆ.

ಪದ್ಯ ೪೭-೪೮ : ಈ ಪದ್ಯಗಳ ಆಶಯವು ದಂಡಿಯ ಕಾವ್ಯಾದರ್ಶದಲ್ಲಿ ಬೇರೆಯ ರೀತಿಯಲ್ಲಿ ಉಕ್ತವಾಗಿದೆ. ದಂಡಿಯ ಶ್ಲೋಕ :

ಇಕ್ಷುಕ್ಷೀರ ಗುಡಾದೀನಾಂ ಮಾಧುರ್ಯಸ್ಯಾಂತರಂ ಮಹತ್।
ತಥಾಽಪಿ ನ ತದಾಖ್ಯಾತುಂ ಸರಸ್ವತ್ಯಾಪಿ ಶಕ್ಯತೇ ॥

—ಕಾವ್ಯಾದರ್ಶ, (I–೧೦೨)

---

24 ಕವಿರಾಜಮಾರ್ಗಕಾರನು ಈ ಮೇಲಿನ ಪದ್ಯಗಳಲ್ಲಿ ಸೂಚಿಸಿ, ಮುಂದಿನ ಪದ್ಯಗಳಲ್ಲಿ ಸವಿವರವಾಗಿ ನಿರೂಪಿಸಿರುವ 'ಮಾರ್ಗದ್ವಯ' ವಿಚಾರವು ವಿದ್ವಾಂಸರಲ್ಲಿ ವಾದ ವಿವಾದಕ್ಕೆ ಎಡೆಗೊಟ್ಟಿದೆ. 'ಕವಿರಾಜಮಾರ್ಗ'ದಲ್ಲಿಯೆ 'ಮಾರ್ಗ' ಎಂಬ ಪದಕ್ಕೆ ಸಂದರ್ಭಾನುಸಾರವಾಗಿ ಬೇರೆ ಬೇರೆ ಅರ್ಥಗಳಾಗುತ್ತಿವೆ. ಪ್ರಕೃತ ಸಂದರ್ಭದಲ್ಲಿ, ಮಾರ್ಗಕಾರನು ದಂಡಿಯಿಂದ ಪ್ರೋಕ್ತವಾದ ವೈದರ್ಭಗೌಡೀಯ ಮಾರ್ಗದ್ವಯಗಳಿಗೆ ಸಂವಾದಿಗಳಾಗಿ ದಕ್ಷಿಣೋತ್ತರ ಮಾರ್ಗಗಳನ್ನು ಹೇಳಿದ್ದಾನೆ. ಈ ಮಾರ್ಗ ವಿಚಾರದ ಚರ್ಚೆಯನ್ನು 'ಪೀಠಿಕೆ'ಯಲ್ಲಿ ಪ್ರತ್ಯೇಕವಾಗಿ ವಿವೇಚಿಸಿದೆಯಾದರಿಂದ, ಇಲ್ಲಿ ಅದರ ವಿವರಣೆಗೆ ತೊಡಗಿಲ್ಲ.

[ಕಬ್ಬು, ಹಾಲು, ಬೆಲ್ಲ ಮೊದಲಾದವುಗಳಲ್ಲಿನ ಸವಿಯಲ್ಲಿ ಒಂದೊಂದಕ್ಕೂ ಬಹಳ ಅಂತರವಿದೆ. ಅದನ್ನು ವಿವರಿಸಲು ಸರಸ್ವತಿಗೂ ಶಕ್ಯವಿಲ್ಲ.]

['ಇಕ್ಷು ಕ್ಷೀರ' ಎಂಬುದನ್ನು ಒಂದೇ ಸಮಸ್ತಪದವಾಗಿ ಇಟ್ಟುಕೊಂಡು, 'ಕಬ್ಬಿನಹಾಲು' ಎಂದೂ ಅರ್ಥಮಾಡಬಹುದು. ಆಗ, ಸಂದರ್ಭೋಚಿತವಾಗಿ ಅರ್ಥಸ್ವಾರಸ್ಯ ಹೆಚ್ಚುವುದೆಂದು ನಮ್ಮ ತಿಳಿವಳಿಕೆ. ಕಬ್ಬಿನಹಾಲು ಒಂದೇ ಆದರೂ, ಅದರಿಂದಾದ ಬೆಲ್ಲ, ಸಕ್ಕರೆ, ಕಲ್ಲುಸಕ್ಕರೆ ಮುಂತಾದವುಗಳಲ್ಲಿ ಮಾಧುರ್ಯ ಭೇದಗಳು ಕಂಡುಬರುತ್ತವೆ. ಮಾರ್ಗಕಾರನು ಹೋಲಿಕೆಯನ್ನು ಮಾರ್ಪಡಿಸಿ ಕೊಂಡಿದ್ದರೂ, ಬೇರೆಯ ಅಂದದಲ್ಲಿ ಇದೇ ಆಶಯವನ್ನು ಪರಿಪೋಷಿಸಿದ್ದಾನೆ. ಹಾಗೂ, ಈ ದೃಷ್ಟಾಂತವನ್ನು ಮಾರ್ಗ ವಿಚಾರ ಸಮಾಪ್ತಿವಾಕ್ಯದಲ್ಲಿ (ನೋಡಿ: II–೯೭) ಅಳವಡಿಸಿಕೊಂಡಿದ್ದಾನೆ.]

ಪದ್ಯ ೪೯ : 'ಕವಿಗಳುಮನಾದಿಲೋಕೋದ್ಭವರಪ್ಪುದಱಿಂ': "ಈ ಹೇಳಿಕೆಯಿಂದ, ಕ್ರಿಸ್ತಶಕದಿಂದಲೂ ಮೊದಲೆ ಕನ್ನಡದಲ್ಲಿ ಸಾಹಿತ್ಯವು ವಿಸ್ತರಿಸಿತ್ತೆಂಬುದು ನಿಸ್ಸಂದೇಹವಾಗಿ ಸೂಚಿತವಾಗುತ್ತದೆ" ಎಂದು ದಿ|| ಮುಳಿಯ ತಿಮ್ಮಪ್ಪಯ್ಯನವರು ಅಭಿಪ್ರಾಯಪಟ್ಟಿದ್ದಾರೆ. ಮಾರ್ಗಕಾರನು ತನಗಿಂತಲೂ ಹಿಂದೆ ಇದ್ದ ಖ್ಯಾತ ಗದ್ಯಪದ್ಯ ಕವಿಗಳನ್ನು ಉಲ್ಲೇಖಿಸಿರುವನಷ್ಟೆ. (I–೨೯, ೩೨). ಮೇಲಿನ ಉಕ್ತಿಯಲ್ಲಿ, 'ಕವಿಗಳು' ಎಂಬ ಸಾಮಾನ್ಯವಾಚಕದಿಂದ ಇವರಿಗಿಂತ ಹಿಂದೆ ಇದ್ದ ಸಂಸ್ಕೃತ ಪ್ರಾಕೃತ ಕನ್ನಡ ಇತ್ಯಾದಿಯಾಗಿ ಎಲ್ಲ ಭಾಷೆಗಳ ಕವಿಗಳನ್ನೂ ಉದ್ದೇಶಿಸಿರುವನೇ, ಇಲ್ಲವೆ ಕನ್ನಡ ಕವಿಗಳನ್ನು ಮಾತ್ರ ಕುರಿತಿರುವನೆ ಎಂಬುದನ್ನು ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲ. ಅಲ್ಲದೆ—

ಅಸ್ತ್ಯನೇಕೋ ಗಿರಾಂ ಮಾರ್ಗಃ ಸೂಕ್ಷ್ಮಭೇದಃ ಪರಸ್ಪರಂ|
ತತ್ರ ವೈದರ್ಭಗೌಡೀಯೌ ವರ್ಣ್ಯೇತೇ ಪ್ರಸ್ಫುಟಾಂತರೌ ||

[ವಚೋಮಾರ್ಗ ಅಥವಾ ಮಾತಿನ ಮಾರ್ಗ (ರೀತಿ) ಅನೇಕ; ಒಂದಕ್ಕೊಂದಕ್ಕೆ ಇರುವ ಭೇದಗಳು ಸೂಕ್ಷ್ಮ; ಆದ್ದರಿಂದ, ಪ್ರಸ್ಫುಟ (ಚೆನ್ನಾಗಿ ಎದ್ದು ಕಾಣುವ) ಭೇದಗಳನ್ನುಳ್ಳ 'ವೈದರ್ಭ' ಮತ್ತು 'ಗೌಡೀಯ' ಎಂಬೆರಡು ಮಾರ್ಗಗಳನ್ನು ಮಾತ್ರ ವರ್ಣಿಸುತ್ತೇವೆ.]—ಕಾವ್ಯಾದರ್ಶ, I–೪೦

ಇತಿ ಮಾರ್ಗದ್ವಯಂ ಭಿನ್ನಂ ತತ್‌ಸ್ವರೂಪನಿರೂಪಣಾತ್ |
ತದ್ಭೇದಾಸ್ತು ನ ಶಕ್ಯಂತೇ ವಕ್ತುಂ ಪ್ರತಿಕವಿಸ್ಥಿತಾಃ ||

—ಕಾವ್ಯಾದರ್ಶ, I-೧೦೧.

[ಹೀಗೆ, ಎರಡು ಮಾರ್ಗಗಳೂ ಬೇರೆ ಬೇರೆ. ಅವುಗಳ ಸ್ವರೂಪ ನಿರೂಪಣದಿಂದ ಇದು ಸುಸ್ಪಷ್ಟ. ಆದರೆ, ಪ್ರತಿ ಕವಿಯಲ್ಲಿಯೂ ಇರುವ ಭೇದಾಂತರಗಳನ್ನೆಲ್ಲವನ್ನೂ ಹೇಳಲು ಶಕ್ಯವಿಲ್ಲ.]

—ಎಂಬ ದಂಡಿಯ ಶ್ಲೋಕಗಳ ಭಾವವನ್ನೇ ಮಾರ್ಗಕಾರನು ಇಲ್ಲಿ ಅನುವಾದಿಸುತ್ತಿರುವುದರಿಂದ, ಕವಿಸಾಮಾನ್ಯಾರ್ಥದಲ್ಲಿ 'ಕವಿಗಳುಂ' ಎಂಬ ಮಾತು ಪ್ರಯೋಗವಾಗಿದೆಯೆಂದು ನಮ್ಮ ಅಭಿಪ್ರಾಯ.

'ಅನಂತ ಭೇದವದಱಿಂ ಮಾರ್ಗಂ': 'ಮಾರ್ಗಂ' ಎಂಬುದಕ್ಕೆ ಮದ್ರಾಸು ಮುದ್ರಣದಲ್ಲಿ 'ಮಾತುಂ' ಎಂಬ ಪಾಠಾಂತರವಿದೆ. ಮೂಲಶ್ಲೋಕದಲ್ಲಿ 'ಅನೇಕೋ ಗಿರಾಂ ಮಾರ್ಗಃ' ಎಂದಿರುವುದರಿಂದ, 'ಮಾರ್ಗಂ' ಎಂಬ ಪಾಠವೆ ಗ್ರಾಹ್ಯ.

ಪದ್ಯ ೫೨-೫೩: ಇಂತು ಕಾವ್ಯದ ಉಕ್ತಿಪ್ರಕಾರಗಳಲ್ಲಿ ಎರಡು 'ಮಾರ್ಗ'ಗಳು ಪ್ರಸಿದ್ಧವಾಗಿವೆ; ಹಾಗೂ, 'ವಕ್ರ' ಮತ್ತು 'ಸ್ವಭಾವ' ಎಂಬ ನಿಯತಿಕ್ರಮಾನುಗುಣವಾಗಿ ಎರಡು ಉಕ್ತಿರೀತಿಗಳೂ ಹುಟ್ಟಿಕೊಂಡಿವೆ. ದಕ್ಷಿಣ ಮಾರ್ಗವನ್ನು ಬೇರ್ಪಡಿಸತಕ್ಕ ವಿಶಿಷ್ಟ ಗುಣವುಳ್ಳದ್ದು 'ಸ್ವಭಾವಾಖ್ಯಾನ' ಅಥವಾ 'ಸ್ವಭಾವೋಕ್ತಿ'; ಅನೇಕ ಭೇದಗಳನ್ನುಳ್ಳ 'ವಕ್ರೋಕ್ತಿ' ಉತ್ತರ ಮಾರ್ಗದಲ್ಲಿ ಪ್ರಚುರವಾಗಿದೆ.[25]

---

25 ಕವಿರಾಜಮಾರ್ಗಕಾರನು ತನ್ನ ದಕ್ಷಿಣೋತ್ತರ ಮಾರ್ಗವಿವರಣೆಯಲ್ಲಿ ಪ್ರಧಾನವಾಗಿ ದಂಡಿಯ ಕಾವ್ಯಾದರ್ಶವನ್ನೇ ಅನುಸರಿಸಿದ್ದಾನೆ. ಆದರೆ, ಭಾಮಹನು ಹೇಳುವ ವಕ್ರೋಕ್ತಿ ಸ್ವಭಾವೋಕ್ತಿಗಳನ್ನು ಈ ಎರಡು ಮಾರ್ಗಗಳ 'ಭೇದಕ ಗುಣ'ಗಳೆಂದು ಹೇಳುವಲ್ಲಿ ಮಾರ್ಗಕಾರನ ಸಮನ್ವಯ ದೃಷ್ಟಿ ಕಂಡುಬರುತ್ತದೆ. ಭಾಮಹನ ಪ್ರಕಾರ, "ಲೋಕೋತ್ತರವಾದ ಚಮತ್ಕಾರವು ಕಂಡುಬರುವ ಕಾವ್ಯ ಪ್ರಯೋಗಗಳು ಮಾತ್ರ ಅಲಂಕೃತವೆನ್ನಬಹುದು. ಈ ಲೋಕೋತ್ತರವಾದ ಚಮತ್ಕಾರವನ್ನೇ ಭಾಮಹನು ಸಾಮಾನ್ಯವಾಗಿ 'ವಕ್ರೋಕ್ತಿ' ಯೆನ್ನುತ್ತಾನೆ. ಆದ್ದರಿಂದ ವಕ್ರೋಕ್ತಿ ಅಥವಾ ಅತಿಶಯೋಕ್ತಿ ಭಾಮಹನ

ಪದ್ಯ ೫೪ : ಇದರಲ್ಲಿ ದಕ್ಷಿಣ ಮಾರ್ಗದ ಹತ್ತು ಗುಣಗಳು ಉಕ್ತವಾಗಿವೆ. ದಂಡಿಯ ಪ್ರಕಾರ ಇವು 'ವೈದರ್ಭಮಾರ್ಗಸ್ಯ ಪ್ರಾಣಾ ದಶಗುಣಾಃ'.

ಪ್ರಕಾರ ಅಲಂಕಾರಗಳೆಲ್ಲಕ್ಕೂ ಅನ್ವಯಿಸುವ ಸಮಾನ್ಯ ಲಕ್ಷಣ. ಲೋಕದಲ್ಲಿದ್ದಂತೆಯೇ ವಸ್ತುವನ್ನು ವಿವರವಾಗಿ ವರ್ಣಿಸುವುದರಿಂದ ಚಮತ್ಕಾರ ಬಂದರೆ ಸ್ವಭಾವೋಕ್ತಿಯೆನಿಸುತ್ತದೆ. ಹೀಗೆ ವರ್ಣ್ಯಮಾನ ವಿಷಯದ ಸೌಂದರ್ಯೋತ್ಕರ್ಷಕ್ಕೆ ಕವಿಪ್ರತಿಭಾಸಿರ್ವಾಹ್ಯವಾದ ವಕ್ರೋಕ್ತಿ, ಸ್ವಭಾವೋಕ್ತಿಗಳೇ ಕಾರಣ. ಕಾವ್ಯವಸ್ತುವಿನಲ್ಲಿ ಶಾಸ್ತ್ರಕ್ಕೂ ಕಾವ್ಯಕ್ಕೂ ಭೇದವಿರುವಂತೆಯೇ ಕಾವ್ಯದ ಉಕ್ತಿಸ್ವರೂಪದಲ್ಲಿ ಅಥವಾ ವರ್ಣನಾಕ್ರಮದಲ್ಲಿಯೂ ಶಾಸ್ತ್ರದಲ್ಲಿಲ್ಲದ ವೈಶಿಷ್ಟ್ಯವೆಂದರೆ ಅಲಂಕಾರಗಳ ತತ್ತ್ವವಾದ ವಕ್ರೋಕ್ತಿ. 'ವಾಚಾಂ ವಕ್ರಾರ್ಥ ಶಬ್ದೋಕ್ತಿರಲಂಕಾರಾಯ ಕಲ್ಪತೇ'. ವಕ್ರೋಕ್ತಿಯಿಲ್ಲದೆ ಅಲಂಕಾರವಿಲ್ಲ... ಈ ವಕ್ರೋಕ್ತಿಯು ನಾನಾ ಬಗೆಯ ವಿಲಾಸವನ್ನು ರೂಪಕಾದಿ ಅಲಂಕಾರಗಳ ಮೂಲಕ ಭಾಮಹನು ... ತೋರಿಸಿದ್ದಾನೆ ... ಅರ್ಥಪುಷ್ಟಿಯೂ ವಕ್ರೋಕ್ತಿಯೂ ಇಲ್ಲದ ಕಾವ್ಯ ಲಲಿತವಾಗಿಯೂ ಕೋಮಲವಾಗಿಯೂ ಇರುವ ಕಾರಣದಿಂದ ಕಿವಿಗಿಂಪಾದ ಹಾಡಿಗೆ ಸಮಾನವೇ ಹೊರತು ಕಾವ್ಯವೆನಿಸುವುದಿಲ್ಲ. ಅಂತೆಯೆ ಅವನು ವೈದರ್ಭವೆಂಬ ಕಾವ್ಯಪ್ರಕಾರವನ್ನು ಪ್ರತ್ಯೇಕವಾಗಿ ಒಪ್ಪುವುದಿಲ್ಲ. ಹಾಗಾದರೆ ಪ್ರಾಸಾದಿ ಶಬ್ದಾಡಂಬರವಿದ್ದರೆ ಕಾವ್ಯವೆನಿಸೀತೆ ಎಂದರೆ, ಅದನ್ನು ಕಾವ್ಯವೆನ್ನುವುದಿಲ್ಲ. 'ನಿತಾಂತ' ಮುಂತಾದ ಶಬ್ದಗಳಿಂದಲೇ ಕಾವ್ಯದಲ್ಲಿ ಅಲಂಕಾರವೆನಿಸಬಲ್ಲ ಸೌಂದರ್ಯ ಬರುವುದಿಲ್ಲವೆನ್ನುತ್ತಾನೆ. ವಕ್ರೋಕ್ತಿಯಿಲ್ಲದೆ ಎಂದರೆ ಅರ್ಥಪುಷ್ಟಿಯಿಲ್ಲದೆ ಕಾವ್ಯವಿಲ್ಲ. ಹೀಗೆ ಗೌಡೀಯ-ವೈದರ್ಭವೆಂಬ ಕಾವ್ಯ ಭೇದ ಕಲ್ಪನೆಯೇ ಭಾಮಹನ ಪ್ರಕಾರ ಗತಾನುಗತಿಕ; ಹೆಡ್ಡರು ಮಾಡಿಕೊಂಡುದು." (ಡಾ|| ಕೆ. ಕೃಷ್ಣಮೂರ್ತಿ: ಕನ್ನಡ ಕಾವ್ಯಾಲಂಕಾರ—೧೯೬೧ ; ಪೀಠಿಕೆ, ಪು. xLii, xLiii)

ಭಾಮಹನ ಈ ಮಾರ್ಗದ್ವಯ ನಿರಾಕರಣೆಯ ಮಾತುಗಳನ್ನು ನಾಗವರ್ಮನು ಕಾವ್ಯಾವಲೋಕನದಲ್ಲಿ ಹೀಗೆ ಅನುವಾದಿಸಿದ್ದಾನೆ:

ವೈದರ್ಭ ಗೌಡ ಮಾರ್ಗವಿ
ಭೇದಂ ಬಗೆವೊಡೆ ಗತಾನುಗತಿಕಮಿದೆಂದೊ
ಲ್ದಾದರಿಪರ್ ಕೆಲಬರ್ ಸಂ
ವಾದದೊಳೆರಡುಂ ಸಮರ್ಥಮಪ್ಪುದಱಿಂದಂ.

—ಕಾವ್ಯಾ., ಸೂ. ೧೨೫

[ನೋಡಿ: ಕಾವ್ಯಾಲಂ. I–೩೧, ೩೨, ೩೩, ೩೪, ೩೫, ೩೬ ; II–೮೪, ೮೫, ೮೬ ; ೯೩]

ಮಾರ್ಗಕಾರನು ಹೇಳುವ ಹತ್ತೂ ಗುಣಗಳನ್ನೂ ಅದಕ್ಕೆ ಸಂವಾದಿಗಳಾದ ಗುಣಗಳನ್ನೂ ಜೊತೆಜೊತೆಯಾಗಿ ಈ ಮುಂದೆ ಕಾಣಿಸಿದೆ: ಸಮ–ಸಮತಾ, ಮಧುರ–ಮಾಧುರ್ಯಂ, ನಿಬಿಡ–ಶ್ಲೇಷಃ, ಕಾಂತ–ಕಾಂತಿಃ, ಸುಕುಮಾರ–ಸುಕುಮಾರತಾ, ಸಮಾಹಿತ–ಸಮಾಧಿಃ, ಪ್ರಸನ್ನ–ಪ್ರಸಾದಃ, ಉದಾರ–ಉದಾರತ್ವಂ, ಪ್ರಮಿತಗ್ರಾಮ್ಯ–ಅರ್ಥವ್ಯಕ್ತಿಃ, ಓಜಸ್ವಿ–ಓಜಃ.[26]

ಪದ್ಯ ೫೫: ಮೇಲ್ಕಂಡ ಗುಣಗಳ 'ವಿಪರ್ಯಯವೃತ್ತಿ'ಯೆ (ಎಂದರೆ, ವ್ಯತಿರಿಕ್ತವಾದ ಪ್ರಯೋಗವೆ) ಉತ್ತರ ಮಾರ್ಗ. ('ಏಷಾಂ ವಿಪರ್ಯಯಃ ಪ್ರಾಯೋ ದೃಶ್ಯತೇ ಗೌಡವರ್ತ್ಮನಿ'–ದಂಡಿ.) ಈ ಪದ್ಯದ ತಾತ್ಪರ್ಯವನ್ನು ಗಮನಿಸುವುದು ಎರಡು ದೃಷ್ಟಿಗಳಿಂದ ಆವಶ್ಯಕ: (೧) 'ತದ್ಭವದೊಳ್' ಎಂಬ ಪದದ ಅರ್ಥನಿರ್ಣಯ; (೨) ಉತ್ತರ ಮಾರ್ಗಗತಗುಣ ನಿರ್ಣಯ. ಪದ್ಯದ ತಾತ್ಪರ್ಯ: "ಅವುಗಳ (ಎಂದರೆ, ಮೇಲೆ ಹೇಳಿದ ದಕ್ಷಿಣ ಮಾರ್ಗದ ಗುಣಗಳ) ವಿಪರ್ಯಯವಾದ ಪ್ರಯೋಗದಿಂದ ಸಂಘಟಿತವಾಗಿ ಭಿನ್ನಗುಣವೆಂದು ತೋರುವ ವಿಕಲ್ಪ ರೂಪವೆ ('ಪ್ರವಿಭಕ್ತ ವಿಕಲ್ಪಂ') ಉತ್ತರ ಮಾರ್ಗ. ಹೀಗೆ 'ಸವಿಶೇಷ'ವಾದ ಆ (ಉತ್ತರ ಮಾರ್ಗದ)ಗುಣವನ್ನು ಅತಿಶಯಧವಳೋಕ್ತಿ ಕ್ರಮವನ್ನು ಅನುಸರಿಸಿ, 'ತದ್ಭವದೊಳ್' (ಎಂದರೆ ದಕ್ಷಿಣ ಮಾರ್ಗಜನ್ಯ ರೀತಿಯಲ್ಲಿ) ತಿಳಿಸುತ್ತೇನೆ."[27]

---

26 ಭರತ, ದಂಡಿ, ವಾಮನ–ಇವರ ಪ್ರಕಾರ ಕಾವ್ಯಗುಣಗಳು ಹತ್ತು. ಭಾಮಹನು ಮಾಧುರ್ಯ, ಓಜಸ್ಸು, ಪ್ರಸಾದ ಎಂಬ ಮೂರು ಗುಣಗಳನ್ನು ಮಾತ್ರ ಸಂಕ್ಷೇಪವಾಗಿ ವಿವರಿಸಿದ್ದಾನೆ. (ಕಾವ್ಯಾಲಂಕಾರ, II–೧,೨,೩). ಅವನ ಮತದಂತೆ, ಸಮಾಸಗಳ ಅಲ್ಪಪ್ರಯೋಗದಿಂದ 'ಮಾಧುರ್ಯ'ವೂ, ಸಕಲ ಸುಲಭಗ್ರಾಹ್ಯವಾದ ಅರ್ಥಪ್ರತೀತಿಯಿಂದ 'ಪ್ರಸಾದ'ವೂ, ಸಮಾಸಬಾಹುಳ್ಯದಿಂದ 'ಓಜಸ್ಸೂ' ಸಿದ್ಧಿಸುವುವು. 'ಗುಣ' ವಿಚಾರದಲ್ಲಿ ಮಾರ್ಗಕಾರನು ದಂಡಿಯನ್ನೇ ಅನುಸರಿಸಿದ್ದಾನೆ.

27 "ಸವಿಶೇಷಗುಣವಾದ ಆ ಉತ್ತರ ಮಾರ್ಗವನ್ನು ತಜ್ಜನ್ಯ(ತದ್ಭವ)ವಾದ ಲಕ್ಷ್ಯ ಸಂದರ್ಭದಲ್ಲಿ ವಿವರಿಸುವೆನು."—ಇದು ಮುಳಿಯ ತಿಮ್ಮಪ್ಪಯ್ಯನವರ ವಿವರಣೆ,

೧. ‘ತದ್ಭವದೊೞ್’: ಈ ಪದದ ಅರ್ಥನಿರ್ಣಯವನ್ನು ಮದ್ರಾಸು ಮುದ್ರಣದ ಸಂಪಾದಕರು ಹೀಗೆ ಮಾಡಿದ್ದಾರೆ (ಅವತರಣಿಕೆ, viii):

“. . . ‘ಅಱಿಪುವೆಂ ತದ್ಭವದೊೞ್’ ಎಂಬ ಪದ್ಯದಲ್ಲಿ ತದ್ಭವ ಶಬ್ದಕ್ಕೆ ತತ್ಸಮ ತದ್ಭವ ಶಬ್ದವೆಂದು ಅರ್ಥ ಮಾಡುವುದು ಅಪ್ರಾಕರಣಿಕವಾದುದು. ಹಿಂದೆ ದಕ್ಷಿಣೋತ್ತರ ಮಾರ್ಗಗಳ ಲಕ್ಷಣವನ್ನು ಹೇಳಿರುವುದರಿಂದ ಈ ಪದ್ಯದ ಉತ್ತರಾರ್ಧದಲ್ಲಿ ‘ಅದನ್ನು ಅತಿಶಯಧವಳೋಕ್ತಿಕ್ರಮದಿಂ ಅಱಿಪುವೆಂ’ ಎಂದು ಇಷ್ಟನ್ನೇ ಹೇಳಬೇಕಾಗಿರುವಾಗ ‘ಅದನ್ನು’ ಎಂಬುದಕ್ಕೆ ಬದಲಾಗಿ ‘ಅದರಲ್ಲಿ ಹುಟ್ಟಿದ’ ಎಂಬ ಕ್ಲಿಷ್ಟಾನ್ವಯವುಳ್ಳ (ತದ್ಭವದೊೞ್) ಶಬ್ದವನ್ನು ಪ್ರಯೋಗಿಸಿರುವ ಈ ಕವಿಯು, ಆ ಮಾರ್ಗದ್ವಯ ಲಕ್ಷಣವನ್ನು ಅತಿಶಯಧವಳೋಕ್ತಿಕ್ರಮದಲ್ಲಿ (ತತ್) ಆ ಕವಿಮಾರ್ಗದಿಂದ (ಭವದೊೞ್) ಹುಟ್ಟಿದ ಈ ಗ್ರಂಥದಲ್ಲಿ ಹೇಳುವೆನು ಎಂಬ ನಿಜತತ್ತ್ವಾಂಶವನ್ನು ಇಲ್ಲಿ ಸೂಚಿಸುವನೆಂದು ತಾತ್ಪರ್ಯವನ್ನು ಹೇಳಬಹುದು. ಈ ಗ್ರಂಥಕ್ಕೆ ಮೂಲಗ್ರಂಥವು ಮತ್ತೊಂದಿತ್ತೆಂದು ಸೂಚಿಸುವ ಇದು ಕೂಡ, ಶ್ರೀ ವಿಜಯನ ಕವಿಮಾರ್ಗವೆಂಬ ಗ್ರಂಥವನ್ನು ಈ ಕವಿರಾಜಮಾರ್ಗ ಗ್ರಂಥವು ಅನುಸರಿಸಿದೆ ಎಂಬುದನ್ನು ತಿಳಿಸುವುದರ ಮೂಲಕ ಕವಿಮಾರ್ಗದ ಅಸ್ತಿತ್ವಕ್ಕೆ ಸಹಕಾರಿಯಾಗುವುದು.”

ದುರ್ಗಸಿಂಹನು ತನ್ನ ‘ಪಂಚತಂತ್ರ’ದಲ್ಲಿ ಉಲ್ಲೇಖಿಸಿರುವ ‘ಶ್ರೀ ವಿಜಯರ ಕವಿಮಾರ್ಗಂ’ ಎಂಬ ಗ್ರಂಥವು ಪ್ರಸ್ತುತ ‘ಕವಿರಾಜಮಾರ್ಗ’ದಿಂದ ಭಿನ್ನವಾದ ಬೇರೊಂದು ಗ್ರಂಥವೇ? ಹಾಗಿದ್ದ ಪಕ್ಷದಲ್ಲಿ ಅದರಿಂದ ಈ ಗ್ರಂಥ ಹುಟ್ಟಿದೆಯೆ?–ಎಂಬೀ ಚರ್ಚೆ ಇಲ್ಲಿ (ಕರ್ತೃವಿಷಯಕ ಚರ್ಚೆಯನ್ನು ಪೀಠಿಕೆಯಲ್ಲಿ ಮಾಡಿರುವ ಕಾರಣ) ಅಪ್ರಸಕ್ತ. ಪ್ರಸ್ತುತ ಪದ್ಯದ ಹಿಂದಿನ ಪದ್ಯದಲ್ಲಿ ‘ದಕ್ಷಿಣಮಾರ್ಗ’ದ ಉಲ್ಲೇಖವಿದೆಯೆ ಹೊರತು ‘ಕವಿಮಾರ್ಗ’ದ ಉಲ್ಲೇಖವಿಲ್ಲ; ಅದಕ್ಕೂ ಮುಂಚೆಯಾದರೂ ಗ್ರಂಥದ ಯಾವ ಕಡೆಯಲ್ಲಿಯೂ

'ತತ್' ಗ್ರಂಥದ ('ಕವಿಮಾರ್ಗ'ದ) ಉಲ್ಲೇಖವಿಲ್ಲ. ಹೀಗಿರುವಲ್ಲಿ, 'ತತ್' ಎಂಬುದಕ್ಕೆ 'ಕವಿಮಾರ್ಗ' ಎಂದು ಅರ್ಥಾನ್ವಯ ಮಾಡುವುದು ಊಹೆಗೂ ನಿಲುಕದ್ದು. ಆದ್ದರಿಂದ, ಸಮೀಪಗತವಾದ 'ದಕ್ಷಿಣಮಾರ್ಗ'ವನ್ನು ನಿರ್ದೇಶಿಸುವ ಸರ್ವನಾಮವಾಗಿ 'ತತ್' ಶಬ್ದವು ಪ್ರಯೋಗವಾಗಿದೆಯೆಂದು ಅರ್ಥ ಮಾಡುವುದೇ ಸಾಧು.[28]

೨. ಮಾರ್ಗಕಾರನು ಉತ್ತರ ಮಾರ್ಗದ ಗುಣವನ್ನು ಪ್ರತ್ಯೇಕವಾಗಿ ಲಕ್ಷಣ ದ್ವಾರವಾಗಿ ವಿವರಿಸಿಲ್ಲ. ದಕ್ಷಿಣ ಮಾರ್ಗದ ಲಕ್ಷ್ಯಗಳನ್ನು ಕೊಟ್ಟು, ಅವೇ ಉತ್ತರ ಮಾರ್ಗದಲ್ಲಿ ಹೇಗೆ 'ವಿಪರ್ಯಯವೃತ್ತಿ'ಯಲ್ಲಿ ಪ್ರಯೋಗವಾಗುತ್ತವೆ ಎಂಬುದನ್ನು ತೋರಿಸಿದ್ದಾನೆ. ಇಂತು, ದಕ್ಷಿಣಮಾರ್ಗ ಲಕ್ಷ್ಯಸಂದರ್ಭದಲ್ಲಿಯೇ ಉತ್ತರ ಮಾರ್ಗ ಗುಣವನ್ನೂ ನಿರ್ದೇಶಿಸಿರುವುದರಿಂದ, 'ದಕ್ಷಿಣ ಮಾರ್ಗಜನ್ಯ' ರೀತಿಯಲ್ಲಿ (ತದ್ಭವದೊಳ್) ಉತ್ತರ ಮಾರ್ಗದ 'ಸವಿಶೇಷಗುಣ'ವನ್ನು ಅರುಹಿದ್ದಾನೆ ಎಂದು ತಿಳಿಯಬೇಕು.

ಪದ್ಯ ೫೬–೫೮ : **ಸಮ (ಬಂಧ)** (ದಕ್ಷಿಣ ಮಾರ್ಗ) : 'ಸಮನಿಸಿ ಕಿವಿಗೆ ಎಡಱ ಬಾರದೆ ಅಂದಂಬಟ್ಟು ಇಂ(ಇನ್)ಸಮೆದ ಪದದಾ ವಿಭೇದ

---

28 ಈ ಬಗೆಗೆ, ಮುಳಿಯ ತಿಮ್ಮಪ್ಪಯ್ಯನವರು ಮದ್ರಾಸು ಮುದ್ರಣದ ಸಂಪಾದಕರ ಅಭಿಪ್ರಾಯವನ್ನು ನಿರಾಕರಿಸುವರಾದರೂ, ನಮ್ಮ ಅಭಿಪ್ರಾಯಕ್ಕೆ ತುಸ ಭಿನ್ನವಾದ ಅಭಿಪ್ರಾಯವನ್ನು ಹೊಂದಿದ್ದಾರೆ. ಅವರ ವಿವರಣೆ ಇಂತಿದೆ: "ಗ್ರಂಥಕಾರನು ಈ ಪದ್ಯದಿಂದಲೆ ಮುಂದೆ ಪ್ರಥಮತಃ ದಕ್ಷಿಣ ಮಾರ್ಗದ, ಮತ್ತೆ ಉತ್ತರಮಾರ್ಗದ ಗುಣಗಳಿಗೆ ವಿಶಿಷ್ಟ ಲಕ್ಷಣ ಲಕ್ಷ್ಯಗಳನ್ನು ಹೇಳಲಾರಂಭಿಸುತ್ತಾನೆ. ಉತ್ತರ ಮಾರ್ಗಲಕ್ಷಣಕ್ಕನುವಾದ ಲಕ್ಷ್ಯವನ್ನು 'ತದ್ಭವದೊಳ್' ಎಂದರೆ ಆ ಉತ್ತರಮಾರ್ಗಭವಗುಣ ಸಂದರ್ಭದಲ್ಲಿ ಹೇಳುವೆನು ಎಂದೇ ಅರ್ಥ."

ದಿ॥ ಬಿ. ಎಂ. ಶ್ರೀ. ಯವರು 'ತದ್ಭವದೊಳ್' ಎಂಬುದರ ಪಾಠವು 'ತದ್ದ್ವಯದೊಳ್' ಎಂದಿರಬಹುದೆಂದು ಊಹಿಸಿದ್ದಾರೆ. ಇದನ್ನು ಒಪ್ಪಿಕೊಂಡರೆ, "ಸವಿಶೇಷಗುಣವನ್ನು 'ಆ ಎರಡರಲ್ಲಿ' (ಎಂದರೆ ಉಭಯಮಾರ್ಗಗಳಲ್ಲಿ) ತಿಳಿಸುತ್ತೇನೆ" ಎಂದು ಅರ್ಥಮಾಡಬಹುದು. ಇದು ತಿದ್ದುಪಾಟೇ ಹೊರತು, ಪಾಠಾಂತರವಲ್ಲ.

ಕ್ರಮುಂ'=' ಕೇಳುವುದಕ್ಕೆ ತೊಂದರೆಯಾಗದಂತೆ (ಎಂದರೆ, ಶ್ರವಣ ಸುಭಗವಾಗಿ) ಅಂದವನ್ನು ಹೊಂದಿ ಜೋಡಿಸಿದ ಪದಗಳ ಜೋಡಣೆಯ ಕ್ರಮವೆ 'ಸಮ' (ಎಂದರೆ, ವಿಷಮವಲ್ಲದ್ದು). ಇದರಲ್ಲಿ ಮತ್ತೆರಡು ವಿಧ: (೧) ಮೃದುಬಂಧ; (೨) ಸ್ಫುಟಬಂಧ. (ದಂಡಿಯು ಸಮಬಂಧವನ್ನು 'ಮೃದು', 'ಸ್ಫುಟ', 'ಮಧ್ಯಮ' ಎಂದು ಮೂಬಗೆಯಾಗಿ ವಿಂಗಡಿಸಿದ್ದಾನೆ. ಮೃದುವರ್ಣಗಳುಳ್ಳದ್ದು ಎಂದರೆ ಅಲ್ಪಪ್ರಾಣಾಕ್ಷರ ಸಹಿತವಾದದ್ದು ಮೃದುಬಂಧ; ಸ್ಫುಟವರ್ಣಗಳು ಎಂದರೆ ಮಹಾಪ್ರಾಣಗಳನ್ನುಳ್ಳದ್ದು ಸ್ಫುಟಬಂಧ; ಮಿಶ್ರವರ್ಣಗಳುಳ್ಳದ್ದು ಮಿಶ್ರಬಂಧ). ಮೃದು ಸ್ಫುಟ ಬಂಧಗಳ ಲಕ್ಷಣ ವಿವರಣೆಯಲ್ಲಿ ಮಾರ್ಗಕಾರನು ದಂಡಿಯನ್ನೇ ಅನುಸರಿಸಿದ್ದಾನೆ (ಪ. ೫೭). ಸಮಬಂಧದ ಎರಡು ಭೇದಗಳಿಗೂ ಲಕ್ಷ್ಯಗಳು ೫೮ನೆಯ ಪದ್ಯದಲ್ಲಿ ಅಡಕಗೊಂಡಿವೆ. ಅಲ್ಪಪ್ರಾಣಗಳಾದ ಮೃದುವರ್ಣಗಳು ಪದ್ಯದ ಪೂರ್ವಾರ್ಧದಲ್ಲಿಯೂ, ಮಹಾಪ್ರಾಣ ಸಹಿತಗಳಾದ (ಘ,ಧ,ಭ,ಖ) ಸ್ಫುಟ (ಬಿಡಿಬಿಡಿಯಾದ) ವರ್ಣಗಳು ಉತ್ತರಾರ್ಧದಲ್ಲಿಯೂ ಪ್ರಯೋಗವಾಗಿರುವುದನ್ನು ಗಮನಿಸಬಹುದು.

ಆಯತ=ವಿಸ್ತಾರವಾದ, ವಿಶಾಲವಾದ. ಕರುಣಾಪಾಂಗ=ಕರುಣೆಯಿಂದ ಕೂಡಿದ ಕಡೆಗಣ್ಣ ನೋಟ. ಜಘನ=ಸೊಂಟದ ಹಿಂಭಾಗ, ನಿತಂಬ. ಪಯೋಧರ=ಮೊಲೆ. ವಿಧುರೆ=ಧರಿಸಿದವಳು, ಹೊತ್ತವಳು. ವಿಧುಮುಖಿ=ಚಂದ್ರಮುಖಿ.

ಪದ್ಯ ೫೯: 'ವಿಷಮಬಂಧಮಿನ್ನಿಂತಕ್ಕುಂ'—'ವಿಷಮಬಂಧವು ಹೀಗಿರುತ್ತದೆ' ಎಂದು ಹೇಳಿ, ಪದ್ಯದ ಉತ್ತರಾರ್ಧದಲ್ಲಿ ಆ ಬಂಧದ ಉದಾಹರಣೆಯನ್ನು ಕೊಟ್ಟಿದ್ದಾನೆ. ಸಮಬಂಧವಲ್ಲದ್ದು ವಿಷಮಬಂಧ. ಎಂದ ಮೇಲೆ, ಇದು ದಕ್ಷಿಣ ಮಾರ್ಗದ ವಿಪರ್ಯಯಕ್ರಮವಾಯಿತು; ದಕ್ಷಿಣ ಮಾರ್ಗದ ಸಮಬಂಧಲ್ಲಿ ಪ್ರಯೋಗವಾಗುವ ಮೃದುವರ್ಣಗಳಿಗೆ ಪ್ರತಿಯಾಗಿ ಕ, ಚ, ತ, ಟ ಮತ್ತು ರೇಫಯುಕ್ತ ಸಂಯುಕ್ತಾಕ್ಷರಗಳು ಪ್ರಯೋಗವಾಗಿರುವುದನ್ನು ಲಕ್ಷ್ಯ ಭಾಗದಲ್ಲಿ

ಗಮನಿಸಬಹುದು. ದಕ್ಷಿಣಮಾರ್ಗದ ಸಮ ಬಂಧವನ್ನು ಲಕ್ಷ್ಯ ಲಕ್ಷಣಗಳ ಮೂಲಕ ವಿವರಿಸಿ, ಕೇವಲ ಲಕ್ಷ್ಯದ ಮೂಲಕ ಉತ್ತರಮಾರ್ಗವನ್ನು ಸ್ಪಷ್ಟಪಡಿಸಿದ್ದಾನೆ. (ಇದೇ ಕ್ರಮವನ್ನು ಮುಂದೆಯೂ ಅನುಸರಿಸಿದ್ದಾನೆ). ಇದರಿಂದ, ದಂಡಿಯಂತೆ ಮಾರ್ಗಕಾರನೂ ದಕ್ಷಿಣಮಾರ್ಗ ಪಕ್ಷಪಾತಿಯೆಂಬುದು ಸುವಿದಿತ. ಸಂಸ್ಕೃತ ಮಾರ್ಗದ ಲಕ್ಷಣವನ್ನು ಕನ್ನಡಕ್ಕೆ ಅಳವಡಿಸಿ ತೋರುವಲ್ಲಿ ಮಾರ್ಗಕಾರನ ವೈಶಿಷ್ಟ್ಯ ಕಂಡುಬರುತ್ತದೆ.

'ಸಮ'ವಲ್ಲದ್ದು 'ವಿಷಮ' ಎಂದಷ್ಟೇ ತಿಳಿಯಬೇಕೇ ಹೊರತು ವಿಷಮ ಬಂಧವನ್ನು ದೋಷ ಎಂದು ತಿಳಿಯಲಾಗದು. ಉತ್ತರ ಮಾರ್ಗದಲ್ಲಿ ಅದೇ 'ಗುಣ'.

ಪದ್ಯ ೬೦: **ಮಧುರ ಗುಣ:** 'ಸಿಹಿಯಾದ ರಸವು ನಾಲಗೆಗೆ ಹೇಗೋ ಹಾಗೆ ಕಿವಿಗೆ ಇಂಪಾಗಿರುವ ಮಾತುಗಳ ಜೋಡಣೆಯೆ ಮಧುರ ಗುಣ. ವಿಶೇಷಲಕ್ಷಣದಿಂದ ವಿಶಿಷ್ಟವಾಗಿರುವ ಆ ಸೊಗಸಾದ ಮಾತಿನ ರೀತಿ (ವಿಶಿಷ್ಟ ಲಕ್ಷಣದಿಂದ ಉಪಲಕ್ಷಿತವಾದ ಲಕ್ಷ್ಯಗಳು) ಎರಡು ಮಾರ್ಗಗಳಲ್ಲಿಯೂ ಹೀಗಿದೆ.'– ಇದು ಪದ್ಯದ ತಾತ್ಪರ್ಯ.

ಇದಕ್ಕೆ ಮೂಲವಾದ ದಂಡಿಯ ಶ್ಲೋಕ:

"ಮಧುರಂ ರಸವದ್ವಾಚಿ ವಸ್ತುನ್ಯಪಿ ರಸಸ್ಥಿತಿಃ |
ಯೇನ ಮಾದ್ಯಂತಿ ಧೀಮಂತೋ ಮಧುನೇವ ಮಧುವ್ರತಾಃ |"

—ಕಾವ್ಯಾದರ್ಶ I, ೫೧.

[ಮಾತು ರಸವತ್ತಾಗಿರುವುದು (ಸವಿಯಾಗಿರುವುದೆ) ಮಧುರ; ಆ 'ರಸಸ್ಥಿತಿ' (ಸವಿ) 'ವಸ್ತು'ವಿನಲ್ಲಿಯೂ (ಎಂದರೆ ಅರ್ಥದಲ್ಲಿ) ಇರುತ್ತದೆ. ಮಧುವಿನಿಂದ ದುಂಬಿಗಳು ಸೊಕ್ಕೇರುವಂತೆ ಆ ಸವಿಯಿಂದ ಧೀಮಂತರು ಪರವಶರಾಗುತ್ತಾರೆ.]

ಪದ್ಯ ೬೧: ೬೨ನೆಯ ಪದ್ಯದಲ್ಲಿ ವಿವರಿಸಿರುವಂತೆ, 'ಇದು ದಕ್ಷಿಣ ಮಾರ್ಗ ವಿಭೇದದ ಮಧುರರಸ ಪ್ರಯೋಗ; ಆಚಾರ್ಯನ (ಲಾಕ್ಷಣಿಕನ?) ಮನಸ್ಸಿಗೆ ಸಂತೋಷವುಂಟುಮಾಡತಕ್ಕ (ವಚೋ)ವಿತಾನ(ಎಂದರೆ,

ಮಾತಿನ ಹರಹು).' ಈ ಲಕ್ಷ್ಯಪದ್ಯದಲ್ಲಿ ಶರತ್ಕಾಲ ಪ್ರಾರಂಭದ ವರ್ಣನೆಯಿದೆ.

ಶ್ವಸನಪಥ = ವಾಯುಮಾರ್ಗ, ಆಕಾಶ. ಒಸೆಗೆ = ಪ್ರಸನ್ನತೆಯ, ಪ್ರೀತಿಯ, ಕುರುಹು ; ಪ್ರೀತಿಯ ಕೊಡುಗೆ.

ಪದ್ಯ ೬೩ : 'ಇದು ಪ್ರಸಿದ್ಧವಾದ ಉತ್ತರಮಾರ್ಗ ವರ್ಗದ ಸವಿನುಡಿ' (ಪ. ೬೨). ಇದೂ ಶರತ್ಕಾಲದ ವರ್ಣನೆಯೆ.

ಜಳಧರ = ಮೋಡ. ಅವಿಕಳ=ಪರಿಪೂರ್ಣ. ಕುವಳಯ=ನೈದಿಲೆ; ಭೂಮಂಡಲ. ಅವಧಾರಿತ = ಆಧಾರ ; ಆಶ್ರಯ.

ದಕ್ಷಿಣೋತ್ತರ ಮಾರ್ಗಗಳ ಈ ಎರಡು ಲಕ್ಷ್ಯ ಪದ್ಯಗಳಲ್ಲಿಯೂ ಕಿವಿಗೆ ಇಂಪಾಗಿರುವ ವರ್ಣಗಳನ್ನುಳ್ಳ ಪದಗಳ ಜೋಡಣೆಯಿದೆ. (ಮಧುರ ಗುಣವೂ ಸಮಬಂಧದಂತೆಯೇ ಅಕ್ಷರಸಂಯೋಜನೆಯನ್ನು ಅವಲಂಬಿಸಿರತಕ್ಕದ್ದು. ಮೇಲುನೋಟಕ್ಕೆ ಇವೆರಡಕ್ಕೂ ಅಷ್ಟೇನೂ ವ್ಯತ್ಯಾಸ ಕಾಣುವುದಿಲ್ಲ. ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ, 'ಕಿವಿಗೆಡಱು ಬಾರದ್ದು' ಸಮಬಂಧದ ಮುಖ್ಯ ಲಕ್ಷಣವೆಂದೂ, 'ಕಿವಿಗಿನಿದಾಗಿರುವುದು' ಮಧುರ ಗುಣದ ಲಕ್ಷಣವೆಂದೂ ತೋರಿಬರುತ್ತದೆ. 'ಸಮ'ದಲ್ಲಿ ಪ್ರಯತ್ನಪೂರ್ವಕವಾಗಿ ಪರುಷವರ್ಣಗಳನ್ನು ಬಿಡಬೇಕಾಗಿರುವಲ್ಲಿ, 'ಮಧುರ'ದಲ್ಲಿ ಪ್ರಯತ್ನಪೂರ್ವಕವಾಗಿ ಕಿವಿಗಿಂಪಾದ ಪದಗಳನ್ನು ಯೋಜಿಸಬೇಕು). 'ಕಿವಿಗಿನಿದಾಗಿರ್ಪ ವಚನ ವಿರಚನೆ' ಎರಡು ಮಾರ್ಗಗಳಿಗೂ ಸಮಾನಲಕ್ಷಣವಾದರೂ, ಇವೆರಡರ ನಡುವಣ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಿಕೊಳ್ಳಬೇಕು. ಮೊದಲನೆಯ ಲಕ್ಷ್ಯ ಪದ್ಯದಲ್ಲಿ (೬೧) ದಂತ್ಯಾಕ್ಷರಗಳ (ಅದರಲ್ಲಿ ವಿಶೇಷವಾಗಿ 'ಸ') ಪ್ರಾಧಾನ್ಯವನ್ನೂ, ಎರಡನೆಯ ಲಕ್ಷ್ಯಪದ್ಯದಲ್ಲಿ (೬೩) ಕಂಠ್ಯ ಮತ್ತು ಮೂರ್ಧನ್ಯಗಳ (ವಿಶೇಷವಾಗಿ 'ಕ' ಮತ್ತು 'ಳ') ಪ್ರಾಧಾನ್ಯವನ್ನೂ ಕಾಣಬಹುದು ; ಬಿಡಿ ಬಿಡಿಯಾದ ಸ್ಫುಟಾಕ್ಷರ ವಿನ್ಯಾಸವೂ ಉತ್ತರಮಾರ್ಗದ ಇನ್ನೊಂದು ವಿಶೇಷ ಲಕ್ಷಣ.

ದಂಡಿಯು 'ಕಾವ್ಯಾದರ್ಶ'ದಲ್ಲಿ 'ಶ್ರುತ್ಯನುಪ್ರಾಸ'ವು 'ರಸಾವಹ'ವಾಗಿರುವುದೆಂದೂ (ಎಂದರೆ, ಮಾಧುರ್ಯದಿಂದ ಕೂಡಿರುವುದೆಂದೂ) (I-೫೨), ಇದನ್ನು ಗೌಡರು (ಗೌಡರೀತಿಯನ್ನು ಅನುಸರಿಸುವವರು) (= ಔತ್ತರೇಯರು) ಆದರಿಸುವುದಿಲ್ಲವೆಂದೂ ಅವರಿಗೆ ವರ್ಣಾನುಪ್ರಾಸವೇ ಹೆಚ್ಚು ಪ್ರಿಯವೆಂದೂ, ಆದರೆ ವೈದರ್ಭರು (=ದಾಕ್ಷಿಣಾತ್ಯರು) ಶ್ರುತ್ಯನುಪ್ರಾಸವನ್ನು ಪ್ರೀತಿಸುವರೆಂದೂ ಹೇಳಿದ್ದಾನೆ (I-೫೪).

[ಶ್ರುತ್ಯನುಪ್ರಾಸ ಎಂದರೆ, ಏಕಶ್ರುತಿಯ ಅಥವಾ ಒಂದೇ ಸ್ಥಾನದಲ್ಲಿ ಹುಟ್ಟುವ (ಕಂಠ್ಯ, ಮೂರ್ಧನ್ಯ, ತಾಲವ್ಯ, ಇತ್ಯಾದಿ) ವರ್ಣಗಳುಳ್ಳ ಪದಗಳ ಪ್ರಯೋಗ. (I-೫೨).]

ಅಲ್ಲದೆ, 'ಮಾಧುರ್ಯ'ದಲ್ಲಿ ಗ್ರಾಮ್ಯತೆಯ (ಅಸಭ್ಯತೆಯ) ದೋಷವಿರಕೂಡದೆಂಬುದೂ ದಂಡಿಯ ಅಭಿಮತ. ಎಂದಮೇಲೆ 'ಮಾಧುರ್ಯ' ಅರ್ಥನಿಷ್ಠವೂ ಆಗಿರಬೇಕೆಂದಾಯಿತು. ಮಾರ್ಗಕಾರನು ಇದನ್ನು ಸ್ಪಷ್ಟಪಡಿಸಿಲ್ಲ. (ಮುಳಿಯ ತಿಮ್ಮಪ್ಪಯ್ಯನವರು ಎರಡನೆಯ ಲಕ್ಷ್ಯದಲ್ಲಿನ ಅರ್ಥವೈಶಿಷ್ಟ್ಯ ವನ್ನು ಉತ್ತರಮಾರ್ಗದ್ಯೋತಕ ಎಂದು ಸೂಚಿಸಿದ್ದಾರೆ.)

ಪದ್ಯ ೬೪-೬೫ : **ನಿಬಿಡ (ಬಂಧ)** : ವರ್ಣಗಳು ಒಂದನ್ನೊಂದು ಅಗಲದೆ 'ತಗುಳಿ'ಕೊಂಡಿದ್ದರೆ (ಒತ್ತಾಗಿದ್ದರೆ) ಅದು ನಿಬಿಡಬಂಧ. ಇದಕ್ಕೆ ವ್ಯತಿರಿಕ್ತವಾಗಿ, ಅಲ್ಪಪ್ರಾಣಾಕ್ಷರಗಳಿಂದ ಕೂಡಿರುವ ರಚನೆ ಶಿಥಿಲ.

೬೫ನೆಯ ಪದ್ಯದ ಪೂರ್ವಾರ್ಧವು 'ನಿಬಿಡ'ಕ್ಕೂ ಉತ್ತರಾರ್ಧವು 'ಶಿಥಿಲ'ಕ್ಕೂ ಲಕ್ಷ್ಯಗಳು.

ದಂಡಿಯು ಹೇಳಿರುವ 'ಶ್ಲೇಷ'ವನ್ನೆ ಮಾರ್ಗಕಾರನು ನಿಬಿಡವೆಂದಿದ್ದಾನೆ. ನಿಬಿಡಬಂಧವು ಉತ್ತರಮಾರ್ಗೀಯವೆಂದೂ (ಗೌಡ), ಶಿಥಿಲವು ದಕ್ಷಿಣಮಾರ್ಗೀಯವೆಂದೂ ಗ್ರಹಿಸಬೇಕು.

ಸಂಧಿಸಮಾಸಗಳು ಹೆಚ್ಚಾಗಿರುವುದು ನಿಬಿಡದ ಲಕ್ಷಣ. ಇಲ್ಲಿ ಶಿಥಿಲ (ಸಡಿಲ) ಎಂದರೆ ದೋಷಯುಕ್ತ ಎಂದು ತಿಳಿಯಕೂಡದು; ಅದು ಗುಣದ ಇನ್ನೊಂದು ಪ್ರಕಾರವಷ್ಟೆ.

ಪದ್ಯ ೬೬-೬೯: **ಕಾಂತಗುಣ:** ೬೬ನೆಯ ಪದ್ಯದ ಉತ್ತರಾರ್ಧದಲ್ಲಿ, 'ಕಮನೀಯ ಗುಣಮಪ್ಪುದು ನಿಯತಂ ಕಾಂತಂ ಅಭಿಗೀತಾರ್ಥಂ' ಎಂದು ದಕ್ಷಿಣಮಾರ್ಗದ ಕಾಂತಗುಣದ ಲಕ್ಷಣವನ್ನು ತಿಳಿಸಿ, ೬೮ನೆಯ ಪದ್ಯದಲ್ಲಿ 'ಅಸಂಭಾವಿತಾರ್ಥಂ ಉದ್ಧಾಮೋಕ್ತಂ ಉತ್ತರಮಾರ್ಗಗತಾಂತರಂ' ಎಂದು ಔತ್ತರೇಯ 'ಕಾಂತ'ಗುಣವನ್ನು ವಿವರಿಸಿದ್ದಾನೆ. ದಕ್ಷಿಣ ಮಾರ್ಗದ 'ಕಮನೀಯ'ವಾದ (ಮನಸೆಳೆಯುವ) 'ಅಭಿಗೀತಾರ್ಥ'ವೆಂದರೆ, ಪಂಡಿತರಲ್ಲದ ಸಾಮಾನ್ಯರಿಗೂ ಕೂಡ ಹೊಳೆಯುವಂತೆ, ಆಕರ್ಷಕವಾಗಿರುವಂತೆ, ನೇರವಾಗಿ ತಿಳಿಸಿದ 'ಲೋಕಪ್ರಸಿದ್ಧ 'ವಾದ ಅರ್ಥ. ಇದು ದಂಡಿಯ ವಾಕ್ಯದಿಂದ ಸ್ಪಷ್ಟವಾಗುತ್ತದೆ:

> "ಕಾಂತಂ ಸರ್ವಜಗತ್ಕಾಂತಂ ಲೌಕಿಕಾರ್ಥಾನತಿಕ್ರಮಾತ್ |
> ತಚ್ಚವಾರ್ತಾಭಿಧಾನೇಷು ವರ್ಣನಾಸ್ವಪಿ ದೃಶ್ಯತೇ ||"—I, ೮೫.

[ಲೋಕಪ್ರಸಿದ್ಧಾರ್ಥವನ್ನು ಅತಿಕ್ರಮಿಸದೆ ಇರುವುದರಿಂದಾಗಿ 'ಕಾಂತ'ವು ಸರ್ವಜನಕ್ಕೂ ಮನೋಹರವಾಗಿರುವುದು. ಅದು ಲೋಕವಾರ್ತೆಯ ನಿರೂಪಣೆಯಲ್ಲಿ ಮಾತ್ರವಲ್ಲದೆ, ವರ್ಣನೆಗಳಲ್ಲಿಯೂ ಕಂಡುಬರುವುದು.]

ಪದ್ಯ ೬೭ರಲ್ಲಿ ದಕ್ಷಿಣಮಾರ್ಗಕ್ಕೆ ಲಕ್ಷ್ಯವಿದೆ. ಅದು ಮನೆಯಾತನೊಬ್ಬನು ಪೂಜ್ಯ ಅಭ್ಯಾಗತವನ್ನು ಶ್ಲಾಘಿಸುವ ಅರ್ಥವನ್ನೊಳಗೊಂಡಿದೆ. ಅರ್ಥ ವಿವರಣೆ: "ಸೂರ್ಯನ ಕಿರಣಗಳು ಮೋಡದ ನಡುವಣ ತೆರವಿನಲ್ಲೆಲ್ಲಾ ವ್ಯಾಪಿಸಿಕೊಂಡಿದ್ದರೂ ಕೂಡ, ತಮ್ಮನ್ನು ಕಾಣುವಷ್ಟರಲ್ಲಿಯೆ ಹೊರಟುಹೋಗಿ, ನನ್ನ ಮನಸ್ಸನ್ನು ಬಿಗಿವಿಡಿದಿದ್ದ ಕತ್ತಲೆಯ ಕಟ್ಟು ಭಯಪಟ್ಟು ಚೆದರಿತು." ಬಂದಾತನು ಜ್ಞಾನಿಯಾದ್ದರಿಂದ, ಅವನು ಸೂರ್ಯನಿಗಿಂತ ಪ್ರಕಾಶಮಾನನಾಗಿದ್ದು ಮನೆಯನ್ನು ವ್ಯಾಪಿಸಿದ್ದ ಕತ್ತಲೆಯೊಂದಿಗೆ ಮನೆಯಾತನ ಅಜ್ಞಾನವೆಂಬ ಕತ್ತಲೆಯೂ ತೊಲಗಿತೆಂಬ ಅರ್ಥವು ಹೊಳೆಯುತ್ತದೆ.

ಘನ ವಿವರ=(ಶ್ಲೇಷಾರ್ಥ) ಮೋಡಗಳ ನಡುವಣ ತೆರಪು; ಶ್ರೇಷ್ಠವಾದ ಏಕಾಂತ ಸ್ಥಳದ (ಮನೆಯ) ಒಳಭಾಗ (ವಿವರ: A solitary place: Apte). ಧ್ವಾಂತ=ಕತ್ತಲೆ; ಅಜ್ಞಾನವೆಂಬ ಕತ್ತಲೆ. ಅಳಱ್=ಹೆದರು, ಭಯಪಡು ('ಭಯೇ'—ಶ.ಮ.ದ.)

ಪದ್ಯ ೬೮: ಉತ್ತರ ಮಾರ್ಗದ ಕಾಂತಗುಣ: 'ಅಸಂಭಾವಿತಾರ್ಥವುಳ್ಳದ್ದಾಗಿದ್ದು, 'ಉದ್ದಾಮೋಕ್ತ'ವಾಗಿರುವಂಥದು. ಎಂದರೆ ಸಾಮಾನ್ಯ ಜನರು ಸಂಭಾವನೆ ಮಾಡದಂಥ (ಮೆಚ್ಚದಂಥ) ಅರ್ಥವನ್ನು ಹೊಂದಿದ್ದು, 'ಉದ್ದಾಮ' ರೀತಿಯಲ್ಲಿ (ಎಂದರೆ ಘನವಿದ್ವಾಂಸರು ಮೆಚ್ಚುವಂತೆ) ಉಕ್ತವಾಗಿರುವುದು. ಇದೇ ಆಶಯವನ್ನು ದಂಡಿ ಇನ್ನೂ ಸ್ಪಷ್ಟವಾಗಿ ಹೇಳಿರುವನು:

"ಲೋಕಾತೀತ ಇವಾತ್ಯರ್ಥಮಧ್ಯಾರೋಪ್ಯ ವಿವಕ್ಷಿತಃ |
ಯೋऽರ್ಥಸ್ತೇನಾತಿತುಷ್ಯಂತಿ ವಿದಗ್ಧಾ ನೇತರೇ ಜನಾಃ ||" —I, ೮೯

[ಲೋಕಾತೀತವಾಗಿದ್ದು ಅಧ್ಯಾರೋಪಗಳನ್ನು ಅಪೇಕ್ಷಿಸುವಂತಹ ಅತ್ಯುಕ್ತಿಯ ಅರ್ಥದಿಂದ ವಿದ್ವಾಂಸರು ಸಂತೋಷಪಡುವರೇ ಹೊರತು ಇತರ ಜನರಲ್ಲ.]

ಪದ್ಯ ೬೯: ಉತ್ತರ ಮಾರ್ಗದ 'ಕಾಂತ'ಕ್ಕೆ ಲಕ್ಷ್ಯ; ಪದ್ಯದ ಅರ್ಥ ವಿವರಣೆ: "ಪ್ರಕಾಶಮಾನವಾದ ತಮ್ಮ ಆಗಮನವೆಂಬ ಜಲಧಾರೆಗಳು (ಮಳೆ) ನನ್ನ ಒಳಗಿನ ಕೊಳೆಯೆಲ್ಲವನ್ನೂ ಏನೂ ಉಳಿಯದಂತೆ ತೊಳೆಯಲು, ನಾನು ಲೋಕಕ್ಕೆಲ್ಲ ಪವಿತ್ರವಾದ ನಡತೆಯುಳ್ಳವನಾದೆನು." (ತಮ್ಮ ಆಗಮನಮಾತ್ರದಿಂದ್ಯನಾನು ಪವಿತ್ರನಾದೆ— ಎಂದು ತಾತ್ಪರ್ಯ).

ಕಾಂತಗುಣವು ಪದಬಂಧದ ರೀತಿಯನ್ನು ಅವಲಂಬಿಸಿರುವುದು ಮಾತ್ರವಲ್ಲದೆ, ಅರ್ಥನಿಷ್ಠವೂ ಆಗಿದೆಯೆಂಬುದನ್ನು ಗಮನಿಸಬೇಕು. ಮೊದಲನೆಯ ಲಕ್ಷ್ಯದಲ್ಲಿ, ಅಭ್ಯಾಗತನನ್ನು ಸೂರ್ಯನಿಗೆ ಹೋಲಿಸಿರುವುದು ಲೋಕಪ್ರಸಿದ್ಧವಾಗಿರುವುದಲ್ಲದೆ ಹೇಳಿರುವ ರೀತಿಯೂ ಸ್ಪಷ್ಟವಾಗಿದೆ. ಎರಡನೆಯ ಲಕ್ಷ್ಯ ಪದ್ಯದಲ್ಲಿ ಅಭ್ಯಾಗತನ ಆಗಮನ

ವನ್ನು 'ಜಲ ಧಾರೆ'ಗಳೆಂದೂ ಅವು 'ಅಂತರ್ಮಲ'ವನ್ನು ತೊಳೆಯುವುವೆಂದೂ ರೂಪಕಮಾಡಿರುವುದು 'ಅಸಂಭಾವಿತ'; ಅಲ್ಲದೆ, 'ಭವದಭಾಗ್ಯಮ', 'ಮದಂತರ್ಮಲ', 'ಚರಿತನೆನ್' (ಚರಿತನ್+ಎನ್=ಚರಿತನಾಗಿದ್ದೇನೆ), ಮುಂತಾದ ಪ್ರಯೋಗಗಳು 'ಉದ್ವಾವೋಕ್ತ' ಗಳು ಎಂದರೆ ಪಂಡಿತಪ್ರಿಯವಾದವು.

ಪದ್ಯ ೭೦-೭೨: **ಸುಕುಮಾರ ಗುಣ:** 'ಸುಕುಮಾರವಾದ (ಕೋಮಲ, ಕರ್ಕಶವಲ್ಲದ) ಅಕ್ಷರಗಳಿಂದಲೂ ಪದಗಳಿಂದಲೂ ವಿಶಿಷ್ಟವಾದ ಪ್ರಯೋಗವು (ಬಂಧವು) ಸುಕುಮಾರವೆನಿಸುವುದು.' ೭೨ನೆಯ ಲಕ್ಷ್ಯ ಪದ್ಯದಲ್ಲಿ, ಮ, ಳ, ನ—ಈ ಕೋಮಲ ವರ್ಣಗಳ ಪ್ರಾಚುರ್ಯವನ್ನು ಕಾಣಬಹುದು. (ಎಲ್ಲ ವರ್ಣಗಳೂ ಕೋಮಲವಾದರೆ ಬಂಧದಲ್ಲಿ ಶೈಥಿಲ್ಯದೋಷವುಂಟಾಗುವುದೆಂದು ದಂಡಿ ಎಚ್ಚರಿಸಿದ್ದಾನೆ.—ಕಾವ್ಯಾದರ್ಶ, I, ೬೯). ಇದು ದಕ್ಷಿಣ ಮಾರ್ಗಕ್ಕೆ ಲಕ್ಷ್ಯ. ಇದಕ್ಕೆ ವಿಪರ್ಯಯವಾಗಿ 'ನಿಷ್ಠುರ'ವಾದ (ಕರ್ಕಶವಾದ) ವಿವಿಧಾಕ್ಷರಗಳನ್ನು ಬಳಸುವುದು ಉತ್ತರ ಮಾರ್ಗದ ರೀತಿ; ೭೨ನೆಯ ಪದ್ಯದ ಉತ್ತರಾರ್ಧವು ಇದಕ್ಕೆ ನಿದರ್ಶನ. ಇದರಲ್ಲಿ, ತ್ರಿ-ಶಾ-ಶ್ವರ-ತ್ಯ-ತ್ಯು-ರ್ಥ-ದ್ರ, ಈ ಕರ್ಕಶ ವರ್ಣಗಳ ಪ್ರಾಚುರ್ಯವನ್ನು ಕಾಣಬಹುದು; ಅಲ್ಲದೆ, ತ್ರಿದಶ+ಅಧೀಶ್ವರ+ಭೂತಿ+ಅತಿ+ಉದಾರ, ವಿವಿಧ+ಅರ್ಥ+ವಿಭವನ್—ಎಂಬೀ ದೀರ್ಘ ಸಮಾಸಗಳನ್ನೂ ಗಮನಿಸಬಹುದು.

ತೊಳಪ (ತೊಳಗುವ)=ಹೊಳೆಯುವ. ಎಳವೆಱ=ಬಾಲಚಂದ್ರ. ಅಳಿಕುಳ=ದುಂಬಿವಿಂಡು. ಎಸಪ (ಎಸಗುವ)=ಬೀಸುವ, ತೀಡುವ. ಕಳಿಕಾಂಕುರ=ಮೊಗ್ಗಿನ ತುದಿ. ಚೂತತತಿ=ಮಾವಿನ ಮರಗಳ ಗುಂಪು.

ಪದ್ಯ ೭೩-೭೭: **ಸಮಾಹಿತ ಗುಣ:** 'ಒಂದಱ' (ಒಂದು ಪದಾರ್ಥದ, ಎಂದರೆ ಅದಕ್ಕೆ ಸಂಬಂಧಪಟ್ಟ) ಮಾತುಗಳನ್ನು

'ಪೆಱತೊಂದಱೊಳ್' (ಇನ್ನೊಂದು ಪದಾರ್ಥದಲ್ಲಿ) 'ಅಱಿದು ಇಟ್ಟು ಕೂಡೆ ಪೇೞ್ದೊಡೆ' ('ಉದ್ದೇಶಪೂರ್ವಕವಾಗಿ ಆರೋಪಿಸಿ ಹೊಂದುವಂತೆ ಹೇಳಿದರೆ) ಅದು ಸಮಾಹಿತವೆನಿಸುವುದು. ಇದನ್ನೇ ದಂಡಿ 'ಸಮಾಧಿ'ಯೆಂದಿದ್ದಾನೆ:

"ಅನ್ಯಧರ್ಮಸ್ತತೋಽನ್ಯತ್ರ ಲೋಕಸೀಮಾನುರೋಧಿನಾ |
ಸಮ್ಯಗಾಧೀಯತೇ ಯತ್ರ ಸ ಸಮಾಧಿಃ ಸ್ಮೃತೋ ಯಥಾ ||"

—I, ೯೩.

[ಲೋಕಮರ್ಯಾದೆಯನ್ನು ಮೀರದೆ ಒಂದರ ಧರ್ಮವನ್ನು ಇನ್ನೊಂದಕ್ಕೆ ಚೆನ್ನಾಗಿ ಆರೋಪಿಸುವುದೇ ಸಮಾಧಿ. ('ಲೋಕಸೀಮಾನುರೋಧಿನಾ' ಎಂಬ ಮಾತಿನ ಆಶಯವನ್ನು 'ಅಱಿದು' ಎಂಬ ಒಂದು ಚಿಕ್ಕ ಮಾತಿನಿಂದಲೂ, 'ಸಮ್ಯಕ್ ಆಧೀಯತೇ' ಎಂಬ ಮಾತುಗಳನ್ನು 'ಇಟ್ಟು ಕೂಡೆ ಪೇೞ್ದೊಡೆ' ಎಂಬ ಮಾತುಗಳಿಂದಲೂ ಅನುವಾದಿಸಿರುವ ಮಾರ್ಗಕಾರನ ಅಚ್ಚಗನ್ನಡದ ಬಗೆ ಮೆಚ್ಚುವಂತಿದೆ).]

ಪದ್ಯ ೭೪ 'ಸಮಾಹಿತ'ಕ್ಕೆ ಲಕ್ಷ್ಯ; ಇದರ ತಾತ್ಪರ್ಯ: 'ಕನ್ನೈದಿಲೆಗಳು ಮುಚ್ಚಿಕೊಳ್ಳುತ್ತಿರಲು (ಬಾಡುತ್ತಿರಲು), ಸಂಧ್ಯೆಯಿಂದ ಕೂಡಿಕೊಂಡಿರುವವನೂ, ಅರಳುತ್ತಿರುವ ಕಮಲಗಳೆಂಬ ಲಕ್ಷ್ಮಿಗೆ ಒಡೆಯನೂ, ಕತ್ತಲೆಯನ್ನು ಸಂಹಾರ ಮಾಡಿದವನೂ ಆದ ಸೂರ್ಯನು ಉದಯಿಸಿದನು.' ೭೫ನೆಯ ಪದ್ಯದಲ್ಲಿ, 'ವಿನಿಮೀಳಾದಿಗಳ್' ಎಂದರೆ (೭೪ನೆಯ ಪದ್ಯದಲ್ಲಿರುವ) 'ವಿನಿಮೀಳಿತ' (=ರೆಪ್ಪೆ ಮುಚ್ಚಿದ), 'ಉನ್ಮೀಲ' (=ರೆಪ್ಪೆ ತೆರೆದ), 'ವಿನಿಹತ' (=ಸಂಹಾರ ಮಾಡಲ್ಪಟ್ಟ), 'ಆಶ್ಲೇಷಂ' (=ಆಲಿಂಗನ, ಕೂಡಿಕೊಂಡಿರುವುದು) —ಮುಂತಾದ 'ಲೋಚನಾದಿಧರ್ಮ'ಗಳನ್ನು (ಕಣ್ಣು ಮುಂತಾದವುಗಳ ಸಹಜ ಕ್ರಿಯೆಗಳನ್ನು) ಕನ್ನೈದಿಲೆ, ಮುಂತಾದವುಗಳಲ್ಲಿ 'ನೆನೆದು' (ಆರೋಪಿಸಿ) ಹೇಳುವುದು 'ಸಮಾಹಿತಾಲಂಕಾರ'ವೆನಿಸುವುದು—ಎಂದು ಲಕ್ಷ್ಯ ಪದ್ಯಕ್ಕೆ ವಿವರಣೆಯಿತ್ತಿದ್ದಾನೆ.

[ಇಲ್ಲಿ, 'ಸಮಾಹಿತಾಲಂಕಾರ' ಎಂದರೆ, ಒಂದು 'ಅರ್ಥಾಲಂಕಾರ'ದ ಪ್ರಕಾರ ಎಂದು ಮಾರ್ಗಕಾರನು ಉದ್ದೇಶಿಸಿರಲಾರ ಎಂದು ತೋರುತ್ತದೆ.

ಏಕೆಂದರೆ, ಮುಂದೆ ಅವನು 'ಸಮಾಹಿತಾಲಂಕಾರ'ವನ್ನು ಅರ್ಥಾಲಂಕಾರದ ಪ್ರಕರಣದಲ್ಲಿ (ನೋಡಿ: III-೧೨೩) ಪ್ರತ್ಯೇಕವಾಗಿ ವಿವೇಚಿಸಿದ್ದಾನೆ. ಆ ಸಮಾಹಿತಾಲಂಕಾರದ ಲಕ್ಷಣ ಬೇರೆಯಾದರೂ, ಈ 'ಸಮಾಹಿತಗುಣ'ದಲ್ಲಿ ಅರ್ಥಾಲಂಕಾರದ ಸೊಬಗೆಲ್ಲ ಇರುವುದರಿಂದ, ಇದನ್ನು ಮಾರ್ಗಕಾರನು ಕಾವ್ಯಕ್ಕೆ ಅಲಂಕಾರಪ್ರಾಯವಾಗುವುದು ಎಂದು ಉದ್ದೇಶಿಸಿರಬಹುದು ಎಂದು ತಿಳಿದರೆ ತಪ್ಪಾಗದು.]

'ಸಮಾಹಿತ' ಗುಣದ ಇನ್ನೊಂದು ಲಕ್ಷ್ಯ ಪದ್ಯ (೭೬): ಈ ಪದ್ಯದಲ್ಲಿಯೂ ಹಿಂದಿನ ಪದ್ಯದ 'ವಿನಿಹತ', 'ವಿನಿಮೀಳಿತ' ಮುಂತಾದ ಪದಗಳೇ ಪ್ರಯೋಗವಾಗಿದ್ದರೂ ಇವು ವಾಚ್ಯಾರ್ಥ ವನ್ನು ಮಾತ್ರ ತಿಳಿಸುತ್ತಿದ್ದು, ಒಂದರ ಧರ್ಮವನ್ನು ಇನ್ನೊಂದಕ್ಕೆ ಅಧ್ಯಾರೋಪಣೆ ಮಾಡುತ್ತಿಲ್ಲ. ೭೭ನೆಯ ಪದ್ಯದ ಪೂರ್ವಾರ್ಧದಲ್ಲಿ, 'ಈ ಕುಱುಪುಗಳಿಂದ ಅನೇಕ ಪದಪ್ರಯೋಗಾಂತರ'ವನ್ನು ಅರಿವು ದೆಂದು ತಿಳಿಸಿರುವುದರಿಂದ, ಈ ಗುಣವೂ ಶಬ್ದನಿಷ್ಠ ಎಂಬುದು ಸ್ಪಷ್ಟ. ಆದರೆ, ಮೊದಲ ಲಕ್ಷ್ಯಪದ್ಯದಲ್ಲಿ (೭೫) ಅರ್ಥದ 'ಕೊಂಕು' (ವಕ್ರತೆ) ಇರುವುದರಿಂದ ಅದು ಉತ್ತರ ಮಾರ್ಗೀಯ ವೆಂದೂ ವಾಚ್ಯಾರ್ಥ ಪ್ರಧಾನವಾದದ್ದು ದಕ್ಷಿಣ ಮಾರ್ಗೀಯ ವೆಂದೂ ಭಾವಿಸಬಹುದು. ಆದರೆ, ಎರಡನೆಯ ಲಕ್ಷ್ಯದಲ್ಲಿ ಧರ್ಮದ ಅಧ್ಯಾರೋಪವೇ ಇಲ್ಲದಿರುವುದರಿಂದ ಇದು ಲಕ್ಷಣಕ್ಕೆ ಅನುಗುಣ ವಾಗಿರುವಂತೆ ಕಾಣುವುದಿಲ್ಲ. ದಂಡಿ ಧರ್ಮಗಳ ಅಧ್ಯಾರೋಪಕ್ಕೆ ಸಂಬಂಧಪಟ್ಟಂತೆ 'ಅನೇಕ ಪದಪ್ರಯೋಗಾಂತರ'ವನ್ನು ಉದಾ ಹರಿಸಿ (ನೋಡಿ: ಕಾವ್ಯಾದರ್ಶ; I, ೯೪-೯೯), 'ಈ ಸಮಾಧಿ (ಸಮಾಹಿತ) ಯೆಂಬ ಗುಣವು ಕಾವ್ಯಸರ್ವಸ್ವ. ಕವಿಗಳೆಲ್ಲರೂ ಇದನ್ನು ಆಶ್ರಯಿಸುತ್ತಾರೆ' (I-೧೦೦) ಎಂದಿದ್ದಾನೆ.

ಪದ್ಯ ೭೭-೭೮: **ಪ್ರಸನ್ನಗುಣ:** 'ಲೋಕಪ್ರಸಿದ್ಧವಾದ ಅರ್ಥವನ್ನು ಸುಂದರವಾಗಿ ಸುಲಭವಾಗಿ ತಿಳಿಸುವ ವಿವೇಕದ ಮಾತುಗಾರಿಕೆ'ಯೆ ಪ್ರಸನ್ನ. 'ಶರತ್ಕಾಲದ ನಿರ್ಮಲವಾದ ಆಕಾಶದಲ್ಲಿ ಚಂದ್ರ ಮೆರೆಯು ತ್ತಿತ್ತು' ಎಂಬುದನ್ನು ಲಕ್ಷ್ಯ ಪದ್ಯದ (ಪ. ೭೮) ಪೂರ್ವಾರ್ಧದಲ್ಲಿ

ನೇರವಾದ ಸ್ಪಷ್ಟೋಕ್ತಿಗಳಿಂದ (ದಾಕ್ಷಿಣಾತ್ಯ ಮಾರ್ಗದಲ್ಲಿ) ತಿಳಿಸಿದ್ದರೆ, ಉತ್ತರಾರ್ಧದಲ್ಲಿ ಅದೇ ಪ್ರಸಿದ್ಧಾರ್ಥವನ್ನು ಕ್ಲಿಷ್ಟವಾದ ಶಬ್ದಗಳಿಂದ (ಔತ್ತರೇಯ ಮಾರ್ಗದಲ್ಲಿ) ಹೇಳಿದೆ. 'ವ್ಯುತ್ಪನ್ನಮಿತಿ ಗೌಡೀಯೈರ್ನಾತಿ ರೂಢಮಪೀಷ್ಯತೇ' ('ವ್ಯಾಕರಣ ಪಾಂಡಿತ್ಯವನ್ನು ಪ್ರದರ್ಶಿಸುವ ಅತಿರೂಢವಲ್ಲದ ಶಬ್ದಗಳು ಗೌಡೀಯರಿಗೆ ಪ್ರಿಯ ')ಎಂದು ದಂಡಿ (I, ೪೬) ಸ್ಪಷ್ಟವಾಗಿ ಹೇಳಿರುವಂತೆ ಮಾರ್ಗಕಾರನು ಉತ್ತರ ಮಾರ್ಗದ ವಿಶೇಷ ಲಕ್ಷಣವನ್ನು ತಿಳಿಸದಿದ್ದರೂ, ಲಕ್ಷ್ಯದಲ್ಲಿ ಬಳಸಿರುವ ಮಾತುಗಳಿಂದ (ಉದಾ., ಶರತ್=ವರ್ಷಾಂತ ಸಮಯ, ಹಿಮಕರಂ=ಉಷ್ಣೇತರ ಕಿರಣಂ) ಅವನ ಆಶಯವು ಸ್ಪಷ್ಟವಾಗುವಂತಿದೆ.

[ದಂಡಿಯ 'ಪ್ರಸಾದಗುಣ'ವನ್ನೆ ಇಲ್ಲಿ 'ಪ್ರಸನ್ನ' ಎಂದು ಕರೆದಿದೆ. ಎಲ್ಲರಿಗೂ ತಿಳಿಯುವಂತಿರುವುದೇ ಪ್ರಸನ್ನತೆ ಅಥವಾ ಪ್ರಸಾದಗುಣ. 'ಪ್ರತೀತಿ ಸುಭಗಂ ವಚಃ' ('ಎಲ್ಲರಿಗೂ ತಿಳಿಯುವಂತಿರುವ ಮಾತುಗಳು') ಎಂಬುದನ್ನೆ ಮಾರ್ಗಕಾರನು 'ಲೋಕಪ್ರತೀತ ಸುಭಗ ವಿವೇಕಾಳಾಪಂ' ಎಂದು ಅನುವಾದಿಸಿದ್ದಾನೆ.]

ಪದ್ಯ ೭೯-೮೦ : **ಉದಾರ:** ತಾತ್ಪರ್ಯ: "ಒಂದು ವಸ್ತುವಿನಲ್ಲಿ ಅಡಗಿರುವ ಅದರ ನೈಜಸ್ವಭಾವವನ್ನು ಪರಿಭಾವಿಸಿ ಅದನ್ನು 'ಅಗ್ಗಳನಾಗೆ' (ಅತಿಶಯವಾಗುವಂತೆ) ನಿರೂಪಿಸಿದರೆ ಅದು ಉದಾರಗುಣ. ವಿಚಾರ ಮಾಡಿದಲ್ಲಿ, ಕಾವ್ಯದ ಪದವಿಯ 'ನೆಗೞ್ತೆಗೆ' (ಕೀರ್ತಿಗೆ, ಮೇಲ್ಮೆಗೆ) ಅದು ಅಗತ್ಯ ಕಾರಣ. ಅದರ ರೀತಿ ಹೀಗೆ."

ಈ ಗುಣವನ್ನು ದಂಡಿ ಹೀಗೆ ವಿವರಿಸಿದ್ದಾನೆ:

"ಉತ್ಕರ್ಷವಾನ್ ಗುಣಃ ಕಶ್ಚಿದ್ಯಸ್ಮಿನ್ನುಕ್ತೇ ಪ್ರತೀಯತೇ |
ತದುದಾರಾಹ್ವಯಂ ತೇನ ಸನಾಥಾ ಕಾವ್ಯಪದ್ಧತಿಃ ||"

—ಕಾವ್ಯಾದರ್ಶ, I-೭೬

[ಯಾವುದನ್ನು ಹೇಳುವುದರಿಂದ ಉತ್ಕರ್ಷ ಹೊಂದಿದ ಗುಣವು ಪ್ರತೀತವಾಗುವುದೊ ಅದು ಉದಾರ. ಕಾವ್ಯಪದ್ಧತಿಯು ಇದರಿಂದ (ನಾಥನುಳ್ಳ ಪತಿಯಂತೆ) ಮಾನ್ಯವಾಗುತ್ತದೆ.]

ದಂಡಿಯ ಆಶಯವನ್ನು ಮಾರ್ಗಕಾರನು ವಿವರಿಸಿ ಹೇಳಿದ್ದಾನೆ. ಮಾತ್ರವಲ್ಲ; ದಂಡಿಯ ಪ್ರಕಾರ, ಗುಣೋತ್ಕರ್ಷವನ್ನು ಅಥವಾ ಗುಣಾತಿಶಯವನ್ನು ಹೇಳುವುದಷ್ಟೆ 'ಉದಾರತ್ವ'; ಮಾರ್ಗಕಾರನ ಮೇರೆಗೆ, 'ಇರುವ ಗುಣವನ್ನು ಆತಿಶಯ ಮಾಡಿ ಹೇಳುವುದು' ಉದಾರ ಗುಣ. ಈ ಸೂಕ್ಷ್ಮ ವ್ಯತ್ಯಾಸವನ್ನು ಗಮನಿಸಬೇಕು.

['ಎಲೈ ದೇವನೆ, ಬೇಡುವವರ ದೀನ ದೃಷ್ಟಿಯು ಅದೊಮ್ಮೆ ನಿನ್ನ ಮುಖದ ಮೇಲೆ ಬಿದ್ದರೆ ಸಾಕು, ಮತ್ತೆ ಅದೇ ರೀತಿ ಬೇರೆ ಯಾರ ಮುಖವನ್ನೂ ನೋಡು ವುದಿಲ್ಲ.'—ಇದು ದಂಡಿಯ ಲಕ್ಷ್ಯದ ತಾತ್ಪರ್ಯ. ಇಲ್ಲಿ, ದಂಡಿಯೇ ವಿವರಿಸಿರು ವಂತೆ, ರಾಜನ ತ್ಯಾಗಗುಣದ ಉತ್ಕರ್ಷವು ಸೂಚಿತವಾಗಿದೆ.]

ಮಾರ್ಗಕಾರನ ಲಕ್ಷ್ಯ ಪದ್ಯದ (೮೦) ತಾತ್ಪರ್ಯ: 'ನಿನ್ನಂತಹ ಉದಾರ ಪುರುಷೋತ್ತಮರು ಯಾರಿದ್ದಾರೆ? ಹಗೆಗಳ ಸಮೂಹ ವನ್ನು ಕೊಂದಿದ್ದರೂ ಕೂಡ, ಅವರು ದೇವತಾ ಸ್ತ್ರೀಯರರೊಂದಿಗೆ ಕ್ರೀಡೆಯಾಡುತ್ತ, ಅವರ ಆಲಿಂಗನದಿಂದ ಮೊದಲಾಗುವ ಸಂಭೋಗ ಸುಖದಲ್ಲಿ ಅವರನ್ನು ನೆಲೆಗೊಳಿಸಿದ್ದೀಯೆ.'[29]

ಲಕ್ಷ್ಯದಲ್ಲಿ ಉಕ್ತನಾದ ರಾಜನಲ್ಲಿ ಉದಾರತ್ವವು ಅವನ ಸ್ವಾಭಾ ವಿಕ ಗುಣ. ಹಗೆಗಳನ್ನು ಕೊಂದಮೇಲೂ ಅವರಲ್ಲಿ ಉದಾರತ್ವವನ್ನು ಮೆರೆದನೆಂದು ವರ್ಣಿಸಿರುವುದು ಅವನ ಗುಣವನ್ನು ಅತಿಶಯಿಸಿ ಹೇಳಿದಂತಾಗಿದೆ.

---

29 ದಿ| ಮುಳಿಯ ತಿಮ್ಮಪ್ಪಯ್ಯನವರು ಸೂಚಿಸಿರುವಂತೆ, "ವೆಂಗಿರಾಜಾದಿಗಳನ್ನು ನಿರ್ಣಾಮವೆಸಗಿದ 'ಪುರುಷೋತ್ತಮ', 'ಉದಾರ' ಮೊದಲಾದ ಬಿರುದು ಗಳುಳ್ಳ ಅಮೋಘವರ್ಷನ (ಕವಿಯ ಆಶ್ರಯದಾತನಾದ ನೃಪತುಂಗನ) ಮಹಿಮೆಯೇ ಈ ಪದ್ಯದಲ್ಲಿ ವರ್ಣಿತವಾಗಿರುವಂತಿದೆ" ಎಂದು ಊಹಿಸಬಹುದು.

ಈ ಉದಾರ ಗುಣವು ಬಂಧಗತವಾಗಿರದೆ ಅರ್ಥಗತವಾಗಿರುವುದೂ ಗಮ ನಾರ್ಹ. ಆದ್ದರಿಂದ, 'ವಸ್ತುಗತ ಸ್ಥಿತಿಯನ್ನು ಅತಿಶಯ ಮಾಡಿ ಹೇಳುವ ಈ ಉದಾರ ಗುಣದಿಂದಲೇ ನಾಲ್ಕು ಅರ್ಥಾಲಂಕಾರ ಭೇದಗಳೊಳಗೆ ಪ್ರಮುಖ ವಾದ 'ಅತಿಶಯೋಕ್ತಿ' ಜನಿಸಿರಬೇಕು. ಮಾತ್ರವಲ್ಲ, ಇದರಿಂದಲೇ ಉದಾ ತ್ತಾಲಂಕಾರವೂ (ಕ. ರಾ. ಮಾ., III, ೧೭೩) ಉಂಟಾಗಿರಬೇಕು'—ಎಂದು ಮುಳಿಯ ತಿಮ್ಮಪ್ಪಯ್ಯನವರ ಮತ. (ಕ. ರಾ. ವಿವೇಕ-೨)

ಅಗ್ಗಳ=ಶ್ರೇಷ್ಠತೆ, ಅತಿಶಯ. ನೆಗೞ್ತೆ = ಖ್ಯಾತಿ; ಗೈಮೆ. ಪಾಂಗು=ರೀತಿ, ಬಗೆ. ಅರಾತಿ=ಹಗೆ. ಪರಿರಂಭ=ಆಲಿಂಗನ. ನಿಱಿಪರ್=ನೆಲೆಗೊಳಿಸುವವರು, ಸ್ಥಾಪಿಸುವವರು (ಧಾ., ನಿಱಿಸು).

ಪದ್ಯ ೮೧: ಮೇಲಿನದು ದಕ್ಷಿಣ ಮಾರ್ಗದ ಉದಾರಗುಣವೆಂದು ಹೇಳಿ, 'ಉದೀಚ್ಯದ ಉರು ವಿಶೇಷಣಯುತಮಪ್ಪುದಂ . . . ಒಲ್ವರ್' ('ಉತ್ತರ ಮಾರ್ಗದ ಶ್ರೇಷ್ಠವಾದ ವಿಶೇಷಣಗಳಿಂದ ಕೂಡಿರುವ ನಿರೂಪಣೆಯನ್ನು ಕೆಲವರು ಇಷ್ಟಪಡುವರು.') ಎಂದು ಉದೀಚ್ಯ (ಉತ್ತರ) ಮಾರ್ಗದ ಉದಾರಗುಣವನ್ನು ತಿಳಿಸಿದ್ದಾನೆ.

ದಂಡಿಯು ಇದನ್ನು 'ಗೌಡೀಯ' ಎಂದು ಸ್ಪಷ್ಟವಾಗಿ ತಿಳಿಸದೆ, ಹೀಗೆ ಹೇಳಿದ್ದಾನೆ:

"ಶ್ಲಾಘ್ಯೈರ್ವಿಶೇಷಣೈರ್ಯುಕ್ತಮುದಾರಂ ಕೈಶ್ಚಿದಿಷ್ಯತೇ |
ಯಥಾ ಲೀಲಾಂಬುಜ ಕ್ರೀಡಾಸರೋ ಹೇಮಾಂಗದಾದಯಃ ||"

—I, ೭೯.

[ಶ್ಲಾಘ್ಯವಾದ ವಿಶೇಷಣಗಳಿಂದ ಕೂಡಿರುವುದು ಉದಾರವೆಂದು ಕೆಲವರು ಇಚ್ಛಿಸುತ್ತಾರೆ ('ಒಲ್ವರ್'). ಹೇಗೆಂದರೆ, 'ಲೀಲಾಂಬುಜ', 'ಕ್ರೀಡಾಸರ', 'ಹೇಮಾಂಗದ' ಇತ್ಯಾದಿ ರೀತಿಯಲ್ಲಿ.]

ಮಾರ್ಗಕಾರನು, ಲೀಲಾಂಬುಜ (ವಿನೋದಕ್ಕಾಗಿ ಇಟ್ಟುಕೊಳ್ಳುವ, ಆಟವಾಡುವ, ತಾವರೆ), ಹೇಮಾಂಗದ (ಚಿನ್ನದ ತೋಳ್ಬಂದಿ) ಎಂಬ ದಂಡಿಯ ಉದಾಹರಣೋಕ್ತಿಗಳನ್ನೇ ಇಟ್ಟುಕೊಂಡಿದ್ದಾನೆ.[30]

---

30 'ಲೀಲಾಂಬುಜ': ಮದ್ರಾಸು ಮುದ್ರಣದ ಸಂಪಾದಕರು 'ನೀಲಾಂಬುಜ' ಎಂಬ ಪಾಠವನ್ನು ಇಟ್ಟುಕೊಂಡಿದ್ದಾರೆ. ಮೂಲಶ್ಲೋಕವನ್ನು ಗಮನಿಸಿದರೆ, ನಾವು ಸ್ವೀಕರಿಸಿರುವ ಪಾಠಕರ ಪಾಠವೇ ಸರಿಯೆಂಬುದು ಸುಸ್ಪಷ್ಟ.

'ವಿಚಿತ್ರಚಿತ್ರಾಧಿಕಮಂ' ಎಂಬೆಡೆಯಲ್ಲಿ ಮಾತ್ರ ಸ್ವಲ್ಪ ಕ್ಲೇಶವಿದೆ. ಮೂಲದ 'ಕ್ರೀಡಾಸರ' ಎಂಬ ನಿದರ್ಶನವನ್ನು ಬಿಟ್ಟು ಅದರೆಡೆಯಲ್ಲಿ 'ವಿಚಿತ್ರಚಿತ್ರ' ಎಂದು ಇಟ್ಟುಕೊಂಡಿದ್ದಾನೆಯೆ? ಹಾಗಿರಬಹುದೆಂದು ಭಾವಿಸಿ, 'ವಿಚಿತ್ರ

ಪದ್ಯ ೮೨-೮೪: **ಪ್ರಮಿತ ಗ್ರಾಮ್ಯೋಕ್ತಿ :** (ಪ. ೮೨) 'ಗೋಪಾಲಕರು (ಗೋವಳಿಗರು, ಗೊಲ್ಲರು), ಹುಡುಗರು, ಸ್ತ್ರೀಲೋಲುಪರು, ಜೂಜುಕೋರರು (ಕಿತವ), ಬಾಹ್ಲೀಕರು (?) - ಮುಂತಾದವರ ವ್ಯಾಪಾರಗಳು ಗ್ರಾಮ್ಯಾಳಾಪಗಳು, ಎಂದರೆ ಹಳ್ಳಿಗಾಡಿನ ಅಸಂಸ್ಕೃತ ಮಾತುಕತೆಯಿಂದ ಕೂಡಿರುತ್ತವೆ. ಆದ್ದರಿಂದ, ಎರಡು ಮಾರ್ಗಗಳಲ್ಲಿಯೂ ಅವುಗಳನ್ನು ವರ್ಜಿಸಬೇಕು. (ಪ. ೮೩) ಇದು 'ಗ್ರಾಮ್ಯೋಕ್ತಿ' ಯನ್ನು ವಿಶದಪಡಿಸುವ ಲಕ್ಷ್ಯಪದ್ಯ. ಇಲ್ಲಿ 'ಶ್ರುತ ದುಷ್ಟ' ವಾದ ಅಥವಾ 'ಅರ್ಥದುಷ್ಟ' ವಾದ ಗ್ರಾಮ್ಯ (ಅಸಭ್ಯ) ಪದಗಳನ್ನು ಬಳಸಿಲ್ಲ. ಹಳ್ಳಿಗಾಡಿನ ಹೆಂಗಸೊಬ್ಬಳು ತನ್ನ ನಲ್ಲನನ್ನು ನೆನೆನೆನೆದು ಹಲುಬುವುದನ್ನು ಇದರಲ್ಲಿ ವರ್ಣಿಸಿದೆ. ಅಸಭ್ಯವಲ್ಲ ದಿದ್ದರೂ ಅರ್ಥಸೌಂದರ್ಯವಿಲ್ಲದ 'ವಾಚಾಳ'ತ್ವದ ಈ ಬಗೆಯ 'ಗ್ರಾಮ್ಯಾಳಾಪ'ವು ದೇಸಿಗಬ್ಬದಲ್ಲಿ ಪ್ರಯೋಗಾರ್ಹವಾದರೂ 'ಮಾರ್ಗ' ಕಾವ್ಯದಲ್ಲಿ ದೋಷವೆ ಎನಿಸುವುದೆಂದು ಮಾರ್ಗಕಾರನ ಅಭಿಪ್ರಾಯ. (ಆದರೂ, ದೋಷಪ್ರಕರಣದಲ್ಲಿ 'ಗ್ರಾಮ್ಯೋಕ್ತಿ'

ಚಿತ್ರ'='ಆಶ್ಚರ್ಯಕರವಾದ ಚಿತ್ರ' ಎಂದು ಮುಳಿಯ ತಿಮ್ಮಪ್ಪಯ್ಯನವರು ಅರ್ಥೈಸಿದ್ದಾರೆ. 'ಅಧಿಕಮಂ' ಎಂಬ ಉಳಿದ ಮಾತಿನ ಅನ್ವಯ ಹೇಗೆ? 'ವಿಚಿತ್ರ ಚಿತ್ರಾಧಿಕಮಂ' ಎಂಬುದನ್ನು '—ಚಿತ್ರಾದಿಕಮಂ' ಎಂದು ತಿದ್ದಿ ಕೊಂಡು, 'ಹೇಮಾಂಗದ, ಲೀಲಾಂಬುಜ, ವಿಚಿತ್ರ ಚಿತ್ರ, ಇವೇ ಮೊದಲಾ ದುವನ್ನು' (ಮೂಲದಲ್ಲಿಯೂ 'ಆದಯಃ' ಎಂದಿದೆ) ಎಂದು ಅನ್ವಯಾರ್ಥ ಮಾಡಬಹುದು. ನಮಗೆ ತೋರುವುದು ಹೀಗೆ: 'ವಿಚಿತ್ರಚಿತ್ರ' ಎಂಬುದು ಪ್ರತ್ಯೇಕ ಉದಾಹರಣೆಯಲ್ಲ. 'ಉದೀಚ್ಯದ ಉರು ವಿಶೇಷಣಯುತ ಮಪ್ಪುದಂ ಹೇಮಾಂಗದ ಲೀಲಾಂಬುಜ ವಿಚಿತ್ರ ಚಿತ್ರಾಧಿಕಮಂ ಇಂತು ಒಲ್ವರ್' ಎಂದು ಅನ್ವಯಮಾಡಬೇಕು: 'ಉತ್ತರ ಮಾರ್ಗದ ಶ್ಲಾಘ್ಯ ವಿಶೇಷಣಗಳಿಂದ ಕೂಡಿರುವ ಹೇಮಾಂಗದ ಲೀಲಾಂಬುಜ ಮುಂತಾದವುಗಳ ಆಶ್ಚರ್ಯಕರವಾದ ಉತ್ಕರ್ಷವನ್ನು (ಕೆಲವರು) ಇಷ್ಟಪಡುವರು'.

'ಉದೀಚ್ಯದುರು' ಎಂಬುದರ ಪಾಠ 'ಉದೀಚ್ಯರುರು' (ಉದೀಚ್ಯರ್+ ಉರು) ಎಂದಿರಬಹುದೆ? ಆಗ, 'ಒಲ್ವರ್' ಎಂಬ ಕ್ರಿಯಾಪದಕ್ಕೆ 'ಉದೀಚ್ಯರ್' (ಉತ್ತರ ಮಾರ್ಗದವರು) ಎಂಬುದು ಕರ್ತೃವಾಗುತ್ತದೆ.

ಯನ್ನು ಸೇರಿಸಿಲ್ಲ. 'ಶ್ರುತದುಷ್ಟ', 'ಅರ್ಥದುಷ್ಟ' ದೋಷಗಳಲ್ಲಿಯೇ ಅದು ಸಮಾವೇಶಗೊಂಡಿದೆ ಎಂದು ತಿಳಿಯಬೇಕು). (ಪ. ೮೪) ಮೇಲಿನ ಲಕ್ಷ್ಯಪದ್ಯದ ಅಭಿಪ್ರಾಯವನ್ನೇ, 'ಮನ್ಮಥನು ಹಟಹಿಡಿದು ನನ್ನಲ್ಲಿ ನೆಲಸಿಬಿಟ್ಟಿದ್ದಾನೆ; ಆತನಿಗೆ ನಿನ್ನ ಮೇಲೆ ಸ್ವಲ್ಪವೂ ಕೋಪವಿಲ್ಲ' ಎಂದು ಮಾರ್ಪಡಿಸಿ ಹೇಳಿದರೆ, ಗ್ರಾಮ್ಯತ್ವವು ಒಂದು ಮಿತಿಗೆ ಒಳಪಟ್ಟು ಅದು 'ಪ್ರಮಿತ ಗ್ರಾಮ್ಯೋಕ್ತಿ' ಎಂಬ ಗುಣವೇ ಆಗುವುದು. ಶಬ್ದದೃಷ್ಟಿಯಿಂದಾಗಲಿ ಅರ್ಥದೃಷ್ಟಿಯಿಂದಾಗಲಿ ಅಸಭ್ಯವಾಗದಂತೆ, ಅತಿವಾಚಾಲತೆಯನ್ನು ಬಿಟ್ಟು, ಹಳ್ಳಿಗಾಡಿನವರು ಮುಂತಾದ ಅಸಂಸ್ಕೃತ ಜನರ ಮಾತಿನ ರೀತಿಯನ್ನು ಅಡಕವಾಗಿ ಹೇಳಿದಲ್ಲಿ, ಅದು ಉಭಯ ಮಾರ್ಗಗಳಲ್ಲಿಯೂ ಗುಣವೇ ಆಗುವುದು. (ಎರಡು ಮಾರ್ಗಗಳಿಗೂ ಬೇರೆ ಬೇರೆ ಲಕ್ಷ್ಯಗಳನ್ನು ಮಾರ್ಗಕಾರನು ಕೊಟ್ಟಿಲ್ಲ. ೮೩ನೆಯ ಪದ್ಯವು 'ಔತ್ತರೇಯ ಪ್ರಮಿತಗ್ರಾಮ್ಯ'ಕ್ಕೆ ಲಕ್ಷ್ಯವಾಗಿರುವುದೆಂಬ ತಿಮ್ಮಪ್ಪಯ್ಯನವರ ಹೇಳಿಕೆ ಸಮರ್ಥನೀಯವಲ್ಲ.)

ದಂಡಿ ಹೇಳುವ 'ಅರ್ಥವ್ಯಕ್ತಿ' ಎಂಬ ಗುಣವನ್ನು ಬಿಟ್ಟು, ಆದರೆಡೆಯಲ್ಲಿ ಈ ಪ್ರಮಿತ ಗ್ರಾಮ್ಯೋಕ್ತಿಯನ್ನು ಸೇರಿಸಿದ್ದಾನೆ ಮಾರ್ಗಕಾರ. ಮಾಧುರ್ಯಗುಣ ನಿರೂಪಣೆಯ ಸಂದರ್ಭದಲ್ಲಿ ಶಬ್ದಾರ್ಥಮಾಧುರ್ಯ ಸ್ವರೂಪವನ್ನು ವಿವೇಚಿಸುವಾಗ ದಂಡಿ, ಎಲ್ಲ ಅಲಂಕಾರಗಳೂ ಅರ್ಥಕ್ಕೆ ಸವಿಗೂಡಿಸುವವಾದರೂ ಅವು ಗ್ರಾಮ್ಯತಾದೋಷ ವಿವರ್ಜಿತವಾಗಿದ್ದರೆ ಆ ಕೆಲಸವನ್ನು ಹೆಚ್ಚು ಸಮರ್ಥವಾಗಿ ನಿರ್ವಹಿಸುತ್ತವೆ' ಎಂದು ಹೇಳಿ (I-೬೨), ಗ್ರಾಮ್ಯತೆಯ ದೋಷ-ನಿರ್ದೋಷಗಳಿಗೆ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಆತನು ಕೊಟ್ಟಿರುವ ಎರಡು ಲಕ್ಷ್ಯಪದ್ಯಗಳನ್ನೆ (I-೬೩,೬೪) ಮಾರ್ಗಕಾರನು ಉಪಯೋಗಿಸಿಕೊಂಡು, 'ಪ್ರಮಿತ ಗ್ರಾಮ್ಯೋಕ್ತಿ' ಯನ್ನು ಕಲ್ಪಿಸಿದ್ದಾನೆ.

ಕಿತವ=ಜೂಜುಗಾರ; ವಂಚಕ. ಪೀನಂ=ಹೆಚ್ಚಾಗಿ. ಒಱಲ್ದು= ಒಲಿದು, ಸ್ನೇಹತೋರಿ. (ಧಾ. ಒಱಲ್; ಸ್ನೇಹೇ-ಶ. ಮ. ದ.).

ಮಱುಗಿ=(ಮನಸ್ಸಿನಲ್ಲಿ ಕುದಿದು) ಪರಿತಾಪಪಟ್ಟು (ಧಾ., ಮಱುಗು: ಪ. I-೫೮ರ ಟಿಪ್ಪಣಿ ನೋಡಿ). ಮರವಾನಿಸ=ಮರದಿಂದ ಮಾಡಿದ ಮನುಷ್ಯ; (ಮರದ ಬೊಂಬೆಯಂತೆ) ಸಂವೇದನಾರಹಿತ, ಹೃದಯವಿಲ್ಲದವನು, ನಿಷ್ಕರುಣಿ.

ಪದ್ಯ ೮೫–೮೬: **ಓಜೋಗುಣ:** 'ಸಮಾಸ ಪದಗಳನ್ನು ಹೊಂದಿಕೊಳ್ಳುವಂತೆ, ಒಪ್ಪವಾಗಿಸಿ ('ಸಮಱಿ'), ಚೆನ್ನಾಗಿ ('ಸಯ್ತಾಗಿ') ಆಲೋಚನೆ ಮಾಡಿ ಹೇಳಿದರೆ, ಅದು ಓಜೋಲಕ್ಷಣವಾಗುವುದು. ಅಲಂಕಾರ ಸಹಿತವಾದ ಇದು ಗದ್ಯರಚನೆಗೆ ಶ್ರೇಷ್ಠ. (ಪ. ೮೬) ಸಮಹಿತ (ಸ+ಮಹಿತ) ಪ್ರಯೋಗಾನುಗತವಾದ (ಎಂದರೆ, ಮಹಿಮೆಯುಳ್ಳ ಕವಿಗಳ ಪ್ರಯೋಗಗಳಲ್ಲಿ ಕಂಡುಬರುವ) ಈ ಓಜೋಗುಣವು ಪದ್ಯದಲ್ಲಿಯೂ ಗುಣವನ್ನು ತರುವುದು.' (ಹೀಗೆಂದುದರಿಂದ, ಓಜೋಗುಣವು ವ್ಯಕ್ತಪಡುವಂತೆ ಸಮಾಸಪದ ಭೂಯಿಷ್ಠವಾಗಿ ಕೃತಿರಚನೆ ಮಾಡುವುದು ಕಷ್ಟಕರ ಎಂದಾಯಿತು). 'ಆದ್ದರಿಂದ ಈ ಓಜೋಗುಣವನ್ನು 'ಅಗಾಧಮನರು' (ಅಪಾರ ವಾಕ್ ಸಾಮರ್ಥ್ಯವುಳ್ಳವರು) ಮಾತ್ರ ಚೆನ್ನಾಗಿ ಆಲೋಚನೆಮಾಡಿ, ಸೊಗಯಿಸುವಂತೆ, ಕೃತಿಯಲ್ಲಿ ಪ್ರಯೋಗಿಸಬೇಕು.'

ಈ ಸಂಬಂಧದ ದಂಡಿಯ ಶ್ಲೋಕಗಳು:

"ಓಜಸ್ಸಮಾಸಭೂಯಸ್ತ್ವಮೇತದ್ ಗದ್ಯಸ್ಯ ಜೀವಿತಂ |
ಪದ್ಯೇಽಪ್ಯದಾಕ್ಷಿಣಾತ್ಯಾನಾಮಿದಮೇಕಂ ಪರಾಯಣಂ ||" —I, ೮೦

[ಸಮಾಸಗಳ ಆಧಿಕ್ಯವೇ ಓಜಸ್ಸು, ಇದೇ ಗದ್ಯದ ಜೀವಿತ, ಅದಾಕ್ಷಿಣಾತ್ಯರ (ಎಂದರೆ, ಗೌಡೀಯರ) ಪದ್ಯದಲ್ಲಿಯೂ ಇದೊಂದೇ ಪ್ರಚುರ]. ಹೀಗೆಂದುದರಿಂದ, ಓಜೋಗುಣವನ್ನು ವೈದರ್ಭೀಯರು ಕೇವಲ ಗದ್ಯದಲ್ಲಿಯೂ, ಗೌಡೀಯರು ಗದ್ಯಪದ್ಯಗಳೆರಡರಲ್ಲಿಯೂ ಬಳಸುವರು ಎಂದು ತಾತ್ಪರ್ಯ. ಮಾರ್ಗಕಾರನು ದಂಡಿಯನ್ನೇ ಅನುಸರಿಸುತ್ತಿರುವುದರಿಂದ, ಸಮಾಸಭೂಯಿಷ್ಠವಾದ ಗದ್ಯರಚನೆ ದಕ್ಷಿಣಮಾರ್ಗದ ಓಜೋಲಕ್ಷಣವೆಂದೂ, ಅದೇ ರೀತಿಯ ಗದ್ಯಪದ್ಯಗಳೆರಡರ ರಚನೆ ಉತ್ತರಮಾರ್ಗದ ಓಜೋಲಕ್ಷಣವೆಂದೂ ಅರಿಯಬೇಕು.

ಆದರೆ ಸಮಾಸಭೂಯಿಷ್ಠವಾದ ಕೃತಿರಚನೆ ಗದ್ಯಕ್ಕಿಂತ ಪದ್ಯದಲ್ಲಿ ಕಷ್ಟಕರವೆಂದೂ, ಆದ್ದರಿಂದ ಸಮರ್ಥರಾದವರು ಮಾತ್ರ ಅಂಥ ಪದ್ಯಕೃತಿರಚನೆಗೆ ಕೈಯಿಡಬೇಕೆಂದೂ ಮಾರ್ಗಕಾರನು (‘ ಬಗೆದಿದಂ ಸೊಗಯಿಸುವಂತಿರೆ ಆಗಾಥಮನರಿಡುಗೆ ಕೃತಿಯೊಳೋಜೋಗುಣಮಂ’ ಎಂದು) ಎಚ್ಚರಿಕೆ ನೀಡಿದ್ದಾನೆ.]

ಪದ್ಯ ೮೭–೯೬ : ಈ ಹತ್ತು ಪದ್ಯಗಳಲ್ಲಿ, ಪದ್ಯರಚನೆಯಲ್ಲಿ ಕಷ್ಟಸಾಧ್ಯವಾದ ಓಜೋಗುಣವನ್ನು ಸಾಧಿಸಬೇಕಾದರೆ ಸಮಾಸಪದಗಳನ್ನು ಹೇಗೆ ಪ್ರಯೋಗಿಸಬೇಕೆಂಬುದನ್ನು ಲಕ್ಷ್ಯಗಳೊಂದಿಗೆ ಮಾರ್ಗಕಾರನು ವಿವರಿಸಿದ್ದಾನೆ. ಈ ಸಂದರ್ಭದಲ್ಲಿ, ಗೌಡೀಯ ವೈದರ್ಭೀ ರೀತಿಗಳಿಗೆ ದಂಡಿ ಕೊಡುವ ಲಕ್ಷ್ಯಗಳನ್ನು ಮೊದಲು ಗಮನಿಸಬೇಕು:

ಗೌಡೀಯ :

“ ಅಸ್ತಮಸ್ತಕಪರ್ಯಸ್ತಸಮಸ್ತಾರ್ಕಾಂಶುಸಂಸ್ತರಾ |
ಪೀನಸ್ತನಸ್ಥಿತಾತಾಮ್ರವಸ್ತ್ರೇವಾಭಾತಿ ವಾರುಣೀ ‖ ”–I. ೮೨.

[ಅಸ್ತಮಸ್ತಕವಿನ್ಯಸ್ತ ಸಮಸ್ತ ಸೂರ್ಯಕಿರಣ ಸಂಸ್ತರೆಯಾದ ವಾರುಣಿಯು (ಪಶ್ಚಿಮ ದಿಗ್ವನಿತೆ) ಪೀನಸ್ತನಸ್ಥಿತ ರಕ್ತವಸ್ತ್ರವುಳ್ಳವಳಾಗಿ ಪ್ರಕಾಶಿಸುತ್ತಿದ್ದಾಳೆ.]

ವೈದರ್ಭರ ಆಡಂಬರವಿಲ್ಲದ, ಹೃದಯಂಗಮವಾದ, ಸಮಾಸವಿನ್ಯಾಸ :

“ ಪಯೋಧರತಟೋತ್ಸಂಗಲಗ್ನಸಂಧ್ಯಾತಪಾಂಶುಕಾ |
ಕಸ್ಯ ಕಾಮಾತುರಂ ಚೇತೋ ವಾರುಣೀ ನ ಕರಿಷ್ಯತಿ ‖ ”–I, ೮೪.

[ಪಯೋಧರ ತಟೋತ್ಸಂಗ ಲಗ್ನ ಸಂಧ್ಯಾತಪವನ್ನೇ ಅಂಶುಕವಾಗುಳ್ಳ ಪಶ್ಚಿಮದಿಗ್ವನಿತೆ ಯಾರ ಮನಸ್ಸನ್ನು ತಾನೆ ಕಾಮಾತುರವನ್ನಾಗಿ ಮಾಡಳು ?]

ಕನ್ನಡಪದ್ಯ ರಚನೆಯ ಧೋರಣೆ ಸಂಸ್ಕೃತದ್ದಕ್ಕಿಂತ ಭಿನ್ನವಾದುದರಿಂದ, ಸಮಾಸಪದ ಯೋಜನೆಯ ವಿಚಾರದಲ್ಲಿ ಕನ್ನಡಕ್ಕೆ ಅನ್ವಯಿಸುವಂತೆ ಮಾರ್ಗಕಾರನು ಕೆಲವು ಸ್ಪಷ್ಟ ನಿರ್ದೇಶಗಳನ್ನು ನೀಡಿದ್ದಾನೆ. ಮಾರ್ಗಕಾರನು ಸಂಸ್ಕೃತ ಪೂರ್ವಾಚಾರ್ಯರನ್ನು ಅನುಸರಿಸುವಲ್ಲಿ ಅನುಸರಿಸಿ, ಸ್ವೋಪಜ್ಞತೆಯನ್ನು ಮೆರೆಯಬಲ್ಲನೆಂಬುದಕ್ಕೆ ಈ ಮುಂದಿನ ಲಕ್ಷಣಲಕ್ಷ್ಯ ಪದ್ಯಗಳು (೮೭–೧೧೦) ನಿದರ್ಶನಗಳು.

ಪದ್ಯ ೮೭-೮೮ : "ಪದ್ಯ ಕೃತಿಯಲ್ಲಿ, ಬಿಡಿಬಿಡಿಯಾದ ಪದಗಳ ರೂಪದಲ್ಲಿರುವ ಎಂದರೆ ಸಮಸ್ತವಲ್ಲದ (='ಮುಕ್ತಕ ಪದ') ಕಾರಕವನ್ನೂ ಕ್ರಿಯೆಯನ್ನೂ ಕ್ರಮವಾಗಿ ಮೊದಲು ಅಳವಡಿಸಿ, ಆ ಬಳಿಕ ಕಾರಕ ಸಂಬಂಧವಾದ ವಿಶೇಷಣಯುಕ್ತ ವಿಶೇಷ್ಯರೂಪದ ದೀರ್ಘ ಉಚ್ಚಾರಣೆಯ ಸಮಾಸ ಪದಗಳನ್ನು ಪ್ರಯೋಗಿಸಬೇಕು (ಪ. ೮೭). ಹೀಗೆ ಮಾಡದೆ, ಪದ್ಯದ ಮೊದಲಿನಲ್ಲಿಯೆ ದೀರ್ಘ ಸಮಸ್ತ ಪದವನ್ನು ಪ್ರಯೋಗಿಸಿ ಅದರ ತುದಿಯಲ್ಲಿ ಅಸಮಸ್ತ ಪದಗಳನ್ನು ('ಮುಕ್ತಕ ಪದ'ವನ್ನು) ನಿಲ್ಲಿಸಿದರೆ, ಅದು ಕಬ್ಬಿನ (ಕೆದರಿದ ಸೋಗೆಗಳುಳ್ಳ) ತುದಿಯ ಹಾಗೆ 'ರಸಹೀನ' ವಾಗಿರುವುದರಲ್ಲಿ (ವಿಲಕ್ಷಣವಾಗಿರುವುದರಲ್ಲಿ) ಸಂದೇಹವಿಲ್ಲ."

ತಗುಳು=ತಗುಲಿಸು, ಸೇರಿಸು. ಇರಿಸು ಮುಕ್ತಕ ಪದ=ಬಿಡಿ ಮಾತು. ನೀಳ್ದುನಿಲೆ=ದೀರ್ಘವಾಗಿರುವಂತೆ.

ಪದ್ಯ ೮೯-೯೧ : ಮೇಲಿನ ಲಕ್ಷಣಾನುಗುಣವಾದ ಲಕ್ಷ್ಯಗಳಿವು. 'ನರಪತಿಯಂ . . . ಜಲಧಿತಟದೊಳ್ ಅಣುವಂ ಕಂಡಂ': ಈ ಕಾರಕ ಪದಗಳೂ ಕ್ರಿಯಾಪದವೂ ಬಿಡಿ ಮಾತುಗಳು. ಇವು ತುದಿಯಲ್ಲಿರುವುದರಿಂದ, ಪದ್ಯದಲ್ಲಿ ಓಜಸ್ವಿತಾಗುಣವು ಸಿದ್ಧಿಸುವುದಾದರೂ, ಈ ಬಗೆಯ ರಚನೆ ಸುಂದರವಾಗಿರುವುದಿಲ್ಲವೆಂದು ಹೇಳಿ (ಪ. ೯೦), ೯೧ನೆಯ ಲಕ್ಷ್ಯ ಪದ್ಯದಲ್ಲಿ ಮೊದಲಿನ ಲಕ್ಷ್ಯದ (ಪ. ೮೯) ಪೂರ್ವಾರ್ಧ ಉತ್ತರಾರ್ಧಗಳನ್ನು ವ್ಯತ್ಯಯಮಾಡಿ ರಚನೆ 'ಸುಕರ' ವಾಗಿರುವಂತೆ ಅದನ್ನು ನೇರ್ಪಡಿಸಲಾಗಿದೆ.

[ಮೊದಲಿನ ಲಕ್ಷ್ಯಪದ್ಯದಲ್ಲಿ 'ಸ್ವಭಾವಾಖ್ಯಾನ'ವು ಕಂಡುಬರುವುದರಿಂದ ಅದು ದಕ್ಷಿಣಮಾರ್ಗದ ಲಕ್ಷ್ಯವೆಂದೂ, ಮತ್ತಿನದರಲ್ಲಿ 'ವಕ್ರರಚನೆ' ಕಂಡುಬರುವುದರಿಂದ ಅದು ಉತ್ತರಮಾರ್ಗದ ಲಕ್ಷ್ಯವೆಂದೂ ಮುಳಿಯ ತಿಮ್ಮಪ್ಪಯ್ಯನವರು ಅಭಿಪ್ರಾಯಪಡುತ್ತಾರೆ. ಆದರೆ, ಈ ಬಗೆಗೆ ಗ್ರಂಥದಲ್ಲಿ ಸ್ಪಷ್ಟ ಸೂಚನೆಯಿಲ್ಲ.]

ಕಪಿಪೃತನಾ = ಕಪಿಸೇನೆ. ಅಣುವ = ಹನುಮ.

ಪದ್ಯ ೯೨-೯೬: ಸಮಾಸಪದಪ್ರಯೋಗ ಮಾರ್ಗಾಂತರ ವಿವರಣೆಯನ್ನು ಈ ಪದ್ಯದಲ್ಲಿ ಮುಂದುವರಿಸಿದೆ: ಅನ್ವಯಾನುಸಾರ ತಾತ್ಪರ್ಯ: "ಕೃತಿಯಲ್ಲಿ ಪ್ರಯೋಗವಾಗುವ ಬೇರೆ ಬೇರೆ ವಿಶೇಷ್ಯ ಪದಗಳು ಸಮಾಸರೂಪದಲ್ಲಿ ಬೆರೆತುಬಂದಿದ್ದರೆ ಕಾವ್ಯಬಂಧವು ಎಂದಿಗೂ ಅಂದವಾಗಿರುವುದಿಲ್ಲ; ಆದ್ದರಿಂದ, ಈ ವಿಶೇಷ್ಯಪದವನ್ನು ಯಾವಾಗಲೂ ವ್ಯಸ್ತವಾಗಿಯೆ (ಎಂದರೆ ಸಮಾಸಮಾಡದೆ, ಬಿಡಿಸಿಯೆ) ಹೇಳಬೇಕು."

ಸಮಾಸಪದಗಳನ್ನು 'ಅಮರ್ದಿರೆ ಸಯ್ತಾಗಿ ಬಗೆದು ಪೇೞ್ದೊಡ ದಕ್ಕುಂ ಓಜೋಲಕ್ಷಣಂ' ಎಂದು ಹೇಳಿ (ಪ. ೮೫), ಇಲ್ಲಿ 'ವ್ಯಸ್ತವಾಗಿ ಪೇೞ್ಗೆ' ಎಂದು ಹೇಳಬೇಕಾದರೆ, ಇದನ್ನು 'ಅಪವಾದ' ಸೂತ್ರವೆಂದು ಭಾವಿಸಬೇಕು. ಹಾಗೆ 'ವ್ಯಸ್ತವಾಗಿ ಹೇಳಲು' ಕಾರಣವೇನೆಂಬುದನ್ನು ೯೪-೯೫ನೆಯ ಪದ್ಯಗಳಲ್ಲಿ ವಿವರಿಸಿದ್ದಾನೆ. ಅವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ, ಮೊದಲು ಲಕ್ಷ್ಯಪದ್ಯವನ್ನು ಗಮನಿಸಬೇಕು: ಅದರಲ್ಲಿ (ಪ. ೯೩), 'ಪರಿದೆಯ್ದಿತಾಗಿದಂ' ಎಂಬುದು ಕ್ರಿಯಾಪದ; 'ಪರಿಕೋಪ ವಿಧೃತ ವಿಸ್ಫುರದುರುರಕ್ತ ಕಠೋರನಯನಯುತ ದಶವದನಂ' ಎಂಬುದು ಅದರ ಕರ್ತೃ; 'ಭಾಸುರತರ ರಘುಕುಲಲಲಾಮ ಲಕ್ಷ್ಮೀಧರನೊಳ್' ಎಂಬುದು (ವಿಭಕ್ತಿ ಪಲ್ಲಟವನ್ನು ಹೊಂದಿದ) ಕರ್ಮಕಾರಕ. ಈ ಕರ್ತೃ ಕರ್ಮಗಳೆರಡೂ ವಿಶೇಷಣ ಪದಗಳೊಡನೆ ಸಮಾಸಹೊಂದಿರುವ ವಿಶೇಷ್ಯಗಳು. "ಹೀಗೆ ವಿಶೇಷ್ಯವು ಕ್ರಿಯಾಪದವನ್ನು ಚೆನ್ನಾಗಿ ನೋಡುವುದರಿಂದಲೂ (ಎಂದರೆ ಅದರ ಕಡೆಗೆ ಓಲುವುದರಿಂದಲೂ), ಸಮಾಸವಾಗಿ ಹೇಳುವಮಟ್ಟಿಗೆ ಆ (ವಿಶೇಷ್ಯ) ಪದವು 'ಸಮರ್ಥ' ವಲ್ಲವಾದ್ದರಿಂದಲೂ, ಅದು 'ಸಾಪೇಕ್ಷ' ವಾಗುವುದು" (ಪ. ೯೪). ['ಸಾಪೇಕ್ಷ' ಎಂದರೆ, ಅರ್ಥಪೂರ್ತಿಗಾಗಿ ಬೇರೊಂದು ಪದದ ನೆರವನ್ನು ಕೋರತಕ್ಕದ್ದು. ಇಲ್ಲಿ 'ಸಮರ್ಥ' (ಸಂ + ಅರ್ಥ) ಎಂದರೆ ವಿಶೇಷ್ಯವಾದ ಸಮಾಸ ಪದವು ತನ್ನ ಎಲ್ಲ ಅವಯವಗಳ ಅರ್ಥವನ್ನೂ ಕೂಡಿಕೊಂಡು ಕ್ರಿಯೆಯೊಂದಿಗೆ ಅನ್ವಯವಾಗು

ವುದು. ದಶವದನ, ಲಕ್ಷ್ಮೀಧರ ಎಂಬ ವಿಶೇಷ್ಯಪದಗಳೊಂದಿಗೆ ಅನುಗೂಡಿಕೊಂಡಿರುವ ವಿಶೇಷಣಗಳೆಲ್ಲ ಅದರ ಅಂಗಗಳು ಅಥವಾ ಅವಯವಗಳು]. 'ತಾಗಿದಂ ದಶವದನಂ' ಎಂದಾಗ, ಕರ್ತೃ ಪದವು (ಸಮಸ್ತವಾಗಿರುವುದರಿಂದ) ತನ್ನ ವಿಶೇಷಣಗಳ ಅರ್ಥ ವನ್ನು ಹಿಂದೆ ಬಿಟ್ಟು, ತಾನೊಂದೇ ಕ್ರಿಯೆಯೊಂದಿಗೆ ತಗುಳ್ಚಿಕೊಳ್ಳು ತ್ತದೆ; ಹೀಗಾಗಿ, ಸಮಾಸವಾದ ಕರ್ತೃಪದ 'ಸಮರ್ಥ'ವೆನಿಸು ವುದಿಲ್ಲ. ಹೀಗೆ, (ಪ. ೯೫) "ಸಾಪೇಕ್ಷವೂ ಸಮಾಸವೂ ಎರಡೂ ಕೂಡಿ ಸಮನಿಸಿದರೆ, ಎಲ್ಲಿಯಾದರೂ ಒಂದುಕಡೆ ಗಮಕವು ದೊರೆ ಕೊಳ್ಳುತ್ತದೆ; (ಹಾಗೆ ಗಮಕತ್ವವು[31] ಪ್ರಾಪ್ತಿಯಾದರೆ) ಅದರಲ್ಲಿ ಎಲ್ಲವೂ ಕ್ರಮ ಎನ್ನಬೇಕಾದರೆ (ಎಂದರೆ ಸಾಪೇಕ್ಷತ್ವವೂ ಸಮಾಸ ತ್ವವೂ ಕೂಡಿರುವ ಅಕ್ರಮವನ್ನು ಸಕ್ರಮಗೊಳಿಸಬೇಕಾದರೆ) ('ಕ್ರಮಂ ಆದಜೊಳ್ ಎಲ್ಲಂ ಎನಲ್'), ಕವಿಶ್ರೇಷ್ಠರಾದವರು 'ಮಾರ್ಗ' ದಲ್ಲಿ ಈ ರೀತಿ ಇಷ್ಟು ಮಟ್ಟಿಗೆ ಸರಿಪಡಿಸಲಿ, ಅಂದ ಮಾಡಲಿ." ಸರಿಪಡಿಸುವುದು ಹೇಗೆಂಬುದನ್ನು ೯೬ನೆಯ ಲಕ್ಷ್ಯ ಪದ್ಯದಲ್ಲಿ ತೋರಿಸಿಕೊಟ್ಟಿದ್ದಾನೆ: 'ಭಾಸುರತರ ರಘುಕುಲ ಲಲಾಮ ಲಕ್ಷ್ಮಣನೊಳ್' ಎಂದಿರುವಲ್ಲಿ '. . . ಲಲಾಮನೊಳ್ ಲಕ್ಷ್ಮಣನೊಳ್' ಎಂದೂ, 'ಪರಿಕೋಪ . . . ನಯನಯುತ ದಶವದನಂ' ಎಂದಿರುವೆಡೆಯಲ್ಲಿ 'ಲೋಚನಂ (ಅಥವಾ ನಯನ ಯುತಂ) ದಶವದನಂ' ಎಂದೂ ಮಾರ್ಪಡಿಸುವುದರ ಮೂಲಕ ಸಮಸ್ತವಾಗಿದ್ದ ವಿಶೇಷ್ಯವನ್ನು ವ್ಯಸ್ತಮಾಡಿದ್ದಾನೆ. ಇದರಿಂದಾಗಿ,

---

31 'ಗಮಯತೀತಿ ಗಮಕಂ; ತತ್ತ್ವಂ ಗಮಕತ್ವಂ' ಎಂದು ಶಬ್ದನಿಷ್ಪತ್ತಿ. ಇಲ್ಲಿ 'ಗಮಕ' ಎಂದರೆ 'ಅರ್ಥಗಮಕ' ಎಂದೇ ಗ್ರಹಿಸಬೇಕು. 'ಅರ್ಥಗಮಕ' ಎಂದರೆ 'ಅರ್ಥ ಹೊರಪಡುವುದು'. ಕೆಲವು ಶಬ್ದರೂಪಗಳು ಶಾಸ್ತ್ರಸಮ್ಮತ ವಾಗಿಲ್ಲದಿದ್ದರೂ ಅರ್ಥಗಮಕತ್ವವನ್ನು ಹೊಂದಿದ್ದರೆ, ಅದು ದೇಸಿಯಲ್ಲಿ ಸಮರ್ಥನೀಯವಾಗಬಹುದು. ಹಾಗೆಂದು, ಅದನ್ನು 'ಕ್ರಮ' ಎನ್ನಲಾಗದು, 'ಮಾರ್ಗಕಾವ್ಯ' ದಲ್ಲಿ ಅದನ್ನು ಸರಿಪಡಿಸಬೇಕು—ಎಂದು ನಿರ್ದೇಶನ ನೀಡಿ ದ್ದಾನೆ ಮಾರ್ಗಕಾರ.

ವಿಶೇಷಣವೊಂದೇ ಸಮಸ್ತವಾಗಿ ಉಳಿದಿದೆ; ವಿಶೇಷ್ಯದ ಸಮಾಸವು ತಪ್ಪಿ, ಅದರ ಸಾಪೇಕ್ಷವೊಂದೇ ಉಳಿದಿದೆ; ವಿಶೇಷ್ಯದ ಹಾಗೂ ಅದನ್ನು ಹಿಂಬಾಲಿಸಿರುವ ವಿಶೇಷಣದ ಕಾರಕತ್ವಕ್ಕೂ ಭಂಗಬಂದಿಲ್ಲ.[32]

ಬಂಧುರ=ಮನೋಹರ, ಸುಂದರ. ವ್ಯಸ್ತ=ಅಸಮಸ್ತ, ಸಮಾಸವಾಗದಿರುವುದು. ಪೆಱು=ಪಡೆ, ಸಂಪಾದಿಸು; ದೊರೆಕೊಳ್ಳು, ಉಂಟಾಗು, ('ಉಪಲಬ್ಧೌ, ಪ್ರಸೂತೇ ಚ. - ಶ. ಮ. ದ.). ಸಮಱು=ನಯಮಾಡು, ಹೊಂದಿಕೆಯಾಗುವಂತೆ ಮಾಡು, ಅಂದಗೊಳಿಸು ('ಚಾರುಕರಣೇ.'-ಶ.ಮ.ದ.).

ಪದ್ಯ ೯೭: "ಕ್ಷೀರಗುಡಾದ್ಯಂತರ . . . ಅನಂತಮಂತರ್ಭೇದಂ." ಇದರ ವಿವರಣೆಗಾಗಿ II-ಪದ್ಯ ೪೭-೪೮ರ ಟಿಪ್ಪಣಿಯನ್ನು ನೋಡಿ. (ಪು. ೨೦೨.)

ಪದ್ಯ ೯೮: ಈವರೆಗೆ, ಕಾವ್ಯರಚನೆಯಲ್ಲಿ ಬೇರೆ ಬೇರೆ ಗುಣಗಳು ವ್ಯಕ್ತಗೊಳ್ಳಬೇಕಾದರೆ ಕಾವ್ಯಬಂಧವು ಎರಡೂ ಮಾರ್ಗಗಳಲ್ಲಿ ಹೇಗಿರಬೇಕೆಂಬುದನ್ನು ಮಾರ್ಗಕಾರನು ವಿವರಿಸಿರುವನು. ಈ ಪದ್ಯದಲ್ಲಿ, 'ಕಾವ್ಯದಲ್ಲಿ ವಿಶೇಷವಾದ ಗುಣೋದಯವನ್ನು ತರಬಲ್ಲವರು ಎರಡೂ ಮಾರ್ಗಪದ್ಧತಿಗಳನ್ನು ಚೆನ್ನಾಗಿ ವಿಚಾರಪೂರ್ವಕವಾಗಿ ಪರ್ಯಾಲೋಚನೆಮಾಡಿ, ವಚನ ವಿರಚನೆ ರಸವಿಶೇಷದಲ್ಲಿ ಕೂಡಿಕೊಂಡು ಸೊಗಯಿಸುವ ರೀತಿಯಲ್ಲಿ ಅದನ್ನು ರಚಿಸಲಿ' ಎಂದು ಮಾರ್ಗಕಾರನು ಸೂಚಿಸಿದ್ದಾನೆ.[33] (ಇದರಿಂದ,-ವಚನ ವಿರಚನೆ ರಸವ್ಯಂಜಕವಾಗಬಲ್ಲದು, ಗುಣೋದಯವನ್ನು ತರುವಂತಹ ಕಾವ್ಯ

---

32 ವಿಶೇಷಣವು ಪ್ರಥಮಾವಿಭಕ್ತಿಯನ್ನು ಪಡೆದಿದ್ದಿದ್ದರೂ 'ಅನ್ವಯಮುಖ' ದಲ್ಲಿ ತುದಿಯ ಕಾರಕಪದದ ವಿಭಕ್ತಿಯನ್ನೇ ತಳೆದು, ಪದ್ಯರಚನೆ ಸಕ್ರಮವಾಗಿರುತ್ತಿದ್ದಿತು. (ನೋಡಿ: ಶ.ಮ.ದ. ಸೂತ್ರ ೧೪೦).

33 'ಗುಣಗಳಿಗೆ ರಸಪರತ್ವ' ವನ್ನು ಕಲ್ಪಿಸಿರುವುದು ಮಾರ್ಗಕಾರನ ಸ್ವತಂತ್ರ ಕಲ್ಪನೆ ಎಂಬುದು ಗಮನಾರ್ಹ. "ಕವಿರಾಜಮಾರ್ಗಕಾರನಿಗೆ ಪೂರ್ವದ ದಂಡಿ,

ಬಂಧವು ರಸಪೋಷಣೆಯನ್ನೂ ಮಾಡುವಂತಿದ್ದರೆ ಕಾವ್ಯದ ಸೊಗಸು ಇನ್ನೂ ಹೆಚ್ಚು–ಎಂಬ ಮಾರ್ಗಕಾರನ ಆಶಯವು ಸುವ್ಯಕ್ತವಾಗುತ್ತದೆ; ಕಾವ್ಯತತ್ತ್ವದಲ್ಲಿ ರಸದ ಪ್ರಾಧಾನ್ಯದ ಅರಿವೂ ಮಾರ್ಗಕಾರನಿಗೆ ಇದ್ದಿತೆಂಬುದು ಸ್ಪಷ್ಟವಾಗುತ್ತದೆ.)

ಪದ್ಯ ೯೯–೧೦೦: ಈ ಎರಡು ಪದ್ಯಗಳಲ್ಲಿ, ನಿರ್ದಿಷ್ಟವಾದ ಉಕ್ತಿಬಂಧವನ್ನು ಉಪಯೋಗಿಸುವುದರಿಂದ ನಿರ್ದಿಷ್ಟವಾದ ರಸವು ಪ್ರಕಟವಾಗುವುದೆಂದು ಮಾರ್ಗಕಾರನು ವಿವರಿಸಿದ್ದಾನೆ:–(೧) 'ವೀರರಸಂ ಸ್ಫುಟೋಕ್ತಿಯಿಂ' (ಪ್ರಕಟಮಕ್ಕೆ): ಸಮಬಂಧದಲ್ಲಿ 'ಮೃದುಬಂಧ', 'ಸ್ಫುಟಬಂಧ' ಎಂಬೆರಡು ವಿಭಾಗಗಳನ್ನು ಈ ಹಿಂದೆಯೆ ವಿವರಿಸಿದೆ (ನೋಡಿ: ಪದ್ಯ ೫೬–೫೮ರ ಟಿಪ್ಪಣಿ). ಕಾವ್ಯಬಂಧದಲ್ಲಿ ಸ್ಫುಟವರ್ಣಗಳ ಪ್ರಯೋಗವು ವೀರರಸ ವ್ಯಂಜಕ. (೨) 'ಉದಾತ್ತಮಂ ಕರುಣಾರಸಂ ಮೃದೂಚ್ಚಾರಣೆಯಿಂದಂ (ಪ್ರಕಟಮಕ್ಕೆ)': ಎಲ್ಲ ರಸಗಳಲ್ಲಿಯೂ ಕರುಣಾರಸವು ಅತ್ಯಂತ ಉದಾರವಾದುದು. ಈ ರಸದ ಸ್ಥಾಯಿಭಾವ ಶೋಕ. ಶೋಕವು ನಮ್ಮ ಹೃದಯವನ್ನು ಕರಗಿಸಿ, ನಮ್ಮಲ್ಲಿ ಕರುಣಾರಸವು ಅನುಭವಕ್ಕೆ ಬರಬೇಕಾದರೆ, ನಮ್ಮಲ್ಲಿ ಸಂಸ್ಕಾರಗತವಾದ ಔದಾರ್ಯವಿರಬೇಕು. ನಮ್ಮ ಉದಾರಭಾವವನ್ನು ಪ್ರಚೋದಿಸಲು ಮೃದುವರ್ಣಗಳಿಂದ ಕೂಡಿದ ಮೆಲುನುಡಿಗಳಿಗೆ ಮಾತ್ರ ಸಾಧ್ಯ. ಇದೇ ಮೃದೂಚ್ಚಾರಣೆ, ಅಥವಾ ಮೃದುಬಂಧ. ಇದು ಕೂಡ ಸಮಬಂಧದ ಒಂದು ಪ್ರಭೇದ. (ನೋಡಿ: ಪು. ೨೦೮). (೩) 'ಅದ್ಭುತರಸಂ ನಿಬಿಡೋಕ್ತಿಗಳಿಂದಂ (ಪ್ರಕಟಮಕ್ಕೆ)': ಅದ್ಭುತರಸದ ಸ್ಥಾಯಿ ಆಶ್ಚರ್ಯ, ಬೆರಗು. ನಮ್ಮ ಮನಸ್ಸಿನಲ್ಲಿ ಆಶ್ಚರ್ಯವುಂಟಾದಾಗ ಅಲ್ಲಿ ಭಾವಸಂಶ್ಲೇಷ

ಭಾಮಹರ ವಿಧಿಗಳಲ್ಲಿ ಈ ಸ್ಪಷ್ಟಕಲ್ಪನೆ ಕಾಣುವುದಿಲ್ಲ" ಎಂದು ಡಾ॥ ಕೆ. ಕೃಷ್ಣಮೂರ್ತಿ ತಿಳಿಸಿದ್ದಾರೆ. (ಕನ್ನಡದಲ್ಲಿ ಕಾವ್ಯತತ್ತ್ವ, ಪು. ೯). ಮಾರ್ಗಕಾರನ ಈ ಕಲ್ಪನೆ ಎಷ್ಟು ಪ್ರಭಾವಶಾಲಿಯಾಯಿತು ಎಂಬುದು ಪಂಪರನ್ನಾದಿಗಳ ಕಾವ್ಯಪ್ರಯೋಗಗಳಲ್ಲಿ ಸುವೇದ್ಯವಾಗಿದೆ.

ಅಥವಾ ವಿವಿಧ ಭಾವಗಳ ಹೆಣಿಗೆ ಉಂಟಾಗುತ್ತದೆ. ಆದ್ದರಿಂದ, ಇಂಥ ಸಂಶ್ಲಿಷ್ಟಭಾವದ ಪರಿಣಾಮವಾದ ಅದ್ಭುತ ರಸವನ್ನುಂಟು ಮಾಡಲು ಸಂಶ್ಲಿಷ್ಟವಾದ, ಅಥವಾ ಒಂದರೊಡನೆ ಒಂದು ಕೂಡಿ ಕೊಂಡು ಒತ್ತಾಗಿರುವ, ಸಂಯುಕ್ತಾಕ್ಷರ ಪ್ರಚುರವಾದ, 'ನಿಬಿಡ' ಬಂಧವೆ ಸಮರ್ಥ. (೪) 'ಶೃಂಗಾರರಸಂ ಸುಕುಮಾರೋಕ್ತಿಗಳಿಂ (ಪ್ರಕಟಮಕ್ಕೆ)': ಶೃಂಗಾರದ ಸ್ಥಾಯಿಭಾವವು 'ರತಿ'; ರತಿ ಭಾವ ಸುಕುಮಾರವಾದುದು, ಕೋಮಲವಾದುದು; ಆದ್ದರಿಂದ, ಆ ಭಾವಪ್ರಕಾಶನಕ್ಕೆ ಸುಕುಮಾರತರ (ಕೋಮಲ) ವರ್ಣಗಳಿಂದ ಕೂಡಿದ 'ಸುಕುಮಾರ' ಬಂಧವು ಯೋಗ್ಯವಾದುದು. (೫) 'ಪ್ರಶಾಂತದಂ ರಸಂ ಸತತಂ ಪ್ರಸನ್ನ ಗಂಭೀರತರೋಕ್ತಿಯಿಂ (ಪ್ರಕಟಮಕ್ಕೆ)': ಶಾಂತರಸದ ಸ್ಥಾಯಿಭಾವ ಶಮ, ಎಂದರೆ ಅರಿಷಡ್ವರ್ಗವಿದೂರವಾದ ನಿರ್ವಿಕಾರ ಮನೋಭಾವ; ಅದರ ಲಕ್ಷಣ, ತಿಳಿನೀರಿನ ಆಳವಾದ ಸರೋವರದಂತೆ 'ಪ್ರಸನ್ನಗಂಭೀರ'; ಈ ಭಾವವನ್ನು ಪ್ರಕಟಪಡಿಸಲು 'ಪ್ರಸನ್ನಗುಣ' ದಿಂದ ಕೂಡಿದ ಉಕ್ತಿರೀತಿ (ಪದ್ಯ ೭೭-೭೮ರ ಟಿಪ್ಪಣಿ ನೋಡಿ) ತಕ್ಕುದು. ['ಅಣು ಓಗದಾರ ಸುತ್ತ' ಎಂಬ ಪ್ರಾಕೃತ ಜೈನಧರ್ಮ ಗ್ರಂಥದಲ್ಲಿ 'ಶಾಂತ' ರಸಕ್ಕೆ 'ಪಸಂತ' (=ಪ್ರಶಾಂತ) ಎಂದು ಉಲ್ಲೇಖಿಸಲಾಗಿದೆ.— ಭಾ. ಕಾ. ಮೀ., (ಪುಟ ೨೮, ಅಡಿ ಟಿಪ್ಪಣಿ).] (೬) 'ಹಾಸ್ಯರಸಮಾ ಮಧುರೋಕ್ತಿಗಳಿಂ (ರಸಾವಹಂ ಅಕ್ಕೆ)': ಹಾಸ್ಯದ ಸ್ಥಾಯಿ ಹಾಸ ಅಥವಾ ವಿನೋದ. 'ಮಧುರ ಗುಣ' ಕ್ಕೆ ಅಗತ್ಯವಾದ ಮಧು ರೋಕ್ತಿ ಅಥವಾ ಕಿವಿಗಿಂಪಾದ ಸವಿಮಾತು ಹಾಸ್ಯರಸ ಪ್ರತೀತಿಗೆ ಸಹಕಾರಿ. ಏಕೆಂದರೆ, ಹಾಸವೂ ಒಂದು ಮಧುರವಾದ ಭಾವ. (ಇಲ್ಲಿ, 'ಹಾಸ್ಯ' ಎಂಬ ಮಾತನ್ನು ವಿಶಾಲವಾದ ಅರ್ಥದಲ್ಲಿ ಗ್ರಹಿಸ ಬೇಕು). (೭) 'ಬೀಭತ್ಸರಸಾಂತರಂ ಶಿಥಿಲ ಬಂಧನದಿಂ (ರಸಾ ವಹಂ ಅಕ್ಕೆ)': ಅದ್ಭುತ ರಸವು 'ನಿಬಿಡ ಬಂಧ' ದಿಂದ ಪ್ರತೀತ ವಾಗುವಲ್ಲಿ, ಬೀಭತ್ಸವು ಅದಕ್ಕೆ ವ್ಯತಿರಿಕ್ತವಾದ 'ಶಿಥಿಲ ಬಂಧ' ದಿಂದ ಪ್ರತೀಯಮಾನವಾಗುವುದು. ಬೀಭತ್ಸರಸದ ಸ್ಥಾಯಿಭಾವ

ಜುಗುಪ್ಸೆ ಅಥವಾ ಅಸಹ್ಯತೆ. ಶಿಥಿಲ ಅಥವಾ ಸಡಿಲವಾದ ರಚನೆ ಬಿಡಿಬಿಡಿಯಾದ ಅಲ್ಪಪ್ರಾಣಾಕ್ಷರಗಳಿಂದ ಸಿದ್ಧಿಸುತ್ತದೆ. "ಅದ್ಭುತ ರಸಭಾವವಾದ ಆಶ್ಚರ್ಯವು ಹೇಗೆ ಅಂತರಂಗವನ್ನು ನಿಬಿಡೀಕೃತವನ್ನಾಗಿ ಮಾಡುವುದೋ ಹಾಗೆ ಈ ಕೊಕ್ಕರಿಕೆಯು ಅಂತರಂಗವನ್ನು ಸಡಿಲಾಗಿ ಮಾಡಿಬಿಡುವುದು. ಹಾಗೆ ಹೃದಯವನ್ನು ಶಿಥಿಲೀಕರಿಸುವ ಭಾವ (ಅರ್ಥ) ದಿಂದ ಏಳ್ಗೆವಡೆಯುವ ಬೀಭತ್ಸವನ್ನು ಶಿಥಿಲ ಬಂಧನದಿಂದಲೇ ವಿಸ್ತರಿಸತಕ್ಕುದು. ಈ ಶಿಥಿಲಬಂಧವು ಉತ್ತರ ಮಾರ್ಗೀಯ ಗುಣ" ಎಂದು ಮುಳಿಯ ತಿಮ್ಮಪ್ಪಯ್ಯನವರು ಅಭಿಪ್ರಾಯಪಟ್ಟಿದ್ದಾರೆ. (ಕ.ರಾ. ವಿವೇಕ-೨). (ನಮ್ಮ ಅಭಿಪ್ರಾಯದಲ್ಲಿ ಶಿಥಿಲಬಂಧವು ದಕ್ಷಿಣಮಾರ್ಗೀಯ ಗುಣ. ಪದ್ಯ ೬೪-೬೫ರ ಟಿಪ್ಪಣಿ ನೋಡಿ). (೮) 'ಭಯಾನಕೋದ್ಯತ್ ಸುರಸಂ ವಿಷಮಬಂಧನದಿಂ (ರಸಾವಹಂ ಅಕ್ಕೆ)': ಸಮಬಂಧಕ್ಕೆ ವ್ಯತಿರಿಕ್ತವಾದದ್ದು ವಿಷಮಬಂಧ. (ಸಮ-ವಿಷಮಬಂಧ ಗುಣಲಕ್ಷಣಕ್ಕೆ ೫೬-೫೪, ೫೯ ಈ ಪದ್ಯಗಳ ಟಿಪ್ಪಣಿಗಳನ್ನು ನೋಡಿ). 'ಭಯಾನಕ' ರಸದ ಸ್ಥಾಯಿಭಾವವಾದ 'ಭಯ' ಭಾವವನ್ನು ಪ್ರಕಟಪಡಿಸಲು ವಿಷಮಬಂಧದ ಕ, ಚ, ತ, ಟ ಮತ್ತು ರೇಫಯುಕ್ತ ಸಂಯುಕ್ತಾಕ್ಷರ ಪ್ರಚುರವಾದ ವಿಷಮ ಬಂಧವು ಸರಿಯಾದುದು. (ಭಯದಲ್ಲಿ ಮನಸ್ಸಿನ ಸಮಸ್ಥಿತಿಯು ಪಲ್ಲಟವಾಗುವುದರಿಂದ ಅದನ್ನು ವ್ಯಕ್ತಪಡಿಸಲು ಸಮವಲ್ಲದ ವಿಷಮಬಂಧವು ಯೋಗ್ಯವೆಂದು ಮಾರ್ಗಕಾರನ ಅಭಿಪ್ರಾಯವಿರಬಹುದು). (೯) 'ಊರ್ಜಿತೋಕ್ತಿಗಳಿಂ ಅತಿ ರೌದ್ರರಸಂ(ನೃಪತುಂಗದೇವ ಮಾರ್ಗೋತ್ಸವಂ ರಸಾವಹಂ) ಅಕ್ಕೆ': (ಇಲ್ಲಿನ 'ನೃಪತುಂಗದೇವ ಮಾರ್ಗೋತ್ಸವಂ ರಸಾವಹಂ ಅಕ್ಕೆ' ಎಂಬೀ ವಾಕ್ಯವು ೧೦೦ನೆಯ ಪದ್ಯದಲ್ಲಿ ಉಕ್ತವಾದ, ಕರ್ತೃಪದ ಸ್ಥಾನದಲ್ಲಿರುವ, ಎಲ್ಲ ರಸನಾಮ ವಾಚಕಗಳಿಗೂ ಅನ್ವಯವಾಗುತ್ತದೆ. ಹೀಗೆಯೇ, ೯೯ನೆಯ ಪದ್ಯದ 'ಪ್ರಕಟಮಕ್ಕೆ' ಎಂಬ ಕ್ರಿಯಾವಾಚಕವೂ ಕೂಡ). ರೌದ್ರರಸದ ಸ್ಥಾಯಿಭಾವ ಕ್ರೋಧ. ಕ್ರೋಧವು ಮನಸ್ಸಿನಲ್ಲಿ ಊರ್ಜಿತವಾಗಿರತಕ್ಕ ಎಂದರೆ ದೃಢವಾಗಿ

ನೆಲೆನಿಂತಿರತಕ್ಕ ಭಾವ. ಅದನ್ನು ಪ್ರಕಟಗೊಳಿಸಲು 'ಊರ್ಜಿತೋಕ್ತಿ' ಗಳೇ ಆಗಬೇಕು. ಕೇಳಿದೊಡನೆಯೆ ಮನಸ್ಸಿಗೆ ನಾಟುವಂತಹ ಮಾತುಗಳೇ ಊರ್ಜಿತೋಕ್ತಿಗಳು. ಓಜೋಲಕ್ಷಣದ ಸಮಾಸಪದ ಭೂಯಿಷ್ಠವಾದ ಉಕ್ತಿ ವಿಶೇಷವನ್ನೇ ಊರ್ಜಿತೋಕ್ತಿ ಎಂದು ಮಾರ್ಗಕಾರನು ನಿರ್ದೇಶಿಸಿರುವಂತೆ ತೋರುತ್ತದೆ. (ಓಜೋಗುಣ ಲಕ್ಷಣಕ್ಕೆ ಪದ್ಯ ೮೫-೮೬ರ ಟಿಪ್ಪಣಿ ನೋಡಿ).

ಪದ್ಯ ೧೦೧ : ತಾತ್ಪರ್ಯ : 'ಮಾತುಗಳು ಯಾವುವೇ ಆಗಲಿ, ಉಪವರ್ಣಿಸಿರುವ ಮಾರ್ಗಗಳಿಗೆ ಅನುಗುಣವಾಗಿರುವ ಪ್ರಯೋಗಗಳಿಂದ ಕೂಡಿ ಪ್ರಸಿದ್ಧವಾಗಿರುವ ಕನ್ನಡದಲ್ಲಿ ಅವು ಗುಣವನ್ನೇ ಉಂಟುಮಾಡುವುವು. (ಎಂದರೆ, ಬಳಸುವ ಮಾತು ಯಾವುದೇ ಆದರೂ ಅದು ಉತ್ತರ ಇಲ್ಲವೆ ದಕ್ಷಿಣಮಾರ್ಗ ಪದ್ಧತಿಗೆ ಅನುಸಾರವಾಗಿ ಪ್ರಯೋಗವಾಗಿರಬೇಕೆಂದು ಅಭಿಪ್ರಾಯ). ಆದ್ದರಿಂದ, ವಿದ್ವಾಂಸರು 'ನೀತಿನಿರಂತರ'ನು (ನೃಪತುಂಗನು) ಕಲ್ಪಿಸಿರುವ ಉಕ್ತಿರೀತಿಯ ನಿರ್ಣಯವನ್ನು ಈ ತೆರದಲ್ಲಿ ನಿಶ್ಚಯಿಸಿಕೊಳ್ಳಲಿ.'

'ವಚನವಿರಚನೆ ಮಾರ್ಗದ್ವಿತಯಗಳ ಗುಣಾನುಗುಣವಾಗಿ ಹೇಗೆ ರಸವಿಶೇಷದಿಂದಲೂ ಕೂಡಿಕೊಂಡಿರಬಹುದು' (ಪ. ೯೮) ಎಂಬ ನಿರ್ದೇಶಕ್ಕೆ ಅನುಗುಣವಾಗಿ ೯೯-೧೦೦ನೆಯ ಪದ್ಯಗಳಲ್ಲಿ ತತ್ಸಂಬಂಧವಾದ ಲಕ್ಷಣ ವಿವರಣೆಯನ್ನು ಮಾಡಿರುವುದರಿಂದ, ಈ (೧೦೧ನೆಯ) ಪದ್ಯದಲ್ಲಿ 'ಮಾತುಗಳಾವುವಾನುಂ. . .' ಇತ್ಯಾದಿಯಾದ ಸಾಮಾನ್ಯ ನಿರ್ದೇಶವು ೧೦೨ರಿಂದ ೧೧೦ರ ವರೆಗಿನ ಪದ್ಯಗಳಲ್ಲಿ ವಿವರಿಸಿರುವ ಕನ್ನಡ ಮಾತುಗಳ ಪ್ರಯೋಗವಿಚಾರಕ್ಕೆ ಅನ್ವಯಿಸುತ್ತದೆ ಎಂದು ಗ್ರಹಿಸಬೇಕು. (ಇದು ಈ ಪೂರ್ವದಲ್ಲಿ ಮಾರ್ಗಕಾರನು ನಿರವಿಸಿದ 'ರಸಾನುಕೂಲ ವಚನ'ಗಳ ಪ್ರಯೋಗವಿಚಾರಕ್ಕೆ ಅನ್ವಯಿಸುತ್ತದೆ ಯೆಂದು ಮುಳಿಯ ತಿಮ್ಮಪ್ಪಯ್ಯನವರ ಅಭಿಪ್ರಾಯ.)

ಪದ್ಯ ೧೦೨-೧೦೭ : ಈ ಆರು ಪದ್ಯಗಳಲ್ಲಿ, ಕೆಲವು ಕನ್ನಡ ಕ್ರಿಯಾಪದ ರೂಪಗಳು ಉಭಯ ಮಾರ್ಗಗಳಲ್ಲಿಯೂ ಹೇಗೆ ಪ್ರಯೋಗವಾದರೆ

ಸಾಧು, ಹೇಗೆ ಪ್ರಯೋಗವಾದರೆ ಅಸಾಧು ಎಂಬ ವಿಷಯವನ್ನು ತಿಳಿಯಹೇಳಿದ್ದಾನೆ.

ಈವರೆಗಿನ ಮಾರ್ಗವಿವೇಚನೆ ಬಹುಮಟ್ಟಿಗೆ ದಂಡಿಯನ್ನು ಅನುಸರಿಸಿದ್ದಾಗಿದೆ. ಕನ್ನಡಕ್ಕೆ ಮಾತ್ರ ಸಂಬಂಧಪಟ್ಟಂತೆ ಮಾಡಿರುವ ಈ ಮಾರ್ಗವಿವೇಚನೆ ಕಾವ್ಯಮೀಮಾಂಸೆಗೆ ಮಾರ್ಗಕಾರನ ಸ್ವತಂತ್ರವಾದ ಕೊಡುಗೆ.

ಪದ್ಯ ೧೦೨-೧೦೩ : ನೋಡುವೆನ್, ಬೇಡುವೆನ್ - ಈ ಕ್ರಿಯಾರೂಪಗಳು ಉತ್ತರಮಾರ್ಗ ವಾಚಕ; ನೋಟ್ಪೆನ್, ಬೇಟ್ಪೆನ್ ಇವು -' ದಕ್ಷಿಣ ಮಾರ್ಗವಿಚಕ್ಷಣೋದಿತ' ರಚನೆ.[34]

ಈ ಪದ್ಯದ ಪೂರ್ವಾರ್ಧ ಉತ್ತರಾರ್ಧಗಳಲ್ಲಿ ಪ್ರಯೋಗವಾಗಿರುವ 'ಅರ್ಥಿಗಣಾರ್ಥಿತ ಕಲ್ಪವೃಕ್ಷ', 'ಉದಾತ್ತ ಚಾರುಗುಣ' ಎಂಬೀ ವಿಶೇಷಣಗಳು ಒಬ್ಬ 'ಮಹೀಪತಿ'ಯನ್ನು ಕುರಿತಾಗಿವೆ. ಆ ಮಹೀಪತಿ ನೃಪತುಂಗನೇ ಇರಬೇಕು.

ಪದ್ಯ ೧೦೩ : ಮೇಲಿನ ಪದ್ಯದಲ್ಲಿ ದೃಷ್ಟಾಂತಿಸಿರುವ 'ನೋಡುವೆನ್ - ನೋಟ್ಪೆನ್, ಬೇಡುವೆನ್ - ಬೇಟ್ಪೆನ್' ಶಬ್ದರೂಪಗಳನ್ನು ಅನುಸರಿಸಿ, 'ಸೂಡುವೆನ್>ಸೂಟ್ಪೆನ್, ಕೂಡುವೆನ್> ಕೂಟ್ಪೆನ್, ಕಾಡುವೆನ್>ಕಾಟ್ಪೆನ್, ತೋಡುವೆನ್>ತೋಟ್ಪೆನ್' ಎಂಬುದಾಗಿ ಪ್ರಯೋಗಿಸಕೂಡದೆಂದು ಮಾರ್ಗಕಾರನು ನಿಷೇಧಿಸಿದ್ದಾನೆ. (ಎರಡು ಮಾರ್ಗಗಳಲ್ಲಿಯೂ, ಸೂಡುವೆನ್ ಇತ್ಯಾದಿ ರೂಪಗಳನ್ನು ಪ್ರಯೋಗಿಸಬಹುದೇ ಹೊರತು ಸೂಟ್ಪೆನ್ ಇತ್ಯಾದಿ ರೂಪಗಳು ನಿಷಿದ್ಧಗಳು.)

---

34 ಕೇಶಿರಾಜನು 'ಡಕಾರಕ್ಕಾದೇಶಮಾದ ಟಟಿಕ್ಕೆ ಪ್ರಯೋಗ'ವನ್ನು ಹೇಳುವಾಗ, ಮಾಡುವಂ = ಮಾಟ್ಪಂ, ನೋಡುವಂ = ನೋಟ್ಪಂ, ಬೇಡುವಂ = ಬೇಟ್ಪಂ, ಬೆಗಡುವಂ = ಬೆಗಟ್ಪಂ - ಎಂಬೀ ದೃಷ್ಟಾಂತಗಳನ್ನು ಕೊಟ್ಟಿದ್ದಾನೆ. (ಶ. ಮ. ದ., ಕ. ಸಾ. ಪ. ಮುದ್ರಣ; ಸೂ. ೧೮-೧೯, ಪು. ೨೧). ಆದರೆ, ಪ್ರಯೋಗ ವೈಕಲ್ಪ್ಯವನ್ನನುಲಕ್ಷಿಸಿ ಅವನು ಮಾರ್ಗಭೇದ ವಿವಕ್ಷೆಯನ್ನು ಮಾಡಿಲ್ಲ.

ಅರ್ಥಿ=ಬೇಡುವವನು ; ಯಾಚಕ. ಅರ್ಥಸಂಚಯ=ಹಣದ ರಾಶಿ. ಅಬ್ತಿ=ಪ್ರೀತಿ. ಸೂಡು=ಮುಡಿ, ಧರಿಸು. ಅಣಂ=ಸ್ವಲ್ಪವೂ. ನಿಕ್ಕುವ=ನಿಶ್ಚಯ.

ಪದ್ಯ ೧೦೪-೧೦೫ : ಬರು, ಇರು, ತರು – ಈ ಧಾತುಗಳಿಗೆ 'ಇಸು' ಪ್ರತ್ಯಯವು ಸೇರಿ ಸಿದ್ಧಿಸಿದ ಬರಿಸುವೆನ್, ತರಿಸುವೆನ್ ಎಂಬ ಕ್ರಿಯಾ ರೂಪಗಳು 'ದಕ್ಷಿಣಮಾರ್ಗ ವಿಶೇಷ ಭಾಷಿತಂ' ಎಂದರೆ ದಕ್ಷಿಣಮಾರ್ಗಕ್ಕೆ ವಿಶಿಷ್ಟವಾದ ನುಡಿವಳಿ. ಅವೇ ಧಾತುಗಳು ಉತ್ತರಮಾರ್ಗದಲ್ಲಿ ಬರಿಪೆನ್, ಇರಿಪೆನ್, ತರಿಪೆನ್ ಎಂಬುದಾಗಿ ವರ್ತಿಸುತ್ತವೆ (ಸಲುವಳಿಯಾಗುತ್ತವೆ).

ಈ ಎರಡು ಪದ್ಯಗಳಲ್ಲಿಯೂ ಒಂದೇ ಸಂಗತಿ ನಿರೂಪಿತವಾಗಿದೆ. 'ಕಾಂತನನ್ನು ನಂದನವನಾಂತರಕ್ಕೆ ಬರಿಸುವೆನು ; (ಅಲ್ಲಿ ಆತನನ್ನು) ಸಮಂತು ಇರಿಸುವೆನು ; ಅಂತು ಮನ್ಮಥ ಸುಖಸಾಧಕಗಳಾದ ಕಾರಣಗಳನ್ನು[35] (ಉದ್ದೀಪಕ ಸಾಮಗ್ರಿಯನ್ನು) ತರಿಸುವೆನು ; ಹೀಗೆ, ನನ್ನ ಮನೋವಲ್ಲಭನೊಂದಿಗೆ ಮನಸ್ಸಂತೋಷದಿಂದ ನೆರೆಯುವೆನು (ಕೂಡುವೆನು)' – ಎಂದು ನಲ್ಲೆಯೊಬ್ಬಳು ತನ್ನ ನಲ್ಲನ ಕುರಿತಾಗಿ (ಬಹುಶಃ) ತನ್ನ ಕೆಳದಿಗೆ (೧೦೪ನೆಯ ಪದ್ಯ

---

35 '(ಸಮಂತಿರಿಸುವೆನ್ ಅಂತು) ಅನಂತ ಸುಖಸಂಗತ ಮಂಗಳ ಕಾರಣಂಗಳಂ' ಪಾಠಕರ ಮುದ್ರಣ, ಮದ್ರಾಸು ಮುದ್ರಣ—ಇವೆರಡರಲ್ಲಿಯೂ ಇರುವ ಪಾಠವನ್ನೇ ಇಲ್ಲಿ ಸ್ವೀಕರಿಸಲಾಗಿದೆ. ಬೇರೆಯ ಪಾಠಾಂತರಗಳು ಗಮನಕ್ಕೆ ಬಂದಿಲ್ಲ: ಆದರೆ, ದಿ|| ಬಿ. ಎಂ. ಶ್ರೀ. ಯವರು 'ಅನಂಗ ಸುಖಸಂಗತ' ಎಂಬ ಸಣ್ಣ ತಿದ್ದುಪಾಟನ್ನು ಸೂಚಿಸಿದ್ದಾರೆ. (Q. J. M. S., Vol. XXIII-No. 3 ; ಪು. ೪೪೦). ಅದು ಅಂಗೀಕಾರಯೋಗ್ಯವೆಂದು ಕಾಣುತ್ತದೆ. ಏಕೆಂದರೆ, ೧೦೫ನೆಯ ಪದ್ಯದಲ್ಲಿ, ಇದೇ ಅರ್ಥವನ್ನು ಕೊಡುವ 'ಸುರತರಾಗ . . . ಕಾರಣಂಗಳಂ' ಎಂಬ ಮಾತುಗಳಿವೆ; ೧೦೬ನೆಯ ಪದ್ಯದ ೨ನೆಯ ಪಂಕ್ತಿಯಲ್ಲಿ 'ಅನಂಗ ಸುಖೋಚಿತಂಗಳಾನ್' ಎಂಬಲ್ಲಿ, 'ಅನಂಗ' ಎಂಬ ಪದವೆ ಪ್ರಯೋಗವಾಗಿದೆ. ಲಿಪಿಕಾರನ ಪ್ರಮಾದದಿಂದ 'ಅನಂಗ' 'ಅನಂತ'ವಾಗಿರಬಹುದು.

ದಲ್ಲಿ) ಹೇಳಿದ ವಿಷಯವನ್ನೇ ಬೇರೆಯ ಮಾತುಗಳಲ್ಲಿ ಮಾರ್ಗಭೇದ ನಿದರ್ಶನಕ್ಕಾಗಿ ನಿರೂಪಿಸಲಾಗಿದೆ.

ಅಲಂಪು=ನಲಿವು, ಸೊಗಸು. ಅಮೋಘಂ=ವ್ಯರ್ಥವಾಗದೆ. ಅನಾಕುಳಂ=ನಿಶ್ಚಿಂತೆಯಿಂದ, ಭ್ರಾಂತಿಗೊಳ್ಳದೆ.

ಪದ್ಯ ೧೦೬ : ೧೦೫ನೆಯ ಪದ್ಯದಲ್ಲಿ ಉತ್ತರಮಾರ್ಗಕ್ಕೆ ಲಕ್ಷ್ಯಗಳಾಗಿರುವ ಬರಿಪೆನ್, ಇರಿಪೆನ್, ತಱಿಪೆನ್ ಎಂಬೀ ಕ್ರಿಯಾರೂಪಗಳಲ್ಲಿನ 'ಪ' ಕಾರವು ('ಇಸು' ಪ್ರತ್ಯಯಕ್ಕೆ ಆದೇಶವಾಗಿ ಬಂದ 'ಪು') ಉತ್ತರೋತ್ತರ (ಮಾರ್ಗ) ದಲ್ಲಿ ದ್ವಿತ್ವವಾಗಿ, ಅವು 'ಬರಿಪ್ಪೆನ್', 'ಇರಿಪ್ಪೆನ್', 'ತರಿಪ್ಪೆನ್' ಎಂದಾಗುತ್ತವೆ.

ಇಲ್ಲಿ ವರ್ಣಿತವಾಗಿರುವ ವಿಷಯವೂ ಮೇಲಿನ ಎರಡು ಪದ್ಯಗಳದ್ದೇ.

ಉತರೋತ್ತರ ಮಾರ್ಗ : ಇದೊಂದು ಕಡೆ ಹೊರತು, ಬೇರೆ ಎಲ್ಲಿಯೂ ಈ ಮಾರ್ಗಭೇದದ ಪ್ರಸ್ತಾವವಿಲ್ಲ. ಮಾರ್ಗಕಾರನು ಉದ್ದಕ್ಕೂ ದಕ್ಷಿಣೋತ್ತರವೆಂಬ ಎರಡು ಮಾರ್ಗಗಳನ್ನೇ ('ಉಭಯ ಮಾರ್ಗ', 'ಮಾರ್ಗದ್ವಿತಯ' ಇತ್ಯಾದಿಯಾಗಿ) ಕುರಿತು ಹೇಳುತ್ತಿರುವುದರಿಂದ, ಇದು ಉತ್ತರ ಮಾರ್ಗದ ಒಂದು ಪ್ರಭೇದವೆಂದೇ ಗ್ರಹಿಸಬೇಕು. ಆದಕ್ಕೆಂದೇ ಅದು ಉತ್ತರೋತ್ತರ ಎಂದು ನಿರ್ದಿಷ್ಟವಾಗಿರುವುದು.

ಪದ್ಯ ೧೦೭ : ದಕ್ಷಿಣಮಾರ್ಗ ವಾಚಕಗಳಾದ ಬರಿಸುವೆನ್, ಇರಿಸುವೆನ್, ತಱಿಸುವೆನ್—ಇವು ಬರಿಪೆ(ಪ್ಪೆ)ನ್, ಇಱಿಪೆ(ಪ್ಪೆ)ನ್, ತರಿಪೆ(ಪ್ಪೆ)ನ್ ಎಂದು ಉತ್ತರ ಮತ್ತು ಉತ್ತರೋತ್ತರ ಮಾರ್ಗಗಳಲ್ಲಿ ಪ್ರಯೋಗವಾಗುತ್ತವೆಯೆಂದು ಹೇಳಿದ ಮೇಲೆ, ಈ ವಿಧಿಗೆ ಅಪವಾದವನ್ನು ಈ ಪದ್ಯದಲ್ಲಿ ಮಾರ್ಗಕಾರನು ತಿಳಿಸಿದ್ದಾನೆ.

ಎರಡು ಮಾರ್ಗಗಳಲ್ಲಿಯೂ ('ಮಾರ್ಗಯುಗ್ಮದೊಳ್'),— 'ಪರಸುವೆನ್' ಎಂದು ಹೇಳಬಹುದೇ ಹೊರತು '(ಅಂ) ಪರಪೆನ್'

ಎನ್ನಲಾಗದು ; 'ಬೆರಸುವೆನ್' ಎಂದೆನ್ನಬಹುದೇ ಹೊರತು '(ಅಂ) ಬೆರಪೆನ್' ಎನ್ನಲಾಗದು.[36]

ಪದ್ಯ ೧೦೮–೧೧೦ : ಈ ಹಿಂದೆ, ೫೨-೮೬ನೆಯ ಪದ್ಯಗಳಲ್ಲಿ ಲಕ್ಷಣಲಕ್ಷ್ಯ ಸಮನ್ವಯಪೂರ್ವಕ ವಿವರಿಸಿರುವ ದಕ್ಷಿಣೋತ್ತರಮಾರ್ಗಭೇದಗಳಿಗೆ ಇವು ಅಧಿಕೋತ್ತರ ಲಕ್ಷ್ಯಗಳಾಗಿವೆ. ಹಿಂದಿನ ಲಕ್ಷ್ಯ ಪದ್ಯಗಳು ಸಮ, ಮಧುರ, ನಿಬಿಡ ಇತ್ಯಾದಿಯಾಗಿ ಬಂಧಾನುಗತವಾಗಿವೆ. ಈ ಮೂರು ಲಕ್ಷ್ಯ ಪದ್ಯಗಳಲ್ಲಿ ಕಾಣಬರುವ ಬೇರೆಯ ಮಾರ್ಗ ಲಕ್ಷಣಗಳಾವುವು ಎಂಬುದನ್ನು ಮಾರ್ಗಕಾರನು ವಿವರಿಸಿಲ್ಲ. ಪ್ರತಿ ಪದ್ಯದ ಪೂರ್ವಾರ್ಧದಲ್ಲಿ ದಕ್ಷಿಣ ಮಾರ್ಗಾನುಗುಣವಾಗಿ ಒಂದು ಸಂಗತಿಯನ್ನು ವರ್ಣಿಸಿ, ಅದನ್ನೇ ಉತ್ತರಾರ್ಧದಲ್ಲಿ ಉತ್ತರ ಮಾರ್ಗಾನುಗುಣವಾಗಿ ನಿರೂಪಿಸಿದೆ. ೧೦೮ನೆಯ ಪದ್ಯದಲ್ಲಿ

---

36 ಬರಿಸು, ಇರಿಸು, ತರಿಸು ಎಂಬ ಕ್ರಿಯಾ ಪದಗಳಲ್ಲಿ ಬರು, ಇರು, ತರು ಎಂಬ ಧಾತುಗಳಿಗೆ ಪ್ರೇರಣಾರ್ಥದಲ್ಲಿ 'ಇಸು' ಪ್ರತ್ಯಯ ಸೇರಿದೆ. 'ಪರಸು', 'ಬೆರಸು'—ಇವೇ ಧಾತುಗಳಾಗಿವೆ; ಇವಕ್ಕೆ ಮತ್ತೆ ಪ್ರೇರಣಾರ್ಥಕ ಇಸು ಪ್ರತ್ಯಯವನ್ನು ಹತ್ತಿಸಲಾಗದ ಕಾರಣ, 'ಇಸು'ವಿಗೆ 'ಪು' ಆದೇಶವಾಗಿ ಬರುವಂತಿಲ್ಲ.

'ಹರಡು' ಎಂಬ ಅರ್ಥದಲ್ಲಿ 'ಪರಪು–ಪರೆಪು' ಎಂಬ ಬೇರೆಯ ಧಾತುವೇ ಇದೆ. ಬೆರಸು : 'ಬೆರೆ' ಧಾತುವಿನಿಂದ ಬೆರೆಯಿಪೆ(ಪ್ಪೆ)ನ್ ಎಂಬ ರೂಪ ಸಾಧನೀಯ.

ಕೇಶಿರಾಜನು ಸೂ. ೨೩೨ರಲ್ಲಿ, ಭವಿಷ್ಯದ 'ವ' ಕಾರವು 'ಪ' ಕಾರವಾದಾಗ 'ಪ' ಕಾರಕ್ಕೆ ದ್ವಿತ್ವವುಂಟಾಗುವುದೆಂದು ಹೇಳಿ, (ತೊಳಗುವಂ>) ತೊಳಪ್ಪಂ, (ಬೆಳಗುವಂ>) ಬೆಳಪ್ಪಂ,(ಉದಯಿಸುವಂ>) ಉದಯಿಪ್ಪಂ ಎಂಬ ಪ್ರಯೋಗಗಳನ್ನು ಕೊಟ್ಟಿದ್ದಾನೆ. ಕ. ರಾ. ಮಾರ್ಗದ ಪ್ರಯೋಗದ ಕ್ರಿಯಾಪದಗಳೂ ಭವಿಷ್ಯತ್ಕಾಲ ವಾಚಕಗಳು. (೧೧೦ನೆಯ ಪದ್ಯದಲ್ಲಿ 'ಸೊಗಯಿಪ್ಪುದಾಯ್ತು' ಎಂಬ ಪ್ರಯೋಗವನ್ನೂ ಗಮನಿಸಿ.)

"ವ್ಯಾಕರಣ ಗ್ರಂಥಗಳಲ್ಲಿ 'ಇಸು', 'ಪು', 'ಪ್ಪು' ಪ್ರತ್ಯಯಗಳ ಉಲ್ಲೇಖವಿದೆಯಲ್ಲದೆ, ಅವುಗಳಲ್ಲಿ ಆಯಾ ಮಾರ್ಗಗಳ ವೈಶಿಷ್ಟ್ಯವೂ ಇದೆ ಎಂದು ನಿರುಕ್ತವಾಗಿಲ್ಲ." (ಮುಳಿಯ ತಿಮ್ಮಪ್ಪಯ್ಯ : ಕ. ರಾ. ವಿವೇಕ—ಭಾಗ ೨)

'ಮುನಿನಾಥ'ನ ಸ್ವಭಾವ ಸ್ವರೂಪ ವರ್ಣನೆಯಿದೆ; ೧೮೯ನೆಯ ಪದ್ಯದಲ್ಲಿ, ಅದೇ 'ಮುನೀಂದ್ರ'ನ ಹೆಚ್ಚಿನ ಗುಣವಿಶೇಷದ ಉಲ್ಲೇಖನದೊಂದಿಗೆ, ಆ ಮುನಿಗೆ ಭಕ್ತನೊಬ್ಬನು (ಭವ್ಯನೊಬ್ಬನು ?) 'ಮುದದೆ ಬಾಗಿದ' ಉಲ್ಲೇಖನವಿದೆ. (ಬಹುಶಃ ಆ ಮುನಿಪನ ಪ್ರಭಾವದಿಂದ) ಸಸ್ಯಸಂಪತ್ತೆಂಬ 'ಧರಾಲಲನೆ ವಿಶಾಲ ಲಕ್ಷ್ಮಿಯಿಂದ ಕೂಡಿ ಮೆರೆದಳು' ಎಂಬುದು ೧೧೦ನೆಯ ಪದ್ಯದಲ್ಲಿನ ವರ್ಣ್ಯ ವಿಷಯ.[37]

ನಿಱಿಸು=ಇರಿಸು, ನೆಲೆಗೊಳಿಸು. ಮುಳಿಸು=ಮುನಿಸು, ಕೋಪ. ಒಯ್ಯನೆ=ಮೆಲ್ಲನೆ, ನಿಧಾನವಾಗಿ. ತ್ರಿದಶ=ಸ್ವರ್ಗ. ನಿಷೇವಿ=ಸೇವಿಸುವವನು. ಮೌಳಿ, ಮುಕುಟ=ಕಿರೀಟ. ಮೇಖಲೆ=ಕಾಂಚಿದಾಮ, ಡಾಬು, ಒಡ್ಯಾಣ.

ದುಷ್ಕರ ಕಾವ್ಯ-ಚಿತ್ರಬಂಧ

'ಕವಿರಾಜ ಮಾರ್ಗ'ದ ಎರಡನೆಯ ಪರಿಚ್ಛೇದವು ಸಂಪೂರ್ಣವಾಗಿ 'ಶಬ್ದಾಲಂಕಾರ ವರ್ಣನಾ ನಿರ್ಣಯ'ಕ್ಕೆ ಮೀಸಲಾಗಿದೆ. ಶಬ್ದಾಲಂಕಾರಗಳನ್ನು ವಿವರಿಸುವುದಕ್ಕೆ ಮೊದಲು, ಕಾವ್ಯಶರೀರಕ್ಕೆ

---

37 ಈ ಮೂರು ಪದ್ಯಗಳಲ್ಲಿ, "ಕ್ರಮವಾಗಿ ವಚನರಚನಾ ಪದ್ಧತಿಗಳ ಭೇದ, ಆ ರಚನೆಗಳೊಳಗಿನ ಆರ್ಥಿಕ ಕ್ರಮಭೇದ, ಆ ಅರ್ಥಗಳೊಳಗಿನ ಅಲಂಕಾರ ನಿರೂಪಣ ಕ್ರಮಭೇದ—ಇವುಗಳ ಸೈತು ಕೊಂಕುಗಳೊಡನೆ ದಕ್ಷಿಣೋತ್ತರ ಮಾರ್ಗಭೇದಗಳು ವ್ಯಕ್ತವಾಗುವಂತೆ ತೋರುವುದು" ಎಂದು ಅಭಿಪ್ರಾಯಪಟ್ಟಿರುವ ಮುಳಿಯ ತಿಮ್ಮಪ್ಪಯ್ಯನವರು ಆ ಅಂಶಗಳನ್ನು ತಮ್ಮ 'ಕ. ರಾ. ಮಾರ್ಗ ವಿವೇಕ' (ಭಾಗ-೨) ದಲ್ಲಿ ವಿಸ್ತಾರವಾಗಿ ವಿವೇಚಿಸಿದ್ದಾರೆ. "ದಕ್ಷಿಣ ಮಾರ್ಗೋದಿತೋಕ್ತಿ ಭೇದಕ ಗುಣಂ ಸ್ವಭಾವಾಖ್ಯಾನಂ, ವಿತತೋತ್ತರ ಮಾರ್ಗಗತಂ ಪ್ರತೀತ ವಕ್ರೋಕ್ತಿಕೃತಂ" ಎಂಬ ಮಾರ್ಗಕಾರನ ಲಕ್ಷಣನಿರ್ದೇಶವು ಅವರ ವಿವೇಚನೆಗೆ ಪ್ರೇರಕವಾಗಿದ್ದು, ಪ್ರಸ್ತುತ ಪದ್ಯಗಳಲ್ಲಿ ಆ ಭೇದಕಗುಣಗಳನ್ನು ಪ್ರಸ್ಫುಟಗೊಳಿಸುವುದು ಅವರ ಉದ್ದೇಶವಾಗಿದೆ. ಅವರ ವಿವೇಚನೆ ಸೂಕ್ಷ್ಮ ವಿಶ್ಲೇಷಣೆಯಿಂದ ಕೂಡಿದ್ದು ಗಮನಾರ್ಹವಾಗಿದ್ದರೂ ವಿಶೇಷ ಫಲಕಾರಿಯಾಗಿದೆ ಎಂದು ನಮಗೆ ತೋರುವುದಿಲ್ಲ.

ಅಲಂಕಾರಪ್ರಾಯವಾಗದ ಶಾಬ್ದಿಕ ದೋಷಗಳನ್ನು ವಿವರಿಸಿ, ಕೆಲವು ವಿಕಲ್ಪ ಪ್ರಯೋಗಪದ್ಧತಿಯನ್ನು ತಿಳಿಸಿಕೊಟ್ಟಿದ್ದಾನೆ. ಪ್ರಾಸ ವಿಚಾರದಿಂದ ಶಬ್ದಾಲಂಕಾರ ಪ್ರಕರಣ ನಿಜವಾಗಿ ಪ್ರಾರಂಭವಾಗುತ್ತದೆಯೆನ್ನಬಹುದು. ಅನಂತರ, ಕಾವ್ಯಶರೀರಕ್ಕೆ ಶೋಭೆಯನ್ನುಂಟುಮಾಡುವ 'ಗುಣ'ಗಳನ್ನೂ 'ಬಂಧ'ಗಳನ್ನೂ ದಂಡಿಯ ಮೇಲ್ಪಂಕ್ತಿಯನ್ನು ಅನುಸರಿಸಿ ದಕ್ಷಿಣೋತ್ತರ ಮಾರ್ಗದ್ವಯ ವಿಭಾಗಾನುಸಾರಿಯಾಗಿ ವ್ಯಾವರ್ಣಿಸಿದ್ದಾನೆ. ಈ ಭಾಗದಲ್ಲಿ ಗುಣಗಳೂ ಬಂಧಪ್ರಕಾರಗಳೂ ಹೇಗೆ ಅರ್ಥಪೋಷಣೆಗೂ ರಸಪ್ರತೀತಿಗೂ ಸಾಧಕಗಳಾಗಬಲ್ಲುವು ಎಂಬುದನ್ನು ಮನಗಂಡಿದ್ದೇವೆ. ಈ ಶಬ್ದಾಲಂಕಾರ ಪ್ರಪಂಚದ ಶಕ್ಯತೆ ಸೌಂದರ್ಯದ ಎಲ್ಲೆಯನ್ನು ದಾಟಿದಾಗ ಅದು 'ದುಷ್ಕರ'ವಾಗಿ (ರಚಿಸಲು ಕಷ್ಟವಾಗಿ) ಮಾತ್ರವಲ್ಲದೆ, 'ಚಿತ್ರ' ವಾಗಿಯೂ (ವಿಸ್ಮಯಕಾರಿಯಾಗಿ) ಪರಿಣಮಿಸುತ್ತದೆ. ಇಂಥ 'ಬಂಧ'ವು ರಸದ ಸ್ಪರ್ಶವೂ ಇಲ್ಲದೆ ಕೇವಲ ಚಮತ್ಕಾರಪರ್ಯವಸಾಯಿಯಾಗುತ್ತದೆ.

ಭಾಮಹನ 'ಕಾವ್ಯಾಲಂಕಾರ'ದಲ್ಲಿ ದುಷ್ಕರ ಕಾವ್ಯದ ಉಲ್ಲೇಖವಿಲ್ಲ. ಮಾರ್ಗಕಾರನು ದಂಡಿಯ 'ಕಾವ್ಯಾದರ್ಶ'ದಲ್ಲಿ ಹೇಳಿರುವ ಗೋಮೂತ್ರಿಕಾದಿ ದುಷ್ಕರ ಕಾವ್ಯಗಳಿಗೆ ಲಕ್ಷ್ಯಗಳನ್ನು ಮಾತ್ರ ಕೊಟ್ಟಿರುತ್ತಾನೆ; ಲಕ್ಷಣಗಳನ್ನು ಹೇಳಿಲ್ಲ.

ಕವಿರಾಜ ಮಾರ್ಗಕಾರನು ಪದಗತ ಪ್ರತ್ಯಾಗತ, ಪಾದಗತ ಪ್ರತ್ಯಾಗತ, ಸಮಸ್ತಗತ ಪ್ರತ್ಯಾಗತ, ಅರ್ಧಗತ ಪ್ರತ್ಯಾಗತ, ಗೂಢಚತುರ್ಥ, ಏಕಾಕ್ಷರಿ, ದ್ವ್ಯಕ್ಷರಿ, ಅತಾಲವ್ಯ, ನಿರೋಷ್ಠ್ಯ, ಸರ್ವತೋಭದ್ರ, ನಿರುತ್ತರ, ಗೋಮೂತ್ರಿಕ, ಯಮಕ, ಅರ್ಧಭ್ರಮಣ, ಮುರಜಬಂಧ, ಕ್ರಿಯಾಗೋಪಕ, ಚಕ್ರ–ಈ ಚಿತ್ರಬಂಧ ಪ್ರಭೇದಗಳಿಗೆ ಲಕ್ಷ್ಯಗಳನ್ನು ಕೊಟ್ಟಿದ್ದಾನೆ. (ಈ ಲಕ್ಷ್ಯ ಪದ್ಯಗಳೆಲ್ಲ – ೧೧೫ರಿಂದ ೧೩೬ – ಶ್ಲೋಕ ಛಂದಸ್ಸಿನಲ್ಲಿರುವುದು ಗಮನಾರ್ಹ. ಇವುಗಳಲ್ಲಿ ಗೋಮೂತ್ರಿಕೆ, ಮುರಜ, ಮುಂತಾದ ಕೆಲವು ಪದ್ಯಜಾತಿಗಳಲ್ಲಿನ ಅಕ್ಷರಗಳು ಆಯಾ ಚಿತ್ರಾಕೃತಿಗಳಲ್ಲಿ ಅಳವಡು

ವಂತೆ ಚಿತ್ರಬರೆದು ನಿದರ್ಶಿಸಬಹುದು; ಹಾಗೆ ಮಾಡಿದಾಗಲೇ ಅವುಗಳ ಸ್ವರೂಪದ ಅರಿವಾಗುವುದು. ಹೀಗಿದ್ದರೂ ಕೂಡ, ಈ ದುಷ್ಕರಬಂಧಗಳು ಕೇವಲ ಅಮುಖ್ಯವಾದ ಕಾರಣ, ಅವನ್ನು ಚಿತ್ರ ಗಳ ಮೂಲಕ ತೋರಿಸುವ ಪ್ರಯತ್ನಕ್ಕೆ ನಾವು ತೊಡಗಿಲ್ಲ. (ಕುತೂಹಲವುಳ್ಳವರು ಮದ್ರಾಸು ಮುದ್ರಣದ ೭ನೆಯ ಪರಿಶಿಷ್ಟದಲ್ಲಿ ಕೊಟ್ಟಿರುವ ಕೆಲವು ಚಿತ್ರಬಂಧಗಳನ್ನು ಪರಿಶೀಲಿಸಬಹುದು.)

ಪದ್ಯ ೧೧೨–೧೧೪ : ಮಾರ್ಗಕಾರನು ಮೇಲೆ ಹೆಸರಿಸಿರುವ ಬಂಧಪ್ರಕಾರ ಗಳನ್ನೇ ಈ ಮೂರು ಶ್ಲೋಕ ಪದ್ಯಗಳಲ್ಲಿ ಹೆಸರಿಸಿ, "ಇವು ವಿಶಿಷ್ಟ ರೀತಿಯಲ್ಲಿ ಪ್ರಯೋಗವಾಗುವ ದುಷ್ಕರ ಕಾವ್ಯಗಳು, ಇವುಗಳ ಲಕ್ಷ್ಯಭೇದಗಳನ್ನು ಇಲ್ಲಿ ಪ್ರಯೋಗಿಸಿ ತೋರಿಸುತ್ತೇನೆ" ಎಂದು ಸ್ಪಷ್ಟವಾಗಿ ನುಡಿದಿದ್ದಾನೆ.

ಪದ್ಯ ೧೧೫–೧೧೮ : ಇವು ನಾಲ್ಕು 'ಗತಪ್ರತ್ಯಾಗತ' ಎಂಬ ಅಲಂಕಾರದ ನಾಲ್ಕು ಪ್ರಭೇದಗಳು. ಗತಪ್ರತ್ಯಾಗತ ಎಂದರೆ ಮೊದಲೊಮ್ಮೆ ಪ್ರಯೋಗವಾದದ್ದು ಮತ್ತೆ ಪ್ರಯೋಗವಾಗುವುದು, ಪುನರುಕ್ತವಾ ಗುವುದು. ೧೧೫ನೆಯ ಪದ್ಯವು 'ಪದಗತಪ್ರತ್ಯಾಗತ'ಕ್ಕೆ ದೃಷ್ಟಾಂತ; ೧೧೬ನೆಯ ಪದ್ಯವು 'ಪಾದಗತ ಪ್ರತ್ಯಾಗತ'ಕ್ಕೆ ದೃಷ್ಟಾಂತ. ಇವೆರಡರ ಪಾಠವೂ ದೋಷಪೂರ್ಣವಾಗಿರುವಂತಿದೆ; ಅಲ್ಲದೆ ಎರಡ ನೆಯದರ ದ್ವಿತೀಯಪಾದಮಧ್ಯದಲ್ಲಿ ಗ್ರಂಥಪಾತವಾಗಿದೆ. ಆದ್ದ ರಿಂದ, ಇವುಗಳ ಸ್ವರೂಪವನ್ನಾಗಲಿ ಅರ್ಥವನ್ನಾಗಲಿ ಗ್ರಹಿಸುವಂತಿಲ್ಲ.

ಪದ್ಯ ೧೧೭ : ಇದು 'ಸಮಸ್ತಗತ ಪ್ರತ್ಯಾಗತ'. ಮೊದಲ ಪಾದವನ್ನು ವಿಲೋಮವಾಗಿ (ಹಿಂದುಮುಂದಾಗಿ) ಓದಿದರೆ ಎರಡನೆಯ ಪಾದವೂ, ಎರಡನೆಯ ಪಾದವನ್ನು ವಿಲೋಮವಾಗಿ ಓದಿದರೆ ಮೊದಲ ಪಾದವೂ ಆಗುವಂತೆ ಅಕ್ಷರಸಂಯೋಜನೆಯಾಗಿದೆ. ಇಂತು ಗತಪಾದ ಸಮಸ್ತವೂ ಪ್ರತ್ಯಾಗತವಾಗಿದೆ: "ಇದು ನೃಪತುಂಗನ ಇಲ್ಲವೆ ಒಬ್ಬ ಧನುರ್ವಿದ್ಯಾನಿಪುಣ ವೀರನ ವರ್ಣನೆಯಾಗಿರುವಂತೆ

ತೋರುತ್ತದೆ" ಎಂದು ಮುಳಿಯ ತಿಮ್ಮಪ್ಪಯ್ಯನವರು ಅರ್ಥೈಸಲು ಪ್ರಯತ್ನಪಟ್ಟಿದ್ದಾರೆ.

ಪದ್ಯ ೧೧೮: ಅರ್ಧಗತ ಪ್ರತ್ಯಾಗತ. ಇದರ ಸ್ವರೂಪವೂ (ಬಹು ಮಟ್ಟಿಗೆ) ಮೇಲಿನದರಂತೆಯೆ. ಅಲ್ಲಿ ಸಮಸ್ತಪಾದಕ್ಕೆ ಅನ್ವಯ ವಾಗುವ ಲಕ್ಷಣ ಇಲ್ಲಿ ಪ್ರತಿ ಪಾದದ ಅರ್ಧಭಾಗಕ್ಕೆ ಅನ್ವಯವಾಗು ತ್ತದೆ; ಪೂರ್ವಾರ್ಧದ ವಿಲೋಮವಾಚನದಿಂದ ಉತ್ತರಾರ್ಧವೂ, ಉತ್ತರಾರ್ಧದ ವಿಲೋಮವಾಚನದಿಂದ ಪೂರ್ವಾರ್ಧವೂ ಸಿದ್ಧಿಸುತ್ತವೆ.

ಪದ್ಯ ೧೨೦: ಈ ಪದ್ಯದಲ್ಲಿ, ಒಂದು ಮಳೆಗಾಲದ ದಿನದಂದು ಒಬ್ಬ ವಿಟ ಪುರುಷನು ತನ್ನ ಸಮ್ಮುಖದಲ್ಲಿದ್ದ ಪ್ರಿಯೆಯನ್ನು ಕುರಿತು ಹೇಳಿದ ಸಂಗತಿಯನ್ನು 'ನಾಲ್ಕು ಗೂಢಾರ್ಥಗಳನ್ನು ಒಳಕೊಂಡಿರುವಂತೆ' ವರ್ಣಿಸಿದೆ. ಇದೇ 'ಗೂಢ ಚತುರ್ಥ'.

'ಘನಸ್ತನಿತವೂ (ಎಂದರೆ, ಗುಡುಗು) ಕೇಕಿಸ್ವನವೂ (ಎಂದರೆ, ನವಿಲ ಕೂಗುವ ಧ್ವನಿ) ನೀರಧಾರೆಯೂ (ಧಾರಾಕಾರವಾಗಿ ಸುರಿಯುವ ಮಳೆಯ ನೀರು)- ಇವು ಮನಸ್ಸನ್ನು ಬೆಚ್ಚುವಂತೆ ಮಾಡು ತ್ತಿವೆ; ಎಲೌ ಘನಸ್ತನಿಯೇ (ಎಂದರೆ, ದೊಡ್ಡವಾದ ಸ್ತನವುಳ್ಳ ವಳೇ, ಪೆರ್ಮೊಲೆಯವಳೇ), ಹೀಗೆ ಎಲ್ಲೆಲ್ಲಿಯೂ 'ಘನ'(ತ್ವ) ವಿದೆ.'

೧. 'ಘನಸ್ತನಿತ' (=ಮೇಘದ ಧ್ವನಿ; ಘನ=ಮೋಡ, ಮೇಘ) ದಲ್ಲಿ 'ಘನ' ವಿದೆ. ೨. ಕೇಕಿಸ್ವನವು ಬಹಳ ಗಟ್ಟಿಯಾಗಿ ಕೇಳ ತಕ್ಕದ್ದಾದ್ದರಿಂದ ಅದೂ 'ಘನ' ವಾಗಿದೆ. ೩. ನೀರಧಾರೆ (ಘನ= ನೀರು; ಘನಸಾರ=ನೀರು) ಯಂತೂ 'ಘನ'ವೇ ಆಗಿದೆ. ಈ ಮೂರು ವಸ್ತುಗಳಲ್ಲಿನ 'ಘನ' (ತ್ವ)ದ ಜೊತೆಗೆ 'ಘನಸ್ತನಿ' ಯ (ಘನ ಸ್ತನದ) 'ಘನ' (ತ್ವ) ವೂ ಸೇರಿ, ಈ ನಿಗೂಢ ಘನತ್ವವು ನಾಲ್ಕಾ ಗಿದೆ. ಈ ಘನಾರ್ಥವು ಸಂಬಂಧಪಟ್ಟ ನಾಲ್ಕು ಪದಗಳಲ್ಲಿ ವ್ಯಕ್ತಾ ವ್ಯಕ್ತವಾಗಿ ಅಡಗಿರುವುದರಿಂದ, ಇದು 'ಗೂಢಚತುರ್ಥ.'

ಪದ್ಯ ೧೨೧-೧೨೨ : ಇವೆರಡು ಪದ್ಯಗಳಲ್ಲಿ ಕ್ರಮವಾಗಿ ಒಂದಕ್ಷರ (‘ನ’ ಕಾರ) ಮತ್ತು ಎರಡಕ್ಷರಗಳನ್ನು (‘ನ’ ಕಾರ, ‘ಮ’ ಕಾರ) ಮಾತ್ರ ಉಪಯೋಗಿಸಲಾಗಿದೆ. ಮೊದಲ ಪದ್ಯವು ಅರ್ಥವಾಗುವಂತಿಲ್ಲ. ಎರಡನೆಯ ಪದ್ಯದ ಅನ್ವಯ: ‘ಮಾನಿನಿ, ಮುನ್ನಂ ಆಂ ನೀನೆ, ನೀನ್ ಆಂ; ಇನ್ ಅನುಮಾನಂ ಏಂ? ಮಾನಂ ಆಂ; ಮುಂ ನಂನ್ನೈಮಾನಂ ನಾನೆ, ನಿನ್ನ ಆನನಮುಂ (ನಾನೆ)’.

ಪದ್ಯ ೧೨೩-೧೨೪ : ಇವೆರಡು ಪದ್ಯಗಳೂ ಅತಾಲವ್ಯಗಳು : ಎಂದರೆ, ತಾಲವ್ಯಾಕ್ಷರಗಳನ್ನು (Palatals) (ಇ, ಈ, ಎ, ಏ, ಚವರ್ಗ ಮತ್ತು ಯ, ಶ) ಉಪಯೋಗಿಸದೆ ರಚಿಸಿದವು. (ಅಕ್ಷರಗಳ ಉತ್ಪತ್ತಿಸ್ಥಾನ ವಿಚಾರಕ್ಕೆ ‘ಕನ್ನಡ ಕೈಪಿಡಿ’ ಯನ್ನು ನೋಡಿ: ಪು. ೫). (ಆದರೆ, ೧೨೫ನೆಯ ಪದ್ಯದಲ್ಲಿ ‘ಯ’ ಕಾರವೊಂದು ಪ್ರಯೋಗವಾಗಿದೆ). ೧೨೪ನೆಯ ಪದ್ಯದ ಅರ್ಥ ಸ್ಪಷ್ಟವಾಗಿಲ್ಲ. ೧೨೫ನೆಯ ಪದ್ಯದಲ್ಲಿ, “ಪರಮೋದಾರನೂ ಕಾದಂಬಿನೀನಾಥನೂ (ಕಾದಂಬಿನಿ = ಮೇಘ. ಕಾದಂಬಿನೀನಾಥ = ಚಂದ್ರ ?) ಗುಣನಿಲಯನೂ ಆದ ನನ್ನ ಪ್ರಿಯನಾದ ರಾಮನ ಬಳಿ ಸಾರಿ, ಅವನನ್ನು ಕೂಡು” ಎಂದು ಸೀತೆ ಮಾರುತಿಗೆ ತಿಳಿಸಿದ ಸಂದೇಶವನ್ನು ನಿರೂಪಿಸಿದೆ.

ಪದ್ಯ ೧೨೫ : ಇದು ನಿರೋಷ್ಠ್ಯಕ್ಕೆ ಉದಾಹರಣೆ. ಇದರಲ್ಲಿ ಓಷ್ಠ್ಯಗಳನ್ನು (Labials) ಎಂದರೆ ಉ, ಊ (ಒ, ಓ), ಮತ್ತು ‘ಪ’ ವರ್ಗದ ಅಕ್ಷರಗಳನ್ನು ಉಪಯೋಗಿಸಿಲ್ಲ. ಇದು ಕೂಡ ಮಾರುತಿಗೆ ತಿಳಿಸಿದ ಸಂದೇಶವಾಕ್ಯದಂತಿದೆ: “ನರನಾಯಕನಾದ ಕಾಂತನನ್ನು ನಾನು (ನಿನ್ನೊಡನೆ ಬಂದು) ಸೇರಿದರೆ ಪ್ರಯೋಜನವೇನು? ಅದರಿಂದ, (ಅವನೇ ಇಲ್ಲಿಗೆ ಬಂದು ದಶವದನನನ್ನು ಜಯಿಸುವುದರ ಮೂಲಕ) ಇಲ್ಲಿ ಅವನನ್ನು ನಾನು ಕೂಡಿದಂತೆ ಎಂದಿಗೂ ಆಗುವುದಿಲ್ಲ”— ಎಂದು ಪದ್ಯದ ಅಭಿಪ್ರಾಯವಾಗಬಹುದು.

ಪದ್ಯ ೧೨೬ : ಇದರ ಬಂಧಸ್ವರೂಪವನ್ನು ಮದ್ರಾಸು ಮುದ್ರಣ (ಪು. ೧೭೭) ದಲ್ಲಿ ಬಿಡಿಸಿ ತೋರಿಸಿದೆ. ಪದ್ಯದ ಅಭಿಪ್ರಾಯ ಗೃಹೀತವಾಗುವುದಿಲ್ಲ.

ಪದ್ಯ ೧೨೭ : ಪದ್ಯದಲ್ಲಿ ಪ್ರಶ್ನೆಗಳನ್ನು ಅಳವಡಿಸಿ, ಅದಕ್ಕೆ ಉತ್ತರವು ಹೊರಪಡದಿದ್ದರೆ ಅದು 'ನಿರುತ್ತರ'ವೆನಿಸುವುದು. "ಅಬ್ಧಿಗೆ (ಸಮುದ್ರಕ್ಕೆ) ಬನ್ನಮಂ (ಭಂಗವನ್ನು) ಕುಱಿತು (ಉದ್ದೇಶಿಸಿ), ಧರಾಚಕ್ರಕ್ಕೆ ಎಱೆಯುಂ (ಒಡೆಯು) ಪೆಱನಾವಂ (ಬೇರೆ ಯಾವಾತ ನಿದ್ದಾನೆ)? ಕೆಳೆಯುಪ್ಪವಂ (ಪೆಱನಾವಂ)? ಎಣೆಯೆಂಬನ್ನಂ (ಸರಿ ಸಮಾನ ಎಂಬಂಥವನು) ನೆಱೆಯಾರ್ (ಪರಿಪೂರ್ಣನಾರು)?" (ಬಹುಶಃ ಇದೂ ರಾಮಾಯಣದ ಕಥೆಗೇ ಸಂಬಂಧಪಟ್ಟ ಪದ್ಯವಿರ ಬಹುದು. ಸಮುದ್ರಕ್ಕೆ ಸೇತುವೆ ಕಟ್ಟಿ ಸಮುದ್ರರಾಜನ ಮಹಿಮೆ ಯನ್ನು ಭಂಗಗೊಳಿಸಿದ ಶ್ರೀರಾಮನಿಗೆ ಸಮಾನರಾರು ಎಂಬ ಪ್ರಶ್ನೆಗೆ 'ಯಾರೂ ಇಲ್ಲ' ಎಂಬ ನಿಷೇಧಾತ್ಮಕ ಉತ್ತರವೇ ಬರುವುದರಿಂದ, ಅದು 'ನಿರುತ್ತರ'ಕ್ಕೆ ಸಮ ಎಂದು ಭಾವಿಸಬೇಕು. ಶ್ರೀರಾಮನಿಗೆ ಮಾತ್ರವಲ್ಲದೆ ನೃಪತುಂಗ ಇಲ್ಲವೆ ಅವನ ತಂದೆ ಗೋವಿಂದನ ಪ್ರಸಕ್ತಿ ಇಲ್ಲಿರಬಹುದೆಂದು ಮುಳಿಯ ತಿಮ್ಮಪ್ಪಯ್ಯನವರ ಊಹೆ).

ಪದ್ಯ ೧೨೮ : 'ಗೋಮೂತ್ರಿಕೆ' ಸುಲಭಸಾಧ್ಯವಾದ ಬಂಧ. (ಕ. ರಾ. ಮಾರ್ಗ: ಮದ್ರಾಸು ಮುದ್ರಣ, ಪು. ೧೭೯ ನೋಡಿ.) ಮದ್ರಾಸು ಮುದ್ರಣದಲ್ಲಿ, ಎರಡನೆಯ ಪಾದದ 'ಕೇಳನಲ್ಲನಂ' ಎಂಬ ಪಾಠಕ್ಕೆ (ಇದು ಪಾಠಕರ ಪ್ರತಿಯ ಪಾಠ) 'ಕೇಕಿನರ್ತನಂ' ಎಂಬ ಪಾಠಾಂ ತರವಿದೆ. ಎರಡು ಪಾಠಗಳೂ ಬಂಧಕ್ಕೆ ಹೊಂದಿಕೊಳ್ಳುತ್ತವೆ.

ಪದ್ಯ ೧೨೯ : ಇಲ್ಲಿ 'ಯಮಕ'ವೆಂಬ ಶಬ್ದಾಲಂಕಾರದ ಪ್ರಕಾರಗಳನ್ನು ಹೆಸರಿಸಲಾಗಿದೆಯೇ ಹೊರತು, ಅದರ ಲಕ್ಷಣವನ್ನು ವಿವರಿಸಿಲ್ಲ.[38]

---

38 ಭಾಮಹನು 'ಯಮಕ'ದ ಅನೇಕ ಪ್ರಭೇದಗಳನ್ನು ಹೇಳಿ, ಅದನ್ನು ಕುರಿತು ವಿಸ್ತಾರವಾಗಿ ವಿವೇಚಿಸಿದ್ದಾನೆ. (ಕಾವ್ಯಾಲಂಕಾರ: II-೯ರಿಂದ ೧೮). 'ಕಾವ್ಯಾವಲೋಕನ'ದ ಕರ್ತೃ ನಾಗವರ್ಮನೂ ದಂಡಿ ಭಾಮಹರನ್ನು ಅನುಸರಿಸಿ ಅನೇಕ ಲಕ್ಷ್ಯಗಳೊಡನೆ 'ಯಮಕ'ವನ್ನು ವ್ಯಾವರ್ಣಿಸಿದ್ದಾನೆ.

ಕವಿರಾಜಮಾರ್ಗದ ಈ ಪದ್ಯದಲ್ಲಿ ಪಾಠದೋಷವಿರುವಂತಿದೆ. '[ಪ] ದಾಪಾದಾರ್ಥ' ಎಂಬ ಸ್ವೀಕೃತ ಪಾಠವನ್ನು '[ಪಾದ] ಪಾದಾರ್ಥ' ಎಂದು

"ಮೂರು ಅಥವಾ ಅದಕ್ಕಿಂತ ಹೆಚ್ಚಿನ ಅಕ್ಷರಗಳುಳ್ಳ ಪದವೋ ಪದ ಭಾಗವೋ ಒಂದು ಪದ್ಯದ ಆದಿ ಮಧ್ಯ ಅಂತ ಈ ಸ್ಥಾನಗಳಲ್ಲಿ ನಿಯತವಾಗಿ ಪುನಃ ಪುನಃ ಬಂದರೆ ಆದಕ್ಕೆ ಯಮಕವೆಂದು ಹೆಸರು." (ಕ. ಕೈಪಿಡಿ, ಪು. ೩೦೭) ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಈ ಅಲಂಕಾರ ತಕ್ಕಮಟ್ಟಿಗೆ ಕವಿಜನಪ್ರಿಯವಾಗಿದೆ.

ದಂಡಿಯ ಶ್ಲೋಕ ಹೀಗಿದೆ :

ಅವ್ಯಪೇತವ್ಯಪೇತಾತ್ಮಾ ವ್ಯಾವೃತ್ತಿರ್ವರ್ಣ ಸಂಹತೇಃ |
ಯಮಕಂ ತಚ್ಚಪಾದಾನಾಮಾದಿ ಮಧ್ಯಾಂತಗೋಚರಂ ||

—III, ೧

ಪದ್ಯ ೧೩೦-೧೩೭ : 'ಯಮಕಾಲಂಕಾರ'ದ ಈ ಲಕ್ಷ್ಯ ಪದ್ಯಗಳಲ್ಲಿ ಅಲಂಕಾರವು ಸುಗೋಚರವಾಗಿರುವುದಾದರೂ, ಕೆಲವು ಪದ್ಯಗಳ ಅಭಿಪ್ರಾಯವೇನೆಂಬುದು ಸ್ಪಷ್ಟವಾಗುವುದಿಲ್ಲ.

೧೩೦ನೆಯ ಪದ್ಯ 'ರಾಮಾಯಣ'ಕ್ಕೆ ಸಂಬಂಧಪಟ್ಟದ್ದು. ಹನುಮಂತನು ಲಂಕೆಯಲ್ಲಿ ಜಾನಕಿಯನ್ನು ನೋಡಿ ಹಿಂದಿರುಗಿದ ಮೇಲೆ, 'ಲಂಕೆಗೆ ಹೋಗಿ ಜಾನಕಿಯನ್ನು ಕರೆದು ತಾ' ಎಂದು ರಾಮನಲ್ಲಿ ಬಿನ್ನವಿಸಿಕೊಂಡ ಸಂಗತಿ ಈ ಪದ್ಯದಲ್ಲಿ ವರ್ಣಿತವಾಗಿರುವಂತಿದೆ. ೧೩೩ನೆಯ ಪದ್ಯದಲ್ಲಿಯೂ ಇದೇ ಸಂಗತಿಯನ್ನು ಬೇರೆಯ ಮಾತುಗಳಲ್ಲಿ ನಿರೂಪಿಸಿರುವಂತಿದೆ. ೧೩೪ನೆಯ ಪದ್ಯದಲ್ಲಿ ಮತ್ತಗಜವೊಂದರ ವರ್ಣನೆ ಸ್ಪಷ್ಟವಾಗಿದೆ: 'ಅಜೇಯವಾದ ಮತ್ತಗಜವು, ತ್ರಿಜಗನ್ಮರ್ದನೂ ನೀಲಮೇಘದಂತಿರುವವನೂ ಆದ ವಾರಿಜನಾಭನನ್ನು (ವಿಷ್ಣುವನ್ನು) ಹೋಲುತ್ತದೆ'.

ತಿದ್ದಿಕೊಳ್ಳುವುದು ಮೇಲೆಂದು ಕಾಣುತ್ತದೆ. ಅಲ್ಲದೆ, 'ಪ್ರಮಿತಾದ್ಯಂತ ದೂಷ್ಯೋಪಕ್ರಮಾನೇಕ ಪ್ರಕಲ್ಪಿತಂ' ಎಂಬಲ್ಲಿ '....ಮಧ್ಯೋಪಕ್ರಮಾನೇಕ' ಎಂದಿರಬಹುದೆಂದು ಕಾಣುತ್ತದೆ. ಹೀಗೆ ತಿದ್ದಿಕೊಂಡರೆ, ಪಾದಸಮ, ಪಾದಾರ್ಧಸಮ, ಆದಿ, ಮಧ್ಯ, ಅಂತ—ಎಂಬ ಐದು ಪ್ರಕಾರಗಳನ್ನು ಮಾರ್ಗಕಾರನು ಉಲ್ಲೇಖಿಸಿದ್ದಾನೆಂದು ತಿಳಿಯಬಹುದು.

ಪದ್ಯ ೧೫೯-೧೪೦ : ಇವು ಕ್ರಮವಾಗಿ 'ಅರ್ಧಭ್ರಮಣ' ಮತ್ತು 'ಮುರಜಬಂಧ'ಗಳಿಗೆ ದೃಷ್ಟಾಂತಗಳು. ಇವುಗಳ ರಚನಾ ಸ್ವರೂಪ ವನ್ನು ಮದ್ರಾಸು ಮುದ್ರಣದಲ್ಲಿ (ಪು. ೧೭೮-೧೭೯) ತೋರಿಸಿ ದ್ದಾರೆ.

ಪದ್ಯ ೧೪೧ : ಇದು 'ಕ್ರಿಯಾಗೋಪಕ' ಎಂಬ ಬಂಧಕ್ಕೆ ದೃಷ್ಟಾಂತ. ಕ್ರಿಯೆಯನ್ನು (ಅಥವಾ ಕ್ರಿಯಾಪದವನ್ನು) ಅಧ್ಯಾಹಾರ ಮಾಡಿಕೊಳ್ಳುವಂತೆಯೋ ಇಲ್ಲವೆ ಬೇರೆಯ ರೀತಿಯಲ್ಲಿಯೋ ಗೋಪನ ಮಾಡುವುದೆ (ಮರೆಯಾಗಿರಿಸುವುದೆ) 'ಕ್ರಿಯಾ ಗೋಪಕ.' 'ಕಳಿಪಿಂ' ಎಂಬ ಪದದಲ್ಲಿ "ಕಳಿಪು ಎಂಬ ಕ್ರಿಯಾ ಪದವು ಗುಪ್ತವಾಗಿ ಭಾಸವಾಗುತ್ತಿದೆ" ಎಂದು ತಿಮ್ಮಪ್ಪಯ್ಯ ನವರ ಊಹೆ. (ಕಳಿಪು+ಇಂ). ಇಲ್ಲಿ ಕ್ರಿಯಾವಾಚಕವು 'ಗುಪ್ತ ವಾಗಿರದೆ' ಸ್ಪಷ್ಟವಾಗಿಯೇ ಇದೆಯೆಂದು ನಮ್ಮೆಣಿಕೆ. ಆದ್ದರಿಂದ, 'ಅರಸಿ' ಎಂಬ ಪದದಲ್ಲಿಯೇ ಗುಪ್ತಕ್ರಿಯೆನ್ನು ನಾವು ಅರಸಬೇಕಾ ಗಿದೆ. "ದುಷ್ಕರ ಕಾವ್ಯಬಂಧಗಳಲ್ಲಿ ರ-ಱ ಕಾರಭೇದಗಳನ್ನಷ್ಟೇ ಅಲ್ಲ; ಕ-ಖ, ದ-ಧ ಮೊದಲಾದ ಏಕಜಾತೀಯುಗಳಾದ ಅಲ್ಪ ಮಹಾಪ್ರಾಣಾಕ್ಷರಗಳೊಳಗಿನ ಭೇದವೂ ಪರಿಗಣಿಸಲ್ಪಡುವುದಿಲ್ಲ." (ಕ. ರಾ. ವಿವೇಕ-ಭಾಗ ೧; ಪು. ೮೯). ಆದ್ದರಿಂದ, ದ್ವಿತೀಯ ಪಾದದ ನಾಮವಾಚಕವಾದ 'ಅರಸಿ'ಯೊಂದಿಗೆ ಪ್ರಥಮ ಪಾದದಲ್ಲಿ 'ಅರಸಿ' (ಅಱಸಿ=ಹುಡುಕಿ) ಎಂಬ ಕ್ರಿಯಾಪದವನ್ನು ನಾಮ ವಾಚಕ ಭ್ರಾಂತಿ ಬರುವಂತೆ ಕವಿ ಚಮತ್ಕೃತಿಯಿಂದ ಯೋಜಿಸಿರುವ ನೆಂದು ತೋರುತ್ತದೆ. (ಇಲ್ಲಿ ಯಮಕಾಲಂಕಾರವೂ ಸಿದ್ಧವಾಗು ತ್ತದೆ; ಇದು ಹೆಚ್ಚಿನ ಚಮತ್ಕೃತಿ). ಆಗ, ಪದ್ಯದ ಅನ್ವಯವು ಹೀಗಾಗುವುದು : 'ಪರಿಜನಮುಂ ಅರಸಿ (ಹುಡುಕಿ), ಅದಿವ್ಯಸೇವಾ ದರದೆ[39] (ಲೋಕಸಾಮಾನ್ಯವಾದ ಸೇವೆಗೆ ಅನುಗುಣವಾದ ಆದರ

---

39 'ಅರಸಿಯ ದಿವ್ಯಸೇನಾದರದೆ' ಎಂದು ಸ್ವೀಕೃತ ಪಾಠ. ಕೆ. ಬಿ. ಪಾಠಕರ ಹಾಗೂ ಮದ್ರಾಸಿನ ಮುದ್ರಣಗಳಲ್ಲಿಯೂ ಇದೇ ಪಾಠವಿದೆ. ಮದ್ರಾಸು

ದಿಂದ), ಇರದೆ, ಈಗಡೆ (ಈಗಲೆ), ನಿನ್ನ ಅರಸಿಯಂ (ರಾಣಿಯನ್ನು) ಎಯ್ದುವಿನಂ (ಸೇರುವಂತೆ), ಕಳಿಪಿಂ (ಕಳಿಸಿಕೊಡಿ).'

ಪದ್ಯ ೧೪೨: ಇದು 'ಚಕ್ರಬಂಧ'ಕ್ಕೆ ದೃಷ್ಟಾಂತ. ಒಂದು ದೃಷ್ಟಿಯಿಂದ ಇದು ಮುಖ್ಯವಾದ ಪದ್ಯ. ಚಕ್ರಬಂಧಗತವಾಗಿರುವುದೇ ಅದರ ಮುಖ್ಯತೆಗೆ ಕಾರಣ. ಆ ಮುಖ್ಯತೆಯನ್ನು ಕುರಿತು ಮದ್ರಾಸು ಮುದ್ರಣದ ಸಂಪಾದಕರು ತಾವು 'ಉದ್ಧಾರ' ಮಾಡಿ (ಎಂದರೆ ಪದ್ಯವನ್ನು ಚಕ್ರಚಿತ್ರದಲ್ಲಿ ಅಳವಡಿಸಿ ತೋರಿಸಿ) ದೃಷ್ಟಾಂತಿಸಿರುವ 'ಚಕ್ರಬಂಧ'ದ ಕೆಳಗೆ ಈ ರೀತಿ ಟಿಪ್ಪಣಿ ಬರೆದಿರುತ್ತಾರೆ:

"ಈ ಚಕ್ರಬಂಧದಲ್ಲಿ ಅರಗಳ ಒಂದು ಗೊತ್ತಾದ ಸ್ಥಾನದ ಅಕ್ಷರಗಳ ಸಂಯೋಜನದಿಂದ ಕವಿಕಾವ್ಯ ವಿಚಾರವು ತಿಳಿಯಬೇಕು. ಸಂಸ್ಕೃತ 'ಪ್ರತಾಪರುದ್ರೀಯ'ದ ಚಕ್ರಬಂಧ ಶ್ಲೋಕದಲ್ಲಿ ೪-೬ನೆಯ ಅಕ್ಷರಗಳ ಯೋಜನೆಯಿಂದ 'ವೈದ್ಯನಾಥಕೃತ ಪ್ರತಾಪರುದ್ರ ಯಶೋಭೂಷಣ' ಎಂಬ ವಿಷಯವು ತಿಳಿದುಬರುವುದು. ಆದರೆ ಈ ಬಂಧದಲ್ಲಿ ಅಂತಹ ವಿಷಯವು ತಿಳಿಯುವಂತಿಲ್ಲ."

ಈ ಚಕ್ರಬಂಧ ಪದ್ಯದ ವಿಚಾರವಾಗಿ ತಮ್ಮ 'ಕವಿರಾಜಮಾರ್ಗ ವಿವೇಕ' (ಭಾಗ ೧; ಪು. ೮೬-೯೫) ದಲ್ಲಿ ದಿ|| ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರು ಬಹು ಪ್ರಗಲ್ಭತೆಯಿಂದ ವಿವೇಚನೆ ಮಾಡಿರುತ್ತಾರೆ. ಕವಿರಾಜಮಾರ್ಗದ ಕರ್ತೃತ್ವದ ವಿಷಯವಾಗಿ ಈ ಪದ್ಯವು ಬೆಳಕುಬೀರುತ್ತದೆ ಎಂದು ಅವರ ಅಭಿಪ್ರಾಯ. ಜಿಜ್ಞಾಸುಗಳು ಅವಶ್ಯವಾಗಿ ಅವರ ವಿಚಾರಗಳನ್ನು ಗಮನಿಸಬೇಕು. ಪೀಠಿಕೆಯಲ್ಲಿ ಕರ್ತೃತ್ವ ವಿಷಯಕವಾದ ಚರ್ಚೆಯ ಸಂಬಂಧದಲ್ಲಿ ಈ ಅಂಶವನ್ನು ನಾವು ಕೇವಲ ಪ್ರಾಸಂಗಿಕವಾಗಿ ಸೂಚಿಸಿರುವುದರಿಂದ, ಆ ಪದ್ಯದ ವಿಚಾರವನ್ನು ಇಲ್ಲಿ ಪ್ರಕೃತೋಚಿತವಾಗಿ ಪರಿಶೀಲಿಸಲಾಗಿದೆ.

ಮುದ್ರಣದಲ್ಲಿ 'ದಿವ್ಯಸೇವಾದರ . . .' ಎಂಬ ಪಾಠಾಂತರವನ್ನು ಕೊಟ್ಟಿದೆ. (ಪರಿಶಿಷ್ಟ ೨, ಪು. ೧೨೪ ನೋಡಿ).

ತನ್ನ ಸಿದ್ಧಾಂತ ಪೋಷಣೆಗಾಗಿ ಮುಳಿಯ ತಿಮ್ಮಪ್ಪಯ್ಯನವರು ಪದ್ಯದಲ್ಲಿ ಕೆಲವು ತಿದ್ದುಪಾಟುಗಳನ್ನು ಅತ್ಯಗತ್ಯವೆಂದು ಸೂಚಿಸಿರುತ್ತಾರೆ. ಆದ್ದರಿಂದ, (ಅತ್ಯಲ್ಪ ವ್ಯತ್ಯಾಸಗಳು ಹೊರತಾಗಿ) ಉಪಲಬ್ಧವಿರುವ ಎರಡು ಗ್ರಂಥ ಪ್ರತಿಗಳಿಗೂ ಸಮಾನವಾಗಿರುವ ಪಾಠವನ್ನು (ಹೋಲಿಕೆಯ ಸೌಲಭ್ಯಕ್ಕಾಗಿ) ಇಲ್ಲಿ ಉದ್ಧರಿಸಿದೆ:—

ಸಂತಂ ಬಾೞ್ವುದು(ವೀ)ಜದಾ ನ(ರ)ಪನೊಳ್ ಸೌ(ಜ)ನ್ಯಲಕ್ಷ್ಮೀಮದಾಂ
ಧಂ ತನ್ನಿಶ್ಚಯ(ಮೆ)ಚ್ಚಿನಿಂ ಪ(ರ)ಗುಣೌದಾ(ಯಾ)ರ್ಭಿಮಾನಂಗಳಿಂ
ಪಿಂತಂ ನೋಡದೆ (ಪಾ)ೞಿಗೆಟ್ಟ(ೞಿ)ಪಿನಂ ಬಾ(ೞ್ವಂ)ತೆ ಬಾೞ್ದಯ್ಯ(ನಾ)
(ಸ)ಂತಂ ತಾಂ ಪಸತಂದನೞ್ತು ಪೆಱುಗುಂ ದಾನಂಗಳಂ ಭೂಪನಾ

[ಪ್ರಕೃತ, ನಮ್ಮ ಪ್ರತಿಯಲ್ಲಿ, ೨ನೆಯ ಪಾದದಲ್ಲಿ, 'ಮೆಚ್ಚಿನಿಂ' ಎಂಬುದಕ್ಕೆ 'ಮೆಚ್ಚಿನೀಂ' ಎಂದಿದೆ.]

ಈ ಪದ್ಯಪಾಠದ ವಿಚಾರವಾಗಿ, ಮುಳಿಯ ತಿಮ್ಮಪ್ಪಯ್ಯನವರ ಪರಾಮರ್ಶೆಯ ಆಶಯವನ್ನು ಹೀಗೆ ಸಂಗ್ರಹಿಸಬಹುದು:—

ಚಕ್ರಬಂಧಗಳೊಳಗೆ ಹಲವು ಭೇದಗಳಿವೆ. ಅವುಗಳಲ್ಲಿ ಇದು 'ಷಡರ' ಚಕ್ರಬಂಧ. ಇದರಲ್ಲಿ ಚಕ್ರದ ಆರು 'ಅರ'ಗಳು (ಅಡ್ಡಕೋಲು, ಅರೆಕಾಲು) ಇರುವುದರಿಂದ ಆ ಹೆಸರು. ಆದರೆ, ಮೂರು ಅರಗಳೇ ಒಂದರ ಮೇಲೊಂದು ಅಡ್ಡನಾಗಿ ಹಾದು, ಆರು ಅರಗಳಾಗುತ್ತವೆ. ಈ (ಮೂರು) ಅರಗಳೊಳಗೆ ಪ್ರತಿಯೊಂದರಲ್ಲಿಯೂ ಹತ್ತೊಂಬತ್ತು ಅಕ್ಷರಗಳು ನೆಲಸುವಂತೆ ಹತ್ತೊಂಬತ್ತು ಸಂಪುಟಗಳಿವೆ. ಬಂಧನಿಯಮಕ್ಕನುಸಾರವಾಗಿ, ಮೊದಲ ಮೂರು ಪಾದಗಳ ಅಕ್ಷರಗಳು ಅನುಕ್ರಮವಾಗಿ ಮೂರು ಅರಗಳಲ್ಲಿಯೂ ನಾಲ್ಕನೆಯ ಪಾದದ ಅಕ್ಷರಗಳು ಚಕ್ರದ ಹೊರವಲಯದಲ್ಲಿಯೂ ಅಳವಡುತ್ತವೆ. ಅಲ್ಲದೆ, ಮೂರೂ ಅರಗಳು ಒಂದನ್ನೊಂದು ಹಾದುಹೋಗುವ ಕೇಂದ್ರ ಅಕ್ಷಸ್ಥಾನ (ಅಕ್ಷಸಂಪುಟ) ದಲ್ಲಿ ಪ್ರತಿ ಪಾದದ ಹತ್ತನೆಯ ಅಕ್ಷರವು ಹಾದುಹೋಗುವುದರಿಂದ ಅದು ಆ ಮೂರು ಪಾದಗಳಿಗೂ ಸಮಾನಾಕ್ಷರವಾಗಿರಬೇಕು; ಹಾಗೂ, ಮೂರನೆಯ ಪಾದದ ಕಡೆಯ ಅಕ್ಷರವೆ ಹೊರವಲಯದಲ್ಲಿ ಪ್ರಾರಂಭವಾಗುವ ನಾಲ್ಕನೆಯ ಪಾದದ ಆದ್ಯಕ್ಷರವೂ, ಆ ನಾಲ್ಕನೆಯ ಪಾದವು ಕ್ರಮವಾಗಿ ಹೊರವಲಯದಲ್ಲಿ ಸುತ್ತುಬಳಸಿಬಂದಮೇಲೆ ಅದರ ಅಂತ್ಯಾಕ್ಷರವೂ ಆಗಿರಬೇಕು. ಸ್ಥೂಲವಾಗಿ ಇದು ಬಂಧಲಕ್ಷಣ. "ಈ ನಿಯಮಕ್ಕೆ ಶ್ಲೋಕಾಕ್ಷರಗಳು ಸರಿಗೂಡದಿದ್ದಲ್ಲಿ, ಚಕ್ರಬಂಧವೇ ಸರಿಯಾಗಿಲ್ಲವೆಂದು ಅಥವಾ ಮಾತೃಕೆಯಲ್ಲಿ ತಪ್ಪುಬಿದ್ದಿದೆ ಎಂದು

ಭಾವಿಸಬೇಕು. ಪ್ರಕೃತ ಶ್ಲೋಕದ ಎರಡೂ ಪಾದಗಳ ಹತ್ತನೆ ಅಕ್ಷರಗಳು 'ರ' ಆಗಿರುವುದರಿಂದ ಅಕ್ಷಸ್ಥಾನವು ಸರಿಗೊಂಡರೂ ಮೂರನೆ ಪಾದದ ಆ ಸ್ಥಾನಾಕ್ಷರವು 'ಟಿ' ಎಂದು ತೋರಿ ಸಂಗಮಿಸುವುದಿಲ್ಲ. ಇಂಥ ಉದ್ಗ್ರಂಥ ಕಾರನು ತಪ್ಪಿಹೋಗಿದ್ದಾನೆ ಎನ್ನುವುದಕ್ಕಿಂತಲೂ ಇದು ಮುತ್ತಿನ ಮಾತೃಕಾ ಕಾರರ ಹಸ್ತದೋಷವೆಂದೇ ಹೇಳಬೇಕು. ಮೂರನೆ ಪಾದದ ಆ ಅಕ್ಷರವು 'ಜ' ಕಾರವಾಗಿ ಇದ್ದಿರಬೇಕು. ಇಂಥ ದುಷ್ಕರ ಕಾವ್ಯಬಂಧಗಳಲ್ಲಿ 'ರ-ಜ' ಕಾರ ಭೇದಗಳನ್ನಷ್ಟೇ ಅಲ್ಲ, 'ಕ-ಖ, ದ-ಧ' ಮೊದಲಾದ ಏಕ ಜಾತೀಯಗಳಾದ ಅಲ್ಪ ಮಹಾಪ್ರಾಣಾಕ್ಷರಗಳೊಳಗಿನ ಭೇದವೂ ಪರಿಗಣಿಸಲ್ಪಡುವುದಿಲ್ಲ. ಮಾತ್ರ ವಲ್ಲ; ಬಿಂದು ಒತ್ತು ವ್ಯಂಜನ ಮೊದಲಾದುವುಗಳು ಮಾತೃಕೆಯಲ್ಲಿ ಹೆಚ್ಚಾಗಿದ್ದರೆ ಬಿಡಲೂಬಹುದು; ಇಲ್ಲವೆ ಸಂದರ್ಭಕ್ಕೆ ನ್ಯೂನವಾದಲ್ಲಿ ಸೇರಿಸಿಕೊಳ್ಳಲೂ ಬಹುದು. ನಾಲ್ಕನೆಯ ಮತ್ತು ಆರನೆಯ ಸುತ್ತಣ ಆರಸಂಪುಟಾಕ್ಷರಗಳ ಕೂಟದ ವಾಕ್ಯಗಳಿಂದ ಕವಿಕಾವ್ಯಗಳ ವಿಚಾರವು ಗೊತ್ತಾಗುವಂತಿರಬೇಕೆಂಬು ದಿದು ೧೫ನೇ ಶತಮಾನದಲ್ಲಿ ಹುಟ್ಟಿದ 'ಪ್ರತಾಪರುದ್ರೀಯ' ಎಂಬ ಲಕ್ಷಣ ಗ್ರಂಥದ ಸೂಚನೆ. ಈ ಹೇಳಿಕೆ ಎಷ್ಟೋ ಹಿಂದಿನದಾದ ೯ನೆಯ ಶತಮಾನದ ಈ ಕವಿರಾಜಮಾರ್ಗಕ್ಕೆ ಅಕ್ಷರಶಃ ಅನ್ವಯಿಸಬೇಕೆಂದು ಭಾವಿಸಿದರೆ ಅಪರಾಧವೇ ಆದೀತು. ಹಿಂದಿನವನಾದ ಕವಿರಾಜಮಾರ್ಗಕಾರನು ಬಹುಶಃ ದಂಡಿ-ರುದ್ರ ಟಾದಿಗಳನ್ನೋ ಅಲ್ಲವೆ ಇತರ ಲಾಕ್ಷಣಿಕರನ್ನೋ ಈ ವಿಷಯದಲ್ಲಿ ಅನುಸರಿಸಿರ ಬಹುದು. ಪರಾಂಬರಿಸಿ ನೋಡಿದಲ್ಲಿ ಬಂಧದ ಆರನೆಯ ಅಕ್ಷರಗಳ ಅರಸಂಪುಟಾ ಕ್ಷರಗಳನ್ನು ಪೂರ್ವೋಕ್ತ ಲಕ್ಷಣದಂತೆ ಕ್ರಮವಾಗಿ ಕೂಡಿಸಿದಲ್ಲಿ 'ಮಿಮಾಮುಪಾ'- 'ಜಯಾಬ್ಬಿಂ' ಎಂದಾಗುತ್ತಿದೆ." (ಮೇಲೆಲ್ಲ ಉಲ್ಲೇಖಿಸಿರುವ ಸಂಬಂಧಪಟ್ಟ ಅಕ್ಷರಗಳನ್ನು ಲಕ್ಷ್ಯಪದ್ಯದಲ್ಲಿ ಕಂಸಗಳೊಳಗೆ ತೋರಿಸಿದೆ). ಇಲ್ಲಿ 'ಜಯಾ ಬ್ಬಿಂ' ಎಂಬುದು ಕವಿಯ ಹೆಸರಾಗಿ ಹೊರಪಡುತ್ತಿದೆ. ಜಯ ಅಥವಾ ಜಯಾಬ್ಬ ಎಂಬುದು ಕವಿಯ ಹುಟ್ಟು ಹೆಸರು; ಅವನು ನೃಪತುಂಗನಾಸ್ಥಾನದ ಸದಸ್ಯನಾದ ಮೇಲೆ "ಪೂಜ್ಯಾರ್ಥಕಗಳಾದ 'ಶ್ರೀ-ವಿ' ಎಂಬೆರಡು ಅಕ್ಷರ ಗಳಿಂದೊಡವೆರೆದು 'ಶ್ರೀವಿಜಯ' ಎಂಬ ಅಭಿಧಾನವೊದಗಿದುದಾಗಿರ ಬಹುದು. . ." 'ಜಯಾಬ್ಬ' ಎಂಬಲ್ಲಿ ತೋರುವ 'ಅಬ್ಬ' ಎಂಬುದು ಕವಿಯ ತಾತ್ತ್ವಿಕ ಸಂಸ್ಕೃತಿಯ ದ್ಯೋತಕ. ('ಅಳ್ವ' ಎಂದು ಮನೆತನವನ್ನು ಸೂಚಿ ಸುವ ಪದವಾದರೆ 'ಕುಳ' ಳಕಾರವಾಗುತ್ತದೆ). ಆದರೆ, 'ಜಯಾಬ್ಬ'ದ ಹಿಂದಿನ 'ಮಿಮಾಮುಪಾ' ಎಂಬುದು ಅರ್ಥವಾಗುವುದಿಲ್ಲ. (ಆದ್ದರಿಂದಲೇ, ಮದ್ರಾಸು ಪ್ರತಿಯ ಸಂಪಾದಕರು 'ಈ ಬಂಧದಲ್ಲಿ ಅಂತಹ ವಿಷಯವು--- ಎಂದರೆ ಕವಿ ವಿಷಯವು—ತಿಳಿಯುವಂತಿಲ್ಲ' ಎಂದು ತಿಳಿಸಿದ್ದಾರೆ). ಈ ಅರ್ಥ

ವಾಗದ 'ಮಿಾಮುಪಾ', ಪೂರ್ವಾಪರ ವಿರುದ್ಧಾರ್ಥಕವಾದ 'ಸೌಜನ್ಯ ಲಕ್ಷ್ಮೀ ಮುದಾಂಧಂ' ಎಂಬ ಪದಪ್ರಯೋಗ, ಲಕ್ಷಣಾನುಗುಣವಾಗಿ ಬಂಧದಲ್ಲಿ ಹೊಂದಿಕೊಳ್ಳಬೇಕಾದ ಅಕ್ಷರಗಳು ಹೊಂದಿಕೊಳ್ಳದಿರುವುದು—ಈ ಕಾರಣಗಳಿಂದ, "ಈ ಶ್ಲೋಕವು ತಪ್ಪಾಗಿ ಮಾರ್ಪಟ್ಟಿದೆ ಎಂಬುದು ಸ್ಫುಟವಾಗಿ ಕಾಣಿಸುತ್ತಿದೆ."

ಹೀಗೆ 'ತಪ್ಪಾಗಿ ಮಾರ್ಪಟ್ಟಿದೆ' ಎಂದು ತಾವು ಭಾವಿಸಿರುವ ಮೇಲ್ಕಂಡ ಚಕ್ರಶ್ಲೋಕವನ್ನು ಮುಳಿಯ ತಿಮ್ಮಪ್ಪಯ್ಯನವರು ಹೀಗೆ ತಿದ್ದಿರುತ್ತಾರೆ:

ಸಂತಂ ಬಾಟ್ಬುದು (ಸಾ)ಮುದಾ ನ(ರ)ಪನೊಳ್ ಸೌ(ಜ)ನ್ಯ ಲಕ್ಷ್ಮೀಪದಾ
ನ್ವಾಂತಂ ನಿಶ್ಚಯ(ಮು)ಚ್ಚನಿಂ ಪ(ರ)ಗುಣೌದಾ (ಯಾ)ರ್ಥಿಮಾನಂಗಳಾನ್
ಪಿಂತಂ ನೋಡದೆ(ಪಾ)ಟುಗೆಟ (ಉ)ವಿನಿಂ ಬಾ(ಟ್ವಿ)ಂತೆ ಬಾಟ್ದಯ್ಯ(ನಾ)
(ನಾ)ಂತಂತಾನ್ ಸಮುಸಂದನುಲ್ತೆ ಪಿರಿದುಂ ದಾನಂಗಳಾನ್ ಭೂಪನಾ.

ಇದರಿಂದ ಅವರು ಸಿದ್ಧಾಂತ ಮಾಡುವ ಕವಿ ವಿಚಾರ:

"ಹೀಗೆ ಬಂಧಗತವಾಗಿ ಮಾಡಿ ಓದಿದ ಶ್ಲೋಕದ ಆರನೆಯ ಅರ ಸಂಪುಟಗಳ ಅಕ್ಷರಕೂಟವು '**ಸಾಮುಪಾ–ಜಯಾಟ್ಬಿಂ**' ಎಂದಾಗುತ್ತದೆ. ನಾಲ್ಕನೆಯ ಸಂಪುಟಗಳಿಂದ ಕವಿವಿಚಾರ ಏನೇನೂ ಗೊತ್ತಾಗುವುದಿಲ್ಲ. ಆದರೆ ಒಂದನೆಯ ಆರು ಅರಸಂಪುಟಾಕ್ಷರಗಳು 'ಸಂದ ಪಿಂದಾಳಾ ನಾ' ಎಂದು ರೂಪಿತಗಳಾಗುತ್ತಿವೆ. ಎರಡನ್ನೂ ಒಟ್ಟುಗೂಡಿ ಓದಿದಲ್ಲಿ '**ಸಂದಪಿಂದಾಳಾ ನಾ– ಸಾಮುಪಾ ಜಯಾಟ್ಬಿಂ**' ಎಂದಾಗುವುದು. ಪ್ರಸಿದ್ಧಿಪಡೆದ ನೃಪತುಂಗ ಚಕ್ರವರ್ತಿಯ ಹಿಂದಾಳಾದ ನಾನು ಸಾಮುಪನಾದ (ಸಂಧಾನ ಮಂತ್ರಿ') ಜಯಾಟ್ಬನು ಎಂಬುದು ಆ ವಾಕ್ಯಾರ್ಥವು."

ದಿವಂಗತ ಮುಳಿಯ ತಿಮ್ಮಪ್ಪಯ್ಯನವರಂತಹ ಹಿರಿಯ ವಿದ್ವಾಂಸರ ಸಿದ್ಧಾಂತವನ್ನು ಅಲ್ಲಗಳೆಯಹೊರಡುವುದು ಸಾಹಸದ ಮಾತೇ ಸರಿ. ಆದರೂ ಈ ಸಂಬಂಧದಲ್ಲಿ ತಲೆದೋರುವ ಸಂದೇಹಗಳನ್ನು ವಿಚಾರಶೀಲರ ಮುಂದಿಡಬೇಕಾದದ್ದು ನಮ್ಮ ಕರ್ತವ್ಯ. ಚಕ್ರಬಂಧದಿಂದ ಕವಿಕಾವ್ಯ ವಿಚಾರವು ಗೊತ್ತಾಗಬೇಕೆಂಬ

೧೫ನೆಯ ಶತಮಾನದ[40] 'ಪ್ರತಾಪ ರುದ್ರೀಯ'ದ ಲಕ್ಷಣ ನಿರ್ದೇಶವನ್ನು "೯ನೆಯ ಶತಮಾನದ ಈ ಕವಿರಾಜಮಾರ್ಗಕ್ಕೆ ಅಕ್ಷರಶಃ ಅನ್ವಯಿಸಬೇಕೆಂದು ಭಾವಿಸಿದರೆ ಅಪರಾಧವೇ ಆದೀತು" ಎಂಬ ಮುಳಿಯ ತಿಮ್ಮಪ್ಪಯ್ಯನವರ ಮಾತಿನಿಂದಲೇ ಈ ಬಗೆಗೆ ಅದಕ್ಕೂ ಹಿಂದಿನ ಲಕ್ಷಣ ಗ್ರಂಥಗಳಲ್ಲಿ ನಿರ್ದಿಷ್ಟ ಸೂಚನೆಗಳಿಲ್ಲ ಎಂಬುದು ಸ್ವಯಂ ಸ್ಪಷ್ಟ. 'ಪ್ರತಾಪರುದ್ರೀಯ'ದಲ್ಲಿ ೪-೬ನೆಯ ಅರಸಂಪುಟಾಕ್ಷರಗಳಿಂದ ಕವಿಕಾವ್ಯ ವಿಚಾರವು ಸೂಚಿತವಾಗಿದೆ ಎಂಬುದರಿಂದ, ಕ. ರಾ. ಮಾರ್ಗದ ಚಕ್ರಶ್ಲೋಕದಲ್ಲಿಯೂ ಅದೇ ಕ್ರಮ ಸಂಖ್ಯೆಯ ಅಕ್ಷರಗಳಿಂದ ಕವಿಕಾವ್ಯ ವಿಚಾರ ಸೂಚಿತವಾಗಿರಬೇಕೆಂದು ಏಕೆ ನಿರೀಕ್ಷಿಸಬೇಕು? ಕ. ರಾ. ಮಾರ್ಗದ ಚಕ್ರಬಂಧ ಪ್ರಭೇದವು ಬೇರೆಯಾಗಿರಬಹುದಲ್ಲಾ? 'ಪ್ರತಾಪರುದ್ರೀಯ'ದಲ್ಲಿ ಕವಿ-ಕಾವ್ಯನಾಮಗಳೆರಡೂ ಸೂಚಿತವಾಗಿರುವಲ್ಲಿ, ಮುಳಿಯ ತಿಮ್ಮಪ್ಪಯ್ಯನವರ 'ಉದ್ಧಾರ' ಕ್ರಮದಲ್ಲಿ ಕೇವಲ ಕವಿಯ ಹೆಸರಷ್ಟೇ (=ಸಾಮುಪ ಜಯಾಬ್ವಿ) ಸೂಚಿತವಾಗಿದೆಯಲ್ಲವೆ? ಬಂಧ ಲಕ್ಷಣದ ಪ್ರಕಾರ, ಕಾವ್ಯದ ಹೆಸರೂ ದೊರೆಯಬೇಡವೇ? ಕವಿರಾಜಮಾರ್ಗಕಾರನು ಕೃತಿಯ ಕೆಲವೆಡೆಗಳಲ್ಲಿ ('ಶ್ರೀವಿಜಯ'ನೆಂದು) ತನ್ನ ಹೆಸರಿನ ಉಲ್ಲೇಖನವನ್ನು ಸ್ಪಷ್ಟವಾಗಿಯೆ ಮಾಡಿರುವಲ್ಲಿ, ಚಕ್ರಶ್ಲೋಕದಲ್ಲಿ ಅದರ ಪರ್ಯಾಯ ನಾಮವೊಂದನ್ನು ಅಡಗಿಸುವ ಆವಶ್ಯಕತೆಯಾದರೂ ಏನು? ಅಲ್ಲದೆ, ಬೇರೆ ಹಸ್ತಪ್ರತಿಗಳು ದೊರೆತು, ಬೇರೆ ಬೇರೆ ಪಾಠಾಂತರಗಳ ಆಧಾರದ ಮೇಲೆ ಪ್ರಾಮಾಣಿಕವಾದ ಶುದ್ಧ ಪಾಠವು ನಿರ್ಣಯವಾಗುವವರೆಗೆ, ಪಾಠಗಳ ಆಧಾರವಿಲ್ಲದೆ ಸಂದರ್ಭೋಚಿತವಾಗಿ ತಿದ್ದುಪಡಿ ಮಾಡಿದ ಪಾಠದ ಆಧಾರದ ಮೇಲೆ

---

40 ವಿದ್ಯಾನಾಥಕೃತ 'ಪ್ರತಾಪರುದ್ರ ಯಶೋಭೂಷಣ'ದ ಕಾಲ ೧೩ನೆಯ ಶತಮಾನದ ಕೊನೆ ಎಂದು 'ಕನ್ನಡ ಕೈಪಿಡಿ'ಯಲ್ಲಿ ತಿಳಿಸಿದೆ. ಕ. ಕೈ., ಪು. ೧೪೫. ಕ. ರಾ. ಮಾರ್ಗದ ಮುದ್ರಿಸು ಪ್ರತಿಯ ಸಂಪಾದಕರು ಚಕ್ರಬಂಧದಲ್ಲಿ ಕವಿಯ ಹೆಸರನ್ನು 'ವೈದ್ಯನಾಥ' ಎಂದು ತಪ್ಪಾಗಿ ಓದಿರುವಂತೆ ಕಾಣುತ್ತದೆ. ಇದು ಪರಿಶೀಲಿಸತಕ್ಕುದು.

ಇಂತಹ ಮುಖ್ಯ ವಿಚಾರದಲ್ಲಿ ಮಾಡಿದ ಸಿದ್ಧಾಂತವು ವಿಶ್ವಸನೀಯವಾಗಬಲ್ಲುದೆ?

ಈ ಸಂದೇಹದ ಪ್ರಶ್ನೆಗಳು ಬಗೆಹರಿಯುವವರೆಗೆ, '(ಸಾಮಪ) ಜಯಾಬ್ವಿ' ಎಂಬುದು 'ಶ್ರೀವಿಜಯ'ನ ಇನ್ನೊಂದು (ಹುಟ್ಟು) ಹೆಸರು ಎಂಬುದಾಗಿ ತಿಳಿಯುವುದು ಕಷ್ಟವಾಗಿ ಕಾಣುತ್ತದೆ.

ಹೇಳಿಕೆ

ಪದ್ಯ ೧೪೩: ಈ ಗೀತಿಕೆಯ ಮೊದಲ ಎರಡು ಪಂಕ್ತಿಗಳೂ ('ಪೇಟ್ದಿಂ' ಎಂಬ ಪದ ಹೊರತಾಗಿ) ಅಚ್ಚಾಗಿರುವ ಎರಡು ಪ್ರತಿಗಳಲ್ಲೂ ಒಂದೇ ಪ್ರಕಾರವಾಗಿದೆ. ಮದ್ರಾಸು ಮುದ್ರಣದಲ್ಲಿ ಕೊಟ್ಟಿರುವ ಪಾಠಾಂತರವನ್ನು (ಪು. ೧೨೪) ಅನುಸರಿಸಿ, ಈಗ ಇರುವ ಪಾಠವನ್ನು 'ಅನುಗತಂ ಪೂರ್ವ ಕವಿಗಳ ನೆನವಿನಿಂ ಪೇಟ್ದಿಂ ದುಷ್ಕರೋಕ್ತಿಯಂ—' (=ಪೂರ್ವ ಕವಿಗಳು ನೆನೆದಿರುವ ಪ್ರಕಾರ ಈವರೆಗೆ ಕ್ರಮವಾಗಿ ದಷ್ಕರಕಾವ್ಯ ಪ್ರಕಾರಗಳನ್ನು ಹೇಳಿದೆನು) ಎಂದು ತಿದ್ದುಪಾಟು ಮಾಡಿಕೊಂಡರೆ ಹೆಚ್ಚು ಸುಗಮವಾಗಿ ಅರ್ಥವಾಗುತ್ತದೆ. "ಇನ್ನು ಅನುಗತ ಕ್ರಮದಲ್ಲಿ 'ಹೇಳಿಕೆ'ಯ ವಿಭೇದಗಳನ್ನು ಸಂಕ್ಷೇಪವಾಗಿ ಹೇಳುವೆನು" ಎಂದು ಉಳಿದೆರಡು ಪಂಕ್ತಿಗಳ ತಾತ್ಪರ್ಯ.

ಪದ್ಯ ೧೪೪: ಇದರಲ್ಲಿ ಮಾರ್ಗಕಾರ 'ಹೇಳಿಕೆಯ' ಏಳು ಪ್ರಭೇದಗಳನ್ನು ಹೆಸರಿಸಿದ್ದಾನೆಯೆ ಹೊರತು ಹೇಳಿಕೆಯ ಲಕ್ಷಣ ಸ್ವರೂಪವನ್ನು ತಿಳಿಸಿಲ್ಲ. ನಾಗವರ್ಮನೂ ಏಳು ಪ್ರಭೇದಗಳನ್ನು ಹೆಸರಿಸಿದ್ದಾನೆ; ಆದರೆ ಎರಡು ಮೂರರ ಹೆಸರುಗಳು ಮಾತ್ರ ಬೇರೆಯಾಗಿವೆ. [ಅಸ್ಪಷ್ಟಾಕ್ಷರ–ಅಸ್ಪಷ್ಟಾರ್ಥ; ವರ್ಣವ್ಯತ್ಯಯ – ಉಱುವು (?); ಭಾವೆ–ಭಾಮೆ]. ದಂಡಿಯನ್ನನುಸರಿಸಿ ನಾಗವರ್ಮನು 'ಕಾವ್ಯಾವಲೋಕನ' ದಲ್ಲಿ 'ಹೇಳಿಕೆ' ಯ ಸ್ಥೂಲಸ್ವರೂಪವನ್ನು ಹೀಗೆ ನಿರೂಪಿಸಿದ್ದಾನೆ:

ಸುಕವಿಪ್ರಕರಕ್ಕೆ ವಿನೋ
ದಕೇಳಿಗುಪಯೋಗಹೇತುಗಳ್ ಪ್ರಚ್ಛನ್ನ ।

ಪ್ರಕಟಾರ್ಥಂಗಳನೇಕ
ಪ್ರಕಾರದಿಂದೊಂದಿ ವರ್ತಿಕುಂ ಪೇಳಿಕೆಗಳ್ ॥
—ಸೂ. ೧೪೦, ೫೯೩

ದಂಡಿಯ ಶ್ಲೋಕ:

ಕ್ರೀಡಾಗೋಷ್ಠಿವಿನೋದೇಷು ತಜ್ಜ್ಞೈರಾಕೀರ್ಣಮಂತ್ರಣೇ।
ಪರವ್ಯಾಮೋಹನೇ ಚಾಪಿ ಸೋಪಯೋಗಾಃ ಪ್ರಹೇಲಿಕಾಃ ॥ [41]
—III, ೯೭.

ಒಟ್ಟಿನಮೇಲೆ, ಕವಿಗಳೂ ವಿದ್ವಾಂಸರೂ ನೆರೆದಿರುವ ವಿನೋದ ಗೋಷ್ಠಿಗಳಲ್ಲಿ ವಿನೋದಕ್ಕಾಗಿ ಸಮಸ್ಯಾಪೂರಣ ಮಾಡುವುದು, ಕೊಟ್ಟ ಒಗಟಿ ಬಿಡಿಸುವುದು, ಮುಂತಾದ ವಾಕ್‌ಚಮತ್ಕೃತಿಗಳನ್ನು (ಪ್ರ)ಹೇಳಿಕೆ ಎಂದು ನಿರ್ದೇಶಿಸಬಹುದು.

ಪದ್ಯ ೧೪೫: ಇದು 'ಭಾವೆ' ಎಂಬ ಹೇಳಿಕೆಯ ಪ್ರಭೇದದ ದೃಷ್ಟಾಂತ. ಈ ಪದ್ಯವೂ ರಾಮಾಯಣ ಕಥಾ ಸಂಬಂಧಿಕವಾದ ಪದ್ಯವಿರಬಹುದೆಂದು ಮುಳಿಯ ತಿಮ್ಮಪ್ಪಯ್ಯನವರ ಊಹೆ. ಆದರೆ, ಹೀಗೆ

---

41 ಆಪ್ಟೆಯವರ ನಿಘಂಟುವಿನಲ್ಲಿ 'ಹೇಲಾ' ಎನ್ನುವುದಕ್ಕೆ amorous sport or dalliance (ಬೇಟದ ಆಟ, ಪ್ರಣಯ ವಿಲಾಸ, ಪ್ರೇಮಲೀಲೆ), wanton sport (ಕುಚೇಷ್ಟೆಯ ವಿನೋದ, ಚೆಲ್ಲಾಟ) ಎಂದೂ, 'ಪ್ರಹೇಲಾ' ಎನ್ನುವುದಕ್ಕೆ free or unrestrained behaviour, loose conduct, playful dalliance (ಸ್ವಚ್ಛಂದವರ್ತನೆ, ಸ್ವೈರವರ್ತನೆ, ಅಂಕೆಯಿಲ್ಲದ ನಡತೆ), 'ಪ್ರಹೇಲಿ(ಕಾ)' ಎನ್ನುವುದಕ್ಕೆ a riddle, an enigma, a conundrum (ಒಗಟು, ಒಡಪು, ಸಮಸ್ಯೆ, ಗೂಢಪ್ರಶ್ನೆ) ಎಂದೂ ಅರ್ಥಗಳನ್ನು ಕೊಟ್ಟಿದೆ. 'ಪ್ರಹೇಲಿಕೆ' ಯಲ್ಲಿ 'ಆರ್ಥೀ' ಮತ್ತು 'ಶಾಬ್ದೀ' ಎಂದು ಎರಡು ವಿಧ ಎಂದೂ ಹೇಳಿದೆ. ದಂಡಿಯಾದರೋ ೧೬ ಪ್ರಹೇಲಿಕಾ ಪ್ರಕಾರಗಳನ್ನು ಹೇಳಿದ್ದಾನೆ. (ಕಾವ್ಯಾದರ್ಶ: III, ೯೬-೧೨೪). ಅವು ಯಾವುವೆಂದರೆ: ಸಮಾಗತಾ, ವಂಚಿತಾ, ವ್ಯುತ್ಕ್ರಾಂತಾ, ಪ್ರಮುಷಿತಾ, ಸಮಾನರೂಪಾ, ಪರುಷಾ, ಸಂಖ್ಯಾತಾ, ಪ್ರಕಲ್ಪಿತಾ, ನಾಮಾಂತರಿತಾ, ನಿಭೃತಾ, ಪರ್ಯಾಯ ಸಾಧಿತಾ, ಸಂಮೂಢಾ, ಯೋಗಮಾಲಾತ್ಮಿಕಾ (ಪರಿಹಾರಿಕಾ), ಏಕಚ್ಛನ್ನಾ, ಉಭಯಚ್ಛನ್ನಾ, ಸಂಕೀರ್ಣಾ.

ಊಹಿಸಲು ಪದ್ಯದಲ್ಲಿ ಸ್ಪಷ್ಟಸೂಚನೆ ಯಾವುದೂ ಇಲ್ಲ. 'ಯಾವಾತನೋ ಒಬ್ಬ ತನ್ನ ಪ್ರಿಯೆಯನ್ನು ಪರಿತ್ಯಾಗ ಮಾಡಿದ ಮೇಲೆ ಅವಳ ಚೆಲುವನ್ನೂ ಗುಣಸೌಂದರ್ಯವನ್ನೂ ನೆನೆದು ಪಶ್ಚಾತ್ತಾಪಪಡುವ ಸಂಗತಿ ಇಲ್ಲಿ ನಿರೂಪಿತವಾಗಿದೆ'—ಎಂಬುದಿದೂ ಅವರು ತಿಳಿಸುವ ಪದ್ಯದ ತಾತ್ಪರ್ಯ. ನಮಗೆ ತೋರುವ ಅಭಿಪ್ರಾಯವೇ ಬೇರೆ. ಪದ್ಯದ ಅನ್ವಯಕ್ರಮವನ್ನು ತಿಳಿದರೆ ತಾತ್ಪರ್ಯವು ಸುಲಭಗ್ರಾಹ್ಯವಾಗುವುದು. ಅನ್ವಯ ಹೀಗೆ: 'ಕಿವಿವರಂ ನೀಳ್ದ ನಯನಯುಗದೊಳ್ ಒಪ್ಪುವವಳಾನ್ ಪ್ರಿಯೆಯುಂ ಅವಯವದೆ ಸವಿಹಿತವಃಪ್ಪ ಕರ್ಣಪೂರೋತ್ಪಳಮುಂ ಧವಳವಿಲೋಚನೆಯ ಗುಣಸುಂದರಮುಂ ಏಕೆ ಕಳೆಯವೇಟ್ಟಿಂ?' ನೀಳವಾದ ಧವಳವಾದ ಕಣ್ಣುಳ್ಳವಳನ್ನು ತನ್ನ ಕಿವಿಯೊಡವೆಯಾದ ನೈದಿಲೆಯನ್ನು ತೆಗೆದು ಹಾಕುವಂತೆ ಪ್ರಿಯನು ಅವಳಿಗೆ ಹೇಳಿದ್ದೇಕೆ?—ಎಂಬ ಪ್ರಶ್ನೆ ಇಲ್ಲಿ ಅಡಗಿದೆ. ಒಂದು ರೀತಿಯ ಗೂಢಪ್ರಶ್ನೆಯಿದು. ಕಿವಿಯವರೆಗೂ ನೀಳವಾಗಿದ್ದು, ಬೆಳ್ಳಗೆ ಬೆಳ್ನೈದಿಲೆಯಂತೆ ಸುಂದರವಾಗಿರುವ ಕಣ್ಣುಳ್ಳವರಿಗೆ ಕಿವಿಯ ನೈದಿಲೆ ಅನಾವಶ್ಯಕ ಎಂದು ಉತ್ತರ. (ನಾಗವರ್ಮನು ಕೊಟ್ಟಿರುವ ದೃಷ್ಟಾಂತ ಬಹುಮಟ್ಟಿಗೆ ಇದನ್ನು ಹೋಲುತ್ತದೆ.)

ಪದ್ಯ ೧೪೬: 'ನುಸುಳ್' ಎಂದರೆ ('ದ್ವಾರಪ್ರವೇಶೇ'-ಶ. ಮ. ದ.) 'ತೆರೆದಿರುವಷ್ಟು ಅಲ್ಪಾವಕಾಶದಲ್ಲಿಯೂ ಪ್ರವೇಶವನ್ನು ದೊರಕಿಸಿಕೊಂಡು ಹೋಗು' ಎಂದು ಧಾತ್ವರ್ಥ. ಇಲ್ಲಿ ಬಹುಶಃ ಅದೇ ಅರ್ಥ ಈ 'ಹೇಳಿಕೆ'ಯ ನಾಮವಾಚಕ (ನುಸುಳು) ದಲ್ಲಿಯೂ ಅಡಗಿರಬಹುದು. 'ಉದ್ದಿಷ್ಟವಾದ ಅರ್ಥವನ್ನು ಸೂಕ್ಷ್ಮವಾದ ರೀತಿಯಲ್ಲಿ ಅಡಗಿಸಿ ಹೊಳೆಯಿಸುವುದು' ನುಸುಳು ಎಂಬ ಹೇಳಿಕೆಯ ವೈಶಿಷ್ಟ್ಯವೆಂದು ಕಾಣುತ್ತದೆ. 'ಈ ಪದ್ಯದ ಅರ್ಥವು ಸ್ಪಷ್ಟವಾಗಿ ಹೊಳೆಯದು' ಎಂದು ಹೇಳಿ, 'ಕಾವ್ಯಾವಲೋಕನ'ದ ನುಸುಳಿನೊಂದಿಗೆ ಇದನ್ನು ಹೋಲಿಸಿ, 'ಸೂರ್ಯನಿಂದಲೂ ಕಳೆಯಲಾಗದಂತೆ ಪ್ರಪಂಚದಲ್ಲಿ ನುಸುಳಿಕೊಂಡಿರುವುದು ಗಾಳಿ' ಎಂದು

ಮಳಿಯ ತಿಮ್ಮಪ್ಪಯ್ಯನವರು ಊಹಿಸಿರುವರು. (ತನ್ನ ಜೊತೆಯ ಹಕ್ಕಿಯನ್ನು ಅಗಲಿದ ಚಕ್ರವಾಕ ಪಕ್ಷಿಯನ್ನು ಕುರಿತ 'ಅರ್ಥದ ನುಸುಳು' ಇಲ್ಲಿ ಇದ್ದಿರಬಹುದು).

ತಿರಿ=ತಿರುಪೆಗಾಗಿ ಸುತ್ತಾಡು, ತಿರುಪೆ ಬೇಡು; ಅರಿ=ಕತ್ತರಿಸು (ಕೃಂತನೇ—ಶ.ಮ.ದ.); ಅರವೆ=ಅರ್ಥವಾಗಿರುವುದು, ಕೊರತೆ; ಪೊರೆ=ಕೂಡಿಕೊ, ಸಮೀಪದಲ್ಲಿರು.

ಪದ್ಯ ೧೪೭: 'ನಾವು ಅರಿಯದ ಸವಿಯನ್ನು ಉಳ್ಳ, ಹಾಗೂ 'ಪುಟ್ಟಿದ ಆರುಂ ಅಱಿಯದ ಅದಱ ಪೆಸಱಿಂದ ಅಟ್ಟುದಂ (=ಹುಟ್ಟಿದ ಯಾರೂ ಅರಿಯದಂತಹ ಹೆಸರಿನಿಂದ ಅಡಿಗೆ ಮಾಡಿದುದನ್ನು) (ಅಥವಾ 'ಆಱುಂ ಅಱಿಯದ ಅದಱ ಪೆಸಱಿಂದ ಅಟ್ಟುದಂ= ಪ್ರಸಿದ್ಧವಾದ ಆರು ರಸಗಳಿಂದೂ ತಿಳಿಯದ ಬೇರೊಂದು ರಸದ ಹೆಸರಿನಿಂದ ಅಟ್ಟುದನ್ನು) ಅಂತಹ ಭೋಜನವನ್ನು ಬಹು ಸವಿಯಾ ಗಿರುವಂತೆ ಅಟ್ಟು ಬಡಿಸು; ಆ ಭೋಜನವೆಂಥದೆಂದು ಹೇಳೋಣ ವೆಂದರೆ ಅದನ್ನು ಕೇಳಿ ಅರಿಯೆ.

ಇಲ್ಲಿ, 'ಆರುಂ-ಆಱುಂ' ಎಂಬಲ್ಲಿ 'ರ-ಱ' ಕಾರಗಳ ಭ್ರಾಂತಿ ಯಿಂದ ಬೇರೆ ಬೇರೆ ಅರ್ಥಗಳಾಗುವುದರಿಂದ, ಇದು 'ಅಸ್ಪಷ್ಟಾಕ್ಷರ' ಪ್ರಯೋಗದ ಚಮತ್ಕಾರ ಎಂದು ಕಾಣುತ್ತದೆ. ಇದನ್ನೇ 'ಕಾವ್ಯಾವ ಲೋಕನ' ದಲ್ಲಿ 'ಅಸ್ಪಷ್ಟಾರ್ಥ' ಎಂದು ಕರೆದಿರುವಂತೆಯೂ ಕಾಣುತ್ತದೆ.

ಒಂದು ಸಂದೇಹ ತಲೆದೋರುತ್ತದೆ: 'ಕವಿರಾಜಮಾರ್ಗ' ದ ಕಾಲಕ್ಕೆ 'ರ-ಱ' ಕಾರಗಳ ಉಚ್ಚಾರಣೆಯ ಭೇದದಲ್ಲಿ ಅಸ್ಪಷ್ಟತೆ ಪ್ರಾರಂಭವಾಗಿತ್ತೆ? ಇದು ವಿಚಾರಣೀಯ.

ಪದ್ಯ ೧೪೮: ವರ್ಣವ್ಯತ್ಯಯ ಎಂದರೆ ಅಕ್ಷರಗಳ ಸ್ಥಾನಗಳು ಹಿಂದು ಮುಂದಾಗುವುದು. ಪ್ರಕೃತ ಪದ್ಯದಲ್ಲಿ ಯಾವೆಡೆಗಳಲ್ಲಿ ವರ್ಣ ವ್ಯತ್ಯಯುವಾಗಿದೆ ಎಂಬುದು ದುರೂಹ್ಯವಾಗಿದೆ.

ಪದ್ಯ ೧೪೯: ‘ಬಿಂದುಚ್ಯುತಕ’: ಎಂದರೆ, ಇರಬೇಕಾದ ಎಡೆಯಲ್ಲಿನ ಬಿಂದು (ಸೊನ್ನೆ) ಇಲ್ಲದಿರುವುದು. ಈ ಪದ್ಯದಲ್ಲಿಯೂ ಲಕ್ಷ್ಯ ಲಕ್ಷಣ ಸಮನ್ವಯಮಾಡುವುದು ದುಷ್ಕರವಾಗಿ ಪರಿಣಮಿಸಿದೆ.

ಪದ್ಯ ೧೫೦: ಈ ಪದ್ಯದಲ್ಲಿಯೂ ಅರ್ಥಕ್ಲೇಶವಿದೆ.

ಬಸನ = (ಸಂ. ವ್ಯಸನ). ದೀವ = (ಸಂ. ದ್ವೀಪ) ದೀಹದ (ಬೇಟೆಯ ಮೃಗವನ್ನು ಆಕರ್ಷಿಸಲು ಉಪಯೋಗಿಸುವ ಹುಲ್ಲೆಕರು ಮುಂತಾದ) ಮೃಗ. ಸಿತಗ=ದುಷ್ಟನಾದ ಕಾಮುಕ.

ಪದ್ಯ ೧೫೧: ಈ ಪದ್ಯದ ಅನ್ವಯ ಹೀಗಿರಬಹುದು: ‘ಅರಸಂ ಮನದೊಳ್ ಮುಳಿದು (ಕೋಪಿಸಿ) ಅಸಿಯನೆ (ಕತ್ತಿಯನ್ನು) ನೋಡಲು ಪರಿವಾರದವರ್ ತಳಮಳಗೊ(ಳು)ತ್ತುಂ, ಜನಿತ ನಿಜಭೀತಿ ಮನಂಗೊಳೆ, ಕಳವಳಿಸಿ ಚಲಿತ(ಸಿ?) ನಿಲಲ್ ಅಣ್ಮದೆ (ಸಮರ್ಥರಾಗದೆ), ವೊಕ್ಕಳಂ (ವೆಗ್ಗಳವಾಗಿ, ಒಗ್ಗಾಗಿ?) ಒಳಗೆ ಸುಟ್ಟಿದರ್.’ ‘ತಳಮಳಗೊತ್ತುಂ’ ಎಂಬಲ್ಲಿ ‘ಳು’ ಎಂಬ ವರ್ಣ ಲೋಪವಾಗಿರುವುದರಿಂದ ‘ವರ್ಣಚ್ಯುತಕಂ’ (?).

ಪದ್ಯ ೧೫೨: ೧೪೪ನೆಯ ಪದ್ಯದಲ್ಲಿ ಹೇಳಿರುವ ‘ಹೇಳಿಕೆ’ಗಳಲ್ಲಿ ‘ಸಮಂತಿ’ಯ ಉಲ್ಲೇಖವಿಲ್ಲ. ಅಲ್ಲಿ ಕಡೆಯಲ್ಲಿ ಹೇಳಿರುವ ‘ಸುಸಮಸ್ತಕ’ ವೇ ‘ಸಮಂತಿ’ಯಿರಬಹುದು. ಇದು ‘ವಿಗಳಿತರಾಗ’ನಾದ ಮುನಿಯೊಬ್ಬನನ್ನು ವರ್ಣಿಸುವ ಪದ್ಯವೆಂದು ಸೂಚಿತವಾಗುತ್ತದೆ.

ಪದ್ಯ ೧೫೪: ಈ ಪದ್ಯದಲ್ಲಿ ಕವಿರಾಜಮಾರ್ಗಕಾರನು ತನ್ನ ಗಂಭೀರ ಶೈಲಿಯ ಅಗ್ಗಳಿಕೆಯನ್ನು ಹೆಮ್ಮೆಯಿಂದ ಬಣ್ಣಿಸಿರುವಂತೆ ಕಾಣುತ್ತದೆ. ಇದು ಶಬ್ದಾಲಂಕಾರ ಪ್ರಕರಣವಾದ್ದರಿಂದ, ಕವಿ ತನ್ನ ಶಾಬ್ದಿಕ ಸಾಮರ್ಥ್ಯವನ್ನು ಕುರಿತು ಹೇಳುವುದು ಉಚಿತವಾಗಿದೆ.

ಬುಧ=ವಿದ್ವಾಂಸ, ಶಬ್ದತತ್ತ್ವಾಂಬುಧಿ = ಶಬ್ದಪ್ರಯೋಗವನ್ನು ಕುರಿತ ಶಾಸ್ತ್ರವೆಂಬ ಸಮುದ್ರ. ವೀಚಿಮಾಲೆ=ಅಲೆಗಳ ಮಾಲೆ. ವಿಧುರ ಗತಿ=ಚಂಚಲವಾದ ಚಲನೆ. ವಿಲೋಡ್ಯ=ಕಲಕಿದ.

'ವಾಗಧಿಪ'=ವಾಕ್‌ಪ್ರಭುತ್ವವುಳ್ಳವನು. ಇದು ಮಾರ್ಗಕಾರನ ಬಿರುದಾಗಿರಬಹುದು.

ಪದ್ಯ ೧೫೫: ಈ ಪದ್ಯದಲ್ಲಿಯೂ ಕೂಡ ಕವಿ ಸ್ವವಿಷಯವನ್ನು ಹೇಳಿಕೊಂಡಿದ್ದಾನೆ. ಕವಿರಾಜಮಾರ್ಗದ ಕರ್ತೃತ್ವವಿಚಾರ ನಿರ್ಣಯದಲ್ಲಿ ಇದು ಅತ್ಯಂತ ಪ್ರಮುಖವಾದ ಪದ್ಯ.

"ಶ್ರೀ ವಿಜಯ ಪ್ರಭೂತ ಮುದಮಂ ತನಗಾಗಿಸಿದೊಂ ಕವೀಶ್ವರಂ".

ಪಾಠಕರ ಮುದ್ರಣದ ಪ್ರತಿಯಲ್ಲಿಯೂ, ಮದ್ರಾಸು ಮುದ್ರಣದ ಪ್ರತಿಯಲ್ಲಿಯೂ ಮೇಲೆ ಕೊಟ್ಟಿರುವ ಚರಣದ ಪಾಠವು ಒಂದೇ ರೀತಿಯಾಗಿದೆ. ಬೇರೆಯ ಪಾಠಗಳಾವುವೂ ಇಲ್ಲ. ಹೀಗಿರುವಲ್ಲಿ ಮದ್ರಾಸು ಮುದ್ರಣದ ಸಂಪಾದಕರು ತಾವು ಅಂಗೀಕರಿಸಿರುವ ಪಾಠವನ್ನೇ ತಮ್ಮ ಪೂರ್ವನಿಶ್ಚಿತ ಸಿದ್ಧಾಂತಕ್ಕೆ ಅನುಕೂಲವಾಗುವಂತೆ—

'ಶ್ರೀವಿಜಯ ಪ್ರಭೂತ **ಮನಿದಂ** ತನಗಾಗಿಸಿದೊಂ ಕವೀಶ್ವರಂ' ಎಂಬುದಾಗಿ ಮಾರ್ಪಡಿಸಿಕೊಂಡಿರುವುದು ನಿರಾಧಾರವಾಗಿಯೂ ಆಶ್ಚರ್ಯಕರವಾಗಿಯೂ ಕಾಣುತ್ತದೆ.

(ಈ ಪದ್ಯಭಾಗದ ಆಧಾರದ ಮೇಲೆ ಅವರುಗಳು, 'ಕವೀಶ್ವರನೆಂಬುವನು ಶ್ರೀವಿಜಯ ಕರ್ತೃಕವಾದ ಈ ಗ್ರಂಥವನ್ನು ತನ್ನ ಪ್ರಯೋಜನಕ್ಕಾಗಿ ಉಪಯೋಗಿಸಿಕೊಂಡನು' ಎಂದು ಅರ್ಥ ಮಾಡಿದ್ದಾರೆ.)

ದಿವಂಗತ ಮುಳಿಯ ತಿಮ್ಮಪ್ಪಯ್ಯನವರಾದರೋ ತಮ್ಮ 'ಕವಿರಾಜಮಾರ್ಗ ವಿವೇಕ' (ಭಾಗ ೧) ದಲ್ಲಿ ಈ ಪದ್ಯದ ತಾತ್ಪರ್ಯವನ್ನು ಹೀಗೆ ಗ್ರಹಿಸಿದ್ದಾರೆ:

"ದ್ವಿತೀಯ ಪರಿಚ್ಛೇದಾಂತ್ಯದಲ್ಲಿ ಆ 'ಕವಿಪ್ರಕರ' ದೊಳಗೆ ವಿಶಿಷ್ಟವಾದ ಆಗಿನ ಕಾಲದ ಯಾರೋ ಒಬ್ಬ ಕವೀಶ್ವರನು, ಈ ಶ್ರೀವಿಜಯ ಗ್ರಂಥದಿಂದ

ಒದಗಿದ ಆನಂದವನ್ನು ಸ್ವೀಕರಿಸಿದನು ಎಂಬ ಅಂಶವನ್ನು 'ಶ್ರೀವಿಜಯ ಪ್ರಭೂತ ಮುದಮಂ ತನಗಾಗಿಸಿದೊಂ ಕವೀಶ್ವರಂ' ಎಂದು ಸಾರಿದ್ದಾನೆ. ಬಹುಶಃ ನೃಪತುಂಗನ ಮಹಾಸಭೆಯೊಳಗಿನ ಕವೀಶ್ವರನೊಬ್ಬನು ಈ ಲಕ್ಷಣ ಗ್ರಂಥದಿಂದ ವಿಶೇಷವಾಗಿ ಆನಂದಗೊಂಡು ತದನುಸಾರವಾಗಿ ಒಂದು ಕಾವ್ಯವನ್ನು ಬರೆದಿರ ಬೇಕು. ಪ್ರಥಮ ಪರಿಚ್ಛೇದಾಂತ್ಯದಲ್ಲಿ ಗ್ರಂಥಕಾರನು ತಾನೆಸಗಿದ ಪ್ರಾರ್ಥನೆ ಸಫಲವಾಗಲಾರಂಭಿಸಿತು ಎಂಬುದನ್ನೇ ದ್ವಿತೀಯ ಪರಿಚ್ಛೇದಾಂತ್ಯದಲ್ಲಿ ಈ ರೀತಿ ಯಲ್ಲಿ ಸೂಚಿಸಿರಲೂಬಹುದು."

ನಮ್ಮ ಅಭಿಪ್ರಾಯದಲ್ಲಿ, ತಿಮ್ಮಪ್ಪಯ್ಯನವರ ಅರ್ಥವಿವೇಚನೆಯೂ ಸಮಂಜಸವಾಗಿ ಕಂಡುಬರುವುದಿಲ್ಲ.

ಮೇಲ್ಕಂಡ ಪದ್ಯಭಾಗದ ಸರಿಯಾದ ಅರ್ಥನಿರ್ಣಯವಾಗ ಬೇಕಾದರೆ, ಇಡಿಯ ಪದ್ಯವನ್ನು ಗಮನದಲ್ಲಿರಿಸಿಕೊಂಡು ಸೂಕ್ಷ್ಮ ವಾಗಿ ಪರಿಶೀಲಿಸಬೇಕು. ಅಂತಹ ಪರಿಶೀಲನೆಯನ್ನು ಇಲ್ಲಿ ಮಾಡಲು ಪ್ರಯತ್ನಿಸಿದೆ:

ಈ ಪದ್ಯದಲ್ಲಿ 'ಕವೀಶ್ವರಂ' ಎಂಬುದು ಕರ್ತೃಪದ; ಇದಕ್ಕೆ ಅನ್ವಯವಾಗುವ ಕ್ರಿಯಾಸೂಚಕ ಪದಗಳೆಂದರೆ 'ಭಾವಿಸಿ', 'ಕುಱಿಕೊಂಡು', 'ಬಗೆದು ನೋಡಿ' ಇವು; ಇವೆಲ್ಲ ಭೂತಕೃದಂತ ಗಳು. ಮುಖ್ಯಕ್ರಿಯೆಯನ್ನು ಸೂಚಿಸುವ (ಕೃಲ್ಲಿಂಗ)ಪದವೆಂದರೆ, 'ತನಗಾಗಿಸಿದೊಂ' (=ತನಗಾಗಿಸಿದವನು); ಇದರ ಕರ್ಮಪದ, 'ಶ್ರೀವಿಜಯ ಪ್ರಭೂತಮುದಮಂ' (=ಶ್ರೀವಿಜಯ ರಚಿತ ಕವಿರಾಜ ಮಾರ್ಗದಿಂದ ದೊರಕುವ ಸಂತೋಷವನ್ನು). 'ಇಂಥ ಒಂದು ಸಂತೋಷವನ್ನು ತನಗೆ ಒದಗಿಸುವವನೇ ಕವೀಶ್ವರ ಎಂದರೆ ಕವಿ ಶ್ರೇಷ್ಠ' ಎಂದು ಕವಿರಾಜಮಾರ್ಗಕಾರನು ಕರೆ (challenge) ಕೊಟ್ಟಿದ್ದಾನೆ. (ಈ ಸಂದರ್ಭದಲ್ಲಿ, 'ಕವೀಶ್ವರ' ಎಂಬುದು ಅಂಕಿತನಾಮವಾಗದು; ಕವಿರಾಜಮಾರ್ಗವು ಕವೀಶ್ವರಕೃತ ಎಂಬ ವಾದಕ್ಕೆ ಸಮರ್ಥನೆ ಇಲ್ಲವಾಗುವುದು.)

ಪದ್ಯದ ತಾತ್ಪರ್ಯಾರ್ಥ:

'ಶಬ್ದತತ್ತ್ವಕ್ಕೆ ಸಂಬಂಧಪಟ್ಟ (ಅಲಂಕಾರ ವ್ಯಾಕರಣಾದಿ) ಶಾಸ್ತ್ರಸಂಪ್ರದಾಯಗಳನ್ನು ಚೆನ್ನಾಗಿ ಆಲೋಚಿಸಿ ವಿಚಾರಮಾಡಿ,

(ಸಂಸ್ಕೃತ ಪ್ರಾಕೃತ ಮುಂತಾಗಿ ಬಲ್ಲ) ಸಮಸ್ತ ಭಾಷಾ ವಿಷಯಕ ವಾದ ಉಕ್ತಿಗಳನ್ನು ಲಕ್ಷಿಸಿ, ಪ್ರಾಚೀನ ಕವಿಶ್ರೇಷ್ಠರ ಪ್ರಯೋಗ ಗಳಿಂದ ಸಿದ್ಧವಾದ ಗುಣೋತ್ಕರ್ಷವನ್ನು ಚೆನ್ನಾಗಿ ಆಲೋಚನೆ ಮಾಡಿ,—ಹೀಗೆ, ಶಾಸ್ತ್ರಪ್ರಜ್ಞೆ, ಬಹುಭಾಷಾ ಪಾಂಡಿತ್ಯ ಮತ್ತು ಪೂರ್ವಕಾವ್ಯ ಪರಿಚಯ—ಇವುಗಳಿಂದ ಆಯ್ದ ಗುಣಭಾಗಗಳಿಂದ ರಚಿಸಿದ ಕಾವ್ಯಮೂಲಕವಾಗಿ ಶ್ರೀವಿಜಯನಿಂದ ರಚಿತವಾದ (ಈ) ಕೃತಿಯಿಂದ ಉಂಟಾಗುವ ಸಂತೋಷವನ್ನು ತನಗಾಗಿಸಿದವನು ಕವೀಶ್ವರ (ಕವಿಶ್ರೇಷ್ಠ ಎಂಬ ಪದವಿಗೆ ಅರ್ಹನಾಗುವನು)'.

ಪರಿಚ್ಛೇದ ೩

ಪದ್ಯ ೧: "ಭಾವಿಸಿ **ಬೆಸಸಿದನ್** ಅಖಿಳ ಧರಾವಲ್ಲಭನ್ ಇಂತು **ಅಮೋಘವರ್ಷ ನೃಪೇಂದ್ರಂ.**"

ಪ್ರಸಿದ್ಧವಾದ ಅರ್ಥಾಲಂಕಾರಗಳನ್ನು ಅಮೋಘವರ್ಷ ನೃಪೇಂದ್ರನು ವಿಚಾರಮಾಡಿ ಬೆಸಸಿದನು ಎಂಬುದರಿಂದ ಅಲಂಕಾರ ವಿಚಾರದಲ್ಲಿ ಇದಮಿತ್ಥಂ ಎಂದು ತನ್ನ ನಿರ್ಣಯವನ್ನು ಪ್ರಕಟ ಪಡಿಸಿದನೆಂದು ತಿಳಿಯಬೇಕು. ನೃಪತುಂಗನೇ ಗ್ರಂಥವನ್ನು ರಚಿಸಿದ್ದರೆ 'ಬೆಸಸಿದನ್' ಎಂದು ಹೇಳುತ್ತಿರಲಿಲ್ಲ.

ಪದ್ಯ ೨-೫: ಈ ಪದ್ಯಗಳಲ್ಲಿ ಮುಂದೆ ಲಕ್ಷ್ಯಲಕ್ಷಣ ನಿದರ್ಶನಪೂರ್ವಕ ವಿವರಿಸಿರುವ ಅರ್ಥಾಲಂಕಾರಗಳ ಹೆಸರುಗಳನ್ನು ಹೇಳಿದೆ. ಅವು ಯಾವುವೆಂದರೆ :

ಜಾತಿ, ರೂಪಕ, ಅರ್ಥಾಂತರ(ವಿ)ನ್ಯಾಸ, ಅತಿರೇಕ, ಯಾಥಾಸಂಖ್ಯ, ದೀಪಕ, ಉಪಮಾ, ಅತಿಶಯ, ಸದೃಶಯೋಗಿತಾ, ಆಕ್ಷೇಪ (೧೦); ಶ್ಲೇಷೆ, ಉತ್ಪ್ರೇಕ್ಷೆ, ಸೂಕ್ಷ್ಮ, ವಿಶೇಷ, ಸಮಾಹಿತ,

ಸಮಾಸೋಕ್ತಿ, ಪರ್ಯಾಯೋಕ್ತಿ, ವಿರೋಧ, ಅಪ್ರಸ್ತುತ (ಪ್ರಶಂಸೆ), ನಿದರ್ಶನ, ಸಹೋಕ್ತಿ, ಸಂಕೀರ್ಣ (೧೨); ಪರಿವೃತ್ತಿ, ವ್ಯಾಜಸ್ತುತಿ, ಹೇತು, ವಿಭಾವನೆ, ಲವ, ಉದಾತ್ತ, ಅಪಹ್ನುತಿ, ರಸವತ್, ಊರ್ಜಿತ, ವ್ಯಾವೃತ್ತಿ, ಪ್ರಿಯತರ, ಆಶಿ (೧೨).

ಮಾರ್ಗಕಾರನು ಇಲ್ಲಿ 'ಪುರಾಣಶಾಸ್ತ್ರೋಕ್ತಂಗಳ್' ಆದ ೩೪ ಅಲಂಕಾರಗಳನ್ನು ಮಾತ್ರ ಉಲ್ಲೇಖಿಸಿದ್ದರೂ, ಪ್ರಕರಣದ ಕಡೆಯಲ್ಲಿ 'ಭಾವಿಕ' ಮತ್ತು 'ಧ್ವನಿ' ಎಂಬ ಎರಡು ಅಲಂಕಾರಗಳನ್ನು ಹೆಚ್ಚಿನವಾಗಿ ಸೇರಿಸಿ ಹೇಳಿದ್ದಾನೆ. (ಅಲಂಕಾರ ನಿರೂಪಣ ಕ್ರಮ ದಲ್ಲಿ ಮಾರ್ಗಕಾರನು ದಂಡಿಯನ್ನೇ ವಿಶೇಷವಾಗಿ ಅನುಸರಿಸಿದ್ದಾನೆ. ದಂಡಿಯು ಹೇಳುವ ಮೂವತ್ತೈದು ಅಲಂಕಾರಗಳಿಗೆ[42] ಮಾರ್ಗ ಕಾರನು ೩೬ನೆಯದಾಗಿ 'ಧ್ವನಿ'ಯನ್ನು ಸೇರಿಸಿದ್ದಾನೆ.

ಪದ್ಯ ೬: ಪ್ರಪಂಚದ ಎಲ್ಲ ವಸ್ತುಗಳಲ್ಲಿ ಪ್ರತಿಯೊಂದಕ್ಕೂ ಅದರದ್ದೇ ಆದ 'ಸ್ವ-ಭಾವ', ಎಂದರೆ 'ತನ್ನತನ' ಇರುತ್ತದೆ. ಇದೇ ವಸ್ತು ಸ್ವಭಾವ. ವಸ್ತು ಎಂದರೆ ಇರತಕ್ಕದ್ದು. ವಸ್ತುವು ಇರುವುದೆಂಬುದು ಅದರ ದ್ರವ್ಯ, ಗುಣ, ಕ್ರಿಯೆಗಳಿಂದ (ನಾಮರೂಪಗಳಿಂದ) ವ್ಯಕ್ತ ವಾಗುತ್ತದೆ. ಈ ದ್ರವ್ಯ, ಗುಣ, ಕ್ರಿಯೆ ಎಂಬವು ಎಲ್ಲ ವಸ್ತುಗಳ ಲ್ಲಿಯೂ ಇರತಕ್ಕ 'ಸಾಮಾನ್ಯತೆ' ಅಥವಾ ಸಮಾನಾಂಶಗಳು. ದ್ರವ್ಯ ಗುಣ ಕ್ರಿಯಾ ವಿಹೀನವಾಗಿ ಯಾವ ವಸ್ತುವೂ ಇರಲಾರದು. ಎಲ್ಲ ವಸ್ತುಗಳಿಗೂ ಸಾಮಾನ್ಯವಾದ ಈ 'ಸ್ವಭಾವ'ವನ್ನು (The nature of things in general) 'ಜಾತಿ' ಎಂಬ ಪಾರಿ ಭಾಷಿಕ ಶಬ್ದದಿಂದ ಇಲ್ಲಿ ವ್ಯವಹರಿಸಲಾಗಿದೆ. ಇದೇ ಪ್ರಕರಣದಲ್ಲಿ 'ಜಾತಿ' ಎಂಬ ಪದವನ್ನು ಬಳಕೆಯಲ್ಲಿರುವ, ಪ್ರಸಿದ್ಧವಾದ, ಬೇರೊಂದು ಅರ್ಥದಲ್ಲಿಯೂ ಬಳಸಲಾಗಿದೆ. ಸಮಾನವಾದ ಸ್ವಾಭಾವಿಕ ಲಕ್ಷಣಗಳನ್ನುಳ್ಳ ಒಂದು ವರ್ಗದ ವಸ್ತುಗಳನ್ನು ಒಂದು

---

42 ರನ್ನನು 'ಗದಾಯುದ್ಧ'ದಲ್ಲಿ 'ಪದಿನಾಜಲ್ಲವಲಂಕ್ರಿಯಾರಚನೆ ಮೂವತ್ತಾಜು ನೇರ್ಪಟ್ಟುವು' ಎಂದು ಉಲ್ಲೇಖಿಸಿರುವುದನ್ನು ಇಲ್ಲಿ ನೆನೆಯಬಹುದು.

ಜಾತಿ ಎಂದು ಗುರುತಿಸುತ್ತೇವೆ. ಉದಾ., ಮನುಷ್ಯ ಜಾತಿ, ಪ್ರಾಣಿ ಜಾತಿ, ಪಕ್ಷಿಜಾತಿ, ಇತ್ಯಾದಿ. ಪಕ್ಷಿಜಾತಿಯಲ್ಲಿ ನವಿಲುಗಳೆಲ್ಲಾ ಒಂದು ಜಾತಿ, ಗಿಳಿಗಳೆಲ್ಲ ಒಂದು ಜಾತಿ. ಹೀಗೆ, ಪ್ರಪಂಚದ ಎಲ್ಲ ವಸ್ತುಗಳ ಜಾತಿ, ಕ್ರಿಯೆ, ಗುಣ, ದ್ರವ್ಯ ಎಂಬೀ ಸ್ವಾಭಾವಿಕ ಗುಣ ವನ್ನು ವರ್ಣಿಸುವುದು ಒಟ್ಟಿನಲ್ಲಿ ಜಾತ್ಯಲಂಕಾರ. ವಸ್ತುಗಳ ಜಾತಿ, ದ್ರವ್ಯ, ಕ್ರಿಯೆ, ಗುಣಗಳನ್ನು ಅರ್ಥದ ವಕ್ರತೆಯಿಲ್ಲದೆ ಅವು (ಪ್ರತ್ಯಕ್ಷ ಗೋಚರವಾಗಿರುವಂತೆ) ಇರುವಂತೆಯೇ ವರ್ಣಿಸುವುದ ರಿಂದ ಇವು 'ವಾಸ್ತವಾಲಂಕಾರ'. ವಸ್ತುವಿನ ಸ್ವಭಾವ ವರ್ಣನೆ ಯಾದ್ದರಿಂದ 'ಸ್ವಭಾವಾಖ್ಯಾನ' ಅಥವಾ 'ಸ್ವಭಾವೋಕ್ತಿ' ಎಂದೂ ಇದನ್ನು ಕರೆಯಲಾಗಿದೆ.[43]

ಈ ಸಂಬಂಧವಾದ ದಂಡಿಯ ಶ್ಲೋಕಗಳು ಇಂತಿವೆ :

ನಾನಾವಸ್ಥಂ ಪದಾರ್ಥಾನಾಂ ರೂಪಂ ಸಾಕ್ಷಾದ್ವಿವೃಣ್ವತೀ |
ಸ್ವಭಾವೋಕ್ತಿಶ್ಚ ಜಾತಿಶ್ಚೇತ್ಯಾದ್ಯಾ ಸಾಲಂಕೃತಿರ್ಯಥಾ ‖ (II-೮)

ಜಾತಿಕ್ರಿಯಾಗುಣದ್ರವ್ಯ ಸ್ವಭಾವಾಖ್ಯಾನಮೀದೃಶಃ |
ಶಾಸ್ತ್ರೇಷ್ವಸ್ಯೈವ ಸಾಮ್ರಾಜ್ಯಂ ಕಾವ್ಯೇಷ್ವಪ್ಯೇತದೀಪ್ಸಿತಂ ‖ (II-೧೩)

ಪದ್ಯ ೭ : ಇದು ಜಾತಿ ಸ್ವಭಾವಾಖ್ಯಾನಕ್ಕೆ ದೃಷ್ಟಾಂತ. ದಂಡಿ ಕೊಟ್ಟಿರುವ ಗಿಣಿಯ ವರ್ಣನೆಯ ಸ್ಥಾನದಲ್ಲಿ ಮಾರ್ಗಕಾರನು ಮಾಡಿರುವ ನವಿಲಿನ ಕುಣಿತದ ವರ್ಣನೆ ಇದು. ಮಳೆಗಾಲದ ಮೊದಲಿನಲ್ಲಿ ಆ ನವಿಲು ಈ ನವಿಲು ಎನ್ನದೆ ಎಲ್ಲ ನವಿಲುಗಳೂ ಕುಣಿಯುತ್ತ ಸೊಗ ಸಾಗಿ ಕಾಣುವುವಾದ್ದರಿಂದ, ಒಟ್ಟು ನವಿಲಿನ ಜಾತಿಯ ಸ್ವಭಾವದ ವರ್ಣನೆಯಿದು. (ಪಯೋದಾಗಮದಲ್ಲಿ ನವಿಲು ಕೇಗುತ್ತ ಜಾಗರ

43 ಭಾರತೀಯ ತರ್ಕ ಮತ್ತು ನ್ಯಾಯಶಾಸ್ತ್ರಗಳಲ್ಲಿ ಈ ಸಂಬಂಧವಾದ ವಿಪುಲವಾದ ಚರ್ಚೆಯನ್ನು ಕಾಣಬಹುದು. ದಂಡಿಯ ಉಕ್ತಿಯಂತೆ, ಶಾಸ್ತ್ರದಲ್ಲಿ ಅದರದ್ದೇ ಪ್ರಭುತ್ವ ; ಕಾವ್ಯದಲ್ಲಿ ಅಪೇಕ್ಷಣೀಯವಷ್ಟೆ. ಆದ್ದರಿಂದ ಈ ವಿಷಯದ ವಿವರಣೆ ಯನ್ನು ಇಲ್ಲಿ ಹೆಚ್ಚು ಬೆಳಸಬೇಕಾದದ್ದು ಅನಗತ್ಯ ; ಅಲ್ಲದೆ, ಈ ಗ್ರಂಥದ ಸಂಪಾದಕನಿಗೆ ಅದರಲ್ಲಿ ಪ್ರವೇಶವೂ ಇಲ್ಲ.

ವಾಡುತ್ತ ನಲಿಯುವುದು 'ವಾಸ್ತವ'ವೇ ಎಂಬ ಪ್ರಶ್ನೆಗೆ, ಅದು 'ಕವಿಸಮಯ' ಎಂಬುದೇ ಉತ್ತರ). ಆದ್ದರಿಂದಲೇ ನವಿಲು ಎಂಬ ಏಕವಚನದ ಪ್ರಯೋಗ. ಕನ್ನಡ ವ್ಯಾಕರಣದಲ್ಲಿ ಇದು ಜಾತ್ಯೇಕ ವಚನ ಎಂದು ಪ್ರಸಿದ್ಧವಾಗಿದೆ.

ಅಪಾಂಗ=ಕಡೆಗಣ್ಣ ನೋಟ. ಕೇಕಾರವ ಮುಖರಂ=ಕೇಗುವ ಧ್ವನಿಯ ಅನುರಣದಿಂದ ಕೂಡಿದ. ಹರಿತ ಶಾಬಲಾಂಕ ಕಲಾಪ= ಹಸುರು ಬಣ್ಣದ ಗುರುತುಗಳ (ಕಣ್ಣುಗಳ) ಗರಿಯ (ಸೋಗೆಯ) ಅಣಿಪಾಡು (ಜಾಗರ). ಗಳ=ಕೊರಳು. ನವಿಲಾಟಂ=(ನವಿಲ+ ಆಟಂ; ಆಟ=ಕುಣಿತ, ನರ್ತನ).

ಪದ್ಯ ೮: ತನ್ನ ಹೆಣ್ಣಾನೆಯೊಂದಿಗೆ ಮದನಾವಸ್ಥೆಯಲ್ಲಿರುವ ವನಕರಿ (ಕಾಡಾನೆ)ಯೊಂದರ 'ಕ್ರಿಯೆ'ಯನ್ನು ವರ್ಣಿಸುವ 'ಕ್ರಿಯಾ ಸ್ವಭಾವಾಖ್ಯಾನ'ದ ದೃಷ್ಟಾಂತವಿದು. ಹೆಣ್ಣಾನೆಯೊಂದಿಗಿರುವ (ಒಂದು) ವನಕರಿಯ ಕೆಲವು ವಿಶಿಷ್ಟ ಕ್ರಿಯೆಗಳನ್ನು ಇಲ್ಲಿ ವರ್ಣಿಸಿದೆ. ಮದನಾವಸ್ಥೆಯಲ್ಲಿರುವ ಎಲ್ಲ ಆನೆಗಳಿಗೂ ಈ ಕ್ರಿಯೆಗಳು ಸಾಮಾನ್ಯವೆನಿಸವು; ಎಲ್ಲವೂ ತಮ್ಮ ಹೆಣ್ಣಾನೆಯೊಂದಿಗಿರಬೇಕಾಗಿಲ್ಲ; ಆದ್ದರಿಂದ, 'ಒಂದು' ಎಂಬ ಸಂಖ್ಯಾಪದವಿಲ್ಲದಿದ್ದರೂ ಇದು ಒಂದು ಆನೆಯ ಕ್ರಿಯೆಗಳೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ, ಇಲ್ಲಿ 'ವನಕರಿ' ಜಾತಿಸೂಚಕವಲ್ಲ. ಅಲ್ಲದೆ, ವರ್ಣಿತವಾದ ಕ್ರಿಯೆಗಳೆಲ್ಲ ಗಜಜಾತಿಗೆ ಸ್ವಾಭಾವಿಕವಾದವು. ಆದ್ದರಿಂದ, ಇದು ಕ್ರಿಯಾಸ್ವಭಾವದ ವರ್ಣನೆಯೆನಿಸುತ್ತದೆ.

ಸಲ್ಲಕೀಪಲ್ಲವ='ಸಲ್ಲಕೀ' ಎಂಬ, ಆನೆಗಳಿಗೆ ಪ್ರಿಯವಾದ, ಸಸ್ಯದ ಚಿಗುರು. ಕರೇಣು=ಹೆಣ್ಣಾನೆ. ಪೇಚಕ=ಆನೆಯ ಬಾಲದ ತುದಿ. ಆಯತ ಹಸ್ತ=ದೀರ್ಘವಾದ ಸೊಂಡಿಲು.

ಪದ್ಯ ೯: ಮದಿರಾ (ಮದ್ಯ)ಪಾನಮದದಿಂದ ಒಬ್ಬ ಸ್ತ್ರೀಯ ದೇಹದಲ್ಲಿ ತಲೆದೋರಿದ ಪರಿಣಾಮ 'ಗುಣ'ಗಳನ್ನು ವರ್ಣಿಸುವುದರಿಂದ ಇದು 'ಗುಣಸ್ವಭಾವಾಖ್ಯಾನ'. ಮದಿರಾಪಾನ ಮಾಡಿದವರೆಲ್ಲರಲ್ಲಿಯೂ

ಈ ಗುಣಗಳು ಕಂಡುಬರುವುದು ಸ್ವಾಭಾವಿಕ. (ಇದು ದಂಡಿ ಕೊಟ್ಟಿರುವ ಲಕ್ಷ್ಯದ ಸರಳಾನುವಾದ. ಅಲ್ಲಿ 'ಪ್ರಿಯಾಸ್ಪರ್ಶ'ದ ಪರಿಣಾಮವನ್ನು ಬಣ್ಣಿಸಿದರೆ, ಇಲ್ಲಿ 'ಮದಿರಾಮದ'ದ ಪರಿಣಾಮವನ್ನು ಬಣ್ಣಿಸಿದೆ.)

ಆಘೂಳನ= (ಕಣ್ಣಿವೆ) ಮುಚ್ಚುವುದು. ಒಸಗೆ=ಸಂತೋಷ, ಪ್ರೀತಿ. ಕಂಚು=ಕಂಚುಕ; ತೊಡಪು, ಕುಪ್ಪಸ. ತೆಗಬ್ಬು= ತೊದಲು, ಮಾತಿನ ತಡವಡಿಕೆ.

ಪದ್ಯ ೧೦: ಲಲಿತವಿಲಾಸಿನಿಯಾದ ಕೋಮಲಾಂಗಿಯೊಬ್ಬಳನ್ನು ಆಕೆಯ ಪ್ರಿಯನು ಬಿಟ್ಟುಬಿಟ್ಟನೆಂದು ತಿಳಿಸುವ ಈ ಪದ್ಯದಲ್ಲಿ, ಆ ಕೋಮಲಾಂಗಿಯ ರೂಪಕಾರಣಗಳಾದ ಬೇರೆ ಬೇರೆ ಅಂಗಗಳನ್ನು ('ದ್ರವ್ಯ') ವರ್ಣಿಸುವುದರಿಂದ, ಇದು 'ದ್ರವ್ಯಸ್ವಭಾವಾಖ್ಯಾನ.'[44]

ತಳಮಿತಮಧ್ಯೆ=ಕೆಳಗಡೆ ತೆಳ್ಳನೆಯ ನಡುವುಳ್ಳವಳು. ಆಯತ ವಿಲೋಲಲೋಚನೆ=ವಿಶಾಲವಾದ, ಚಂಚಲವಾದ, ಕಣ್ಣುಳ್ಳವಳು.

೧. ರೂಪಕ

ಪದ್ಯ ೧೧: **ರೂಪಕ** (ಅಲಂಕಾರ): 'ಪೆಱವಱ' ಎಂದರೆ ವರ್ಣ್ಯವಲ್ಲದ ಬೇರೆಯ (=ಅಪ್ರಕೃತ) ವಸ್ತುಗಳ ರೂಪಾದಿ ಗುಣಗಳನ್ನು ವರ್ಣ್ಯವಾದ ವಿಷಯದಲ್ಲಿ(=ಪ್ರಕೃತ) 'ಅಭೇದೋಕ್ತಿಯಿಂದ' (ಎಂದರೆ, 'ಅದರಂತೆ ಇದು ಇದೆ' ಎನ್ನದೆ 'ಅದೇ ಇದು' ಎನ್ನುವುದು) ರೂಪಿಸುವುದು 'ರೂಪಕ'. ಉದಾ: ಬಾಹುಲತೆ, ಪಾದಾಂಬುಜ, ಮುಖೇಂದು, ನಯನಾಳಿ. ('ಲತೆಯಂತಿರುವ ಬಾಹು' ಎಂದರೆ ಉಪಮಾಲಂಕಾರವಾಗುವುದು. ಬಾಹು ವರ್ಣ್ಯ; ಲತೆ ಅವರ್ಣ್ಯ.

---

44 ರಾಮನು ಸೀತೆಯನ್ನುಳಿದ ರಾಮಾಯಣಕಥಾ ಸಂಗತಿಯೋ ಇಲ್ಲವೆ ಭೀಷ್ಮನು ಅಂಬೆಯನ್ನುಳಿದ ಭಾರತಕಥಾ ಸಂಗತಿಯೋ ಈ ಪದ್ಯದ ವರ್ಣ್ಯವಿಷಯ ಎಂದು ಮುಳಿಯ ತಿಮ್ಮಪ್ಪಯ್ಯನವರ ಊಹೆ. ಹಾಗೆ ಊಹಿಸಲು ಪದ್ಯದಲ್ಲಿ ಪ್ರಬಲವಾದ ಆಧಾರವಿಲ್ಲ.

ಲತೆಯ ರೂಪಗಳನ್ನು ಬಾಹುವಿನಲ್ಲಿ ಆರೋಪಿಸಿ ರೂಪಿಸಿದೆ. ಲತೆಯೇ ಬಾಹು ಎಂದುದರಿಂದ ಎರಡಕ್ಕೂ ಅಭೇದವನ್ನು ಕಲ್ಪಿಸಲಾಗಿದೆ.) (ಬಾಹುಲತೆ, ಪಾಣಿಪದ್ಮ ಇವು ದಂಡಿ ಕೊಟ್ಟಿರುವ ಉದಾಹರಣೆಗಳು.)

ಪದ್ಯ ೧೩ : **ಸಮಸ್ತ ರೂಪಕ** : 'ಸಮಸ್ತಾಶ್ರಿತಂ ಸಮಸ್ತಂ'—ಸಮಾಸದ ಮೂಲಕ ಪ್ರಕೃತಾಪ್ರಕೃತಗಳು ರೂಪಣಗೊಂಡಿರುವುದರಿಂದ ಇದು 'ಸಮಸ್ತ ರೂಪಕ'ದ ದೃಷ್ಟಾಂತ. ಸ್ಮಿತ ಕುಸುಮ (ನಗೆಹೂವು), ಅಧರಪಲ್ಲವ (ತುಟಿಚಿಗುರು), (ಅತಿಶಯ) ನಯನಾಳಿ (ಕಣ್ದುಂಬಿ), ಬಾಹುಶಾಖೆ (ತೋಳ್‌ಗವಲು), ಕಾಂತಾಲತೆ (ಪೆಣ್ಬಳ್ಳಿ)—ಇವೆಲ್ಲ ಸಮಸ್ತಪದಘಟಿತ ರೂಪಕಗಳು. (ದಂಡಿಯ ಲಕ್ಷ್ಯ ಪದ್ಯಗಳನ್ನು—II, ೬೭-ಮಾರ್ಗಕಾರನು ಸ್ವಲ್ಪ ಮಾರ್ಪಾಟು ಮಾಡಿಕೊಂಡಿದ್ದಾನೆ.)

ಪದ್ಯ ೧೪ : **ವ್ಯಸ್ತ ರೂಪಕ** : 'ಅಸಮಸ್ತಂ ವ್ಯಸ್ತ ರೂಪಕಂ'—ಸಮಾಸ ಪದ ಘಟಿತವಲ್ಲದ್ದು ವ್ಯಸ್ತರೂಪಕ. ಮೇಲೆ ಕೊಟ್ಟಿರುವ ಸಮಸ್ತ ರೂಪಕಗಳನ್ನೆ ಇಲ್ಲಿ ವ್ಯಸ್ತಮಾಡಿ, ಎಂದರೆ ಸಮಾಸವನ್ನು ಬಿಡಿಸಿ, ಕೊಟ್ಟಿದೆ. ('ಸ್ಮಿತಕುಸುಮಂ' ಎಂಬುದನ್ನು 'ಸ್ಮಿತವೆ ಕುಸುಮ' ಎಂದು ಮುಂತಾಗಿ). ವಿಟಪ=ಕೊಂಬೆ, ಕವಲು. ಅಸುವಲ್ಲಭೆ= ಪ್ರಾಣವಲ್ಲಭೆ.

ಪದ್ಯ ೧೫ : **ಸಾವಯವ ರೂಪಕ** : 'ಅವಯವ ನಿರೂಪಣಕ್ರಮದಿಂ ಅವಯವಂ.' ಕಾಂತೆ ಅವಯವಿ, ಎಂದರೆ ಅವಯವವುಳ್ಳವಳು. ಅವಳನ್ನು 'ಲತೆ' ಎಂದು ರೂಪಕ ಮಾಡದೆ, ಅವಳ ಅವಯವಗಳನ್ನು ಮಾತ್ರ (ಅಧರಪಲ್ಲವೆ=ತುಡಿ ಚಿಗುರುಳ್ಳವಳು, ಲೋಚನ ಕುಸುಮೆ=ಕಣ್ಣ ಹೂವುಳ್ಳವಳು, ಇತ್ಯಾದಿಯಾಗಿ) ರೂಪಕಮಾಡಿದೆ. (ಕಾಂತೆಯನ್ನು ಲತೆ ಎಂದು ರೂಪಕ ಮಾಡದಿದ್ದರೂ ಅದು ಧ್ವನಿತವಾಗುತ್ತದೆ.) ('ಸ್ಫುರಿತಾಧರ ಪಲ್ಲವಂ' ಎಂಬುದು ದಂಡಿಯ ಮಾತು.)

ಪದ್ಯ ೧೬: **ಅವಯುವಿ ರೂಪಕ**: ಪದ್ಯದ ಅನ್ವಯಕ್ರಮ: 'ನಿನ್ನಾ ತರಳತರ ಲೋಚನಂ (ಚಂಚಲವಾದ ಕಣ್ಣುಗಳು), ನಿರ್ಭರ ರಾಗ ರಸಂ (ಪೂರ್ಣ ಪ್ರೇಮರಸದಿಂದ ಕೂಡಿದ), ಮುಖಾರವಿಂದಂ ದೊರೆಕೊಳಿಸಿದ ಒಸಗೆ (ಸಂತೋಷ) ಏಂ ಬಂಧುರಂ.' ಇಲ್ಲಿಮುಖ ಅವಯುವಿ (ಅವಯುವಗಳನ್ನುಳ್ಳದ್ದು); ಅದನ್ನು ಅರವಿಂದ (ತಾವರೆ) ಎಂದು ರೂಪಕ ಮಾಡಿದೆ. ಅದರ ಅವಯುವಗಳಾದ ಲೋಚನ ಮತ್ತು ರಾಗರಸಗಳನ್ನು ರೂಪಕ ಮಾಡಿಲ್ಲ; ಆದರೂ, ಅವು 'ದುಂಬಿ ಮತ್ತು ಮಕರಂದ' ಎಂಬ ಅರ್ಥಗಳು ಧ್ವನಿತವಾಗುತ್ತವೆ.

ಪದ್ಯ ೧೭: **ವಿಷಮ ರೂಪಕ**: 'ವಿಷಮಿತ ರೂಪ ವಿಷಮರೂಪಕ ಮಕ್ಕುಂ': (ಅಂಗಿಯನ್ನೂ ಅದರ ಅಂಗಗಳನ್ನೂ ರೂಪಣ ಮಾಡು ವಾಗ ಅಂಗಿ ಅಂಗಗಳ) ರೂಪಕಗಳಲ್ಲಿ ವಿಷಮತೆ (ಸಮವಲ್ಲದಿರುವಿಕೆ, ಅಸಮತೆ) ಕಂಡುಬಂದರೆ ಅದು 'ವಿಷಮರೂಪಕ'.[45] 'ಮೃದು ವಾದ ಕಪೋಲ ಫಲಕವನ್ನುಳ್ಳ, ನೀಳವೂ ಮೇಲೆ ಬಾಗಿದ್ದೂ ಆದ ಭ್ರೂಚಾಪ (=ಹುಬ್ಬು ಬಿಲ್ಲು)ವನ್ನುಳ್ಳ ವದನಾಂಬುಜವು ನನಗೆ ಮುದವನ್ನುಂಟುಮಾಡಿತು.—ಇದು ದೃಷ್ಟಾಂತ. (ದಂಡಿಯ 'ಮುಖೇಂದು' ಎಂಬ ರೂಪಕ ಇಲ್ಲಿ 'ವದನಾಂಬುಜವಾಗಿದೆ'.) ವದನ ಅಂಗಿ; ಕಪೋಲ (ಕೆನ್ನೆ) ಮತ್ತು ಭ್ರೂ (ಹುಬ್ಬು) ಅದರ ಅಂಗಗಳು. ಕಮಲಕ್ಕೂ ಫಲಕ ಚಾಪಗಳಿಗೂ ಯಾವ ರೀತಿಯಿಂದ

---

45 ದಂಡಿಯ ಲಕ್ಷಣಲಕ್ಷ್ಯ ಸಮನ್ವಯ ಭಿನ್ನವಾಗಿದೆ:

ರೂಪಣಾದಂಗಿನೋಂಗಾನಾಂ ರೂಪಣಾರೂಪಣಾಶ್ರಯಾತ್ ।
ರೂಪಕಂ ವಿಷಮಂ ನಾಮ ಲಲಿತಂ ಜಾಯತೇ ಯಥಾ ॥
ಮದರಕ್ತ ಕಪೋಲೇನ ಮನ್ಮಥಸ್ತ್ವನ್ಮುಖೇಂದುನಾ ।
ನರ್ತಿತಭ್ರೂಲತೇನಾಲಂ ಮರ್ದಿತುಂ ಭುವನತ್ರಯಂ ॥

(II-೭೯, ೮೦)

ಮಾರ್ಗಕಾರನ ಲಕ್ಷಣ ನಿರೂಪಣೆ ದಂಡಿಯುದರದಷ್ಟು ವಿಶದವಾಗಿಲ್ಲ. ಅಂಗಿಯನ್ನು ರೂಪಣ ಮಾಡಿ, ಅಂಗಗಳಲ್ಲಿ ರೂಪಣ, ಅರೂಪಣ ಎರಡೂ ಇದ್ದರೆ, ಅದು ವಿಷಮ. ಲಕ್ಷ್ಯದಿಂದ ಇದು ಸ್ಪಷ್ಟ.

ನೋಡಿದರೂ ಸಂಬಂಧವಿಲ್ಲ; ಅವು (ಅಂಗಾಂಗಿ ರೂಪಕಗಳು) ಪರಸ್ಪರ ವಿಷಮ.

ಪದ್ಯ ೧೮ : **ವಿಶೇಷಣರೂಪಕ :** ಲಕ್ಷ್ಯ ಪದ್ಯದಲ್ಲಿ 'ವಿನಿಶ್ಚಿತ ವಿಶೇಷಣೋರು ರೂಪಕಂ' ಎಂದು ನಿರ್ದೇಶಿಸಿರುವುದರಿಂದ, ಇದು ವಿಶೇಷಣ ರೂಪಕಕ್ಕೆ ದೃಷ್ಟಾಂತವೆಂದು ಭಾವಿಸಬೇಕು. ಆದರೆ, ವಾಸ್ತವವಾಗಿ, ಈ ಪದ್ಯದಲ್ಲಿ 'ಜಿನಚರಣನಖಾದರ್ಶಂ' ಎಂದು ವಿಶೇಷ್ಯವು ರೂಪಕವಾಗಿದೆ; ವಿಶೇಷಣವು ರೂಪಣಗೊಂಡಿಲ್ಲ. ಇಲ್ಲಿನ ಪದ್ಯಕ್ಕೆ ಸಂವಾದಿಯಾದ ದಂಡಿಯ ಶ್ಲೋಕದಲ್ಲಿ 'ವಿಶೇಷಣಸಮಗ್ರ'ವೂ ರೂಪಕವಾಗಿರುವುದರಿಂದ, ಇಲ್ಲಿಯೂ ಹಾಗೆಯೇ ಇರಬೇಕು. ಆದ್ದರಿಂದ, ಈ ಭಾಗದ ಪಾಠದಲ್ಲಿ ಪ್ರತಿಕಾರನ ಲೇಖನಸ್ಖಾಲಿತ್ಯ ನಿಮಿತ್ತ ದೋಷವುಂಟಾಗಿರಬಹುದೆಂದು ಶಂಕಿಸಿ, 'ವಿನತಾಮರ ರಾಜ ರಾಜವದನಪ್ರತಿಮಂ' ಎಂಬುದನ್ನು 'ವಿನತಾಮರರಾಜ ವದನರಾಜಪ್ರತಿಮಂ' (ನಮಸ್ಕರಿಸುವ ದೇವೇಂದ್ರನ ಮುಖ ಚಂದ್ರನ ಬಿಂಬವುಳ್ಳ) ಎಂಬುದಾಗಿ ತಿದ್ದಿಕೊಂಡರೆ ದೋಷ ಪರಿಹಾರವಾಗುವುದೆಂದು ಮುಳಿಯ ತಿಮ್ಮಪ್ಪಯ್ಯನವರು ಸೂಚಿಸಿದ್ದಾರೆ. ಈ ತಿದ್ದುಪಾಟು ಸಾಧುವಾಗಿ ಕಂಡುಬರುತ್ತದೆ. (ಇದರಿಂದ ಯತಿನಿಯಮಕ್ಕೂ ಭಂಗಬರುವುದಿಲ್ಲ).

ಈ ಲಕ್ಷ್ಯ ಪದ್ಯದಲ್ಲಿ ಇನ್ನೊಂದು ಗಮನಾರ್ಹ ಸಂಗತಿ ಅಡಗಿದೆ. ದಂಡಿಯ ವಿಷ್ಣುಪರವಾದ ಸ್ತುತಿಯನ್ನು ಮಾರ್ಗಕಾರನು ಜಿನಸ್ತುತಿಯನ್ನಾಗಿ ಮಾರ್ಪಡಿಸಿದ್ದಾನೆ.

ದಂಡಿಯ ಶ್ಲೋಕ :

ಹರಿಪಾದಶ್ಶಿರೋಲಗ್ನ ಜಹ್ನುಕನ್ಯಾಜಲಾಂಶುಕಃ |
ಜಯತ್ಯಸುರನಿಶ್ಶಂಕ ಸುರಾನಾಂದೋತ್ಸವಧ್ವಜಃ ‖–II, ೮೧

(ಇಲ್ಲಿ 'ಹರಿಪಾದ . . . ಜಲಾಂಶುಕ'ವು 'ಧ್ವಜ'ಕ್ಕೆ ವಿಶೇಷಣವಾಗಿದ್ದು, ರೂಪಕವಾಗಿದೆ.)

'ಹರಿಪಾದವು' ಮಾರ್ಗಕಾರನ ಲಕ್ಷ್ಯದಲ್ಲಿ ಜಿನಚರಣವಾಗಿ ಮಾರ್ಪಟ್ಟಿದೆ. ಇದು ಮಾರ್ಗಕಾರನು ಜೈನನಾಗಿದ್ದಿರಬಹುದೆಂಬುದಕ್ಕೆ ಒಂದು ಆಂತರಿಕ ಪ್ರಮಾಣ. ಇಂಥ ನಿದರ್ಶನಗಳು ಗ್ರಂಥದಲ್ಲಿ ಇನ್ನೂ ಕೆಲವಿವೆ.

ನಖಾದರ್ಶ=ಉಗುರುಕಣ್ಣೆಂಬ ಕನ್ನಡಿ.

ಪದ್ಯ ೧೯: **ವಿರುದ್ಧರೂಪಕ:** ಈ ಲಕ್ಷ್ಯದ ಪೂರ್ವಭಾಗವು ದಂಡಿಯ ದೃಷ್ಟಾಂತ ಭಾಗದ ಅನುವಾದ. 'ನಿನ್ನ ಮುಖೇಂದು ಬಿಂಬವು ಇಂದುವಿಗೆ ಸಮ; (ಆದರೂ) ಕಮಲಾಕರದಲ್ಲಿ ಸಂಕೋಚವನ್ನೂ ಚಕ್ರವಾಕದಲ್ಲಿ (ವಿಯೋಗ ಮೂಲಕ) ದುಃಖವನ್ನೂ ಉಂಟುಮಾಡುವುದಿಲ್ಲ.'—ಇದು ತಾತ್ಪರ್ಯ. ಮುಖಚಂದ್ರ ಚಂದ್ರನಿಗೆ ಸಮವಾದರೂ ಅದರ ಕಾರ್ಯ ಮಾತ್ರ ಚಂದ್ರನ ಕಾರ್ಯಕ್ಕೆ ವಿರುದ್ಧವಾಗಿದೆ. ದಂಡಿಯ ಪ್ರಕಾರ, ಬೇರೆಯ ಕಾರ್ಯವನ್ನು ಮಾಡುವುದೆಂದು ವರ್ಣಿಸಿದರೂ ವಿರುದ್ಧರೂಪಕ. ('ಅಕ್ರಿಯಾ ಚಂದ್ರಕಾರ್ಯಾಣಾಂ ಅನ್ಯಕಾರ್ಯಸ್ಯ ಚ ಕ್ರಿಯಾ).

ಪದ್ಯ ೨೦: **ಹೇತುರೂಪಕ:** ಇದು ಒಬ್ಬ ರಾಜನ (ನೃಪತುಂಗನ?) ಗುಣಗಳ ವರ್ಣನೆ. 'ಗೌರವ ಹೇತುವಿನಿಂದ (ಕಾರಣದಿಂದ) ನೀನು ಕುಲಪರ್ವತ; ಸ್ಥೈರಣೆಯ ಕಾರಣದಿಂದ ನೀನು ನೆಲ; ಶಾಂತಿಯ ಕಾರಣದಿಂದ ಚಂದ್ರ; ಗುಣ್ಪಿನ (ಗುಣ್ಪು=ಗಂಭೀರತೆ, ಅಗಾಧತೆ) ನಿಮಿತ್ತದಿಂದ ಸಮುದ್ರ.' (ದಂಡಿಯ ಲಕ್ಷ್ಯ ಪದ್ಯದ ಕಲ್ಪವೃಕ್ಷದ ರೂಪಕದೆಡೆಯಲ್ಲಿ ಇಲ್ಲಿ ನೆಲ ಮತ್ತು ಚಂದ್ರನ ರೂಪಕಗಳು ಬಂದಿವೆ). ವರ್ಣ್ಯ ವ್ಯಕ್ತಿಯನ್ನು ಕುಲಗಿರಿ ಇತ್ಯಾದಿಯಾಗಿ ರೂಪಕ ಮಾಡಲು ಅವುಗಳಲ್ಲಿನ ಗುಣಗಳು ಇವನಲ್ಲಿಯೂ ಇರುವುದೇ ಕಾರಣ(ಹೇತು)ವಾದದ್ದರಿಂದ ಇದು ಹೇತು ರೂಪಕ. (ಗೌರವ, ಗುಣ್ಪು—ಈ ಪದಗಳ ಪ್ರಯೋಗದಲ್ಲಿ ಶ್ಲೇಷೆಯೂ ಕಾಣಿಸಿಕೊಂಡಿದೆ) (ಮುಂದೆ ವಿವರಿಸಿರುವ 'ಹೇತು' ಎಂಬ ಅಲಂಕಾರವನ್ನು ಇದರೊಂದಿಗೆ ಹೋಲಿಸಿ).

ಪದ್ಯ ೨೧: **ಶ್ಲೇಷರೂಪಕ:** ರೂಪಕಗಳು ಶ್ಲೇಷಾರ್ಥಗಳಿಂದ ಕೂಡಿರುವುದು ಶ್ಲೇಷರೂಪಕ. (ಈ ಪದ್ಯವೂ ಒಬ್ಬ ರಾಜನನ್ನು, ಬಹುಶಃ ನೃಪತುಂಗನನ್ನು, ವರ್ಣಿಸುವ ಪದ್ಯ). "ಉದಾರನಾದ ನಿನ್ನ ವಿಮಳ ಯಶೋವಿಧು (ನಿರ್ಮಲವಾದ ಕೀರ್ತಿಚಂದ್ರ) : 'ಕುಮುದಾನಂದನಕರ'=೧. (ಕುಮುದ+ಆನಂದನ+ಕರ) ನೈದಿಲೆಗಳಿಗೆ ಆನಂದವುಂಟುಮಾಡುವ ಕಿರಣಗಳುಳ್ಳದ್ದು : ಚಂದ್ರ ; ೨. (ಕು+ಮುದ+ಆನಂದ+ಕರ) ಭೂಮಿಗೆ ಸಂತೋಷ ಆನಂದಗಳನ್ನು ಉಂಟುಮಾಡುವವನು : ರಾಜ. 'ಕಮಲಾಕರರಾಗಹರಂ'=೧. ಕಮಲ+ಆಕರ+ರಾಗ+ಹರಂ) ಪದ್ಮಾಕರಗಳ (ತಾವರೆ ಹೂಗಳ ಸಮೂಹಕ್ಕೆ) ಪ್ರೀತಿಯನ್ನು (=ಸಂತೋಷವನ್ನು) ಹೋಗಲಾಡಿಸುವುದು : ಚಂದ್ರ ; ೨. (ಕಮಲಾ+ಕರ+ರಾಗಹರಂ) ಶ್ರೇಷ್ಠ ಸ್ತ್ರೀ ಉಂಟುಮಾಡುವ ಪ್ರೇಮವನ್ನು ಅಪಹರಿಸತಕ್ಕವನು ; ರಾಜ. ('ಕಾವ್ಯದರ್ಶ'ದ 'ಮುಖಾಂಬುಜ'ವು ಇಲ್ಲಿ 'ಯಶೋವಿಧು'ವಾಗಿದೆ).

ಪದ್ಯ ೨೨: **ವಿಭಿನ್ನರೂಪಕ:** ಭಿನ್ನ ಗುಣಗಳು ಭಿನ್ನ ರೂಪಕಗಳ ಮೂಲಕ ಏಕತ್ರ ಇರುವಂತೆ ನಿರೂಪಿಸುವ ರೂಪಕ. (ಈ ಪದ್ಯದಲ್ಲಿ ರಾಜನೊಬ್ಬನ ಪರಾಕ್ರಮದ ವರ್ಣನೆಯಿದೆ). "(ನಿನ್ನ) ಪರಾಕ್ರಮವೆಂಬ ಪರಮ ಉದಯ ರವಿಯ ಗಗನವು ಪರಿಚಿತ ಸನಾಭಿಗಳ (=ಬಂಧುಗಳ) ರಾಗಾಂಕುರಕ್ಕೆ (=ಪ್ರೀತಿಯೆಂಬ ಮೊಳಕೆಗೆ) ಜಲಸೇಚವಾಗಿಯೂ (=ಹೊಯ್ನೀರಾಗಿಯೂ), ವಿರೋಧಿ (=ಶತ್ರು) ಗಳೆಂಬ ತರು(=ಮರ)ಗಳಿಗೆ ದವದಹನವಾಗಿಯೂ (=ಕಾಡುಗಿಚ್ಚಾಗಿಯೂ) ಇದೆ." ಭಿನ್ನವಸ್ತುಗಳಾದ ಮಳೆಯೂ ಸಿಡಿಲೂ ಆಕಾಶದಿಂದಲೇ ಬರುವಂತೆ, ಕಾಪಾಡುವ ನೀರಿನ ಗುಣ ಹಾಗೂ ನಾಶಮಾಡುವ ಅಗ್ನಿಯ ಗುಣ ಎರಡೂ ರಾಜನಲ್ಲಿವೆ. (ಈ ಅಲಂಕಾರವು ಈ ಹಿಂದೆ ಹೇಳಿದ 'ವಿಷಮರೂಪಕ' ಹಾಗೂ 'ವಿರುದ್ಧರೂಪಕ' —ಇವುಗಳನ್ನು ಹೋಲುತ್ತದೆ).

ಪದ್ಯ ೨೩: **ರೂಪಕೋರು ರೂಪಕ** (ಅಥವಾ ರೂಪಕ ರೂಪಕ): ಒಂದು ರೂಪಕದಲ್ಲಿ ಮತ್ತೊಂದನ್ನು ಅಂತರ್ಗತಗೊಳಿಸುವುದು.

"ವದನಾಂಬುಜ ರಂಗದಲ್ಲಿ (ಮುಖವೆಂಬ ಕಮಲ; ಮುಖಕಮಲವೆಂಬ ರಂಗ), ಈ ಮದಾಲಸ ಭ್ರೂಲತಾ ವಿಲಾಸಿನಿ (ಮದಾಲಸಳಾದ ಭ್ರೂ, ಎಂಬರೆ ಹುಬ್ಬು; ಭ್ರೂಲತೆ, ಎಂದರೆ ಹುಬ್ಬೆಂಬ ಬಳ್ಳಿ; ಭ್ರೂಲತಾ ವಿಲಾಸಿನಿ, ಎಂದರೆ ಭ್ರೂಲತೆಯೆಂಬ ವಿಲಾಸವತಿಯಾದ ಹೆಂಗಸು) ಲೀಲಾಸ್ಪದವಾದ ನೃತ್ಯವನ್ನು ಆಗಿಸುತ್ತದೆ." (ಮುಖದಲ್ಲಿ ಹುಬ್ಬು ಕುಣಿಯುತ್ತಿದೆ ಎಂದು ತಾತ್ಪರ್ಯ).

ಈ ಪದ್ಯ ಪೂರ್ತಿಯಾಗಿ ದಂಡಿಯ ಶ್ಲೋಕದ ಅನುವಾದ:

ಮುಖಪಂಕಜರಂಗೇಽಸ್ಮಿನ್ ಭ್ರೂಲತಾನರ್ತಕೀ ತವ |
ಲೀಲಾನೃತ್ತಂ ಕರೋತೀತಿ ರಮ್ಯಂ ರೂಪಕ ರೂಪಕಂ ||-II, ೯೩

('ರೂಪಕರೂಪಕ ರಮ್ಯವಾದ ಅಲಂಕಾರ.')

ಪದ್ಯ ೨೪: **ರೂಪಕಾಪಹ್ನುತಿ:** "ಇದು ವದನವಲ್ಲ, ಕಮಲ; ಇವು (ಮದದಿಂದ ಚಂಚಲಗಳಾದ) ಕಣ್ಣುಗಳಲ್ಲ, ದುಂಬಿಗಳು; ಇದು (ಮುಖದ) ಸಂತೋಷವಲ್ಲ, ವಿಕಸನ (ಅರಳುವಿಕೆ)"–ಎಂಬುದಿದು ರೂಪಕಾಪಹ್ನುತಿ. ಇರುವುದನ್ನು ಅಲ್ಲಗಳೆದು ಅದನ್ನು ಇನ್ನೊಂದಾಗಿ ರೂಪಣಮಾಡುವುದು ರೂಪಕಾಪಹ್ನುತಿ. (ಅಪಹ್ನುತಿ ಎಂದರೆ ಅಲ್ಲವೆನ್ನುವುದು). 'ಇದು ಮುಖವಲ್ಲ, ಕಮಲ' ಎಂದುದರಿಂದ ಕಮಲದ ಗುಣವು ಮುಖದಲ್ಲಿ ರೂಪಣಗೊಂಡು, ಮುಖದ ಗುಣೋತ್ಕರ್ಷವಾಗುವುದು. ('ಅಪಹ್ನುತಿ' ಎಂಬ ಸ್ವತಂತ್ರವಾದ ಬೇರೆಯ ಅಲಂಕಾರವೂ ಇದೆ: ಪದ್ಯ ೧೮೨ ನೋಡಿ). (ಇದೂ ಬಹುಮಟ್ಟಿಗೆ ದಂಡಿಯ ಲಕ್ಷ್ಯದ ಅನುವಾದ).

ಪದ್ಯ ೨೫: **ಯುಕ್ತರೂಪಕ:** "ಮುಖವೆಂಬ ಕಮಲಪುಷ್ಪದಲ್ಲಿನ ನಗೆಯೆಂಬ ವಿಕಾಸವು (=ಅರಳು) ಸೊಗಸುವುದರಲ್ಲಿ ಕಣ್ಣುಗಳೆಂಬ ತುಂಬಿಗಳು ಸಂತೋಷದಿಂದ ಸುಳಿಯುತ್ತಿವೆ" ಎಂಬಲ್ಲಿ, ರೂಪಕಗಳಿಗೆ ಪರಸ್ಪರ(ವಿರುದ್ಧವಲ್ಲದ) ಸಾಂಗತ್ಯ (=ಹೊಂದಿಕೆ, ಯುಕ್ತತೆ) ವಿರುವುದರಿಂದ ಇದು ಯುಕ್ತರೂಪಕ. (ದಂಡಿಯ ಲಕ್ಷ್ಯದಲ್ಲಿಯಂತೆ ಇಲ್ಲಿಯೂ 'ಮುಖಾಂಬುಜ' ಇತ್ಯಾದಿಯಾಗಿ ಸಮಾಸಯುಕ್ತ ರೂಪಕಗಳಿದ್ದಿದ್ದರೆ ಮೇಲಾಗಿರುತ್ತಿತ್ತು).

ಪದ್ಯ ೨೬ : **ವ್ಯಾಜರೂಪಕ :** (ಚಂದ್ರನ) ಬೆಳಗನ್ನು ನಗೆಯೆಂಬ ನೆವ (ನೆಪ=ವ್ಯಾಜ) ದಿಂದಲೂ, ತಿಂಗಳನ್ನು (=ಚಂದ್ರನನ್ನು) ಮುಖ ವೆಂಬ ನೆವದಿಂದಲೂ, (ಚಂದ್ರನ) ಲಕ್ಷ್ಮವನ್ನು (=ಕಳಂಕವನ್ನು) ಎರಡು ಕಣ್ಣುಗಳೆಂಬ ನೆವದಿಂದಲೂ ವರ್ಣಿಸುವ ಅಲಂಕಾರ 'ವ್ಯಾಜರೂಪಕ.' ಅಪ್ರಕೃತ ವಸ್ತುವಿನ (ನಗೆ, ಮುಖ, ಕಣ್ಣು) ಗುಣಧರ್ಮಗಳನ್ನು ಪ್ರಕೃತ ವಸ್ತುವಿನಲ್ಲಿ (ಬೆಳಗು, ಚಂದ್ರ, ಕಳಂಕ) ವ್ಯಾಜಾಂತರದಿಂದ ಆರೋಪಿಸಿ ರೂಪಣಮಾಡುವುದು ಇದರ ಲಕ್ಷಣ. (ಮುಂದೆ ಕೊಟ್ಟಿರುವ 'ವ್ಯಾಜಸ್ತುತಿ' ಯೊಂದಿಗೆ ಹೋಲಿಸಿ: ಪ. III-೧೬೦, ೧೬೧, ೧೬೨). ಇದು ದಂಡಿಯಿಂದ ಉಕ್ತವಾಗಿಲ್ಲ.

೨. ಅರ್ಥಾಂತರನ್ಯಾಸ

ಪದ್ಯ ೨೮ : 'ಅರ್ಥಾಂತರನ್ಯಾಸ'ದ ಲಕ್ಷಣವನ್ನು ವಿವರಿಸುತ್ತದೆ ಈ ಪದ್ಯ. 'ದೊರೆಕೊಳ್ಳುವಂತೆ ಮೊದಲು ಹೇಳಿದ ಅರ್ಥವನ್ನು ಸಾಧಿಸುವುದಕ್ಕಾಗಿ (ಸಮರ್ಥಿಸುವುದಕ್ಕಾಗಿ) ಬೇರೊಂದು ಅರ್ಥಾಂತರವನ್ನು ಹೇಳುವುದು (ನ್ಯಾಸಮಾಡುವುದು) ಅರ್ಥಾಂತರ (ವಿ) ನ್ಯಾಸ.' (ಪ್ರಸ್ತುತಾರ್ಥವನ್ನು ಅಪ್ರಸ್ತುತಾರ್ಥದಿಂದ ಸಮರ್ಥಿಸುವುದು).

ಪದ್ಯ ೨೯ : ಇದರಲ್ಲಿ ಅರ್ಥಾಂತರನ್ಯಾಸದ ಎಂಟು ಭೇದಗಳನ್ನು ಹೆಸರಿಸಿದೆ: ೧. ಸಕಲವ್ಯಾಪಿ, ೨. ವಿಶೇಷ ಪ್ರಕಾಶಕ, ೩. ಯುಕ್ತಕಾರಿ, ೪. ಯುಕ್ತಾಯುಕ್ತ, ೫. ಪ್ರಕಟಶ್ಲೇಷ, ೬. ವಿರುದ್ಧಾತ್ಮಕ, ೭. ವಿಪರ್ಯಯ, ೮. ಯುಕ್ತಾರ್ಥ.

ಪದ್ಯ ೩೦ : **ಸಕಲವ್ಯಾಪಿ :** 'ಸತತೋದಯನೂ ಪ್ರತಿಭಟನೆಯಿಲ್ಲದ ತೀವ್ರಗತಿಯುಳ್ಳವನೂ ಆದ ಆ ದಿನನಾಥನೂ ಕೂಡ ಅಸ್ತಂಗತನಾದನು' ಎಂಬುದಿದು ಹೇಳಬೇಕೆಂದಿರುವ ಪ್ರಕೃತಾರ್ಥ. ಸೂರ್ಯನಿಗೆ ಕೊಟ್ಟಿರುವ ವಿಶೇಷಣಗಳಿಂದ ಅವನು 'ಸಕಲವ್ಯಾಪಿ' ಎಂಬುದು ಸ್ಪಷ್ಟ. 'ಅಪ್ರತಿಹತಗತಿ ತೀವ್ರನಾದ ಅವನೂ ಮುಳು

ಗಿದನೆಂದರೆ, ತನ್ನಷ್ಟೇ ಅಥವಾ ತನ್ನನ್ನೂ ಮೀರಿಸಿ 'ಸಕಲವ್ಯಾಪಿ' ಯಾದ ಬೇರೊಂದು ಶಕ್ತಿಗೆ ಅವನು ಮಣಿದಿರಬೇಕು. ಅದೆಂದರೆ, ಸರ್ವತ್ರ ವ್ಯಾಪಕವಾದ ನಿಯತಪ್ರತೀತಿ. ಅದನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲ. ('ನಿಯತಿಃ ಕೇನ ಲಂಘ್ಯತೇ'- ದಂಡಿ). ಸಕಲವ್ಯಾಪಿಯಾದ ಸೂರ್ಯನೂ ಪ್ರಕೃತಿ ನಿಯಮದಿಂದ ವ್ಯಾಪ್ಯನಾಗಿದ್ದಾನೆ. (ಕಾವ್ಯಾದರ್ಶದಲ್ಲಿ ಈ ಅಲಂಕಾರವನ್ನು 'ವಿಶ್ವವ್ಯಾಪಿ' ಎಂದು ಕರೆದಿದೆ).[46]

ಪದ್ಯ ೩೧: **ವಿಶೇಷ ಪ್ರಕಾಶಕಂ:** "ಸರಸಿಜ ಬಾಂಧವನಾದ ದಿನಾಧಿನಾಥನು ಅಸ್ತಂಗತನಾಗಿರಲು ಸರೋಜಿನೀ ವನವು ವಿಶೇಷವಾಗಿ ಕೊರಗುತ್ತ ಮುಚ್ಚಿಕೊಳ್ಳುವುವು"—ಇದು ವರ್ಣ್ಯವಾದ ಪ್ರಕೃತ ವಾಕ್ಯ. "ಈಶ್ವರ ವಿರಹದೆ (ಒಡೆಯನ ಅಗಲಿಕೆಯಿಂದ) ವಿಶೇಷಾಪ್ತ ಜನ' 'ಶೋಕಾಕುಲ'ವಾಗುವುದು"—ಇದು ಮುಂಚಿನ ವಾಕ್ಯಾರ್ಥವನ್ನು ಸಮರ್ಥಿಸುವ ಒಂದು ವಿಶೇಷವಾದ ಅಪ್ರಕೃತ ಸಂದರ್ಭ; ವ್ಯಾಪಕವಲ್ಲ. ಈ ವಿಶೇಷವೂ ಪ್ರಕೃತದ ಅರ್ಥವನ್ನು ಬೆಳಗುವುದರಿಂದ, ಇದು 'ವಿಶೇಷ ಪ್ರಕಾಶಕ'.

ಪದ್ಯ ೩೨: **ಯುಕ್ತಕಾರಿ:** "ಮಲಯಾನಿಲನೂ ಮಲಯಜ ಜಲವೂ (ಶ್ರೀಗಂಧ ದ್ರವವೂ) ಶಶಿಕಿರಣವೂ ವಿಯೋಗಿಗಳ (ವಿರಹಿಗಳ) ಎದೆಯಲ್ಲಿ ನೆಲಸಿದ್ದುವು; ಆದರೇನು? ಅವು ಅವರ 'ಪಾಪದ

---

46 'ಮಂಡಲ' ಶಾಸನದ ಪ್ರಕಾರ ನೃಪತುಂಗನ ತಂದೆಯಾದ ಗೋವಿಂದನಿಗೆ 'ನಿತ್ಯೋದಯ' ಎಂಬ ಬಿರುದಿದ್ದಿತೆಂದು ಹೇಳಿ, ಈ ಪದ್ಯದಲ್ಲಿಯ 'ಸತತೋದಯ' ಎಂಬ ವಿಶೇಷಣವು 'ನಿತ್ಯೋದಯ' ಎಂಬ ಬಿರುದನ್ನೇ ಸೂಚಿಸುತ್ತಿದ್ದು ಸೂರ್ಯಪ್ರತಿಮನಾದ ಗೋವಿಂದನ ಅವಸಾನವನ್ನು ಹೊಳೆಯಿಸುವುದು ಈ ದೃಷ್ಟಾಂತದ ಆಶಯವಿರಬಹುದೆಂದು ಮುಳಿಯ ತಿಮ್ಮಪ್ಪಯ್ಯನವರು ಅನುಮಾನಿಸುತ್ತಾರೆ. ಅಲ್ಲದೆ, ಮುಂದಿನ ಲಕ್ಷ್ಯಪದ್ಯದಲ್ಲಿನ "ಸಮರ್ಥಕವಾದ ಅಪ್ರಕೃತವಾಕ್ಯವು ಆ ಗೋವಿಂದ ರಾಜಾವಾಸದ ವಿಶೇಷಾಪ್ತಜನವು ಶೋಕಾಕುಲವಾದ ಈ ವಿಶಿಷ್ಟ ಸಂದರ್ಭಸೂಚಕವಾದುದೇ ಆಗಿರಬೇಕು."

ಫಲಂ' ಆದ 'ಅಟಲೆ' (ದುಃಖವೇ) ಆಗಿ ಪರಿಣಮಿಸಿದುವು." (ಇದು ವರ್ಣ್ಯವಾದ ಪ್ರಕೃತ ವಾಕ್ಯ). ಏಕೆ ಹಾಗೆ ಪರಿಣಮಿಸಿದು ವೆಂಬುದು, "(ಹಾಗೆ ಆಗತಕ್ಕದ್ದು) ಕಾಮುಕ ಜನದ (ವಿಷಯ ದಲ್ಲಿ) 'ಯುಕ್ತಕಾರಿ' (ತಕ್ಕದ್ದೇ)" ಎಂಬ ಕಾಮುಕಜನ ಸಂಬಂಧ ವಾದ ಸಾಮಾನ್ಯ ಹೇಳಿಕೆಯಿಂದ ಸಮರ್ಥಿತವಾಗಿದೆ. ('ಕಾಮಿನಾಂ ಪಾಪಮಿದೃಶಂ' ಎಂಬ ದಂಡಿಯ ವಾಕ್ಯ ಇಲ್ಲಿ ಅನುವಾದ ಗೊಂಡಿದೆ). ('ಯುಕ್ತಕಾರಿ' ಎಂಬುದು ಅಲಂಕಾರದ ಹೆಸರೂ ಆಗಿದೆ.)

ಪದ್ಯ ೩೩: **ಯುಕ್ತಾಯುಕ್ತಂ:** "ಹರಿಣಧರನು (ಚಂದ್ರನು) ಸೊಗ ಯಿಸಿದಂತೆಯೇ ಕುಸುಮಿತ ಚೂತ ವಿತತಿಯೂ (ಹೂತ ಮಾವಿನ ಮರಗಳ ಸಮೂಹ) ಸೊಗಯಿಸಿತು. ಸುಗಂಧಯುತವಾದ ಹೂಗ ಳಿಂದ ಕೂಡಿದ್ದರೂ ದೋಷಾಕರನಾದ ಚಂದ್ರನಿಂದ ಸೊಗಸುವ ದಾದ್ದರಿಂದ, (ವಸಂತವು) ಏಕಕಾಲದಲ್ಲಿ ಯುಕ್ತವೂ ಅಯುಕ್ತವೂ ಆಗಿದೆ." ವಸಂತದ ಚಂದ್ರನನ್ನೂ ಹೂತ ಮಾಮರವನ್ನೂ ವರ್ಣಿಸು ವುದು ಪ್ರಕೃತ ವಿಷಯ; ಗುಣದೋಷಗಳೆರಡೂ ಯುಕ್ತಾಯುಕ್ತ ಗಳೆನಿಸಿ ಒಡನೆಯೆ ಕೂಡಿಕೊಂಡಿರುವುವು ಎಂಬ ಹೇಳಿಕೆಯಿಂದ ಪ್ರಕೃತ ಸಂಗತಿಯನ್ನು ಸಮರ್ಥಿಸಿದೆ. (ಈ ಪದ್ಯದ ಲಕ್ಷ್ಯಲಕ್ಷಣ ಸಮನ್ವಯದಲ್ಲಿ ಸ್ವಲ್ಪ ಕ್ಲೇಶ ತಲೆದೋರಿದೆ.)

ಪದ್ಯ ೩೪: **ಪ್ರಕಟಶ್ಲೇಷ:** (ಈ ಅರ್ಥಾಂತರನ್ಯಾಸ ಭೇದ ದಂಡಿಯಿಂದ ಉಕ್ತವಾಗಿಲ್ಲ.) "ದಿನನಾಯಕನು ಅಪರ ದಿಗಂಗನೆಯೊಂದಿಗೆ (ಪಶ್ಚಿಮ ದಿಕ್ಕೆಂಬ ಸ್ತ್ರೀಯೊಂದಿಗೆ) ನೆರೆದು (=ಕೂಡಿಕೊಂಡವನಾಗಿ) 'ಪೀನಂ' (=ಬಹುವಾಗಿ) 'ಉದಿತ ರಾಗನಾದಂ.' (ಇಲ್ಲಿ ಶ್ಲೇಷೆ ಯಿದೆ: ೧. ರಕ್ತವರ್ಣದಿಂದ ಕಾಣಿಸಿಕೊಂಡನು. ೨. ಪ್ರೇಮೋ ದಯವುಳ್ಳವನಾದನು, ಅವನಲ್ಲಿ ಪ್ರೇಮ ಕಾಣಿಸಿಕೊಂಡಿತು.) ಸೂರ್ಯ ಮುಳುಗಿದಾಗ ಸಂಧ್ಯಾರಾಗಯುಕ್ತನಾದನೆಂದು ಹೇಳು ವುದು ಪ್ರಕೃತ ವಿಷಯ. ಪಶ್ಚಿಮ ದಿಗ್ವನಿತೆಯೊಂದಿಗೆ ನೆರೆದು

'ರಾಗ'ಯುಕ್ತನಾದನೆಂದು ಪ್ರಕಟವಾಗಿರುವ ಶ್ಲೇಷೆಯನ್ನು, ಮುಂದಿನ ವಾಕ್ಯದಿಂದ ಸಮರ್ಥಿಸಲಾಗಿದೆ: 'ಅಪಕ್ರಮದೆ ವಾರುಣೀ ಸಂಶ್ಲೇಷವು' (ವಾರುಣೀ=ಪಶ್ಚಿಮ ದಿಕ್ಕು; ಪಶ್ಚಿಮ ದಿಗಧಿಪನಾದ ವರುಣನ ಪತ್ನಿ ವಾರುಣಿ: ಪರಸ್ತ್ರೀಯಾದ ವಾರುಣಿ ಯೊಂದಿಗೆ ಅಕ್ರಮವಾಗಿ ನೆರೆಯುವುದು, ಕೂಡಿಕೊಳ್ಳುವುದು) ಹೇಗೂ 'ಅಧಿಕ ರಾಗಮುಂ' (= ಹೆಚ್ಚಾದ ಪ್ರೀತಿಯನ್ನು) 'ಜನಿಯಿಸುಗುಂ.' ('ರಾಗ' ಎಂಬ ಪದದ ಶ್ಲೇಷಾರ್ಥವನ್ನು 'ಸಂಶ್ಲೇಷ' ಎಂಬ ಪದಪ್ರಯೋಗದಿಂದ ಪ್ರಕಟಮಾಡಲಾಗಿದೆ).

ಪದ್ಯ ೩೫: **ವಿರುದ್ಧಾತ್ಮಕ:** "ದೋಷಾಕರಂ (=ಚಂದ್ರನು) ಅಂತರ್ಮಲಿನ ನಾಗಿಯುಂ (=ಒಳಗೆ ಕಳಂಕವನ್ನು ಹೊಂದಿದರೂ ಕೂಡ) ಸರಿದಧಿ ಪತಿಯಂ (ಸಮುದ್ರವನ್ನು) ಪೆರ್ಚಿಸುಗುಂ."—ಇದು ಪ್ರಕೃತ. ಇದನ್ನು ಸಮರ್ಥಿಸುವ ವಾಕ್ಯ: "ಪರಿಪೂರ್ಣ ವಿದ್ಯಾವಂತನು ('ಪರಿಣತ ಕಲಾಕಲಾಪಂ') ತಾನು (ಇತರರ ಬಗೆಗೆ) ವಿರೋಧ ವುಳ್ಳವನಾದರೂ (ಅವರ) ಏಳಿಗೆಯನ್ನುಂಟುಮಾಡತಕ್ಕವನಾಗು ತ್ತಾನೆ."[47] ('ಪರಿಣತ ಕಲಾಕಲಾಪಂ' ಎಂಬ ವಿಶೇಷಣವನ್ನು 'ಷೋಡಶ ಕಲಾಪೂರ್ಣ' ಎಂದು ಚಂದ್ರಪರವಾಗಿಯೂ ಅರ್ಥ ಮಾಡಬಹುದು.)

ಈ ಲಕ್ಷ್ಯಕ್ಕೆ ಮೂಲವಾದ ದಂಡಿಯ ಶ್ಲೋಕ ವಿಶದವಾಗಿದೆ:

ಜಗದಾನಂದಯತ್ಯೇಷ ಮಲಿನೋಽಪಿ ನಿಶಾಕರಃ |
ಅನುಗೃಹ್ಣಾತಿ ಹಿ ಪರಾನ್ ಸದೋಷೋಽಪಿ ದ್ವಿಜೇಶ್ವರಃ ||

—II, ೧೭೫.

ಪದ್ಯ ೩೬: **ವಿಪರ್ಯಯ** (ಅಥವಾ ವಿಪರೀತ): "ವಸಂತಸಮಯಾನು ಗತನಾದ, ಸುರಭಿಸಮಯೋದಿತನಾದ (=ವಸಂತಮಾಸದಲ್ಲಿ

---

47 ಅರ್ಥವೈಶದ್ಯದ ದೃಷ್ಟಿಯಿಂದ, ಪದ್ಯದ ತಿದ್ದುಪಾಟಾದ ನಾಲ್ಕನೆಯ ಪಾದವನ್ನು ಹೀಗೆ ತಿದ್ದಿಕೊಳ್ಳುವುದು ಮೇಲೆಂದು ಕಾಣುತ್ತದೆ: ಪರಿವರ್ಧ[ಕನ]ಕ್ಕುಮತಿ ವಿರುದ್ಧಾತ್ಮಕ[ನುಂ]. ಈ ಹೊಸ ತಿದ್ದುಪಾಟನ್ನು ಅನುಸರಿಸಿದೆ ಮೇಲಿನ ಅರ್ಥವಿವರಣೆ.

ಹುಟ್ಟಿದ), ನಿಶಾಕರ ಹಾಗೂ ಹಿಮಕರ ಎನಿಸಿಕೊಂಡವನು ನನಗೆ ಪರಿತಾಪವನ್ನೂ ದುಃಖವನ್ನೂ ಉಂಟುಮಾಡುತ್ತಾನೆ." ಹಗಲನ್ನುಂಟುಮಾಡುವ ಸೂರ್ಯನು ತಾಪಕಾರಿ; ಆದರೆ, ರಾತ್ರಿಯನ್ನುಂಟುಮಾಡುವ ಚಂದ್ರನು ಶೈತ್ಯಕಾರಿ (ಹಿಮಕರ); ಅಲ್ಲದೆ, ಹಿತಕರವಾದ ವಸಂತಮಾಸದಲ್ಲಿ ಉದಯಿಸಿದವನು. ಹೀಗಿದ್ದೂ ತನ್ನ ಸ್ವಭಾವಕ್ಕೆ 'ವಿಪರೀತ'ವಾದ ಎಂದರೆ ಅನುಗುಣವಲ್ಲದ, ವ್ಯತಿರಿಕ್ತವಾದ, ಪರಿಣಾಮವನ್ನೆ ಉಂಟುಮಾಡುತ್ತಿದ್ದಾನೆ (ಎಂದು ವಿರಹತಾಪದಿಂದ ದುಃಖಿಸುತ್ತಿರುವ ವ್ಯಕ್ತಿ ಹೇಳಿಕೊಳ್ಳುವ ಮಾತಿದು). 'ವಿರಹಿಗಳ ವಿಷಯದಲ್ಲಿ ಇದು ಸ್ವಾಭಾವಿಕವೇ' ಎಂಬ ಅರ್ಥಾಂತರವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಇಲ್ಲದಿದ್ದರೆ, ಲಕ್ಷಣ ಸಮನ್ವಯವಾಗುವುದಿಲ್ಲ.

ಪದ್ಯ ೩೭: **ಯುಕ್ತಾರ್ಥಂ:** "ಅಶೋಕಪಲ್ಲವ (=ಅಶೋಕದ ಚಿಗುರು) ದಿಂದ ವಿರಚಿತವಾದ ಶಯನೀಯವು (=ಹಾಸುಗೆ) ನನ್ನ ಮೈಯನ್ನು ಬಹುವಾಗಿ ಉರುಪಿತ್ತು (=ಉರಿಯುವಂತೆ ಮಾಡಿತು, ಸುಟ್ಟು ಹಾಕಿತು)." ಚಿಗುರಿನ ಹಾಸುಗೆ ತಂಪಾಗಿರಬೇಕು. ವಿರಹಿಗಳ ವಿಚಾರದಲ್ಲಿ ಅದು ಸುಡುವುದೆನ್ನುವುದು ಕವಿಸಮಯ. ಇದು ಸ್ವಾಭಾವಿಕ ಎನ್ನುವೆಡೆಯಲ್ಲಿ, 'ಇದು ಯುಕ್ತ, ಸರಿ' ಎಂದೆನ್ನುವಂತೆ ಬೇರೊಂದು ಸಮರ್ಥನೆಯನ್ನು ಕೊಡಲಾಗಿದೆ: "ಅಶೋಕದ ಚಿಗುರು (ಉರಿಯಂತೆ ಕೆಂಪಗಿರುವುದರಿಂದ) 'ಸ್ಫುರದನಲ ಪ್ರತಿನಿಧಿ' (=ಪ್ರಕಾಶಮಾನವಾದ ಅಗ್ನಿಯ ಪ್ರತಿನಿಧಿ); ಅಗ್ನಿಯಂತೆ ಕಾಣುವ ಅಶೋಕವು ಅದರಂತೆಯೇ ಸುಡುವ 'ತತ್ಸ್ವರೂಪಗುಣ'ವುಳ್ಳದ್ದಾಗಿರುವುದು ಯುಕ್ತ (ಸರಿ)ವಾಗಿಯೇ ಇದೆ."

ವ್ಯತಿರೇಕಾಲಂಕಾರ

ಪದ್ಯ ೩೯: "ಆದಿಪ್ರತೀತಿಯಿಂದ (ಎಂದರೆ, ಅರ್ಥಪ್ರತೀತಿ ಮೂಲಕವಾಗಿ), ಇಲ್ಲವೆ, ಶಬ್ದಾದರದಿಂ (ಶಬ್ದದ ಕಡೆ ಓಲುವುದರಿಂದ, ಶಬ್ದ ಮೂಲಕವಾಗಿ) ಸದೃಶವಾದ (ಒಂದನ್ನೊಂದು ಹೋಲುವ) ಎರಡು

ವಸ್ತುಗಳಲ್ಲಿ ಭೇದವನ್ನು ತಿಳಿಸುವುದು 'ವ್ಯತಿರೇಕ'." ('ವ್ಯತಿರೇಕ' ಎಂದರೆ 'ಹೆಚ್ಚಾಗಿರುವುದು.' ಸಮಾನಗುಣಧರ್ಮವುಳ್ಳ ಎರಡು ವಸ್ತುಗಳಲ್ಲಿ, ಒಂದರಲ್ಲಿ ಮಾತ್ರ ಒಂದೋ ಎರಡೋ ಹೆಚ್ಚಿನ ಗುಣವಿರುವುದು.) (ಈ ಪದ್ಯ ದಂಡಿಯ ಶ್ಲೋಕದ—II, ೧೮೦- ಯಥಾನುವಾದ).

[ವ್ಯತಿರೇಕದಲ್ಲಿ, ಏಕವ್ಯತಿರೇಕ, ಉಭಯ ವ್ಯತಿರೇಕ, ಸಶ್ಲೇಷ ವ್ಯತಿರೇಕ, ಸಹೇತುಕ ವ್ಯತಿರೇಕ, ಸಾಕ್ಷೇಪ ವ್ಯತಿರೇಕ ಮುಂತಾದ ಭೇದಗಳುಂಟು.]

ಪದ್ಯ ೪೦: **ಏಕವ್ಯತಿರೇಕ:** ಇಲ್ಲಿ, ಸದೃಶವಸ್ತುಗಳಲ್ಲಿ ಕಂಡುಬರುವ ಭೇದಕಗುಣ ಒಂದೇ ಆದ್ದರಿಂದ ಇದು ಏಕವ್ಯತಿರೇಕ. ಸಮಾನ ಧರ್ಮಗಳನ್ನು ಸೂಚಿಸುವ ಪದಗಳಲ್ಲಿನ ಶ್ಲೇಷಾರ್ಥದ ಬಲದಿಂದಲೇ ಸಾದೃಶ್ಯ ಕಂಡುಬರತಕ್ಕದ್ದು.

'ಶ್ರೀವನಿತಾ ಪ್ರಸವದಿಂ' (೧. 'ಶ್ರೀದೇವಿ' ಜನ್ಮ ಕೊಟ್ಟದ್ದ ರಿಂದ; ೨. ಶ್ರೀವನಿತೆಗೆ, ಎಂದರೆ ಲಕ್ಷ್ಮಿಗೆ, ಜನ್ಮಕೊಟ್ಟದ್ದರಿಂದ), 'ಆ ಲಾವಣ್ಯದಿಂ' (೧. ಲಾವಣ್ಯ, ಎಂದರೆ ಚೆಲುವಿನ, ಕಾರಣ ದಿಂದ; ೨. ಲವಣ ಎಂದರೆ ಉಪ್ಪಿನ ಸಂಬಂಧದಿಂದ), 'ಅತಿ ಗಭೀರಭಾವದೆ' (೧. ಗಂಭೀರ ಸ್ವಭಾವದಿಂದ; ೨. ಅಗಾಧತೆ ಅಥವಾ ಆಳವಾಗಿರುವುದರಿಂದ), ನೀನ್ ಇಂತು ಆ ವಾರಿಧಿಯಂ (=ಸಮುದ್ರವನ್ನು) ಪೋಲ್ತಯ್; (ನಿನಗೂ ಸಮುದ್ರಕ್ಕೂ ಇರುವ) ಕೇವಲ ಭೇದವೆಂದರೆ, (ನಿನ್ನ) 'ದ್ವಿತೀಯ (ಎಂದರೆ ಹೆಚ್ಚಿನದಾದ) ಲಲಿತಾಕಾರಂ'. (ಸಮುದ್ರವು ಅಲ್ಲಕಲ್ಲೋಲವಾಗುವುದರಿಂದ, ಅದರ ಆಕಾರ ಲಲಿತವಲ್ಲ).

ಪದ್ಯ ೪೧: **ಉಭಯ ವ್ಯತಿರೇಕ:** ಈ ಪದ್ಯದಲ್ಲಿಯೂ ಸಾದೃಶ್ಯ ಸೂಚಕ ಪದಗಳಲ್ಲಿ ಶ್ಲೇಷಾರ್ಥಗಳಿವೆ. ಇಲ್ಲಿ ಸದೃಶ ವಸ್ತುಗಳ ನಡುವಣ ಭೇದಕ ಗುಣಗಳು ಎರಡು. ಆದ್ದರಿಂದ ಇದು ಉಭಯ ವ್ಯತಿರೇಕ.

"ಅರಸಾ, ದಿನೇಶನೂ ನೀನೂ 'ಪರಮೋದಯರಿರ್' (೧. ರಾಜ: ಶ್ರೇಷ್ಠವಾದ ಅಭಿವೃದ್ಧಿಯುಳ್ಳವನು; ೨. ಸೂರ್ಯ: ಶ್ರೇಷ್ಠವಾದ ಉದಯ ಎಂದರೆ ಹುಟ್ಟುವಿಕೆ, ಉಳ್ಳವನು), 'ಕಮಲಾಕರ ಬೋಧಕರಿರ್ [೧. ರಾಜ: ಕಮಲಾ+ಆಕರ+ಬೋಧಕ=(ಅಂತಃ ಪುರದ) ಉತ್ತಮ ಸ್ತ್ರೀ ಸಮೂಹವನ್ನು ಎಚ್ಚರಿಸುವವನು(?); ೨. ಸೂರ್ಯ: ಕಮಲ ಸಮೂಹವನ್ನು ಅರಳಿಸುವವನು]. ಭಾಸ್ಕರನು, 'ಅನಿಯತ' (ನಿಯತವಲ್ಲದ, ಅನಿಶ್ಚಿತ, ತಪ್ಪುವ, ಚಂಚಲವಾದ) 'ವೃತ್ತಕ್ರಮಂ' (ನಡತೆ ಹಾಗೂ ಸಂಚಾರವುಳ್ಳವನು) (ಸೂರ್ಯನು ಬೆಳಗ್ಗೆ, ಹಗಲು ಮತ್ತು ಸಂಜೆಗಳಲ್ಲಿ ಬೇರೆ ಬೇರೆ ಬಗೆಗಳಲ್ಲಿ ಪ್ರಕಾಶಿಸುತ್ತಾನೆ, ಮತ್ತು ಅವನ ಉಷ್ಣತೆಯಲ್ಲಿ ಹೆಚ್ಚು ಕಡಮೆಗಳಿರುತ್ತವೆ; ಅಲ್ಲದೆ ಉತ್ತರಾಯಣ ದಕ್ಷಿಣಾಯನಗಳಲ್ಲಿ ಅವನ ಸಂಚಾರಮಾರ್ಗ ವ್ಯತ್ಯಾಸವಾಗುತ್ತದೆ); ಅವನು 'ನಿನ್ನಂತೆ ನಿಯತ ವೃತ್ತಸ್ಥಿತನೇಂ?' (ಒಂದೇ ರೀತಿಯಾದ ನಡತೆಯುಳ್ಳವನೂ ಸ್ಥಿರನೂ ಆಗಿರತಕ್ಕವನೇ?) ಎಂದಿಗೂ ಅಲ್ಲ." ರಾಜನೂ ಸೂರ್ಯನೂ ಸದೃಶಗುಣವುಳ್ಳವರಾದರೂ, 'ವೃತ್ತ' ಮತ್ತು 'ಕ್ರಮ'-ಇವೆರಡು ಅವರಲ್ಲಿ ಕಂಡುಬರುವ ಭೇದಕ ಗುಣಗಳು.

ಪದ್ಯ ೪೨-೪೪: ಈ ಮೂರು ಪದ್ಯಗಳಲ್ಲಿ, ಮೇಲಿನ ಎರಡು ಪದ್ಯಗಳಲ್ಲಿಯಂತೆ, ಒಬ್ಬ ರಾಜನಿಗೂ ಶಶಿ, ಮೇರು ಮತ್ತು ಕಲ್ಪವೃಕ್ಷಗಳಿಗೂ ಇರುವ ಸದೃಶ ಗುಣಗಳನ್ನು ವರ್ಣಿಸಿ, ಭೇದಕ ಗುಣವನ್ನು ನಿರ್ದೇಶಿಸಿದೆ. ಆ ರಾಜವರ್ಣನೆ ನೃಪತುಂಗನನ್ನೇ ಕುರಿತಿದ್ದಿರಬಹುದು. ಮೇಲ್ಕಂಡ ಪದ್ಯಗಳ ಮಾದರಿಯಲ್ಲಿ ಇನ್ನುಳಿದ ವ್ಯತಿರೇಕಾಲಂಕಾರದ ಪದ್ಯಗಳ ಬಗೆಗೂ ಲಕ್ಷ್ಯಲಕ್ಷಣ ಸಮನ್ವಯ ಮಾಡಿಕೊಳ್ಳತಕ್ಕದ್ದು. ಕೆಳಗೆ ಕಠಿನಪದಗಳ ಅರ್ಥಗಳನ್ನು ಮಾತ್ರ ಕಾಣಿಸಿದೆ.

ಪದ್ಯ ೪೨: ಕಾಂತೋತ್ಕರಿರ್=ಆಕರ್ಷಕ ಗುಣಸಮುದಾಯದಿಂದ ಕೂಡಿರುವಿರಿ. (ರಾಜನ ಪರವಾಗಿ, ಕಾಂತಾ+ಉತ್ಕರ= ಕಾಂತೆಯರ ಸಮುದಾಯದಿಂದ ಕೂಡಿದವನು, ಎಂದೂ ಅರ್ಥಮಾಡಬಹುದು).

ದೋಷಾಕರ = ದೋಷದಿಂದ, ಕಳಂಕದಿಂದ, ಕೂ ಡಿ ದ ವ ನು (=ಚಂದ್ರ). ಉದಾರಗುಣ ಸಮುದಯ (ಸಂ+ಉದಯ) =ಉದಾರ ಗುಣದ ಅತಿಶಯವಾದ ಏಳಿಗೆಯುಳ್ಳವನು.

ಪದ್ಯ ೪೩ : (೧. ರಾಜಪರವಾಗಿ; ೨. ಮೇರುಪರವಾಗಿ) : ಅಲಘುಭುಜ= ೧. ದೊಡ್ಡ ಹೆಗಲುಳ್ಳವನು ; ೨. ದೊಡ್ಡ ಪಾರ್ಶ್ವಭಾಗವುಳ್ಳದ್ದು. ನಿಶ್ಚಲ=೧. ದೃಢಚಿತ್ತ; ೨. ಚಲಿಸದೆ ಇರತಕ್ಕದ್ದು. ಅಖಿಳ ಭೂಭೃದುತ್ತುಂಗತೆ = ೧. ಸಮಸ್ತ ರಾಜರಲ್ಲಿ ಉನ್ನತ ಸ್ಥಾನವನ್ನು ಹೊಂದಿರತಕ್ಕವನು, ರಾಜಾಧಿರಾಜ; ೨. ಎಲ್ಲ ಪರ್ವತಗಳಿಗಿಂತ ಎತ್ತರವಾದದ್ದು. ಕಠಿನ ಭೋಗಾಧಾರಂ = (ಮೇರು) (ದೇವಾ ವಾಸವಾದ್ದರಿಂದ, ಮನುಷ್ಯರಿಗೆ) ಕಷ್ಟಸಾಧ್ಯವಾದ, ದುರ್ಲಭ ವಾದ, ಸುಖಾನುಭವಕ್ಕೆ ನೆಲೆಯಾದದ್ದು.

ಪದ್ಯ ೪೪ : (೧. ರಾಜಪರವಾಗಿ; ೨. ಕಲ್ಪವೃಕ್ಷ ಪರವಾಗಿ). ಪಾರ್ಥಿವ ಗುಣಯುತ = ೧. ಕ್ಷತ್ರಿಯ ಗುಣದಿಂದ, ರಾಜಯೋಗ್ಯ ಗುಣದಿಂದ, ಕೂಡಿದವನು; ೨. ಭೂಗುಣದಿಂದ ಕೂಡಿದ್ದು; ಪೃಥ್ವಿಯ ಸಂಬಂಧವುಳ್ಳದ್ದು. ಅರ್ಥಿತಫಲದಾಯಿ = ೧. ಬೇಡಿದ್ದನ್ನು ಕೊಡು ವವನು; ಬಯಸಿದ್ದನ್ನು ನೀಡತಕ್ಕದ್ದು. ಅಚೇತನತೆ = (ಕಲ್ಪ ವೃಕ್ಷ) ಜಡತ್ವ, ನಿರ್ಜೀವತ್ವ.

ಪದ್ಯ ೪೫ : ಇಲ್ಲಿ 'ವದನ' ದ ವರ್ಣನೆ. ಕಮಲಕ್ಕೂ ಮುಖಕ್ಕೂ ಇರುವ ಸಾದೃಶ್ಯವನ್ನು ಸೂಚಿಸಿ, ಮುಖದ (ಹೆಚ್ಚಿನ) ಭೇದಕ ಗುಣವನ್ನು ನಿರ್ದೇಶಿಸಿದೆ. ಮದಮುದಿತಾಳಿ = (ಮದ+ಮುದಿತ+ಅಳಿ) ಸೊಕ್ಕಿ ನಿಂದ ಸಂತೋಷಗೊಂಡ ದುಂಬಿ. ಕದಂಬ=ಸಮೂಹ. ಸರಸ ಕೇಸರ=ರಸಯುಕ್ತವಾದ ಕೇಸರ. ಸ್ಮಿತದಶನವಸನ ರಾಗೋಪ ಚಿತಂ= ನಗೆಯಿಂದ ಕೂಡಿದ ತುಟಿಯ (ದಶನವಸನ) ಕೆಂಪಿನಿಂದ ಉತ್ಕರ್ಷವನ್ನು ಪಡೆದಿರತಕ್ಕದ್ದು.

ಪದ್ಯ ೪೬ : ಆಕಾಶಕ್ಕೂ ಸರೋವರಕ್ಕೂ ಇರುವ ಸಾದೃಶ್ಯವನ್ನು ಸೂಚಿಸಿ, ಸರೋವರದ (ಹೆಚ್ಚಿನ) ಭೇದಕ ಗುಣವನ್ನು ತೋರಿಸಿದೆ. ಶರ ದಂಬರ = ಶರತ್ಕಾಲದ ಆಕಾಶ. ಸರವರ = ಸರೋವರ, ಕೊಳ.

ವಿಳಸದತನುಧವಳಚ್ಛವಿ = (ವಿಳಸತ್ + ಅತನು + ಧವಳ + ಛವಿ) ತೊಳಗುವ ಸಾಂದ್ರವಾದ ಬಿಳುಪಾದ ಪ್ರಕಾಶ. ಹರಿಣಾಂಕ = ಜಿಂಕೆಯ ಲಾಂಛನ. ರಾಜಹಂಸೋತ್ತಂಸ= ರಾಜಹಂಸವೆಂಬ ಶಿರೋಭೂಷಣ.

ಪದ್ಯ ೪೭ : "ಕಮಲವು 'ಉಕ್ತಗುಣಭೂಷಣಂ' ಆದ ನಿನ್ನ ಮುಖವನ್ನು ಎಂದಿಗೂ ಹೋಲುವುದಿಲ್ಲ. (ಆ 'ಉಕ್ತಗುಣಭೂಷಣ' ಎಂದರೆ, 'ಮದಾಲಸಲೋಚನ ಲೀಲಂ', 'ಅಸ್ತಭ್ರೂಲತಾವಿಲಾಸ ವಿಶೇಷಂ.' ಇದು ಉಕ್ತವಾಗಿಲ್ಲದಿದ್ದರೂ, ಸೂಚಿತವಾಗುತ್ತದೆ). ಏಕೆಂದರೆ, ಅದು 'ಅಮದಾಲಸ ಲೋಚನಲೀಲಂ' (ಮದದಿಂದ ಅಲಸವಾದ ಲೋಚನ ಲೀಲೆಯಿಲ್ಲದ್ದು), 'ಅಪಾಸ್ತ ಭ್ರೂಲತಾ ವಿಲಾಸ ವಿಶೇಷಂ' (ಹುಬ್ಬೆಂಬ ಬಳ್ಳಿಯು ಬೀರುವ ಸೊಬಗು ಇಲ್ಲದ್ದು)."

ಪದ್ಯ ೪೮ : ಇದು ಮಾರ್ಗಕಾರನ ಸ್ವಂತ ಲಕ್ಷ್ಯ ಪದ್ಯ. ಇದರಲ್ಲಿ ಪಾಠ ದೋಷವಿರುವಂತೆ ಕಾಣುತ್ತದೆ. ಆದ್ದರಿಂದ, ಅರ್ಥಕ್ಲೇಶವಿದೆ. ತಾತ್ಪರ್ಯಾರ್ಥವು ಹೀಗಿದ್ದೀತು : "ಅಗ್ನಿ ತನ್ನ ಅಸಾಧ್ಯವಾದ ಕಳಂಕವನ್ನೂ (ಅಗ್ನಿ ಶುದ್ಧನಾದರೂ ಸರ್ವಭಕ್ಷಕನಾದ್ದರಿಂದ ಕಳಂಕ ಪೂರ್ಣ), ವಾಯು ಸುಡುವ ಧೂಳಿಯನ್ನೂ (ಗಾಳಿ ಧೂಳನ್ನು ಒಯ್ಯುವುದಷ್ಟೆ), ತೊಳೆಯುವ ನೀರು ತನ್ನೊಂದಿಗೆ ಕೂಡಿಕೊಂಡ ಕೆಸರನ್ನೂ, ಬಲ್ಲವನು (ಜ್ಞಾನಿ) ಅಪಕೀರ್ತಿಯನ್ನೂ ತೊರೆಯಲಿ."

ಯಥಾಸಂಖ್ಯಾಲಂಕಾರ

['ದೋಷಪ್ರಕರಣ'ದಲ್ಲಿ ಮಾರ್ಗಕಾರನು 'ಚ್ಯುತಯಾಥಾಸಂಖ್ಯ'ವನ್ನು ಉಲ್ಲೇಖಿಸಿದ್ದಾನೆ. ಹಾಗೂ ಅದರ ಲಕ್ಷಣ ವಿವರಣೆಯನ್ನೂ ಕೊಟ್ಟಿದ್ದಾನೆ. (ನೋಡಿ: I-೮೬ ; ಟಿಪ್ಪಣಿ : I-೮೬ರಿಂದ ೮೯, ಪು. ೧೫೩). ದೋಷರಾಹಿತ್ಯವಾದ ಗುಣವೇ ಇಲ್ಲಿ ಅಲಂಕಾರವಾಗಿ ಉಕ್ತವಾಗಿದೆ. ಇದು 'ದಶಗುಣ'ಗಳಲ್ಲಿ ಸೇರಿಲ್ಲವಾದ್ದರಿಂದ, ಇದನ್ನು 'ಉಪಗುಣ'ವೆಂದು ಭಾವಿಸಬಹುದಾಗಿದೆ. 'ಯಾಥಾಸಂಖ್ಯ' (ಗುಣ ವಿವರಣೆಯನ್ನು ಈ ಹಿಂದೆಯೆ ಮಾಡಿರುವುದರಿಂದ, ಅದನ್ನೇ ಅಲಂಕಾರ ಲಕ್ಷಣಕ್ಕೂ ಅನ್ವಯಿಸಿಕೊಳ್ಳಬಹುದು.]

ಪದ್ಯ ೫೦: **ಅನುಗತ:** (ಅಥವಾ ಅನ್ವಿತ) **ಯಾಥಾಸಂಖ್ಯ:** ಹಿಂದೆ 'ಚ್ಯುತಯಾಥಾಸಂಖ್ಯ' ದೋಷವರ್ಜನೆಗೆ ಕೊಟ್ಟ ಲಕ್ಷ್ಯವನ್ನೇ ಸ್ವಲ್ಪ ಮಾರ್ಪಾಟುಮಾಡಿ ಪುನರುಕ್ತಮಾಡಿದೆ. ಇಲ್ಲಿ ಅಳಕ, ಆನನ, ನಯನ—ಇವು, 'ಉದ್ದೇಶಿ'ಗಳು ಅಥವಾ ಉದ್ದಿಷ್ಟಗಳು (ಪ್ರಕೃತ); ಇವು 'ಅನುದೇಶಿ' (ಅನುದ್ದಿಷ್ಟ, ಅಪ್ರಕೃತ)ಗಳಾದ ಅಳಿ, ನಳಿನ, ಉತ್ಪಲ—ಇವುಗಳಲ್ಲಿ ಕ್ರಮವಾಗಿ 'ಅನ್ವಿತ' (ಅಥವಾ 'ಅನುಗತ')ವಾಗಿರುವುದರಿಂದ, ಇದು 'ಅನ್ವಿತ ಯಾಥಾಸಂಖ್ಯ'ಕ್ಕೆ ದೃಷ್ಟಾಂತ.

ಪದ್ಯ ೫೧: **ಅನನ್ವಿತ ಯಾಥಾಸಂಖ್ಯ:** ಈ ಲಕ್ಷಣದಲ್ಲಿ 'ಪ್ರಕೃತವು' (ಅಳಕಾದಿಗಳು) 'ಅಪ್ರಕೃತ'ದಲ್ಲಿ 'ಅನ್ವಿತ'ವಾಗಿಲ್ಲದಿರುವುದರಿಂದ, ಇದು 'ಅನನ್ವಿತ ಯಾಥಾಸಂಖ್ಯ'. ಮೇಲಿನ ಲಕ್ಷ್ಯದ ಪ್ರಕೃತಾಪ್ರಕೃತಗಳ ಕ್ರಮದಲ್ಲಿ ವಿಪರ್ಯಯವಾಗಿದೆಯೇ ಹೊರತು ಯಾಥಾಸಂಖ್ಯತೆಗೆ (ಸಂಖ್ಯಾಕ್ರಮಕ್ಕೆ) ಭಂಗ ಬಂದಿಲ್ಲ. ನಳಿನ(೧), ಉತ್ಪಳ (೨), ಅಳಿರುಚಿ (೩): (೩) ಅಳಕ, (೨) ವಿಲೋಚನ, (೧) ಮುಖಂಗಳ್: ಇಲ್ಲಿನ 'ಯಾಥಾಸಂಖ್ಯತೆ' (ಅಂಕಿಗಳು ಸೂಚಿಸುವಂತೆ) (ಕ್ರಮ) 'ವಿಪರ್ಯಯ'ವಾಗಿದೆಯೇ ಹೊರತು 'ಚ್ಯುತ'ವಾಗಿಲ್ಲ. 'ಚ್ಯುತ'ವಾಗಿದ್ದರೆ, ನಳಿನ: ಉತ್ಪಳ: ಅಳಿರುಚಿ: ವಿಲೋಚನ: ಮುಖ: ಅಳಕ—ಹೀಗೆ 'ಅಕ್ರಮ'ವಾಗಿರುತ್ತಿತ್ತು. ('ಯಾಥಾಸಂಖ್ಯ'ದ ಕ್ರಮಬದ್ಧತೆ ಅರ್ಥಾನುಗುಣವಾಗಿರುವುದರಿಂದ—ಒಂದು ಕ್ರಮದಲ್ಲಿ ಉಪಮೇಯೋಪಮಾನ ಸಂಬಂಧ ಪ್ರತೀತವಾಗುವುದರಿಂದ—ಇದು ಅರ್ಥಾಲಂಕಾರಗಳ ಗುಂಪಿನಲ್ಲಿ ಸೇರ್ಪಡೆಯಾಗಿದೆ).

ದೀಪಕ

ಪದ್ಯ ೫೩: "ಜಾತಿ ಕ್ರಿಯಾ ಗುಣ ದ್ರವ್ಯ—ಇವುಗಳಲ್ಲಿ ಯಾವೊಂದರ ಅತಿಶಯ ವಿಶೇಷವನ್ನು ಸೂಚಿಸುವ ಪದವು ಒಂದು ನಿರ್ದಿಷ್ಟ ಸ್ಥಳದಲ್ಲಿ ನೆಲೆಗೊಂಡು ('ಒರ್ಬುಳಿನಿಂದು'), ಇಡಿಯ ವಾಕ್ಯವೆಲ್ಲ

ವನ್ನೂ ಬೆಳಗುವ ಕಾರ್ಯವೆಸಗುತ್ತಿದ್ದರೆ, ಅದು ದೀಪಕವೆನಿಸುವುದು."[48]

('ಧರ್ಮ' ಸೂಚಕ) ಪದವು ಒಂದು ನಿರ್ದಿಷ್ಟ ಸ್ಥಳದಲ್ಲಿ ನೆಲೆಗೊಳ್ಳುವುದೆಂದರೆ, ಅದು ಆದಿ ಮಧ್ಯ ಅಂತ ಸ್ಥಳಗಳಾಗಬಹುದು. ಮಾರ್ಗಕಾರನು ಆದಿದೀಪಕ ಪ್ರಭೇದಗಳಿಗೆ ಮಾತ್ರ ಲಕ್ಷ್ಯಗಳನ್ನು ಕೊಟ್ಟು, 'ಮಧ್ಯಾಂತ ವ್ಯಾಪಕಮನದಂ ತಱಿಸಲ್ಗೀಪೇಳ್ದ ವಿಕಲ್ಪ ಲಕ್ಷ್ಯದೊಳ್ ಕವಿ ಮುಖ್ಯರ್' ಎಂದು ಮುಂದೆ (ಪ. ೫೮) ತಿಳಿಸಿದ್ದಾನೆ.

ಪದ್ಯ ೫೮: **ಜಾತ್ಯನುಗತ ಆದಿ ದೀಪಕ: "ಮಲಯಾನಿಲಂ** (=ವಸಂತಾರಂಭದಲ್ಲಿ ಮಲಯ ಪರ್ವತದಿಂದ ಬೀಸುವ ವಾಯು) ಒಯ್ಯನೆ ವಿಟಪಿಗಳೊಳ್ (=ಮರಗಳಲ್ಲಿ) ನೆಲೆಯಿಂ (=ಅವುಗಳ ಎಡೆಯಿಂದ) ಪಣ್ತೆಲೆಯಂ (=ಹಣ್ಣೆಲೆಗಳನ್ನು) **ಕೞಲ್ಚುಗುಂ;** (ಹಾಗೂ) ಅವಱಿಡೆಯೆಡೆಯೊಳ್ (=ಆ ಎಲೆಗಳಿದ್ದ ಎಲ್ಲೆಡೆಗಳಲ್ಲಿ) ವಿಲಸಿತ ಕಳಿಕಾಕುಳ ಕೋಮಲಾಂಕುರಮನ್ (ಮೊಗ್ಗುಗಳಿಂದ ಕೂಡಿಕೊಂಡ ಕೋಮಲವಾದ ಚಿಗುರನ್ನು) **ಪಡೆಗುಂ** (=ಉಂಟುಮಾಡು

48 ": . ಪದಮೊ [ಬರ್ಣೞಿ] ನಿಂದೀತೆಱದಿನುೞಿದ [ವಾಕ್ಯ] ಸಮೇತಿಗಮುಪಕಾರ ಯೋಗ್ಯ ದೀಪಕಮಕ್ಕುಂ."—ಇಲ್ಲಿ ನಾವು ತಿದ್ದುಪಾಟು ಮಾಡಿರುವ ಎರಡು ಕಡೆಗಳಲ್ಲಿಯೂ 'ಒಬ್ಬುಳಿ' ಮತ್ತು 'ಕಾವ್ಯ' ಎಂಬ ಪಾಠಗಳು ಪಾಠಕರ ಹಾಗೂ ಮದ್ರಾಸು ಮುದ್ರಣಗಳೆರಡರಲ್ಲಿಯೂ ಕಂಡುಬರುತ್ತವೆ. 'ಕಾವ್ಯ' ಎಂಬುದಕ್ಕೆ 'ವಾಕ್ಯ' ಎಂಬ ಪಾಠಾಂತರವನ್ನು ಪಾಠಕರು ಅಡಿ ಟಿಪ್ಪಣಿಯಲ್ಲಿ ಸೂಚಿಸಿದ್ದಾರೆ. ಮಾರ್ಗಕಾರನ ಪದ್ಯವನ್ನು ದಂಡಿಯ ಮೂಲಶ್ಲೋಕದೊಂದಿಗೆ ಹೋಲಿಸಿ ಪರಿಶೀಲಿಸಿದಲ್ಲಿ, 'ಒಬ್ಬಱಿ' ಮತ್ತು 'ವಾಕ್ಯ' ಎಂಬ ಸರಿಯಾದ ಪದಗಳೆಡೆಯಲ್ಲಿ 'ಒಬ್ಬುಳಿ' ಮತ್ತು 'ಕಾವ್ಯ' ಎಂಬ ಪದಗಳು ಪ್ರತಿಕಾರನ ಕೈತಪ್ಪಿನಿಂದ ಕಾಣಿಸಿಕೊಂಡಿವೆ ಎಂದು ಊಹಿಸಬಹುದು. (ನಮ್ಮ ಮುದ್ರಿತ ಪಾಠದಲ್ಲಿ 'ಒಬ್ಬಱಿ' ಎಂದು ತಪ್ಪಾಗಿ ಅಚ್ಚಾಗಿರುವುದನ್ನು ತಿದ್ದಿಕೊಳ್ಳುವುದು). ಮಾರ್ಗಕಾರನು ದಂಡಿಯ ಶ್ಲೋಕವನ್ನು ಯಥಾವತ್ತಾಗಿ ಅನುವಾದ ಮಾಡಿರುವುದು ಸ್ಪಷ್ಟವಾಗಿದೆ;

ಜಾತಿಕ್ರಿಯಾಗುಣದ್ರವ್ಯವಾಚಿನೈಕತ್ರವರ್ತಿನಾ |
ಸರ್ವವಾಕ್ಯೋಪಕಾರಶ್ಚೇತ್ ತದಾಹುರ್ದೀಪಕಂ ಯಥಾ ‖ II, ೯೭

ತ್ತಾನೆ). ಇಲ್ಲಿ 'ಮಲಯಾನಿಲ'ವು ಏಕವಚನದಲ್ಲಿದ್ದರೂ ವಸಂತಾರಂಭದಲ್ಲಿ ಬಿಟ್ಟು ಬಿಟ್ಟು ಬೀಸುವ ಗಾಳಿಯ ಉರುಬುಗಳನ್ನು ಪ್ರತಿನಿಧಿಸುತ್ತಿದೆ ಎಂದು ಭಾವಿಸಿ, ಅದನ್ನು ಜಾತಿವಾಚಕವೆಂದೇ ತಿಳಿಯಬೇಕು. ಹೀಗೆ, ಜಾತಿವಾಚಕವಾದ ಮಲಯಾನಿಲವೆಂಬ ಪದವು ಪದ್ಯದ ಆದಿಯಲ್ಲಿದ್ದು, 'ವಿಟಪಿಗಳೊಳ್ ಪಣ್ತೆಲೆಯಂ ಕಳಿಲ್ಚುಗುಂ' ಎಂಬ ವಾಕ್ಯದ ಕ್ರಿಯಾಪದಕ್ಕೆ ಕರ್ತೃವಾಗಿರುವುದಲ್ಲದೆ, '. . .ಕೋಮಲಾಂಕುರಮನ್ ಪಡೆಗುಂ' ಎಂಬ 'ವಾಕ್ಯಸಮೇತಿ'ಯ ಕ್ರಿಯಾಪದಕ್ಕೂ ಕರ್ತೃವಾಗಿದ್ದುಕೊಂಡು, ಎರಡು ವಾಕ್ಯಗಳಿಗೂ 'ದೀಪಕ'ವಾಗಿ ಪರಿಣಮಿಸಿದೆ.

ಪದ್ಯ ೫೫: ಮೇಲಿನ ಪದ್ಯದಲ್ಲಿ ಜಾತಿವಾಚಕ ಕರ್ತೃಪದವು ಆದಿಯಲ್ಲಿರುವಂತೆ, ಇಲ್ಲಿ 'ತಿರಿತರ್ಕುಂ' (ಅಲೆದಾಡು, ತಿರುಗಾಡು) ಎಂಬ ಕ್ರಿಯಾಪದವು ಆದಿಯಲ್ಲಿದೆ. ಈ ಪದದ ಕ್ರಿಯೆಯು, 'ಜಳನಿಧಿ ಪರಿಖಾವೃತ ಭೂಮಿಭಾಗಮಂ' (=ಸಮುದ್ರವೆಂಬ ಕಂದಕವು ಸುತ್ತುವರಿದ ಭೂಭಾಗವನ್ನು) ಎಂಬ ವಾಕ್ಯಕ್ಕೂ, 'ಭರದೆ ಸವಿಶೇಷ ರುಚಿರ ಸಂಭವ[ನಿ]ಧಿಯಂ, ಜಳಾಕರ ವಿಕ್ಷೇಪಕ ಕಕುದಂತರಮಂ' (=ಬೇಗನೆ ವಿಶೇಷ ಮನೋಹರವಾದ ಜನ್ಮಸ್ಥಾನವಾದ, ನಿರ್ಝರಿಗಳು ಹೊರಹಾಕುವ ಪರ್ವತಶಿಖರಗಳ ನಡುವಣ ತೆರಪನ್ನು) ಎಂಬ ವಾಕ್ಯಕ್ಕೂ 'ದೀಪಕ'ವಾಗಿ ಪರಿಣಮಿಸಿದೆ. ಹೀಗೆ, ಇದು 'ಆದಿಕ್ರಿಯಾನುಗತ ದೀಪಕ.'[49]

---

49 'ಪರಿಖಾವೃತ ಭೂಮಿಭಾಗಮಂಬರದೆ': ಇದು ನಾವು ಅಂಗೀಕರಿಸಿದ ಪಾಠಕರ ಪ್ರತಿಯ ಪಾಠ. ಆದರೆ, ಮದ್ರಾಸು ಮುದ್ರಣದಲ್ಲಿರುವ '. . .ಭೂಮಿಭಾಗಮಂ ಭರದೆ' ಎಂಬ ಪಾಠವು ಅರ್ಥವೈಶದ್ಯದೃಷ್ಟಿಯಿಂದ ಅಂಗೀಕಾರಾರ್ಹವಾಗಿ ಕಾಣುತ್ತಿದೆ. ಟಿಪ್ಪಣಿಯಲ್ಲಿ ಇದನ್ನೇ ಅನುಸರಿಸಲಾಗಿದೆ.

'ಸವಿಶೇಷರುಚಿರ ಸಂಭವ ವಿಧಿಯಂ': ಎರಡು ಮುದ್ರಣಗಳಲ್ಲಿಯೂ ಇರುವ 'ವಿಧಿಯಂ' ಎಂಬ ಪಾಠವೇ ಪ್ರಕೃತ ಮುದ್ರಣದಲ್ಲಿಯೂ ಇದೆ. ಲಿಪಿಕಾರನ ಪ್ರಮಾದದಿಂದ 'ನಿಧಿಯಂ' ಎಂಬುದು 'ವಿಧಿಯಂ' ಎಂದಾಗಿರಬಹುದು.

ಈ ಪದ್ಯದಲ್ಲಿ, 'ತಿರಿತರ್ಕುಂ' ಎಂಬ ಕ್ರಿಯಾಪದಕ್ಕೆ ಕರ್ತೃಪದವಿಲ್ಲ. ಮೇಲಿನ ಲಕ್ಷ್ಯದ 'ಮಲಯಾನಿಲಂ' ಎಂಬ ಕರ್ತೃಪದವನ್ನೇ ಇಲ್ಲಿಗೂ ಅನ್ವಯಿಸಬಹುದೆ?

ಪದ್ಯ ೫೬ : 'ಗುಣಮಣಿ ವಿಶೇಷ ಭೂಷಣದಿಂ ಈ ತ್ವದೀಯಾಕಾರಂ' (=ಗುಣರತ್ನಗಳ ಒಡವೆಯಿಂದ ನಿನ್ನ ಆಕೃತಿಯೂ), 'ಶಶಧರ ಕಿರಣಾಭ ಭವದ್ ಯಶೋವಿತಾನದಿಂ ಅಶೇಷಂ ಆಶಾವಳಯಂ' (=ಚಂದ್ರಕಿರಣ ಸಮವಾದ ನಿನ್ನ ಕೀರ್ತಿಯ ಹರಡುವಿಕೆಯಿಂದ ಎಲ್ಲ ದಿಗ್ವಲಯವೂ) ಹೆಚ್ಚು ವಿಶದವಾಯಿತು. 'ವಿಶದತರ ಮಾಯ್ತು' ಎಂಬಲ್ಲಿ 'ವಿಶದತರಂ' ಎಂಬುದನ್ನೆ ಆದಿಪದವಾಗಿ ಗ್ರಹಿಸ ಬೇಕು. ಅದು 'ವೈಶದ್ಯ' (ಸ್ವಚ್ಛತೆ, ಧಾವಳ್ಯ, ಪ್ರಕಾಶ) ಎಂಬ ಗುಣವನ್ನೆ ಸೂಚಿಸತಕ್ಕದ್ದು. 'ತ್ವದೀಯಾಕಾರಂ' ಮತ್ತು 'ಆಶಾ ವಳಯಂ' ಎಂಬ ಕರ್ತೃಪದಗಳುಳ್ಳ ಎರಡು ವಾಕ್ಯಗಳನ್ನೂ 'ದೀಪನ' ಮಾಡುತ್ತಿದೆ 'ವಿಶದತರಂ' ಎಂಬ ಗುಣವಾಚಿ. ಇಂತು, ಈ ಪದ್ಯ 'ಗುಣಾನುಗತ ಆದಿ ದೀಪಕಕ್ಕೆ ದೃಷ್ಟಾಂತ.'

ಪದ್ಯ ೫೭ : 'ಉದಯಗಿರಿ ಶಿಖರ ವಿಶೇಷ ವಿಭೂಷಣ' ನಾದ 'ದಿವಸ ಕರಂ' (=ಸೂರ್ಯನು) 'ತಮೋರಿಪುಬಳಮಂ' (=ಕತ್ತಲೆಯೆಂಬ ಶತ್ರುಸೈನ್ಯವನ್ನು), 'ಪ್ರವಿಲೀನಂ ಮಾಡಿದಂ' (=ಕರಗಿಸಿಬಿಟ್ಟನು); ಹಾಗೆಯೇ, 'ತಾರಾವಿತಾನ ತೇಜಮನಟಿದಂ' (=ನಕ್ಷತ್ರಗಳ ಮೇಲ್ಕಟ್ಟಿನ ಪ್ರಕಾಶವನ್ನು ನಾಶಪಡಿಸಿದನು). ಈ ಪದ್ಯದ ಆದಿ ಯಲ್ಲಿರುವ 'ದಿವಸಕರನು' ತೇಜೋರೂಪವಾದ 'ದ್ರವ್ಯ'ವೇ ಆಗಿ ದ್ದಾನೆ. 'ದಿವಸಕರ' ಎಂಬ ಪದವು ಉಭಯ ವಾಕ್ಯಗಳಿಗೂ 'ದೀಪಕ' ವಾಗಿರುವುದು ಸ್ಪಷ್ಟವಾಗಿದೆ.

ಉಪಮಾ

[ಉಪಮಾಲಂಕಾರವು ಅರ್ಥಾಲಂಕಾರಗಳಲ್ಲೆಲ್ಲಾ ಅತಿ ವಿಶಾಲವಾದುದು. 'ಸಾದೃಶ್ಯ' ಅಥವಾ 'ಹೋಲಿಕೆ' ಈ ಅಲಂಕಾರದ ಮುಖ್ಯ ಕಾರ್ಯ. ಹೋಲಿಕೆಗೆ ಎರಡು ವಸ್ತುಗಳು ಬೇಕಷ್ಟೆ: ಒಂದು ಪ್ರಕೃತ (ಉಪಮೇಯ), ಇನ್ನೊಂದು ಅಪ್ರಕೃತ (ಉಪಮಾನ); ಈ ಉಪಮೇಯೋಪಮಾನಗಳಲ್ಲಿ ಕಂಡು ಬರುವ ಗುಣಸಾಮಾನ್ಯವೆ 'ಸಾಧಾರಣ ಧರ್ಮ'. ಹೋಲಿಕೆಯನ್ನು ಸೂಚಿ ಸುವ ಮಾತು 'ಉಪಮಾವಾಚಕ'. ಇವೇ ಉಪಮಾಲಂಕಾರದ ನಾಲ್ಕು ಅಂಗಗಳು. ರೂಪಕಾದಿ ಅನೇಕ ಅರ್ಥಾಲಂಕಾರಗಳು ಸಾದೃಶ್ಯಮೂಲ ವಾದುವು. ಇದರಿಂದ ಉಪಮಾಲಂಕಾರದ ವ್ಯಾಪಕತ್ವವು ವ್ಯಕ್ತಪಡುತ್ತದೆ. ಅದ್ದ

ರಿಂದಲೇ, ಇದರಲ್ಲಿ ಅನೇಕ ಭೇದಗಳನ್ನು ಗುರುತಿಸಿ, ದಂಡಿ ಇದನ್ನು 'ಉಪಮಾ ಪ್ರಪಂಚ'ವೆಂದು ಸಂಬೋಧಿಸಿದ್ದಾನೆ. ಬಹುಮಟ್ಟಿಗೆ ದಂಡಿಯನ್ನೆ ಅನುಸರಿಸಿರುವ ಮಾರ್ಗಕಾರನು ೨೬ ಉಪಮಾ ಪ್ರಭೇದಗಳನ್ನು ಹೆಸರಿಸಿ, ಅವುಗಳಿಗೆ ಲಕ್ಷ್ಯಗಳನ್ನು ಕೊಟ್ಟಿದ್ದಾನೆ.]

ಪದ್ಯ ೫೯ ; 'ವಾಸ್ತವವಾಗಿ ಬೇರೆ ಬೇರೆಯಾಗಿರುವ ನಾನಾ ವಸ್ತುಗಳನ್ನು ಯಾವುದಾದರೂ ರೀತಿಯಲ್ಲಿ 'ಪೋಲ್ಕೆ ಮಾಡುವುದು' ಉಪಮೆ ಎಂಬ 'ಮಾನಿತ' (ಗೌರವಕ್ಕೆ ಪಾತ್ರವಾದ) 'ಸದಳಂಕಾರಂ'. ಆದರದ್ದು 'ಅನೂನ ವಿಕಲ್ಪ ಪ್ರಪಂಚಂ' (=ಪರಿಪೂರ್ಣವಾದ, ಬೇರೆ ಬೇರೆ ತೆರನುಳ್ಳ, ಪ್ರಪಂಚ.)

ಪದ್ಯ ೬೦ : **ವಸ್ತೂಪಮೆ :** 'ವನರುಹದಂತೆ ಮುಖಂ' ಇತ್ಯಾದಿಯಾಗಿ 'ಅನುರೂಪ'ವಾಗಿ ವರ್ಣಿಸುವುದು 'ವಸ್ತೂಪಮೆ'. (ಇಲ್ಲಿ, ಉಪಮಾನ, ಉಪಮೇಯ, ಉಪಮಾವಾಚಕ—ಮೂರೂ ಉಕ್ತವಾಗಿ, 'ಸಾಧಾರಣ ಧರ್ಮ'ವು ಲುಪ್ತವಾಗಿದೆ. ಆಧುನಿಕ ಮತದಂತೆ ಇದು 'ಲುಪ್ತೋಪಮೆ'. ದಂಡಿ, 'ಇಯಂ ಪ್ರತೀಯಮಾನೈಕ ಧರ್ಮಾ ವಸ್ತೂಪಮೈವ ಸಾ' ಎಂದು ನಿರ್ವಚಿಸಿದ್ದಾನೆ. 'ರಾಜೀವಮಿವ ತೇ ವಕ್ತ್ರಂ' ಎಂಬ ದಂಡಿಯ ದೃಷ್ಟಾಂತದಲ್ಲೂ ಧರ್ಮವಾಚಕವಿಲ್ಲ. ಧರ್ಮವು ಅನುಕ್ತವಾದರೂ, ಮಾರ್ಗಕಾರನು ಹೇಳುವಂತೆ 'ಅನುರೂಪ' ವಸ್ತುಗಳಲ್ಲಿ ಧರ್ಮವು ಪ್ರತೀಯಮಾನವಾಗಿದ್ದರೆ, ಅದು ವಸ್ತೂಪಮೆ ಎಂದು ತಿಳಿಯಬೇಕು.)

ಪದ್ಯ ೬೧ : **ಧರ್ಮೋಪಮೆ :** 'ತಳಿರ್ಗಳವೋಲ್ ಮೆಲ್ಲಿದುವೀ ತಳಂಗಳ್' (=ಈ ಅಂಗೈಗಳು ಚಿಗುರಿನಂತೆ ಮೃದು), 'ಅಳಿಕುಳದವೋಲ್ ವಿನೀಳಂಗಳ್ ನಿನ್ನಳಕಾಳಿಗಳ್' (=ನಿನ್ನ ಮುಂಗುರುಳು ತುಂಬಿವಿಂಡಿನಂತೆ ನೀಲಿ) : ಇಲ್ಲಿ 'ಮೆಲ್ಲಿದುವು', 'ವಿನೀಳಂಗಳ್' ಎಂಬ ಪದಗಳಲ್ಲಿ ಸಮಾನ ಧರ್ಮವು ಪ್ರಕಟವಾಗಿರುವುದರಿಂದ ಇದು 'ಧರ್ಮೋಪಮೆ' ('ಧರ್ಮೋಪಮಾ ಸಾಕ್ಷಾತ್ ತುಲ್ಯ ಧರ್ಮ ಪ್ರಕಾಶನಾತ್.'-ದಂಡಿ.)

ಪದ್ಯ ೬೨: **ವಿಪರ್ಯಯೋಪಮೆ**: 'ನಿನ್ನ ಮುಖದಂತೆ ಕಮಳಮಿದುನ್ನಿದ್ರಂ' (ನಿನ್ನ ಮುಖದ ಹಾಗೆ ಈ ತಾವರೆ ಪೂರ್ತಿಯಾಗಿ ಅರಳಿರುವುದು): ಉಪಮಾನ(ಅವರ್ಣ್ಯ)ವನ್ನೇ ಉಪಮೇಯ (ವರ್ಣ್ಯ)ದ ಸ್ಥಾನದಲ್ಲಿರಿಸಿ, ವಿಪರ್ಯಾಸಕ್ರಮದಲ್ಲಿ (ಹಿಂದುಮುಂದುಮಾಡಿ) ಹೋಲಿಕೆ ಮಾಡುವುದು 'ವಿಪರ್ಯಯೋಪಮೆ'. ಆರಕ್ತಂ=ಕೆಂಪು. ನನ್ನಿಯಿಂ[50]=ನಿಜವಾಗಿ. ಪಲ್ಲವ=ಚಿಗುರು. (ಈಚಿನ ಲಕ್ಷಣ ಗ್ರಂಥಗಳಲ್ಲಿ ಇದು 'ಪ್ರತೀಪಾಲಂಕಾರ'ವೆಂದು ಪ್ರಸಿದ್ಧ).

ಪದ್ಯ ೬೩: **ಅನ್ಯೋನ್ಯೋಪಮೆ**: 'ಕಮಲ ನಿನ್ನ ಮುಖದ ಹಾಗೆ, ಮುಖವೂ .ಕಮಲದ ಹಾಗೆ' ಎಂದು ಹೇಳುವುದು 'ಅನ್ಯೋನ್ಯೋಪಮೆ.' (ಇದರಲ್ಲಿ ಅನ್ಯೋನ್ಯೋತ್ಕರ್ಷ, ಎಂದರೆ ಒಂದರಿಂದ ಇನ್ನೊಂದಕ್ಕೆ ಹೆಚ್ಚುಗಾರಿಕೆ ಉಂಟಾಗುವುದೆಂದು ದಂಡಿಯ ವಿವರಣೆ: 'ಸೇಯಮನ್ಯೋನ್ಯೋತ್ಕರ್ಷ ಶಂಸಿನೀ'). (ಅರ್ವಾಚೀನ ಲಕ್ಷಣಕಾರರು ಇದನ್ನು 'ಉಪಮೇಯೋಪಮೆ' ಎಂದು ಕರೆದಿರುವರು. ಸದೃಶಗಳಾದ ಎರಡು ವಸ್ತುಗಳು ಹೊರತು ಮೂರನೆಯದು ಇಲ್ಲ ಎಂದು ಸೂಚಿತವಾಗುತ್ತದೆ.)

ಪದ್ಯ ೬೪: **ನಿಯಮೋಪಮೆ**: 'ಸರಸಿಜದೊಳ್ ನಿನ್ನ ಮುಖಂ ಸದೃಶಂ; ಪೋಲದು ಪೆಱತಂ': ಒಂದು ಉಪಮೇಯಕ್ಕೆ ಒಂದೇ ಉಪಮಾನ, ಬೇರೆಯ ಉಪಮಾನವಿಲ್ಲ—ಎಂದರೆ, ಇದು ನಿಯಮವಾಗುವುದು. ಆದ್ದರಿಂದ, ಇದು ನಿಯಮೋಪಮೆ. ('ಅನ್ಯಸಾಮ್ಯ ವ್ಯಾವೃತ್ತೇಃ' —ಬೇರೆಯ ಹೋಲಿಕೆಯನ್ನು ಹೊರತುಪಡಿಸುವುದು—ದಂಡಿ).

ಪದ್ಯ ೬೫: **ಅನಿಯಮೋಪಮೆ**: 'ಕಮಲವು ನಿನ್ನ ಮುಖದಲ್ಲಿ ಸದೃಶ; ಬೇರೆಯದೂ ಕೂಡ ಅದೇ ರೀತಿ ಸದೃಶ'–ಇದು 'ನಿಯಮೋಪಮೆ'ಗೆ

---

50 'ನನ್ನಿಯಿನೀ ಪಲ್ಲವಂ': ಎರಡು ಮುದ್ರಿತ ಪ್ರತಿಗಳಲ್ಲಿಯೂ 'ನಿನ್ನಯನೀ' ಎಂಬ ಪಾಠವಿದೆ. ಮುಳಿಯ ತಿಮ್ಮಪ್ಪಯ್ಯನವರು 'ನಿರ್ನೆರವಿಾ' ಎಂಬ ತಿದ್ದುಪಾಟನ್ನು ಸೂಚಿಸಿದ್ದಾರೆ. ಹೆಚ್ಚಿನ ಅಕ್ಷರ ವ್ಯತ್ಯಾಸವಿಲ್ಲದೆ, ಅಕ್ಷರ ಸ್ಥಾನಗಳನ್ನು ಪಲ್ಲಟ ಮಾಡಿ, ನಮ್ಮ ತಿದ್ದುಪಾಟಾಗಿದೆ. ಲಿಪಿಕಾರನ ಕೈಯಲ್ಲಿ ಈ ರೀತಿ ಅಕ್ಷರಸ್ಥಾನ ವ್ಯತ್ಯಯವಾಗುವ ಸಂಭವವುಂಟು.

ವಿರುದ್ಧವಾದುದು. 'ನಿನ್ನ ಮುಖಕ್ಕೆ ಯಾವ ವಸ್ತುವನ್ನು ಬೇಕಾದರೂ ಹೋಲಿಸಬಹುದು' ಎಂದು ತಾತ್ಪರ್ಯ. ಇದು ಸಾಧ್ಯವೇ, ಎಂದರೆ—'ಸಮವಾಯಂ (ಪರಸ್ಪರ ಸಾಮ್ಯ ಸಂಬಂಧ) ಉಳ್ಳೊಡೆ ಎಲ್ಲಂ ಸಮನಿಸುಗುಂ' ಎಂಬುದೇ ಸಮರ್ಥನೆ.

ಪದ್ಯ ೬೬ : **ಅತಿಶಯೋಪಮೆ** : 'ವದನಂ ಮದೀಯಲೋಚನ ಮುದಾವಹಂ' (ಮುಖವು ನನ್ನ ಕಣ್ಣುಗಳಿಗೆ ಸಂತೋಷಕಾರಿ); 'ಕಮಳಂ ಅಳಿಕುಳ ಉತ್ಸವಜನಕಂ' (=ಕಮಲವು ದುಂಬಿವಿಂಡಿಗೆ ಸಂತೋಷ ಕಾರಿ); 'ವಿದಿತ ವಿಭೇದಕ್ರಮಂ ಇಂತಿದಲ್ಲದೆ ಇಲ್ಲಂ' (ಮುಖಕ್ಕೂ ಕಮಲಕ್ಕೂ) (=ಭೇದವೆಣಿಸುವ ರೀತಿ ಇದು ಅಲ್ಲದೆ ಬೇರೇನೂ ಇಲ್ಲ). ಈ ಒಂದು ಭೇದವೇ ಕಂಡುಬರತಕ್ಕ 'ಅತಿಶಯ', ಮುಖಕಮಲಗಳ ಸಾದೃಶ್ಯವನ್ನು ಮೀರಿದ ಹೆಚ್ಚಿನ ಅಂಶ. ಇದು ಹೊರತಾಗಿ, ಮುಖಕಮಲಗಳು ಸದೃಶ.

ಪದ್ಯ ೬೭ : **ಉಪಮೋತ್ಪ್ರೇಕ್ಷೆ**: 'ಈಕೆಯ ವದನಾಕಾರಂ, ಅನೇಕಾಂತಂ (=ಬಗೆಬಗೆಯಲ್ಲಿ ಕಾಣುವಂಥದು); (ಏನನ್ನಾದರೂ) ಹೋಲ ಬೇಕೆಂಬ ಕಾರಣಕ್ಕಾಗಿ, ಕನತ್ ಕೋಕನದಕ್ಕೆ (=ಪ್ರಕಾಶಮಾನ ವಾದ ಕೆಂದಾವರೆಗೆ) ಮತ್ತು ಇಂದುಗೆ (=ಚಂದ್ರನಿಗೆ) ಅದಱೊಳ್ (=ಆ ಕಮಲದಲ್ಲಿ) ಉಂಟು ಆಕಾಂಕ್ಷಣಂ (=ಅಪೇಕ್ಷೆ, ಒಲವು; ಎಂದರೆ, ಹೋಲಿಕೆಯ ಕಡೆಗೆ ಒಲವು). ವದನಾಕಾರವು ಕೆಂದಾವರೆಯನ್ನೂ ಚಂದ್ರನನ್ನೂ ಹೋಲುವುದು ವಸ್ತುಸ್ಥಿತಿ; ಹೋಲಿಕೆಗಾಗಿ ಹೋಲಿಕೆಯೇ ಹೊರತು, ವದನವು ಅನುಪಮ ಎನ್ನುವುದೇ ಇಲ್ಲಿನ ಉತ್ಪ್ರೇಕ್ಷೆ. ಆದ್ದರಿಂದ, ಇದು ಉಪಮೋತ್ಪ್ರೇಕ್ಷೆ.

ಪದ್ಯ ೬೮ : **ಅದ್ಭುತೋಪಮೆ** : 'ಕಮಳಂ, ಲಲಿತಭ್ರೂವಿಭ್ರಮಮಂ' (=ಲಲಿತವಾದ ಹುಬ್ಬಿನ ಬೆಡಗನ್ನೂ), 'ವಿಸ್ಮಿತವಿಲೋಲಲೋಚನ ಯುಗಮಂ' (=ಅಚ್ಚರಿಪಡುವ ಚಂಚಲವಾದ ಕಣ್ಣೆರಡನ್ನೂ) 'ಸಮವಾಯಂ ಉಳ್ಳೊಡೆ' (=ಪರಸ್ಪರ ಸಾಮ್ಯ ಸಂಬಂಧವಾಗಿ

ಹೊಂದಿದ್ದರೆ), 'ಅದು ನಿನ್ನ ಮೊಗಕ್ಕೆ ಎಣೆ' (=ಸರಿಜೋಡಿ). ಹುಬ್ಬಿನ ವಿಲಾಸ, ಬೆರಗಿನ ಕಣ್ಣು—ಇವೆರಡು ಮಾತ್ರ ಮುಖದ ಆಶ್ಚರ್ಯಕರ ವಿಶೇಷ ಗುಣಗಳು; ಇವನ್ನು ಬಿಟ್ಟರೆ, ಮುಖಕ್ಕೂ ಕಮಲಕ್ಕೂ ಹೋಲಿಕೆಯುಂಟು.

ಪದ್ಯ ೬೯: **ಮೋಹೋಪಮೆ:** 'ಭ್ರಮರಂ (=ತುಂಬಿ) ನಿನ್ನ ಮೊಗಕ್ಕೆ ಕಮಳವಿಮೋಹದಿಂ (=ಕಮಲ ಪುಷ್ಪದ ಆಕರ್ಷಣೆಯಿಂದ, ಎಂದರೆ ಕಮಲದ ಆಕರ್ಷಕ ಗುಣವನ್ನು ಮುಖದಲ್ಲಿ ಕಂಡು), ವದನಂ ಇದು ಅಲ್ತು ಎಂದು ಮೋಹದಿಂ (=ಭ್ರಾಂತಿಯಿಂದ), ಎಱಗುವುದು; ಆ ಸರಸಿಜಮಂ ತೊಱೆವುದು.'–ಕಮಲದಲ್ಲಿ ತುಂಬಿಯನ್ನು ಸೆಳೆಯುವ ನಿಜವಾದ ಮೋಹಕ ಗುಣವಿದೆ; ತತ್ಸದೃಶವಾದ ಗುಣ ಮಾತ್ರ (ಅದೇ ಗುಣವಲ್ಲ). ಮುಖದಲ್ಲಿರುವುದು ಈ ಸಮಾನ ಧರ್ಮದಿಂದಾಗಿ, ಎರಡಕ್ಕೂ ಔಪಮ್ಯ. ಕಮಲದ ಮೋಹಕತೆಯೇ ಮುಖದಲ್ಲಿಯೂ ಇದೆಯೆಂಬ ಭ್ರಮೆಯಿಂದ ತುಂಬಿ ಅದರಲ್ಲಿ ಮೋಹಗೊಂಡು ಅದಕ್ಕೆ ಎರಗುವುದು. ಹೀಗೆ, 'ಮೋಹ' ವೇ ಸಮಾನಧರ್ಮವಾಗಿರುವುದರಿಂದ ಇದು 'ಮೋಹೋಪಮೆ'. (ಅರ್ವಾಚೀನ ಲಕ್ಷಣ ಗ್ರಂಥಗಳಲ್ಲಿ ಉಕ್ತವಾಗಿರುವ 'ಭ್ರಾಂತಿಮದಾಲಂಕಾರ' ದ ಛಾಯೆಯನ್ನು ಇಲ್ಲಿ ಗುರುತಿಸಬಹುದು).

ಪದ್ಯ ೭೦: **ಸಂಶಯೋಪಮೆ:** 'ಇದು ಸರಸಿಜವೋ ಮುಖವೋ, ದ್ವಿರೇಫವೋ (=ತುಂಬಿಯೋ) ಲೋಲನಯನ ಯುಗವೋ, ಮನಸ್ಸಿನಲ್ಲಿ ಸಂಶಯವಾಗುವುದು.' ಇಲ್ಲಿ ಎರಡು ವಸ್ತುಗಳ (ಉಪಮೇಯೋಪಮಾನಗಳ) ನಡುವೆ ಸಾದೃಶ್ಯವಿರುವುದರಿಂದಲೇ ಸಂಶಯವುಂಟಾಗಿರುವುದು. (ಇದೇ ಈಚಿನ 'ಸಂದೇಹಾಲಂಕಾರ.')

ಪದ್ಯ ೭೧: **ಊರ್ಜಿತೋಪಮೆ:** 'ಸರಸಿರುಹಂ, ಇಂದು ದೀಧಿತಿಪರಾಜಿತ ಶ್ರೀ ವಿಲಾಸಂ' (=ಚಂದ್ರಕಾಂತಿಯಿಂದ ಗೆಲ್ಲಲ್ಪಟ್ಟ ಸೌಂದರ್ಯ ಸಂಪತ್ತನ್ನುಳ್ಳದ್ದು); 'ಈ ನಿನ್ನ ಮುಖಂ, ಹರಿಣಧರ ವಿಜಯ ಶೋಭಾಕರಂ' (=ಚಂದ್ರನ ಮೇಲೆ ಪಡೆದ ಗೆಲುವಿನ ಸೊಬಗನ್ನು

ಹೊಂದಿರತಕ್ಕದ್ದು). (ದಂಡಿಯ ಕಾವ್ಯಾದರ್ಶದಲ್ಲಿ ಇದರ ಹೆಸರು 'ನಿರ್ಣಯೋಪಮೆ' ಎಂದಿದೆ). ಕಮಲ ವದನಗಳಿಗಿರುವ ಸಮಾನ ಧರ್ಮ ಸೌಂದರ್ಯ; ಕಮಲದ ಸೌಂದರ್ಯವು ಚಂದ್ರಪ್ರಕಾಶಕ್ಕೆ ಕುಂದಿ ಅನೂರ್ಜಿತವಾಗಿರುವಲ್ಲಿ, (ವರ್ಣ್ಯವಾದ) ಮುಖಸೌಂದರ್ಯವು ಅದೇ ಚಂದ್ರಪ್ರಕಾಶವನ್ನು ಗೆದ್ದು ಊರ್ಜಿತವಾಗಿದೆ. ಆದ್ದರಿಂದ, ಇದು ಊರ್ಜಿತೋಪಮೆ. (ಮುಖಕಮಲಗಳ ಹೆಚ್ಚುಕಡಮೆಗಳನ್ನು ಚಂದ್ರಕಾಂತಿಯನ್ನೂ ಮೀರಿಸುವ ಮುಖದ ಕಾಂತಿ ನಿರ್ಣಯಿಸಿರುವುದರಿಂದ, ಇದನ್ನು ಕಾವ್ಯಾದರ್ಶದಲ್ಲಿ 'ನಿರ್ಣಯೋಪಮೆ' ಎಂದು ಕರೆದಿರಬಹುದು. ನಿರ್ಣಯ, ಊರ್ಜಿತತ್ವ–ಎರಡೂ ಒಂದೇ).

ಪದ್ಯ ೭೨: **ಶ್ಲೇಷೋಪಮೆ:** 'ನಿನ್ನಾ ವದನಂ ಸರಸಿರುಹದವೋಲ್ ಪರಮ ಶ್ರೀನಿಳಯಂ', (೧. ವದನ: ಶ್ರೇಷ್ಠವಾದ ಸೌಂದರ್ಯದ ನೆಲೆ; ೨. ಕಮಲ: ಶ್ರೇಷ್ಠಳಾದ ಲಕ್ಷ್ಮಿಯ ವಾಸಸ್ಥಾನ); ಮತ್ತು 'ಶಶಧರ ಕಾಂತಿ ವಿರೋಧಿ ರೋಚಿ' (೧. ವದನ: ಚಂದ್ರಕಾಂತಿಯನ್ನು ವಿರೋಧಿಸುವ ಎಂದರೆ ಅದಕ್ಕೆ ಸಮಾನವಾದ, ಇಲ್ಲವೆ ಅದನ್ನು ಮೀರಿಸಿರುವ, ಕಾಂತಿಯುಳ್ಳದ್ದು; ೨. ಕಮಲ: ಚಂದ್ರಕಾಂತಿಯನ್ನು ವೈರಿಯಾಗಿ ಉಳ್ಳ ಎಂದರೆ ಅದನ್ನು ಸಹಿಸದ ಕಾಂತಿಯುಳ್ಳದ್ದು). ಹೀಗೆ, ಶ್ಲೇಷಾರ್ಥದ ಮೂಲಕ ಸಾದೃಶ್ಯವನ್ನು ಕಲ್ಪಿಸಿರುವ ಕಾರಣ, ಇದು 'ಶ್ಲೇಷೋಪಮೆ'.

ಪದ್ಯ ೭೩: **ನಿಂದೋಪಮೆ:** 'ಸರಸೀಜಂ ಸರಜಂ' (=ಕಮಲವು ಸ+ರಜಂ ಎಂದರೆ ಪುಷ್ಪಧೂಳಿಯಿಂದ ಕೂಡಿದ್ದು; ಇದು ಅದರ ದೋಷ); 'ಶಶಧರ ಬಿಂಬಂ ಅದು ಅತಿ ಕಳಂಕಿತಂ' (=ಚಂದ್ರಬಿಂಬವು ಅತಿ ಕಳಂಕದಿಂದ ಕೂಡಿದ್ದು); 'ನಿನ್ನ ಮೊಗಂ ನಿರುಪಮಮಾಗಿಯುಂ ಅವಱೊಳ್ (ಆ ಕಮಲ ಚಂದ್ರಗಳಲ್ಲಿ) ದೊರೆ (=ಸಮಾನ). ಇಲ್ಲಿ ಉಪಮಾನ ವಸ್ತುಗಳನ್ನು ದೋಷಪೂರ್ಣವೆಂದು ಹೇಳಿ ಅವುಗಳನ್ನು ನಿಂದಿಸಿರುವುದರಿಂದ, ಇದು 'ನಿಂದೋಪಮೆ'. (ಮುಖವು 'ನಿರುಪಮ' ವಾಗಿರುವುದರಿಂದ ನಿಂದೆಗೆ ಒಳಗಾಗದು).

ಪದ್ಯ ೭೪: **ಪ್ರಶಂಸೋಪಮೆ:** (ಇದು 'ನಿಂದೋಪಮೆ' ಗೆ ವ್ಯತಿರಿಕ್ತ ಎಂಬುದು ಸ್ವಯಂಸ್ಪಷ್ಟ) 'ಅಮೃತಭವಂ ಶಿಶಿರಕರಂ' (ಚಂದ್ರನು ತಂಪುಂಟುಮಾಡತಕ್ಕವನು); 'ಕಮಳಂ ಜಗದೇಕ ಪಾವನೀಯ ಶ್ರೀಕಂ' (ಕಮಲವು ಲೋಕದಲ್ಲಿ ಏಕಮಾತ್ರ ಪವಿತ್ರಳೆನಿಸಿದ ಲಕ್ಷ್ಮಿಯನ್ನು ಉಳ್ಳದ್ದು); 'ನಿನ್ನ ಮೊಗಂ ಕ್ರಮದೆ ಅವಱೊಳ್ (ಅವುಗಳೊಂದಿಗೆ) ಸಮಂ.' ಮುಖವನ್ನು ಸದ್ಗುಣಗಳೊಂದಿಗೆ ಕೂಡಿರುವ ವಸ್ತುಗಳಿಗೆ ಹೋಲಿಸಿರುವುದರಿಂದ ಮುಖವನ್ನೂ ಪ್ರಶಂಸೆಮಾಡಿದಹಾಗಾಯಿತು.[51]

ಪದ್ಯ ೭೫: **ವಿರೋಧೋಪಮೆ:** 'ಶರದುದಿತ ಶಿಶಿರಕರನುಂ ಸರಸಿರುಹಮುಂ ಈ ತ್ವದೀಯ ವದನಮುಂ' (=ಶರತ್ಕಾಲದಲ್ಲಿ ಹುಟ್ಟಿದ ಚಂದ್ರನೂ ಕಮಲವೂ ಈ ನಿನ್ನ ಮುಖವೂ), 'ಇನಿತುಂ ದೊರೆಕೊಳಿಸುವೊಡೆ ಪರಸ್ಪರ ವಿರೋಧಿಗಳ್' (=ಸ್ವಲ್ಪವಾದರೂ ಹೋಲಿಕೆಗೊಳ್ಳುವುವು ಎನ್ನುವುದಾದರೆ, ಅವು ಪರಸ್ಪರ ವಿರೋಧಿಗಳು). (ಕಮಲಕ್ಕೂ ಚಂದ್ರನಿಗೂ ವಿರೋಧ; ಎರಡನ್ನೂ ಹೋಲುವ ಮುಖವೂ ಅವುಗಳೊಂದಿಗೆ ವಿರೋಧ ಹೊಂದಲೇಬೇಕಲ್ಲವೆ?)

ಪದ್ಯ ೭೬: **ತತ್ತ್ವಾಖ್ಯಾನೋಪಮೆ:** 'ನಿಜಕಾಮಿನಿಯಾ ಕಣ್ಗಳ್ ಅಲ್ಲ ಇವು, ಅಳಿಗಳ್ ಇವು; ಇದೀ ವದನಮಲ್ತು, ನಳಿನಂ'. ('ಇತಿ ವಿಸ್ಪಷ್ಟಸಾದೃಶ್ಯಾತ್ ತತ್ತ್ವಾಖ್ಯಾನೋಪಮೈವ ಸಾ'—ಕಾವ್ಯಾದರ್ಶ, II-೩೬). ಸುಸ್ಪಷ್ಟವಾದ ಸಾದೃಶ್ಯವನ್ನು–ತತ್ತ್ವವನ್ನು ಎಂದರೆ ಬೋಧವಾಗುವ ನಿಜಾಂಶವನ್ನು ಆಧಾರವಾಗುಳ್ಳ ಹೋಲಿಕೆಯನ್ನು–ತಿಳಿಸುವುದು ತತ್ತ್ವಾಖ್ಯಾನೋಪಮೆ.

---

51 'ಜಗದೇಕ ಪಾವನೀಯ ಶ್ರೀಕಂ': ಎರಡು ಮುದ್ರಿತ ಪ್ರತಿಗಳಲ್ಲಿಯೂ 'ಪಾವನೀಯ' ಎಂದೇ ಇದೆ. ಶುದ್ಧಪಾಠವು 'ಪಾವನೀಯಾ' ಎಂದು ಇದ್ದಿರಬಹುದಲ್ಲವೆ?

'ಬ್ರಹ್ಮಣೋಪ್ಯುದ್ಭವಃ ಪದ್ಮಶ್ಚಂದ್ರಃ ಶಂಭುಶಿರೋಧೃತಃ' ಎಂದು ಕಾವ್ಯಾದರ್ಶದಲ್ಲಿ ಪದ್ಮ ಚಂದ್ರಗಳಿಗೆ ಬ್ರಹ್ಮಶಂಭು ಸಂಬಂಧವಿರುವುದನ್ನು ಮಾರ್ಗಕಾರನು ತನ್ನ ಉದಾಹರಣ ಪದ್ಯದಲ್ಲಿ ಮಾರ್ಪಡಿಸಿರುವುದು ಗಮನಾರ್ಹ.

ಪದ್ಯ ೭೭ : **ಅಸಾಧಾರಣೋಪಮೆ :** ‘ ನಿನ್ನ ಮೊಗಂ ತನಗೆ ತಾನೆ ದೊರೆ, ಹರಿಣಧರ (=ಚಂದ್ರ) ಸರಸಿಜಂಗಳ್ ಇವು ದೊರೆಯಲ್ಲ’ (=ಸಮವಲ್ಲ). ಚಂದ್ರಕಮಲಗಳೊಡನೆ ಸಾಮ್ಯವನ್ನು ಅತಿಕ್ರಮಿಸಿ ಮುಖವು ನಿರುಪಮವಾಗಿರುವುದರಿಂದ (‘ ಚಂದ್ರಾರವಿಂದಯೋಃ ಕಕ್ಷ್ಯಾಮತಿಕ್ರಮ್ಯ’-ದಂಡಿ), ಇದು ‘ ಅಸಾಧಾರಣೋಪಮೆ’.

ಪದ್ಯ ೭೮ : **ಅಭೂತೋಪಮೆ :** ‘ ನಿನ್ನ ಮುಖಂ ಶಿಶಿರಕಿರಣಕಾಂತಿ ಪ್ರತತಿಯಂ (= ಚಂದ್ರಕಾಂತಿ ಸಮುದಾಯವನ್ನು) ಒಡಗೂಡಿ ಮಾಡಿದವೊಲ್ ಇಂತು ಅತಿಶಯಂ ಆಯಿತ್ತು’. ಮುಖಕಾಂತಿಯನ್ನು ಚಂದ್ರಕಾಂತಿಗೆ ಹೋಲಿಸುವುದರಲ್ಲಿ ಅತಿಶಯತೆ ಇಲ್ಲ; ಅದು ಸಾಮಾನ್ಯ. ಚಂದ್ರಕಾಂತಿಯನ್ನು ಭಟ್ಟಿಯಿಳಿಸಿ ಒಗ್ಗೂಡಿಸಿ ಮಾಡಿದ ಮುಖ ಎಂದರೆ, ‘ಅಭೂತ’, (ಸಾಧಾರಣವಾಗಿ) ಇಲ್ಲದ್ದು.

ಪದ್ಯ ೭೯ : **ಅಸಂಭವೋಪಮೆ** : ‘ ಹರಿಣಧರನೊಳ್ ವಿಷಂ, ಮಲಯರುಹದೊಳ್ (=ಶ್ರೀಗಂಧದ ಮರದಲ್ಲಿ) ಅನಲಾರ್ಚಿ (=ಅಗ್ನಿಯ ಜ್ವಾಲೆ), ನಿನ್ನ ವದನೋದರದೊಳ್ (=ಬಾಯಿಯಲ್ಲಿ) ಪರುಷತರ ವಚನಮುಪ್ಪುದು (=ಕಠಿನತರವಾದ ಮಾತು ಕೇಳಿ ಬರುವುದು), ದುರವಾಪಂ (=ದೊರಕುವುದು ಅಸಾಧ್ಯ). ಚಂದ್ರ, ಶ್ರೀಗಂಧದ ಮರ, ಮುಖ—ಇವು ಸದೃಶ ವಸ್ತುಗಳು ; ಇವುಗಳಲ್ಲಿ ಕಠಿನತೆ ಅಸಂಭವ ಎಂಬ ಅಂಶದಲ್ಲಿಯೂ ಸಾಮ್ಯವಿದೆ. ಹೀಗೆ ಇದು ಅಸಂಭವೋಪಮೆ.

ಪದ್ಯ ೮೦ : **ಬಹೂಪಮೆ** : ‘ ಈ ಲಲನಾಲಿಂಗನ ಸುಖಕರವಿಲಾಸಂ, ಮಲಯರುಹ (=ಶ್ರೀಗಂಧ), ಶಿಶಿರಕರ (=ಚಂದ್ರ), ಶೀತಲಿಕಾಕರಕ (=ತಣ್ಣನೆಯ ಆಲಿಕಲ್ಲು), ಇಂದುಕಾಂತಜಲ (ಚಂದ್ರಕಾಂತ ಶಿಲೆ ಸ್ರವಿಸುವ ನೀರು)—ಇವುಗಳಂತೆ, ಶೀತಳಂ’ (=ತಂಪಾಗಿರುವುದು)—ಇಲ್ಲಿ, ಅಪ್ಪುಗೆಯ ತಂಪಾದ ಸುಖಾನುಭವಕ್ಕೆ ಒಂದಕ್ಕಿಂತ ಹೆಚ್ಚು ಉಪಮಾನಗಳನ್ನು ಕೊಟ್ಟಿರುವುದರಿಂದ, ಇದು ಬಹೂಪಮೆ.

ಪದ್ಯ ೮೧: **ಮಾಲೋಪಮೆ**: 'ಪ್ರಗಲ್ಭದೊಳ್ (=ಧೈರ್ಯದಲ್ಲಿ), ಮಾನನದೊಳ್ (=ಗೌರವದಲ್ಲಿ), ಮಾಹಾತ್ಮ್ಯದೊಳ್, ನಿಜೋದಾರತೆಯೊಳ್, ಅನುಪಮಗುಣದೊಳ್, ಘನಂ (=ಹೆಚ್ಚಾಗಿ), ಶ್ರೀಶಂ' (=ವಿಷ್ಣುವಿಗೆ ಸಮಾನ). ದಂಡಿಯ ಉದಾಹರಣ ಶ್ಲೋಕದಿಂದ ಇದು ಭಿನ್ನವಾಗಿದೆ:

ಪೂಷ್ಣ್ಯಾತಪ ಇವಾಹ್ನೀವ ಪೂಷಾ ವ್ಯೋಮ್ನೀವ ವಾಸರಃ ।
ವಿಕ್ರಮಸ್ತ್ವಯ್ಯಧಾಲ್ಲಕ್ಷ್ಮೀಮಿತಿ ಮಾಲೋಪಮಾಕ್ರಮಃ ॥—II, ೪೨.

[ಬಿಸಿಲು ಸೂರ್ಯನಿಗೆ ಹೇಗೋ ಹಾಗೆ, ಸೂರ್ಯನು ದಿವಸಕ್ಕೆ ಹೇಗೋ ಹಾಗೆ, ದಿವಸವು ಆಕಾಶಕ್ಕೆ ಹೇಗೋ ಹಾಗೆ ಪರಾಕ್ರಮವು ನಿನಗೆ ಸೊಬಗನ್ನು (ಲಕ್ಷ್ಮೀ) ನೀಡಿದೆ; ಇದು ಮಾಲೋಪಮೆಯ ಕ್ರಮ.

ಈ ಲಕ್ಷ್ಯದಲ್ಲಿ ಕಂಡುಬರುವ ಮಾಲಾಬಂಧ ಚಮತ್ಕಾರವು ಮಾರ್ಗಕಾರನ ಪದ್ಯದಲ್ಲಿ ಇಲ್ಲವಾಗಿದೆ. ತನ್ನ ಲಕ್ಷ್ಯ ಪದ್ಯದಲ್ಲಿ ಮಾರ್ಗಕಾರನು ನೃಪತುಂಗನನ್ನೆ ವಿಷ್ಣುವಿಗೆ ಸಮಾನವೆಂದು ವರ್ಣಿಸಿರುವಹಾಗೆ ಕಾಣಬರುತ್ತದೆ.]

ಪದ್ಯ ೮೨: **ವಾಕ್ಯೋಪಮೆ**: 'ಆಲೋಲ ವಿಲೋಚನ ಮುದಿತರಾಗಮಣಿ ವಿಲಸಿತ[ಮುಂ][52] ಭವದೀಯ ವದನಂ' (=ಚಂಚಲವಾದ ಕಣ್ಣುಗಳಿಂದ ಸಂತಸಗೊಂಡಿರುವದೂ, ಕೆಂಪುರತ್ನದಿಂದ ಎಂದರೆ ಮಾಣಿಕ್ಯದಂತಿರುವ ಕೆಂದುಟಿಯಿಂದ ಸೊಬಗುವಡೆದಿರುವುದೂ ಆದ ನಿನ್ನ ಮುಖವು), 'ಪ್ರವಿಕಸಿತಾಂಬುಜವನಮಂ' (ಚೆನ್ನಾಗಿ ಅರಳಿರುವ ತಾವರೆಯ ವನವನ್ನು), 'ಸವಿಶೇಷಂ ಪೋಲ್ಗುಂ'; (ಹೀಗೆ) 'ವಾಕ್ಯೋಪಮೆಯುಂ ಎನ್ಗೆ.' ಇಲ್ಲಿ, ಒಟ್ಟಿನಲ್ಲಿ ಒಂದು ವಾಕ್ಯಾರ್ಥವನ್ನು ಇನ್ನೊಂದು ವಾಕ್ಯಾರ್ಥದೊಂದಿಗೆ ಹೋಲಿಸುವುದು 'ವಾಕ್ಯೋಪಮೆ.'

---

52 'ಆಲೋಲ . . . ವಿಲಸಿತಮುಂ': ಎರಡು ಮುದ್ರಿತ ಪ್ರತಿಗಳಲ್ಲಿಯೂ '. . . ವಿಲಸಿತಮಂ' ಎಂದೇ ಪಾಠವಿದೆ. ಇದು 'ಅಂಬುಜವನಂ' ಎಂಬ ಕರ್ಮಪದಕ್ಕೆ (ಉಪಮಾನ ವಿಶೇಷ್ಯಕ್ಕೆ) ವಿಶೇಷಣವಾಗಲು ಸಾಧ್ಯವಿಲ್ಲವಾದ್ದರಿಂದ, 'ವದನಂ' ಎಂಬ ಕರ್ತೃಪದಕ್ಕೆ (ಉಪಮೇಯ ವಿಶೇಷ್ಯಕ್ಕೆ) ವಿಶೇಷಣವಾಗಬೇಗು. ಆದಕಾರಣ '. . . ವಿಲಸಿತಮುಂ' ಎಂಬ ಸಣ್ಣ ತಿದ್ದುಪಾಟು ಅಗತ್ಯ.

[ಅರಳಿದ ತಾವರೆಯಲ್ಲಿ 'ಲೋಲವಿಲೋಚನ'ವನ್ನೂ 'ರಾಗಮಣಿ'ಯನ್ನೂ ಹೋಲುವ ತುಂಬಿ ಮತ್ತು ಕೇಸರ ಇರುವುದೆಂದು ಊಹಿಸಿಕೊಳ್ಳಬೇಕು. ಈ ಲಕ್ಷ್ಯಕ್ಕೆ ಸಂವಾದಿಯಾದ ದಂಡಿಯ ಲಕ್ಷ್ಯವು ವಾಕ್ಯಾರ್ಥಗಳ ಸಾದೃಶ್ಯದಲ್ಲಿ ಪರಿಪೂರ್ಣತೆಯನ್ನು ಹೊಂದಿದೆ:

ತ್ವದಾನನಮಧೀರಾಕ್ಷಮಾವಿರ್ದಶನದೀಧಿತಿ |
ಭ್ರಮದ್‌ಭೃಂಗಮಿವಾಲಕ್ಷ್ಯಕೇಸರಂ ಭಾತಿ ಪಂಕಜಂ ||—II, ೪೪.]

ಪದ್ಯ ೮೩ : **ಸಂಧಾನೋಪಮೆ** : (ಕಾವ್ಯಾದರ್ಶದಲ್ಲಿ ಇದು ಉಕ್ತವಾಗಿಲ್ಲ). (ಶ್ಲೇಷಾರ್ಥವುಳ್ಳ ಏಕರೂಪ ಪದಪ್ರಯೋಗದಿಂದ ಘಟಿತವಾದ ಸಾದೃಶ್ಯಾಭಾಸವುಳ್ಳ ಉಪಮಾನಗಳನ್ನು ಉಪಮೇಯದೊಂದಿಗೆ 'ಸಾಂಧಾನ' ಮಾಡುವುದು ಸಂಧಾನೋಪಮೆ—ಎಂದು ಇದರ ಲಕ್ಷಣವನ್ನು ವಿವರಿಸಬಹುದು.)

'ಕುಪಿತಾಕೃತಿ' (ಕುಪಿತ+ಆಕೃತಿ=ಕೋಪಗೊಂಡ ವ್ಯಕ್ತಿಯ ಆಕೃತಿ) ತರುತತಿಯವೋಲ್ **ವಿಪರೀತಂ** (೧. ವಿ.+ಪರೀತಂ=ಪಕ್ಷಿಗಳಿಂದ ಕೂಡಿದ್ದು; ೨. ಯಥಾಸ್ಥಿತಿಯಲ್ಲಿ ಇಲ್ಲದ್ದು); ಶುದ್ಧಭೂಮಿಯವೋಲ್ **ಅಪರಾಗಂ** (೧. ಅ + ಪರಾಗಂ=ಧೂಳು ಇಲ್ಲದ್ದು ; ೨. ಅಪ+ರಾಗಂ=ಪ್ರೇಮವಿಲ್ಲದ್ದು) ; ಪದ್ಮಿನಿವೋಲ್ **ಉಪಗತವಿಭ್ರಮರಹಿತಂ** (೧. ಸಂಚಲನವಿಲ್ಲದ್ದು, ಇದ್ದಕಡೆ ಇರುವದು ; ೨. ಸಹಜ ಸೌಂದರ್ಯವನ್ನು ಕಳೆದುಕೊಂಡದ್ದು.)

ಪದ್ಯ ೮೪ : **ಪ್ರತಿವಸ್ತೂಪಮೆ** : ['ವಸ್ತುಕಿಂಚಿದುಪನ್ಯಸ್ಯ ನ್ಯಸನಂ ತತ್ ಸಧರ್ಮಣಃ ಸಾಮ್ಯಪ್ರತೀತಿರಸ್ತೀತಿ ಪ್ರತಿವಸ್ತೂಪಮಾ'—ಕಾವ್ಯಾದರ್ಶ (II, ೪೬). 'ಯಾವುದಾದರೂ ಒಂದು ವಸ್ತುವನ್ನು ಕುರಿತು ಹೇಳಿ, ಅದಕ್ಕೆ ಸಮಾನವಾದ ಧರ್ಮವುಳ್ಳ ಇನ್ನೊಂದು ವಸ್ತುವನ್ನು (ಪ್ರತಿವಸ್ತುವನ್ನು) ತಿಳಿಸುವುದರ ಮೂಲಕ ಅವುಗಳ ನಡುವಣ ಸಾಮ್ಯವು ಪ್ರತೀತವಾಗುವುದು' ಪ್ರತಿವಸ್ತೂಪಮೆ.]

ಮಾರ್ಗಕಾರನ ಲಕ್ಷ್ಯ: 'ಧರಾಧಿಪಾ' (ರಾಜನೇ), 'ವಿತತ ಯಶನಿಲಯ ತಾರಾಪತಿ ದಿನಕರ ಸದೃಶ ತೇಜಂ ನಿನ್ನನ್ನಂ ಎಂಬುದುಂ ಉಂಟೇ' ('ವಿಶಾಲವಾದ ಕೀರ್ತಿಗೆ ನಿವಾಸನೂ, ಚಂದ್ರ

ಸೂರ್ಯರಿಗೆ ಸಮನಾದ ತೇಜಸ್ಸುಳ್ಳವನೂ ಆದ ನಿನ್ನಂಥವನು (ಒಬ್ಬ ನಿರುವನು) ಎಂದು ಹೇಳುವುದಕ್ಕಾದರೂ ಅವಕಾಶವಿದೆಯೆ ? '— ಚಂದ್ರಸೂರ್ಯಸಮತೇಜಸ್ಸುಳ್ಳ ಆ ಇನ್ನೊಬ್ಬ (ಕಾಲ್ಪನಿಕ) ವ್ಯಕ್ತಿಯೆ ಇಲ್ಲಿ 'ಪ್ರತಿವಸ್ತು.' ಇದರಿಂದ, ಮೊದಲು ಹೇಳಿದ ರಾಜನಲ್ಲಿರುವ ಆದೇ ಗುಣ (ತೇಜಸ್ಸು) ಪ್ರತೀತವಾಗಿದೆ.

ಪದ್ಯ ೮೫: **ಹೇತೂಪಮೆ:** 'ಹೇತು' ಎಂದರೆ ಕಾರಣ. ಉಪಮಾನೋಪಮೇಯಗಳ ಸಾದೃಶ್ಯಕ್ಕೆ ಕಾರಣಭೂತವಾದ ಸಮಾನ ಧರ್ಮವನ್ನು ಎತ್ತಿ ತೋರಿಸುವುದೇ 'ಹೇತೂಪಮೆ.'

ಧೈರ್ಯದಿಂದ (ಎಂದರೆ ಧೈರ್ಯವೇ ಕಾರಣವಾಗಿ) (ನೀನು ಸುರಗಿರಿಯ (=ಮೇರುವಿನ) ಹಾಗೆ; ತೇಜಸ್ಸಿನಿಂದ 'ಅಂಬರ ಮಣಿ'ಯ (=ಸೂರ್ಯನ) ಹಾಗೆ; 'ಬಂಧುರ ಕಾಂತಿಗುಣದಿಂ' (=ಮನೋಹರವಾದ ಕಾಂತಿಗುಣ ನಿಮಿತ್ತ) 'ಶಶಾಂಕಂಬೋಲ್' (=ಚಂದ್ರನ ಹಾಗೆ).

ಉಪಮಾಗುಣದೋಷಗಳು

ಪದ್ಯ ೮೬: 'ಮಾನಧನರ್' (=ಕಾವ್ಯ ರಚನೆಯಲ್ಲಿ ಮಾನಕ್ಕೆ ಬೆಲೆ ಕೊಡುವವರು), 'ಲಕ್ಷ್ಯಾಗಮದೊಳ್' (=ಲಕ್ಷಣಾನುಗುಣವಾಗಿ ಕೃತಿರಚನೆ ಮಾಡುವ ಶಾಸ್ತ್ರದಲ್ಲಿ), 'ಹೀನಾಧಿಕ ಗುಣದೋಷ ವಿತಾನಮುಮಂ' (=ಉಪಮಾನಗಳನ್ನು ಕೊಡುವುದರಲ್ಲಿ ಕೀಳು ಮೇಲು ಎಂಬ ಭೇದಕ್ಕೆ ಸಂಬಂಧಿಸಿದ ಗುಣದೋಷಗಳ ಕಲ್ಪನೆಯನ್ನೂ), 'ಲಿಂಗವಚನ ಭೇದಂಗಳುಮಂ', 'ಅನುಮಾನಕ್ಕ-ವಿರುದ್ಧಮಾಗೆ' (=ಯುಕ್ತಿಯುಕ್ತವಾಗಿ, ಊಹೆಗೆ ಮೀರದಂತೆ), 'ಅಱಿದು ಪೇೞ್ಗೆ.'

ಪದ್ಯ ೮೭: 'ನಿನ್ನಂತೆ ಸುರೇಶ್ವರಂ ಉತ್ಪನ್ನ ಮಹೈಶ್ವರ್ಯಂ', '(ನಿನ್ನಂತೆ) ಜಲನಿಧಿ ಸನ್ನುತ ಗಭೀರಂ'—ಎನ್ನುವಲ್ಲಿ 'ಹೀನಾಧಿಕ ಪ್ರಶಂಸೆ' ಗುಣಯುತವಾಗಿಯೆ ಇದೆ. ಯಾವಾಗಲೂ ಉಪ

ಮಾನವು ಗುಣದಲ್ಲಿ ಅಧಿಕ. ಆದ್ದರಿಂದ, ರಾಜನು ಉಪಮೇಯ. ಆದರೆ, ಇಲ್ಲಿ, ಉಪಮಾನೋಪಮೇಯಗಳಲ್ಲಿ ವಿಪರ್ಯಯವಾಗಿ, 'ಅಧಿಕ'ವಾದದ್ದನ್ನು 'ಹೀನ'ಕ್ಕೆ ಹೋಲಿಸಲಾಗಿದೆ. ಹೀಗಿದ್ದರೂ, ಗುಣಾಧಿಕ್ಯವುಳ್ಳ ಸುರೇಶ್ವರ ಜಲನಿಧಿಗಳಿಗೆ ಹೀನತ್ವ ಪ್ರಾಪ್ತಿಯಾಗಿಲ್ಲ. ರಾಜನ ಐಶ್ವರ್ಯ ಗಾಂಭೀರ್ಯಗಳು ಪ್ರಕಾಶಗೊಂಡಿವೆಯಷ್ಟೆ. ಆದ್ದರಿಂದ, 'ಹೀನಾಧಿಕ ಪ್ರಶಂಸೆ'ಯಲ್ಲಿ ಇದು ಗುಣಭಾಗಕ್ಕೆ ಉದಾಹರಣೆ.

ಪದ್ಯ ೮೮ : 'ಕೊಳದಂತೆ ಅಂಬರಂ (ಆಕಾಶವು) ಅತಿ ನಿರ್ಮಳಂ; ಇಳೆಯೊಳ್ ಈತಂ ನಾಯ್ವೋಲ್ ಕರಂ ಎಂದುಂ ಸ್ವಾಮಿಭಕ್ತಂ.'— ಇಲ್ಲಿ ಉಪಮಾನಗಳು ಉಪಮೇಯಗಳಿಗಿಂತ ಗುಣದಲ್ಲಿ 'ಹೀನ' ವಾಗಿರುವುದರಿಂದ ಅವುಗಳ ಹೀನತ್ವ ಉಪಮೇಯಗಳಿಗೂ ಪ್ರಾಪ್ತ ವಾಗಿದೆ. ಆದ್ದರಿಂದ, 'ಹೀನಾಧಿಕ ಪ್ರಶಂಸೆ'ಯಲ್ಲಿ ಇದು ದೋಷ ಯುಕ್ತವಾದ ಉಪಮೆ.

ಪದ್ಯ ೮೯ : ಉಪಮಾಪ್ರಯೋಗದಲ್ಲಿ ಲಿಂಗವಚನಗಳಿಗೆ ಸಂಬಂಧಪಟ್ಟಂತೆ ಹೀನಾಧಿಕತೆಯ ದೋಷವುಂಟಾಗದೆಂದು ದಂಡಿ ಹೇಳಿ, ಲಕ್ಷ್ಯ ವನ್ನು ಕೊಟ್ಟಿದ್ದಾನೆ. ಮಾರ್ಗಕಾರನು ದಂಡಿಯ ಲಕ್ಷ್ಯವನ್ನು ಮಾತ್ರ ಭಾಗಶಃ ಅನುವಾದಮಾಡಿ ಕೊಟ್ಟಿದ್ದಾನೆ.

ದಂಡಿಯ ಲಕ್ಷಣ ವಿವರಣೆ :

ನ ಲಿಂಗವಚನೇ ಭಿನ್ನೇ ನ ಹೀನಾಧಿಕತಾಪಿ ವಾ |
ಉಪಮಾದೂಷಣಾಯಾಲಂ ಯತ್ರೋದ್ವೇಗೋ ನ ಧೀಮತಾಂ ||

—II, ೫೧.

ಅತಿಶಯೋಕ್ತಿ

ಪದ್ಯ ೯೧ :'ವಿಶೇಷ ವಿಚಾರಮಂ ಮೇರೆಗಳೆದಿರೆ ಅಧಿಕೋಕ್ತಿಯೊಳ್, ತಗುಳ್ಚುವುದು ಅಕ್ಕುಂ ಸಾರತರಂ ಅತಿಶಯಾಲಂಕಾರಂ.'

ದಂಡಿಯ ಮೂಲ ಶ್ಲೋಕ :

ವಿವಕ್ಷಾ ಯಾ ವಿಶೇಷಸ್ಯ ಲೋಕಸೀಮಾತಿವರ್ತಿನೀ |
ಅಸಾವತಿಶಯೋಕ್ತಿಃ ಸ್ಯಾದಲಂಕಾರೋತ್ತಮಾ ಯಥಾ ||—II, ೨೧೪.

ಅತಿಶಯೋಕ್ತಿಯಲ್ಲಿ ಒಂದು 'ವಿಶೇಷ ವಿಚಾರ'ವನ್ನು 'ಮೇರೆ ಗಳೆದಿರೆ ('ಲೋಕಸೀಮಾತಿವರ್ತಿನಿ'ಯಾಗಿ, ಎಂದರೆ ಲೋಕದ ಸಂಭಾವ್ಯತೆಯ ಮೇರೆಯನ್ನು ಮೀರಿ) 'ಅಧಿಕೋಕ್ತಿಯೊಳ್ ತಗುಳ್ಚುವುದು' ಎಂದರೆ (ವಾಸ್ತವವಾಗಿ ಇರವುದನ್ನೇ ಹೆಚ್ಚು ಮಾಡಿ ಹೇಳುವುದು 'ಅತಿಶಯೋಕ್ತಿ' ಎನಿಸುವುದು. ಎಂದಮೇಲೆ, ಇದರಲ್ಲಿ ಪ್ರಕೃತವೊಂದರ ವರ್ಣನೆಯಿರುತ್ತದೆಯೆ ಹೊರತು ಅಪ್ರಕೃತದ ಪ್ರಸಕ್ತಿಯಿರುವುದಿಲ್ಲ; 'ಸ್ವಭಾವಾಖ್ಯಾನ'(III, ೬-೧೦) ಪ್ರಕಾರಗಳನ್ನೆ 'ಅತಿಶಯ' ರೀತಿಯಲ್ಲಿ ವರ್ಣಿಸುವುದೇ ಅತಿಶಯೋಕ್ತಿಯಾಗುತ್ತದೆ. ಈ ಅಲಂಕಾರವನ್ನು ದಂಡಿ 'ಅಲಂಕಾರೋತ್ತಮಾ' ಎಂದು ಕರೆದಿರುವುದನ್ನೆ ಮಾರ್ಗಕಾರನು ಬೇರೆಯ ಮಾತುಗಳಲ್ಲಿ 'ಕಾಂತಾಂತಿಕಂ'(III, ೯೦) ಎಂದೂ, 'ಸಾರತರಂ' ಎಂದೂ ಹೊಗಳಿದ್ದಾನೆ. ಎಂದರೆ, ಅಲಂಕಾರಗಳಲ್ಲೆಲ್ಲಾ ಇದು ಶ್ರೇಷ್ಠ ಎಂದು ಅರ್ಥವಾಗುತ್ತದೆ. ಇದು ವಿಚಾರಾರ್ಹವಾದ ಅಂಶ.

ಪದ್ಯ ೯೨: ಇದು ಅತಿಶಯೋಕ್ತಿಯ ಉದಾಹರಣೆ; ಮಾರ್ಗಕಾರನ ಸ್ವಂತ ಲಕ್ಷ್ಯ ಪದ್ಯ. ಇದರಲ್ಲಿ ಮಾರ್ಗಕಾರನು ಸಂಧ್ಯಾಕಾಲದ ಸನ್ನಿವೇಶವೊಂದನ್ನು ವರ್ಣಿಸಿ ತನ್ನ ಸ್ವೋಪಜ್ಞತೆಯನ್ನು ಪ್ರದರ್ಶಿಸಿದ್ದಾನೆ. ಲಕ್ಷ್ಯದ ಅರ್ಥ: "ಗೈರಿಕರಸಾರ್ದ್ರಮುಂ, ಸಿಂದೂರದೆ ತಲೆವಟ್ಟುದುದಂ ಮದವಾರಣಮುಂ" [=ಬೆಟ್ಟಗಳಲ್ಲಿರುವ 'ಗೈರಿಕ' (ಗಿರಿ ಸಂಬಂಧವಾದದ್ದು ಗೈರಿಕ) ಎಂಬ ಕೆಂಪು ಧಾತುವಿನಿಂದ (Red chalk) (ಮೈಯೆಲ್ಲ) ತೊಯ್ದಿರುವದೂ, ಸಿಂದೂರವನ್ನು ('ಚಂದ್ರ'ವನ್ನು) ತಲೆಗೆಲ್ಲ ಬಳಿದಿರುವಂಥದೂ ಆದ ಮದಿಸಿದ ಆನೆಯನ್ನು], "ಆಂ ಸಂಧ್ಯಾರಾಗದೊಳ್ ಕರಂ ಕಂಡು ಅಱಿಯದೆ, ಸೋಂಕಿ, ಕೆಲದೊಳ್ ಒಯ್ಯನೆ ಪೋದೆಂ" [=ನಾನು ಸಂಜೆಗೆಂಪಿನಲ್ಲಿ ಚೆನ್ನಾಗಿ ಕಂಡು (ಅದನ್ನು ಆನೆಯೆಂದು) ಅರಿಯದೆ, ಸೋಕಿಕೊಂಡು ಅದರ ಪಕ್ಕದಲ್ಲಿ ಮೆಲ್ಲನೆ ಹೋದೆನು].

ಸಂಜೆಗೆಂಪಿನಲ್ಲಿ, ಬೆಟ್ಟದ ತಪ್ಪಲಿನಲ್ಲಿ, ಒಬ್ಬ ವ್ಯಕ್ತಿ ಒಂದು

ಮದ್ದಾನೆಯನ್ನು ಸಂಧಿಸುತ್ತಾನೆ. ಅದು ಬೆಟ್ಟದ ತಪ್ಪಲಿನಲ್ಲಿ ವಿಹರಿಸುತ್ತಿದ್ದದ್ದರಿಂದ ಅಲ್ಲಿನ ಗೈರಿಕಧಾತುಮಿಶ್ರಿತವಾದ ಝರಿಯ ನೀರಿನಿಂದ ಅದರ ಮೈಯೆಲ್ಲ ತೊಯ್ದು, ತತ್ಪರಿಣಾಮವಾಗಿ ಕೆಂಪಾಗಿದೆ, ಅದರ ತಲೆ ಚಂದ್ರದಿಂದ ಲೇಪಿತವಾಗಿದೆ. ಇದು ಪಳಗಿಸಿದ ಆನೆಯೇ ಇರಬಹುದು. (ಮದವೇರಿ ಮದೋದಕ ಸುರಿಯುವ ಆನೆಯ ಕುಂಭಸ್ಥಲಕ್ಕೆ ಚಂದ್ರವನ್ನು ಬಳಿಯುವ ರೂಢಿಯುಂಟು ಎಂದು ಕವಿಸಮಯ). ಆ ವ್ಯಕ್ತಿ ಆನೆಯ ಪಕ್ಕದಲ್ಲಿಯೇ ಹೋದರೂ ಆನೆಯೆಂದು ಅರಿಯನು. ಆನೆಯನ್ನು ಬೆಟ್ಟವೆಂದೂ, ಅದರ ಮೈಗೆಂಪನ್ನು ಸಂಧ್ಯಾರಾಗವೆಂದೂ ಭ್ರಮಿಸಿದ್ದಾನೆ. ಈ ಭ್ರಮೆಗೆ ಕಾರಣ, ಎಲ್ಲೆಲ್ಲೂ ಹರಡಿದ್ದ 'ಅತಿಶಯ'ವಾದ ಸಂಜೆಗೆಂಪು. ಆನೆಯ ತಲೆಮೈಗಳ ಕೆಂಪು ಸಂಧ್ಯಾರಾಗದಲ್ಲಿ ಬೆರೆತು ಎರಡಕ್ಕೂ ಇದ್ದ ಭೇದ ತಟ್ಟನೆ ಅರಿವಿಗೆ ಬಾರದ್ದರಿಂದಲೇ ಆತ ಆನೆಯನ್ನೂ ಬೆಟ್ಟದ ತಪ್ಪಲೆಂದೇ ಭ್ರಮಿಸಿದ. ಈ ಸಕಾರಣವಾದ ಅಸಂಭವ ಘಟನೆಯ ನಿರೂಪಣೆಯಿಂದ ಸಂಜೆಗೆಂಪಿನ ಅತಿಶಯತೆಯನ್ನೆ ವರ್ಣಿಸಿದಂತಾಗಿದೆ.

ಪದ್ಯ ೯೩-೯೪ : ಇವು ಕೂಡ 'ಅತಿಶಯೋಕ್ತಿ'ಯ ಅಲಂಕಾರಕ್ಕೆ ನಿದರ್ಶನಗಳು. ೯೩ನೆಯ ಪದ್ಯದಲ್ಲಿ ಬೆಳುದಿಂಗಳಿನ ಅತಿಶಯತೆಯನ್ನೂ ೯೪ನೆಯ ಪದ್ಯದಲ್ಲಿ (ಒಬ್ಬ ರಾಜವ್ಯಕ್ತಿಯ, ಬಹುಶಃ ನೃಪತುಂಗನ) ಯಶೋರಾಶಿಯ ಅತಿಶಯತೆಯನ್ನೂ ವರ್ಣಿಸಲಾಗಿದೆ. ಇವೆರಡೂ ದಂಡಿಯ ಲಕ್ಷ್ಯ ಪದ್ಯಗಳನ್ನು ಅನುಸರಿಸಿವೆ.

ಮಲಯಜ ಚರ್ಚಿತೆ=ಶ್ರೀಗಂಧವನ್ನು (ಮೈಗೆ) ಬಳಿದುಕೊಂಡಿರುವವಳು. ಧವಳಾಭರಣೆ=ಬಿಳಿಯೊಡವೆಯನ್ನು ತೊಟ್ಟಿರುವವಳು. ದುಕೂಲಾಂಬರೆ=ರೇಷ್ಮೆಯ ಬಟ್ಟೆಯನ್ನು ಧರಿಸಿದವಳು. ಜ್ಯೋತ್ಸ್ನಾವಿಲಾಸ=ಬೆಳುದಿಂಗಳ ಸೊಬಗು. ಆಶಾವಳಯಿತ ಲೋಕಾಕಾಶಂ=ದಿಕ್ಕುಗಳಿಂದ ಸುತ್ತುವರಿಯಲ್ಪಟ್ಟ ಲೋಕಾಕಾಶ. (ವಿಶಾಲಂ ಭುವನತ್ರಿತಯೋದರಂ' ಎಂದು ದಂಡಿ ಹೇಳಿರುವುದನ್ನು 'ಲೋಕಾ

ಕಾಶಂ ಇದೇನತಿ ವಿಶಾಲವೋ' ಎಂದು ಮಾರ್ಗಕಾರನು ಮಾರ್ಪಡಿಸಿರುವುದು ಜೈನ ಮತಾನುಸಾರಿಯಾಗಿದೆ).[53] ಇಂದುದ್ಯುತಿ=ಚಂದ್ರಕಾಂತಿ. ನಿಕಾಶ=ಹೋಲುವ, ಸಮನಾದ. ಅಳವಿಗಟಾ=ಮಿತಿಮೀರು.

ಸದೃಶಯೋಗಿತಾ

ಪದ್ಯ ೯೫: ಲಕ್ಷಣ ನಿರೂಪಣೆಯ ಈ ಪದ್ಯವು ಬಹುಮಟ್ಟಿಗೆ ದಂಡಿಯ ಶ್ಲೋಕವನ್ನೇ ಅನುಸರಿಸಿದೆ. ವ್ಯತ್ಯಾಸವೆಂದರೆ, ದಂಡಿ ಈ ಅಲಂಕಾರವನ್ನು 'ತುಲ್ಯಯೋಗಿತಾ' ಎಂದು ಕರೆದಿದ್ದಾನೆ. ಪದ್ಯದ ತಾತ್ಪರ್ಯ: ಸ್ತುತಿಸುವ ಇಲ್ಲವೆ ನಿಂದಿಸುವ ಮೂಲಕ (ಒಂದು ವಸ್ತುವಿನ ಇಲ್ಲವೆ ವ್ಯಕ್ತಿಯ, ಎಂದರೆ 'ಪ್ರಕೃತ'ದ) ವಿವಕ್ಷಿತ ಗುಣವನ್ನು ಇನ್ನೊಂದರಲ್ಲಿ (ಎಂದರೆ ಅಪ್ರಕೃತದಲ್ಲಿ) ಸದೃಶವಾಗಿರುವಂತೆ ('ಸಮೀಕೃತ್ಯ'=ಸಮೀಕರಿಸಿ) ಹೇಳುವುದು ಸದೃಶಯೋಗಿತಾಲಂಕಾರ. (ಈ ಅಲಂಕಾರದಲ್ಲಿ ಪ್ರಕೃತಾಪ್ರಕೃತಗಳ ನಡುವೆ ಗುಣೈಕ್ಯವನ್ನು ಅಥವಾ ಧರ್ಮೈಕ್ಯವನ್ನು ಹೇಳುವುದರಿಂದ ಇದು 'ಧರ್ಮೋಪಮೆ' ಎಂಬ ಉಪಮಾಭೇದವನ್ನೇ ಹೋಲುತ್ತದೆ. ಬಹುಶಃ ಇದನ್ನು ಮನಗಂಡೇ ಮಾರ್ಗಕಾರನು ಮುಂದಿನ ೯೬ನೆಯ ಪದ್ಯದಲ್ಲಿ, "ಉಪಮಾಭೇದಗಳ ಉಕ್ತಿಕ್ರಮಗಳು ಪ್ರಯೋಗಗಳಿಗೆ ಅನುಗುಣವಾಗಿ ಅಪರಿಮಿತವಾದ ನಿರೂಪಣ ವಿಧಾನಗಳಿಂದ ಉಪ

---

53 ಜೀವಾದಿ ಪದಾರ್ಥಗಳನ್ನು ತನ್ನೊಳಗೆ ಇಟ್ಟುಕೊಂಡುದು ಆಕಾಶವು ; ಪಾಶ್ಚಾತ್ಯ ಶಾಸ್ತ್ರಜ್ಞರ ಸ್ಪೇಸ್ ಶಬ್ದವು ಹೇಳುವ ಅರ್ಥವನ್ನೇ ಆಕಾಶ ಶಬ್ದವು ಹೇಳುವುದು. ಆಕಾಶವು ನಿತ್ಯವೂ ವ್ಯಾಪಕವೂ ಜೀವ, ಪುದ್ಗಲ, ಧರ್ಮ, ಅಧರ್ಮ, ಕಾಲ ಇವುಗಳ ಆಶ್ರಯವೂ ಆಗಿದೆ. ಜೈನರು ಆಕಾಶದಲ್ಲಿ ಲೋಕಾಕಾಶವೆಂದೂ ಅಲೋಕಾಕಾಶವೆಂದೂ ಎರಡು ಭಾಗಗಳನ್ನು ಹೇಳುವರು. ಲೋಕಾಕಾಶದ ಸುತ್ತಲೂ ಅನಂತವೂ ಶೂನ್ಯವೂ ಆದ ಅಲೋಕಾಕಾಶವುಂಟು. ಪದಾರ್ಥಗಳ ಪರಿವರ್ತನಕ್ಕೆ ಸಹಾಯವಾದ ಅಜೀವ ತತ್ತ್ವವು ಕಾಲವೆನಿಸುವುದು. ಕಾಲವು ನಿತ್ಯವೂ ಅಮೂರ್ತವೂ ಲೋಕಾಕಾಶ ಪರಿಪೂರ್ಣವೂ ಅಸಂಖ್ಯವೂ ಆದುದು." —(ಶ್ರೀ. ಮ. ಪ್ರ. ಪೂಜಾರ: 'ಜೈನಧರ್ಮ ಪರಿಭಾಷೆ', ಪು. ೧೧).

ಲಕ್ಷಿತಗಳಾಗಿವೆ. ಬಲ್ಲವನು ನೃಪತುಂಗ ದೇವಮತದಂತೆ ಹೇಳಿರುವ ಆ ಉಪಮಾಭೇದ (ಲಕ್ಷಣ)ಗಳಿಂದ ಅವು ಯಾವ ಪ್ರಕಾರದವೆಂಬುದನ್ನು ನಿಶ್ಚಯಿಸಿಕೊಳ್ಳಬೇಕು ('ತಱಿಸಲ್ಗೆ') "—ಎಂದು ಈ ಅಲಂಕಾರಕ್ಕೂ ಅನ್ವಯಿಸುವಂತೆ ಉಪಸಂಹಾರ ವಾಕ್ಯವನ್ನು ನುಡಿದಿದ್ದಾನೆ.

ಪದ್ಯ ೯೬: ಈ ಪದ್ಯದಲ್ಲಿ ಒಬ್ಬ ರಾಜನನ್ನು (ಬಹುಶಃ ನೃಪತುಂಗನನ್ನು) ಕುರಿತು, 'ಅಷ್ಟದಿಕ್ಪಾಲಕರಂತೆ ನೀನು ಒಬ್ಬ ಲೋಕಪಾಲಕ; ನೀನು ಒಂಬತ್ತನೆಯ ಲೋಕಪಾಲಕ' ಎಂದು ಸ್ತುತಿಸಿ, ದಿಕ್ಪಾಲಕರಲ್ಲಿಯೂ ಆತನಲ್ಲಿಯೂ 'ಲೋಕಪಾಲಕ'ತ್ವ ಎಂಬ ಗುಣದಲ್ಲಿ ಕಂಡುಬರುವ 'ಸಾದೃಶ್ಯಯೋಗ'ವನ್ನು (ಸಾಮ್ಯ ಸಂಬಂಧವನ್ನು) ತಿಳಿಸಿದೆ. (ದಂಡಿ ನಾಲ್ವರು ದಿಕ್ಪಾಲಕರನ್ನು ಮಾತ್ರ ಹೆಸರಿಸಿದ್ದಾನೆ). ಹುತವಹ=ಅಗ್ನಿ. ಯಕ್ಷ=ಕುಬೇರ.

ಪದ್ಯ ೯೭: 'ಮೋಡದ ನೆರಳೂ ಹರಹೂ ವಿಲಾಸವೂ, (ಅಂತೆಯೆ) ಬೆಳಗುವ ಉದಿತ (=ಹುಟ್ಟಿದ) ವಿದ್ಯುಲ್ಲತೆಯೂ (=ಮಿಂಚೂ), ಹಾಗೂ ವಿಲಾಸಿನೀ ಜನದ (=ವಿಲಾಸವತಿಯರಾದ ಸ್ತ್ರೀ ಜನದ) ನಲ್ಮೆಯೂ ಸಂಗಮುವೂ (=ಕೂಟವೂ) ನೆಲಸವು (=ಸ್ಥಿರವಾಗಿರತಕ್ಕವಲ್ಲ), ಆದಂ (=ಬಹುವಾಗಿ) ಚಲಂಗಳ್ (=ಚಲಿಸತಕ್ಕವು, ಹೊರಟು ಹೋಗತಕ್ಕವು).' ಇಲ್ಲಿ ಮೋಡದ ನೆರಳು, ಮಿಂಚು, ವಿಲಾಸವತಿಯರ ಪ್ರೇಮ—ಇವುಗಳಿಗೆ ಸದೃಶವಾಗಿರುವ ಚಾಂಚಲ್ಯ ಗುಣವನ್ನು ನಿಂದಾತ್ಮಕವಾಗಿ ತಿಳಿಸಿದೆ. (ಈ ಪದ್ಯವೂ ದಂಡಿಯ ಶ್ಲೋಕದ ಅನುವಾದ.)

ಆಕ್ಷೇಪಾಲಂಕಾರ

ಪದ್ಯ ೯೮: 'ವಿದಿತ ಅರ್ಥವಿಪರ್ಯಾಸಾಸ್ಪದಮೆ ದಲ್ ಆಕ್ಷೇಪಮೆಂಬ ಅಳಂಕಾರಂ.'–ಪ್ರಸಿದ್ಧವಾದ ಅರ್ಥವನ್ನು ವಿರೋಧಿಸುವುದು ಅಥವಾ ಅಲ್ಲಗಳೆಯುವುದು 'ಆಕ್ಷೇಪಾಲಂಕಾರ'. ನಿತ್ಯದ ಬಳಕೆ ಮಾತಿ

ನಲ್ಲಿಯೂ 'ಆಕ್ಷೇಪ' ವೆಂಬ ಪದಕ್ಕೆ 'ವಿರೋಧವನ್ನು ಸೂಚಿಸುವುದು' ಎಂಬ ಅರ್ಥವುಂಟಷ್ಟೆ. ಆಕ್ಷೇಪ ಎಂಬ ಪದದ ಅರ್ಥವಾದರೂ 'ಇಲ್ಲವೆನ್ನುವುದು' ಅಥವಾ 'ನಿರಾಕರಣೆ'. ಇದನ್ನೇ 'ಪ್ರತಿಷೇಧೋಕ್ತಿರಾಕ್ಷೇಪಃ' ಎಂದು ದಂಡಿ ಸಂಕ್ಷೇಪವಾಗಿ ಹೇಳಿದ್ದಾನೆ.[54]

ಪದ್ಯ ೧೦೦ : **ವೃತ್ತಾಕ್ಷೇಪ:** 'ಮದನಶರಾನೀಕಂ' (= ಮದನಬಾಣ ಸಮೂಹವು), ಮೃದುತರ ಮಾರ್ಗದೆ (= ಅದು ಪುಷ್ಪಬಾಣ

---

54 'ವೃತ್ತಾಕ್ಷೇಪ', 'ಅನುಶಯಾಕ್ಷೇಪ', 'ಶ್ಲೇಷಾಕ್ಷೇಪ', 'ಉಪಮಾಕ್ಷೇಪ', 'ಸಂಶಯಾಕ್ಷೇಪ', 'ಹೇತ್ವಾಕ್ಷೇಪ'—ಎಂಬಿವು ಮಾರ್ಗಕಾರನು ದಂಡಿಯನ್ನು ಅನುಸರಿಸಿ ಹೇಳಿರುವ 'ಆಕ್ಷೇಪ'ದ ಕೆಲವು ಒಳಭೇದಗಳು. ತ್ರಿಕಾಲವನ್ನು ಅನುಸರಿಸಿ ದಂಡಿ 'ವೃತ್ತಾಕ್ಷೇಪ', 'ವರ್ತಮಾನಾಕ್ಷೇಪ', 'ಭವಿಷ್ಯದಾಕ್ಷೇಪ', ಎಂದು ಮೂರು ಭೇದಗಳನ್ನು ಹೇಳಿದ್ದಾನೆ. ಇವಲ್ಲದೆ, ದಂಡಿಯು ನಿರೂಪಿಸಿರುವ ಇತರ ಭೇದಗಳು ಇವು: 'ಧರ್ಮಾಕ್ಷೇಪ', 'ಧರ್ಮ್ಯಾಕ್ಷೇಪ', 'ಕಾರಣಾಕ್ಷೇಪ', 'ಕಾರ್ಯಾಕ್ಷೇಪ', 'ಅನುಜ್ಞಾಕ್ಷೇಪ', 'ಪ್ರಭುತ್ವಾಕ್ಷೇಪ', 'ಅನಾದರಾಕ್ಷೇಪ', 'ಆಶೀರ್ವಚನಾಕ್ಷೇಪ', 'ಪರುಷಾಕ್ಷೇಪ', 'ಸಾಚಿವ್ಯಾಕ್ಷೇಪ', 'ಯತ್ನಾಕ್ಷೇಪ', 'ಪರವಶಾಕ್ಷೇಪ', 'ಉಪಾಯಾಕ್ಷೇಪ', 'ರೋಷಾಕ್ಷೇಪ', 'ಸಾನುಕ್ರೋಶಾಕ್ಷೇಪ', 'ಅನುಶಯಾಕ್ಷೇಪ', 'ಶ್ಲಿಷ್ಟಾಕ್ಷೇಪ', 'ಸಂಶಯಾಕ್ಷೇಪ', 'ಅರ್ಥಾಂತರಾಕ್ಷೇಪ', 'ಹೇತ್ವಾಕ್ಷೇಪ'. ಇವುಗಳ ಲಕ್ಷ್ಯಲಕ್ಷಣಗಳನ್ನು ವಿವರಿಸಿಯಾದಮೇಲೆ, 'ಅನಯೈವ ದಿಶಾನ್ಯೇಪಿ ವಿಕಲ್ಪಾಃ ಶಕ್ಯಮೂಹಿತುಂ' (ಇದೇ ರೀತಿಯಲ್ಲಿ ಇತರ ಪ್ರಕಾರಾಂತರಗಳನ್ನೂ ಊಹಿಸಿಕೊಳ್ಳುವುದು ಸಾಧ್ಯ) ಎಂದು ಆ ಕಾರ್ಯವನ್ನು ನಮಗೇ ಬಿಟ್ಟಿದ್ದಾನೆ!

ಮೇಲಿನ 'ಆಕ್ಷೇಪಚಕ್ರ' ದಿಂದ ಕೆಲವನ್ನು ಮಾತ್ರ ಆಯ್ದುಕೊಂಡಿರುವುದು ಮಾರ್ಗಕಾರನ ವಿವೇಕಕ್ಕೆ ನಿದರ್ಶನ.

ಮಾರ್ಗಕಾರನು ಸ್ವತಂತ್ರಾಲೋಚನೆಯನ್ನೂ ಮಾಡಬಲ್ಲನೆಂಬುದಕ್ಕೆ, ಮುಂದೆ (೧೦೬ನೆಯ ಪದ್ಯದಲ್ಲಿ) 'ಆಕ್ಷೇಪ' ವನ್ನು ಕುರಿತು 'ವ್ಯತಿರೇಕ ವಿಕಲ್ಪಮಿದು' ಎಂದು ನುಡಿದಿರುವುದು ಸ್ಪಷ್ಟಸಾಕ್ಷಿ. ಅಥವಾ, ಅವನೇ ಸೂಚಿಸುವಂತೆ, 'ನೃಪತುಂಗ ದೇವಾನುಮತ' ದಿಂದ ಮಾಡಿದ ನಿರ್ಣಯ ಎಂದೆಣಿಸಿದರೂ ಪ್ರತ್ಯವಾಯವಿಲ್ಲ.

ಸಮೂಹವಾದ್ದರಿಂದ, ಬಹು ಮೃದುವಾದ ರೀತಿಯಲ್ಲಿ) ಕೆನ್ನಂ (=ವಿಶೇಷವಾಗಿ, ಹೆಚ್ಚಾಗಿ) ಒಯ್ಯನೆ ಒಲವಂ ಪಡೆಗುಂ; ಹೃದಯಮಂ ಅಱಲಳವಿಂದೆ[55] (= ದುಃಖದ ಬಲದಿಂದ) ಉಱೆ (=ಹೆಚ್ಚಾಗಿ) ವಿದಾರಿಸುವುದು (=ಸೀಳುವುದು, ಭೇದಿಸುವುದು); ಅದಱಿಂ ಕುಸುಮಮಯಮಲ್ತು'.

ಇದು ದಂಡಿ ಕೊಟ್ಟಿರುವ 'ವೃತ್ತಾಕ್ಷೇಪ' ದ ಲಕ್ಷ್ಯದಿಂದ ಕೆಲ ಮಟ್ಟಿಗೆ ಭಿನ್ನವಾಗಿದೆ. ಮೃದುವಾದ ರೀತಿಯಲ್ಲಿ ಒಲವನ್ನು ಪಡೆಯುವ ಮನ್ಮಥಬಾಣವು ಹೂವಿನದಲ್ಲ ಎಂಬ 'ಆಕ್ಷೇಪ' ಕ್ಕೆ ಮಾರ್ಗಕಾರನು ಕೊಟ್ಟಿರುವ ಕಾರಣವಿವರಣೆ ಹೆಚ್ಚಿನದು. ಅಲ್ಲದೆ, ದಂಡಿಯ ಲಕ್ಷಣವಿವರಣೆಗೆ ಇದು ಅನುಗುಣವಾಗಿಲ್ಲ.

ಪದ್ಯ ೧೦೧: **ಅನುಶಯಾಕ್ಷೇಪ:** ಇಲ್ಲಿ ಒಬ್ಬ ವ್ಯಕ್ತಿ (ಬಹುಶಃ ವೃದ್ಧ) ತನ್ನ ಜೀವಿತಕಾಲದಲ್ಲಿ ಧನವನ್ನು ಗಳಿಸದೆ, ವಿದ್ಯಾಧನವನ್ನು ಗಳಿಸದೆ, ತಪಸ್ಸನ್ನಾದರೂ ಮಾಡದೆ, 'ಮನುಜತ್ವಮಫಲಮಾಯ್ತು' (ತಾನು ಮನುಷ್ಯನಾಗಿ ಹುಟ್ಟಿದ್ದು ವ್ಯರ್ಥವಾಯಿತು) ಎಂದು ಪಶ್ಚಾತ್ತಾಪ ಪಡುವುದನ್ನು ವರ್ಣಿಸುವ ಮೂಲಕ ಧನಾರ್ಜನೆ ಮುಂತಾದ ಸಫಲ ಕಾರ್ಯಗಳನ್ನು ಮಾಡದಿರುವುದನ್ನು 'ಆಕ್ಷೇಪ' ಮಾಡಿದೆ. 'ಅನುಶಯ' ಎಂದರೆ ಕೊರಗು, ಪಶ್ಚಾತ್ತಾಪ. (ಈ ಪದ್ಯ ದಂಡಿಯ ಲಕ್ಷ್ಯದ ಅನುವಾದ).

ಪದ್ಯ ೧೦೨: **ಶ್ಲೇಷಾಕ್ಷೇಪ:** ಈ ಪದ್ಯದಲ್ಲಿ ಶ್ಲೇಷೆಯ ಮೂಲಕ ಚಂದ್ರನಿಗೂ ಮುಖಚಂದ್ರಕ್ಕೂ ಇರುವ ಸಾಮ್ಯವನ್ನು ತಿಳಿಸಿ, 'ತ್ವದೀಯ

---

55 'ಅಱಲಳವಿಂದೆ': 'ಅಳವಳವಿಂದೆ' ಎಂದು ಪಾಠಕರ ಪ್ರತಿಯಲ್ಲಿಯೂ, 'ಅಳವಳಲಿಂದೆ' ಎಂದು ಮದ್ರಾಸಿನ ಮುದ್ರಣದ ಪ್ರತಿಯಲ್ಲಿಯೂ ಪಾಠಾಂತರಗಳಿವೆ. ಎರಡೂ ಅಶುದ್ಧಗಳೆಂಬ ಗ್ರಹಿಕೆಯಿಂದ, 'ಅಱಲಳವಿಂದುಱೆ' ಎಂದು ಪ್ರಕೃತ ಮುದ್ರಣದಲ್ಲಿ ತಿದ್ದುಪಾಟು ಮಾಡಿದೆ. 'ಅದಮಱಲಿಂದುಱೆ' ಎಂದಿರಬಹುದೆ?

(=ನಿನ್ನ) ಮುಖಶಶಿಯಿರುವಾಗ ಶಶಿಯದೇವುದು' (=ಶಶಿಯಿಂದ ಪ್ರಯೋಜನವೇನು ?) ಎಂದು ಚಂದ್ರನ ಅಸ್ತಿತ್ವವನ್ನು 'ಆಕ್ಷೇಪ' ಮಾಡಿದೆ. (ದಂಡಿಯ ಶ್ಲೋಕಕ್ಕೂ ಇದಕ್ಕೂ ಸ್ವಲ್ಪ ವ್ಯತ್ಯಾಸ ವಿದೆ. ಅಲ್ಲಿನ 'ತಾರಕಾ'-ನಕ್ಷತ್ರ ಹಾಗೂ ಕಣ್ಣುಗುಡ್ಡೆ-ಎಂಬ ಶ್ಲೇಷಾರ್ಥಕ ಪದದ ಎಡೆಯಲ್ಲಿ 'ಕಾಂತಿ' ಎಂಬ ಮಾತು ಇಲ್ಲಿದೆ.)

ಸರಸಿಜ ವಿರೋಧಿ=೧. ಚಂದ್ರ: ಕಮಲವೈರಿ; ೨. ಮುಖ ಚಂದ್ರ: ಕಮಲ ಸ್ಪರ್ಧಿ. ಕಾಂತ್ಯಾಕರ (ಕಾಂತಿ + ಆಕರ) = ೧. ಚಂದ್ರ: ಪ್ರಕಾಶದ ಮೂಲ; ೨. ಮುಖಚಂದ್ರ: ಸೌಂದರ್ಯ ಮೂಲ. ಅಮೃತಮಯಂ=೧. ಚಂದ್ರ: ಅಮೃತದಿಂದ ತುಂಬಿ ದವನು, ಸುಧಾಪೂರ್ಣ; ೨. ಮುಖಚಂದ್ರ: ಅಮೃತಕ್ಕೆ ಸಮಾನ ವಾದ ಲಾವಣ್ಯರಸದಿಂದ ತುಂಬಿರತಕ್ಕದ್ದು.

ಪದ್ಯ ೧೦೩: **ಉಪಮಾಕ್ಷೇಪ:** (ದಂಡಿ 'ಉಪಮಾಕ್ಷೇಪ' ವನ್ನು ನಿರೂ ಪಿಸಿಲ್ಲ. ಆತನು 'ಸಂಶಯಾಕ್ಷೇಪ' ಕ್ಕೆ ಕೊಟ್ಟಿರುವ ಲಕ್ಷ್ಯವನ್ನೇ ಸ್ವಲ್ಪ ಮಾರ್ಪಾಟಿನೊಂದಿಗೆ 'ಉಪಮಾಕ್ಷೇಪ' ಕ್ಕೆ ಮಾರ್ಗಕಾರನು ಉದಾಹರಣೆಯಾಗಿ ತಿರುಗಿಸಿಕೊಂಡು, 'ಸಂಶಯಾಕ್ಷೇಪ' ಕ್ಕೆ ಬೇರೊಂದು ಸ್ವಂತ ಉದಾಹರಣೆಯನ್ನು ಕೊಟ್ಟಿರುವನು.)

'ಅದು ವರ ಹಂಸಕದಂಬಕಂ' (=ಹಂಸಗಳ ಗುಂಪು), 'ಶರ ದಂಬುದಮಲ್ತು' (= ಶರತ್ಕಾಲದ ಮೋಡವಲ್ಲ); 'ಮುಖರ ನೂಪುರಸಂವಾದಿ ರವಂ ಬಂಧುರಂ ನೆಗಟ್ದಪ್ಪುದು, ಅದಱಿಂ' (=ಕಾರಣವೇನೆಂದರೆ, ಸದ್ದುಮಾಡುವ ಗೆಜ್ಜೆಯ ಬಂಧುರ ನಾದ ಉಂಟಾಗುತ್ತಿದೆ)'. ಇಲ್ಲಿ, ಹಂಸಗಳ ಗುಂಪು ಶರತ್ಕಾಲದ ಮೋಡ ದಂತೆ ಬೆಳ್ಳಗಿದ್ದುವು ಎಂಬ ಅರ್ಥಪ್ರತೀತಿಯುಂಟಾಗುವುದರಿಂದ ಉಪಮಾ ಲಕ್ಷಣವಿದೆ; 'ನೂಪುರಸಂವಾದಿರವ' ಕೇಳಿಬಂದದ್ದರಿಂದ, 'ಶರದಂಬುದಮಲ್ತು' ಎಂದು ಪ್ರತಿಷೇಧಿಸುವುದಕ್ಕೆ ಕಾರಣ ವಾಯಿತು. ಹೀಗೆ, ಇದು ಉಪಮಾಮೂಲಕವಾದ 'ಆಕ್ಷೇಪ'.

ಪದ್ಯ ೧೦೪ : **'ಸಂಶಯಾಕ್ಷೇಪ'**: 'ಮದಕರಿಯೋ' (= ಮದಿಸಿದ ಆನೆಯೋ), 'ಘನಸಮಯಾಂಬುದಮೋ' (= ಮಳೆಗಾಲದ ಮೋಡವೋ); 'ಘನಮಲ್ತು' (=ಮೋಡವಲ್ಲ); 'ಅದಱೊಳ್, ನೆಗಟ್ಟುದು ಸಪ್ತಚ್ಛದಗಂಧಸುರಭಿ, ಪದುಳಂ ಮದಕರಿ' (ಅದರಲ್ಲಿ ಏಳೆಲೆಬಾಳೆಯ ಕಂಪಿಗೆ ಸಮವಾದ ಸುಗಂಧವು ಉಂಟಾಗಿದೆಯಾದ್ದರಿಂದ, ಅದು ದಿಟವಾಗಿ ಮದಿಸಿದ ಆನೆ). (ಮದ್ದಾನೆಯ ಕುಂಭ ಸ್ಥಲದಲ್ಲಿ ಸ್ರವಿಸುವುದೆಂದು ಹೇಳಲಾದ ಮದೋದಕವು ಸುಗಂಧ ಯುಕ್ತವೆಂದು ಪ್ರತೀತಿ). ಕಪ್ಪಾದ ಆನೆಯನ್ನು ಕಂಡು, ಅದು ಮಳೆಗಾಲದ ಕಪ್ಪುಮೋಡವೆಂಬ ಸಂಶಯವು ಮೊದಲು ಉಂಟಾಗುವುದು; ಮದೋದಕದ ಸುಗಂಧವು ಅನುಭವಕ್ಕೆ ಬಂದ ಬಳಿಕ, 'ಘನಮಲ್ತು' ಎಂಬ 'ಆಕ್ಷೇಪ' ಕ್ಕೆ ಎಡೆಯಾಗುವುದು.

ಪದ್ಯ ೧೦೫ : **'ಹೇತ್ವಾಕ್ಷೇಪ'**: 'ಮಾನಧನನೇ, ನಿನ್ನನ್ನು ಹೊಗಳಿಸುವುದೇತಕ್ಕೆ? ನೀನು ಹಾಗೆ ('ಉಂತೆ', ಎಂದರೆ ಹೊಗಳಿಸಿಕೊಳ್ಳುವ ಮಟ್ಟಿಗೆ) ದಾನಿಯೆ? (ಎಂದಿಗೂ ಅಲ್ಲ.—ಇದೇ 'ಆಕ್ಷೇಪ.' ಹೀಗೆ ಆಕ್ಷೇಪಿಸಲು 'ಹೇತು', ಎಂದರೆ ಕಾರಣ, ಏನೆಂದರೆ): 'ನಿನ್ನ ಕಸವರಂ (=ಚಿನ್ನ) ಎಂದುಂ ದೀನಾನಾಥರ ಕೆಯ್ಯದು, ದಾನಿಯದೆಂತು?' ನಿನ್ನ ಚಿನ್ನವೆಲ್ಲ ದೀನಾನಾಥರ ಕೈಯಲ್ಲೆ ಇರಬೇಕಾದದ್ದು, ಅವರಿಗೆ ಸೇರಬೇಕಾದದ್ದು; ಅದರಿಂದ ಅವರ ಕೈಯಲ್ಲೇ ಇದೆ. ಕೊಡಲೇ ಇಲ್ಲದ, ನೀನು ಹೇಗೆ ದಾನಿಯಾಗುವೆ? ಇಂದು ನೀನು ಕೇವಲ ಮಾನಧನನಷ್ಟೆ). ಮಾರ್ಗಕಾರನು ದಂಡಿಯ ಲಕ್ಷ್ಯವನ್ನೇ ಅನುವಾದ ಮಾಡಿದ್ದರೂ, ಅದನ್ನು ಹೆಚ್ಚು ಸೊಗಸುಗೊಳಿಸಿದ್ದಾನೆ. ದಂಡಿಯ ಶ್ಲೋಕ :

ನ ಸ್ತೂಯಸೇ ನರೇಂದ್ರ ತ್ವಂ ದದಾಸೀತಿ ಕದಾಚನ।
ಸ್ವಮೇವ ಮತ್ವಾ ಗೃಹ್ಣಂತಿ ಯತಸ್ತ್ವದ್ಧನಮರ್ಥಿನಃ ॥—II, ೧೬೭.

ಪದ್ಯ ೧೦೬ : ಆಕ್ಷೇಪಾಲಂಕಾರವನ್ನು 'ಅನುಮಿತಿ' ಯಿಂದ (ಎಂದರೆ ಊಹೆಯಿಂದ) 'ವ್ಯತಿರೇಕ ವಿಕಲ್ಪಂ' ಎಂದು ತಿಳಿದುಕೊಳ್ಳಲಿ

ಎಂದು ಮಾರ್ಗಕಾರನು ಇಲ್ಲಿ ಸೂಚಿಸಿದ್ದಾನೆ. ಇದು ಗಮನಾರ್ಹ. ಮಾತ್ರವಲ್ಲ; ಎರಡೂ ಅಲಂಕಾರಗಳ ಲಕ್ಷ್ಯಲಕ್ಷಣ ವಿವರಣೆಗಳನ್ನು ಪರಸ್ಪರ ಹೋಲಿಸಿ ಪರಿಭಾವಿಸಿದಲ್ಲಿ, ಮಾರ್ಗಕಾರನ ಮಾತಿನ ಯಥಾರ್ಥತೆ ವೇದ್ಯವಾಗುತ್ತದೆ. ದಂಡಿ ಈ ಮಾತನ್ನು ಹೇಳಿಲ್ಲ. ('ವ್ಯತಿರೇಕ' ವಿಷಯಕ ವಿವರಗಳಿಗೆ III–೪೯ ರಿಂದ ೪೮ ಪದ್ಯಗಳ ಟಿಪ್ಪಣಿಗಳನ್ನು ನೋಡಿ).

ಪದ್ಯ ೧೦೭ : 'ಪ್ರತಿಪದಾರ್ಥ ತತ್ತ್ವಭೇದದಲ್ಲಿ ಪ್ರತಿಷೇಧವನ್ನು ಮಾಡುವುದೇ ಅತಿಶಯವಾದ ಆಕ್ಷೇಪಾಲಂಕಾರ' ಎಂದು 'ಆಕ್ಷೇಪ' ದ ಲಕ್ಷಣವನ್ನು ಮಾರ್ಗಕಾರನು ಇಲ್ಲಿ ಬೇರೆಯ ಮಾತುಗಳಲ್ಲಿ ಸ್ಪಷ್ಟಪಡಿಸಿದ್ದಾನೆ. ಇಲ್ಲಿ 'ಪ್ರತಿಪದಾರ್ಥ' ಎಂದರೆ 'ಸದೃಶ ವಸ್ತು' ಎಂದು ಅರ್ಥ ಹಿಡಿಯಬೇಕು.

ಶ್ಲೇಷಾಲಂಕಾರ

ಪದ್ಯ ೧೦೮ : ಶ್ಲೇಷೆ–'ಏಕರೂಪಾಧೀನ ವಚೋರಚಿತಂ; ನಾನಾರ್ಥಂ'. ಒಂದೇ ರೂಪವನ್ನುಳ್ಳ ಪದದಲ್ಲಿ ಒಂದಕ್ಕಿಂತ ಹೆಚ್ಚು ಅರ್ಥಗಳು ಅಡಕವಾಗಿದ್ದರೆ ಅದು ಶ್ಲೇಷೆ.

['ಶ್ಲೇಷ' ಎಂದರೆ ಒಂದು ಇನ್ನೊಂದರೊಡನೆ ಕೂಡಿಕೊಂಡಿರುವುದು ಇಲ್ಲವೆ ಹೆಣೆದುಕೊಂಡಿರುವುದು. ಒಂದೇ ಪದದಲ್ಲಿ ನಾನಾರ್ಥಗಳು ಕೂಡಿಕೊಂಡಿರುವುದರಿಂದ ಅದು 'ಶ್ಲೇಷ' ಎನ್ನಿಸುತ್ತದೆ. ದಂಡಿಯ ಲಕ್ಷಣಶ್ಲೋಕ ಹೀಗಿದೆ:

ಶ್ಲಿಷ್ಟಮಿಷ್ಟಮನೇಕಾರ್ಥಮೇಕರೂಪಾನ್ವಿತಂ ವಚಃ |
ತದಭಿನ್ನಪದಂ ಭಿನ್ನಪದಪ್ರಾಯಮಿತಿ ದ್ವಿಧಾ ‖ —II, ೩೧೦

ಪದವನ್ನು ಒಡೆಯದೆ ನಾನಾರ್ಥಗಳು ಪ್ರತೀತವಾದಲ್ಲಿ, ಅದು ಅಭಿನ್ನಪದ ಶ್ಲೇಷ (ಉದಾ., ರಾಜ: ದೊರೆ, ಚಂದ್ರ); ಪದವನ್ನು ಒಡೆಯುವುದರಿಂದ ನಾನಾರ್ಥಗಳು ಪ್ರತೀತವಾದರೆ, ಅದು ಭಿನ್ನಪದ ಶ್ಲೇಷ (ಉದಾ., ಸದಾನಭೋಗಂ: ಸದಾ+ನಭೋ+ಗಂ=ಯಾವಾಗಲೂ ಆಕಾಶದಲ್ಲಿ ಸಂಚರಿಸುವವನು;

ಸ+ದಾನ+ಭೋಗಂ= ದಾನಕೊಡುವ ಸುಖವುಳ್ಳವನು). ಈ ಎರಡು ಸಂದರ್ಭಗಳಲ್ಲಿಯೂ ಪದವು 'ಏಕರೂಪಾನ್ವಿತ' ವಾಗಿರುತ್ತದೆ.

ಸ್ವತಂತ್ರವಾಗಿಯಾಗಲಿ ಉಪಮಾದಿ ಅಲಂಕಾರಗಳಲ್ಲಿಯಾಗಲಿ ಕೃತಿರಚನೆಯ ಸೊಬಗನ್ನು ಹೆಚ್ಚಿಸಿದಾಗ ಮಾತ್ರ ಶ್ಲೇಷೆಯ ಸಾರ್ಥಕ್ಯ. ದಂಡಿಯ ಈ ಉಕ್ತಿ ಗಮನಾರ್ಹ:

ಶ್ಲೇಷಃ ಸರ್ವಾಸು ಪುಷ್ಣಾತಿ ಪ್ರಾಯೋ ವಕ್ರೋಕ್ತಿಷು ಶ್ರಿಯಂ |
ಭಿನ್ನಂ ದ್ವಿಧಾ ಸ್ವಭಾವೋಕ್ತಿರ್ವಕ್ರೋಕ್ತಿಶ್ಚೇತಿ ವಾಙ್ಮಯಂ ||

—II, ೩೬೩.

(ವಾಙ್ಮಯವು ಎರಡು ವಿಧ; ಒಂದು ಸ್ವಭಾವೋಕ್ತಿ, ಇನ್ನೊಂದು ವಕ್ರೋಕ್ತಿ. ಶ್ಲೇಷೆಯು ಸಾಧಾರಣವಾಗಿ ಎಲ್ಲ 'ವಕ್ರೋಕ್ತಿ' (ಅಲಂಕಾರಿಕ ರಚನೆ)ಗಳಲ್ಲಿಯೂ ಆದರ ಸೊಬಗನ್ನು ಪೋಷಿಸುತ್ತದೆ.)]

ಪದ್ಯ ೧೦೯: ಈ ಪದ್ಯವು ದಂಡಿಯ ಲಕ್ಷ್ಯವನ್ನೆ ಅನುಸರಿಸಿದೆ. ಇದರಲ್ಲಿನ ನಾಮಪದಗಳೆಲ್ಲವೂ ಅಭಿನ್ನಪದಗಳಾಗಿದ್ದು, ಎರಡು ಅರ್ಥಗಳನ್ನು ಕೊಡುತ್ತ, 'ಪಡೆಗುಂ' ಎಂಬ ಕ್ರಿಯಾಪದದೊಂದಿಗೆ ಅನ್ವಯಗೊಂಡಿವೆ. 'ರಾಜ' ಎಂಬ ಕರ್ತೃಪದವು (ವಿಶೇಷ್ಯ) 'ಅರಸ' ಮತ್ತು 'ಚಂದ್ರ' ಎಂಬ ಶ್ಲೇಷಾರ್ಥವನ್ನು ಹೊಂದಿದೆ. ಈ ಪದದ ವಿಶೇಷಣಗಳನ್ನೂ ಇತರ ಪದಗಳನ್ನೂ 'ರಾಜ' (ದೊರೆ) ಪರವಾಗಿಯೂ 'ಚಂದ್ರ' ಪರವಾಗಿಯೂ ಅರ್ಥ ಮಾಡಬೇಕು. (ಮುಂದೆ, ಕಂಸದಲ್ಲಿ ಒಂದನೆಯ ಅರ್ಥದಲ್ಲಿ ರಾಜಪರವಾಗಿಯೂ ಎರಡನೆಯದನ್ನು ಚಂದ್ರಪರವಾಗಿಯೂ ಅನ್ವಯಿಸಿಕೊಳ್ಳಬೇಕು.)

"ಉದಯಾರೂಢಂ (೧. ಉದಯದಲ್ಲಿ ಎಂದರೆ ತನ್ನ ಏಳಿಗೆಯಲ್ಲಿ ನೆಲಸಿರುವವನಾದ; ೨.ಉದಯ ಪರ್ವತದಲ್ಲಿ ನೆಲಸಿರುವನಾದ, ಎಂದರೆ ಉದಯಿಸುತ್ತಿರುವವನಾದ), ಕಾಂತ್ಯಾಸ್ಪದಂ (೧. ಸೌಂದರ್ಯಕ್ಕೆ ನೆಲೆಯಾದವನು; ೨. ಕಾಂತಿಗೆ ಎಂದರೆ ಪ್ರಕಾಶಕ್ಕೆ ನೆಲೆಯಾದವನು), ಅನುರಕ್ತಾತ್ಮಮಂಡಳಂ (ಅನುರಕ್ತ+ಆತ್ಮ+ಮಂಡಳಂ) (೧. ಪ್ರೇಮಾದರಗಳಿಂದ ಕೂಡಿದ ಭೂಮಂಡಲವನ್ನು,

ರಾಜ್ಯವನ್ನು, ಹೊಂದಿರುವವನು; ೨. ಅನುಸರಿಸಿ ಬಂದ ಕೆಂಪು ಬಣ್ಣ ದಿಂದ ಕೂಡಿದ ತನ್ನ ಮಂಡಲಾಕೃತಿಯುಳ್ಳವನು), ಕುಮುದಕರಂ (ಇದು ಮಾತ್ರ ಭಿನ್ನಪದ ಶ್ಲೇಷೆ) (೧. ಕು+ಮುದ+ಕರಂ=ಭೂಮಿಗೆ +ಆನಂದದನ್ನು+ಉಂಟುಮಾಡತಕ್ಕವನು ; ೨. ಕುಮುದ+ಕರಂ= ನೈದಿಲೆಗಳನ್ನು + ಉಂಟುಮಾಡತಕ್ಕವನು, ಎಂದರೆ ಅರಳಿಸ ತಕ್ಕವನು), ಮೃದುತರಕರಂಗಳಿಂ (೧. ಭಾರವಲ್ಲದ ತೆರಿಗೆಗಳಿಂದ ; ೨. ತಂಪಾದ ಕಿರಣಗಳಿಂದ), ಲೋಕಕ್ಕೆ ಮುದಮಂ ಪಡೆಗುಂ (ರಾಜ ಚಂದ್ರರಿಬ್ಬರೂ) (ಲೋಕಕ್ಕೆ ಸಂತೋಷವನ್ನು ಉಂಟು ಮಾಡುವರು)."

ಪದ್ಯ ೧೧೦ : ದಂಡಿಯ ಶ್ಲೋಕದ 'ಮಹೀಭೃದ್ಭೂರಿಕಟಕಂ' ಎಂಬ ಭಾಗವನ್ನು ಮಾತ್ರ ಇಟ್ಟುಕೊಂಡು, ಉಳಿದುದನ್ನೆಲ್ಲಾ ಸ್ವತಂತ್ರ ವಾಗಿ ರಚಿಸಿದ್ದಾನೆ ಮಾರ್ಗಕಾರ. 'ಭೂಭೃನ್ನಾಥಂ'[56] ಎಂಬ ಕರ್ತೃಪದಕ್ಕೆ 'ರಾಜಾಧಿರಾಜ ಅಥವಾ ಚಕ್ರವರ್ತಿ' ಮತ್ತು 'ಪರ್ವತಗಳ ಒಡೆಯ; ಅಥವಾ ಹಿಮಾಲಯ' ಎಂದು ಶ್ಲೇಷಾರ್ಥ. (ಮುಂದೆ ಕೊಟ್ಟಿರುವ ಅರ್ಥಗಳಲ್ಲಿ, ಮೊದಲನೆಯದು 'ರಾಜ' ಪರ ವಾದ ಅರ್ಥ; ಎರಡನೆಯದು 'ಪರ್ವತ' ಪರವಾದದ್ದು.)

ವಿಪುಳತರಕಟಕಂ= ೧. ವಿಶಾಲವಾದ ರಾಜಧಾನಿಯುಳ್ಳವನು ; ೨. ವಿಸ್ತಾರವಾದ ಪಾರ್ಶ್ವಭಾಗವುಳ್ಳದ್ದು. ದ್ವಿಪ+ಹರಿ+ ಮಹಿಷೀ+ ನಿಷೇವ್ಯಂ=೧. ಆನೆ+ಕುದುರೆ (ಎಂದರೆ ಗಜಾಶ್ವ ಸೈನ್ಯ)+ಪಟ್ಟದ ರಾಣಿ—ಇವರಿಂದ ಸೇವ್ಯನಾದವನು ; ೨. ಆನೆ+ಸಿಂಹ (ಅಥವಾ ಸರ್ಪ)+ಎಮ್ಮೆ—ಇವುಗಳಿಂದ ಸೇವ್ಯವಾದದ್ದು (ಎಂದರೆ, ಅವುಗಳ ನಿವಾಸ). ಉನ್ನತ ಪಾದಂ=೧. ಉನ್ನತವಾದ ಗೌರವವುಳ್ಳವನು ;

---

56 ದಂಡಿ 'ಮಹೀಭೃತ್' (= ರಾಜ), ಎಂದಿಷ್ಟೇ ಹೇಳಿರುವುದನ್ನು ಮಾರ್ಗ ಕಾರನು 'ಭೂಭೃನ್ನಾಥಂ' (= ರಾಜಾಧಿರಾಜ, ಚಕ್ರವರ್ತಿ) ಎಂದು ಉದ್ದೇಶ ಪೂರ್ವಕವಾಗಿ ಮಾರ್ಪಡಿಸಿ, ನೃಪತುಂಗನನ್ನು ಈ ಪದ್ಯದಲ್ಲಿ ಪ್ರಶಂಸಿಸಿರ ಬಹುದು.

೨. ಎತ್ತರವಾದ ತಪ್ಪಲನ್ನು ಉಳ್ಳದ್ದು. ವ್ಯಪನೀತ ಶ್ರೀಫಲದಂ=[57] ೧. ಸಂಗ್ರಹಿಸಿದ ಐಶ್ವರ್ಯ ಫಲವನ್ನು ದಾನ ಮಾಡತಕ್ಕವನು; ೨. ಬಿಟ್ಟ ಬಿಲ್ವಫಲವನ್ನು ಕೊಡತಕ್ಕದ್ದು. ವಿಪರೀತಕಂ=೧. (ಹಗೆಗಳ ವಿಷಯದಲ್ಲಿ) ಕೋಪಗೊಂಡವನು, ವಿರೋಧಿ; ೨. (ವಿ+ಪರೀತಕಂ) ಪಕ್ಷಿಗಳಿಂದ ಬಳಸಲ್ಪಟ್ಟದ್ದು, (ಇಲ್ಲಿ ಭಿನ್ನಪದೀಯ ಶ್ಲೇಷೆ).

ಪದ್ಯ ೧೧೧: "ನೆರೆದ (ಒಟ್ಟುಗೂಡಿದ), ವಿಸಂವಾದಂ (ವಿ+ಸಂವಾದಂ= ೧. ಹಕ್ಕಿಗಳ ಮಾತು; ೨. ಕೆಟ್ಟ ಮಾತು), ಪಂಜರ ಶುಕತತಿಯೊಳ್ (ಪಂಜರದ ಗಿಳಿವಿಂಡಿನಲ್ಲಿ); ಪರಚಕ್ರಭ್ರಾಂತಿಗಳ್ (ಪರ+ಚಕ್ರ+ಭ್ರಾಂತಿಗಳ್=೧. ಶ್ರೇಷ್ಠವಾದ ಚಕ್ರಗಳ ತಿರುಗುವಿಕೆ; ೨. ಶತ್ರುಮಂಡಲದ ಭ್ರಮೆ), ಕುಲಾಲಗೇಹಂಗಳೊಳ್ (ಕುಂಬಾರ ಮನೆಗಳಲ್ಲಿ); ಮಹಾಹವಧ್ವನಿ (೧. ಮಹಾ+ಹವ+ಧ್ವನಿ=ಗಟ್ಟಿಯಾದ, ಬಲವಾದ,+(ದೇವತೆಗಳನ್ನು) ಕರೆಯುವ, ಆಹ್ವಾನಿಸುವ+ಶಬ್ದ, ಕೂಗು; ೨. ಮಹಾ+ಆಹವ+ಧ್ವನಿ=ದೊಡ್ಡದಾದ+ಯುದ್ಧದ+ಶಬ್ದ)—(ಇವು) ನಿಯತಂ ನೆಗಳ್ಗುಂ (ಕ್ರಮವಾಗಿ ಉಂಟಾಗುವುವು, ಕಂಡುಬರುವುವು)." (ಇದು ದಂಡಿಯ ನಿರ್ದೇಶದ ಪ್ರಕಾರ 'ವಿರುದ್ಧ ಕರ್ಮ'ದ ಶ್ಲೇಷೆ; ಪ್ರತಿ ಶ್ಲೇಷಾರ್ಥಕ ಪದವೂ ವಿರುದ್ಧಗಳಾದ ಎರಡು ಅರ್ಥಗಳನ್ನು ಒಳಗೊಂಡಿದೆ).

ಪದ್ಯ ೧೧೨: "ಈ ಭೂಪಾಳಂ, 'ಅರಿಗೋತ್ರಭೇದಿ' (ಅರಿ+ಗೋತ್ರ+ಭೇದಿ=೧. ಹಗೆಗಳೆನಿಸಿದ ಪರ್ವತಗಳನ್ನು ಭೇದಿಸುವವನು; ೨. ಹಗೆಗಳ ವಂಶವನ್ನು ನಾಶಮಾಡುವವನು), 'ವಿಬುಧೇಶ್ವರನಲ್ಲಂ'= ಇಂದ್ರನಲ್ಲ; 'ಧೃತಕಳಾಕಳಾಪಂ' [ಧೃತ+ಕಲಾ+ಕಲಾಪಂ= ೧. (ಷೋಡಶ) ಕಲೆಗಳ ಸಮೂಹವನ್ನು ಹೊಂದಿದವನು (ಚಂದ್ರ);

---

57 ಮದ್ರಾಸು ಮುದ್ರಣದಲ್ಲಿ 'ವ್ಯಪನೀತ' ಎಂಬ ಪಾಠ ಸ್ವೀಕೃತವಾಗಿದೆ. ಇಲ್ಲಿನದು ಪಾಠಕರ ಮುದ್ರಣದ್ದು.

೨. (ಚತುಷ್ಷಷ್ಟಿ) ಕಲೆಗಳ (ವಿದ್ಯೆಗಳ) ಸಮೂಹವನ್ನುಳ್ಳವನು (ಸಕಲ ವಿದ್ಯಾ ಪಾರಂಗತ], 'ದೋಷಾಕರನಲ್ಲಂ'=(ದೋಷದಿಂದ ಕೂಡಿದ) ಚಂದ್ರನಲ್ಲ; 'ವಿದಿತೋಮಾವರಂ' [ವಿದಿತ+ಉಮಾ+ವರಂ=೧. ಪ್ರಸಿದ್ಧನಾದ ಉಮೆಯ (ಪಾರ್ವತಿಯ) ಪತಿ; ೨. ಪ್ರಸಿದ್ಧವಾದ ಕೀರ್ತಿಗೆ ಒಡೆಯನು], 'ಆತ್ತ ಭುಜಂಗನಲ್ಲಂ = ಸರ್ಪವನ್ನು ಹೊಂದಿದವನಲ್ಲ, ನಾಗಭೂಷಣನಾದ ಶಿವನಲ್ಲ. [ಇದು ದಂಡಿ ನಿರ್ದೇಶಿಸಿರುವ 'ಆಕ್ಷೇಪರೂಪೋಕ್ತಿಯ ವಿರೋಧಿ ಶ್ಲೇಷೆ.' ಮಾರ್ಗಕಾರನ ಪ್ರಕಾರ (ಪ. ೧೧೩) ಮೇಲಿನ ಲಕ್ಷ್ಯಗಳೆಲ್ಲ 'ವಿರುದ್ಧ (ನಿಯಮಿತ) ಶ್ಲೇಷೆ'ಯ ಪ್ರಭೇದಗಳು].[58]

ಉತ್ಪ್ರೇಕ್ಷಾಲಂಕಾರ

ಪದ್ಯ ೧೧೪: "ಪ್ರಸಿದ್ಧವಾದ ('ನೆಗಟ್ಟಿರ್ದುದು') ಒಂದು ವಸ್ತುವಿನ ಯಥಾಸ್ಥಿತಿಯನ್ನು ಮರಸಿ, ಬೇರೊಂದು ರೀತಿಯಿಂದ('ಪೆಱತೊಂದು ಮಾಟಿಕ್ಕೆಯಿಂ') ತಿಳಿಸುವುದು ಉತ್ಪ್ರೇಕ್ಷೆ."

["ಚೇತನಾಚೇತನಗಳಲ್ಲಿರುವ 'ವೃತ್ತಿ'ಯನ್ನು (ಸ್ಥಿತಿಯನ್ನು) ಅದು ಇರುವುದಕ್ಕಿಂತ ಬೇರೆಯ ರೀತಿಯಲ್ಲಿ 'ಉತ್ಪ್ರೇಕ್ಷಿಸು'ವುದೇ ಉತ್ಪ್ರೇಕ್ಷೆ"—ದಂಡಿ.

---

58 ಈ ಲಕ್ಷ್ಯಪದ್ಯವು ದಂಡಿಯ ದೃಷ್ಟಾಂತವನ್ನೇ ಹೋಲುವುದಾದರೂ, ಕೆಲವು ಗಮನಾರ್ಹ ಮಾರ್ಪಾಟುಗಳಿವೆ. ಮಾರ್ಗಕಾರನು 'ಭೂಪಾಲ'ನನ್ನು ಇಂದ್ರ, ಚಂದ್ರ, ಶಿವರೊಂದಿಗೆ ಹೋಲಿಸಿದ್ದರೆ, ದಂಡಿ ನಿರ್ದಿಷ್ಟ ರಾಜನನ್ನು ಅಚ್ಯುತ, ಚಂದ್ರ, ದೇವ, ಶಂಕರರೊಡಗೂಡಿಸಿ ಬಣ್ಣಿಸಿರುವನು. ದಂಡಿಯ ಶ್ಲೋಕ:

ಅಚ್ಯುತೋಪ್ಯವೃಷಚ್ಛೇದೀ ರಾಜಾಪ್ಯವಿದಿತಕ್ಷಯಃ |
ದೇವೋಪ್ಯವಿಬುಧೋ ಜಜ್ಞೇ ಶಂಕರೋಪ್ಯಭುಜಂಗವಾನ್ ||

—II, ೩೨೨

[ಅಚ್ಯುತ=೧. ಸ್ಥಾನಚ್ಯುತನಲ್ಲದವನು; ೨. ಕೃಷ್ಣ. ಅವೃಷಚ್ಛೇದಿ=೧. ಧರ್ಮವಿಧ್ವಂಸಕನಲ್ಲದವನು; ೨. ವೃಷಾಸುರನನ್ನು ಕೊಲ್ಲದವನು. ರಾಜ=ದೊರೆ; ೨. ಚಂದ್ರ ದೇವ=೧. ರಾಜ; ೨. ದೇವತೆ. ಶಂಕರ=೧. ಮಂಗಳಕಾರಿ; ೨. ಈಶ್ವರ. ಅಭುಜಂಗವಾನ್=೧. ಹೊಗಳುಭಟರಿಲ್ಲದವನು; ೨. ಸರ್ಪ ಧರಿಸಿದವನು.]

'ಉತ್+ಪ್ರ+ಈಕ್ಷೆ'='ಮೇರೆ ಮೀರಿದ ಪ್ರಕರ್ಷವಾದ (ಕವಿಯ) ನೋಟ, ಭಾವನೆ, ಕಲ್ಪನೆ' ಎಂದು ಮಾತಿನ ಅರ್ಥ. ಅತಿಶಯೋಕ್ತಿಯಲ್ಲಿ ಕವಿ ಇರುವುದನ್ನು ಹೆಚ್ಚುಮಾಡಿ ಹೇಳಿದರೆ, ಇಲ್ಲಿ ಬೇರೆಯ ರೀತಿ ಕಲ್ಪಿಸಿ ಹೇಳುತ್ತಾನೆ. ಎಂದರೆ, ಉತ್ಪ್ರೇಕ್ಷೆಯಲ್ಲಿ ಕವಿಕಲ್ಪನೆಗೆ ಪ್ರಾಧಾನ್ಯ].

ಪದ್ಯ ೧೧೫: 'ಉತ್ಪ್ರೇಕ್ಷೆ'ಗೆ ಲಕ್ಷ್ಯ: 'ನಡುಹಗಲಿನ ಬಿಸಿಲು ತನ್ನನ್ನು ಸುಡಲು ಕಾಡಾನೆ ('ವನಕರಿ') ಕಮಲಬಂಧುವಾದ ಸೂರ್ಯನಲ್ಲಿ ತನಗೆ ಉಂಟಾದ ಕಡುಕೋಪದಿಂದ ಎನ್ನುವಂತೆ ('ಕಡು ಕಾಯ್ಪು ಎನೆ') ಕಮಲವನ್ನು ಧ್ವಂಸಮಾಡಬೇಕೆಂದು ಯೋಚಿಸಿ ('ಕಿಡಿಸಲ್ ಬಗೆದು') ಕೊಳವನ್ನು ಪ್ರವೇಶಿಸಿತು.

ಬೇಸಗೆಯಲ್ಲಿ ನಡುಹಗಲಿನ ಬಿಸಿಲನ್ನು ತಾಳಲಾರದೆ ಕಾಡಾನೆಯೊಂದು ನೀರಿನಲ್ಲಿ ಮಿಂದು, ನೀರು ಕುಡಿದು, ತಾವರೆ ದಂಟನ್ನು ತಿನ್ನುವುದಕ್ಕಾಗಿ ಕೊಳವನ್ನು ಹೊಕ್ಕದ್ದು ವಸ್ತುಸ್ಥಿತಿ. ಬಿಸಿಲಿನ ಬೇಗೆಗೆ ಸೂರ್ಯನೆ ಕಾರಣ; ಅವನು ಕಮಲಬಂಧು; ತನಗೆ ಬೇಗೆಯನ್ನೊಡ್ಡಿದ ಸೂರ್ಯನ ಮೇಲೆ ಸೇಡು ತೀರಿಸಿಕೊಳ್ಳಲು ಅಸಾಧ್ಯವೆನಿಸಿ, ಕೊಳದಲ್ಲಿರುವ ಸೂರ್ಯಬಂಧುವಾದ ಕಮಲವನ್ನು ಕೆಡಿಸುವ ಉದ್ದೇಶದಿಂದ ಆನೆ ಕೊಳವನ್ನು ಪ್ರವೇಶಿಸಿತು ಎಂದು ವಸ್ತುಸ್ಥಿತಿಯನ್ನು 'ಮರಸಿ' ಬೇರೊಂದು (ಕಲ್ಪಿತ) ರೀತಿಯಲ್ಲಿ ಕವಿ ಹೇಳಿದ್ದಾನೆ.

ಪದ್ಯ ೧೧೬: "ವಿಲಾಸಿನೀ, ಈ ಕರ್ಣೋತ್ಪಲವು (=ಕಿವಿಯೊಡವೆಯಾದ ನೈದಿಲೆ) ಕಿವಿಯಲ್ಲಿ ನೆಲಸಿ, 'ನನ್ನ ವಿಶಾಲವಾದ ನೋಟದಲ್ಲಿ ಒಳ್ಳೆಯದಾಗಿ ಹೊಳೆಯುತ್ತಿದೆ' (ಎಂದರೆ, ನನ್ನ ಕಡೆಗಣ್ಣ ನೋಟದಲ್ಲಿ

ಕನ್ನಡ ಪದ್ಯದ 'ಉಮಾವರಂ' ಎಂಬುದಕ್ಕೆ ಮೂಲದಲ್ಲಿ 'ಶಂಕರ' ಎಂದಿದೆ. ಈ ಪದ್ಯವು ನೃಪತುಂಗ ಪ್ರಶಂಸಾತ್ಮಕ ಎಂದು ಭಾವಿಸುವುದಾದರೆ, 'ಉಮಾವರ' ಎಂಬ ಶ್ಲೇಷಾರ್ಥಕ ಪದದಲ್ಲಿ ನೃಪತುಂಗನ ರಾಣಿಯಾಗಿದ್ದಿರಬಹುದಾದ 'ಉಮಾದೇವಿ' ಯನ್ನೇ ಹೆಸರಿಸಿರಬಹುದು ಎಂದು ಮುಳಿಯ ತಿಮ್ಮಪ್ಪಯ್ಯನವರ ಊಹೆ.

ತಾನು ಬೆಳಗಿ ಅದರ ಮುಂಬರಿವಿಗೆ ತಡೆಯುಂಟುಮಾಡುತ್ತಿದೆ) ಎಂದು ಭಾವಿಸಿ ನಿನ್ನ ಕಣ್ಣೆರಡು ಕರ್ಣೋತ್ಪಲದ ಮೇಲೆ ಆಕ್ರಮಣ ಮಾಡುತ್ತಿವೆ." ವಿಲಾಸಿನಿಯ ಕಡೆಗಣ್ಣ ನೋಟವು ಕಿವಿಯಲ್ಲಿನ ಉತ್ಪಲವನ್ನು ಸೋಕುವ ಹಾಗೆ ಹಾಯ್ದು ಹೋಗುತ್ತಿರುವುದು ವಸ್ತುಸ್ಥಿತಿ; ಅದು ತನಗೆ ಅಡ್ಡಿಯಾಗಿದೆ ಎಂದು ಅದನ್ನು ಕಣ್ಣು ಆಕ್ರಮಿಸಹೊರಟಿದೆ ಎನ್ನುವುದು ಕವಿ ಕಲ್ಪನೆ.[59]

ಸೂಕ್ಷ್ಮಾಲಂಕಾರ

ಪದ್ಯ ೧೧೭: "ಅಂತರಂಗತೊಳ್ ಮಱಿಸಿದುದಂ (ರಹಸ್ಯವಾಗಿಟ್ಟುಕೊಂಡಿರುವ ಆಲೋಚನೆ ಮುಂತಾದುವನ್ನು) ಬಗೆದು ಇಂಗಿತ, ಚೇಷ್ಟೆ, ಆಕಾರಗತಗಳಾದ ಸೂಕ್ಷ್ಮ ಸಂಜ್ಞೆಗಳ ಮೂಲಕ ಸೂಚಿಸುವುದು" ಸೂಕ್ಷ್ಮಾಲಂಕಾರ.

ಪದ್ಯ ೧೧೮: "ತಿಳಿಪಲ್ (=ಸಮಾಧಾನ ಪಡಿಸಲು) ಅಡಿಗೆ ಎಱಗಿದ (=ನಮಸ್ಕರಿಸಿದ) ಓಪನ (=ಪ್ರಿಯನ) ತಳಂಗಳಾ [=(ಕಾಲು

59 ಮೇಲಿನ ಎರಡು ಲಕ್ಷ್ಯಗಳೂ ದಂಡಿಯ ಮೂಲ ಶ್ಲೋಕದ ಅನುವಾದಗಳು. ಅವನ ಲಕ್ಷ್ಯಲಕ್ಷಣ ಸಮನ್ವಯ ವಿಧಾನವನ್ನು (ನಾವು ಮೇಲೆ ಕೊಟ್ಟ ವಿವರಣೆಯನ್ನು)ಮಾರ್ಗಕಾರನು ಬಿಟ್ಟಿದ್ದಾನೆ. ಅಲ್ಲದೆ, ಉತ್ಪ್ರೇಕ್ಷಾಲಂಕಾರದಲ್ಲಿ 'ಇವಾ' ಎಂಬ ಮಾತಿನ ಪ್ರಯೋಗದಿಂದ ಕೆಲವರು ಆ ಅಲಂಕಾರವನ್ನು ಉಪಮೆಯೆಂದು ತಪ್ಪಾಗಿ ತಿಳಿಯಬಹುದು, ಹಾಗೆ ತಿಳಿಯಕೂಡದು, ಎಂದು ಎಚ್ಚರಿಕೆ ನೀಡಿದ್ದಾನೆ; ಮತ್ತು ಸಂಸ್ಕೃತದಲ್ಲಿ 'ಇವಾ' ಎಂಬ ಪದದಂತೆ 'ಮನ್ಯೆ', 'ಶಂಕೆ', 'ಧ್ರುವಂ', 'ಪ್ರಾಯಃ', 'ನೂನಂ' ಇತ್ಯಾದಿ ಪದಗಳೂ ಪ್ರಯೋಗವಾಗುತ್ತವೆ ಎಂದು ತಿಳಿಸಿದ್ದಾನೆ. ಮಾರ್ಗಕಾರನು ಈ ಹೆಚ್ಚಿನ ವಿವರಗಳನ್ನು ಬಿಟ್ಟಿದ್ದಾನೆ. ಕನ್ನಡದಲ್ಲಿಯೂ 'ವೊಲ್', 'ಅಂತೆ', 'ಅಂತಿರೆ' ಮುಂತಾದ ಉಪಮಾ ವಾಚಕಗಳು ಉತ್ಪ್ರೇಕ್ಷೆಯಲ್ಲಿ ಪ್ರಯೋಗವಾಗುತ್ತವೆ; ಜೊತೆಗೆ, 'ಎನೆ', 'ಎನಲ್', 'ಎಂಬಿನೆಗಂ', 'ಅಂದಂ', 'ಮಾಟ್ಕೆ'(ಯಿಂ) ಎಂಬ ಪದಗಳೂ ಪ್ರಯೋಗವಾಗುತ್ತವೆ. ದಂಡಿಯ ಹೆಚ್ಚಿನ ವಿವರಣೆ ಕನ್ನಡಕ್ಕೂ ಅನ್ವಯವಾಗುತ್ತದೆ.

ಮುಟ್ಟಿದ) ಅಂಗೈಗಳ] ತೀಟದಿಂ (=ತೀಡುವಿಕೆಯಿಂದ, ಉಜ್ಜಾಟದಿಂದ) ಪದಂಗಳೊಳ್ ಒಗೆದ (=ಪಾದಗಳಲ್ಲಿ ಕಾಣಿಸಿಕೊಂಡ) ಪುಳಕಚಯಂಗಳ್ (=ರೋಮಾಂಚದ ಸಮುದಾಯವು), ನಲ್ಲಳ್ಗೆ, ಬೆಳ್ಮೊಗಂಗೆಯ್ದಿರೆಯುಂ (=ಮುಖವನ್ನು ವಿವರ್ಣವಾಗಿ ಮಾಡಿದ್ದರೂ, ಎಂದರೆ, ಅವಳ ಮುಖವು ಕಳೆಗುಂದಿದ್ದರೂ), ಮುಳಿಸಂ (=ಕೋಪವನ್ನು), ಕಳೆದುವು."

ಪದ್ಯ ೧೧೯ : " ಪರುಷಾಳಾಪಮುಂ (=ಕಠಿನವಾದ ಮಾತೂ) ಅತಿ ನಿಷ್ಠುರ ವೀಕ್ಷಣ ಮುಖವಿಕಾರಮುಂ (=ಬಹು ನಿಷ್ಠುರವಾದ ನೋಟವೂ ಮುಖಭಂಗಿಯೂ), ಮಱಸಿರೆಯುಂ (=ಅವಳ ಅಂತರಂಗದ ಪ್ರೇಮ ಭಾವವನ್ನು ಮರೆಮಾಜಿದ್ದರೂ) ತರಳಾಪಾಂಗಮುಂ (=ಚಂಚಲವಾದ ಕಡೆಗಣ್ಣ ನೋಟವೂ) ಆಕೆಯ ದರಹಸಿತಮುಂ (=ನಸುನಗೆಯೂ) ಎರ್ದೆಯೊಳ್ ಎಱಕಮಂ ಪೇೞ್ಗುಂ (=ಹೃದಯದಲ್ಲಿನ ಪ್ರೇಮವನ್ನು ತಿಳಿಸುವುವು). "

ಮೇಲಿನ ಎರಡು ಪದ್ಯಗಳೂ ಸೂಕ್ಷ್ಮಾಲಂಕಾರಕ್ಕೆ ದೃಷ್ಟಾಂತಗಳು. ಇವುಗಳಲ್ಲಿನ ವಿಷಯನಿರೂಪಣೆಯಲ್ಲಿ ' ಸ್ವಭಾವೋಕ್ತಿ 'ಯೇ ಪ್ರಧಾನ. ಆದರೂ, ಪ್ರಿಯನ ಕರಸ್ಪರ್ಶದಿಂದ ಹುಟ್ಟಿದ ರೋಮಾಂಚದ (ಆಕಾರಗತ ಸಂಜ್ಞೆ) ಮೂಲಕ ನಲ್ಲೆಯ ಕೋಪವು ತಿಳಿದು ಪ್ರೇಮೋದಯವಾದ ಅಂತರಂಗದ ಭಾವವೂ (ಪ. ೧೧೮), ಕಠಿನ ಮುಖಭಾವವು ಪ್ರೇಮವನ್ನು ಮರಸಿದ್ದರೂ ಕಡೆಗಣ್ಣ ನೋಟ, ನಸುನಗೆ–ಈ ಅಂಗ ಚೇಷ್ಟಿತಗಳಿಂದ ಹೃದಯದ ಪ್ರೇಮವೂ ಸೂಕ್ಷ್ಮ ರೀತಿಯಲ್ಲಿ ವ್ಯಕ್ತಪಟ್ಟು, ನಿರೂಪಣೆ ' ವಕ್ರೋಕ್ತಿ 'ಯ ಛಾಯೆಯನ್ನು ತಳೆದಿರುವುದರಿಂದ ಸ್ವಭಾವಾಖ್ಯಾನದಿಂದ ಭಿನ್ನ ಎಂದು ಎಣಿಸಬೇಕು.

ವಿಶೇಷೋಕ್ತಿ ಅಥವಾ ವಿಶೇಷಾಲಂಕಾರ

ಪದ್ಯ ೧೨೦ : "(ಒಂದು ವಸ್ತುವಿನ) ಗುಣ, ಜಾತಿ, ಕ್ರಿಯೆ, ಮುಂತಾದವುಗಳಲ್ಲಿ ಕಂಡುಬರುವ ' ವಿಕಳತೆಯಂ ಅನುಗುಣಮಾಗಿರೆ ಪೇೞದೆ

ಸಯ್ತ್ತಣಿಸಿ ವಿಶೇಷಮನಱುಪುವುದು '(ಎಂದರೆ, 'ವೈಕಲ್ಯ' ಅಥವಾ ಕುಂದುಕೊರತೆಯನ್ನು ಅವಕ್ಕೆ ಅನುಗುಣವಾಗಿ ಹೇಳದೆ, ಅವುಗಳಲ್ಲಿ ಕಂಡುಬರುವ ವಿಶೇಷವನ್ನೆ 'ಸಯ್ತ್ತಣಿಸಿ' ಹೇಳುವುದು) ವಿಶೇಷಾಲಂಕಾರ. (ಇದು ದಂಡಿಯ ಲಕ್ಷಣನಿರೂಪಣೆಯನ್ನೆ ಅನುವಾದಿಸಿದೆ).

ಪದ್ಯ ೧೨೧: "ಕಂತು (=ಮನ್ಮಥನು) ಎಂತುಂ, ಅಲರಂಬು (=ಹೂಬಾಣ), ಕರ್ಬುವಿಲ್ (=ಕಬ್ಬಿನ ಬಿಲ್ಲು), ಕೋಮಲ ಸರಸಿಜನಾಳತಂತು ತಿರು (=ಕೋಮಲವಾದ ತಾವರೆದಂಟಿನ ನೂಲಿನ ಹೆದೆ), ಮತ್ತಿವಱಾ ಬಲದಿಂ (=ಇವುಗಳ ಬಲದಿಂದ) ಅಗಲ್ದರಂ ಎಚ್ಚು (=ವಿರಹಿಗಳನ್ನು ಬಾಣದಿಂದ ಹೊಡೆದು), ತ್ರಿಲೋಕಮುಂ, ಬಸಕೆ ಬರಿಸುವಂ (=ವಶಪಡಿಸಿಕೊಳ್ಳುವನು.)"–ಮಾರ್ಗಕಾರನು ದಂಡಿಯ ಲಕ್ಷ್ಯವನ್ನು ಸ್ವಲ್ಪ ಮಾರ್ಪಡಿಸಿದ್ದಾನೆ. ಮೂಲ ಶ್ಲೋಕದಲ್ಲಿ, 'ಪುಷ್ಪಧನುವಿನ ಬಾಣವು ಕಠೋರವೂ ತೀಕ್ಷ್ಣವೂ ಅಲ್ಲದಿದ್ದರೂ ಭುವನತ್ರಯವನ್ನು ಗೆದ್ದಿದೆ' ಎಂದಿದೆ. ಇಲ್ಲಿ, ಮನ್ಮಥಬಾಣದ ಗುಣ 'ವಿಕಲತೆ'ಯನ್ನು ಸೂಚಿಸದೆಯೆ, ಮೂರು ಲೋಕಗಳನ್ನೂ ಗೆಲ್ಲಬಲ್ಲ ಅದರ ಸಾಮರ್ಥ್ಯದ 'ವಿಶೇಷ'ವನ್ನು ಮನಗಾಣಿಸಿದೆ. (ಇದು 'ಗುಣ' ನಿಷ್ಠವಾದ 'ವಿಶೇಷ.')

ಪದ್ಯ ೧೨೨: "ದಶನವಸನಾಂತರಂ ಸ್ಫುರಿಯಿಸದೆ (=ತುಟಿ ಸ್ವಲ್ಪವೂ ಅಲುಗದೆ), ಕಣ್ಗಳ್ ಎನಸುಂ ಆರಕ್ತಂಗಳ್ ಆಗದೆ (=ಕಣ್ಣುಗಳು ಸ್ವಲ್ಪವೂ ಕೆಂಪಾಗದೆ), ಮುಖಂ ಭರಿತ ಭ್ರೂಕುಟಿ ಕಲಮಾಗಿರದೆ (ಮುಖವು ಸ್ವಲ್ಪವೂ ಹುಬ್ಬುಗಂಟಿನಿಂದ ಕೂಡಿರದೆ), ಅರಿನೃಪಬಲಮುಂ ಗೆಲ್ದಂ ಇಂತು (=ಶತ್ರುಸೈನ್ಯವನ್ನು ಹೀಗೆ ಗೆದ್ದನು). ಇಲ್ಲಿ ನಿರ್ದಿಷ್ಟನಾದ ರಾಜನು ಹಗೆಗಳನ್ನು ಗೆಲ್ಲುವಾಗ ಕೋಪಗೊಳ್ಳಬೇಕಾದ್ದು ಸಹಜ. ಪದ್ಯದಲ್ಲಿ ವರ್ಣಿತವಾಗಿರುವವೆಲ್ಲ ಕೋಪಸೂಚಕ ಕ್ರಿಯೆಗಳು. ಅವು ಇಲ್ಲದೆಯೇ ಹಗೆಗಳನ್ನು ಗೆದ್ದಿರುವುದು 'ವಿಶೇಷ'. (ಇದೂ ದಂಡಿಯ ಶ್ಲೋಕದ ಅನುವಾದ. ಇಲ್ಲಿ ಕ್ರಿಯಾನುಗತ 'ವಿಶೇಷ'ವನ್ನು ಕಾಣಬಹುದು).

ಸಮಾಹಿತಾಲಂಕಾರ

ಪದ್ಯ ೧೨೩ : ಮಾರ್ಗಕಾರನ ಲಕ್ಷಣ ನಿರೂಪಣೆ ದಂಡಿಯುದನ್ನು ಯಥಾವತ್ತಾಗಿ ಅನುಸರಿಸದೆ, ತುಸ ಕ್ಲಿಷ್ಟಾನ್ವಯವುಳ್ಳದ್ದಾದ್ದರಿಂದ, ದಂಡಿಯ ಶ್ಲೋಕವನ್ನೇ ಮೊದಲು ಗಮನಿಸುವುದು ಉತ್ತಮ :

ಕಿಂಚಿದಾರಭಮಾಣಸ್ಯ ಕಾರ್ಯಂ ದೈವವಶಾತ್ ಪುನಃ |
ತತ್ಸಾಧನಸಮಾಪತ್ತಿರ್ಯಾ ತದಾಹುಃ ಸಮಾಹಿತಂ ||—II, ೨೯೮.

[ಒಂದು ಕಾರ್ಯವನ್ನು ಆರಂಭ ಮಾಡಿರುವಾತನಿಗೆ ಆ ಕಾರ್ಯಸಾಧನಕ್ಕೆ ಅನುಕೂಲವಾದ ನೆರವು ದೈವವಶಾತ್ ಒದಗುವುದನ್ನು 'ಸಮಾಹಿತ'ವೆಂದು ಕರೆಯುತ್ತಾರೆ.]

ಈಗ ಮಾರ್ಗಕಾರನ ಲಕ್ಷ್ಯದ ಅರ್ಥವನ್ನು ಹೀಗೆ ಗ್ರಹಿಸಬಹುದು: "ಪರವಸದ ಬಗೆಯೊಳ್ (ದೈವವಶದಿಂದ ಒದಗಿದ ರೀತಿಯಲ್ಲಿ), ಅತರ್ಕಿತೋಪಸ್ಥಾನಂ (ಅತರ್ಕಿತವಾದ ಕಾರ್ಯಸಾಧನ), (ಒಂದಂ ದೊರೆಕೊಳಿಸುವುದು, ಒಂದನ್ನು ದೊರಕಿಸಿಕೊಡುವುದು) (ನಿರುತಂ ಸಮಾಹಿತಾಳಂಕರಣಾಂತರಮಕ್ಕುಂ, ಅಱಿಗೆ (ನಿಸ್ಸಂದೇಹವಾಗಿ ಸಮಾಹಿತಾಲಂಕಾರ ಭೇದವಾಗುವುದು, ಎಂದು ತಿಳಿಯುವುದು.)"[60]

ಪದ್ಯ ೧೨೪ : ಮುಳಿದಿರ್ದ ನಲ್ಲಳಲ್ಲಿಗೆ (=ಕೋಪಿಸಿಕೊಂಡಿದ್ದ ಪ್ರಿಯೆಯ ಬಳಿಗೆ), ತಿಳಿಪಲ್ ಪೋಪ ಎನ್ನ ಬಗೆಗೆ (=ಅವಳನ್ನು ಸಮಾಧಾನ ಪಡಿಸಲು ಹೋಗುವ ನನ್ನ ವಿಚಾರದಲ್ಲಿ), ದೊರೆಕೊಳೆ (=ಸಹಾಯವಾಗಿ ಒದಗುವಂತೆ), ವಸಂತಸಮಯೋತ್ತಂಸಂ ಎಳೆವೆಱೆ (=ವಸಂತಕ್ಕೆ ಶಿರೋಭೂಷಣವಾದ ಬಾಲಚಂದ್ರನು), ಗಗನಾಂತರದೊಳ್ ಎತ್ತಂ ಮುತ್ತಿಂತು ಪೊಳೆದತ್ತು."

---

60 ಮಾರ್ಗಕಾರನು 'ಸಮಾಹಿತಗುಣ', 'ಸಮಾಹಿತಾಲಂಕಾರ'—ಇವೆರಡನ್ನೂ ಒಂದೇ ಹೆಸರಿನಿಂದ ನಿರ್ದೇಶಿಸಿದ್ದಾನೆ. ಈ ಸಂಬಂಧವಾದ ವಿವರಣೆಯನ್ನು II— ೬೩ ರಿಂದ ೬೬ರ ವರೆಗೆ ಪದ್ಯಗಳ ಟಿಪ್ಪಣಿಯಲ್ಲಿ ಕಾಣಬಹುದು. (ಪು. ೨೧೪-೨೧೬ನೋಡಿ). 'ಪರವಸ': ಎಲ್ಲ ಪ್ರತಿಗಳಲ್ಲಿಯೂ ಇರುವ ಪಾಠ 'ಪರಪಸ' .'ಪರವಸ' ಎಂಬ ಪಾಠಕರ ತಿದ್ದುಪಾಟನ್ನು ಇಲ್ಲಿ ಅಂಗೀಕರಿಸಿದೆ.

ಈ ಲಕ್ಷ್ಯಪದ್ಯ ಮಾರ್ಗಕಾರನ ಸ್ವಂತರಚನೆ. ಪ್ರಿಯನೊಬ್ಬನು ತನ್ನ ಪ್ರಿಯೆಯ ಮನಿಸನ್ನು ತಿಳಿಸುವುದಕ್ಕೆ ಹೊರಟ ಸಂದರ್ಭದಲ್ಲಿ ದೈವವಶಾತ್ ಅವನಿಗೆ ಸಹಾಯಕವಾಗಿ ಎಳೆವೆರೆ ಮೂಡುತ್ತದೆ. ಇದರಿಂದ, ಕತ್ತಲೆಯಲ್ಲಿ ಅವನಿಗೆ ದಾರಿ ಕಾಣುತ್ತದೆ. ಅಲ್ಲದೆ, ಮನಸ್ಸಿನ ಮೇಲೆ ಪರಿಣಾಮ ಬೀರತಕ್ಕವನು (ಮನಃಕಾರಕ) ಎಂದು ಪ್ರಸಿದ್ಧನಾದ ಚಂದ್ರನು ಪ್ರಿಯೆಯ ಮನಸ್ಸು ಪ್ರಸನ್ನಗೊಳ್ಳುವುದರಲ್ಲಿಯೂ ಸಹಾಯಕನಾಗಬಹುದು.

ಪದ್ಯ ೧೫೫ : ಇದೂ 'ಸಮಾಹಿತ'ಕ್ಕೆ ದೃಷ್ಟಾಂತ; ಇದು ದಂಡಿಯ ಶ್ಲೋಕದ ಅನುವಾದವಲ್ಲದಿದ್ದರೂ, ಅದನ್ನು ಅನುಸರಿಸಿದೆ. ಅಲ್ಲಿ ಉಕ್ತವಾದ 'ಘನಗರ್ಜಿತ'ದ ಎಡೆಯಲ್ಲಿ 'ಪೊಳೆವ ಮಿಂಚು' ಬಂದಿದೆ.

"ತಡೆತಡೆದು (ಮಳೆಗಾಲದ ರಾತ್ರಿಯಾದ್ದರಿಂದ ಹಿಂಜರಿದು) ಕಾಂತನ ಬಳಿಗೆ ನಡೆದುಹೋಗಲು ಯೋಚಿಸಿದ ನನಗೆ ಮಳೆಗಾಲದ ಕಗ್ಗತ್ತಲೆಯಲ್ಲಿ, ಮೋಡಗಳ ನಡುನಡುವೆ ನಿರಂತರವಾಗಿ ಹೊಳೆಯುವ ಮಿಂಚು ಅಡತಡೆಗಳನ್ನು ಚೆನ್ನಾಗಿ ಹೋಗಲಾಡಿಸಿತು ('ಸಯ್ತು ಅಡವಡಿಕೆಗಳಂ ತೊಡೆದತ್ತು')."

ಸಮಾಸೋಕ್ತಿ

ಪದ್ಯ ೧೫೬ : "ತಱಿಸಂದು ಮನದೊಳೊಂದಂ (=ಒಂದು ವಸ್ತುವನ್ನು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು), ಮತ್ತದನೆ ಪೋಲ್ವುದಂ ಪೆಱತಂ =ಅದನ್ನೆ ಹೋಲುವ ಬೇರೊಂದು ವಸ್ತುವನ್ನು), ಕುಱುಪುಗಳಂ ಕುಱುಮಾಡಿ ಮಾಡಿ ಪೇೞ್ವುದು (=ಕುರುಹುಗಳ ಮೂಲಕ ಲಕ್ಷಿಸಿ ಹೇಳುವುದು)" ಸಮಾಸೋಕ್ತಿ.

ಇಲ್ಲಿ, ವಾಸ್ತವವಾಗಿ ಮನಸ್ಸಿನಲ್ಲಿ ಅಭಿಪ್ರೇತವಾಗಿರುವುದು ಪ್ರಸ್ತುತ; ಅಪ್ರಸ್ತುತದ ವರ್ಣನೆಯಲ್ಲಿ ಪ್ರಸ್ತುತ ಸೂಚಕವಾದ ಕುರುಹುಗಳ ಉಲ್ಲೇಖವಿರುತ್ತದೆ, ಅಷ್ಟೆ. ಇದರಿಂದಾಗಿ ಒಟ್ಟಿನ

ಉಕ್ತಿಯಲ್ಲಿ ಸಂಕ್ಷಿಪ್ತತೆ ಅಳವಡುತ್ತದೆ. ಈ ಸಂಕ್ಷಿಪ್ತತೆಯಿಂದಾಗಿಯೆ ಅಲಂಕಾರದ ಹೆಸರು 'ಸಮಾಸೋಕ್ತಿ' ಎಂದು. ("ಸಂಕ್ಷಿಪ್ತ ರೂಪತ್ವಾತ್ ಸಮಾಸೋಕ್ತಿಃ"—ದಂಡಿ). (ಇದು ಈಚೆಗೆ 'ಅನ್ಯೋಕ್ತಿ' ಎಂದು ಪ್ರಸಿದ್ಧವಾಗಿದೆ).

ಪದ್ಯ ೧೨೭: ಮೇಲಿನದಕ್ಕೆ ದಂಡಿಯ ಲಕ್ಷ್ಯದ ಅನುವಾದ ರೂಪವಿದು: "ಅಳಿ (=ದುಂಬಿ), ತಾಮರೆಯರಲೊಳ್ (=ತಾವರೆ ಹೂವಿನಲ್ಲಿ), ಸರಸ ನಿಜಾಮೋದದೊಳೊಂದಿ ನಲಿದು (=ಅದರ ರಸಯುಕ್ತವಾದ ಪರಿಮಳದಲ್ಲಿ ಕೂಡಿಕೊಂಡು ಸಂತೋಷಪಟ್ಟು), ಈ ಮುಗುಳೊಳ್ (=ಈ ಮೊಗ್ಗಿನಲ್ಲಿ), ಮಕರಂದ ರಜೋವ್ಯಾಮುಗ್ಧದೊಳ್ (=ಅದರ ಮಕರಂದ ಹಾಗೂ ಧೂಳಿನಿಂದ - ಬಂಡಿನಿಂದ - ಮೋಹಗೊಂಡು), ಆ ಮಾಟ್ಕೆಯನಱಸಿ (=ತಾವರೆ ಹೂವಿನಲ್ಲಿ ನಲಿದ ಬಗೆಯನ್ನೇ ಇಲ್ಲಿಯೂ ಹುಡುಕಿ), ಕೆಲ ಕೆಲದೊಳ್ ಸುೞಿವುದು (=ಆ ಮೊಗ್ಗಿನ ಪಕ್ಕ ಪಕ್ಕದಲ್ಲಿಯೇ ಸುಳಿದಾಡುವುದು)."

ತುಂಬಿಯ ಚೆಲ್ಲಾಟದ ವರ್ಣನೆಯ ನೆವದಲ್ಲಿ ಕಾಮುಕನೊಬ್ಬನ ನಡವಳಿಕೆಯನ್ನು ಹೇಳಬೇಕೆಂಬುದೇ ಕವಿಯ ಉದ್ದೇಶ. ಇದರ ವಿವರಣೆಯೇ ಮುಂದಿನ ಪದ್ಯ. (ಇದು ಕೂಡ ದಂಡಿಯ ಶ್ಲೋಕದ ಅನುವಾದ).

ಪದ್ಯ ೧೨೮: "ನೆರೆದು ಅತಿ ವಿದಗ್ಧ ಗಣಿಕಾ ಸುರತಾಸವಸೇವನಾಕೃತೋದನನಾಗಿರ್ದು (=ಬಹು ಪ್ರೌಢೆಯಾದ ವೇಶ್ಯೆಯೊಂದಿಗೆ ಸಂಭೋಗಿಸಿ, ಕೃತಾರ್ಥನಾಗಿ; ಕೃತೋದನ=ಕೃತಾರ್ಥ?) ('ಕೃತೌದನ' ಎಂದು ಮದ್ರಾಸು ಮುದ್ರಣ ಪ್ರತಿಯ ಪಾಠ), ಇರದೆ (=ಸುಮ್ಮನಿರದೆ, ಎಂದರೆ, ಅಷ್ಟರಿಂದ ತೃಪ್ತನಾಗದೆ), ತರುಣೀರತಾಂತರ ಸರಾಗಮಂ ಪೇೞ್ವುದು ಅಲ್ಲಿ ತುಂಬಿಯ ನೆವದಿಂ (=ಮುಗ್ಧ ಬಾಲಿಕೆಯೊಂದಿಗೆ ಸಂಭೋಗಿಸಬೇಕೆಂಬ ಅಪೇಕ್ಷೆಯನ್ನು ತುಂಬಿಯ ನೆವದಲ್ಲಿ ಅಲ್ಲಿ ಹೇಳುವುದಾಗಿದೆ)." (ತುಂಬಿ=ವಿಟಪುರುಷ, ತಾವರೆಹೂವು=ಪ್ರೌಢಾಂಗನೆ, ತಾವರೆಯ ಮೊಗ=ತರುಣಿ, ಮಕರಂದಪಾನ=

ಸಂಭೋಗ—ಹೀಗೆ ಇಲ್ಲಿ ಉಪಮಾನೋಪಮೇಯಭಾವ ಅಂತರ್ಗತವಾಗಿರುವುದನ್ನು ಗಮನಿಸಬಹುದು).

ಪದ್ಯ ೧೨೯: ಈ ಲಕ್ಷ್ಯಪದ್ಯವು ಮಾರ್ಗಕಾರನ ಸ್ವಂತ ರಚನೆ. ಆದರೆ, ದಂಡಿಯ ಮೂಲ ಶ್ಲೋಕದಲ್ಲಿ ವರ್ಣಿಸಿರುವ ಪುರುಷನೊಬ್ಬನ 'ವ್ಯಾಪತ್ತಿ ಸೂಚನೆ'ಯನ್ನು ಅನುಸರಿಸಿ, ಇಲ್ಲಿಯೂ 'ಅಪಾಯ ಪಂಕ'ದಲ್ಲಿ ಸಿಲುಕಿದ 'ಗುಣಗಣೋದಯ ಭಾಗಿ'ಯಾದ ಪುರುಷನ ವರ್ಣನೆಯನ್ನು ಬೇರೆಯ ರೀತಿಯಲ್ಲಿ ಮಾಡಿದೆ. ಆನೆಯೊಂದು ಅಪಾಯಪಂಕದಲ್ಲಿ ಸಿಲುಕಿದುದನ್ನು ಶ್ಲೇಷೆಯ ಮೂಲಕ ವರ್ಣಿಸಿ, ಪುರುಷನ ಅಪಾಯ ಸ್ಥಿತಿಯನ್ನು ಸೂಚಿಸಿದೆ. (ಲಕ್ಷ್ಯಲಕ್ಷಣ ಸಮನ್ವಯ ಮಾಡುವಾಗ, ಪ್ರಕೃತ ಲಕ್ಷ್ಯಕ್ಕೆ ಅನ್ವಯಿಸುವಂತೆ 'ಇತ್ಯಪೂರ್ವ ಸಮಾಸೋಕ್ತಿಃ ಪೂರ್ವಧರ್ಮ ನಿವರ್ತನಾತ್' ಎಂದು ತಿಳಿಸಿ, 'ಅಪೂರ್ವಸಮಾಸೋಕ್ತಿ' ಎಂಬ ಪ್ರಭೇದವನ್ನು ದಂಡಿ ಉಪಲಕ್ಷಿಸಿದ್ದಾನೆ

"ದಾನಪರನಂ (೧. ಮದೋದಕವನ್ನು ಸುರಿಸುತ್ತಿರುವ ಗಂಡಾನೆ; ೨. ದಾನಪರನಾದ ವ್ಯಕ್ತಿ), ನಿಜೋನ್ನತಮಾನನಂ (ಉನ್ನತಮಾನ: ೧. ಹೆಚ್ಚಾಗಿ ಮದವೇರಿದ; ೨. ವಿಶೇಷ ಸ್ವಾಭಿಮಾನಿಯಾದ), ಆರೂಢ ವಿಪುಳ ವಂಶನಂ (೧. ವಿಸ್ತಾರವಾದ ಬಿದಿರುಮೆಳೆಯಲ್ಲಿ ನೆಲಸಿರುವ; ೨. ಪುರಾತನ ವಂಶದಲ್ಲಿ ಜನಿಸಿದವನಾದ), ಅಪಾಯ ಪಂಕದೊಳ್ (೧. ಬಹುಶಃ ಬೇಟೆಗಾರರು ಕಲ್ಪಿಸಿದ, ಅಪಾಯಕರವಾದ ಕೆಸರಿನ ಹಳ್ಳ; ೨. ಅಪಾಯ ಪರಿಸ್ಥಿತಿಯೆಂಬ ಕೆಸರು), ಏನುಂ ತಳ್ವು ಇಲ್ಲದಿರ್ದುದಂ (ತಳ್ವು=ತಳ್ಳುವುದು, ತಡಮಾಡುವುದು, ತಡಮಾಡಲು ಕಾಲಾವಕಾಶ), ಕಾಣಿಸಿದಂ."

ಪದ್ಯ ೧೩೦: ಲಕ್ಷ್ಯಲಕ್ಷಣ ಸಮನ್ವಯದ ಪದ್ಯ; ಲಕ್ಷ್ಯಪದ್ಯದ ಅಂತರಾರ್ಥವನ್ನು ಇಲ್ಲಿ ವಿವರಿಸಿದೆ: "ತ್ಯಾಗಾದಿ ಗುಣಗಣೋದಯ ಭಾಗಿಯಂ, ಏನಾನುಂ ಒಂದು ಉಪಾಯಾಂತರದಿಂ, ನೀಗಲ್ ನೆಱೆಯದೆ (ಪಾರುಮಾಡಲು ಸಮರ್ಥನಾಗದೆ) ಅನುಪಮಂ, ಈ

ಗಣಿದದಿಂ (=ಎಣಿಕೆಯಿಂದ), ಬಗೆಯುಂ ಆನೆಮಾಡಿ ನುಡಿದಂ (=ಅಪಾಯಪಂಕಕ್ಕೆ ಸಿಕ್ಕಿದವನ ಅವಸ್ಥೆಯನ್ನು ಆನೆಯ ಅವಸ್ಥೆಗೆ ಹೋಲಿಸಿ ಹೇಳಿದನು)." [61]

ಪರ್ಯಾಯೋಕ್ತ

ಪದ್ಯ ೧೩೧: "ಬಗೆದರ್ಥಮನಱಿಪದೆ (ಉದ್ದಿಷ್ಟವಾದ ಅರ್ಥವನ್ನು 'ಸಾಕ್ಷಾತ್ತಾಗಿ' ತಿಳಿಸದೆ), ಮೆಲ್ಲಗೆ ತಿರ್ದುವ ಬಗೆಯುಂ ಪೆಱತಂ ಅದಱ ನೆವದಿಂ ನಿಗದಿಸುವುದು ಪರ್ಯಾಯೋಕ್ತಂ (ತಿಳಿಸದಿದ್ದರೂ ಅದು ಉಪಾಯವಾಗಿ ನೆರವೇರುವ ರೀತಿಯನ್ನು ಸೂಚಿಸುವುದಕ್ಕಾಗಿ ಇನ್ನೊಂದನ್ನು ಹೇಳುವುದು, ಎಂದರೆ ಪರ್ಯಾಯವಾಗಿ ಅಥವಾ ಪ್ರಕಾರಾಂತರವಾಗಿ ಅದನ್ನೇ ಹೇಳುವುದು, 'ಪರ್ಯಾಯೋಕ್ತ')."

ಪದ್ಯ ೧೩೨: "ನೀಂ ಇರ್ವರುಂ ಅನ್ನೆಗಂ ಇಂತು, ಈ ಮಾಟ್ಕೆಯೊಳ್ (=ಈ ರೀತಿಯಲ್ಲಿ) ಇನಿಸು ಪೊೞ್ತು (=ಸ್ವಲ್ಪ ಹೊತ್ತು), ನುಡಿವುತ್ತಿರಿಂ; ಆಂ, ಆಮೋದ ಕುಸುಮಸಮಿತಿಯಂ (=ಸುಗಂಧಯುಕ್ತವಾದ ಹೂಗಳ ಸಂಗ್ರಹವನ್ನು), ಆ ಮರಗಳೊಳ್ ಆಯ್ದು ಕೊಯ್ದು ಇಲ್ಲಿಗೆ ಬರ್ಪೆಂ."

ಪದ್ಯ ೧೩೩: ಈ ಪದ್ಯದಲ್ಲಿ ಮೇಲಿನ ದೃಷ್ಟಾಂತದ ಆಶಯವನ್ನು ವಿವರಿಸಿದೆ: ಅನ್ವಯ: "(ಅವರ) ಅಭಿಮತಮುಮಂ ಒಬ್ಬುಳಿಗೂಡೆ (=ಒಂದಃಗೂಡಿಸಲು), ಮೊಕ್ಕಳಂ (=ಹೆಚ್ಚಾಗಿ) ಸುರತಸೇವನಮಂ ಅವರ್ಗೆ ಮಾಡಲೆಂದು ವಿದಗ್ಧೆ ಆಗಳೆ ಪೋಗಲ್ ಬಗೆದು ಕೆಳದಿ

61 ದಿವಂಗತ ಮುಳಿಯ ತಿಮ್ಮಪ್ಪಯ್ಯನವರು, "ಭಾರತ ಚಕ್ರವರ್ತಿಯಾಗಿದ್ದ ತಂದೆಯನ್ನು ಕಳಕೊಂಡ ಪುತ್ರನಿಗೆ ಪಟ್ಟವೇರಿದೊಡನೆ ಅಥವಾ ಸ್ವಲ್ಪವೆ ಕಾಲದಲ್ಲಿ ರಾಜ್ಯಭ್ರಷ್ಟನಾಗಬೇಕಾದ ದುರವಸ್ಥೆ ಒದಗಿತು" ಎಂಬ ಸಂಗತಿಯನ್ನು ತಿಳಿಸಿ, "ಇಲ್ಲಿ ವಿಸ್ತರಿಸಿದಂತೆ, 'ಈ ಗಣಿದದಿಂ ಆನೆಮಾಡಿ' ನುಡಿದುದೆಂದರೆ, ಇಂಥ ಅವಸ್ಥೆಯಲ್ಲಿ ಹಗೆಗಳ ಬಲೆಗೆ ಸಿಲುಕಿಹೋದ ನೃಪತುಂಗರಾಜನ ಅವಸ್ಥೆಯನ್ನೇ ಸೂಚಿಸಿದುದಾಗಿ ತೋರುತ್ತಿದೆ" ಎಂದು ಊಹಿಸಿದ್ದಾರೆ. (ಕ. ರಾ. ವಿವೇಕ—೧; ಪು. ೩೯–೪೦). ಇದು ವಿಚಾರಣೀಯವಾದ ಅಂಶ.

ಯನ್[62] ನುಡಿದಳಿಂತೀ ಮಾತಂ". ನಲ್ಲನಲ್ಲೆಯರ ಮನಸ್ಸು ಒಂದುಗೂಡಿ, ಏಕಾಂತತೆಯಲ್ಲಿ ಅವರ ಸಮಾಗಮವಾಗ ಬೇಕೆಂಬುದು ವಿದಗ್ಧೆಯ ಇಷ್ಟಾರ್ಥ. ಅದನ್ನು ನೇರವಾಗಿ ತಿಳಿಸದೆ, ತಾನು ಹೊರಗೊಯ್ಯುವ ಕಾರಣವನ್ನು ತಿಳಿಸಿ ಹೊರಟು ಹೋಗು ತ್ತಾಳೆ.

ವಿರೋಧಾಲಂಕಾರ

ಪದ್ಯ ೧೩೪: "ಒಂದೊಂದಱೊಳ್ ಒಂದೊಂದುವಂ ತಂದು ಬೞೞಿ ಮಾಡಿ (=ವಿರುದ್ಧಗಳಾದ ಪದಾರ್ಥಗಳನ್ನು 'ಬೞೞಿ ಮಾಡಿ' ಎಂದರೆ ಸಂಸರ್ಗವಾಗುವಂತೆ ಮಾಡಿ, ಒಡಗೂಡಿಸಿ), ತದ್ವಿಶೇ-ಷಾಂತರಮಂ ಸಂದೇಹಮಿಲ್ಲದೆ ಅಱಿಪುವುದು' (=ಅವುಗಳೊಳಗಿನ ವಿಶೇಷವಾದ ಅಂತರವನ್ನು, ಎಂದರೆ ಅವುಗಳ ವಿಶಿಷ್ಟ ಭಿನ್ನ ಗುಣ ಗಳನ್ನು ಸ್ಪಷ್ಟವಾಗಿ ತಿಳಿಸುವುದು), ಒಂದೆ (=ಹೊಂದಿಕೊಂಡು ಬಂದಾಗ), ವಿರೋಧಾಭಿಧಾನಂ (='ವಿರೋಧ'ವೆಂಬ ಹೆಸರುಳ್ಳ ಅಲಂಕಾರವಾಗುವುದು) ; ಅದು ಇಂತಕ್ಕುಂ."

ಪದ್ಯ ೧೩೫: 'ವಿರೋಧ'ಕ್ಕೆ ಲಕ್ಷ್ಯ (ದಂಡಿಯ ಶ್ಲೋಕದ ಅನುವಾದ) : "ಶರದಾಗಮದೊಳ್ ಕಳಹಂಸರವಂ ಕಿವಿಗೆ ಪೀನಂ ಸೊಗಯಿಸಿ ಪೆರ್ಚಿತ್ತು (=ಶರದೃತುವಿನ ಪ್ರಾರಂಭದಲ್ಲಿ ಹಂಸಪಕ್ಷಿಗಳ ಇಂಪಾದ ಸ್ವರವು ಕಿವಿಗೆ ವಿಶೇಷವಾದ ಆನಂದವನ್ನು ಉಂಟುಮಾಡಿ ಹೆಚ್ಚಿತು) ; ಉರು ಮುದ ವಿರಾಮ ವಿರಸ ವಿರಾಗಂ (=ವರ್ಷಾಕಾಲ ದಲ್ಲಿದ್ದ ಅಧಿಕವಾದ ಸಂತೋಷಕ್ಕೆ ನಿಲುಗಡೆಯುಂಟಾದದ್ದರಿಂದ ನೀರಸವೂ ಪ್ರೇಮರಹಿತವೂ ಆದ), ಬರ್ಹಿಣ ವಿರಾವಂ (=ನವಿಲು ಗಳ ಗಟ್ಟಿಯಾದ ಕೇಕಾರವವು), ವಿರಳತರಮಾಯ್ತು (=ಬಲು ಮಟ್ಟಿಗೆ ಕೇಳದಾಯಿತು)."—ಮಳೆಗಾಲವು ನವಿಲುಗಳಿಗೆ ಸಂತೋಷ

---

62 ಎರಡು ಮುದ್ರಿತ ಪ್ರತಿಗಳಲ್ಲಿಯೂ 'ಕೆಳದಿಯಮಭಿಮತಮುಮಂ' ಎಂಬ ಪಾಠ ವಿದೆ. 'ಕಳದಿಯ[ನ]ಭಿಮತಮುಮಂ' ಎಂಬ ತಿದ್ದುಪಾಟನ್ನು ಬಿ. ಎಂ. ಶ್ರೀ. ಯವರು ಸೂಚಿಸಿದ್ದಾರೆ. (Q. J. M. O. S., XXIII–3 : ಪು. 440).

ದಾಯಕವೂ ಹಂಸಗಳಿಗೆ ದುಃಖಕರವೂ ಆಗಿರುವಂತೆ ಶರತ್ಕಾಲವು ನವಿಲುಗಳಿಗೆ ದುಃಖಕರವೂ, ಹಂಸಗಳಿಗೆ ಸಂತೋಷದಾಯಕವೂ ಆಗಿರುವುದೆಂಬುದಿದು ಕವಿಸಮಯ. ಇಲ್ಲಿ, ಶರತ್ಕಾಲದಲ್ಲಿ ಪರಸ್ಪರ ವಿರುದ್ಧಗಳಾದ ಹಂಸಮಯೂರಗಳ ಸ್ವಭಾವವನ್ನು ಒಟ್ಟಿಗೆ ನಿರೂಪಿಸುವುದರ ಮೂಲಕ ಅವುಗಳ ವಿಶಿಷ್ಟ ಗುಣಗಳನ್ನು ಎತ್ತಿತೋರಿಸಿದೆ.

ಪದ್ಯ ೧೩೬ : ' ಮಲಯಾನಿಳನ ಎಸಕದಿಂ ಉದಿರ್ವ ಅಲರ್ಗಳ ಮಕರಂದ ಮಾಲೆಗಳ್ (=ವಸಂತಕಾಲದ ಮಲಯಮಾರುತನ ಕಾರ್ಯದಿಂದ, ಎಂದರೆ ಬೀಸುವಿಕೆಯಿಂದ ಉದಿರುವ ಹೂಗಳ ಮಕರಂದದ ಹನಿಗಳ ಮಾಲೆಗಳು), ಪರೆದು ಎತ್ತಂ ನೆಲದೊಳ್ ಬಿಟ್ಟಿಂ (=ಎಲ್ಲೆಲ್ಲಿಯೂ ಹರಡಿ ನೆಲದಲ್ಲಿಯೆ ಬಿದ್ದರೂ ಕೂಡ), ವಿರಹಿಗಳಾ ವಿಲೋಚನಾಂಬುಗಳಂ ಅಗ್ಗಳಂ ಪಡೆದುವು (=ಅಗಲಿದ ಪ್ರಣಯಿಗಳ ಕಣ್ಣೀರನ್ನು ವಿಶೇಷವಾಗಿ ಪಡೆದುವು)."—(ಇದು ದಂಡಿಯ ಲಕ್ಷ್ಯದ ಸ್ಥೂಲವಾದ ಅನುವಾದ: ಅಲ್ಲಿನ ' ಉದ್ಯಾನ ಮಾರುತ ', ' ಚಂಪಕ ರೇಣು ' ಮತ್ತು 'ಪಾಂಥರು' ಇಲ್ಲಿ ('ಮಲಯಮಾರುತ' ' ಮಕರಂದ ಮಾಲೆ ' ಹಾಗೂ ' ವಿರಹಿಗಳು ' ಆಗಿವೆ). ಮೇಲಿನ ಲಕ್ಷ್ಯವು ಶರದದ ವರ್ಣನೆಯಾದರೆ, ಇದು ವಸಂತದ ವರ್ಣನೆ. ವಸಂತ ಮಾಸದಲ್ಲಿ ಹೂವಿನ ಮಕರಂದ ನೆಲಕ್ಕೆ ತೊಟ್ಟಿಕ್ಕುವುದು ನಿಜವಾಗಿ ಹರ್ಷದಾಯಕವಾದ ನೋಟ ; ಅವು ನೆಲಕ್ಕೆ ಬೀಳದೆ, ವಿರಹಿಗಳ ಕಣ್ಣಿಗೆ ಬಿದ್ದಿದ್ದರೆ, ಆ ಕಾರಣದಿಂದ ನೀರು ಸುರಿಯುತ್ತಿದೆ ಎಂದು ಭಾವಿಸಬಹುದಾಗಿತ್ತು ; ಆದರೆ, ಅದು ನೆಲಕ್ಕೆ ಬಿದ್ದರೂ ಕೂಡ, ಅವರು ಕಣ್ಣೀರು ಸುರಿಸುತ್ತಿರುವುದು, ತಾವು ಅಗಲಿದ ಪ್ರಿಯರನ್ನು ನೆನೆದು (ವಸಂತವಾದ್ದರಿಂದ). ಮಕರಂದ ತೊಟ್ಟಿಕ್ಕುವ ಗೆಲವಿನ ಸಂಗತಿ, ವಿರಹಿಗಳ ಅಗಲಿಕೆಯ ಕೊರಗು—ಇವು ಒಂದಕ್ಕೊಂದು ವಿರುದ್ಧ. ಇವೆರಡೂ ಏಕತ್ರ ಇರುವಂತೆ ವರ್ಣಿತವಾಗಿರುವುದರಿಂದ, ' ವಿರೋಧಾಲಂಕಾರ.'

ಪದ್ಯ ೧೩೭ : " ' ವಿರೋಧಿಗತ ಮಾರ್ಗಭೇದ'ವನ್ನು (ಎಂದರೆ, ವಿರುದ್ಧ

ವಸ್ತುಗತವಾದ ಅಲಂಕಾರ ಭೇದವನ್ನು) ಈ ಮೊದಲು ತೋರಿಸಿರುವೆನು" ಎಂದು ಹೇಳಿ, "ಉಪಮಾದಿ ಅಲಂಕಾರಗಳಲ್ಲಿಯೂ ಕಂಡುಬರುವ ವಿರೋಧ ಲಕ್ಷಣವನ್ನು ಲಕ್ಷ್ಯಗಳ ಮೂಲಕ ಅರಿಯಿರಿ"— ಎಂದು ಒಂದು ವಿಶೇಷಾಂಶವನ್ನು ಮಾರ್ಗಕಾರನು ಇಲ್ಲಿ ತಿಳಿಸಿದ್ದಾನೆ. (ದಂಡಿ ಇದನ್ನು ಹೇಳಿಲ್ಲ.)['ವಿರುದ್ಧರೂಪಕ'(III-೧೯), 'ವಿರುದ್ಧಾತ್ಮಕ ಅರ್ಥಾಂತರನ್ಯಾಸ' (III-೩೫),'ವಿರೋಧೋಪಮೆ' (III-೭೫),—ಇವನ್ನು 'ವಿರೋಧ'ದೊಂದಿಗೆ ಹೋಲಿಸಬಹುದು. ಈ ಅಲಂಕಾರಗಳಲ್ಲಿ ಪ್ರಕೃತ ಅಪ್ರಕೃತ(ವರ್ಣ್ಯ ಅವರ್ಣ್ಯ)ಗಳ ನಿರೂಪಣೆಯಿದ್ದು, ಅವುಗಳ ನಡುವಣ ಸಾದೃಶ್ಯವು ವಾಚ್ಯವಾಗಿಯೋ ಸೂಚ್ಯವಾಗಿಯೋ ಬಂದಿರುತ್ತದೆ. 'ವಿರೋಧ'ದಲ್ಲಿಯಾದರೊ ವಿರುದ್ಧ ಪದಾರ್ಥಗಳೆರಡೂ ವರ್ಣ್ಯಗಳೆ; ಇದರಲ್ಲಿ ಅವರ್ಣ್ಯದ, ಮತ್ತು ವರ್ಣ್ಯಾವರ್ಣ್ಯಗಳ ನಡುವಣ ಸಮಾನಧರ್ಮದ ಪ್ರಸಕ್ತಿಯಿಲ್ಲ. ಅಲ್ಲದೆ, ನವೀನಾಲಂಕಾರಿಕರು ಹೇಳುವ 'ವಿರೋಧಾಭಾಸವೂ' ಇದಲ್ಲ].

ಅಪ್ರಸ್ತುತ ಪ್ರಶಂಸೆ

ಪದ್ಯ ೧೩೮: "ಪ್ರಸ್ತುತವಲ್ಲದುದನೆ ಮಿಗೆ (ಹೆಚ್ಚಾಗಿ), ವಿಸ್ತಾರಿಸಿ, ನೆಗಟ್ಚೆ ಪೇಟ್ಚೊಡೆ (ಸುವ್ಯಕ್ತವಾಗುವಂತೆ ಹೇಳಿದರೆ), ಅದು 'ಅಪ್ರಸ್ತುತ' ಎಂಬ ಅಲಂಕಾರ." ಇದನ್ನೆ ದಂಡಿ 'ಕಾವ್ಯಾದರ್ಶ'ದಲ್ಲಿ 'ಅಪ್ರಸ್ತುತ ಪ್ರಶಂಸಾ ಸ್ಯಾದಪ್ರಕ್ರಾಂತೇಷು ಯಾ ಸ್ತುತಿಃ' ಎಂದು ನಿರೂಪಿಸಿದ್ದಾನೆ. 'ಪ್ರಶಂಸೆ', 'ಸ್ತುತಿ' ಎಂಬ ಮಾತುಗಳ ಭಾವವನ್ನೇ 'ಮಿಗೆ ವಿಸ್ತಾರಿಸಿ ನೆಗಟ್ಚೆ ಪೇಟ್ಚೊಡೆ'[63] ಎಂಬ ಮಾತು

---

63 ಮೈಸೂರು ಓರಿಯಂಟಲ್ ಲೈಬ್ರರಿಯ ಒಂದು ಪ್ರತಿಯಲ್ಲಿ 'ವಿಸ್ತಾರಿ . . . ಂಮತ್ತಂಪ್ರ' ಎಂದಿಷ್ಟೇ ಇದೆ. ಇದು ಅಷ್ಟು ಶುದ್ಧವಾದ ಪ್ರತಿಯಲ್ಲ. ಆದರೂ, ತ್ರುಟಿತವಾದ ಸ್ಥಳದಲ್ಲಿ 'ನೆಗಟ್ಚೆ' ಎಂಬೆಡೆಯಲ್ಲಿ 'ಪೊಗಟ್ಚೆ' ಎಂದು ಇದ್ದಿರಬಹುದೆ ಎಂಬ ಸಂದೇಹವುಂಟಾಗುತ್ತದೆ. 'ದಂಡಿ'ಯ 'ಸ್ತುತಿಃ' ಎಂಬ ಮಾತಿಗೂ ಇದು ಸರಿಹೋಗುತ್ತದೆ.

ಗಳಲ್ಲಿ ಮಾರ್ಗಕಾರನು ವಿಸ್ತರಿಸಿದ್ದಾನೆ ಎಂದು ತಿಳಿಯಬೇಕು. ಈ ಅಲಂಕಾರದಲ್ಲಿ, ಉಪಮಾನ ವಾಕ್ಯದ ಎಂದರೆ ಅಪ್ರಸ್ತುತದ ಹೊಗಳಿಕೆಯಿಂದ ಉಪಮೇಯದ ಎಂದರೆ ಪ್ರಸ್ತುತದ ಸ್ಥಿತಿ ತಿಳಿಯುತ್ತದೆ. [ಈ ಅಲಂಕಾರದೊಂದಿಗೆ, ಈ ಹಿಂದೆ ಹೇಳಿದ 'ಸಮಾಸೋಕ್ತಿ' ಯನ್ನು ಹೋಲಿಸಿ ನೋಡಬೇಕು. (ಪ. ೧೨೬-೧೩೦). ಅಲ್ಲಿಯೂ ಅಪ್ರಸ್ತುತ ವರ್ಣನೆಯ ಮೂಲಕ ಪ್ರಸ್ತುತವು ಸೂಚಿತವಾಗುತ್ತದೆ. ಅದರ ಲಕ್ಷಣ ನಿರೂಪಣೆಯಲ್ಲಿ, 'ಅದನೆ ಪೋಲ್ವುದಂ ಕುಱುಪುಗಳಂ ಕುಱುಮಾಡಿ ಪೇೞ್ವುದು' ಎಂದುದರಿಂದ ಪ್ರಸ್ತುತಾಪ್ರಸ್ತುತಗಳ ನಡುವಣ ಹೋಲಿಕೆಗೆ ಪ್ರಾಧಾನ್ಯ; ಅಲ್ಲದೆ, ಅಲ್ಲಿ 'ಸ್ತುತಿ'ಯ (ಪ್ರಶಂಸೆಯ) ಪ್ರಸಕ್ತಿಯಿಲ್ಲ. 'ಅಪ್ರಸ್ತುತ'ದಲ್ಲಿ ಪ್ರಶಂಸೆ ಇದ್ದೇ ಇರುತ್ತದೆ. ಈ ಎರಡು ಅಲಂಕಾರಗಳ ನಡುವಣ ಸೂಕ್ಷ್ಮಭೇದವಿದು].

ಪದ್ಯ ೧೩೯-೧೪೦: (ಲಕ್ಷ್ಯಲಕ್ಷಣ ಸಮನ್ವಯವುಳ್ಳ ಈ ಎರಡು ಪದ್ಯಗಳು ದಂಡಿಯ ಶ್ಲೋಕಗಳನ್ನೆ ಬಹುಮಟ್ಟಿಗೆ ಅನುಸರಿಸಿವೆ): "ಮೃಗಗಣಮೆ (=ಜಿಂಕೆಗಳ ಬಳಗವೆ), ಸೊಗಯಿಸುವ ಬಹುತೃಣದೊಳ್ ವನಾಂತರಾಳದೊಳ್ (=ಹುಲುಸಾಗಿ ಬೆಳೆದ ಹಸುರು ಹುಲ್ಲಿನಿಂದ ತುಂಬಿರುವ ಕಾಡಿನ ನಡುವೆ), ವಸುಮದ ವಿರಾಮ ಕಲುಷಾಯತರಾ ಮೊಗಮಂ ಬಗೆದು ಅಳಿಪಿ ಸುೞಿದು ನೋಡದೆ (ಐಶ್ವರ್ಯಮದದ ಸುಖಜೀವನದಿಂದ ಕಲುಷಿತರಾದವರ ಬಳಿ ಸುಳಿದು ಆಸೆಪಟ್ಟು ಅವರ ಮುಖವನ್ನು ಕೂಡ ನೋಡದೆ), ಸುಖಂ ಬಾೞ್ಗುಂ." (ಪ. ೧೪೦) "ಪರಸೇವಾಚಿಂತಾವಿಷಾದಿತಾಂತಸ್ಸ್ವಾಂತಂ ತನ್ನಂ ತಾನೇ ಸಂತೈಸಲೆಂದು (=ಹೆರರನ್ನು ಸೇವಿಸುವ ಚಿಂತೆಯಿಂದ ಕೊರಗುವ ಮನಸ್ಸುಳ್ಳವನು ತನ್ನನ್ನು ತಾನೇ ಸಮಾಧಾನ ಪಡಿಸಿಕೊಳ್ಳುವ ಉದ್ದೇಶದಿಂದ), ಅಪ್ರಸ್ತುತಮಂ ಮೃಗಗಣವೃತ್ತಿಯಂ ಸಂತಂ ಇಂತು ಅಱಿಪಿದಂ (=ಅಪ್ರಸ್ತುತವಾದ, ಎಂದರೆ ತನ್ನ ವಿಚಾರಕ್ಕೆ ಸಂಬಂಧಪಡದ, ಜಿಂಕೆಗಳ ಗುಂಪಿನ ಜೀವನವನ್ನು ಮೆಲ್ಲನೆ ಈ ರೀತಿ ತಿಳಿಸಿದನು)."

ಹೊಟ್ಟೆಯ ಪಾಡಿಗಾಗಿ ಪರರ ಸೇವೆ ಮಾಡುತ್ತ ಅಸ್ವತಂತ್ರನಾಗಿ ಬದುಕುವುದಕ್ಕಿಂತ ಕಾಡಿನಲ್ಲಿ ಜಿಂಕೆಗಳ ಹಾಗೆ ಸ್ವತಂತ್ರವಾದ ಸರಳ ಜೀವನವನ್ನು ನಡಸುವುದು ಮೇಲು—ಎಂಬುದೇ ಲಕ್ಷ್ಯದ ವಿವಕ್ಷಿತಾರ್ಥ. ಸೇವಾ ವೃತ್ತಿಯಲ್ಲಿರುವವನು ತನ್ನ ಶೋಚನೀಯ ಸ್ಥಿತಿಯನ್ನು ಕುರಿತು ಮರುಗುವುದೇ ಪ್ರಸ್ತುತ ವಿಷಯ; ಅಪ್ರಸ್ತುತವಾದ ಮೃಗಜೀವನದ ಪ್ರಶಂಸೆಯಿಂದ ಪ್ರಸ್ತುತವಿಷಯವು ಸೂಚಿತವಾಗಿದೆ. 'ನೋಡಡದೆ ಮೊಗಮಂ ವಸುಮದ ವಿರಾಮ ಕಲುಷಾಯುತರಾ' ಎಂಬ ನಿಂದೆನುಡಿ ಪ್ರಸ್ತುತಸೂಚಕವಾಗಿದೆ.

ನಿದರ್ಶನಾಲಂಕಾರ

ಪದ್ಯ ೧೪೧: "ಗುಣದೋಷಾದಿಗಳಿಂದ ಅನುಗುಣಮಾಗಿರೆ ಪೇೞ್ದು (=ಒಬ್ಬ ವ್ಯಕ್ತಿಯ ಇಲ್ಲವೆ ವಸ್ತುವಿನ ಗುಣದೋಷಾದಿಗಳಿಗೆ ಅನುಗುಣವಾಗಿ ಆ ವ್ಯಕ್ತಿಯ ಇಲ್ಲವೆ ವಸ್ತುವಿನ ವಿಷಯವನ್ನು ವಿವರಿಸಿ), ತದನುಸದೃಶದಿಂ ಒಂದಂ ಪ್ರಣಿಹಿತ ನಿದರ್ಶನಕ್ರಮದೆ ಎಣಿಸುವುದು (ಅದನ್ನು ಹೋಲುವ ಮತ್ತೊಂದನ್ನು ನಿದರ್ಶನ ಕ್ರಮದಲ್ಲಿ ಅದರ ಮುಂದಿಟ್ಟು ಅದನ್ನು ಪರಿಗಣಿಸುವುದು)" ನಿದರ್ಶನಾಲಂಕಾರ.

ಮಾರ್ಗಕಾರನ ಲಕ್ಷಣ ನಿರೂಪಣೆ ದಂಡಿಯದಕ್ಕಿಂತ ತುಸ ಭಿನ್ನವಾಗಿದೆ. ದಂಡಿಯ ಶ್ಲೋಕ:

ಅರ್ಥಾಂತರಪ್ರವೃತ್ತೇನ ಕಿಂಚಿತ್ ತತ್ಸದೃಶಂ ಫಲಂ |
ಸದಸದ್ವಾ ನಿದರ್ಶ್ಯೇತ ಯದಿ ತತ್ ಸ್ಯಾನ್ನಿದರ್ಶನಂ ||—II, ೩೪೮.

[ಒಂದು ಅರ್ಥಾಂತರವನ್ನು ಹೇಳಹೊರಟಿರುವಲ್ಲಿ, ಸ್ವಲ್ಪಮಟ್ಟಿಗೆ ಅದಕ್ಕೆ ಸದೃಶವಾದ ಫಲವನ್ನು—ಎಂದರೆ ಅದರಿಂದ ಫಲಿಸುವ ಅರ್ಥವನ್ನು—ಅದು ಇರಲಿ ಇಲ್ಲದಿರಲಿ—ಅದರಿಂದ ಹೊರಪಡಿಸಿ ತೋರಿಸುವುದೇ 'ನಿದರ್ಶನ'].

ದಂಡಿ 'ಅರ್ಥ' ಎಂದು ವ್ಯಾಪಕವಾಗಿ ಹೇಳಿರುವುದನ್ನು, ಮಾರ್ಗಕಾರನು 'ಗುಣದೋಷನಿಷ್ಠವಾದ ಅರ್ಥ' ಎಂದು ವಿಶೇಷೀಕರಿಸಿರುವಂತೆ ಕಂಡುಬರುತ್ತದೆ. ಆದ್ದರಿಂದಲೇ ದಂಡಿಯ ಲಕ್ಷ್ಯಗಳನ್ನು ಸ್ವೀಕರಿಸದೆ, ತನ್ನವೇ ಆದ ಲಕ್ಷ್ಯಗಳನ್ನು ರಚಿಸಿದ್ದಾನೆ.

ಮಾರ್ಗಕಾರನು ಕೊಡುವ ಲಕ್ಷ್ಯಗಳೂ ಬೇರೆಯೇ ಆದ್ದರಿಂದ, ದಂಡಿಯ ಒಂದು ಲಕ್ಷ್ಯವನ್ನೂ ಇಲ್ಲಿ ಗಮನಿಸುವುದು ಅಪ್ರಸಕ್ತ ವಾಗದು :

ಉದಯನ್ನೇವ ಸವಿತಾ ಪದ್ಮೇಷ್ವರ್ಪಯತಿ ಶ್ರಿಯಂ|
ವಿಭಾವಯಿತುಮೃದ್ಧೀ-ನಾಂ ಸುಹೃದನುಗ್ರಹಂ ||—II, ೩೪೯.

[ಸೂರ್ಯನು ಉದಯಿಸಿದ ಕೂಡಲೆ ಪದ್ಮಪುಷ್ಪಗಳಿಗೆ ಸೌಂದರ್ಯ ಶ್ರೀಯನ್ನು ನೀಡುತ್ತಾನೆ—ಒಬ್ಬರು ಅಭಿವೃದ್ಧಿ ಹೊಂದಿದ ಫಲವೆಂದರೆ, ಸ್ನೇಹಿತರಿಗೆ ಅನುಗ್ರಹ ತೋರುವುದು ಎಂಬುದನ್ನು ಮನಗಾಣಿಸುವುದಕ್ಕಾಗಿ].

ಇನ್ನು, ಮಾರ್ಗಕಾರನ ಲಕ್ಷ್ಯಗಳನ್ನು ಪರಿಶೀಲಿಸಬಹುದು :

ಪದ್ಯ ೧೮೨ : "ಅಮಳಿನ ಗುಣವೃತ್ತಿಗಳಿಂ (ಮಲಿನವಲ್ಲದ ಎಂದರೆ ನಿರ್ಮಲವಾದ ಗುಣಗಳಿಂದಲೂ ನಡೆವಳಿಯಿಂದಲೂ), ಸಮುಪಸ್ಥಿತ ಸಕಲಜನಗತೋಚಿತ ಗುಣಮಂ (=ಜನರಲ್ಲಿ ಚೆನ್ನಾಗಿ ನೆಲೆಗೊಂಡ, ಅಂತರ್ಗತವಾದ ಅವರ ಯೋಗ್ಯ ಗುಣವನ್ನು), ಸಮನಾಗಿಸುವರ್ (=ಎಲ್ಲರಲ್ಲಿಯೂ ಒಂದೇ ಸಮನಾಗಿರುವಂತೆ ಮಾಡುವರು)—ಕನ್ನಡಿ, ಕಮನೀಯಾಕಾರ ಬಿಂಬಮಂ ತಾಳ್ದುವವೋಲ್ (=ಚೆಲುವಾದ ರೂಪಿನ ಪ್ರತಿಬಿಂಬವನ್ನು ತಳೆಯುವ ಹಾಗೆ)."—ಆದರ್ಶ ಪ್ರಾಯರಾದ ರಾಜರು ಜನರ ಸದ್ಗುಣಗಳನ್ನು ಹೇಗೆ ಒಂದೇ ಸಮನಾಗಿ ಕಾಣುವರು ಎಂಬುದು ಬಹುಶಃ ಈ ಪದ್ಯದ ತಾತ್ಪರ್ಯಾರ್ಥವಾಗಿ ತೋರುತ್ತದೆ. ಮುಂದಿನ ಲಕ್ಷ್ಯದಲ್ಲಿ ಮಂತ್ರಿಗುಣವನ್ನು ಬಣ್ಣಿಸಿರುವುದರಿಂದ, ಇಲ್ಲಿನದು ರಾಜ ವಿಷಯಕವಾದುದೆಂದು ಊಹಿಸಿದರೆ ತಪ್ಪಾಗದು. ಅಲ್ಲದೆ, ಇನ್ನುಳಿದ 'ನಿದರ್ಶನಾಲಂಕಾರ'ದ ಲಕ್ಷ್ಯಪದ್ಯಗಳೂ ರಾಜನೀತಿಗೇ ಸಂಬಂಧಪಟ್ಟಿರುವುದು ಸ್ಪಷ್ಟವಾಗಿದೆ.)

ಪದ್ಯ ೧೮೩ : "ಜನಂ ಅಱಿಯದನ್ನೆಗಂ ಮುನ್ನಂ ನಯಂ ಅಱಿದು ಅಱಿಪಲ್ ಆರ್ಪೊಡೆ ಅದು ಮಂತ್ರಿಗುಣಂ; ಜನವಾದಂ ನೆಗಱೆ, ನಗಧ್ವನಿವೋಲ್, ಅನುಕರಣವಾರ್ತೆ ಮಂತ್ರಿಯ ಗುಣಮೋ?"

('ರಾಜ್ಯಕ್ಕೆ ಸಂಬಂಧಪಟ್ಟ ಯಾವ ಸಂಗತಿಯೇ ಆಗಲಿ, ಜನರು ತಿಳಿವಳಿಕೆ ಪಡೆಯುವ ಮೊದಲೇ ಅನುಸರಿಸಬೇಕಾದ ನೀತಿಯೇನೆಂಬುದನ್ನು ತಿಳಿದು ಅದನ್ನು ರಾಜನಿಗೆ ಅರುಹಲು ಮಂತ್ರಿ ಸಮರ್ಥನಾದರೆ, ಅದು ಮಂತ್ರಿಗುಣ; ಅದಿಲ್ಲದೆ, ಜನರು ಮಾತಾಡಿಕೊಳ್ಳಲು ಪ್ರಾರಂಭಿಸಿದ ಮೇಲೆ, ಬೆಟ್ಟ ಪ್ರತಿಧ್ವನಿ ಕೊಡುವ ಹಾಗೆ, ಜನ ಹೇಳಿದ್ದನ್ನೇ ತಾನೂ ಹೇಳುವುದು ಮಂತ್ರಿಯ ಗುಣವಲ್ಲ.')

ಜನವಾದ=ಜನರ ಆಡಿಕೆ ಮಾತು. ನೆಗಟ್ಟ್=ಪ್ರಕಟವಾಗು, ತಲೆದೋರು. ನಗಧ್ವನಿ=ಬೆಟ್ಟದ-ಹೊಳಲು, ಪ್ರತಿಧ್ವನಿ.

[ಮೇಲೆ, ದಂಡಿಯ ಹಾಗೂ ಮಾರ್ಗಕಾರನ ಲಕ್ಷ್ಯಗಳನ್ನು ಪರಿಶೀಲಿಸಿದಲ್ಲಿ, ಇಬ್ಬರೂ ಕೊಡುವ ಲಕ್ಷಣ ಲಕ್ಷ್ಯಗಳ ನಡುವೆ ಇರುವ ಕೊಂಚಮಟ್ಟಿನ ಭೇದವನ್ನು ಗುರುತಿಸಬಹುದು. ದಂಡಿಯ ಲಕ್ಷಣ ಲಕ್ಷ್ಯಗಳಲ್ಲಿ 'ಮೂಲಾರ್ಥ-ಫಲಿತಾರ್ಥ ನಿದರ್ಶನ' ಇದ್ದರೆ, ಮಾರ್ಗಕಾರನ ಲಕ್ಷಣ ಲಕ್ಷ್ಯಗಳಲ್ಲಿ 'ಬಿಂಬ-ಪ್ರತಿಬಿಂಬ' ಭಾವವು ಕಂಡುಬರುವುದು. (ಇಲ್ಲಿನ ಈ ಮತ್ತು ಮುಂದಿನ ಹಲಕೆಲವು ಲಕ್ಷ್ಯಗಳಲ್ಲಿ, 'ತಾಳ್ದುವವೊಲ್', 'ಧ್ವನಿವೋಲ್' ಎಂಬಲ್ಲಿಯ 'ವೋಲ್' ಎಂಬ ಉಪಮಾ ವಾಚಕವಿದ್ದ ಮಾತ್ರಕ್ಕೆ ಇದನ್ನು 'ಉಪಮಾಲಂಕಾರ'ವೆಂದು ಶಂಕಿಸಬಾರದು).[64]

---

64 ಆದರೆ, ಭಾಮಹನು ನಿದರ್ಶನಾಲಂಕಾರದಲ್ಲಿ 'ಅಂತೆ', 'ಹಾಗೆ' ಮುಂತಾದ ಉಪಮಾವಾಚಕಗಳ ಪ್ರಯೋಗವನ್ನು ಸ್ಪಷ್ಟವಾಗಿ ನಿಷೇಧಿಸಿದ್ದಾನೆ.

ಕ್ರಿಯಯೈವ ವಿಶಿಷ್ಟಸ್ಯ ತದರ್ಥಸ್ಯೋಪದರ್ಶನಾತ್ |
ಜ್ಞೇಯಾ ನಿದರ್ಶನಾ ನಾಮ ಯಥೇವವತಿಭಿರ್ವಿನಾ ||

—ಕಾವ್ಯಾಲಂಕಾರ: III, ೩೩.

['ಅಂತೆ', 'ಹಾಗೆ', ಮುಂತಾದುವುಗಳೊಂದೂ ಇಲ್ಲದ ವಾಕ್ಯದ ಮೂಲಕ ಒಂದರ ಕ್ರಿಯೆಯಿಂದಲೇ ವಿಶಿಷ್ಟವಾದ ಅದರ ಅಭಿಪ್ರಾಯವು ಬೋಧಿತವಾಗುವುದೆಂದು ವರ್ಣಿಸಿದರೆ ನಿದರ್ಶನಾಲಂಕಾರ.]

"ಒಂದರ ಸ್ವಾಭಾವಿಕ ಕ್ರಿಯೆಯಲ್ಲಿ ತಾತ್ಪರ್ಯ ವಿಶೇಷವನ್ನು ನಿದರ್ಶಿಸುವುದೇ ನಿದರ್ಶನವೆಂಬಲಂಕಾರ. ಎರಡು ಭಿನ್ನ ವಾಕ್ಯಗಳಲ್ಲಿ ಬಿಂಬ-ಪ್ರತಿಬಿಂಬ

ಪದ್ಯ ೧೪೪ : " ಮೊದಲು ಕಾರ್ಯಕ್ಕೆ ತಲೆಕೊಟ್ಟು (ಕಾರ್ಯಭಾರವನ್ನು ತಲೆಯಮೇಲೆ ಹೊತ್ತುಕೊಂಡು) ಆ ಬಳಿಕ ಆ ಕಾರ್ಯದ ಫಲವನ್ನು ಕೇಳಿ ಪ್ರಯೋಜನವೇನು? ಹಾಗೆ ಕೇಳಿದರೆ, ಕ್ಷೌರ ಮಾಡಿಸಿಕೊಂಡ ಮೇಲೆ ('ತಲೆಯಂ ಕಿರಿಯಿಸಿ')[65] ದಿನಶುದ್ಧಿಯನ್ನು (ತಿಥಿಯನ್ನು) ಬೇಸರವಿಲ್ಲದೆ ಕೇಳುವ ಹೆಡ್ಡನಂತಾಗುವುದು." ತಲೆಸೂಡು=ತಲೆಯಮೇಲೆ ಹೊತ್ತುಕೋ, ಧರಿಸು. ಕಜ್ಜ=ಕಾರ್ಯ.

ಭಾವ ಬಂದರೆ ದೃಷ್ಟಾಂತವೆಂದೂ, ಒಂದೇ ವಾಕ್ಯದಲ್ಲಿ ದೃಷ್ಟಾಂತವು ಮೊದಲು ಕಾಣುವಂತಿದ್ದರೆ ನಿದರ್ಶನವೆಂದೂ ನವೀನರು ಇವುಗಳ ವ್ಯತ್ಯಾಸವನ್ನು ಹೇಳುತ್ತಾರೆ."—ಡಾ|| ಕೆ. ಕೃಷ್ಣಮೂರ್ತಿ: ಕ. ಕಾವ್ಯಾಲಂಕಾರ (ಅಡಿ ಟಿಪ್ಪಣಿ); ಪು. ೬೪.

ಮಾರ್ಗಕಾರನು ನಿದರ್ಶನಾಲಂಕಾರ ನಿರೂಪಣೆಯ ಉಪಸಂಹಾರ ಭಾಗದಲ್ಲಿ (ಪ. ೧೫೩) 'ಇಂತುದಿತಭೇದಮಂ ದೃಷ್ಟಾಂತಾಳಂಕಾರಮಾರ್ಗಮಂ ಕನ್ನಡದೊಳ್| ಸಂತತಗುಣಮಂ ಕೈಕೊಳ್ವಂತಾಗಿರೆ ಬಗೆದು ಪೇೞ್ಗೆ ಪರಮಕವೀಶರ್'—ಎಂದು, ನಿದರ್ಶನಾಲಂಕಾರದಿಂದಲೇ ಹುಟ್ಟಿದ ಅಲಂಕಾರಭೇದ ದೃಷ್ಟಾಂತ, ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ದಂಡಿ ಭಾಮಹರು 'ದೃಷ್ಟಾಂತ'ದ ಉಲ್ಲೇಖವನ್ನು ಮಾಡದಿದ್ದರೂ, ಕವಿಪ್ರಯೋಗದಲ್ಲಿ 'ಬಿಂಬ-ಪ್ರತಿಬಿಂಬಭಾವ' ಲಕ್ಷಿತವಾದ, ನಿದರ್ಶನೋದಿತವೆನ್ನಬಹುದಾದ ಅಲಂಕಾರಭೇದವನ್ನು ಬಹುಶಃ ಮೊದಲು ಗುರುತಿಸಿದ ಗೌರವವು ಮಾರ್ಗಕಾರನಿಗೇ ಸಲ್ಲಬೇಕೆಂದು ಕಾಣುತ್ತದೆ. 'ಕನ್ನಡದೊಳ್ ಸಂತತಗುಣಮಂ ಕೈಕೊಳ್ವಂತಾಗಿರೆ ಬಗೆದು ಪೇೞ್ಗೆ ಕವೀಶರ್' ಎಂದಿರುವುದರಿಂದ, ತತ್ಪೂರ್ವದಲ್ಲಿ 'ದೃಷ್ಟಾಂತ' ಕನ್ನಡ ಕಾವ್ಯಪ್ರಯೋಗದಲ್ಲಿ ಇರಲಿಲ್ಲವೆಂದೂ ಮಾರ್ಗಕಾರನು ಪ್ರಥಮತಃ ಕನ್ನಡ ಕವಿಗಳಿಗೆ ಮಾರ್ಗದರ್ಶನ ಮಾಡುತ್ತಿರುವನೆಂದೂ ಊಹಿಸಬಹುದಾಗಿದೆ. ('ದೃಷ್ಟಾಂತ'ವು ಕನ್ನಡ ದೇಸಿ ಕಾವ್ಯದಲ್ಲಿ ಪ್ರಚುರವಾಗಿದ್ದಿರಬಹುದೆಂದು ಮುಳಿಯ ತಿಮ್ಮಪ್ಪಯ್ಯನವರ ಊಹೆ.) ನಾಗವರ್ಮನು ರುದ್ರಟನ್ನನುಸರಿಸಿ 'ದೃಷ್ಟಾಂತ'ವೊಂದನ್ನೇ ನಿರೂಪಿಸಿದ್ದಾನೆ. ಅಂತೂ 'ದೃಷ್ಟಾಂತ'ವು ಕನ್ನಡ ಕವಿಜನಪ್ರಿಯವಾಗಿ, ಮಾರ್ಗಕಾರನ ಆಶಯವು ನೆರವೇರಿದೆ.

65 ಎರಡು ಮುದ್ರಿತ ಪ್ರತಿಗಳಲ್ಲಿಯೂ 'ಕಿರಿಯಿಸಿ' ಎಂದೇ ಸರಿಯಾದ ಪಾಠವಿದೆ. ನಮ್ಮ ಮುದ್ರಿತ ಪಾಠದಲ್ಲಿ 'ಕಿಡಿಯಿಸಿ' ಎಂದು ತಿದ್ದಿರುವುದು ತಪ್ಪು. 'ಕಿರಿ' ಎಂಬರ್ಥದಲ್ಲಿ 'ಕೆರೆ' ಎಂದು ಈಗಲೂ ಬಳಕೆ ಮಾತಿನಲ್ಲಿ ರೂಢಿಯಲ್ಲಿದೆ.

ಕಿರಿಯಿಸು=ಕ್ಷೌರ ಮಾಡಿಸಿಕೊ (ಕಿರಿ=ವಪನೇ, ತಂತು ಗ್ರಂಥೌಚ. ಶ. ಮ. ದ., ಧಾತುಪಾಠ). ಗಾವಿಲ=ಹೆಡ್ಡ, ಎಗ್ಗ, ಗಾಂಪ.

ಪದ್ಯ ೧೪೫ : "ವಿಧಿ ಪ್ರತಿಕೂಲನಾಗಿ ನಿಂತಿರುವಾಗ, ಆಪ್ತರ ಹಿತವಾದವೂ ನೀತಿಯೂ ('ಮತನಯಂ') ಅನುಕೂಲವಾಗಿದ್ದರೂ ಕೂಡ (ತದನುಗುಣವಾಗಿ ಎಷ್ಟೇ ಉದ್ಯೋಗ ಮಾಡಿದರೂ) ಕಾರ್ಯಸಾಧನೆ ಸಾಧ್ಯವಾಗುವುದಿಲ್ಲ. ಶವಕ್ಕೆ ಮಾಡಿದ ಉಪಚಾರದ ಹಾಗೆ, ಅದೆಲ್ಲವೂ ವ್ಯರ್ಥವಾದ ಆಯಾಸ."

ಪದ್ಯ ೧೪೬ : "ಕಾಲದೊಳ್ ಅಲ್ಲದೆ ಪದೆದು ಉದಯಿಸಲ್ ಎಂದುಂ ಉದಾರ ತೇಜಂ ಅರ್ಕನುಂ ಅಲ್ಲಂ; ಅದಱಿಂ ಸದುದಿತಗುಣಂ ನಯವಿದನಪ್ಪಂ ನೃಪಂ ಕಾಲಮಂ ನೆರಂ ತೋರ್ಕೆ."

'ಅಪಾರ ತೇಜಸ್ಸುಳ್ಳ ಸೂರ್ಯನೇ ಆದರೂ ಕೂಡ ಉದಯಿಸ ಬೇಕಾದ ಕಾಲದಲ್ಲಿ ಉದಯಿಸದೆ ಯಾವಾಗಲೋ ಸಂತೋಷದಿಂದ ಉದಯಿಸಿದರೂ ಕೂಡ ಅವನು ಸೂರ್ಯನೇ ಅಲ್ಲ; ಅದ್ದರಿಂದ, ಗುಣೋದಯನೂ ನೀತಿಜ್ಞನೂ ಆದ ರಾಜನು ಕಾಲವನ್ನು ಚೆನ್ನಾಗಿ ತೋರಿಸಲಿ, ಎಂದರೆ ಸಕಾಲದಲ್ಲಿ ಕಾರ್ಯೋನ್ಮುಖನಾಗಲಿ.'

ಪದ್ಯ ೧೪೭ : "ಪಡೆ ಅಱಿಯುಲಾದೊಡೆ ಅರಿಯಂ ಅಂತಃಕಳಂಕ ನೃಪ ಮಂಡಲಮಂ ಕಿಡಿಸುಗುಂ; ತಮಸ್ಸ್ವಭಾವಂ ರಾಹು ಅಱಿದು ಶಶಿ ಮಂಡಲಮಂ ತಡೆಯದೆ ಕಿಡಿಸುವವೋಲ್."

'ಒಳಗೆ ದೋಷವುಳ್ಳ (ದೌರ್ಬಲ್ಯವುಳ್ಳ) ಶತ್ರುರಾಜರ ಸಮೂಹ ವನ್ನು ಸೈನ್ಯವು ಅರಿತುಕೊಳ್ಳುವುದಾದರೆ (ಎಂದರೆ, ಶತ್ರುವಿನ ಒಳಗಿನ ದೌರ್ಬಲ್ಯವು ಸೈನ್ಯಕ್ಕೆ ಗೊತ್ತಾದರೆ), ತಾಮಸಿಕ ಸ್ವಭಾವದ (ರಾಕ್ಷಸೀಸ್ವಭಾವದ) ರಾಹು (ಅಂತಃಕಳಂಕವುಳ್ಳ ಚಂದ್ರಮಂಡಲವನ್ನು ತಡಮಾಡದೆ ಕೆಡಿಸುವ ಹಾಗೆ, ಆ ಸೈನ್ಯವು ಶತ್ರುವನ್ನು ನಾಶಮಾಡುವುದು.'

ಪದ್ಯ ೧೪೮ : 'ಶತ್ರುವನ್ನು ಅಲ್ಪ ಸಾಮರ್ಥ್ಯವುಳ್ಳವನೆಂದು ತಿರಸ್ಕಾರ ಮಾಡಿ (ಉದಾಸೀನ ಮಾಡಿ), ಛಿದ್ರಛಿದ್ರವಾಗುವಂತೆ ಅವನನ್ನು ನಾಶಪಡಿಸದೆ ಹೋದರೆ, ಮೋಡಗಳ ಸಮೂಹವು ಸೂರ್ಯನನ್ನು ಮರೆಮಾಡುವಹಾಗೆ, ಆ 'ಕಿರಿಯ ಹಗೆ' ಕಾಲಾವಕಾಶವು ದೊರಕಿಸಿ ಕೊಡುವ ಬಲವನ್ನು ಹೊಂದಿ ('ಪೆತ್ತು ಕಾಲದ ಬಲಮಂ'), ಅನುಕೂಲ ಸಂದರ್ಭವನ್ನು ಕೂಡಿಕೊಂಡು, ಸಮರ್ಥನಾಗಿ ಇರಿಯುತ್ತಾನೆ, ಎಂದರೆ ಆಕ್ರಮಣ ಮಾಡುತ್ತಾನೆ ('ನೆರೆದು ಅನುವಂ, ನೆಱೆದು ಇಱುಗುಂ).'

ಪಱಿಪಡು=ಕತ್ತರಿಸಿಹೋಗು, ಛಿದ್ರವಾಗು. ಪೆಱು=ಹೊಂದು, ಪಡೆ (ಉಪಲಬ್ಧೌ, ಪ್ರಸೂತೇಚ—ಶ. ಮ. ದ; ಪೆತ್ತು=ಹೊಂದಿ). ನೆಱೆ=ಸಮರ್ಥವಾಗು. ನೆರೆ=ಕೂಡಿಕೊಳ್ಳು. ಅಂಬುದ=ಮೋಡ.

ಪದ್ಯ ೧೪೯ : "ಒಳಗಿರ್ದ ವೈರಿಗಳ್ ಅಧಿಕ ವಿಭವರ್ಕಳುಮಂ ಮೊಕ್ಕಳಂ ಪೆರ್ಚಲ್ ಈಯರ್; ಬಡಬಾನಳಂ ತಳರದೆ ಒಡನಿರ್ದು ಅಂಬುಧಿಯುಂ ಪೆರ್ಚಲ್ ಈಯದಂತೆ."

"ಬಡಬಾಗ್ನಿ ಸಮುದ್ರದೊಳಗೆ ಒಡನಿದ್ದುಕೊಂಡು ಅಲ್ಲಿಂದ ಹೊರಡದೆ ಅದು ಹೆಚ್ಚಲು ಅವಕಾಶ ಕೊಡುವುದಿಲ್ಲ; ಅದೇ ರೀತಿ, ರಾಜರು ಎಷ್ಟೇ ವೈಭವೋಪೇತರಾದರೂ ಒಳಶತ್ರುಗಳು (ಎಂದರೆ, ನಮ್ಮವರೇ ಆದರೂ ಶತ್ರುಪಕ್ಷದವರಾಗಿ ದ್ರೋಹ ಬಗೆಯುವ ಸ್ವಾರ್ಥಿಗಳು) ಆ ರಾಜರು ಅಭಿವೃದ್ಧಿ ಹೊಂದಲು ವಿಶೇಷವಾಗಿ ಅವಕಾಶ ಕೊಡುವುದಿಲ್ಲ.'

ಮೊಕ್ಕಳಂ=ಹೆಚ್ಚಾಗಿ, ಹಿರಿದಾಗಿ. ತಳರ್=ಚಲಿಸು, ಹೊರಡು. ಅಂಬುಧಿ=ಸಮುದ್ರ.

ಪದ್ಯ ೧೫೦ : "ಪರಪಕ್ಷಮುಳ್ಳಿನಂ ತನಗೆ ಇರವು ಉಬ್ಬಸಂ, ಅದಱಿಂ ಅದಂ ಏಗೆಯ್ದುಂ ಅಱೆವುದು; ಪರೆದ ಪುಡಿಯೆಲ್ಲಮುಂ ನೀರ್‌ನೆರೆದು ಕೆಸರ್‌ಮಾಡದ ಅನ್ನೆಗಂ, ನೆಲಸುಗುಮೇ?"

'ಶತ್ರುಪಕ್ಷವು ಇರುವವರೆಗೂ ತಾನು ಇರುವುದು ಕ್ಲೇಶಕರ; ಆದ್ದರಿಂದ, ಅದನ್ನು (ಶತ್ರುಪಕ್ಷವನ್ನು) ಏನಾದರೂ ಮಾಡಿ ನಾಶ ಪಡಿಸತಕ್ಕದ್ದು. ಹರಡಿಕೊಂಡಿರುವ ಹುಡಿಮಣ್ಣೆಲ್ಲವನ್ನೂ ನೀರು ಅದರೊಂದಿಗೆ ಕೂಡಿಕೊಂಡು ಅದನ್ನು ಕೆಸರನ್ನಾಗಿ ಮಾಡುವವರೆಗೂ ಅದು ಒಂದು ಕಡೆ ನೆಲಸಿರುವುದೇ?'

ಉಬ್ಬಸ=ಕ್ಲೇಶ, ಕಷ್ಟ, ಪ್ರಯಾಸ. ಅಱ=ನಾಶಪಡಿಸು, ನಾಶ ವಾಗು; ಸಾಯಿ(ಸು). ಪರೆ=ಚೆದರು, ವ್ಯಾಪಿಸು, ಹರಡಿಕೊಳ್ಳು.

ಪದ್ಯ ೧೫೧: "ನೆಗಟ್ಬನ ಇಚ್ಛೆಯಂ ಕುಱಿಗೊಂಡು ಅಱಿಯದೆ ತನ್ನ ಇಚ್ಛೆಯಿಂದೆ ಕಜ್ಜಂಬೇೞ್ವಂ ತಱಿಸಲಿಸಲ್ ಆಱಂ; ಆರ್ತನ ತೆಱನಱಿಯದೆ ಮರ್ದುವೇೞ್ವ ಬೆಜ್ಜನ ತೆಱದಿಂ."

'ಕಾರ್ಯಮಾಡುವವನ (ರಾಜನ) ಇಚ್ಛೆಯನ್ನು ಇಂಗಿತದಿಂದ ಅರಿತುಕೊಳ್ಳದೆ, (ಸಲಹೆಕೊಡುವವನು, ಮಂತ್ರಿ) ತನ್ನ ಇಷ್ಟಾನು ಸಾರವಾಗಿ ಕಾರ್ಯವನ್ನು ಹೇಳುವವನು (ಕಾರ್ಯನಿರ್ವಾಹದಲ್ಲಿ ಸಲಹೆ ಹೇಳುವವನು), ಆತನಿಂದ ನಿರ್ಣಯಮಾಡಿಸಲಾರನು; (ರೋಗ ದಿಂದ) ನರಳುತ್ತಿರುವವನ ಸ್ಥಿತಿಯನ್ನು ಅರಿತುಕೊಳ್ಳದೆ ಔಷಧ ವನ್ನು ತಿಳಿಸುವ ವೈದ್ಯನ ಹಾಗೆ'.

ಕುಱಿಗೊಂಡು=(ಧಾ., ಕುಱಿಗೊಳ್) ಇಂಗಿತವರಿತು, ಉದ್ದೇಶ ವನ್ನು(ಗುರಿಯನ್ನು) ಗ್ರಹಿಸಿ; ಉದ್ದೇಶಿಸಿ. ನೆಗೞ್ಬನ=(ಧಾ., ನೆಗೞ್=ಉದ್ಯೋಗೇ ಖ್ಯಾತೌ ನಕ್ರೇಚ-ಶ.ಮ.ದ.) ('ನೆಗೞ್ವನ' ಇರಬಹುದೆ?) ಉದ್ಯೋಗಿಯ, ಕಾರ್ಯಮಾಡುವವನ. ಆರ್ತ= ಸಂಕಷ್ಟದಲ್ಲಿರುವವನು, ನರಳುತ್ತಿರುವವನು; (ಈ ಸಂದರ್ಭದಲ್ಲಿ, ರೋಗಪೀಡಿತ).

ಪದ್ಯ ೧೫೨: "ಪರಿಣಾಮಪಥ್ಯಮಂ ಸುಖಪರಿಕರಮಂ ನಿರತಿಶಯ ರಸ ಸಮೇತಮಂ ಈ ಮಾತಂ ಮೆಚ್ಚದನ್ನರಾರ್? ಅರೋಚಕಂ ಸೊಗ ಯಿಸುವ ಉಣಿಸಂ ಮೆಚ್ಚದಂತೆ."

"ನಾಲಗೆಯ ರುಚಿಯನ್ನು ಕಳೆದುಕೊಂಡಿರುವವನು (ಅರೋಚಕ, "ಅಜೀರ್ಣ ರೋಗಿ) (ಷಡ್ರಸೋಪೇತವಾಗಿ) ಸೊಗಸಾಗಿರುವ ಊಟವನ್ನು ಮೆಚ್ಚಿಕೊಳ್ಳದ ರೀತಿಯಲ್ಲಿ,—ಪರಿಣಾಮದಲ್ಲಿ ಹಿತಕರವಾದ ಸುಖಕರವಾದ ವಿಷಯದಿಂದ ಕೂಡಿದ ರಸವತ್ತಾದ ಈ ಮಾತನ್ನು (ಎಂದರೆ, ಈವರೆಗೆ ಹೇಳಿದ ಹಿತವಚನವನ್ನು) ಮೆಚ್ಚದೆ ಇರುವವರು ಯಾರು? (ಮೆಚ್ಚದವರು ಯಾರೂ ಇಲ್ಲ ಎಂದು ಉತ್ತರ. ಮೆಚ್ಚದವರು ಇದ್ದರೆ, ಅವರು ಅರೋಚಿಕಿಗೆ ಸಮಾನ ಎಂದು ತಾತ್ಪರ್ಯ).[66]

ಪದ್ಯ ೧೫೩: ೧೪೩ನೆಯ ಪದ್ಯಕ್ಕೆ ಸಂಬಂಧಪಟ್ಟ ಅಡಿಟಿಪ್ಪಣಿಯನ್ನು ನೋಡಿ.

ಸಹೋಕ್ತಿ

ಪದ್ಯ ೧೫೪: "ಗುಣ ಜಾತಿ ಮೊದಲಾದವುಗಳಲ್ಲಿ ಸಂಬಂಧವಿದ್ದು, ಅವು ಒಂದನ್ನೊಂದು ಹೋಲುತ್ತ ಒಡನಿರುವುವು (ಅಥವಾ ಕ್ರಿಯೆ

66 'ಜನಮುಱಿಯದನ್ನೆಗಂ ಮುನ್ನಂ ನಯಮುಱಿದಱಿಪಲಾರ್ಪೊಡದು ಮಂತ್ರಿಗುಣಂ' ಎಂದು ಮೊದಲು ಮಂತ್ರಿಗುಣವೇನೆಂಬುದನ್ನು ತಿಳಿಸಿ, ಅದಕ್ಕೆ ಅನುಸಾರವಾಗಿ ಮೇಲ್ಕಂಡ (೧೪೪–೧೫೨ ಪದ್ಯಗಳಲ್ಲಿ ನಿರೂಪಿಸಿರುವ) 'ಪರಿಣಾಮಪಥ್ಯ'ವಾದ ರಾಜನೀತಿಯ ಮಾತನ್ನು ನೃಪತುಂಗನಿಗೆ ಆತನ ಮಂತ್ರಿಯೋ ಹಿತಚಿಂತಕನೋ ಹೇಳಿದ್ದಿರಬಹುದಾದುದನ್ನೇ ಮಾರ್ಗಕಾರನು ಇಲ್ಲಿ ಕಾವ್ಯೋಚಿತ ರೀತಿಯಲ್ಲಿ ಪುನರುಲ್ಲೇಖಿಸಿರಬಹುದು. ನೃಪತುಂಗನ ವಿಚಾರವಾಗಿ ಕವಿಯೊಬ್ಬನು ಬರೆದಿರಬಹುದಾದ ಕಾವ್ಯವೊಂದರಿಂದ ಈ ಪದ್ಯಗಳನ್ನೂ, 'ಕವಿರಾಜಮಾರ್ಗ'ದಲ್ಲಿ ಅಲ್ಲಲ್ಲಿ ಕಂಡುಬರುವ ಇಂಥ 'ರಾಜಕೀಯ ಧ್ವನಿ'ಯುಳ್ಳ ಇತರ ಪದ್ಯಗಳನ್ನೂ ಉದ್ಧರಿಸಿರಬಹುದೆಂದು ಮುಳಿಯ ತಿಮ್ಮಪ್ಪಯ್ಯನವರು ಊಹಿಸುತ್ತಾರೆ. (ಕ. ರಾ. ವಿವೇಕ–ಭಾಗ ೧; ಪು. ೪೪). ಒಂದು ವೇಳೆ ಅಂಥದೊಂದು ನೃಪತುಂಗ ವಿಷಯಕ ಕಾವ್ಯವಿದ್ದು, ಅದರಿಂದಲೇ ಈ ಪದ್ಯಗಳನ್ನು ಉದ್ಧರಿಸಿದ್ದುದಾದರೆ, ಆ ಕಾವ್ಯ ಕವಿರಾಜಮಾರ್ಗಕಾರನದೇ ಆಗಿರಬಾರದೇಕೆ? ಏನೆಂದರೂ, ಆಧಾರ ದೊರಕುವವರೆಗೆ, ಇವೆಲ್ಲಾ ಊಹಾಪ್ರಪಂಚಕ್ಕೇ ಸೇರಿದುವಾಗುತ್ತವೆ.

ಯಾದಲ್ಲಿ, ಒಡನೆ ನಡೆಯುವುವು) ಎಂದು ವರ್ಣಿಸಿದರೆ ಅದು ಸಹೋಕ್ತಿ." ('ಗುಣಜಾತ್ಯಾದಿ' ಎಂದಿರುವುದರಿಂದ 'ಜಾತ್ಯಲಂಕಾರ' ದಲ್ಲಿ ನಿರ್ದಿಷ್ಟವಾದ ಕ್ರಿಯಾ, ದ್ರವ್ಯಗಳೂ 'ಆದಿ' ಎಂಬ ಪದದಿಂದ ಸೂಚಿತವಾಗಿವೆ. 'ಸಹೋಕ್ತಿಃ ಸಹಭಾವಸ್ಯ ಕಥನಂ ಗುಣಕರ್ಮಣಾಂ' ಎಂಬ ದಂಡಿಯ ಲಕ್ಷಣದಲ್ಲಿ 'ಜಾತಿ'ಯ ಎಡೆಯಲ್ಲಿ 'ಕರ್ಮ' ಅಥವಾ 'ಕ್ರಿಯೆ' ಉಕ್ತವಾಗಿದೆ.) 'ಸಹಭಾವ' ಎಂದರೆ 'ಒಡಗೂಡಿ ಇರುವಿಕೆ', ಅಥವಾ, 'ಒಡನೆ ಸಂಭವಿಸುವುದು.'[67]

ಪದ್ಯ ೧೫೫: "ಪರಮೋದಯನ ಗುಣಸಂತತಿಯೊಡನೆ ಆಶಾಧೀನವಾದ (ಎಂದರೆ, ದಿಗಂತವ್ಯಾಪ್ತವಾದ) ಯಶೋವಿತಾನವು (ಕೀರ್ತಿಯ (ಮೇಲ್ಕಟ್ಟು) ಅತಿ ಧವಳವಾಯ್ತು; ಹಾಗೂ, ಆತನ ಘನತೆಯೊಂದಿಗೆ ಮಹಾ ವೈಭವವೂ ಎಲ್ಲ ಕಾಲಕ್ಕೂ ಹೆಚ್ಚಿತು." ಇಲ್ಲಿ, ಗುಣವೂ ಕೀರ್ತಿಯೂ ಒಡಗೂಡಿ ಧವಳವಾದುವು; 'ಧಾವಳ್ಯ' ದಲ್ಲಿ ಎರಡೂ 'ದೊರೆ' ಯಾಗಿವೆ; ಮೊದಲೇ ಧವಳವಾಗಿದ್ದ ಅವು ಕೂಡಿಯೇ 'ಅತಿ ಧವಳ' ವಾದುವು. ಘನತೆ ವೈಭವಗಳೆರಡೂ ಏಕಕಾಲದಲ್ಲಿ ಹೆಚ್ಚಿದುವು. 'ಅತಿಶಯ' ವಾಗುವುದರಲ್ಲಿ,

67 ಭಾಮಹನ ಲಕ್ಷಣವಿವರಣೆ ಹೆಚ್ಚು ಖಚಿತವಾಗಿದೆ. 'ತುಲ್ಯ ಕಾಲೇ ಕ್ರಿಯೇ ಯತ್ರ ವಸ್ತುದ್ವಯಸಮಾಶ್ರಯೇ | ಪದೇನೈಕೇನ ಕಥ್ಯೇತೇ ಸಹೋಕ್ತಿಃ ಸಾ ಮತಾ ಯಥಾ' (ಕಾವ್ಯಾಲಂಕಾರ: III–೩೯). "ಎರಡು ವಸ್ತುಗಳಲ್ಲಿ ಏಕ ಕಾಲದಲ್ಲಿ ನಡೆಯುವ ಕ್ರಿಯೆಯನ್ನು ಒಂದೇ ಪದದಿಂದ ತಿಳಿಸುವುದು 'ಸಹೋಕ್ತಿ'." 'ಸಹ' (= ಒಂದಿಗೆ, ಒಡನೆ, ಒಟ್ಟಿಗೆ) ಎಂಬುದೇ ಆ ಒಂದು ಮಾತು. ದಂಡಿ ಭಾಮಹರಿಬ್ಬರ ಲಕ್ಷ್ಯಗಳಲ್ಲಿಯೂ 'ಸಹ' ಎಂಬ ಮಾತು ತಪ್ಪದೆ ಬಂದಿದೆ. ಮಾರ್ಗಕಾರನು ಇದನ್ನು ಹೇಳದಿದ್ದರೂ, ಲಕ್ಷ್ಯದಲ್ಲಿ 'ಒಡನೆ' ಎಂಬ ಮಾತು ಪ್ರಯೋಗವಾಗಿದೆ. ಮಾರ್ಗಕಾರನ 'ದೊರೆಯೆಣಿಸುವುದು' ಎಂಬ ಮಾತು ಗಮನಾರ್ಹ. ಎಂದರೆ, ಏಕಕಾಲದಲ್ಲಿ ನಡೆಯುವ ಕ್ರಿಯೆಗಳೆರಡರಲ್ಲಿ 'ದೊರೆ' ಎಂದರೆ 'ಹೋಲಿಕೆ' (ಔಪಮ್ಯ) ಇರಬೇಕು. (ಈ ಹೋಲಿಕೆ ಗುಣಕ್ರಿಯಾದಿಗಳಲ್ಲಿಯೆ ಗಮ್ಯವಾಗಿರುತ್ತದೆ.)

'ಹೆಚ್ಚು'ವುದರಲ್ಲಿ, ಎರಡೂ ಒಂದಕ್ಕೊಂದು 'ದೊರೆ'; ಹಾಗೂ, ಎರಡರಲ್ಲಿ 'ಸಹ' ಭಾವವಿದೆ. 'ಸಹ' (=ಒಡನೆ) ಎಂಬ ಮಾತೂ ಇದೆ.

('ಅತಿ ಧವಳ' ಎಂಬಲ್ಲಿ ನೃಪತುಂಗನ 'ಅತಿಶಯ ಧವಳ' ಎಂಬ ಬಿರುದೇ ಸೂಚಿತವಾಗಿರುವಂತಿದೆ; 'ಪರಮೋದಯ' ಎಂಬುದೂ ಅವನ ಬಿರುದೇ. ಹೀಗೆ, ಈ ಪದ್ಯದಲ್ಲಿ ನೃಪತುಂಗನ ಗುಣ ವರ್ಣನೆಯೇ ಭಾಸವಾಗುತ್ತದೆ. ದಂಡಿಯ ಲಕ್ಷ್ಯಗಳನ್ನು ಅನುವಾದಿಸದೆ, ಸ್ವಂತ ಲಕ್ಷ್ಯಪದ್ಯವನ್ನು ಕೊಟ್ಟಿರುವುದು ಈ ಊಹೆಗೆ ಬೆಂಬಲವಾಗಿದೆ).

ಸಂಕೀರ್ಣಾಲಂಕಾರ

ಪದ್ಯ ೧೫೬: "ಉಕ್ತಾಳಂಕಾರ ಸಮೂಹ ಸಂಕರಕ್ರಮಂ ಸಂಕೀರ್ಣಂ ಅಕ್ಕುಂ." ಸಂಕರ ಎಂದರೆ ಬೆರಕೆ, ಮಿಶ್ರಣ. (ಈ ಗ್ರಂಥದಲ್ಲಿ) ಉಕ್ತವಾದ ಅಲಂಕಾರಗಳನ್ನು ಬೆರಸಿ ಹೇಳುವ ಕ್ರಮವೇ ಸಂಕೀರ್ಣಾಲಂಕಾರ.

ದಂಡಿ ಇದನ್ನು 'ಸಂಸೃಷ್ಟಿ' ಎಂದು ಕರೆದಿದ್ದಾನೆ:

ನಾನಾಲಂಕಾರಸಂಸೃಷ್ಟಿಃ ಸಂಸೃಷ್ಟಿಸ್ತು ನಿಗದ್ಯತೇ ||
ಅಂಗಾಂಗಿ ಭಾವಾವಸ್ಥಾನಂ ಸರ್ವೇಷಾಂ ಸಮಕಕ್ಷತಾ |
ಇತ್ಯಲಂಕಾರ ಸಂಸೃಷ್ಟೇರ್ಲಕ್ಷಣೀಯಾ ದ್ವಯೀ ಗತಿಃ || –II, ೩೫೯–೩೬೦

['ನಾನಾಲಂಕಾರಗಳನ್ನು ಸಂಸೃಷ್ಟಿ ಮಾಡುವುದೇ (ಎಂದರೆ ಬೆರಕೆ ಮಾಡುವುದೇ) 'ಸಂಸೃಷ್ಟಿ'. ಹೀಗೆ ಸಂಸೃಷ್ಟಿಯಾಗುವ ಅಲಂಕಾರಗಳಲ್ಲಿ ಅಂಗಾಂಗಿ ಭಾವವುಳ್ಳವು, ಮತ್ತು ಸಮಪ್ರಾಧಾನ್ಯವುಳ್ಳವು ಎಂದು ಎರಡು ಬಗೆಗಳಿರುವುದನ್ನು ಲಕ್ಷಿಸಬೇಕು.' (ಮಾರ್ಗಕಾರನು ಈ ಎರಡು ಬಗೆಗಳನ್ನು ಹೇಳದಿದ್ದರೂ ಅವನು ಕೊಟ್ಟಿರುವ ಲಕ್ಷ್ಯಪದ್ಯದಲ್ಲಿ ಈ ಲಕ್ಷಣ ಗಮ್ಯವಾಗಿದೆ). ಸಂಸೃಷ್ಟಿಯಾದ ಅಲಂಕಾರಗಳಲ್ಲಿ ಒಂದು ಪ್ರಧಾನವಾದ ಅಲಂಕಾರವು ಇನ್ನೊಂದನ್ನು ಒಳಗೊಂಡಿದ್ದರೆ, ಪ್ರಧಾನವಾದದ್ದು 'ಅಂಗಿ' (ಅಂಗವನ್ನುಳ್ಳದ್ದು);

ಅಂತರ್ಗತವಾಗಿರುವುದು 'ಅಂಗ.' 'ಸಮುಕಕ್ಷ್ಯ'ದಲ್ಲಿ ಎರಡೂ ಪ್ರಧಾನ ವಾಗಿರುತ್ತವೆ.][68]

ಪದ್ಯ ೧೫೭: ಇದು ಸ್ವಂತ ಲಕ್ಷ್ಯಪದ್ಯ. ಆದ್ದರಿಂದ, ಈ ಪದ್ಯದಲ್ಲಿಯೂ ಮಾರ್ಗಕಾರನು ನೃಪತುಂಗನನ್ನೇ ಕೀರ್ತಿಸಿರುವಂತೆ ಕಾಣುತ್ತದೆ.

ಈ ಪದ್ಯದಲ್ಲಿ ವರ್ಣಿತನಾದ 'ನೃಪವೃಷಭ' ನು—(i) 'ಅಪ ರಾಗಂ ಮುನಿಪತಿವೋಲ್': ಮುನಿಪತಿಯ ಹಾಗೆ 'ಅಪರಾಗನು'. ಇದು ಉಪಮಾಲಂಕಾರ; 'ಅಪರಾಗನು' ಎಂಬ ಶ್ಲೇಷೆಯನ್ನು ಒಳಗೊಂಡದ್ದರಿಂದ, ಇದು 'ಅಂಗಿ'; ಶ್ಲೇಷೆ ಉಪಮೆಯ 'ಅಂಗ' ವಾಗಿ ಬಂದಿದೆ. (ಅಪರಾಗ=೧. (ಮುನಿಪತಿಯ ಹಾಗೆ) ವೀತ ರಾಗ, ರಾಗದ್ವೇಷಾದಿಗಳಿಲ್ಲದವನು; ೨. (ಅ+ಪರಾಗಂ) (ಸೂರ್ಯ

---

68 ಅನೇಕ ಅಲಂಕಾರಗಳನ್ನು ಸಂಮಿಶ್ರಮಾಡಿದರೆ ಅದು 'ಒಂದು' ಅಲಂಕಾರ ಹೇಗಾದೀತು ಎಂಬ ಸಂದೇಹ ಉಂಟಾಗುವುದು ಸಹಜ. ಭಾಮಹನ ಲಕ್ಷಣ ನಿರೂಪಣೆ ಮನೋಜ್ಞವಾಗಿದ್ದು, ಸಂದೇಹದ ಪ್ರಶ್ನೆಗೆ ಸಮರ್ಪಕ ಉತ್ತರವನ್ನು ಕೊಡುವಂತಿದೆ:

ವರಾ ವಿಭೂಷಣಾ ಸಂಸೃಷ್ಟಿರ್ಬಹ್ವಲಂಕಾರಯೋಗತಃ |
ರಚಿತಾ ರತ್ನಮಾಲೇವ ಸಾ ಚೈವಮುದಿತಾ ಯಥಾ ||

ಕಾವ್ಯಾಲಂಕಾರ, III—೪೯.

[ಬಹು ಅಲಂಕಾರಗಳ ಸಂಯೋಗದಿಂದ ಉಂಟಾಗುವ 'ಸಂಸೃಷ್ಟಿ' ರತ್ನ ಮಾಲೆಯಂತೆ ಶ್ರೇಷ್ಠವಾದ ಅಲಂಕಾರ].

ಒಂದೊಂದು ಅಲಂಕಾರವೂ ಬಿಡಿಬಿಡಿಯಾಗಿ ರತ್ನದಂತೆ ಶೋಭಿಸಿದರೆ, ಅವುಗಳನ್ನು ಒಂದು ಪದ್ಯದಲ್ಲಿ ಸೇರಿಸಿದರೆ ರತ್ನಮಾಲೆಯ ಹಾಗೆ ಶೋಭಿಸು ತ್ತದೆ. ಅಥವಾ, ಬೇರೆ ಬೇರೆ ಬಣ್ಣಗಳ ಬೇರೆ ಬೇರೆ ಜಾತಿಯ ಹೂಗಳ ಗೊಂಚಲು ಎನ್ನಬಹುದು. ಇಂಥ ಒಂದು 'ಅಲಂಕಾರಮಾಲೆ' ಯನ್ನು ಅಥವಾ 'ಗುಚ್ಛ' ವನ್ನು ರಚಿಸುವುದಕ್ಕೂ ಜಾಣ್ಮೆ ಬೇಕು. ಆದ್ದರಿಂದ, ಇದು ಅಲಂಕಾರವಲ್ಲ ಎಂಬ ಸಂದೇಹ ಬೇಕಿಲ್ಲ. ಇದನ್ನರಿತೇ, 'ಶಂಕಾವಿರಹಿತ ಚಿತ್ತರ್ ಕವಿವೃಷಭರ್ಕಳ್ ಅದಂ ಕಾವ್ಯದೊಳ್ ಇಂತು ಪೇಟ್ಟೆ' ಎಂದು ಮಾರ್ಗಕಾರನು ಹೆಚ್ಚಿನ ವಿವರಣೆಯನ್ನು ಕೊಟ್ಟಿರುವ ಹಾಗೆ ಕಾಣುತ್ತದೆ.

ಚಂದ್ರರಂತೆ) ಗ್ರಹಣ ಹಿಡಿಯದವನು]. (ii) 'ಅಪಗತಗುಣನಾಗಿಯುಂ ನಿಜಾಯತದೋಷಂ': ಗುಣಯುತನಾಗಿಯೂ ತನ್ನಲ್ಲಿ ಹೆಚ್ಚಾದ ದೋಷವುಳ್ಳವನು. [ದಂಡಿಯಾಗಲಿ ಮಾರ್ಗಕಾರನಾಗಲಿ 'ವಿರೋಧಾಭಾಸ' ವನ್ನು ಉಲ್ಲೇಖಿಸದಿದ್ದರೂ ಆಧುನಿಕರು ಹೇಳುವ ಆ ಅಲಂಕಾರವನ್ನಿಲ್ಲಿ ಗುರುತಿಸಬಹುದು. 'ನಿಜಾಯತ ದೋಷ' ಎಂಬ ಪದದಲ್ಲಿನ ಶ್ಲೇಷಾರ್ಥದ ಮೂಲಕ ವಿರೋಧದ ತೋರಿಕೆಯನ್ನು ಪರಿಹರಿಸಬೇಕು. 'ನಿಜಾಯತ ದೋಷ' = ೧. ತನ್ನಲ್ಲಿನ ವಿಸ್ತಾರವಾದ ದೋಷ; ೨. ತನ್ನ 'ಆಯತ' ದ ಎಂದರೆ ದೇಹದ ಔನ್ನತ್ಯವನ್ನೆ ದೋಷವಾಗಿ ಉಳ್ಳವನು (?)]. (iii) 'ವಿಪುಳ ಯಶೋಧನ ಲೋಭಂ': ಹೆಚ್ಚಾದ ಕೀರ್ತಿಯೆಂಬ ಧನದ ವಿಚಾರದಲ್ಲಿ ಸಂಗ್ರಹಬುದ್ಧಿಯುಳ್ಳವನು. (ಇದು ರೂಪಕಾಲಂಕಾರ). (iv) 'ಅರಾತಿ ನಿಕರ ತರು ದವ ದಹನಂ': 'ಶತ್ರು ಸಮೂಹವೆಂಬ ಮರಗಳ ಕಾಡನ್ನು ಸುಡುವವನು'.

ಈ ಲಕ್ಷ್ಯಪದ್ಯದಲ್ಲಿ ಉಪಮೆ, ಶ್ಲೇಷೆ, ರೂಪಕ—ಇವು ಸಂಕರವಾಗಿರುವುದನ್ನು ಕಾಣಬಹುದು.

ಪರಿವೃತ್ತಿ

ಪದ್ಯ ೧೫೮: "ನಿರುಪಮಂ ಅರ್ಥಸ್ವರೂಪ ವಿನಿಮಯ ವಚನಂ ಪರಿವೃತ್ತಿಯೆಂಬುದಕ್ಕುಂ". ('ಅರ್ಥಾನಾಂ ಯೋ ವಿನಿಮಯಃ ಪರಿವೃತ್ತಿಸ್ತು ಸಾ ಯಥಾ'—ದಂಡಿ).

"ಅರ್ಥಗಳು ವಿನಿಮಯವಾಗುವಂತೆ (ಎಂದರೆ ಒಂದನ್ನು ಕೊಟ್ಟು ಮತ್ತೊಂದನ್ನು ಪ್ರತಿಯಾಗಿ ಪಡೆದಂತೆ) ವರ್ಣಿಸುವುದು ಪರಿವೃತ್ತಿ".

ಪದ್ಯ ೧೫೯: 'ಪರಿವೃತ್ತಿ'ಗೆ ಉದಾಹರಣೆ. ಪದ್ಯದ ಅನ್ವಯ: "ದುರಾಹವ ರಂಗಾಂತರದೊಳ್ ಅಭೀತಂ (=ಹೋರಾಡಲು ಕಷ್ಟಸಾಧ್ಯವಾದ ಯುದ್ಧರಂಗದ ನಡುವೆ ಭೀತಿಯಿಲ್ಲದವನಾಗಿ), ನಿಜಾರಿ ಸಮಿತಿಗಳಿಂದಂ (=ತನ್ನ ಶತ್ರುಸಮೂಹದಿಂದ) ನೆರೆದ ಜಯಂ

ಗೊಂಡು (=ಕೂಡಿಬಂದ ಗೆಲವನ್ನು ಪಡೆದು), ಆಗಡೆ (=ಆ ಕೂಡಲೆ), ಸುರಾಂಗನಾ ಸುರತ ವಿಷಯ ಸುಖಮಂ (=ದೇವತಾ ಸ್ತ್ರೀಯರೊಂದಿಗೆ ಸಂಭೋಗವನ್ನು), ಅರಿಗೆ ಕೊಟ್ಟಂ". 'ಪರಾಕ್ರಮಿಯಾದ ರಾಜನೊಬ್ಬನು ಶತ್ರುಸಂಹಾರ ಮಾಡಿ ಜಯಗಳಿಸಿದನು' ಎಂಬುದಿಷ್ಟೆ ತಾತ್ಪರ್ಯ. ಅವರಿಂದ ಪಡೆದ ಜಯಕ್ಕೆ ಪ್ರತಿಯಾಗಿ ಅವರಿಗೆ ಸ್ವರ್ಗಸುಖವನ್ನು ಕೊಟ್ಟನು ಎಂದು 'ಅರ್ಥವಿನಿಮಯ' ಮಾಡಿರುವುದರಿಂದ ಈ 'ವಚನ' ಆಲಂಕಾರಿಕವಾಗಿ ಪರಿಣಮಿಸಿದೆ.

['ಉದಾರ' ಗುಣಕ್ಕೆ ಕೊಟ್ಟಿರುವ ಲಕ್ಷ್ಯವನ್ನು (ಪ. II, ೮೦) ಇದರೊಂದಿಗೆ ಹೋಲಿಸಿ.]

ವ್ಯಾಜಸ್ತುತಿ

ಪದ್ಯ ೧೬೦: "ಗುಣಸಮೂಹವನ್ನು ದೋಷವೆಂದು ತೋರುವ ಹಾಗೆ ಅತಿಶಯವಾಗಿ ಹೇಳುವುದು ವ್ಯಾಜಸ್ತುತಿ; ಇದು ಶಬ್ದಾರ್ಥಗಳಿಂದ ನಿಶ್ಚಿತಗೊಂಡಿದೆ".

['ನಿಶ್ಚಿತ ಶಬ್ದಾರ್ಥಂ': ಶಬ್ದ ಮತ್ತು ಅರ್ಥ— ಈ ಎರಡನ್ನೂ ಅವಲಂಬಿಸಿರತಕ್ಕದ್ದು ಈ ಅಲಂಕಾರ. ಕೇವಲ ಶಾಬ್ದಿಕವಾಗಿ ಗಮನಿಸಿದರೆ ದೋಷವರ್ಣನೆಯಾಗಿಯೂ, ಆ ಶಬ್ದದ ಶ್ಲೇಷಾರ್ಥವನ್ನು ಗಮನಿಸಿದರೆ ಗುಣವರ್ಣನೆಯಾಗಿಯೂ ಕಾಣುವುದು-ಎಂದು ಇದರ ವಿವರಣೆ. ಇದು,—'ಇತಿ ಶ್ಲೇಷಾನುವಿದ್ಧಾನಾಮನ್ಯೇಷಾಂ ಚೋಪಲಕ್ಷ್ಯತಾಂ| ವ್ಯಾಜಸ್ತುತಿಪ್ರಕಾರಾಣಾಮಪರ್ಯಂತಃ ಪ್ರವಿಸ್ತರಃ ||'—ಎಂಬ 'ಕಾವ್ಯಾದರ್ಶ'ದ ಶ್ಲೋಕದಿಂದ (II, ೩೪೭) ಸ್ಪಷ್ಟವಾಗುತ್ತದೆ].

ಪದ್ಯ ೧೬೧: ಇದು, 'ಉದಾರ ಚರಿತ' ನಾದ ನಾಯಕನು (ರಾಜನು) ತನ್ನ ವಕ್ಷಸ್ಥಲದಲ್ಲಿ ಲಕ್ಷ್ಮಿಯನ್ನು ಧರಿಸಿರುವ ಸಾಕ್ಷಾತ್ ನಾರಾಯಣ—ಎಂದು ಸ್ತುತಿಸುವ ವರ್ಣನೆ. 'ಕವಿರಾಜಮಾರ್ಗ'ದ ಪ್ರಾರಂಭದ ಎರಡು ಪದ್ಯಗಳಲ್ಲಿ ನೃಪತುಂಗನಿಗೂ ವಿಷ್ಣುವಿಗೂ

ಅಭೇದವನ್ನು ಕಲ್ಪಿಸಿ ಮಾಡಿರುವ ವರ್ಣನೆಯನ್ನೇ ಈ ಪದ್ಯವು ನೆನಪಿಗೆ ತರುತ್ತದೆ. ಅಲ್ಲದೆ, ಇದು ದಂಡಿಯ ಲಕ್ಷ್ಯದಿಂದ ಬಹು ಮಟ್ಟಿಗೆ ಭಿನ್ನವಾಗಿದೆ. ಆದ್ದರಿಂದ, ಈ ಪದ್ಯದಲ್ಲಿ 'ನೃಪತುಂಗ' ನನ್ನೇ ಪ್ರಶಂಸೆಮಾಡಿದೆಯೆಂಬುದು ಸ್ಪಷ್ಟ. ಪದ್ಯದ ಅರ್ಥ:

"ಜಲರಾಶಿಯಲ್ಲಿ ಹುಟ್ಟಿದವಳಾದ, ಪೂರ್ಣವಾಗಿ 'ಕೃಷ್ಣಗುಣ' ದಲ್ಲಿಯೇ ಅನುರಾಗವುಳ್ಳವಳಾದ (ಕೃಷ್ಣಗುಣ: ೧. ಕಪ್ಪಾದ ಗುಣ, ಎಂದರೆ ಕಳಂಕಪ್ರಾಯವಾದದ್ದು, ದೋಷ; ೨. ಕೃಷ್ಣನ ಗುಣ, ಎಂದರೆ ವಿಷ್ಣುವಿನ ಗುಣ), ಲಕ್ಷ್ಮೀ ಲಲನೆಯನ್ನು (ನೀನು) 'ಮಿಗೆ' (ವಿಶೇಷವಾಗಿ) ವಕ್ಷಸ್ಥಲದಲ್ಲಿ 'ಆಂತುಂ' (ಧರಿಸಿದ ಮೇಲೆಯೂ), ಅದು ಹೇಗೆ ಉದಾರವಾದ ಚರಿತವುಳ್ಳವನಾಗುತ್ತೀಯೆ?"

ಇಲ್ಲಿ 'ಲಕ್ಷ್ಮಿಯನ್ನು ವಕ್ಷಸ್ಥಲದಲ್ಲಿ ಧರಿಸಿರುವೆ' ಎಂದುದರಿಂದ 'ನಾರಾಯಣ' ನಿಗೆ ಸಮ ಎಂದು ಸ್ತೋತ್ರಮಾಡಿದ ಹಾಗಾಯಿತು. (ನೃಪತುಂಗನಿಗೆ 'ವೀರನಾರಾಯಣ' ಎಂಬ ಬಿರುದಿದ್ದಿತಷ್ಟೆ. 'ಹೇಗೆ ಉದಾರಚರಿತನಾಗುವೆ?' ಎಂಬ ಆಕ್ಷೇಪದಲ್ಲಿಯೂ ನೃಪತುಂಗನ 'ಉದಾರ' ಎಂಬ ಬಿರುದಿನ ಉಲ್ಲೇಖವಿದೆ). ಲಕ್ಷ್ಮಿಯನ್ನು ವಕ್ಷಸ್ಥಲದಲ್ಲಿ ಧರಿಸಿರುವುದು ದೋಷ ಎಂಬ ಅರ್ಥ ಬರಬೇಕಾದರೆ, ಲಕ್ಷ್ಮಿಯನ್ನು ದೋಷವುಳ್ಳವಳೆಂದು ಹೇಳಬೇಕು. ಲಕ್ಷ್ಮಿ ಸಮುದ್ರದಲ್ಲಿ ಹುಟ್ಟಿದವಳೆಂದುದರಿಂದ ಅವಳ ಕುಲ ಉತ್ತಮವಲ್ಲವೆಂದೂ, ಅವಳು 'ಕೃಷ್ಣಗುಣಾನುರಕ್ತೆ' ಎಂದುದರಿಂದ ದುರ್ಗುಣದಲ್ಲಿಯೇ ಆಸಕ್ತಳೆಂದೂ ಹೇಳಿ ಅವಳನ್ನು ದೋಷಪೂರ್ಣಳೆಂದು ಶ್ಲೇಷೆಯ ಮೂಲಕ ತಿಳಿಸಿದೆ. ಹೀಗೆ, ಶ್ಲೇಷೆಯ ಬಲದಿಂದ ದೋಷವನ್ನು ಹೇಳುವ 'ವ್ಯಾಜ' (ನೆವ) ದಲ್ಲಿ, ಎಂದರೆ ದೋಷದ ಮರೆಯಲ್ಲಿ, ಸ್ತುತಿಯನ್ನೇ ಮಾಡಿರುವುದರಿಂದ ಇದು 'ವ್ಯಾಜಸ್ತುತಿ.' (ಲಕ್ಷ್ಮಿ ಕ್ಷೀರಸಾಗರದಲ್ಲಿ ಹುಟ್ಟಿದವಳು. ಇಲ್ಲಿ 'ಜಲರಾಶಿ' ಯಲ್ಲಿ ಹುಟ್ಟಿದವಳೆಂದು ಕವಿ ಕಲ್ಪನೆ).

ಪದ್ಯ ೧೬೨: ಈ ಪದ್ಯದಲ್ಲಿಯೂ ಶ್ಲೇಷೆಯ ಬೆಂಬಲದಿಂದಲೇ ದೋಷ ವರ್ಣನೆಯ ವ್ಯಾಜದಲ್ಲಿ ಸ್ತುತಿಸಿರುವುದನ್ನು ಗಮನಿಸಬೇಕು: "ನಿನ್ನ ಕಳತ್ರಂ (=ಹೆಂಡತಿ) ಈ ಧರಾವಧು (=ಭೂದೇವಿ) ಸತತಂ ಭುಜಂಗ ಭೋಗಾಶ್ರಿತೆ (=೧. ವಿಟಪುರುಷನಲ್ಲಿ ಭೋಗಿಸುವವಳು; ೨. ಆದಿ ಶೇಷನ ಹೆಡೆಯ ಆಶ್ರಯವನ್ನು ಪಡೆದಿರುವವಳು); ಮತ್ತೆಂತು ಅತಿ ಶಯದೆ ಉದಾರ ಚರಿತಕ್ರಮದಿಂ (= ಉದಾರಚರಿತನಾದ ನೀನು ಸ್ವಾಧೀನಪಡಿಸಿಕೊಂಡ ಮಾತ್ರದಿಂದ) ಮಹಾಪುರುಷ ವ್ರತಮಂ ತಾಳ್ದುವಳ್ (=ಮಹಾಪುರುಷನನ್ನು ಸೇವಿಸುವ ಪವಿತ್ರ ಕರ್ತವ್ಯ ವನ್ನು ಧರಿಸುವಳು)?"

[ಈ ಲಕ್ಷ್ಯಪದ್ಯ ಬಹುಮಟ್ಟಿಗೆ ದಂಡಿಯ ಲಕ್ಷ್ಯದ ಅನುವಾದ. 'ಭುಜಂಗ ಭೋಗಸಂಸಕ್ತಾ ಕಲತ್ರಂ' ಎಂಬ ಪದಪುಂಜವನ್ನು ಇದ್ದಹಾಗೆಯೇ ಸ್ವೀಕರಿಸಿದ್ದಾನೆ. ಆದರೂ, 'ಉದಾರಚರಿತ ಕ್ರಮ' ಎಂಬ ಉದ್ದೇಶಪೂರ್ವಕವಾದ ಪದಪ್ರಯೋಗದಿಂದ, ಭೂದೇವಿಯ ಸ್ತೋತ್ರದ ಮರೆಯಲ್ಲಿ ನೃಪತುಂಗನನ್ನು ಕವಿ ನಿರ್ದೇಶಿ ಸಿರುವುದು ಸ್ಪಷ್ಟ. ಮೇಲಿನ ಪದ್ಯದಲ್ಲಿ, ಶ್ರೀದೇವಿಯ ವರ್ಣನೆಯೂ ಈ ಪದ್ಯದಲ್ಲಿ ಭೂದೇವಿಯ ವರ್ಣನೆಯೂ ಬಂದು, ಅವರಿಬ್ಬರ ಪತಿಯಾದ ವಿಷ್ಣುವಿನ ಸ್ತೋತ್ರವೂ ತನ್ಮೂಲಕ ನೃಪತುಂಗನ ಪ್ರಂಶಸೆಯೂ ಈ ಎರಡು ಲಕ್ಷ್ಯಪದ್ಯಗಳಲ್ಲಿ ಗಮ್ಯವಾಗಿವೆ].

ಹೇತೂಕ್ತಿ

ಪದ್ಯ ೧೬೩: "ಕಾರಣವಾಗಿರುವ ಅಲಂಕಾರವು ಹೇತೂಕ್ತಿ". [ಯಾವು ದಾದರೂ ಒಂದು ಕಾರ್ಯಕ್ಕೆ, ಪರಿಣಾಮಕ್ಕೆ ಅಥವಾ ಫಲಕ್ಕೆ ಕಾವ್ಯೋಚಿತವಾಗಿ ಕಾರಣವನ್ನು ಕಲ್ಪಿಸಿ ಹೇಳುವುದು. ದಂಡಿ 'ಕಾವ್ಯಾದರ್ಶ' ದಲ್ಲಿ ಹೇತು, ಸೂಕ್ಷ್ಮ, ಲೇಶ ಎಂಬೀ ಅಲಂಕಾರ ಗಳು 'ವಾಚಾಮುತ್ತಮಭೂಷಣಂ' ಎಂದು ಹೇಳಿ, ಹೇತ್ವಲಂಕಾರ ದಲ್ಲಿ 'ಕಾರಕ' ಮತ್ತು 'ಜ್ಞಾಪಕ' ಗಳೆಂದು ಎರಡು ವಿಧಗಳೆಂದೂ ಅವೆರಡರಲ್ಲಿ ಮತ್ತೆ ಅನೇಕ ವಿಧಗಳುಂಟೆಂದೂ ಹೇಳಿ, ಕೆಲವು

ಪ್ರಕಾರಗಳಿಗೆ ಲಕ್ಷ್ಯಗಳನ್ನು ಕೊಟ್ಟಿರುತ್ತಾನೆ. (II, ೨೩೫-೨೫೯). ಮಾರ್ಗಕಾರನಾದರೋ, 'ಅದು ತಾಂ ನಾನಾಕಾರಂ' ಎಂದಿಷ್ಟೇ ಹೇಳಿ, 'ಜ್ಞಾಪಕ ಸದಳಂಕಾರ'ವೊಂದನ್ನು ಮಾತ್ರ ಹೆಸರಿಸಿ, 'ಅದಱಾ ಸುಮಾರ್ಗ ಪ್ರಯೋಗಂ ಈ ತೆಱಂ' ಎಂದು ಆ 'ಜ್ಞಾಪಕಹೇತು'ವಿಗೆ ಲಕ್ಷ್ಯಗಳನ್ನು ಕೊಟ್ಟಿದ್ದಾನೆ].

ಪದ್ಯ ೧೬೪: "ಚಂದ್ರಕಿರಣಗಳಿಂದಾಗಲಿ, ಚಂದನ ರಸದಿಂದಾಗಲಿ, ಮಾಗಿಯ (ಚಳಿಗಾಲದ) ನೀರಿನಿಂದಾಗಲಿ ನಿನ್ನ ಪರಿತಾಪಾನಳವು (= ಬೇಗೆಯ ಬೆಂಕಿ) ನಂದದು (= ಆರುವುದಿಲ್ಲ); ಅದರಿಂದಾಗಿ, ನಿನ್ನ ಮೆಯ್ಯ ಕಾಮಜ್ವರವನ್ನು ಇಂದು ಅರಿತೆನು". [ಯಾವ ಬಗೆಯ ಶೈತ್ಯೋಪಚಾರದಿಂದಲೂ ಮೆಯ್ಯ ತಾಪವು ಆರದಿದ್ದುದ ರಿಂದ, ಆ ತಾಪಕ್ಕೆ 'ಹೇತು' (ಕಾರಣ) 'ಕಾಮಜ್ವರ' ಎಂದು 'ಜ್ಞಾಪಕ' ವಾಗುತ್ತದೆ, ಎಂದರೆ 'ಬೋಧೆ' (ಅರಿವು, ತಿಳಿವಳಿಕೆ) ಯಾಗುತ್ತದೆ]. (ಇದು ದಂಡಿಯ ಲಕ್ಷ್ಯದ ಅನುವಾದ).

ಪದ್ಯ ೧೬೫: "ಅಱಿವುಳ್ಳವರೊಳ್ ಬೆರಸದುದರಿಂದಂ (=ಜ್ಞಾನಿಗಳೊಂದಿಗೆ ಬೆರೆಯದಿರುವುದರಿಂದಲೂ), ಅಱಿಯದರೊಳಪ್ಪ ಪರಿಚಯ ದಿಂದಂ (= ಅಜ್ಞಾನಿಗಳೊಂದಿಗೆ ಆಗುವ ಪರಿಚಯದಿಂದಲೂ), ನೆಱೆ ಇಂದ್ರಿಯಮಂ ಗೆಲ್ಲದುದಱಿಂದಂ (= ಇಂದ್ರಿಯಗಳನ್ನು ಚೆನ್ನಾಗಿ ಗೆಲ್ಲದಿರುವುದರಿಂದಲೂ), ಜನಕ್ಕೆ ಪೀನಂ ಬೆಸನಂ ಅಕ್ಕುಂ (=ಜನರಿಗೆ ಹೆಚ್ಚಾಗಿ ದುಃಖಪರಂಪರೆ ಒದಗುತ್ತದೆ). (ದಂಡಿಯ ಲಕ್ಷ್ಯದ ಅನುವಾದ. ಏನೇನು 'ಇಲ್ಲ' ದಿದ್ದರೆ ದುಃಖಕ್ಕೆ ಕಾರಣ ಎಂಬುದನ್ನು ಹೇಳಿರುವುದರಿಂದ ಇದು ದಂಡಿ ಹೇಳುವ 'ಅಭಾವ ಹೇತು' ವಿಗೆ ದೃಷ್ಟಾಂತ).

ಪದ್ಯ ೧೬೬: "ಬೆಳೆದು ಒಱಗಿದ (=ಬಾಗಿದ) ಕಲಮೆಗಳುಂ (= ಬತ್ತದ ಪಯಿರೂ), ತಿಳಿಗೊಳದೊಳಗೆ ಅಲರ್ದ (=ಅರಳಿದ; ಧಾ. ಅಲರ್) ಸರಸಿಜಪ್ರತತಿಗಳುಂ (= ತಾವರೆಗಳ ಗುಂಪೂ), ಕಳಹಂಸೆಗಳ್ಗೆ

ಕೋಮಳ ವಿಳಾಸವತಿಗಳ್ಗೆ (=ಇಂಪಾದ ಸ್ವರವುಳ್ಳ ಹೆಣ್ಣು ಹಂಸಗಳಿಗೂ ಕೋಮಲೆಯರಾದ ವಿಲಾಸವತಿಯರಿಗೂ), ಆಗಳ್ ಒಸಗೆಯಂ ಪಡೆಗುಂ (=ಆಗ ಸಂತೋಷವನ್ನು ಕೊಡುತ್ತಿದ್ದುವು)." (ಇಲ್ಲಿ ವಿಲಾಸವತಿಯರ ಸಂತೋಷಕ್ಕೆ ಕಾರಣಗಳಾದ ವಸ್ತುಗಳನ್ನು ಹೇಳಿದೆ. ಇದು 'ಕಾರಕ ಹೇತು.')

ಪದ್ಯ ೧೬೭: "ತಿಳಿಗೊಳಗಳುಂ, ಅಮಳಾಶಾವಳಯುಮುಂ (=ನಿರ್ಮಲವಾದ ದಿಙ್ಮಂಡಲವೂ), ಅತಿಧವಳ ಜಳದ ಜಳಧರ ಪಥಮುಂ (=ಬಹಳ ಬೆಳ್ಳಗಿರುವ ಮೋಡ ಹಾಗೂ ಆಕಾಶವೂ), ತೊಳಪ ಎಳವೆಱೆಯುಂ (=ತೊಳಗುವ ಬಾಲಚಂದ್ರನೂ), ಕಾಮಿಗಳ ಚಿತ್ತದೊಳ್ ನೆಲಸಿದುದಂ ಮುಳಿಸಂ ಕಳೆದುವು (=ಕಾಮಿಗಳ ಮನಸ್ಸಿನಲ್ಲಿ ನೆಲಸಿದ್ದ ಕೋಪವನ್ನು ಕಳೆದುವು). (ಇದೂ 'ಕಾರಕ ಹೇತು').

ವಿಭಾವನಾಲಂಕಾರ

ಪದ್ಯ ೧೬೮: "ಕಾರಣಮನುಱಿಪಿ[69] ನಿಜಸಂಸ್ಕಾರಗುಣಾತಿಶಯದೊಳ್ ತಗುಳ್ಚುವುದಕ್ಕುಂ ವಿಭಾವನಾಳಂಕಾರಂ".—'ಕಾರಣವನ್ನು ಬಿಟ್ಟು ನಿಜ ಸಂಸ್ಕಾರ ಗುಣವಿಶೇಷದಿಂದ, ಎಂದರೆ ಅದರ ಸಹಜ ಗುಣವಿಶೇಷದಿಂದಲೇ, (ಕಾರ್ಯವನ್ನು ಅಥವಾ ಫಲವನ್ನು) ಸಂಗಡಿಸುವುದು ಅಥವಾ ಆದಂತೆ ಭಾವಿಸುವುದು (ವಿಭಾವಿಸುವುದು) ವಿಭಾವನೆ.' (ಪ್ರಸಿದ್ಧವಾದ ಕಾರಣವಿಲ್ಲದೆ ಕಾರ್ಯವಾಗುವುದಿಲ್ಲ;

69 ನಮ್ಮ ಮುದ್ರಿತಪಾಠದಲ್ಲಿ ಮದ್ರಾಸು ಮುದ್ರಣದ ಪಾಠವನ್ನು (=ಅಱಿಪೆ) ಇಟ್ಟುಕೊಂಡಿದೆ. ಪಾಠಕರ ಮುದ್ರಣದಲ್ಲಿ 'ಉಱಿಪೆ' ['ಕಾರಣಮನುಱಿಪೆ'] ಎಂದಿದೆ. 'ಉಱಿಪಿ' ಎಂದು ತಿದ್ದಿಕೊಂಡರೆ 'ಕಾವ್ಯಾದರ್ಶ'ದ 'ವ್ಯಾವೃತ್ತ್ಯೈ' ಎಂಬ ಪದದ ಅರ್ಥಕ್ಕೆ ಹೆಚ್ಚು ಸಮೀಪವಾಗುತ್ತದೆ. ಆದ್ದರಿಂದ ಇಲ್ಲಿ 'ಉಱಿಪಿ' ಎಂದು ತಿದ್ದುಪಾಟು ಮಾಡಿಕೊಂಡಿದೆ. ಕೈಬರಹದ ಪ್ರತಿಗಳಲ್ಲಿ ಇತ್ವ ಎತ್ವ ಚಿಹ್ನೆಗಳಿಗೆ ಕೆಲವು ವೇಳೆ ವ್ಯತ್ಯಾಸವು ಗೊತ್ತಾಗುವುದಿಲ್ಲವಾದ್ದರಿಂದ, ಅಕ್ಷರ ಸ್ಖಾಲಿತ್ಯವಾಗಿ 'ಉಱಿಪಿ' ಎನ್ನುವುದು 'ಉಱಿಪೆ' ಆಗಿರಬಹುದು.

ಅಂತಹ ಕಾರಣವಿಲ್ಲದೆ ಬೇರೊಂದು ಹೊಸ ಕಲ್ಪಿತ ಕಾರಣದಿಂದ ಅಥವಾ ತನ್ನ ಸ್ವಾಭಾವಿಕತೆಯಿಂದಲೇ ಅದು ಆದಂತೆ ವರ್ಣಿಸುವುದು.)

ದಂಡಿಯ ಶ್ಲೋಕ :

ಪ್ರಸಿದ್ಧಹೇತು ವ್ಯಾವೃತ್ತ್ಯಾ ಯತ್ಕಿಂಚಿತ್ ಕಾರಣಾಂತರಂ।
ಯತ್ರ ಸ್ವಾಭಾವಿಕತ್ವಂ ವಾ ವಿಭಾವ್ಯಂ ಸಾ ವಿಭಾವನಾ ॥—II, ೧೯೯.

[ಪ್ರಸಿದ್ಧ ಕಾರಣದ ವ್ಯಾವೃತ್ತಿಯ ಮೂಲಕ ಎಂದರೆ ಅದನ್ನು ಬಿಟ್ಟುಬಿಟ್ಟು ಬೇರೊಂದು ಕಾರಣದಿಂದ ಇಲ್ಲವೆ ಸ್ವಾಭಾವಿಕವಾಗಿಯೆ ಕಾರ್ಯವಾದಂತೆ ಇಟ್ಟುಕೊಳ್ಳುವುದು ವಿಭಾವನೆ].

ಪದ್ಯ ೧೬೯: "ಅವಳಾ, ಸಮುಱುಗೆಯಿಲ್ಲದ ಮುಱಿಕಮುಂ(=ಚೆನ್ನಾಗಿ ಕಾಣಬೇಕೆಂಬ ಪ್ರಯತ್ನವಿಲ್ಲದೆಯೆ ಸಹಜವಾಗಿರುವ ಮುಖ ಭಂಗಿಯೂ), ಕೆಯ್ಗೆಯ್ಯದೊಪ್ಪುವ ಅಂದಮುಂ (=ಒಡವೆಗಳಿಂದ ಸಿಂಗರಿಸಿಕೊಳ್ಳದಿದ್ದರೂ ಒಪ್ಪುವ ಚೆಲುವೂ), ನೆವಮಿಲ್ಲದ ದರ ಹಸಮುಂ (=ಕಾರಣವಿಲ್ಲದ ನಸುನಗೆಯೂ), ಸಮುದಾಲಸ ಲಲಿತ ಗಮನಮುಂ (ಸೊಕ್ಕಿನಿಂದ ನಿಧಾನವಾದ, ಮನೋಹರವಾದ, ನಡಿಗೆಯೂ), ಅಮರ್ದಿರೆ (ಒಂದುಗೂಡಿರಲು), ಸೊಗಯಿಸುಗುಂ."

ಇದು ದಂಡಿಯ ಲಕ್ಷ್ಯದಿಂದ ಪ್ರೇರಣೆಗೊಂಡಿದೆಯೆ ಹೊರತು, ಬಹುಮಟ್ಟಿಗೆ ಸ್ವತಂತ್ರವಾದ ಲಕ್ಷ್ಯ ಪದ್ಯ. ಇಲ್ಲಿ, 'ಮುಱಿಕ', 'ಅಂದ', 'ದರಹಸ', 'ಅಲಸ ಲಲಿತ ಗಮನ' ಇವಕ್ಕೆ 'ಸಮುಱುಗೆ', 'ಅಲಂಕರಣ', ಮುಂತಾದುವು ಕಾರಣಗಳು: ಇವಿಲ್ಲದೆಯೇ 'ಮುಱಿಕ' ಮುಂತಾದ ಕಾರ್ಯಗಳು ತಾವಾಗಿಯೇ ಆಗಿವೆಯೆಂದು ಇಲ್ಲಿ ವರ್ಣಿಸಿ, ಒಬ್ಬ ಹೆಣ್ಣಿನ ಸಹಜ ಸೌಂದರ್ಯ ವಿಲಾಸವನ್ನು ವರ್ಣಿಸಿದೆ.

ಸಮುಱುಗೆ=ಚೆನ್ನಾಗುವಂತೆ ಮಾಡುವುದು (ಧಾ. ಸಮುಱು= 'ಚಾರುಕರಣೇ': ಶ. ಮ. ದ.). ಮುಱಿಕ=(ಎರಡು ಮುದ್ರಿತ ಪ್ರತಿಗಳಲ್ಲಿಯೂ 'ಮುಱುಕ' ಎಂಬ ಪಾಠವಿದೆ. ಅದರಿಂದ

ಸಂದರ್ಭೋಚಿತವಾದ ಅರ್ಥವಾಗುವುದಿಲ್ಲವಾಗಿ, ಪ್ರತಿಕಾರನ ಹಸ್ತ ಪ್ರಮಾದದಿಂದ ಕೊಂಬಿನ (ಉತ್ವ) ಚಿಹ್ನೆಯು ಸ್ಥಾನಪಲ್ಲಟವಾಗಿರ ಬಹುದೆಂದು ಎಣಿಸಿ, ಈಗಿನ ತಿದ್ದುಪಾಟನ್ನು ಮಾಡಿದೆ)=ಮುಖ ಭಂಗಿ, ಒಯ್ಯಾರ (ವೈ ಬಳುಕಿಸುವುದು) (ಧಾ. ಮುಱುಕಃ=ಮುಖ ವಿಕಾರೇ': ಶ. ಮ. ದ. ಆದ್ದರಿಂದ, 'ಮುಱುಕ' ಎಂಬ ರೂಪವೂ ಆಗಬಹುದು). ಕೆಯ್ಗೆಯ್=ಒಡವೆಗಳಿಂದ ಸಿಂಗರಿಸಿಕೊ ('ಭೂಷ ಣೋದ್ವಹನೇ: ಶ. ಮ. ದ.). ಅಮರ್=ಹತ್ತಿದಂತೆ ಸೇರಿಕೊ, ಒಂದುಗೂಡು, ಒಟ್ಟುಗೂಡು ('ಗಾತ್ರಶ್ಲೇಷೇ': ಶ. ಮ. ದ.).

ಲೇಶ

ಪದ್ಯ ೧೭೦: "ಗುಣದೊಳ್ ಇನಿಸು (ಲೇಶ, ತುಸ) ಅವಗುಣಮುಂ ಅಱುಪುವುದು, ದೋಷದೊಳಂ ಇನಿಸು ಗುಣಮುಂ ತಂದಿರ್ದು ಎಣಿ ಸುವುದು (ತಂದು ಪರಿಗಣಿಸುವುದು) ಲೇಶಂ."

[ದಂಡಿ 'ಲೇಶೋ ಲೇಶೇನ ನಿರ್ಭಿನ್ನವಸ್ತುರೂಪ ನಿಗೂಹನಂ' ('ಹೊರ ಪಡಲಿರುವ ವಸ್ತುಸ್ವರೂಪವನ್ನು 'ಲೇಶ'ದಿಂದ ಎಂದರೆ ಚಿಕ್ಕ ನೆವದಿಂದ ಮರೆ ಮಾಡುವುದು') ಎಂದು ಹೇಳಿ. ಉದಾಹರಣೆಗಳ ಮೂಲಕವೇ ಈ ಅಲಂಕಾರದ ಸ್ವರೂಪವು ಸ್ಫುಟಗೊಳ್ಳತಕ್ಕದ್ದೆಂದು ಕೆಲವು ಉದಾಹರಣೆಗಳನ್ನು ಕೊಟ್ಟಿ ದ್ದಾನೆ. ಮುಂದುವರಿದು, 'ಲೇಶಮೇಕೇ ವಿದುರ್ನಿಂದಾಂ ಸ್ತುತಿಂ ವಾ ಲೇಶತಃ ಕೃತಂ' (ಯಾವುದೋ 'ಲೇಶ' ಮಾತ್ರದಿಂದ ಆದ ನಿಂದೆ ಇಲ್ಲವೆ ಸ್ತುತಿಯೆ ಲೇಶಾಲಂಕಾರವೆಂದು ಕೆಲವರು ತಿಳಿಯುತ್ತಾರೆ) ಎಂದು ಹೇಳಿ, ತದನುಗುಣ ವಾದ ಲಕ್ಷ್ಯಗಳನ್ನು ಕೊಟ್ಟಿದ್ದಾನೆ. (II, ೨೬೫–೨೭೨).

[ಮಾರ್ಗಕಾರನ ವಿವರಣೆಯಂತೆ, ನಿಂದೆಗೋ ಸ್ತುತಿಗೋ ಕಾರಣವೆನಿಸುವ ಆ 'ಲೇಶ'ವು 'ಇನಿಸು ಅವಗುಣ' (ದೋಷ) ಇಲ್ಲವೆ 'ಇನಿಸು ಗುಣ' ಆಗಿರುತ್ತದೆ.]

ಪದ್ಯ ೧೭೧: "ಮಾನಿಯುಂ ಉದಾರಚರಿತನುಂ ಆನತ ರಿಪುನಿಕರನುಂ (ಶತ್ರುಸಮೂಹದಿಂದ ನಮಸ್ಕರಿಸಲ್ಪಟ್ಟವನೂ) ಮನಸ್ವಿಯುಂ(ಬುದ್ಧಿ ವಂತನೂ) (ಆದವನು) ಆಂತು ಆ ಮಾನಸರನಾರುಮುಂ ಮನಕೆ ಏನುಂ ಮುಟ್ಟಲ್ಲದಂತು ಬಗೆವುದು", (ಸರ್ವಗುಣಸಂಪನ್ನನಾದ

ಅವನಲ್ಲಿರುವ) "ದೋಷಂ." ['ಮನಕೆ ಏನುಂ ಮುಟ್ಟಿಲ್ಲದಂತು ಬಗೆವುದು': ಇಲ್ಲಿ ಸ್ವಲ್ಪ ಅರ್ಥಕ್ಲೇಶವಿದೆ. ('ಮುಟ್ಟು' ಎಂದರೆ, 'ಸಾಧನ ಸಾಮಗ್ರಿ', 'ಸಲಕರಣೆ', 'ಉಪಯುಕ್ತ ಪದಾರ್ಥ' ಎಂದು ಅರ್ಥಗಳಾಗುತ್ತವೆ.) "ತನ್ನ ಮನಸ್ಸಿನಲ್ಲಿ ಯಾರೂ ಒಂದು 'ಮುಟ್ಟು' ಕೂಡ ಅಲ್ಲ" ಎಂದರೆ "ಇತರರೆಲ್ಲರೂ ಕೆಲಸಕ್ಕೆ ಬರದವರು" ಎಂದು ತಾತ್ಪರ್ಯವಾಗಬಹುದು. ತನ್ನ ಸಮಾನರು ಯಾರೂ ಇಲ್ಲ ಎಂಬ ಅಹಂಭಾವದಿಂದ ಇತರರನ್ನು ಕೀಳಾಗಿ ಕಾಣುವುದೂ ಒಂದು ದೋಷವಷ್ಟೆ? ಈ ದೋಷ ಲೇಶದಿಂದಾಗಿ ಉದಾತ್ತ ವ್ಯಕ್ತಿಯ ಗುಣಗಳೆಲ್ಲ ಮರೆಯಾಗಿ, ವರ್ಣನೆ ನಿಂದೆಯಾಗಿಯೇ ಪರಿಣಮಿಸುತ್ತದೆ. ('ಜಾಣ, ಆದರೆ ತುಸ ಕೋಣ', 'ಚಿತ್ರವನ್ನು ಮಸಿ ನುಂಗಿತು' ಎಂಬ ನಾಣ್ಣುಡಿಗಳಂತೆ)].

ಪದ್ಯ ೧೭೨: ಮೇಲಿನದು 'ಲೇಶದೋಷ'ವುಳ್ಳ ಉದಾತ್ತ ವ್ಯಕ್ತಿಯ ನಿಂದಾರೂಪದ 'ಲೇಶಾಲಂಕಾರ'ವಾದರೆ ಇದು 'ಲೇಶಗುಣ'ವುಳ್ಳ ಯಃಕಶ್ಚಿತನೊಬ್ಬನ ಸ್ತುತಿರೂಪದ 'ಲೇಶಾಲಂಕಾರ':

"ಕುಲಜನುಂ ಅಲ್ಲಂ (=ಕುಲೀನನೂ ಅಲ್ಲ); ನಣ್ಪಿನ ಬಲಮುಂ ತನಗಿಲ್ಲ (=ಅವನಿಗೆ ಗಣ್ಯರ ನಂಟತನದ ಬೆಂಬಲವೂ ಇಲ್ಲ); ಕಣ್ಗಂ ಏಳಿದಂ (=ನೋಡುವುದಕ್ಕೆ ತಿರಸ್ಕಾರ ಹುಟ್ಟಿಸುವ ಹಾಗಿದ್ದಾನೆ); ಆರೊಳ್ ನೆಲಸಿರಂ ಎಲ್ಲಿಯುಂ (=ಯಾರೊಂದಿಗೂ ಎಲ್ಲಿಯೂ ನೆಲಸಿರುವುದಿಲ್ಲ); (ಆದರೆ ಅವನಲ್ಲಿ) ಅದೊಂದುಂಟು ಗುಣಂ: ಅವನಂ ಚಲವೆಂದುಂ ಪತ್ತುವಿಡದು (=ಚಲ ಅವನನ್ನು ಎಂದಿಗೂ ಬಿಟ್ಟುಹೋಗುವುದಿಲ್ಲ)."

(ಲೇಶಾಲಂಕಾರದ ಮೇಲಿನ ಎರಡು ಲಕ್ಷ್ಯಗಳೂ ಕವಿಯ ಸ್ವಂತ ರಚನೆಗಳು).

ಉದಾತ್ತಾಲಂಕಾರ

ಪದ್ಯ ೧೭೩: "ಮಿಗೆ (=ವಿಶೇಷವಾಗಿ) (ನಿರ್ದಿಷ್ಟ ವ್ಯಕ್ತಿಯ) ಮನದ ಪೆಂಪುಮುಂ (=ಹಿರಿಮೆಯುನ್ನೂ), ಕೈಮಿಗೆ ವಿಭವದ ಪೆಂಪುಮಂ

(=ಅದಕ್ಕೂ ಅತಿಶಯವಾಗಿ ವೈಭವದ ಹಿರಿಮೆಯನ್ನೂ) ವಿಶ್ಲೇಷಿಸಿ" ಹೇಳುವುದು ಉದಾತ್ತಾಲಂಕಾರ.

[೧೭೪ರಿಂದ ೧೮೧ರ ವರೆಗಿನ ೮ ಲಕ್ಷ್ಯ ಪದ್ಯಗಳು, 'ನಿದರ್ಶನಾಲಂಕಾರ'ದ ಲಕ್ಷ್ಯ ಪದ್ಯಗಳಂತೆ, ದಂಡಿಯ ಲಕ್ಷ್ಯಗಳನ್ನು ಅನುಸರಿಸದೆ ಮಾರ್ಗಕಾರನು ಸ್ವತಂತ್ರವಾಗಿ ರಚಿಸಿದವು. ಈ ಅಂಶ ಗಮನಾರ್ಹ. ಆದ್ದರಿಂದ, ಮಾರ್ಗಕಾರನು ನೃಪತುಂಗನ 'ಉದಾತ್ತ' ಗುಣಗಳನ್ನೆ ಪದ್ಯಗಳಲ್ಲಿ ಪ್ರಶಂಸಿಸಿ ವರ್ಣಿಸಿರಬಹುದೆಂದು ಊಹಿಸಲು ಅವಕಾಶವಿದೆ].

ಪದ್ಯ ೧೭೪: "ಚಲದೆಡೆಗೆ ಪಿರಿದು ರಜಮುಂ ನೆಲನುಂ': ಶತ್ರುಗಳಿಂದ ನೆಲವನ್ನು (=ರಾಜ್ಯವನ್ನು) ಗೆದ್ದು ಪಡೆಯಬೇಕೆಂದು ಚಲ ಹಿಡಿದಾಗ (ಅವನ ದೃಷ್ಟಿಯಲ್ಲಿ) ನೆಲ ಎಷ್ಟು ದೊಡ್ಡದೋ ಧೂಳಿನ ಕಣ ಕೂಡ ಅಷ್ಟೇ ದೊಡ್ಡದು. (ಚಲ ಹಿಡಿದರೆ, ಒಂದು ಧೂಳಿನ ಕಣವನ್ನು ಕೂಡ ಶತ್ರುಗಳಿಂದ ಪಡೆಯದೆ ಬಿಡತಕ್ಕವನಲ್ಲ). 'ಪ್ರಿಯದೆಡೆಗೆ ಕಿಱಿದು ಕೊಳಲುಂ ಕುಡಲುಂ':[70] ತನಗೆ ಪ್ರಿಯವೆನಿಸಿದಾಗ, ಹೆರರ ನೆಲವನ್ನು (=ರಾಜ್ಯವನ್ನು), ಅದು ಎಷ್ಟೇ ದೊಡ್ಡದಾಗಿರಲಿ, ಕಿರಿದೆಂದು ಭಾವಿಸಿ ಬಿಟ್ಟುಬಿಡುವನು; ಅದೇ ರೀತಿಯಲ್ಲಿ ತನ್ನದನ್ನು ದಾನ ಮಾಡುವಾಗ ಅದು ಎಷ್ಟೇ ಹಿರಿದಾಗಿದ್ದರೂ ಅದನ್ನು ಕಿರಿದೆಂದು ಭಾವಿಸಿ ದಾನ ಮಾಡಿಬಿಡುವನು. 'ಚಲಮುಂ

---

70 ಪಾಠಕರ ಮುದ್ರಣದಲ್ಲಿ 'ಕೊಳಲುಂ ಕಡಲುಂ' ಎಂದಿದೆ. ಹಿರಿದು ಕಿರಿದು ಎಂಬ ತಾರತಮ್ಯ ವಿವಕ್ಷೆಯನ್ನು ಗಮನಿಸಿ, 'ಕೊಳಲುಂ' ಎಂಬುದನ್ನು 'ಕೊಳನುಂ' ಎಂದು ನಮ್ಮ ಮುದ್ರಣದಲ್ಲಿ ತಿದ್ದಲಾಯಿತು. ಮದ್ರಾಸು ಮುದ್ರಣದಲ್ಲಿ 'ಕಡಲುಂ' ಎಂಬುದನ್ನು 'ಕುಡಲುಂ' ಎಂದು ಮಾಡಿರುವ ತಿದ್ದುಪಾಟು ಅರ್ಥಸಾಮಂಜಸ್ಯದ ದೃಷ್ಟಿಯಿಂದ ಅಂಗೀಕಾರಾರ್ಹವಾಗಿ ಕಾಣುತ್ತದೆ. ಅಲ್ಲದೆ, 'ಕುಡಲುಂ' ಎಂಬ ಪದದ ಕಕಾರದ ಕೊಂಬು (ಉತ್ವ) ಲಿಪಿಕಾರನ ಹಸ್ತದೋಷದಿಂದ ಬಿಟ್ಟುಹೋಗಿರುವ ಸಂಭವವಿದೆ. 'ಕುಡಲುಂ' ಎಂಬ ಪಾಠಾಂತರವನ್ನು ಇಟ್ಟುಕೊಂಡು ಮೇಲೆ ವ್ಯಾಖ್ಯಾನಿಸಿದೆ.

ಪ್ರಿಯಮುಂ ಬಲಿ ಸಮಬಲಮಾಗಿರೆ ನೆಗಟ್ಟ್ವ ಬಗೆಗೆ ಕಿಱಿದೇಂ ಪಿರಿದೇಂ': ಹೀಗೆ 'ಚಲ' 'ಪ್ರಿಯ' ಎಂಬೀ ಎರಡು ಗುಣಗಳೂ ಅವನಲ್ಲಿ ಸಮಬಲವಾಗಿ ನೆಲಸಿರುವಾಗ, ಆಯಾ ಸಂದರ್ಭಕ್ಕೆ ಅನುಗುಣವಾಗಿ ಅವನು ನೆಲದ ವಿಷಯದಲ್ಲಿ ಹಿರಿದು ಕಿರಿದು ಎಂಬ ಭೇದವೆಣಿಸನು. (ಈ ಪದ್ಯದಲ್ಲಿ ರಾಜನ 'ಛಲ' ನಿಷ್ಠವಾದ ಪರಾಕ್ರಮವನ್ನೂ, 'ಪ್ರಿಯ' ನಿಷ್ಠವಾದ ಔದಾರ್ಯ ಹಾಗೂ ತ್ಯಾಗಗುಣಗಳನ್ನೂ ವರ್ಣಿಸಿದೆ).

ಪದ್ಯ ೧೭೫ : ಅನ್ವಯಾರ್ಥ : "ಅಱಿದು (=ನಾಶವಾಗಿ) ಅಱಿಪಿ (=ನಾಶಮಾಡಿ), ಬಱಿಯನುಱಿಯದೆ (ಸಾಮೀಪ್ಯವನ್ನು, ಹತ್ತಿರದೆಡೆಯನ್ನು, ಬಿಡದೆ), ಪಱಿವರುಮಂ ತವಿಸಿ ಕಱಿಯದೆ ಉಱಿವಳಂ ಸಿರಿಯಂ (=ನಿಂದಿಸುವವರನ್ನು ಕ್ಷಯಗೊಳಿಸಿ ನೀಗಿಕಳೆಯದೆ ಇರುವ ಲಕ್ಷ್ಮಿಯನ್ನು),ಆದಂ (=ಚೆನ್ನಾಗಿ, ವಿಶೇಷವಾಗಿ), ಪಱಿಕೆಯ್ದು (=ನಿಂದಿಸಿ), ತೊಟ್ತನುಱಿದಂತೆ ಉಱಿದ ಮಹಾಪುರುಷರ್ (=ತೊತ್ತನ್ನು ಬಿಟ್ಟುಬಿಡುವಂತೆ ಬಿಟ್ಟ ಮಹಾಪುರುಷರು), ಅಱಿಯದುಱಿದರೆ (=ತಿಳಿವಳಿಕೆಯಿಲ್ಲದೆ ಬಿಟ್ಟುಬಿಟ್ಟರೆ)?"

("ದುರಾಶಾಪೀಡಿತರಾದ ಮಾನವರು ಐಶ್ವರ್ಯಕ್ಕಾಗಿ ತಮ್ಮ ಪ್ರಾಣವನ್ನಾದರೂ ತೆರುತ್ತಾರೆ; ಇತರರನ್ನು ನಾಶಪಡಿಸುತ್ತಾರೆ; ಲಕ್ಷ್ಮಿಯನ್ನು ಎಡೆಬಿಡದೆ ಓಲೈಸುತ್ತಾರೆ; ತಮಗೆ ಅವಳು ಒಲಿಯದಿದ್ದರೆ ಅವಳನ್ನು ಹಳಿಯುತ್ತಾರೆ; ಅಂಥವರನ್ನು ಕೂಡ ಬಿಟ್ಟು ಹೋಗದೆ ಇರುವವಳಾದ ಲಕ್ಷ್ಮಿಯನ್ನು ಹಳಿದು, ತೊತ್ತನ್ನು ಯಾವ ರೀತಿ ಬಿಟ್ಟುಬಿಡುತ್ತಾರೆಯೋ ಆ ರೀತಿ ಲಕ್ಷ್ಮಿಯನ್ನು ಹಿಂದೆಮುಂದೆ ನೋಡದೆ ತ್ಯಾಗ ಮಾಡುವ ಮಹಾಪುರುಷರು ತಿಳಿವಳಿಕೆಯಿಲ್ಲದೆ ಹಾಗೆ ಮಾಡುವರೆ? ಎಂದಿಗೂ ಇಲ್ಲ.")

ಪದ್ಯ ೧೭೬ : "ಪರರ ವಿಚಾರವನ್ನೂ ಧರ್ಮವನ್ನೂ ಚೆನ್ನಾಗಿ ಸಹಿಸುವ ಸಾಮರ್ಥ್ಯವನ್ನು ಹೊಂದಿರುವ ಪಕ್ಷದಲ್ಲಿ, ಅಂಥ ಸಹನಾಗುಣವನ್ನು

ಚಿನ್ನವೆಂದೆನ್ನಬೇಕು. (ಆದರೆ, ಇಂಥ ಸಹಿಷ್ಣುತೆ ಎಲ್ಲರಿಗೂ ಇರುವುದಿಲ್ಲ). ಎಲ್ಲರೂ (ತಮ್ಮ ಅಸಹನಾಗುಣದಿಂದ) ಮಿತಿಮೀರಿ ಸಂಕಟವನ್ನು ಉಂಟುಮಾಡುತ್ತಾರೆ. ಅವರಿಗೆ ಕಸವೇನು, ಕಸವರವೇನು? ಅವರ ದೃಷ್ಟಿಯಲ್ಲಿ ಎರಡೂ ಒಂದೆ."

ಕಸವರ=ಚಿನ್ನ. ಉಬ್ಬಸ=ಆಯಾಸ, ಕ್ಲೇಶ, ಸಂಕಟ.

ಪದ್ಯ ೧೭೭: "ಗುಣದಲ್ಲಿ ಶ್ರೇಷ್ಠರೆನಿಸಿದವರು ('ಗುಣಗ್ರಾಮಣಿಗಳ್') ಸರಿಯಾದ ಕ್ರಮ (='ಪಾಟಿ') ನೆಲೆಗೊಳ್ಳುವಂತೆ ಕೀರ್ತಿವಂತರಾಗಿ ಬಾಳುವುದೆ ನಿಶ್ಚಯವಾಗಿ ಬಾಳು ಎನ್ನುವುದು; (ತಾನೂ ಇತರರೂ) ಹಾಳಾಗುವಂತೆ ನಿಂದೆಗೆ ಗುರಿಯಾಗಿ ಬಾಳುವ ಮನುಷ್ಯರ ಬಾಳು ಚಂದ್ರ ನಕ್ಷತ್ರಗಳಿರುವವರೆಗೂ ಇರುವುದೇನು?" (ಬದುಕು ಸ್ಥಿರವಲ್ಲ; ಆದ್ದರಿಂದ, ಕೆಟ್ಟ ಹೆಸರು ಹೊತ್ತು ಬದುವುದಕ್ಕಿಂತ ಗುಣವಂತರೆನಿಸಿ ಕೀರ್ತಿಶಾಲಿಗಳಾಗಿ ಬದುಕುವುದೇ ಬದುಕು; ಏಕೆಂದರೆ, ಕೀರ್ತಿ ನಿಲ್ಲತಕ್ಕದ್ದು—ಎಂದು ತಾತ್ಪರ್ಯ).

ಪದ್ಯ ೧೭೮: "ಕೆಟ್ಟತನವೂ ಗುಣವೂ ತಮಗೆ (ಎಂದರೆ, ಜನಕ್ಕೆ) ಸೇರಿದ್ದಲ್ಲದೆ, ತನಗೂ (ಎಂದರೆ, ಇಲ್ಲಿ ಯಾವ ವ್ಯಕ್ತಿಯನ್ನು ನಿರ್ದೇಶಿಸಿದೆಯೋ ಆತನಿಗೆ) ಇತರರಿಗೂ ಸೇರಿದ್ದಲ್ಲ ('ಪುದುವಲ್ಲ'); ಹಾಗಿದ್ದರೂ ಕೂಡ ('ಉಂತಾಗಿಯುಂ') ಜನರೆಲ್ಲರೂ ಬಿಡದೆ ಕೋಪವಾದಾಗ ಹಳಿಯುತ್ತಾರೆ, ಸಂತೋಷವಾದಾಗ ಹೊಗಳುತ್ತಾರೆ ('ಮುನಿಸೊಸಗೆವೆರಸು ಪಳಿಗುಂ ಪೊಗಳ್ಗುಂ'='ಮುನಿಸುವೆರಸು ಪಳಿಗುಂ, ಒಸಗೆವೆರಸು ಪೊಗಳ್ಗುಂ'). ತಮ್ಮ ಕೆಟ್ಟತನ ಒಳ್ಳೆಯತನಗಳಿಗೆ ಜನ ತಾವೇ ಹೊಣೆ. ಅದನ್ನು ರಾಜನಿಗಾಗಲಿ ಇತರರಿಗಾಗಲಿ ಆರೋಪಿಸುವ ಹಾಗಿಲ್ಲ. ಆದರೂ, ತಮಗೆ ಕೋಪ ಬಂದಾಗ ರಾಜನನ್ನು ದೂಷಿಸುವುದೂ, ಸಂತೋಷದಿಂದಿರುವಾಗ ಅವನನ್ನು ಹೊಗಳುವುದೂ ಸ್ವಾಭಾವಿಕ—ಎಂದು ತಾತ್ಪರ್ಯಾರ್ಥ. ಈ ಪದ್ಯವನ್ನೂ ಇದರ ಮುಂದಿನ ಪದ್ಯವನ್ನೂ ಒಟ್ಟಿಗೆ ಓದಿಕೊಂಡು

ಅರ್ಥಾನ್ವಯ ಮಾಡಿದರೆ, ಅವು ಪರಸ್ಪರ ಪೂರಕಗಳೆಂದು ಮನಗಂಡು, ಬೇರೆ ಬೇರೆಯಾಗಿ ಪ್ರತಿ ಪದ್ಯದ ಅರ್ಥ ವಿಶದವಾಗುವುದು.)

ಪದ್ಯ ೧೭೯: "(ಜನರು) ನನ್ನನ್ನು ಹೆಚ್ಚಾಗಿ ನಿಂದಿಸುವರು ಎನ್ನದೆ, ಅವರೆಲ್ಲ ಕೂಡಿ ನನ್ನನ್ನು ವಿಶೇಷವಾಗಿ ಹೊಗಳುವರು ಎನ್ನದೆ, ತನ್ನಲ್ಲಿಯೆ ವಿಚಾರಮಾಡಿ ('ತನ್ನೊಳ್ ಬಗೆದು'), (ಇಹ ಪರ ಎಂಬ) ಎರಡು ಲೋಕಗಳಲ್ಲಿಯೂ ಹಿತಕರವೆನ್ನಿಸುವಂತೆ ಉದ್ಯೋಗಿಸಿದರೆ ('ಉಭಯಲೋಕಹಿತದೊಳ್ ನೆಗೞೆ') ಜನ ನಿಂದಿಸಲಿ ಇಲ್ಲವೆ ಹೊಗಳಲಿ, ಅದರಿಂದ ತನಗೇನು ?" (ರಾಜನಾದವನು ಜನನಿಂದೆಗೂ ಜನಸ್ತುತಿಗೂ ಗಮನ ಕೊಡದೆ, ಇಹ ಪರ ಸೌಖ್ಯವನ್ನು ಗಮದಲ್ಲಿರಿಸಿಕೊಂಡು, ಧರ್ಮಮಾರ್ಗದಲ್ಲಿ ನಡೆಯತಕ್ಕದ್ದೆಂದು ತಾತ್ಪರ್ಯ).

ಪದ್ಯ ೧೮೦: ಅನ್ವಯ: "ಪ್ರಣತಾರಿ[71] [ಘ]ಟಿತ"[71] ಮುಕ್ತಾ[72] [ಮಣಿಗಣಮು]ತ್ತಂಸದಿಂ[72] ಕೞಲ್ದುದುರೆ, ಒಪ್ಪೆ ವೀರನಾರಾಯಣಂ, ಸಭಾಂಗಣಂ ಆ ತಾರಕಿತನಭದವೊಲ್ ಸೊಗಯಿಸುಗುಂ."

---

71 ಪಾಠಕರ ಪ್ರತಿಯಲ್ಲಿ 'ತೃಟಿತ' ಎಂದೂ, ಮದ್ರಾಸು ಪ್ರತಿಯಲ್ಲಿ 'ತ್ರುಟಿತ' (ಕತ್ತರಿಸಲ್ಪಟ್ಟ, ತುಂಡರಿಸಿದ) ಎಂದೂ ಪಾಠಗಳಿವೆ. 'ತೃಟಿತ' ಅಶುದ್ಧರೂಪ. 'ತ್ರುಟಿತ': "ತ್ರುಟಿತ ಎಂಬಲ್ಲಿ 'ತ್ರು' ಎಂಬಕ್ಷರಕ್ಕೆ ಶೈಥಿಲ್ಯವನ್ನು ಹೇಳಬೇಕು. ಇದು ವ್ಯಾಕರಣ ಶುದ್ಧವಲ್ಲ." (ಮದ್ರಾಸು ಮುದ್ರಣದ ಅಡಿ ಟಿಪ್ಪಣಿ: ಪು. ೯೯). ಅಲ್ಲದೆ, 'ತ್ರುಟಿತ' ಎಂಬುದನ್ನು ಸ್ವೀಕರಿಸಿದರೆ, 'ಕೞಲ್ದು' ಪದಪ್ರಯೋಗಕ್ಕೆ ಔಚಿತ್ಯವಿಲ್ಲ. ಮೂಲಪ್ರತಿಯ 'ಘ'ಕಾರವು ತರುವಾಯದ ಪ್ರತಿಗಳಲ್ಲಿ ಲಿಪಿಕಾರನ ಭ್ರಮಾಜನ್ಯ ಪ್ರಮಾದದಿಂದ 'ತ್ರು' (ಅಥವಾ 'ತೃ') ಅಕ್ಷರವಾಗಿ ಪರಿಣಮಿಸಿರಬಹುದೆಂಬ ಎಣಿಕೆಯಿಂದ ಈಗಿನ ತಿದ್ದುಪಾಟನ್ನು ಸೂಚಿಸಿದೆ.

72 ಈ ಸೂಚಿತ ಪಾಠಕ್ಕೆ ಪ್ರತಿಯಾಗಿ ಪಾಠಕರ ಮುದ್ರಣದಲ್ಲಿ 'ಗಣಗಣನೋತ್ತಂಸದಿಂ' ಎಂದೂ, ಮದ್ರಾಸು ಮುದ್ರಣದಲ್ಲಿ 'ಮಣಿಗಳ್ ಮಾತ್ತಾಂಕದಿಂ' ಎಂದೂ ಪಾಠಗಳಿವೆ. ಮೊದಲಪಾಠ ಮೇಲು; ಎರಡನೆಯದರಲ್ಲಿ ಅರ್ಥಕ್ಲೇಶವಿದೆ. ಆದ್ದರಿಂದ, ಯಥಾಮತಿಯಾಗಿ ಯಥೋಚಿತವಾಗಿ ಈಗಿನ ತಿದ್ದುಪಾಟನ್ನು ಸೂಚಿಸಿದೆ.

ಅರ್ಥ : "ನಮಸ್ಕಾರ ಮಾಡಿದ ಶತ್ರುರಾಜರ ಶಿರೋಭೂಷಣ ಗಳಿಂದ ಮುತ್ತುರತ್ನಗಳು ಕಳಚಿಕೊಂಡು ಉದುರಿರಲು, ವೀರನಾರಾ ಯಣನು (ನೃಪತುಂಗನು) ಮೆರೆಯುತ್ತಿರಲು, ಸಭೆಯ ಅಂಗಳವೆಲ್ಲ ನಕ್ಷತ್ರಖಚಿತವಾದ ಆಕಾಶದಹಾಗೆ ಶೋಭಿಸುವುದು."

ಮುಕ್ತಾ=ಮುತ್ತು. ಉತ್ತಂಸ=ಶಿರೋಭೂಷಣ, ತಲೆದೊಡವು. ಕಟಿಲ್=ಕ್ಷೀಣಿಸು, ಸವೆದುಹೋಗು, ಕರಗು; ಜಾರಿಬೀಳು, ಕಳಚಿ ಬೀಳು. ['ತನುತ್ವೇ'—ಶ. ಮ. ದ. ಈ ಪದ್ಯದಲ್ಲಿ, 'ಕಟಿಲ್' ಎನ್ನುವುದಕ್ಕೆ 'ಕರಗು' (ಸಣ್ಣಾಗು : 'ಮುತ್ತು ಕರಗಿಹೋಯಿತು', 'ಕೆಂಡ ಕಳಲುತ್ತದೆ' ಎಂದು ಈಗಲೂ ಹೇಳುವುದುಂಟು) ಎಂಬ ಶ. ಮ. ದ. ದ ಪ್ರಾಚೀನಾರ್ಥವೇ ಇರಬಹುದೆ? ಹಾಗೆ ಇಟ್ಟು ಕೊಂಡರೆ, ಧ್ವನಿತಾರ್ಥದ ಸೊಗಸು ಹೆಚ್ಚು : "ವೀರನಾರಾಯಣನ ಪ್ರತಾಪದಿಂದ ಶತ್ರುಗಳ ಉತ್ತಂಸದ ಮುತ್ತು 'ಕಟಿಲಿ' ಉದುರಿ ದುವು!"]. ತಾರಕಿತನಭ=ಚುಕ್ಕಿ ತುಂಬಿದ ಬಾನು, ನಕ್ಷತ್ರಖಚಿತ ಆಕಾಶ.

ಪದ್ಯ ೧೪೧: "ಪರಚಕ್ರಭೂಪರ್ (=ಶತ್ರುಮಂಡಲದ ರಾಜರು) ಅಟ್ಟಿದ ಕರಿಗಳ್ (=ಕಾಣಿಕೆಯಾಗಿ ಕಳಿಸಿಕೊಟ್ಟ ಆನೆಗಳು) ಬಿಡುತಪ್ಪ ಮದದ ಪೊನಲಿಂದೆ (=ಸುರಿಸುವ ಮದೋದಕದ ಪ್ರವಾಹದಿಂದ) ಎತ್ತಂ ನರಲೋಕಚಂದ್ರನಾ ಮಂದಿರದೊಳಗೊಳಗೆ ಎಲ್ಲ ಕಾಲಮುಂ ಕೆಸಱಕ್ಕುಂ (=ಎಲ್ಲೆಲ್ಲಿಯೂ ನರಲೋಕಚಂದ್ರನ ಅರಮನೆಯಲ್ಲಿ ಸದಾಕಾಲವೂ ಕೆಸರಾಗಿರುವುದು").

ಮೇಲಿನ ಎರಡು ಪದ್ಯಗಳಲ್ಲಿನ 'ವೀರನಾರಾಯಣ' ಮತ್ತು 'ನರಲೋಕಚಂದ್ರ' ಎಂಬಿವು ನೃಪತುಂಗನ ಬಿರುದುಗಳಷ್ಟೆ. ಈ ಎರಡು ಪದ್ಯಗಳಂತೂ ನೃಪತುಂಗನನ್ನು ಪ್ರಶಂಸೆ ಮಾಡುವ ಪದ್ಯ ಗಳೇ ಆಗಿವೆ. ಇವುಗಳಲ್ಲಿ ನೃಪತುಂಗನ 'ವಿಭವದ ಪೆಂಪ'ನ್ನು ವರ್ಣಿಸಿದೆ. ಇವಕ್ಕೆ ಹಿಂದಿನ—೧೨೪ರಿಂದ ೧೭೫ರ ವರೆಗಿನ—ಆರು ಪದ್ಯಗಳಲ್ಲಿ ಆತನ 'ಮನದ ಪೆಂಪ'ನ್ನು ವರ್ಣಿಸಿದೆಯೆಂದು

ಊಹಿಸಿದರೆ ತಪ್ಪಾಗದು. ಈ ಎಲ್ಲ ಪದ್ಯಗಳೂ, 'ನಿದರ್ಶನಾಲಂಕಾರ'ದ ಲಕ್ಷ್ಯಗಳಂತೆ, ಮಾರ್ಗಕಾರನ ಸ್ವಂತ ರಚನೆಗಳಾದ್ದರಿಂದ ಈ ಊಹೆಗೆ ಹೆಚ್ಚಿನ ಅವಕಾಶವಿದೆ.

ಪದ್ಯಗಳಲ್ಲಿನ ಅತಿಶಯೋಕ್ತಿಯನ್ನು ಬದಿಗಿಟ್ಟರೂ, ಅನೇಕ ಶತ್ರುಗಳನ್ನು ನೃಪತುಂಗನು ಗೆದ್ದು 'ವೀರನಾರಾಯಣ' ಎಂಬ ಬಿರುದಿಗೆ ಪಾತ್ರನಾಗಿದ್ದನು, ಶತ್ರುರಾಜರು ಅವನಿಗೆ ಆನೆಗಳನ್ನು ಕಾಣಿಕೆಯಾಗಿ ಕಳಿಸುತ್ತಿದ್ದರು—ಎಂಬ ಪದ್ಯಗಳ ತಾತ್ಪರ್ಯಾರ್ಥವು ಯಥಾರ್ಥವಾದ ಐತಿಹಾಸಿಕ ಸಂಗತಿ ಎಂದು ತಿಳಿಯಬಹುದು.]

ಅಪಹ್ನುತಿ

ಪದ್ಯ ೧೮೨: "ಅತಿಶಯವಾಗಿ ಕಾಣುವ ವಸ್ತುವಿನ ಯಥಾರ್ಥತೆಯನ್ನು ಮರೆಯಿಸಿ ('ವಸ್ತುವಿಷಯ ಪ್ರತೀತಿಯಂ ಮಱಸಿ'), ಇನ್ನೊಂದು ಅರ್ಥವನ್ನು ಮುಂದಿಟ್ಟು ಹೇಳುವುದು" ಅಪಹ್ನುತ್ಯಲಂಕಾರ. ('ಅಪಹ್ನುತಿರಪಹ್ನುತ್ಯ ಕಿಂಚಿದನ್ಯಾರ್ಥದರ್ಶನಂ'–'ಕಾವ್ಯಾದರ್ಶ': II,—೩೦೪). ('ಅಪಹ್ನುತಿ' ಎಂಬ ಮಾತಿನ ಅರ್ಥವಾದರೂ 'ವಸ್ತುಸ್ಥಿತಿಯನ್ನು ಅಥವಾ ವಸ್ತುಜ್ಞಾನವನ್ನು ಮರೆಮಾಚುವುದು, ಇಲ್ಲವೆ ಅಲ್ಲಗಳೆಯುವುದು.)[73]

---

73 'ಅಪಹ್ನುತಿರಭೀಷ್ಟಾ ಚ ಕಿಂಚಿದಂತರ್ಗತೋಪಮಾ।
ಭೂತಾರ್ಥಾಪಹ್ನವಾದಸ್ಯಾಃ ಕ್ರಿಯತೇ ಚಾಭಿಧಾ ಯಥಾ॥

—ಕಾವ್ಯಾಲಂಕಾರ: III, ೨೧.

[ಅಂತರ್ಗತವಾಗಿರುವ ಉಪಮೆಯನ್ನು ಎಂದರೆ ಸಾದೃಶ್ಯವನ್ನು ಬೇರೊಂದು ವಿಧದಲ್ಲಿ ತಿಳಿಯಪಡಿಸುವುದಕ್ಕಾಗಿ 'ಭೂತಾರ್ಥ'ವನ್ನು ಎಂದರೆ ಇದ್ದುದನ್ನು ಇಲ್ಲವೆನ್ನುವುದೇ—ಅಪಹ್ನವಮಾಡುವುದೇ–ಅಪಹ್ನುತಿ].

ದಂಡಿಯಾಗಲಿ, ಅವನನ್ನನುಸರಿಸಿರುವ ಮಾರ್ಗಕಾರನಾಗಲಿ, 'ವಸ್ತುವಿಷಯ'ದಲ್ಲಿ (ಎಂದರೆ, ಪ್ರಸ್ತುತವಾದ ಉಪಮೇಯದಲ್ಲಿ) ಉಪಮೆ ಅಂತರ್ಗತವಾಗಿರಬೇಕೆಂಬ ಅಭಿಪ್ರಾಯವನ್ನು ಹೊಂದಿಲ್ಲ. 'ತತ್ತ್ವಾಖ್ಯಾನೋಪಮೆ'ಯಲ್ಲಿಯೂ 'ತತ್ತ್ವಾಪಹ್ನವ ರೂಪಕ'ದಲ್ಲಿಯೂ (ನೋಡಿ, 'ಕಾವ್ಯಾದರ್ಶ'—II, ೩೬

(‘ಅಪಹ್ನುತಿ’ಯಲ್ಲಿ ದಂಡಿ ‘ವಿಷಯನಿಹ್ನುತಿ’ ಮತ್ತು ‘ಸ್ವರೂಪಾಪಹ್ನುತಿ’ ಎಂದು ಎರಡು ಭೇದಗಳನ್ನು ಹೇಳಿರುವನು. ಮಾರ್ಗಕಾರನು, ‘ಮೋಹಾಪೋಹ’, ‘ಧರ್ಮಾಪೋಹ’ ಮತ್ತು ‘ಗುಣಾಪೋಹ’ ಎಂದು ಮೂರು ಭೇದಗಳನ್ನು ತಿಳಿಸಿದ್ದಾನೆ.)

ಪದ್ಯ ೧೪೩ : ‘ಮೋಹಾಪೋಹ’ಕ್ಕೆ ಲಕ್ಷ್ಯ : “ಶಶಿಗೆ ಎಂದುಂ ಅಮೃತಮಯ ಕಿರಣನೆಂಬುದುಂ ಶಿಶಿರಾಂಶುವೆಂಬುದುಂ ಅಮರದು (=ಸಲ್ಲದು); ಸಮನಿಸಿ, ವಿಷಕಿರಣನುಂ ಅನಲಮರೀಚಿಯುಂ ಎಂದೆನಲ್ಕೆ ಮೋಹಾಪೋಹಂ.” ವಿರಹಾವಸ್ಥೆಯಲ್ಲಿರುವ ಪ್ರಣಯಿ, ಚಂದ್ರನ ಪ್ರಭಾವದಿಂದ ತನ್ನ ವಿರಹತಾಪ ಹೆಚ್ಚುತ್ತಿರಲು, “ಚಂದ್ರನ ಕಿರಣಗಳು ಅಮೃತಮಯವೂ ಅಲ್ಲ ತಂಪಾದುವೂ ಅಲ್ಲ, ಅವು ವಿಷಮಯ ಹಾಗೂ ಬೆಂಕಿಯ ಜ್ವಾಲೆ” ಎನ್ನುವ ಮಾತದು. ಇಲ್ಲಿ ಚಂದ್ರನ ಅಮೃತಮಯತೆಯನ್ನೂ ತಂಪಾದ ಗುಣವನ್ನೂ (ವಸ್ತುಸ್ಥಿತಿಯನ್ನು) ‘ಮರಸಿ’ (ಅಲ್ಲಗಳೆದು), ಬೇರೆಯ ಗುಣಗಳನ್ನು (ವಿಷ ಮತ್ತು ಬೆಂಕಿ) ಅವನಿಗೆ ಆರೋಪಿಸಿದೆ.

ಪದ್ಯ ೧೪೪–೧೪೫ : ಇವೆರಡು ಪದ್ಯಗಳು ಧರ್ಮಾಪೋಹಕ್ಕೆ ಲಕ್ಷ್ಯಗಳು : (ಪದ್ಯ ೧೪೪) “ಮನಸಿಜನಾ ಅಂಬುಗಳ್ (=ಬಾಣಗಳು) ಕುಸುಮಂಗಳ್ (=ಹೂವಿನವು) ಎಂಬ ಮಾತದು ಪುಸಿ (=ಸುಳ್ಳು), ದಹನಮಯಂಗಳ್ (=ಸುಡುವ ಶಕ್ತಿಯಿಂದ ತುಂಬಿವೆ); (ಮನ್ಮಥನು ಪುಷ್ಪಬಾಣನು ಎಂಬ) ಜಸಂ ಅೞಿಯೆ (=ಯಶಸ್ಸು ನಾಶವಾಗಲು) ಎರ್ದೆಯಂ ಸುಡುವುವು, ಬಿಸಿಯುವು”—ಎಂದು ಹೀಗೆ ಹೇಳಿದರೆ ಧರ್ಮಾಪೋಹ. (ಇಲ್ಲಿ ಮನ್ಮಥನ ಪುಷ್ಪಬಾಣಗಳ ‘ಧರ್ಮ’ ಸುಡದೆ ಮೃದುವಾಗಿರುವುದು; ಅದನ್ನು ಮರಸಿ, ಅದರ ಸ್ಥಾನದಲ್ಲಿ ಬಿಸಿಯುವು’ ಎಂಬ ಇನ್ನೊಂದು ಧರ್ಮವನ್ನು ಅವಕ್ಕೆ ಹೇಳಿದೆ).

ಮತ್ತು ೯೫; ’ಕ.ರಾ.ಮಾರ್ಗ’—III, ೨೪ ಮತ್ತು ೭೬) ಉಪಮಾನಿಷ್ಟವಾದ ಅಪಹ್ನವವನ್ನು ಹೇಳಿರುವುದರಿಂದ, ಇಲ್ಲಿ ಸಾದೃಶ್ಯಸೂಚನೆ ಅಗತ್ಯವಿಲ್ಲವೆಂದು ಅವರು ಭಾವಿಸಿದ್ದಾರೆ. (‘ಉಪಮಾಪಹ್ನುತಿಃ ಪೂರ್ವಮುಪಮಾಸ್ವೇವ ದರ್ಶಿತಾ.’—ದಂಡಿ: II, ೩೦೯).

(ಪ. ೧೮೫) "ಸ್ಮರನ ಅಸ್ತ್ರಸಮಿತಿಯದು (=ಮನ್ಮಥನ ಬಾಣ ಸಮೂಹವು), ನಿರ್ಭರಂ (ರಭಸದಿಂದ), ಅಂಗಮುಂ ಉರ್ಚಿ ಪೋಗೆಯುಂ (=ಭೇದಿಸಿಕೊಂಡು ಹೋದರೂ) ಪೋಬಟೆಯುಂ (=ಹೋದ ಮಾರ್ಗವನ್ನು) ದೊರೆಕೊಳಿಸಲಾಗದು (=ಹಿಡಿಯಲಾಗುವುದಿಲ್ಲ); ಅದಱಿಂ ಶರತತಿಯಲ್ತು". (ಇಲ್ಲಿ ಮನ್ಮಥ ಬಾಣಗಳ ಭೇದಿಸುವ ಶಕ್ತಿ ಅವುಗಳ ಧರ್ಮ; ಆದರೆ, ಆ ಶಕ್ತಿಯ ಪರಿಣಾಮ ಗೋಚರವಾಗದ್ದರಿಂದ ಬಾಣಗಳನ್ನು ಬಾಣವಲ್ಲ ಎಂದು ಅಲ್ಲಗಳೆದಿದೆ).

ಪದ್ಯ ೧೮೬: "ಸ್ಮರನ ಐದಂಬುಗಳ್ ಅಲ್ಲ ಇವು, ಶರಕೋಟಿಗಳ್; ಇಲ್ಲದಾಗಳ್ ಇಂತೀ ಲೋಕಾಂತರವರ್ತಿ ವಿರಹಿಗಣಮುಂ (=ಲೋಕದಲ್ಲಿರುವ ವಿರಹಿಗಳ ಸಮುದಾಯವನ್ನು) ಮರ್ದಿಸವು ಅವು[74] (=ಅವು ಪೀಡಿಸುತ್ತಿರಲಿಲ್ಲ); ನಿರುತಂ (=ನಿಶ್ಚಯ)". (ಇದು 'ಸುಗುಣಾಪೋಹ'ಕ್ಕೆ ಲಕ್ಷ್ಯ. ಹೆಸರೇ ಸೂಚಿಸುವಂತೆ, ಮನ್ಮಥನ ಐದಂಬುಗಳ 'ಸುಗುಣ'ವನ್ನು–ಎಂದರೆ, ಪೀಡಿಸದಿರುವುದನ್ನು–ಇಲ್ಲವೆಂದು, ಅವುಗಳಲ್ಲಿ ಇಲ್ಲದ 'ಮರ್ದಿಸುವ ಗುಣ'ವನ್ನು ತಿಳಿಸಿದೆ).

ರಸವದಲಂಕಾರ

ಪದ್ಯ ೧೮೭–೧೮೮: "ಒಂಬತ್ತು ಬಗೆಯ ರಸಗಳು ಮನದಟ್ಟಾಗುವಂತೆ ನಿರೂಪಿಸುವ ವಚನವಿರಚನೆ" ರಸವದಲಂಕಾರ ಎಂದು ಹೇಳಿ, ಆ ಒಂಬತ್ತು ರಸಗಳನ್ನು ಹೆಸರಿಸಿದೆ. ಹೆಚ್ಚಿನ ಲಕ್ಷಣ ವಿವರಣೆಯೇನೂ ಇಲ್ಲ.

---

74 ಪಾಠಕರ ಪ್ರತಿಯಲ್ಲಿ, 'ಮರ್ದಿಸು[ವು]ವನೆ(ವೆ)ನೆ' ಎಂದು ತಿದ್ದುಪಡಿಯಿಂದ ಕೂಡಿದ ಪಾಠದಿಂದ ನಾವು '—ಸುವುವವೆನೆ' ಎಂಬ ಪಾಠವನ್ನು ಅಂಗೀಕರಿಸಿದ್ದಾಗಿದೆ. ಮದ್ರಾಸು ಪ್ರತಿಯಲ್ಲಿ 'ಮರ್ದಿಸುವವನೆನೆ' ಎಂದು ಪಾಠವಿದೆ. ಯಾವ ಪಾಠದಲ್ಲಿಯೂ, ಅರ್ಥ ಸರಿಯಾಗಿ ಹೊಂದುವುದಿಲ್ಲ. ಆದ್ದರಿಂದ, 'ಮರ್ದಿಸವವುವೆನೆ' (ಮರ್ದಿಸವು+ಅವು+ಎನೆ) ಎಂದು ಅತ್ಯಲ್ಪವಾದ ಮಾರ್ಪಾಟು ಮಾಡಿಕೊಂಡರೆ ಮೇಲು.

[ಮಾರ್ಗಕಾರನು ಇಲ್ಲಿ ಒಂಬತ್ತು ರಸಗಳನ್ನು ಹೆಸರಿಸಿರುವುದು ಗಮನಾರ್ಹ; 'ಮಾರ್ಗದ್ವಿತಯ ಗತಿಗಳಂ ಬೆರಸಿ ಪೇೞ್ಗೆ ರಸವಿಶೇಷ ದೊಳ್' ಎಂದು ಹೇಳುವಾಗಲೂ ಅವನು ಒಂಬತ್ತು ರಸಗಳ ವಿಚಾರ ವನ್ನು ಪ್ರಸ್ತಾವಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಭರತಮುನಿ ತನ್ನ 'ನಾಟ್ಯಶಾಸ್ತ್ರ'ದಲ್ಲಿ ಎಂಟು ರಸಗಳನ್ನು ಮಾತ್ರ ಪ್ರತಿಪಾದಿಸಿ ದ್ದಾನೆ. ಆ ಗ್ರಂಥದ ಕೆಲವು ಮಾತೃಕೆಗಳಲ್ಲಿ ಶಾಂತರಸವನ್ನು ಹೇಳುವ ಭಾಗ ಪ್ರಕ್ಷಿಪ್ತವೆಂದು ವಿದ್ವಾಂಸರ ಮತ. 'ಅಷ್ಟರಸಾಶ್ರಯ ವಾದ ನಾಟಕಾಭಿನಯದ ಪ್ರಸಕ್ತಿ ಕಾಳಿದಾಸನ 'ವಿಕ್ರಮೋರ್ವಶೀಯ' ದಲ್ಲಿ ಬರುತ್ತದೆ. 'ಅಮರಕೋಶ'ದಲ್ಲಿಯೂ ಎಂಟೇ ರಸಗಳ ಉಲ್ಲೇಖವಿದೆ. ಮಾರ್ಗಕಾರನು ಬಹುಮಟ್ಟಿಗೆ ದಂಡಿಯನ್ನು ಅನುಸರಿಸಿರುವನಷ್ಟೆ. ದಂಡಿ ರಸವದಲಂಕಾರವನ್ನು ನಿರೂಪಿಸುವಲ್ಲಿ ದೃಷ್ಟಾಂತಪೂರ್ವಕ ರಸಗಳ ಹೆಸರುಗಳನ್ನು ಹೇಳಿದ್ದಾನೆ; ಆದರೆ ಅವನು ಶಾಂತರಸದ ಹೆಸರನ್ನೂ ಎತ್ತಿಲ್ಲ. ಈಗ ತಿಳಿದುಬಂದಿರುವ ಮಟ್ಟಿಗೆ ಸಂಸ್ಕೃತ ವಾಙ್ಮಯದಲ್ಲಿ ಶಾಂತರಸದ ಉಲ್ಲೇಖ ಮೊಮ್ಮೊದ-ಲಿಗೆ ಬಂದಿರುವುದು ಉದ್ಭಟನ 'ಕಾವ್ಯಾಲಂಕಾರ ಸಂಗ್ರಹ'ದಲ್ಲಿ. ಭಾಮಹನನ್ನು ಅನುಸರಿಸಿರುವ ಉದ್ಭಟನ ಕಾಲ ಕ್ರಿ. ಶ. ಸು. ೭೭೯ –೮೦೭ (ಎಂದರೆ ನೃಪತುಂಗನು ಪಟ್ಟಕ್ಕೇರುವುದಕ್ಕಿಂತ ಆರೇಳು ವರ್ಷ ಮುಂಚಿನದು). ಭಾಮಹನು ಕೂಡ 'ರಸವದ್' ಅಲಂಕಾರದ ವಿಷಯವನ್ನು ಹೇಳುವಾಗ 'ರಸವದ್‌ದರ್ಶಿತ ಸ್ಪಷ್ಟಶೃಂಗಾರಾದಿ ರಸಂ' ('ಶೃಂಗಾರಾದಿ ರಸಗಳು ಎಲ್ಲಿ ಸ್ಪಷ್ಟ ಗೋಚರಗಳೋ ಅಲ್ಲಿ 'ರಸವತ್' ಎಂಬ ಅಲಂಕಾರವಿರುವುದು') ಎಂದು ಒಟ್ಟಿನ ಮೇಲೆ ಹೇಳಿರುವನೇ ಹೊರತು, ರಸಗಳ ಸಂಖ್ಯೆಯನ್ನಾಗಲಿ ಶಾಂತ ರಸದ ಹೆಸರನ್ನಾಗಲಿ ತಿಳಿಸಿಲ್ಲ. "ಉದ್ಭಟನ ನಿರೂಪಣೆಯನ್ನು ನೋಡಿಕೊಂಡು ಈತನು (ಎಂದರೆ, ಮಾರ್ಗಕಾರನು) ಬರೆದನೆಂದು ಹೇಳಲು ಸಾಕಾದಷ್ಟು ಆಧಾರವಿಲ್ಲ" ಎಂದೂ "'ಶಾಂತರಸ'ದ ಚರಿತ್ರೆಯನ್ನು ನೆನೆದರೆ, ಇಲ್ಲಿ ಅದು ಹೊಸದಾಗಿ ಸೇರಿರುವುದಕ್ಕೆ ಈ ಗ್ರಂಥಕಾರನು ಜೈನನಾಗಿದ್ದುದು ಕಾರಣವಾಗಿರಬಹುದೆನ್ನಿಸುತ್ತದೆ"

ಎಂದೂ ಪ್ರೊ|| ತೀ. ನಂ. ಶ್ರೀ. ಅಭಿಪ್ರಾಯಪಟ್ಟಿದ್ದಾರೆ. (ಭಾ. ಕಾ. ಮೀ., ಮೊದಲ ಮುದ್ರಣ : ಪು. ೪೪೧). ಮಾರ್ಗಕಾರನು ಜೈನನಾಗಿದ್ದುದರ ಜೊತೆಗೆ, ಕ್ರಿ. ಶ. ೫ನೆಯ ಶತಮಾನದ 'ಅನುಯೋಗ ದ್ವಾರ ಸೂತ್ರ'ವೆಂಬ ಪ್ರಾಕೃತ ಜೈನಧರ್ಮ ಗ್ರಂಥವನ್ನು ಈ ವಿಚಾರದಲ್ಲಿ ಅನುಸರಿಸಿರಬಹುದೆಂದು ಊಹಿಸಬಹುದಾಗಿದೆ. ಆ ಗ್ರಂಥದಲ್ಲಿ 'ಶಾಂತರಸ'ವನ್ನು 'ಪ್ರಶಾಂತ' ಎಂಬ ನಾಮಾಂತರದಿಂದ ಕರೆದಿದೆ.[75] ಮಾರ್ಗಕಾರನು ಗುಣವಿಶಿಷ್ಟ ವಿಚನವಿರಚನೆಯನ್ನು 'ರಸವಿಶೇಷದೊಳ್ ಬೆರಸಿಪೇೞ್ಗೆ' ಎಂದು ರಸದ್ಯೋತಕ ವಚನ ವಿರಚನೆಯನ್ನು ವಿವರಿಸುವಾಗ, 'ಪ್ರಸನ್ನ ಗಂಭೀರತರೋಕ್ತಿಯಿಂ ಪ್ರಕಟಮಕ್ಕೆ ರಸಂ ಸತತಂ ಪ್ರಶಾಂತದಂ' ಎಂದು ಹೇಳಿ 'ಶಾಂತ' ವನ್ನು 'ಪ್ರಶಾಂತ' ಎಂದು ಹೆಸರಿಸಿರುವುದು ಈ ಊಹೆಗೆ ಬೆಂಬಲ ನೀಡುತ್ತದೆ. (II—೯೮, ೯೯; ಈ ಪದ್ಯಗಳ ಮೇಲಿನ ಟಿಪ್ಪಣಿಯನ್ನೂ ನೋಡಿ.) (ಪದ್ಯದ ಛಂದಸ್ಸಿನ ನಿರ್ಬಂಧಕ್ಕೆ ಒಳಗಾಗಿ ಹೀಗೆ ಪದಪ್ರಯೋಗ ಮಾಡಿರಬಹುದು ಎಂಬ ಆಕ್ಷೇಪಕ್ಕೂ ಅವಕಾಶವಿದೆ).]

ದಂಡಿ 'ರಸವದ್ ರಸಪೇಶಲಂ' ('ರಸಮಯವಾಗಿ ಕೋಮಲವಾಗಿರುವುದು ರಸವದಲಂಕಾರ') ಎಂದಿಷ್ಟೇ ಹೇಳಿ (II—೨೭೫)

---

75 "ಪ್ರಾಕೃತದಲ್ಲಿ ರಚಿತವಾಗಿರುವ 'ಅಣು ಓಗದಾರಸುತ್ತ' (=ಅನುಯೋಗದ್ವಾರ ಸೂತ್ರ)ವೆಂಬ ಜೈನಧರ್ಮ ಗ್ರಂಥವಲ್ಲಿ ಹೇಳಿರತಕ್ಕ ಒಂಬತ್ತು ಕಾವ್ಯರಸಗಳೊಳಗೆ 'ಪ್ರಸಂತ' (=ಪ್ರಶಾಂತ)ವು ಸೇರಿದೆಯಲ್ಲದೆ, ಅದರ ಲಕ್ಷ್ಯಲಕ್ಷಣಗಳೂ ಸಂಕ್ಷಿಪ್ತವಾಗಿ ಬಂದಿವೆ. ಈ 'ಪ್ರಶಾಂತ'ವೂ ನಮ್ಮ 'ಶಾಂತ'ವೂ ಒಂದೇ ಎಂಬುದರಲ್ಲಿ ಸಂಶಯವಿಲ್ಲ. 'ಅನುಯೋಗದ್ವಾರ ಸೂತ್ರ'ದ ಕಾಲವು ಬಹುಶಃ ಕ್ರಿ. ಶ. ೫ನೆಯ ಶತಮಾನವಾಗಿರಬಹುದೆಂದು ವಿದ್ವಾಂಸರು ಭಾವಿಸುತ್ತಾರೆ. ಇದು ದಿಟವಾಗಿದ್ದಲ್ಲಿ, ಶಾಂತರಸದ ವಿಚಾರವನ್ನು ಮೊದಲು ಎತ್ತಿದ ಕೀರ್ತಿ ಈ ಗ್ರಂಥದ ಕರ್ತೃವಿಗೆ ಸಲ್ಲಬೇಕಾಗುತ್ತದೆ." (V. Raghavan : Number of Rasas, pp, 23, 57-8 ನೋಡಿ)—ಭಾ. ಕಾ. ಮೀ., ಪು. ೨೮೮ರಲ್ಲಿನ ಅಡಿ ಟಿಪ್ಪಣಿ.

ಮುಂದೆ ಸಾಗಿ, ರಸವದಲಂಕಾರದ ಕೆಲವು ದೃಷ್ಟಾಂತಗಳನ್ನು ಕೊಟ್ಟು—

ವಾಚ್ಯಸ್ಯಗ್ರಾಮ್ಯತಾಯೋನಿರ್ಮಾಧುರ್ಯೇ ದರ್ಶಿತೋ ರಸಃ ||
ಇಹ ತ್ವಷ್ಟರಸಾಯತ್ತಾ ರಸವತ್ತಾ ಸ್ಮೃತಾ ಗಿರಾಂ || II,—೨೯೨

['ಮಾಧುರ್ಯಗುಣದಲ್ಲಿ ಕಂಡುಬರುವ ಮಾತಿನ ರಸವು ಅಗ್ರಾಮ್ಯತೆಯಲ್ಲಿಯೆ ಜನ್ಮತಾಳುತ್ತದೆ; ಆದರೆ, ಇಲ್ಲಿ ಅಷ್ಟರಸಾಯತ್ತವಾದ ನಿರೂಪಣೆಯೆ ರಸವದ್ ಅಲಂಕಾರ']

—ಎಂದು ಹೇಳಿ ರಸವದಲಂಕಾರ ನಿರೂಪಣೆಯನ್ನು ಮುಗಿಸಿದ್ದಾನೆ. ಮಾರ್ಗಕಾರನು 'ಗುಣ'ಗಳಿಗೆ ರಸಪರತ್ವವನ್ನು ಹೇಳುವ ಕಲ್ಪನೆಗೆ ಇಲ್ಲಿ ಸೂಚನೆ ಇರುವಂತೆ ಕಂಡುಬರುತ್ತದೆ. ಗುಣವೂ ರಸವ್ಯಂಜಕವಾಗಬಲ್ಲದೆಂದು ಮಾರ್ಗಕಾರನ ಅಭಿಪ್ರಾಯ ಎಂದು ಗ್ರಹಿಸಬಹುದು. (ಎಂದರೆ, ಅಲ್ಲಿ ರಸವು ವ್ಯಂಗ್ಯವಾದಂತಾಯಿತು). ದಂಡಿಯ ದೃಷ್ಟಿಯಲ್ಲಿ ಇದು 'ರಸವದಲಂಕಾರ'ವಲ್ಲ. ಗುಣಾಶ್ರಿತವಾಗಿರದೆ, 'ರಸಮಯವಾಗಿರುವ ವಚನ'ವೆ 'ರಸವದಲಂಕಾರ.' ಲಕ್ಷ್ಯ ಪದ್ಯಗಳಲ್ಲಿಯೂ 'ರಸವದ್ವಚಃ', 'ರಸವತ್ತ್ವಂ ಗಿರಾಂ' ಎಂಬ ಉಕ್ತಿಗಳು ಬರುತ್ತವೆ. ಇವನ್ನೆಲ್ಲ ಅನುಲಕ್ಷಿಸಿಯೇ ಮಾರ್ಗಕಾರನು, 'ಇಹತ್ವಷ್ಟರಸಾಯತ್ತಾ ರಸವತ್ತಾ ಸ್ಮೃತಾ ಗಿರಾಮ್' ಎಂಬ ದಂಡಿಯ ವಾಕ್ಯವನ್ನೇ 'ನವವಿಧರಸಂಗಳಂ ಮನಕೆ ವರೆ ನಿರೂಪಿಸುವ ವಚನವಿರಚನೆ' ಎಂದು ಸ್ಫುಟಗೊಳಿಸಿ 'ಅಷ್ಟರಸ'ವನ್ನು 'ನವರಸ'ವಾಗಿ ಮಾಡಿದ್ದಾನೆ.[76]

---

76 ಭಾಮಹನಾಗಲಿ ದಂಡಿಯಾಗಲಿ ರಸಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿಲ್ಲ. ತಮಗಿಂತ ಹಿಂದೆ ಭರತನು ರಸತತ್ತ್ವ ನಿರೂಪಣೆಯನ್ನು ವಿಸ್ತಾರವಾಗಿ ಮಾಡಿರುವುದರಿಂದಲೂ, ಶ್ರವ್ಯಕಾವ್ಯಕ್ಕಿಂತ ದೃಶ್ಯಕಾವ್ಯಕ್ಕೆ ಅದು ಹೆಚ್ಚು ಸಂಬಂಧಪಟ್ಟದ್ದೆಂದು ಅವರು ಭಾವಿಸಿರಬಹುದಾದ್ದರಿಂದಲೂ ತಮ್ಮ ಕಾವ್ಯಮೀಮಾಂಸೆಯಲ್ಲಿ ಅವರು ರಸವಿಚಾರಕ್ಕೆ ಪ್ರಾಮುಖ್ಯವನ್ನು ಕೊಡಲಿಲ್ಲವೆಂದು ಕಾಣುತ್ತದೆ. ಅವರಿಗೆ ರಸತತ್ತ್ವದ ಕಲ್ಪನೆಯೇ ಇರಲಿಲ್ಲವೆಂದಾಗಲಿ, ಇದ್ದರೂ ಶ್ರವ್ಯಕಾವ್ಯಕ್ಕೆ ಅದು ಅನ್ವಯಿಸತಕ್ಕದ್ದಲ್ಲವೆಂದಾಗಲಿ, ಆದ್ದರಿಂದಲೇ ಅವರು ರಸವನ್ನು ಅಲಂಕಾರ

ಪದ್ಯ ೧೪೯ : ವೀರರಸಕ್ಕೆ ದೃಷ್ಟಾಂತವಾದ ಈ ಲಕ್ಷ್ಯಪದ್ಯವು ಮಾರ್ಗಕಾರನ ಸ್ವಂತ ರಚನೆ; ರಾಮಾಯಣ ಕಥಾ ಸಂದರ್ಭಕ್ಕೆ ಸಂಬಂಧಪಟ್ಟಿದೆ. 'ಕಾವ್ಯಾದರ್ಶ'ದಲ್ಲಿ ವೀರರಸದ ಲಕ್ಷ್ಯಲಕ್ಷಣ ಸಮನ್ವಯ ಹೀಗಿದೆ:

"ಅರ್ಣವಯುಕ್ತವಾದ ಉರ್ವಿಯನ್ನು ಗೆಲ್ಲದೆ, ವಿವಿಧ ಯಜ್ಞಗಳನ್ನು ಮಾಡದೆ, ಅರ್ಥಿಗಳಿಗೆ ಅರ್ಥವನ್ನು ದಾನಮಾಡದೆ, ನಾನು ಹೇಗೆ ಪಾರ್ಥಿವನಾಗಬಲ್ಲೆ? ಹೀಗೆ, ರಾಜನ ಉತ್ಸಾಹವು ಉತ್ಕರ್ಷವನ್ನು ಹೊಂದಿ ವೀರರಸದಲ್ಲಿ ನೆಲಸಿ, ಈ ವಚನಗಳ ರಸವತ್ತ್ವವನ್ನು ಸಮರ್ಥಿಸುತ್ತಿವೆ." (ಕಾವ್ಯಾದರ್ಶ, II—೨೮೪, ೨೮೫). (ಉತ್ಸಾಹವು ವೀರರಸದ ಸ್ಥಾಯಿಭಾವ ಎಂದು ಇಲ್ಲಿ ಸ್ಪಷ್ಟವಾಗಿ ಸೂಚಿತವಾಗಿದೆ).

ಪದ್ಯ ೧೫೦ : ಅದ್ಭುತ ರಸದ ದೃಷ್ಟಾಂತ. ಇದೂ ಮಾರ್ಗಕಾರನ ಸ್ವಂತ ಲಕ್ಷ್ಯ ಪದ್ಯ. ರಾಮಾಯಣ ಕಥೆಗೇ ಸಂಬಂಧಪಟ್ಟಿದೆ. ದಂಡಿಯದು ಬೇರೆಯ ತೆರನಾಗಿದೆ:

"ಈ ನಂದನ ವೃಕ್ಷಗಳ ನನೆಕೊನೆಗಳೇ ಅವುಗಳ ತೊಡವು; ಪುಷ್ಪಗಳೇ ಹಾರಾದಿ ಭೂಷಣಗಳು; ಕೊಂಬೆಗಳೇ ಮಂದಿರಗಳು;

ಮಾಲಿಕೆಯಲ್ಲಿ ಸೇರಿಸಿದರು ಎಂದು ತೀರ್ಮಾನಿಸುವುದಾಗಲಿ ಅಷ್ಟು ಸಮಂಜಸವೆನಿಸದು. ನವೀನಾಲಂಕಾರಿಕರ ಪ್ರಕಾರ ರಸವು ವಾಚ್ಯವಲ್ಲ, ವ್ಯಂಗ್ಯ; ಆದ್ದರಿಂದ, ಅದು ಅಲಂಕಾರ್ಯವಾಗಬಹುದೇ ಹೊರತು ಅಲಂಕಾರವಲ್ಲ ಎಂದು ಅವರ ಸಿದ್ಧಾಂತ. (ಈ ಸಂಬಂಧದ ವಿವೇಚನೆಯನ್ನು ಇಲ್ಲಿ ಬೆಳಸುವುದು ಅನಾವಶ್ಯಕವೆಂದು ತೋರುತ್ತದೆ. ಈ ವಿಚಾರದಲ್ಲಿ ಆಸಕ್ತಿಯುಳ್ಳವರು ಪ್ರೊ॥ ತೀ.ನಂ.ಶ್ರೀ.ಯವರ 'ಭಾರತೀಯ ಕಾವ್ಯಮೀಮಾಂಸೆ'ಯ ರಸಪ್ರಕರಣವನ್ನೂ, ಡಾ॥ ಕೆ. ಕೃಷ್ಣಮೂರ್ತಿಯವರ 'ಕನ್ನಡ ಕಾವ್ಯಾಲಂಕಾರ'ದ ಮುನ್ನುಡಿ ಹಾಗೂ 'ಕನ್ನಡ ಧ್ವನ್ಯಾಲೋಕ'ವನ್ನೂ ಪರಿಶೀಲಿಸಬಹುದು.) ಅದು ಹೇಗಿದ್ದರೂ, ಭಾಮಹನಿಗಿಂತ ದಂಡಿಯೂ, ದಂಡಿಗಿಂತ ಮಾರ್ಗಕಾರನೂ ರಸವಿಚಾರದಲ್ಲಿ ಹೆಚ್ಚಿನ ಗಮನ ಹರಿಸಿದ್ದಾರೆಂಬುದು ಸ್ಪಷ್ಟ.

ಇದು ಆಶ್ಚರ್ಯಕರ!" (II.—೨೯೦) (ಆಶ್ಚರ್ಯಭಾವವು ಅದ್ಭುತದ ಸ್ಥಾಯಿೀ ಎಂಬ ಸೂಚನೆಯಿಲ್ಲಿದೆ).

ಪದ್ಯ ೧೯೧: ಕರುಣಾರಸಕ್ಕೆ ಮಾರ್ಗಕಾರನು ಕೊಟ್ಟಿರುವ ಈ ಸ್ವಂತ ಲಕ್ಷ್ಯವು ರಾಮಾಯಣ ಕಥೆಗೆ ಸಂಬಂಧಪಟ್ಟಂತೆ ಕಾಣುವುದಿಲ್ಲ. ಆದಗೂ, ಸೀತಾದೇವಿಯ ವಿರಹಾವಸ್ಥೆಯನ್ನು ಹನುಮಂತನು ರಾಮನಿಗೆ ವರ್ಣಿಸುತ್ತಿರುವನೆಂದು ಊಹಿಸಿದರೆ ತಪ್ಪಾಗದು. ದಂಡಿಯ ಲಕ್ಷ್ಯಲಕ್ಷಣ ಸಮನ್ವಯ ಹೀಗಿದೆ:

"ಎಲೌ ದೇವಿ! ಕುಸುಮಶಯ್ಯೆ ಕೂಡ ನಿನ್ನ ಕೋಮಲಾಂಗಕ್ಕೆ ನೋವನ್ನುಂಟುಮಾಡುತ್ತಿತ್ತು; ಈಗ ಅದು ಹೇಗೆ ತಾನೆ ಜ್ವಾಲಾಮಯವಾದ ಈ ಚಿತೆಯ ಮೇಲೆ ಮಲಗಿರುವೆ? ಹೀಗೆ ಉದ್ರಿಕ್ತವಾದ ಕಾರುಣ್ಯ (ರಸವದ್) ಅಲಂಕಾರವೆಂದು ಪರಿಗಣಿಸಲ್ಪಟ್ಟಿದೆ." (II,—೨೮೬–೮೭).

ಪದ್ಯ ೧೯೨: ಶೃಂಗಾರರಸಕ್ಕೆ ಲಕ್ಷ್ಯವಾದ ಈ ಸ್ವಂತ ಲಕ್ಷ್ಯ ಪದ್ಯದಲ್ಲಿ ಶೃಂಗಾರರಸಕ್ಕೆ ಸ್ಥಾಯಿಯಾದ 'ರತಿ'ಯನ್ನು ಸೂಚಿಸುವ 'ಅನುಭಾವ'ಗಳನ್ನು ಕವಿ ವರ್ಣಿಸಿದ್ದಾನೆ. ದಂಡಿಯ ಲಕ್ಷಣ ಸಮನ್ವಯದಿಂದ ಕೂಡಿದ ಲಕ್ಷ್ಯವು ವಾಸವದತ್ತೆಯ ಕಥೆಗೆ ಸಂಬಂಧಿಸಿದ್ದು, ಮನೋಹರವಾಗಿದೆ:

"ಯಾರನ್ನು ಮೃತಳೆಂದು ತಿಳಿದು, ಅವಳನ್ನು ಸೇರಬಯಸಿ ನಾನೇ ಮರಣ ಹೊಂದಬಯಸಿದೆನೋ—ಆ ಅವಂತೀ ರಾಜಪುತ್ರಿ ಅದು ಹೇಗೆ ನನಗೆ ಲಭಿಸಿದಳು? ಅದೂ ಈ ಜನ್ಮದಲ್ಲಿ? (ಈ ಹಿಂದೆ ನಿದರ್ಶನಪಡಿಸಿದ್ದು ಪ್ರೀತಿ ಅಥವಾ ಪ್ರೇಯ); ಇದು ರೂಪಬಾಹುಲ್ಯದಿಂದಾಗಿ ("intensity of manifestation") ಶೃಂಗಾರವಾಗಿ ಪರಿಣಮಿಸಿರುವ ರತಿ; ರಸವದ್ ಉಕ್ತಿಗೆ ಇದು ನಿದರ್ಶನ" (II–೨೮೦, ೨೮೧).

ಪದ್ಯ ೧೯೩: ಭೇತಾಳಗಳ ವಿಕಟನರ್ತನದ ವರ್ಣನೆಯು ಈ ಲಕ್ಷ್ಯ. ಮಾರ್ಗಕಾರನ ಸ್ವಂತರಚನೆ. 'ಭಯಾನಕ' ರಸದ ಸ್ಥಾಯಿ-

ಯಾದ ಭಯಹುಟ್ಟಿಸುವ ಭಾವ ಇಲ್ಲಿ ಶಕ್ತಿಪೂರ್ಣವಾಗಿ ವರ್ಣಿತವಾಗಿದೆ. ದಂಡಿಯ ಲಕ್ಷ್ಯ ಬೇರೆಯ ತೆರನಾಗಿದೆ:

"ಇದು ಇಂದ್ರನ ವಜ್ರಾಯುಧ; ಅದರ ಅಲಗಿನ ಧಾರೆಯಲ್ಲಿ ಅಗ್ನಿ ಸಂನಿಹಿತ; ಅದರ ಸ್ಮರಣ ಮಾತ್ರದಿಂದ ದೈತ್ಯಸ್ತ್ರೀಯರ ಗರ್ಭಪಾತವಾಗುವುದು".

ಪದ್ಯ ೧೯೪: ಮಾರ್ಗಕಾರನ ಸ್ವಂತ ಲಕ್ಷ್ಯವಾದ ಇದರಲ್ಲಿ ರಾಮನ ಕ್ರೋಧವಚನದಿಂದ ಕೂಡಿದ ಪ್ರತಿಜ್ಞೆ ವರ್ಣಿತವಾಗಿದೆ. ಇದು ರಾಮಾಯಣ ಕಥಾಸನ್ನಿವೇಶಕ್ಕೆ ಸಂಬಂಧಪಟ್ಟಿದ್ದರೆ, ದಂಡಿಯದು ಭಾರತಕಥಾ ಸನ್ನಿವೇಶಕ್ಕೆ ಸಂಬಂಧಪಟ್ಟಿದೆ. ದಂಡಿಯ ಲಕ್ಷ್ಯ: "'ಕೃಷ್ಣೆಯ ಕೇಶವನ್ನು ಹಿಡಿದೆಳೆದ ಆ ಪಾಪಿ ದುಶ್ಶಾಸನನು ಈಗ ನನ್ನ ಮುಂದಿರುವವನು; ಅವನು ಇನ್ನು ಒಂದು ಕ್ಷಣವಾದರೂ ಬದುಕಿರಬಲ್ಲನೆ?'—ಇಲ್ಲಿ ತನ್ನ ಶತ್ರುವನ್ನು ಕಂಡ ಭೀಮನ ಕ್ರೋಧವು ಪರಾಕೋಟಿಯನ್ನು ಮುಟ್ಟಿದೆ; ಹೀಗೆ, ಇದು ರಸವದ್ ವಚನ". (II-೨೮೨, ೨೮೩). (ರೌದ್ರದ ಸ್ಥಾಯಿ ಕ್ರೋಧ).

ಪದ್ಯ ೧೯೫: ಬೀಭತ್ಸದ ಲಕ್ಷ್ಯ. ಪದ್ಯದ ಅರ್ಥ: "(ಮನುಷ್ಯನ) ಮೆಯ್, ನವವಿವರಾವೃತ ಪೂತಿದ್ರವ (=ನವದ್ವಾರಗಳಲ್ಲಿ ತುಂಬಿದ ಕೀವು), (ಮತ್ತು) ತ್ವಗಾವೃತವಿಮಿಶ್ರಮಾಂಸ (=ಆವರಿಸಿಕೊಂಡಿರುವ ಚರ್ಮದೊಂದಿಗೆ ಬೆರೆತ ಮಾಂಸ), (ಇವುಗಳಿಂದ) ಉಪಚಿತಂ (=ಒಟ್ಟುಗೂಡಿರವಂಥದು); ಅಧ್ರುವಂ (=ಅಶಾಶ್ವತವಾದದ್ದು); ಅಸುಚಿತ್ರಭ್ರಮಿತ ಅಸ್ಥಿವಹಂ (=ಹಿತಕರವಾದದ್ದೆಂಬ ಭ್ರಮೆಯನ್ನು ಹುಟ್ಟಿಸದ ಮೂಳೆಗಳನ್ನು ಹೊತ್ತಿರತಕ್ಕದ್ದು); ಬಗೆವೊಡೆ ಇಂತು ಆದಂ ಕಿಸುಗುಳಂ (=ವಿಚಾರ ಮಾಡಿದರೆ, ಈ ರೀತಿಯಲ್ಲಿ ವಿಶೇಷವಾಗಿ ಹೇಯವಾದ ಪದಾರ್ಥ)."

ದಂಡಿಯ ಲಕ್ಷ್ಯ: "ನಿನ್ನ ಶತ್ರುಗಳ ರಕ್ತವನ್ನು ಪಾಣಿ ಸಂಪುಟಗಳಲ್ಲಿ ಕುಡಿಕುಡಿದು ಕರುಳುಗಳನ್ನೇ ಒಡವೆಯಾಗಿ ಧರಿಸಿಕೊಂಡು ಅವರ ಮುಂಡಗಳೊಡನೆ ಈ ರಣಪಿಶಾಚಗಳು ನರ್ತಿಸುತ್ತಿವೆ."

ಪದ್ಯ ೧೯೬: ಮಾರ್ಗಕಾರ, ದಂಡಿ—ಇವರಿಬ್ಬರ ಲಕ್ಷ್ಯಗಳಲ್ಲಿಯೂ ಕಾಮುಕ ಸ್ತ್ರೀಯ ಹಾಸ್ಯಾಸ್ಪದ ವರ್ತನೆ ವರ್ಣಿತವಾಗಿದೆ. ಆದರೆ ಎರಡಕ್ಕೂ ಬಹಳ ವ್ಯತ್ಯಾಸವಿದೆ. ಮಾರ್ಗಕಾರನ ಲಕ್ಷ್ಯದಲ್ಲಿ, ತನ್ನ ಪತಿಯೊಡನೆ ನೆರೆಯುವ ವೇಳೆಯಲ್ಲಿ ಪರಪುರುಷನೊಡನೆ ತಾನು ಆ ಮುನ್ನ ಭೋಗಿಸಿದ್ದನ್ನು ಮರೆಯಲು ಯತ್ನಿಸಿದ 'ಅಭಿಸಾರಿಕೆ'ಯ ನಗೆಗೀಡಾಗುವ ಸಂದರ್ಭವನ್ನು ವರ್ಣಿಸಿದೆ. ದಂಡಿಯ ಲಕ್ಷ್ಯದಲ್ಲಿ, ಒಬ್ಬಳು ತನ್ನ ಗೆಳತಿಯ ಮೈಮೇಲಿನ ಪುರುಷ ನಖಕ್ಷತವನ್ನು ಕಂಡು, 'ಅತಿ ಮಾನವತಿಯೆ, ಅದನ್ನು ಉತ್ತರೀಯದಿಂದ ಮರೆಮಾಡಿಕೋ' ಎಂದು ಬೇಡಿಕೊಳ್ಳುವ ಸನ್ನಿವೇಶ ವರ್ಣಿತವಾಗಿದೆ. (ಇಲ್ಲಿ, 'ಮಾನವತಿ' ಎಂಬ ಪದ ಪ್ರಯೋಗ ಅರ್ಥಪೂರ್ಣವಾಗಿದೆ. ಮಾನವತಿಯ ಮಾನಗೆಟ್ಟ ನಡತೆ ಹಾಸ್ಯಾಸ್ಪದವಲ್ಲವೆ?)

ಪದ್ಯ ೧೯೭: ಶಾಂತರಸಕ್ಕೆ ಕೊಟ್ಟಿರುವ ಈ ಲಕ್ಷ್ಯ ಮಾರ್ಗಕಾರನ ಸ್ವಂತ ರಚನೆ:

"[ಮಿಗೆರ]ಣದೊಳ್ ಪರಿಚಿತ[ಮಾ] ದ್ವಿಗುಣಂ (=ರಜೋಗುಣ ಮತ್ತು ತಮೋಗುಣ);[77] ಅದು ಓರಂತೆ (=ಒಂದೇ ಸಮನಾಗಿ) ಮಟ್ಟಮಿರ್ದುದು (=ತನ್ನ ಮೂಲಸ್ವರೂಪದಲ್ಲಿಯೆ ಇದೆ); ಮತ್ತಂ, ವಿಗತವಿಕಾರಾಕಾರಂ ಶಾಂತಾಧಾರಂ (=ಶಾಂತಗುಣಕ್ಕೆ ನೆಲೆಯಾದ, ಯಾವ ವಿಕಾರವನ್ನೂ ಹೊಂದದ), ನಿನ್ನ ರೂಪು, ಸೊಗಯಿಸುಗುಂ." ('ರಣರಂಗದಲ್ಲಿ ಕ್ಷಾತ್ರವನ್ನು ಮೆರೆದು, ಕ್ಷಾತ್ರಗುಣವನ್ನು ಮೆರೆಯುವ

---

77 ಪಾಠಕರ ಪ್ರತಿಯಲ್ಲಿ, '. . . ಣದೊಳ್ ಪರಿಚಿತಮಂ ದ್ವಿಗುಣಂ' ಎಂದಿದೆ. ಮೊದಲಿನ ಮೂರು ಅಕ್ಷರಗಳು ಲುಪ್ತವಾಗಿವೆ. ಮದ್ರಾಸು ಮುದ್ರಣದ ಸಂಪಾದಕರು, '[ಮೃಗಗ]ಣದೊಳ್ . . .' ಎಂದು ಲುಪ್ತಪಾಠವನ್ನು ಊಹಿಸಿ ಸೇರಿಸಿದ್ದಾರೆ. ಹಾಗಿದ್ದರೂ ಅರ್ಥಕ್ಲೇಶವು ಕಂಡುಬಂದದ್ದರಿಂದ, ನಮಗೆ ಹೊಳೆದಂತೆ ಲುಪ್ತಪಾಠವನ್ನು ಊಹಿಸಿ ಸೇರಿಸಿ, ಒಂದು ಸಣ್ಣ ತಿದ್ದುಪಾಟನ್ನು ಮಾಡಿರುತ್ತೇವೆ.

ಆಕಾರವನ್ನು ಹೊಂದಿದ್ದರೂ ಕೂಡ ನಿನ್ನ ರೂಪು ಶಾಂತ ಸ್ವಭಾವಕ್ಕೆ ನೆಲೆಯಾಗಿದೆ'–ಎಂದು ಒಬ್ಬ ರಾಜನನ್ನು ಈ ಪದ್ಯದಲ್ಲಿ ವರ್ಣಿಸಿದೆ. ಇದು ನೃಪತುಂಗನನ್ನು ಸ್ತುತಿಸುವ ಪದ್ಯವಾಗಿದ್ದರೂ ಆಗಿರಬಹುದು.)

ಊರ್ಜಿತ

ಪದ್ಯ ೧೯೮: "ಊರ್ಜಸ್ವಿ ರೂಢಾಹಂಕಾರಂ" ಎಂದು ದಂಡಿ 'ಊರ್ಜಸ್ವಿ' ಎಂಬ ಅಲಂಕಾರದ ಬಗೆಗೆ ಸಂಗ್ರಹವಾಗಿ ಹೇಳಿರುವುದನ್ನೆ "ಆರೂಢ ನಿಜ ಮನೋಹಂಕಾರಕಾರೋತ್ಕರ್ಷ ಪ್ರಕಾಶಂ ಊರ್ಜಿತ" ಎಂದು ಮಾರ್ಗಕಾರನು ವಿಸ್ತರಿಸಿ ಹೇಳಿದ್ದಾನೆ. ['ಊರ್ಜಸ್ವಿ' ಯನ್ನೇ ಮಾರ್ಗಕಾರನು 'ಊರ್ಜಿತ' ಎಂದು ಕರೆದಿದ್ದಾನೆ. 'ಕಾವ್ಯಾದರ್ಶ'ದ ಲಕ್ಷಣ ಶ್ಲೋಕದಲ್ಲಿ 'ತೇಜಸ್ವಿ' ಎಂಬ ಪಾಠವೂ ಇದೆ. (ಪ್ರೊ|| ಎಸ್. ಕೆ. ಬೆಳವಳಕರ್ ಅವರ ಮುದ್ರಣ: II–೨೭೫; ಪು. ೨೬). ಭಾಮಹನು ದೃಷ್ಟಾಂತವನ್ನು ಮಾತ್ರ ಕೊಟ್ಟಿದ್ದಾನೆ]. ಒಬ್ಬ ವ್ಯಕ್ತಿಯ ಆತ್ಮಾಭಿಮಾನದ ಹೆಚ್ಚಳವನ್ನು ಪ್ರಕಾಶಗೊಳಿಸುವುದು 'ಊರ್ಜಿತಾಲಂಕಾರ'ದ ಲಕ್ಷಣ.

ಪದ್ಯ ೧೯೯: 'ಊರ್ಜಿತ'ದ ಈ ಲಕ್ಷ್ಯ ದಂಡಿಯುದನ್ನು ಸ್ವಲ್ಪಮಟ್ಟಿಗೆ ಹೋಲುತ್ತದೆ. ಪದ್ಯದ ಅರ್ಥ: "ಕೊಲ್ಲೆಂ, ಬಿಸುಡು ಆಯುಧಮುಂ; ಪುಲ್ಲಂ ಕರ್ಚು; ಏಱು ಪುತ್ತಂ; ಎನ್ನ ಅಡಿಗೆಱಗು; ಇದಿರಿಂದ ನಿಲ್ಲದೆ ತೊಲಗು; ಅಂತಲ್ಲದೊಡೆ, ನೀನೀಗಳ್ ಎಬ್ಬಿ ಆರ್ದು (=ಗರ್ಜಿಸಿ, ಸಿಂಹನಾದ ಮಾಡಿ), ಕೈದುಗೆಯ್ (=ಆಯುಧವನ್ನು ಹಿಡಿದು ಹೋರಾಡು)". (ಬಾಯಲ್ಲಿ ಹುಲ್ಲನ್ನು ಕಚ್ಚಿಕೊಳ್ಳುವುದು, ಹಾವಿನ ಹುತ್ತವನ್ನು ಏರಿ ನಿಲ್ಲುವುದು—ಇವು ಶರಣಾಗತಿಯನ್ನು ಸೂಚಿಸುವ ಪ್ರಾಚೀನ ಸಂಜ್ಞೆಗಳು).

ವ್ಯಾವೃತ್ತಿ

ಪದ್ಯ ೨೦೦: "ಮತ್ತೆ ಮತ್ತೆ ಆ ಮಾತನ್ನು (ಎಂದರೆ, ಒಮ್ಮೆ ಹೇಳಿದ ಮಾತನ್ನು) ಎತ್ತಿಕಾಣುವಂತೆ ('ನೆಗಟ್ಟಿರೆ') ಹೇಳಿದರೆ, ಅದು

'ವ್ಯಾವೃತ್ತಿ' ಯೆನಿಸುವುದು." (ವಿಶಿಷ್ಟವಾದ ಆವೃತ್ತಿಯೆ ವ್ಯಾವೃತ್ತಿ). (ಈ ಅಲಂಕಾರವನ್ನು ದಂಡಿಯಾಗಲಿ ಭಾಮಹನಾಗಲಿ ಹೇಳಿಲ್ಲ). ಹೇಳಿದ ಮಾತನ್ನೆ ಅನಗತ್ಯವಾಗಿ ಮತ್ತೆ ಮತ್ತೆ ಹೇಳಿದರೆ ಪುನರುಕ್ತಿ ದೋಷವಾಗುವುದು (ನೋಡಿ: ಕ. ರಾ. ಮಾರ್ಗ, I-೮೪). ಅದು ದೋಷವೆನಿಸದೆ ಅಲಂಕಾರವಾಗಬೇಕಾದರೆ, ಅದರಲ್ಲಿ ಒಂದು ವೈಶಿಷ್ಟ್ಯವಿರಬೇಕು. (ಆ ವೈಶಿಷ್ಟ್ಯವೆಂದರೆ, ಹಿಂಗಿನ ವಾಕ್ಯದಲ್ಲಿನ ಪದವು ಮುಂದಿನ ವಾಕ್ಯಕ್ಕೆ ಒಂದು ಅರ್ಥ ಶ್ರೇಣಿಯ ಸಂಬಂಧವನ್ನು ಕಲ್ಪಿಸುವಂತೆ ಪುನರುಕ್ತವಾಗುವುದು. ಆ ಸಂಬಂಧವು ಕೆಲವು ವೇಳೆ ಕಾರಣರೂಪದಲ್ಲಿರಬಹುದು).

[ಈ ಅಲಂಕಾರವನ್ನೆ ನಾಗವರ್ಮನು 'ಕಾವ್ಯಾವಲೋಕನ' ದಲ್ಲಿ 'ಆವಳ್ಯಲಂಕಾರ' ಎಂದು ನಿರೂಪಿಸಿರುವಂತೆ ಕಾಣುತ್ತದೆ. ಈಚಿನ ಆಲಂಕಾರಿಕರು ಈ 'ಆವಳಿ' ಯನ್ನು 'ಏಕಾವಳಿ' ಯೆಂದೂ ಕರೆದಿರುತ್ತಾರೆ. ಇದನ್ನು 'ಮುಕ್ತಪದಗ್ರಾಸಾಲಂಕಾರ' ಎನ್ನುವುದೂ ಉಂಟು. ('ಗೃಹೀತಮುಕ್ತರೀತ್ಯಾರ್ಥಶ್ರೇಣಿರೇಕಾವಳೀ ಮತಾ.'—ನೋಡಿ: ಕ. ಕೈಪಿಡಿ, ಪು. ೩೪೧; ೨ನೆಯ ಮುದ್ರಣ).

ಪದ್ಯ ೨೦೧: ಪದ್ಯದ ಅನ್ವಯಾರ್ಥ: "ವಿರಹಂ ಪರಿತಾಪಮಂ, ಆ ಪರಿತಾಪಮುಂ ಅಳಿಪಂ (=ಆಶೆಯನ್ನು), ಅಳಿಪುಂ ಆ ವಲ್ಲಭನೊಳ್ ನೆರೆದಿರ್ಪ ಬಗೆಯಂ (ಕೂಡಿರುವ ಮನಸ್ಸನ್ನು, ಆಲೋಚನೆಯನ್ನು), ಆ ನೆರೆದ ಇರವುಂ ಸುರತಾನುರಾಗಮಂ (ಸಂಭೋಗ ಪ್ರೀತಿಯನ್ನು), ಪೆರ್ಚಿಸುಗುಂ." (ಈ ಪದ್ಯದಲ್ಲಿ 'ಪರಿತಾಪ', 'ಅಳಿಪು', 'ನೆರೆ'–ಈ ಪದಗಳಲ್ಲಿ ಕ್ರಮವಾಗಿ ಹಿಂದಿನ ಪದದ ಅರ್ಥವು ಮುಂದಿನ ಪದದ ಅರ್ಥಕ್ಕೆ ಕಾರಣವಾಗಿರುವುದರಿಂದ ವಾಕ್ಯಗಳ ನಡುವೆ ಅರ್ಥ ಸಂಬದ್ಧತೆ ಕಲ್ಪಿತವಾಗಿರುವುದನ್ನೂ, ವಾಕ್ಯವಾಕ್ಯಗಳ ನಡುವೆ ಶಾಬ್ದಿಕ ಸಂಬದ್ಧತೆ ಏರ್ಪಟ್ಟಿರುವುದನ್ನೂ ಗಮನಿಸಿದರೆ, ಇದು ಶಬ್ದವ್ಯಾವೃತ್ತಿಯಲ್ಲಿ 'ಸ್ವಗತ'ವಾಗಿರುವ ಎಂದರೆ ಅಡಕವಾಗಿರುವ ಅಲಂಕಾರ ಎಂದು ಪರಿಗಣಿಸಲು ಯಾವ ಅಡ್ಡಿಯೂ ಇಲ್ಲ).

ಪದ್ಯ ೨೦೨: ಈ ಪದ್ಯದ ಅನ್ವಯವನ್ನೂ ಮೇಲಿನ ಲಕ್ಷ್ಯವನ್ನು ಅನುಸರಿಸಿ ಮಾಡಿಕೊಳ್ಳತಕ್ಕದ್ದು.

ಪ್ರಿಯತರ

ಪದ್ಯ ೨೦೩: "ಪ್ರೇಯಃ ಪ್ರಿಯತರಾಖ್ಯಾನಂ" ("ಒಬ್ಬರ ಮನಸ್ಸಿಗೆ ತುಂಬ ಹಿತಕರವಾಗುವಂತೆ ಹೇಳುವುದೇ 'ಪ್ರೇಯಸ್ಸು'") ಎಂಬ ದಂಡಿಯು ಸಂಕ್ಷೇಪವಾದ ಲಕ್ಷಣವನ್ನು—"ಪ್ರಿಯವೂ ಕುಶಲ ಪೂರ್ವಕವೂ ಉಚಿತವಾದ ನಯ, ವಿನಯ, ಉದಾರ ಗುಣಗಳಿಂದ ಮನೋಹರವಾದುದೂ (ಸಂದರ್ಭೋಚಿತವಾಗಿ ಕೈಗೊಳ್ಳಬೇಕಾದ) ಎಲ್ಲ ಕ್ರಿಯೆಗಳನ್ನೂ ಅನುಸರಿಸತಕ್ಕ ಅರ್ಥವುಳ್ಳದ್ದೂ ಆದ ವಚನವೇ 'ಪ್ರಿಯತರ'"—ಎಂದು ಮಾರ್ಗಕಾರನು ವಿಸ್ತರಿಸಿರುವನು.

[ದಂಡಿ ಹೇಳುವ ಪ್ರೇಯಸ್ಸೇ ಪ್ರಿಯತರ; ಅವನು ಈ ಅಲಂಕಾರಕ್ಕೆ ಲಕ್ಷ್ಯವನ್ನು ಕೊಟ್ಟಿಲ್ಲ. ಭಾಮಹನು ಲಕ್ಷ್ಯವನ್ನು ಕೊಟ್ಟಿರುವನೇ ಹೊರತು ಲಕ್ಷಣವನ್ನು ಹೇಳಿಲ್ಲ; ಆದರೆ, 'ಪ್ರೇಯೋ ಗೃಹಾಗತಂ ಕೃಷ್ಣಮವಾದೀತ್ ವಿದುರೋ ಯಥಾ . . .' ('ಮನೆಗೆ ಬಂದ ಕೃಷ್ಣನಿಗೆ ವಿದುರನು ಹೇಳಿದ ಪ್ರಿಯವಾದ ಮಾತುಗಳು ಪ್ರೇಯಸ್ಸಿಗೆ ದೃಷ್ಟಾಂತ') ಎಂಬ ಲಕ್ಷ್ಯವಾಕ್ಯದಲ್ಲಿ ಲಕ್ಷಣ ಅಭಿಪ್ರೇತವಾಗಿರುವಂತೆ ಕಾಣುತ್ತದೆ. ಇದು ಅಲಂಕಾರವೇ ಅಲ್ಲವೆಂಬ ಮತವೂ ಇದೆ.]

ಪದ್ಯ ೨೦೪: ಅನ್ವಯ: "ನಿಮ್ಮಡಿಯಾ ಬರವಿನೊಳ್ ಗುರುಜನದ ಪರಕೆಯುಂ ಬಂಧುರ ಪುಣ್ಯಫಳಾನುಬಂಧಮುಂ ಪರಮಾನುಭಾವ ಭರಮುಂ ನೆರೆದು ಎನ್ನೊಳ್ ದೊರೆಕೊಂಡುವವು."

ಆಶೀಃ (ಆಶೀರಲಂಕಾರ)

ಪದ್ಯ ೨೦೫: ಅನ್ವಯ: "ಪಿರಿಯರ್ ಮನದ ಬಗೆಯಂ ದೊರೆಕೊಂಡು ಪಿರಿದಾಗಿರೆ ಒಸಗೆಯಂ ಪೇೞ್ವೊಡೆ ಅದುಂ ಪರಮ ಆಶೀರರ್ಥಾಲಂಕರಣಾಂತರಂ."—"ಹಿರಿಯರು (ತಮ್ಮನ್ನು ಆದರದಿಂದ ಬರ ಮಾಡಿಕೊಂಡವರ) ಮನಸ್ಸಿನ ಬಗೆಯನ್ನು (ಇಷ್ಟಾರ್ಥವನ್ನು)

ಗ್ರಹಿಸಿಕೊಂಡು ಅವರಿಗೆ 'ಒಸಗೆ' ಯನ್ನು (ಎಂದರೆ ಶುಭವನ್ನು) ಕೋರುವುದೆ ಆಶೀರಲಂಕಾರ" ಎಂದು ತಾತ್ಪರ್ಯಾರ್ಥ.

ದಂಡಿಯ ಶ್ಲೋಕ ಹೀಗಿದೆ:

ಆಶೀರ್ನಾಮಾಭಿಲಷಿತೇ ವಸ್ತುನ್ಯಾಶಂಸನಂ ಯಥಾ ।
ಪಾತು ವಃ ಪರಮಂ ಜ್ಯೋತಿರವಾಙ್ಮಾನಸಗೋಚರಂ ॥ (II, ೩೫೬)

('ಆದರಕ್ಕೆ ಪಾತ್ರವಾದ ವಸ್ತುವಿನ ಬಗೆಗೆ ಒಳ್ಳೆಯುದನ್ನು ಹಾರೈಸುವುದು ಆಶೀರಲಂಕಾರ'—ಹೇಗೆಂದರೆ, 'ಮಾತಿಗೂ ಮನಸ್ಸಿಗೂ ಅಗೋಚರವಾದ ಆ ಪರಮಜ್ಯೋತಿ ನಿಮ್ಮನ್ನು ಕಾಪಾಡಲಿ').

ಪದ್ಯ ೨೦೬ : ಆಶೀರಲಂಕಾರಕ್ಕೆ ಲಕ್ಷ್ಯ : ಅನ್ವಯ : "ನೃಪತಿ, ತೋಯಧಿ ಧರಣೀ ಧರಾಧರ ಸ್ಥಿತಿವರೆಗಂ (=ಸಮುದ್ರ, ಭೂಮಿ, ಪರ್ವತ—ಇವು ಇರುವವರೆಗೆ) ಆಯುಂ (= ಆಯುಸ್ಸೂ) ಶ್ರೀಯುಂ (ಐಶ್ವರ್ಯವೂ) ವಿಜಯಮುಂ ಆಯತಿಯುಂ (=ವೈಭವವೂ) ನಿಜ ಸಂತತಿಯುಂ (=ನಿನ್ನ ಸಂತಾನವೂ) ನ್ಯಾಯದೆ ಪೆರ್ಚುವುದು ಅಕ್ಕೆ (=ಹೆಚ್ಚುವುದಾಗಲಿ)." [78]

---

78 ಪ್ರಥಮ ಪರಿಚ್ಛೇದದ ೫–೬ನೆಯ ಪದ್ಯಗಳು ಹಾಗೂ 'ಪ್ರಿಯತರ' ಮತ್ತು 'ಆಶೀಃ'—ಈ ಅಲಂಕಾರಗಳ ಲಕ್ಷ್ಯಪದ್ಯಗಳು, ಕವಿರಾಜಮಾರ್ಗಕಾರನು ನೃಪತುಂಗನ ನಗರವನ್ನು ಪ್ರವೇಶಮಾಡಿದ ಸಂದರ್ಭವನ್ನೂ, ನೃಪತುಂಗನು ಕವಿಯನ್ನು ಗೌರವಪೂರ್ವಕವಾಗಿ ಬರಮಾಡಿಕೊಂಡ ಸಂಗತಿಯನ್ನೂ ಮತ್ತು ಆ ಸಂದರ್ಭದಲ್ಲಿ ಕವಿ ನೃಪತುಂಗನಿಗೆ ಶುಭಾಶಂಸನವನ್ನು ಮಾಡಿದುದನ್ನೂ ಸೂಚಿಸುತ್ತಿವೆ ಎಂದು ಮುಳಿಯ ತಿಮ್ಮಪ್ಪಯ್ಯನವರು ಊಹಿಸಿ, ಆ ಬಗೆಗೆ ತಕ್ಕಮಟ್ಟಿಗೆ ವಿಸ್ತಾರವಾಗಿಯೆ ವಿವೇಚನೆ ಮಾಡಿದ್ದಾರೆ. (ಕ. ಮಾ. ವಿವೇಕ, ಭಾಗ ೧: ಪು. ೯೫–೯೬, ೧೧೧–೧೧೨) ಈ ಪದ್ಯಗಳೆಲ್ಲವೂ ದಂಡಿಯ ಶ್ಲೋಕಗಳ ಅನುವಾದಗಳಾಗಿರದೆ ಕವಿಯ ಸ್ವಂತ ರಚನೆಗಳೆಂಬ ಅಂಶವನ್ನು ಗಮನಿಸಿದರೆ ಆ ಊಹೆ ಬಹುಮಟ್ಟಿಗೆ ಸಮರ್ಥನೀಯವಾಗಿ ಕಾಣುತ್ತದೆ. ಅಲ್ಲದೆ, ಮೇಲಿನ ಲಕ್ಷ್ಯಪದ್ಯದಲ್ಲಿನ 'ಶ್ರೀಯುಂ ವಿಜಯಮುಂ' ಎಂಬ ಪದಗಳಲ್ಲಿ ಕವಿಯ ಹೆಸರು ಅಡಕಗೊಂಡು ಹೊಳೆಯುತ್ತಿದೆಯೆಂದೂ ತಿಮ್ಮಪ್ಪಯ್ಯನವರು ಊಹಿಸಿದ್ದಾರೆ. 'ಕವಿರಾಜಮಾರ್ಗ'ದ ಕರ್ತೃ ಶ್ರೀವಿಜಯನೇ ಎಂಬ ತೀರ್ಮಾನಕ್ಕೆ ನಾವು ಬಂದಿರುವುದರಿಂದ, ಈ ಊಹೆಯೂ ಆ ತೀರ್ಮಾನಕ್ಕೆ ಉಪಷ್ಟಂಭಕವಾಗಿಯೆ ಪರಿಣಮಿಸುವುದೆಂದು ನಾವು ಭಾವಿಸಿದ್ದೇವೆ.

ಭಾವಿಕಾಲಂಕಾರ

ಪದ್ಯ ೨೦೭: ಅನ್ವಯ: "ಕವಿಗಳಾ ಭಾವಿಸಿ ಮನದ ಬಗೆಯೊಂದಿದರ್ಥಂ ಭಾವಮೆಂಬುದಕ್ಕುಂ; ಅದಱೊಳ್ ಕೇವಲಂ ಅಳಂಕೃತಿ ಭಾವಿಕಂ ಎಂಬುದಕ್ಕುಂ."—"ಕವಿಗಳು ಭಾವಿಸಿಕೊಂಡ ಅರ್ಥವು ಅವರ ಮನಸ್ಸಿನ ಬಗೆಗೆ ಹೊಂದಿಕೊಂಡು 'ಭಾವ' ವೆನಿಸುವುದು; ಆ ಭಾವವು ಅಲಂಕಾರಿಕವಾಗಿ ಪ್ರಕಟಗೊಂಡಾಗ 'ಭಾವಿಕ' ಎಂಬ ಅಲಂಕಾರವಾಗುವುದು:" ಇದು ತಾತ್ಪರ್ಯ. ('ಕವಿಗಳಾ ಭಾವಿಸಿ' ಎಂಬಲ್ಲಿ ಪ್ರಥಮೆಯ ಎಡೆಯಲ್ಲಿ ಷಷ್ಠೀ ವಿಭಕ್ತಿ ಪ್ರಯೋಗವಾಗಿದೆ: 'ಕವಿಗಳ್ ಭಾವಿಸಿ' ಎಂದು ಅನ್ವಯ).

ದಂಡಿಯ ಲಕ್ಷಣ ವಿವರಣೆಯಿಂದ ಅಲಂಕಾರದ ಸ್ವರೂಪವು ಚೆನ್ನಾಗಿ ಮನದಟ್ಟಾಗುವುದು:

ಭಾವಿಕತ್ವಮಿತಿ ಪ್ರಾಹುಃ ಪ್ರಬಂಧವಿಷಯಂ ಗುಣಂ।
ಭಾವಃ ಕವೇರಭಿಪ್ರಾಯಃ ಕಾವ್ಯೇಷ್ವಾಸಿದ್ಧಿ ಯಃ ಸ್ಥಿತಃ॥
ಪರಸ್ಪರೋಪಕಾರಿತ್ವಂ ಸರ್ವೇಷಾಂ ವಸ್ತುಪರ್ವಣಾಂ।
ವಿಶೇಷಣಾನಾಂ ವ್ಯರ್ಥಾನಾಮಕ್ರಿಯಾ ಸ್ಥಾನವರ್ಣನಾ॥
ವ್ಯಕ್ತಿರುಕ್ತಿ ಕ್ರಮಬಲಾದ್ಗಂಭೀರಸ್ಯಾಪಿ ವಸ್ತುನಃ।
ಭಾವಾಯತ್ತಮಿದಂ ಸರ್ವಮಿತಿ ತದ್ಭಾವಿಕಂ ವಿದುಃ॥ (II, ೨೬೪-೨೬೬)

['ಪ್ರಬಂಧವನ್ನೆಲ್ಲ ವ್ಯಾಪಿಸಿಕೊಂಡಿರುವ ಗುಣವೆ ಭಾವಿಕತ್ವ ಎಂದು ಹೇಳಲಾಗಿವೆ. ಕಾವ್ಯದಲ್ಲಿ ಕೊನೆಮುಟ್ಟುವವರೆಗೂ ನೆಲಸಿರುವ ಕವಿಯ ಅಭಿಪ್ರಾಯವೇ ಭಾವ. ಕಾವ್ಯವಸ್ತುವಿನ ಎಲ್ಲ ಭಾಗಗಳು ಪರಸ್ಪರ ಉಪಕಾರಿಗಳಾಗಿ ಹೊಂದಿಕೊಂಡಿರುವುದು; ವ್ಯರ್ಥವಾದ ವಿಶೇಷಣಗಳನ್ನು ಪ್ರಯೋಗಿಸದಿರುವುದು; ಸ್ಥಳವರ್ಣನೆ; ಉಕ್ತಿಕ್ರಮದ ಬಲದಿಂದ ಗಂಭೀರವೆನಿಸುವ ವಸ್ತುವನ್ನು ಕೂಡ ಅಭಿವ್ಯಕ್ತಿಗೊಳಿಸುವುದು; ಇವೆಲ್ಲಕ್ಕೂ ಭಾವನೇ ಆಧಾರ, ಅದ್ದರಿಂದ, ಭಾವಾವಲಂಬಿಯಾದದ್ದು ಭಾವಿಕಾಲಂಕಾರ.]'[79]

---

79 ಈ ಅಲಂಕಾರವನ್ನು ಭಾಹಮನೂ ವಿವರಿಸಿದ್ದಾನೆ. ಇಬ್ಬರ ಲಕ್ಷಣವಿವರಣೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿದ್ದರೂ, ಒಟ್ಟಿನಲ್ಲಿ ಮತಭೇದವಿಲ್ಲ. 'ಭಾವಿಕತ್ವಮಿತಿ ಪ್ರಾಹುಃ ಪ್ರಬಂಧ ವಿಷಯಂ ಗುಣಂ' ಎಂಬ ಮಾತುಗಳು ಇಬ್ಬರ ಶ್ಲೋಕಗಳಲ್ಲಿಯೂ ಇರುವುದು ಗಮನಾರ್ಹ. ನಾಗವರ್ಮನು 'ಕಾವ್ಯಾವಲೋಕನ'ದಲ್ಲಿ

‘ಧ್ವನಿಯೆಂಬುದಳಂಕಾರಂ’ 80

ಪದ್ಯ ೨೦೮ : ಅನ್ವಯ : “ಧ್ವನಿಯೆಂಬುದು ಅಳಂಕಾರಂ ; ಧ್ವನಿಯಿಸುಗುಂ ಶಬ್ದದಿಂದಂ, ಅರ್ಥದೆ ದೂಷ್ಯಂ. ನೆನೆವುದು ಇದಂ ಇಂತು : ‘ಕಮಳದೊಳ್ ಅನಿಮಿಷಯುಗಂ ಒಪ್ಪಿ ತೋರ್ಪುದು ; ಇಂತಿದು ಚೋದ್ಯಂ.”

ತಾತ್ಪರ್ಯ : “ಧ್ವನಿ ಎಂಬುದು ಅಲಂಕಾರ; ಅದು ಶಬ್ದದಿಂದ ಧ್ವನಿತ (=ಸೂಚಿತ)ವಾಗುತ್ತದೆ; ಅರ್ಥದಿಂದ ಧ್ವನಿತವಾದರೆ ದುಷ್ಟವೆನಿಸುವುದು. ಅದನ್ನು ಹೀಗೆ (=ಈ ಮುಂದಿನ ಉದಾಹರಣೆಯಿಂದ) ಅರಿತುಕೊಳ್ಳಬೇಕು : ಕಮಲದಲ್ಲಿ ‘ಅನಿಮಿಷ’ಗಳ ಜೋಡಿ ಒಪ್ಪಿ ಕಾಣುತ್ತದೆ; ಇದು ಸೋಜಿಗ.”

(ಪ. 222) ಈ ಇಬ್ಬರು ಲಾಕ್ಷಣಿಕರ ಲಕ್ಷಣಗಳ ಸಾರಾಂಶವನ್ನು ಸಂಗ್ರಹಿಸಿ ಹೇಳಿದ್ದಾನೆ. ಮಾರ್ಗಕಾರನ ಲಕ್ಷಣ ಅಷ್ಟು ವಿವರಪೂರ್ಣವಾಗಿಲ್ಲ. ಇದಕ್ಕೆ ಯಾರೂ ಲಕ್ಷ್ಯವನ್ನು ಕೊಟ್ಟಿಲ್ಲ. ಪ್ರಬಂಧಸರ್ವಕ್ಕೂ ಅನ್ವಯಿಸುವ ಈ ಅಲಂಕಾರಕ್ಕೆ ಲಕ್ಷ್ಯವನ್ನು ಕೊಡುವುದು ಅಸಾಧ್ಯವೇ ಸರಿ. ಅದ್ದರಿಂದಲೇ, ಈಚಿನ ಆಲಂಕಾರಿಕರು ಕೆಲವರು ಈ ಅಲಂಕಾರವನ್ನು ಅಂಗೀಕರಿಸಿಲ್ಲ.

80 (i) ಈ ಗ್ರಂಥದಲ್ಲಿಯೂ ಕನ್ನಡ ಕಾವ್ಯಮೀಮಾಂಸೆಯ ಬೆಳವಣಿಗೆಯನ್ನು ಕುರಿತ ವಿವೇಚನೆಯಲ್ಲಿಯೂ ಈ ಪದ್ಯಕ್ಕೆ ವಿಶೇಷವಾದ ಪ್ರಾಮುಖ್ಯವುಂಟು. ಈಗಾಗಲೇ ಈ ಪದ್ಯವು ಇಬ್ಬರು ವಿದ್ವಾಂಸರ (ಡಾ|| ಕೆ. ಕೃಷ್ಣಮೂರ್ತಿ ಮತ್ತು ಪ್ರೊ|| ತೀ. ನಂ. ಶ್ರೀಕಂಠಯ್ಯ) ಗಮನವನ್ನು ಸೆಳೆದು, ಅರ್ಥವಿವರಣೆಯ ವಿಷಯದಲ್ಲಿ ಅವರಿಬ್ಬರ ನಡುವೆ ಅಭಿಪ್ರಾಯಭೇದಕ್ಕೆ ಎಡೆಗೊಟ್ಟಿದೆ. ಮುಳಿಯ ತಿಮ್ಮಪ್ಪಯ್ಯನವರು ತಮ್ಮದೇ ಆದ ಬಗೆಯಲ್ಲಿ ಈ ಪದ್ಯವನ್ನು ವ್ಯಾಖ್ಯಾನಿಸಿರುವರು. ಈ ಎಲ್ಲರ ವಿಚಾರ ವಿಮರ್ಶೆಗಳ ಆಧಾರದ ಮೇಲೆಯೆ ನಮ್ಮ ಅಭಿಪ್ರಾಯ ರೂಪಗೊಂಡಿರುವುದು. [ಈ ವಿಚಾರದಲ್ಲಿ ಹೆಚ್ಚಿನ ಆಸಕ್ತಿಯುಳ್ಳವರು, (೧) ಡಾ|| ಕೆ. ಕೃಷ್ಣಮೂರ್ತಿಯವರ ‘ಆನಂದವರ್ಧನನ ಕಾವ್ಯಮೀಮಾಂಸೆ’ (೧೯೫೩ರಲ್ಲಿ ಪ್ರಕಟಿತ), ಪು. ೫೦–೫೨, (೨) ಪ್ರೊ|| ತೀ.ನಂ.ಶ್ರೀ.ಯವರ ‘ಭಾರತೀಯ ಕಾವ್ಯಮೀಮಾಂಸೆ’ ೧೯೫೩ರ ಮುದ್ರಣ : ಪು. ೪೫೮–೪೬೦ ; ತಿದ್ದಿದ ಎರಡನೆಯ ಮುದ್ರಣ, ೧೯೬೧ : ಪು. ೪೯೧–೯೨, ೫೯೫), ಡಾ|| ಕೆ. ಕೃಷ್ಣಮೂರ್ತಿಯವರ

'ಕನ್ನಡದಲ್ಲಿ ಕಾವ್ಯತತ್ತ್ವ' (೧೯೬೪) (ಪು. ೯-೧೧, ಪು. ೩೭)—ಈ ಗ್ರಂಥಗಳಲ್ಲಿನ ಸಂಬಂಧಪಟ್ಟ ಪ್ರಕರಣಗಳನ್ನು ಪರಿಶೀಲಿಸಬಹುದು].

(ii) ದಂಡಿ ಭಾಮಹರು ಈ ಅಲಂಕಾರದ ಹೆಸರನ್ನು ಹೇಳಿಲ್ಲ. ಈ ಸಂಬಂಧವಾಗಿ, "ಕನ್ನಡದ ಕವಿರಾಜಮಾರ್ಗವೂ ಸಂಸ್ಕೃತದ ಧ್ವನ್ಯಾಲೋಕವೂ ಬಹುಶಃ ಏಕಕಾಲದಲ್ಲಿ ರಚಿತವಾದುವೆಂಬುದನ್ನೂ, ಕನ್ನಡ ನಾಡಿಗೂ ಕಾಶ್ಮೀರಕ್ಕೂ ಇರುವ ಸಾವಿರಾರು ಮೈಲಿಗಳ ದೂರವನ್ನೂ ನೆನೆದರೆ, ಧ್ವನಿಯ ಮಾತು ಇಷ್ಟೊಂದು ಬೇಗ ಕನ್ನಡದ ಗ್ರಂಥದಲ್ಲಿ ಬಂದಿರುವುದು ಸೋಜಿಗವೆನಿಸುತ್ತದೆ. ಆನಂದವರ್ಧನನಿಗೆ ಹಿಂದೆಯೇ ಧ್ವನಿಯ ಪ್ರಸ್ತಾವ ಎದ್ದಿತ್ತೆಂಬ ವಾದಕ್ಕೆ ಇದು ಪುಷ್ಟಿ ಕೊಡುತ್ತದೆ. ಕವಿರಾಜಮಾರ್ಗಕಾರನು ಧ್ವನ್ಯಾಲೋಕವನ್ನು ನೋಡಿದ್ದನೆಂಬುದಕ್ಕೆ ಯಾವ ನಿದರ್ಶನವೂ ಅವನ ಗ್ರಂಥದಲ್ಲಿ ದೊರೆಯುವುದಿಲ್ಲ" ಎಂದು ಪ್ರೊ॥ ತೀ. ನಂ. ಶ್ರೀ. ಯವರು ಅಭಿಪ್ರಾಯಪಟ್ಟಿದ್ದಾರೆ. ಡಾ॥ ಕೆ. ಕೃಷ್ಣಮೂರ್ತಿಯವರದ್ದೂ ಇದೇ ಅಭಿಪ್ರಾಯ; ಅವರ ಹೆಚ್ಚಿನ ಮಾತೆಂದರೆ ಇದು: "ಇಲ್ಲಿಯ 'ಧ್ವನಿಯೆಂಬುದಳಂಕಾರಂ' ಎಂಬ ಘೋಷಣೆಯನ್ನು ನೋಡಿದರೆ, ಇತರರು ಅಲಂಕಾರಾತಿರಿಕ್ತವಾದ ಯಾವುದೋ ಕಾವ್ಯರಹಸ್ಯವೇ ಧ್ವನಿಯೆನ್ನುವುದು ಸರಿಯಲ್ಲವೆಂದು ನಿರಾಕರಿಸುತ್ತಿರುವಂತಿದೆ." (ಕ. ಕಾವ್ಯತತ್ತ್ವ, ಪುಟ ೩೭). ಇದು ವಿಚಾರಣೀಯವಾದ ಅಂಶ. ನಮಗೆ ತೋರುವುದು ಹೀಗೆ: ಧ್ವನಿಸಿದ್ಧಾಂತವು ಸಾಕಲ್ಯವಾಗಿ ಇದ್ದಕ್ಕಿದ್ದಂತೆ 'ಧ್ವನ್ಯಾಲೋಕ'ದಲ್ಲಿ ರೂಪುಗೊಂಡಿತೆಂದರೆ ಅಸಂಭಾವ್ಯವಾಗಿ ಕಾಣುತ್ತದೆ. ತೀ. ನಂ. ಶ್ರೀ. ಯವರು ಅಭಿಪ್ರಾಯಪಟ್ಟಿರುವಂತೆ, 'ಆನಂದವರ್ಧನನಿಗೆ ಹಿಂದೆಯೇ ಧ್ವನಿಯ ಪ್ರಸ್ತಾವ ಎದ್ದಿದ್ದಿತು.' 'ಧ್ವನಿ' ವಿಷಯಕವಾದ ಒಂದು ಸ್ಥೂಲವಾದ ಪ್ರಾಕೃತ ಸ್ವರೂಪ ಕಾಶ್ಮೀರದಲ್ಲಿ ಮಾತ್ರವಲ್ಲದೆ ಭರತಖಂಡದ ಇತರ ಜ್ಞಾನಕೇಂದ್ರಗಳಲ್ಲಿಯೂ ಪ್ರಚಲಿತವಾಗಿದ್ದಿರಬೇಕು. ನೃಪತುಂಗನ ತಂದೆ ಮೂರನೆಯ ಗೋವಿಂದನ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ಉತ್ತರಾಪಥದ ಸೆರಗನ್ನು ಸೋಕಿತ್ತೆಂಬುದನ್ನು ನೆನೆಯಬೇಕು. ನೃಪತುಂಗನ ಕಾಲದಲ್ಲಿ ಮಾನ್ಯಖೇಟ ನಗರವು ಕವಿಗಳನ್ನೂ ವಿದ್ವಾಂಸರನ್ನೂ ಆಕರ್ಷಿಸುತ್ತಿದ್ದ ಅಂಥ ಒಂದು ಜ್ಞಾನಕೇಂದ್ರವಾಗಿತ್ತೆಂಬುದು ಇತಿಹಾಸಪ್ರಸಿದ್ಧವಾದ ಸಂಗತಿ. ದಂಡಿ ದಾಕ್ಷಿಣಾತ್ಯನಾಗಿದ್ದಿರಬಹುದೆಂಬ ಅಭಿಪ್ರಾಯವೂ ಇದೆಯಷ್ಟೆ. ಹೀಗಿರುವಲ್ಲಿ, ಕಾಶ್ಮೀರದ ಆನಂದವರ್ಧನನ ಕೈಯಲ್ಲಿ ಪರಿಷ್ಕಾರಗೊಂಡು ಒಂದು ವ್ಯವಸ್ಥಿತ ರೂಪವನ್ನು ಪಡೆದ ಧ್ವನಿತತ್ತ್ವದ ಪ್ರಾಕೃತರೂಪ ಕಾವ್ಯಶಾಸ್ತ್ರದ ಬೆಳವಣಿಗೆಯ ಒಂದು ಮಜಲಾಗಿ ದಕ್ಷಿಣ ಭಾರತದಲ್ಲಿಯೂ ವಿದ್ವನ್ಮಂಡಲಿಗೆ ಪರಿಚಿತವಾಗಿದ್ದಿರಬೇಕು.

ಬಹುಶಃ ನೃಪತುಂಗನ ಸಭೆಯಲ್ಲಿ ಧ್ವನಿ ವಿಷಯಕವಾದ ಚರ್ಚೆಯೂ ನಡೆದು, 'ಧ್ವನಿಯೆಂಬುದಳಂಕಾರಂ' ಎಂಬ 'ನೃಪತುಂಗದೇವ ಮತ'ಕ್ಕೆ ಮನ್ನಣೆ ದೊರೆತು, ಕವಿರಾಜಮಾರ್ಗದ ಅಲಂಕಾರ ಮಾಲಿಕೆಯಲ್ಲಿ ಸೇರ್ಪಡೆಯಾಗಿರಬೇಕು. 'ಯಾವುದೋ ಕಾವ್ಯರಹಸ್ಯವೆ ಧ್ವನಿಯೆನ್ನುವುದು ಸರಿಯಲ್ಲ' ಎಂಬ ನಿರಾಕರಣೆ ಮೇಲ್ಕಂಡ ಲಕ್ಷಣವಾಕ್ಯದಲ್ಲಿ ಬೋಧೆಯಾಗುತ್ತಿದೆ ಎಂದು ನಮಗೆ ಎನ್ನಿಸುವುದಿಲ್ಲ. ಅಲಂಕಾರಗಳಿಗೆ ಪ್ರಾಧಾನ್ಯವಿದ್ದ ಆ ಕಾಲದಲ್ಲಿ 'ರಸ'ವೂ ಒಂದು ಅಲಂಕಾರವೆನಿಸಿದ ಹಾಗೆ, 'ಧ್ವನಿ'ಯೂ ಒಂದು ಅಲಂಕಾರವೆನಿಸಿದ್ದರಲ್ಲಿ ಸೋಜಿಗವೇನಿಲ್ಲ. ಈ ಬಗೆಗೆ ಡಾ|| ರಾಘವನ್‌ರವರ ಅಭಿಪ್ರಾಯ ಹೀಗಿದೆ: "For, it is the analysis of the Alamkaras that led to the rise of Vakrokti and in another direction through such Alamkaras as Dipika, Samasokti, Paryayokti containing a suggested elament, gave rise to the concept of suggestion, Dhvani" (Some Concepts of Alamkara Sastra, P. 260. ಈ ವಾಕ್ಯವನ್ನು ನನ್ನ ಗಮನಕ್ಕೆ ತಂದು ಉಪಕಾರಮಾಡಿದವರು ಪ್ರೊ|| ಡಿ. ಎಲ್. ಎನ್.)

(iii) ಈ ಸಂಬಂಧದಲ್ಲಿ ವ್ಯಕ್ತಪಟ್ಟಿರುವ ಇನ್ನೊಂದು ಸಂದೇಹ, 'ಈ ಪದ್ಯ ಪ್ರಕ್ಷಿಪ್ತವಾಗಿರಬಹುದೆ' ಎಂಬುದು. ಮಾರ್ಗಕಾರನು ಅಲಂಕಾರಗಳ ನಾಮನಿರ್ದೇಶ ಮಾಡುವ 'ಪ್ರತಿಜ್ಞಾ' ಪದ್ಯಗಳಲ್ಲಿ (iii, ೨-೪) ಧ್ವನ್ಯಳಂಕಾರದ ಹೆಸರನ್ನು ಸೇರಿಸದಿರುವುದರಿಂದ, 'ಧ್ವನಿಯನ್ನು ಕುರಿತ ಪದ್ಯವು ಪ್ರಕ್ಷಿಪ್ತವೇನಾದರೂ ಆಗಿರಬಹುದೆ ಎಂಬ ಆಲೋಚನೆ ಮನಸ್ಸಿನಲ್ಲಿ ಸುಳಿದುಹೋಗುತ್ತದೆ" ಎಂದು ಸಂದೇಹವನ್ನು ವ್ಯಕ್ತಪಡಿಸಿರುವ ತೀ. ನಂ. ಶ್ರೀ. ಯವರೆ ಮುಂದುವರಿದು, "ಆದರೆ ಕವಿರಾಜಮಾರ್ಗದಲ್ಲಿ ಈ ಪದ್ಯಕ್ಕೆ ನೇರವಾಗಿ ಹಿಂದೆ (iii. ೨೦೮ರಲ್ಲಿ) ಹೇಳಿರುವ ಭಾವಿಕಾಲಂಕಾರವೂ ಪ್ರತಿಜ್ಞಾಪದ್ಯಗಳಲ್ಲಿ ಉಕ್ತವಾಗಿಲ್ಲವೆಂಬುದನ್ನು ನೆನೆದರೆ ಈ ಸಂದೇಹ ನಿವಾರಣೆಯಾಗಬಹುದು" ಎಂದು ಸಂದೇಹಕ್ಕೆ ಪರಿಹಾರವನ್ನೂ ಸೂಚಿಸಿದ್ದಾರೆ. ಹೆಚ್ಚಿನದಾಗಿ ನಮಗೆ ತೋರುವುದೇನೆಂದರೆ, ಮಾರ್ಗಕಾರನು ದಂಡಿಯ ಪ್ರತಿಜ್ಞಾಶ್ಲೋಕಗಳನ್ನೆ ಅನುವಾದಿಸುತ್ತಿರುವುದರಿಂದ, ಹೊಸದಾಗಿ ಕಲ್ಪಿತವಾದ ಧ್ವನ್ಯಲಂಕಾರದ ಹೆಸರನ್ನು 'ಪುರಾಣ ಶಾಸ್ತ್ರೋಕ್ತಂಗಳ್' ಆದ ಅಲಂಕಾರಗಳ ಮಾಲಿಕೆಯಲ್ಲಿ ಸೇರಿಸುವುದು ಉಚಿತವಲ್ಲವೆಂದು ಅವನು ಭಾವಿಸಿರಬೇಕು. ಹಾಗಿದ್ದ ಮೇಲೆ, 'ಭಾವಿಕ'ದ ಹೆಸರನ್ನೇಕೆ ಬಿಟ್ಟ ಎಂಬ ಸಂದೇಹವೂ ತಲೆದೋರದಿರುವುದಿಲ್ಲ.

[ಮಾರ್ಗಕಾರನು ಈ ಪದ್ಯದಲ್ಲಿ ಹೇಳುವ ಅಲಂಕಾರ ವಿಷಯಕವಾದ ಚರ್ಚೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಧ್ವನಿತತ್ತ್ವವನ್ನು ಸ್ಥೂಲವಾಗಿಯಾದರೂ ಅರಿತಿರಬೇಕು. ಅದರ ವಿಚಾರದಲ್ಲಿ ಪ್ರವೇಶವಿಲ್ಲದವರಿಗಾಗಿ, ಅದನ್ನು ಬಹು ಸಂಗ್ರಹವಾಗಿ ಇಲ್ಲಿ ತಿಳಿಸಿದೆ. (ಹೆಚ್ಚಿನ ವಿಷಯಜ್ಞಾನಕ್ಕಾಗಿ, ಪ್ರೊ|| ತೀ. ನಂ. ಶ್ರೀ. ಯವರ ಭಾ. ಕಾ. ಮೀ. ಯನ್ನು ನೋಡಿ: ಪು. ೨೨೧-೨೬೩).

ಇದಕ್ಕೆ ಸಮಾಧಾನ: (i) ಹೆಸರಿಸದೆ ಬಿಡುವುದರಿಂದ ಬಾಧಕವಿಲ್ಲ; 'ಪೂರ್ವಿಕರು ಹೇಳಿದ್ದು' ಎಂದು ಹೊಸದನ್ನು ಸೇರಿಸುವುದು ತಪ್ಪಾಗುತ್ತದೆ. (ii) 'ಪದ್ಯರಚನೆಯಲ್ಲಿ ಅಳವಡಿಸಲಾಗಲಿಲ್ಲ' ಎಂದೂ ಊಹಿಸಬಹುದು. ಅಲಂಕಾರಗಳ ನಾಮನಿರ್ದೇಶವು ಸಮಾಪ್ತಿಗೊಳ್ಳುವ ಪದ್ಯದ (iii. ೪) ಕಡೆಯ ಸಾಲಿನಲ್ಲಿ, ದಂಡಿ ಕೊಟ್ಟ ಕೊನೆಯಲ್ಲಿ ಸೇರಿಸಿರುವಂತೆ ಇವನೂ ಸೇರಿಸಬಹುದಾಗಿತ್ತು. '. . . ವ್ಯಾ| ವೃತಿ ಪ್ರಿಯತರಾಶಿಗಳ್ ಕ್ರಮಾದ್ಯುಕ್ತಂಗಳ್' ಎನ್ನುವ ಎಡೆಯಲ್ಲಿ '. . . ವ್ಯಾ| ವೃತಿಪ್ರಿಯತರಾಶಿ ಭಾವಿಕಾದ್ಯುಕ್ತಂಗಳ್' ಎಂದು ಹೇಳಬಹುದಾಗಿತ್ತು. ಆಗ ವ್ಯಾಕರಣ ದೋಷವು ಸಂಭವಿಸುತ್ತಿತ್ತು ('ಪ್ರಿಯತರಾಶೀರ್ಭಾವಿಕಾದ್ಯುಕ್ತಂಗಳ್' ಎಂದು ಸಮಾಸವಾಗಬೇಕು. ಇದರಿಂದ ಛಂದೋದೋಷವು ಸಂಭವಿಸುತ್ತದೆ). ಹೀಗೆ ಕ್ಲೇಶಪಡುವುದಕ್ಕಿಂತ, ಅಷ್ಟು ಮುಖ್ಯವೆಂದು ತೋರದ ಈ ಅಲಂಕಾರದ ಹೆಸರನ್ನು ಹೇಳದೆ ಬಿಡುವ ಉತ್ತಮ ಪಕ್ಷವನ್ನೆ ಮಾರ್ಗಕಾರನು ಅನುಸರಿಸಿರುವಂತೆ ಕಾಣುತ್ತದೆ.

ಈ ಸಂದರ್ಭದಲ್ಲಿ, "ಪದಿನಾಜಲ್ಲವಲಂಕ್ರಿಯಾರಚನೆ ಮೂವತ್ತಾಱು ನೇರ್ಪಟ್ಟುವೊಂ| ದಿದಶೃಂಗಾರಮದಲ್ಲಮೊಂದೆ ರಸಮೊಂಬತ್ತೆಯ್ದೊಡಂಬಟ್ಟವು" ಎಂಬ ರನ್ನನ ಉಕ್ತಿಯನ್ನು ನೆನೆಯಬಹುದು (ಗದಾಯುದ್ಧ ಸಂ.i.೨; ಅಜಿತ ಪು. ೧-೧೩). ರನ್ನನಿಗೆ ದಂಡಿ ಭಾಮಹರ ಗ್ರಂಥಗಳ ಪರಿಚಯವಿದ್ದಿರಬಹುದಾದರೂ, ರನ್ನನು ಹೇಳುವ ಅಲಂಕಾರಗಳ ಹಾಗೂ ರಸಗಳ ಸಂಖ್ಯೆಗೆ ಅವುಗಳಲ್ಲಿ ಸಮರ್ಥನೆ ದೊರೆಯುವುದಿಲ್ಲ.(ದಂಡಿ ಹೇಳಿರುವುದು ೩೫ಅರ್ಥಾಲಂಕಾರಗಳನ್ನು ಮಾತ್ರ). ಕವಿರಾಜಮಾರ್ಗದಲ್ಲಿ ನವರಸಗಳ ಪ್ರಸ್ತಾಪವೂ, ೩೬ ಅರ್ಥಾಲಂಕಾರಗಳ ವಿವರಣೆಯೂ ಸ್ಪಷ್ಟವಾಗಿ ಬಂದಿವೆ. (ರನ್ನನು ಶಬ್ದಾಲಂಕಾರಗಳನ್ನು ಗಣನೆಗೆ ತೆಗೆದುಕೊಂಡಿಲ್ಲವೆಂದು ಭಾವಿಸಬೇಕು). ಆದ್ದರಿಂದ, ರನ್ನನು 'ಕವಿರಾಜಮಾರ್ಗ'ದಲ್ಲಿ ಹೇಳಿರುವ ಅಲಂಕಾರಗಳ ಸಂಖ್ಯೆಯನ್ನು ನೆನೆದೇ ಈ ಮಾತು ಹೇಳಿದ್ದಾನೆಂದು ತೋರುತ್ತದೆ.

ಹೀಗಿರುವುದರಿಂದ, 'ಧ್ವನಿಯೆಂಬುದಳಂಕಾರಂ' ಎಂಬ ಪದ್ಯ ಪ್ರಕ್ಷಿಪ್ತವಲ್ಲವೆಂದು ನಮಗೆ ಖಚಿತವಾಗುತ್ತದೆ.

ಜನರಲ್ಲಿ ಬಳಕೆಗೆ ಬಂದು, ರೂಢಿಯಾಗಿರುವ ಅರ್ಥದ ಸಂಕೇತವೇ ಶಬ್ದ. ಸಂಕೇತಿತವಾದ ಅರ್ಥವನ್ನು ಸಾಕ್ಷಾತ್ತಾಗಿ ತಿಳಿಸುವ ಶಬ್ದಶಕ್ತಿಗೆ 'ಅಭಿಧಾವೃತ್ತಿ' ಯೆಂದು ಹೆಸರು. ಇದರಿಂದ ತೋರುವ ಅರ್ಥಕ್ಕೆ 'ಅಭಿಧೇಯಾರ್ಥ', 'ವಾಚ್ಯಾರ್ಥ' ಅಥವಾ 'ಮುಖ್ಯಾರ್ಥ' ಎಂದು ಹೆಸರು. ಈ ವಾಚ್ಯಾರ್ಥ ಎಲ್ಲರಿಗೂ ಒಂದೇ ಬಗೆಯಾಗಿರುವುದು. ಇದನ್ನು ನಿಘಂಟುವಿನ ಅರ್ಥ (lexical meaning) ಎನ್ನಬಹುದು. ವಾಚ್ಯಾರ್ಥಕ್ಕೆ ಬಾಧೆ ಬಂದು, ಎಂದರೆ ಅದು ಸಂದರ್ಭಕ್ಕೆ ಹೊಂದಿಕೊಳ್ಳದೆ, ಅದಕ್ಕೆ ಸಂಬಂಧಪಟ್ಟಂತೆ ಸುಸಂಗತವಾದ ಬೇರೊಂದು ಅರ್ಥ ತೋರಿಬಂದರೆ ಅದಕ್ಕೆ 'ಲಕ್ಷ್ಯಾರ್ಥ' ವೆಂದೂ, ಅದನ್ನು ತಿಳಿಸುವ ಶಬ್ದವ್ಯಾಪಾರಕ್ಕೆ 'ಲಕ್ಷಣಾವೃತ್ತಿ'ಎಂದೂ ಹೆಸರು. (ಲಕ್ಷಣಾವೃತ್ತಿಯಲ್ಲಿ 'ಸಂಬಂಧಮೂಲ', 'ಸಾದೃಶ್ಯಮೂಲ' ಎಂದು ಎರಡು ಮುಖ್ಯ ಒಳಭೇದಗಳು). "ಲಕ್ಷಣೆ ವಾಗ್ವ್ಯವಹಾರದ ನಿತ್ಯಧರ್ಮ; ಕವಿಗಳ ಕಾಮಧೇನು; ಅನೇಕ ಅಲಂಕಾರಗಳ ಜೀವದ್ರವ್ಯ". ಲಕ್ಷಣಾವೃತ್ತಿಯ ಈ ಮಹಿಮೆಗೆ ಕಾರಣ, ಅದರಿಂದ ಒದಗುವ ಇನ್ನೂ ಹೆಚ್ಚಿನ ಅರ್ಥಿಕ ಪ್ರಯೋಜನ, ಲಕ್ಷಣೆಯಿಂದ ಸ್ಫುರಿಸಿ ಬೆಳೆಯುವ ಅರ್ಥಪರಂಪರೆ. ಇದಕ್ಕೆ ಸಾಧಕವಾದ ಶಬ್ದ ಶಕ್ತಿ ಅಥವಾ ಶಬ್ದವ್ಯಾಪರವೆ 'ವ್ಯಂಜನಾವೃತ್ತಿ'. ವ್ಯಂಜನಾ ವ್ಯಾಪಾರದ ಫಲವೇ ವ್ಯಂಗ್ಯಾರ್ಥ. ಹೀಗೆ, ಅಭಿಧಾವೃತ್ತಿ, ಲಕ್ಷಣಾವೃತ್ತಿ, ವ್ಯಂಜನಾವೃತ್ತಿ ಎಂಬುದಾಗಿ, ಶಬ್ದವ್ಯಾಪಾರಗಳು ಮೂರು ಬಗೆ; ಇವುಗಳಿಂದ ಹೊರಡುವ ಅರ್ಥಗಳೇ ಕ್ರಮವಾಗಿ ವಾಚ್ಯಾರ್ಥ, ಲಕ್ಷ್ಯಾರ್ಥ ಮತ್ತು ವ್ಯಂಗ್ಯಾರ್ಥ. ವಾಚ್ಯಾರ್ಥಕ ಶಬ್ದವೆ'ವಾಚಕ'; ಲಕ್ಷ್ಯಾರ್ಥವನ್ನು ತಿಳಿಸುವ ಶಬ್ದ 'ಲಕ್ಷಕ'; ವ್ಯಂಜನಾ ವ್ಯಾಪಾರವುಳ್ಳ ಶಬ್ದ ಅಥವಾ ಅರ್ಥ 'ವ್ಯಂಜಕ'. ವ್ಯಂಗ್ಯಾರ್ಥದಲ್ಲಿ ಎರಡು ಸ್ಥೂಲಬೇಧಗಳು: ಒಂದು ಪ್ರಧಾನ, ಇನ್ನೊಂದು ಅಪ್ರಧಾನ. ಪ್ರಧಾನ ವಲ್ಲದ್ದು 'ಗೌಣ' ಅಥವಾ 'ಗುಣೀಭೂತ ವ್ಯಂಗ್ಯ'. ವ್ಯಂಗ್ಯಾರ್ಥವೇ ಪ್ರಧಾನವಾಗಿದ್ದು, ವ್ಯಂಜಕಗಳಾದ ಶಬ್ದಾರ್ಥಗಳಿಗಿಂತ ಅದು ಹೆಚ್ಚು ಮನೋಜ್ಞವಾಗಿದ್ದರೆ, ಅದು 'ಧ್ವನಿ' ಎನಿಸಿಕೊಳ್ಳುತ್ತದೆ. ಇನ್ನೊಂದು ಬಗೆ ಯಲ್ಲಿ ಹೇಳುವುದಾದರೆ, ವಾಚ್ಯಾರ್ಥ ಸ್ವಾರಸ್ಯವನ್ನು ಪೋಷಣ ಮಾಡುವುದು ಅಪ್ರಧಾನ ವ್ಯಂಗ್ಯ; ರಮ್ಯತಾನುಭವಮೂಲವಾದ ಚಿತ್ತವಿಶ್ರಾಂತಿಸಾಧಕ ವಾದದ್ದು ಪ್ರಧಾನ ವ್ಯಂಗ್ಯ ಅಥವಾ 'ಧ್ವನಿ.' ಈ ಪ್ರಧಾನ ವ್ಯಂಗ್ಯವು (ಅಥವಾ ಧ್ವನಿ) ರಸಪರ್ಯವಸಾಯಿಯಾಗಿದ್ದರೆ, ಎಂದರೆ ಚಿತ್ತವನ್ನು ರಸಾನುಭವಕ್ಕೆ ಒಯ್ದರೆ, ಅದು 'ರಸಧ್ವನಿ'; ವ್ಯಂಗ್ಯಾರ್ಥವು ಉಪಮಾದಿ ಅಲಂಕಾರಗಳನ್ನು ಸೂಚಿಸಿದರೆ, ಅದು 'ಅಲಂಕಾರ ಧ್ವನಿ', ಎಂದರೆ ವಾಚ್ಯವಾಗಿದ್ದರೆ ಅಲಂಕಾರ ಎನಿಸಿಕೊಳ್ಳುತ್ತಿದ್ದುದು ಸೂಚ್ಯವಾಗಿರುವ ಪ್ರಯುಕ್ತ ಧ್ವನಿ ಎನಿಸಿಕೊಳ್ಳುತ್ತದೆ; ರಸದ್ಯೋತಕವೂ ಅಲಂಕಾರ ಸೂಚಕವೂ ಅಲ್ಲದ ವ್ಯಂಗ್ಯಾರ್ಥವು 'ವಸ್ತುಧ್ವನಿ' ಎನಿಸುತ್ತದೆ.

ವ್ಯಂಜಕವಿಲ್ಲದೆ ವ್ಯಂಗ್ಯವಿಲ್ಲವಷ್ಟೆ. ಈ ವ್ಯಂಜಕ ವ್ಯಂಗ್ಯಗಳ ಸಂಬಂಧವನ್ನು ಅವಲಂಬಿಸಿ ಅನೇಕ ಧ್ವನಿಪ್ರಕಾರಗಳು ಉಂಟಾಗುತ್ತವೆ. ವ್ಯಂಜನಾವೃತ್ತಿಗೆ ಲಕ್ಷಣಾ ವ್ಯಾಪಾರ ಕಾರಣವಾಗಬಹುದು. ಇಲ್ಲವೆ ಅಭಿಧಾವ್ಯಾಪಾರ ಕಾರಣವಾಗಬಹುದು. ಕೆಲವು ವೇಳೆ ಶಬ್ದ ಇಲ್ಲವೆ ಅರ್ಥ ವ್ಯಂಜಕವಾಗಬಹುದು. ಈ ಒಳಭೇದಗಳ ವಿವರಣೆ ಇಲ್ಲಿ ಸಾಧ್ಯವೂ ಅಲ್ಲ; ಪ್ರಕೃತವೂ ಅಲ್ಲ. ಅಭಿಧಾವ್ಯಾಪಾರ ಮೂಲವಾದ ಧ್ವನಿಯಲ್ಲಿ 'ಶಬ್ದಶಕ್ತಿ ಮೂಲ'ವಾದದ್ದು, 'ಅರ್ಥಶಕ್ತಿ ಮೂಲ'ವಾದದ್ದು—ಎಂಬೀ ಎರಡು ಪ್ರಭೇದಗಳನು ಇಲ್ಲಿ ಗಮನಿಸಿದರೆ ಸಾಕು. ('ಕವಿರಾಜಮಾರ್ಗ'ದ ಮೇಲ್ಕಂಡ ಪದ್ಯದಲ್ಲಿರುವಂತೆ) ಶಬ್ದಕ್ಕೆ ಶ್ಲೇಷಾರ್ಥವಿರುವೆಡೆಯಲ್ಲಿ ಅದು ಶ್ಲೇಷಾಲಂಕಾರವೇ ಹೊರತು, ಧ್ವನಿ ಹೇಗಾದೀತು ಎಂಬ ಪ್ರಶ್ನೆ ಸಹಜ. ಪ್ರಕರಣಾದಿಗಳಬಲದಿಂದ ವಾಚ್ಯಾರ್ಥವು ನಿಯಮನಗೊಂಡು, ಇನ್ನೊಂದು ಅರ್ಥವು ಸ್ಫುರಿಸಿದ ಸಂದರ್ಭದಲ್ಲಿ ಅದು ವ್ಯಂಗ್ಯವೇ ಆಗುತ್ತದೆ. (ಹಾಗೆ ನಿಯಮನ ಮಾಡತಕ್ಕ ಸಂದರ್ಭಗಳು ಯಾವುವೆಂದರೆ, ಸಂಯೋಗ, ವಿಪ್ರಯೋಗ, ಸಾಹಚರ್ಯ, ಅನ್ಯಶಬ್ದಸಾನ್ನಿಧ್ಯ, ಇತ್ಯಾದಿ). ಈ ವ್ಯಂಗ್ಯಾರ್ಥವು ಶಬ್ದಶಕ್ತಿಮೂಲವಾದ 'ಅಲಂಕಾರಧ್ವನಿ'ಯಾದಲ್ಲಿ ಮಾತ್ರ ಅದು 'ಧ್ವನಿ' ಎಂದೂ, ಶಬ್ದಶಕ್ತಿಮೂಲವು ವಸ್ತುಧ್ವನಿಯೂ ಆಗಿರಬಹುದೆಂದೂ ಅಭಿಪ್ರಾಯ ಭೇದಗಳಿವೆ. ಅರ್ಥಶಕ್ತಿ ಮೂಲವಾದ ಧ್ವನಿಯಲ್ಲಿ ಎರಡು ಬಗೆಗಳಿವೆ. ಅವುಗಳ ವಿವರಣೆ ಇಲ್ಲಿಗೆ ಅಪ್ರಸಕ್ತ.]

ಈಗ ಪದ್ಯದ ಲಕ್ಷ್ಯಭಾಗದ ಅರ್ಥವನ್ನು ಪರಿಶೀಲಿಸೋಣ: ಈ ವಾಕ್ಯದಲ್ಲಿ ಸುಂದರಿಯೊಬ್ಬಳ ಮುಖವನ್ನು ವರ್ಣಿಸಿದೆ. ಅದರ ವಾಚ್ಯಾರ್ಥವಿದು: "ಕಮಲದಲ್ಲಿ ಮೀನಿನ ಜೋಡಿ ಶೋಭಿಸುತ್ತಿದೆ; ಇದು ಆಶ್ಚರ್ಯ!" ('ಅನಿಮಿಷ' ಎಂದರೆ 'ರೆಪ್ಪೆಯಿಕ್ಕದ್ದು' ಎಂಬ ಮೂಲಾರ್ಥದಿಂದ ರೂಪಗೊಂಡ ಪ್ರಸಿದ್ಧವಾದ ಅರ್ಥಗಳು ಎರಡು: ೧. 'ಅಮರ' ಅಥವಾ 'ದೇವ'; 'ದೇವಿ'ಯೂ ಆಗಬಹುದು. ೨. ಮೀನು.) ಕಮಲದಲ್ಲಿ ಅಮರಯುಗ್ಮ ಇರುವುದು ತೀರ ಅಸಂಭವ. ಈ ಕಮಲವು ನೀರಿನಲ್ಲಿರುವುದರಿಂದ, ಜಲಚರವೇ ಆದ ಮೀನು ಕಮಲದಲ್ಲಿ ಬಂದು ನೆಲಸಿರುವುದು ಅಸಂಭವವೇನಲ್ಲ. ಆದ್ದರಿಂದ, 'ಕಮಲದಲ್ಲಿ ಮೀನಿನ ಜೋಡಿ' ಎಂಬ ವಾಚ್ಯಾರ್ಥ ಪ್ರತೀತವಾಗುತ್ತದೆ. ಆದರೆ, ನೀರನ್ನುಳಿದ ಮೀನದ್ವಯ ಕಮಲದಲ್ಲಿ ಕೆಲವು ಕಾಲ ಇರಬಹುದೇ ಹೊರತು

ಶೋಭಿಸುವ ಮಟ್ಟಿಗೆ ('ಒಪ್ಪಿ ತೋರ್ಪುದು') ಚಿರಕಾಲ ಇರಲು ಸಾಧ್ಯವಿಲ್ಲ, ಅದು ಸಂಭವವೂ ಅಲ್ಲ; 'ಇದು ಚೋದ್ಯಂ' ಎಂಬ ಉಕ್ತಿಯ ಬಲದಿಂದ, 'ಕಮಲದಲ್ಲಿ ಸದಾಕಾಲವೂ ಇರುವ ಮೀನಿನ ಜೋಡಿ' ಯಾವುದೆಂಬುದರ ಕಡೆಗೆ ನಮ್ಮ ಆಲೋಚನೆ ಹರಿಯು ವಂತಾಗಿ, ವಾಕ್ಯದ ಮುಖ್ಯಾರ್ಥಕ್ಕೆ (ವಾಚ್ಯಾರ್ಥಕ್ಕೆ) ಬಾಧೆ ತಟ್ಟು ತ್ತದೆ. ಮುಖವನ್ನು ಕಮಲಕ್ಕೆ ಹೋಲಿಸುವುದು ಹಾಗೂ ಹೆಣ್ಣಿನ ಕಣ್ಣನ್ನು ಮೀನಿಗೆ ಹೋಲಿಸುವುದು ಪ್ರಸಿದ್ಧವಾಗಿರುವುದರಿಂದಲೂ, ಮೀನಿನ 'ಜೋಡಿ' ಎಂದಿರುವುದರಿಂದಲೂ, 'ಕಮಲಸದೃಶವಾದ ಮುಖದಲ್ಲಿ ಮೀನಸದೃಶವಾದ ನಯನದ್ವಯ (ಎರಡು ಕಣ್ಣು ಗಳು)' ಎಂಬ ಅರ್ಥವು ಸ್ಫುರಿಸುತ್ತದೆ. ('ಅನಿಮಿಷ' ಎಂಬ ಪದಕ್ಕೆ ಶ್ಲೇಷಾರ್ಥವಿದ್ದರೂ ಅನ್ಯಶಬ್ದಗಳ ಸಾಹಚರ್ಯಬಲದಿಂದ 'ಅಮರ' ಎಂಬ ಅರ್ಥವು ತಿರಸ್ಕೃತವಾಗಿ, 'ಮೀನು' ಎಂಬ ವಾಚ್ಯಾರ್ಥ ವಷ್ಟಕ್ಕೆ 'ಅನಿಮಿಷ'ದ ವಾಚ್ಯಾರ್ಥವ್ಯಾಪ್ತಿಯು ಇಲ್ಲಿ ನಿಯಮನ ಗೊಂಡಿದೆ). ಕಮಲದಂಥ ಮುಖ, ಮೀನಿನಂಥ ಕಣ್ಣು ಎಂಬ ಉಪಮೆ (ಅರ್ಥಾಲಂಕಾರ) ಇಲ್ಲಿ ವ್ಯಂಗ್ಯವಾಗಿದೆ. (ಮುಖಕಮಲ ದಲ್ಲಿ ಮೀನನೇತ್ರ ಎಂದರೆ 'ರೂಪಕ'ವಾಗುತ್ತದೆ). ಇದೇ ಇಲ್ಲಿನ ವ್ಯಂಗ್ಯಾರ್ಥ. ಇದು ಶಬ್ದಶಕ್ತಿಮೂಲವಾದ 'ಅಲಂಕಾರ ಧ್ವನಿ' ಎಂಬಲ್ಲಿ ಸಂದೇಹಕ್ಕೆ ಎಡೆಯಿಲ್ಲ ಎಂದು ನಮ್ಮ ಅಭಿಪ್ರಾಯ. ಹೀಗೆ, ವಾಚ್ಯವಾಗಿರಬಹುದಾದ ಉಪಮಾಲಂಕಾರವು ಇಲ್ಲಿ ಸೂಚ್ಯ ವಾಗಿರುವುದರಿಂದ, ಈ 'ಧ್ವನಿ'ಪ್ರಧಾನವಾದ ಉಕ್ತಿವೈಚಿತ್ರ್ಯವನ್ನೆ ಮಾರ್ಗಕಾರನು 'ಅಲಂಕಾರ' ಎಂದು ಕರೆದಿದ್ದಾನೆ.

ಮೇಲ್ಕಂಡ ಲಕ್ಷ್ಯದ ವಿವರಣೆಯಲ್ಲಿ ಹೆಚ್ಚಿನ ಕ್ಲೇಶವೇನೂ ಕಂಡು ಬರುವುದಿಲ್ಲ. ಮಾರ್ಗಕಾರನು ಹೇಳುವ ಲಕ್ಷಣಕ್ಕೆ ಇದು ಅನು ಗುಣವಾಗಿದೆಯೇ ಎಂಬುದನ್ನು ಪರಿಶೀಲಿಸುವಲ್ಲಿ ಕ್ಲೇಶ ಕಂಡು ಬಂದಿದೆ. ಮಾರ್ಗಕಾರನ ಈ ಪದ್ಯಕ್ಕೆ ಮೊತ್ತಮೊದಲು ವ್ಯಾಖ್ಯಾನ ಮಾಡಿರುವ ಶ್ರೇಯಸ್ಸು ಮುಳಿಯ ತಿಮ್ಮಪ್ಪಯ್ಯನವರಿಗೆ ಸಲ್ಲಬೇಕು. (ಕ. ಮಾರ್ಗ ವಿವೇಕ—೨; ಅಪ್ರಕಟಿತ). ಲಕ್ಷ್ಯ ವಾಕ್ಯದಲ್ಲಿ

ಔಪಮ್ಯವು ಧ್ವನಿತವಾಗುತ್ತಿದೆ ಎಂಬ ಅವರ ಗ್ರಹಿಕೆಯನ್ನೆ ನಾವು ಸ್ವೀಕರಿಸಿದ್ದೇವೆ. ಬಳಿಕ, ಡಾ|| ಕೆ. ಕೃಷ್ಣಮೂರ್ತಿಯವರು ತಮ್ಮ 'ಆನಂದವರ್ಧನನ ಕಾವ್ಯಮೀಮಾಂಸೆ'ಯಲ್ಲಿ—"ಧ್ವನಿಯಿಸುಗುಂ ಶಬ್ದದಿಂದಂ, ಅರ್ಥದೆ ದೂಷ್ಯಂ" ಎಂಬ ಲಕ್ಷಣ ಭಾಗಕ್ಕೆ: "ಮುಖ್ಯವಾದ ಅರ್ಥವು ಅಸಂಗತ, ಅತ ಏವ ದೂಷ್ಯ, ಎನ್ನುವಂತಿದ್ದರೂ ಧ್ವನಿಯೆಂಬ ವ್ಯಾಪಾರಾಂತರದಿಂದ ಶಬ್ದವು ಅರ್ಥಾಂತರವನ್ನು ಬೋಧಿಸುವುದರಲ್ಲಿ ಇರುವ ಚಮತ್ಕಾರವೇ ಈ ಅಲಂಕಾರದ ಲಕ್ಷಣ"—ಎಂದು ವಿವರಣೆಯಿತ್ತಿದ್ದಾರೆ. "ಇಷ್ಟು ಅರ್ಥವು ಮೂಲ ವಾಕ್ಯದಿಂದ ಹೊರಡಲಾರದು ಎಂದು ನಮಗೆ ತೋರುತ್ತದೆ" ಎಂದು ತೀ. ನಂ. ಶ್ರೀ. ಯವರ ಸಂದೇಹ. ಧ್ವನಿತತ್ತ್ವದ ಪ್ರಕ್ರಿಯೆಯನ್ನು ಅನ್ವಯಿಸಿ, ನಮಗೆ ಸಮ್ಮತವಾದ ಕೃಷ್ಣಮೂರ್ತಿಯವರ ಅರ್ಥವಿವರಣೆಯನ್ನೇ ವಿಸ್ತಾರವಾಗಿ ಮೇಲೆ ಪ್ರತಿಪಾದಿಸಲು ಪ್ರಯತ್ನಿಸಿದ್ದೇವೆ. ಲಕ್ಷಣ ವಾಕ್ಯವನ್ನು ವಿವರಿಸುತ್ತಾ "ಶಬ್ದಶಕ್ತಿಮೂಲಧ್ವನಿಯನ್ನೇನಾದರೂ ಕವಿರಾಜಮಾರ್ಗಕಾರನು ಮನಸ್ಸಿನಲ್ಲಿ ಇಟ್ಟುಕೊಂಡಿರಬಹುದೆ?" ಎಂಬ ಸಂದೇಹವನ್ನೂ ತೀ. ನಂ. ಶ್ರೀ. ಯವರೇ ವ್ಯಕ್ತಪಡಿಸಿದ್ದಾರೆ. 'ಏಕೆ ಇಟ್ಟುಕೊಂಡಿರಬಾರದು?' ಎಂಬ ಪ್ರಮೇಯದ ಮೇಲೆಯೆ ನಮ್ಮ ಮೇಲ್ಕಂಡ ಪ್ರತಿಪಾದನೆ ಸಾಗಿದೆ. ಅವರೂ ಈ ಪ್ರಮೇಯವನ್ನಿಟ್ಟುಕೊಂಡು, ಲಕ್ಷ್ಯ ವಾಕ್ಯದ 'ಅನಿಮಿಷ' ಶಬ್ದದ ಶ್ಲೇಷಾರ್ಥದ ಆಧಾರದ ಮೇಲೆ, "ದೇವತೆಗಳು 'ಅನಿಮಿಷ'ರಾಗಿರುವುದರಿಂದ ಅವಳು ಮಾನವಿಯಲ್ಲ, ದೇವಿ ಎಂಬ ಅರ್ಥವೂ ಇಲ್ಲಿ ಸ್ಫುರಿಸಬಹುದು. ಇದೇ ಇಲ್ಲಿಯ 'ಚೋದ್ಯ'ವಾಗಿರಬಹುದೆ? ಇದು 'ಶಬ್ದ'ಶಕ್ತಿಯಿಂದ ಧ್ವನಿಸುವುದೆಂಬುದನ್ನೂ ಲಕ್ಷಿಸಬೇಕು" ಎಂದು ಲಕ್ಷ್ಯಲಕ್ಷಣ ಸಮನ್ವಯ ಮಾಡಿದ್ದಾರೆ. ಮೀನ, ಮತ್ಸ್ಯ ಎಂಬ ಪರ್ಯಾಯ ಪದಗಳಿರುವಲ್ಲಿ 'ಅನಿಮಿಷ' ಎಂಬ ಪದವನ್ನು ಕವಿ ಉದ್ದೇಶಪೂರ್ವಕವಾಗಿ ಉಪಯೋಗಿಸಿರುವನೆಂಬ ಅವರ ಗ್ರಹಿಕೆ ಸಮರ್ಥನೀಯ. ಆದರೆ, ಡಾ|| ಕೃಷ್ಣಮೂರ್ತಿಯವರು ಶಂಕೆಪಟ್ಟಿರುವಂತೆ, ತೀ. ನಂ. ಶ್ರೀ.ಯವರು

ಲಕ್ಷ್ಯದ ಅರ್ಥವನ್ನು ಹಿಗ್ಗಿಸಿ ಎಳೆದಿರುವಂತೆ ಕಾಣುತ್ತದೆ. ಶ್ಲೇಷಾರ್ಥವನ್ನು ಅಂಗೀಕರಿಸಿ, ಶಬ್ದಶಕ್ತಿ ಮೂಲಧ್ವನಿ ಹೇಗೆ ವರ್ತಿಸಿದೆ ಎಂಬುದನ್ನು ನಾವು ಈ ಮೊದಲೇ ಸೂಚಿಸಿದ್ದೇವೆ.[81]

---

81 ಲಕ್ಷ್ಯ ವಾಕ್ಯದ ಶಬ್ದಗಳಿಂದಲೆ ಉಪಮಾಲಂಕಾರವು ಧ್ವನಿತವಾಗಿದೆಯೆಂದು ಮೇಲೆ ವಿವರಿಸಿರುವೆವಷ್ಟೆ. ವ್ಯಂಗ್ಯವಾದ ಅರ್ಥದಿಂದ ಅದು 'ಪೋಷಿತ' ವಾಗಿರುವುದರಿಂದ, 'ಅರ್ಥದೆ ದೂಷ್ಯಂ' ಎಂಬೆಡೆಯಲ್ಲಿ '—ಪೋಷ್ಯಂ' ಎಂದು ಮೂಲಪಾಠವಿದ್ದು, ಪ್ರತಿಕಾರನ ಹಸ್ತದೋಷದಿಂದ ಅದು '—ದೂಷ್ಯಂ' ಎಂದಾಗಿರಬಹುದೆ ಎಂಬ ಸಂದೇಹವೂ ಉಂಟಾಗುತ್ತದೆ. ಆದರೆ ಎರಡು ಮುದ್ರಿತ ಪ್ರತಿಗಳಲ್ಲಿಯೂ 'ದೂಷ್ಯಂ' ಎಂದೇ ಇರುವುದರಿಂದಲೂ, ಪಾಠಾಂತರವಿಲ್ಲದಿರುವುದರಿಂದಲೂ ಆಧಾರವಿಲ್ಲದೆ ಈ ಬಗೆಗೆ ಹೀಗೆಯೆ ಸರಿಯೆಂದು ಖಂಡಿತವಾಗಿ ಹೇಳಲಾಗುವುದಿಲ್ಲ.

ನಮ್ಮ ಈ ಅಡಿ ಟಿಪ್ಪಣಿಯ ಬಗೆಗೆ ಪ್ರಸ್ತಾವಿಸಿ ಕೇಳಲಾಗಿ, ಪ್ರೊ॥ ಡಿ. ಎಲ್. ನರಸಿಂಹಾಚಾರ್ಯರು ತಮ್ಮ ಅಮೂಲ್ಯವಾದ ಅಭಿಪ್ರಾಯವನ್ನು ತಿಳಿಸಿ ಉಪಕಾರ ಮಾಡಿದ್ದಾರೆ: "'ಧ್ವನಿ'ಯೆಂಬ ಒಂದು ವಿಷಯ ಕವಿರಾಜಮಾರ್ಗಕ್ಕಿಂತ ಹಿಂದೆಯೇ ಪ್ರಸಿದ್ಧವಾಗಿದ್ದಿರಬಹುದು—ಇದಕ್ಕೆ ಆಧಾರವನ್ನು ಹೇಳಬೇಕು. ಇದನ್ನು ನೃಪತುಂಗನೂ ಅವನ ಹಿಂದಿನವರೂ ಒಂದು ಅಲಂಕಾರವೆಂದು ಪರಿಗಣಿಸಿದ್ದರು—ರಸವದಲಂಕಾರದಂತೆ. ಅನಂತರ ಅದು ಆನಂದವರ್ಧನನ ಕೈಯಲ್ಲಿ ಒಂದು ಸಾರ್ವತ್ರಿಕ ತತ್ತ್ವವಾಗಿ ಪರಿಣಮಿಸಿರಬಹುದು. ಆದಿಪುರಾಣದ ಪದ್ಯದಲ್ಲೂ (೯–೧೧೯) 'ಧ್ವನಿಯೆನಿಸಿದಲಂಕಾರಧ್ವನಿಯೆಸೆವಿನಂ' ಎಂದು ಧ್ವನಿಯೆಂಬುದು ಒಂದು ಅಲಂಕಾರವೆಂಬ ಅರ್ಥ ಬರುತ್ತದೆ. ಕವಿರಾಜಮಾರ್ಗದ ಪದ್ಯಕ್ಕೆ ನನ್ನ ಅರ್ಥ ಹೀಗೆ: ಧ್ವನಿಯೆಂಬುದು ಒಂದು ಅಲಂಕಾರ; ಅದು ಕವಿಪ್ರಯುಕ್ತವಾದ ಶಬ್ದದಿಂದ ಹೊರಹೊಮ್ಮುತ್ತದೆ; ಆ ವಾಚ್ಯಾರ್ಥವನ್ನೇ ಹಿಡಿದುಕೊಂಡು ಹೋದರೆ ಅರ್ಥಹೀನವಾಗಿ ದೂಷ್ಯವಾಗುತ್ತದೆ. 'ಕಮಳದಲ್ಲಿ ಅನಿಮಿಷಯುಗ' ಎಂದರೆ ಕಮಲದಲ್ಲಿ ಎರಡು ಮೀನುಗಳು ಎಂಬ ವಾಚ್ಯಾರ್ಥ ದೂಷ್ಯ. 'ಮುಖದಲ್ಲಿ ಎರಡು ಕಣ್ಣುಗಳು' ಎಂಬ ಧ್ವನಿತಾರ್ಥ ಸುಂದರ. ಇದು ಧ್ವನಿಯೆಂಬ ಅಲಂಕಾರ. ಆದ್ದರಿಂದ, ನೀವು ಆಧಾರವಿಲ್ಲದೆ 'ದೂಷ್ಯ'ವನ್ನು 'ಪೋಷ್ಯ' ಎಂದು ತಿದ್ದಬೇಕಾಗಿಲ್ಲ. ಇದು ನನ್ನ ದೃಷ್ಟಿ."

(ತಿದ್ದುಪಾಟು ಮಾಡಿಲ್ಲ. ನಮ್ಮದು ಕೇವಲ ವಿಚಾರಾರ್ಹವಾದ ಒಂದು ಸೂಚನೆಯಷ್ಟೆ.—ಸಂ.)

ಪದ್ಯ ೨೦೯–೨೧೭ : ಈ ಪದ್ಯಗಳಲ್ಲಿ ಮಾರ್ಗಕಾರನು ದಂಡಿಯ ಶ್ಲೋಕಗಳನ್ನನುಸರಿಸಿ 'ಮಹಾಕಾವ್ಯ'ದ ಲಕ್ಷಣಗಳನ್ನು ವಿವರಿಸಿದ್ದಾನೆ. ದಂಡಿಯ ಮತದಂತೆ ಮಹಾಕಾವ್ಯದ ಲಕ್ಷಣಗಳು ಹೀಗಿವೆ:

ಸರ್ಗಬಂಧೋ ಮಹಾಕಾವ್ಯಮುಚ್ಯತೇ ತಸ್ಯ ಲಕ್ಷಣಂ |
ಆಶೀರ್ನಮಸ್ಕ್ರಿಯಾ ವಸ್ತುನಿರ್ದೇಶೋ ವಾಪಿ ತನ್ಮುಖಂ ||

[ಅನೇಕ ಸರ್ಗಗಳುಳ್ಳ 'ಪ್ರಬಂಧ'ವು ಮಹಾಕಾವ್ಯ. ಅದರ ಲಕ್ಷಣಗಳು: ಅದರ ಪ್ರಾರಂಭದಲ್ಲಿ 'ಆಶೀಃ'(=ಹಾರೈಕೆ), 'ನಮಸ್ಕ್ರಿಯಾ'(=ನಮಸ್ಕಾರ'), ಇಲ್ಲವೆ 'ವಸ್ತುನಿರ್ದೇಶ'ವು ಇರುತ್ತದೆ.]

ಇತಿಹಾಸ ಕಥೋದ್ಭೂತಮಿತರದ್ವಾ ಸದಾಶ್ರಯಂ |
ಚತುರ್ವರ್ಗಫಲಾಯತ್ತಂ ಚತುರೋದಾತ್ತನಾಯಕಂ |

[ಅದು ಇತಿಹಾಸದಿಂದಲಾಗಲಿ ಕಥೆಯೊಂದರಿಂದಾಗಲಿ ಉದ್ಭೂತವಾಗಿರಬಹುದು; ಅಥವಾ ಸತ್ಯಸಂಗತಿಯನ್ನು ಕುರಿತಿರಬಹುದು. ಅದು ಚತುರ್ವಿಧ ಪುರುಷಾರ್ಥಗಳ (=ಧರ್ಮ, ಅರ್ಥ, ಕಾಮ, ಮೋಕ್ಷ) ಫಲವನ್ನು ಒಳಗೊಂಡಿರುತ್ತದೆ; ಅದರ ನಾಯಕನು ಚತುರನೂ ಉದಾತ್ತನೂ ಆಗಿರುತ್ತಾನೆ.]

ನಗರಾರ್ಣವ ಶೈಲರ್ತು ಚಂದ್ರಾರ್ಕೋದಯವರ್ಣನೈಃ |
ಉದ್ಯಾನಸಲಿಲಕ್ರೀಡಾ ಮಧುಪಾನ ರತೋತ್ಸವೈಃ ||

[ನಗರ, ಸಮುದ್ರ, ಪರ್ವತ, ಋತು, ಚಂದ್ರೋದಯ, ಸೂರ್ಯೋದಯ—ಇವುಗಳ ವರ್ಣನೆಯಿಂದಲೂ ಉದ್ಯಾನಕ್ರೀಡೆ, ಜಲಕ್ರೀಡೆ, ಮಧುಪಾನೋತ್ಸವ, ಪ್ರಿಯರ ಸಮಾಗಮ—ಇವುಗಳಿಂದಲೂ]

ವಿಪ್ರಲಂಭೈರ್ವಿವಾಹೈಶ್ಚ ಕುಮಾರೋದಯವರ್ಣನೈಃ |
ಮಂತ್ರದೂತಪ್ರಯಾಣಾಜಿ ನಾಯಕಾಭ್ಯುದಯೈರಪಿ ||

[ಪ್ರಣಯಿಗಳ ಅಗಲಿಕೆ ಮತ್ತು ವಿವಾಹಗಳಿಂದಲೂ, ಕುಮಾರೋದಯ ವರ್ಣನೆಯಿಂದಲೂ, ಮಂತ್ರಾಲೋಚನೆ, ದೂತಕಾರ್ಯ, ಪ್ರಯಾಣ, ಯುದ್ಧ, ನಾಯಕನ ಅಭ್ಯುದಯ—ಇವುಗಳಿಂದಲೂ]

ಅಲಂಕೃತಮಸಂಕ್ಷಿಪ್ತಂ ರಸಭಾವನಿರಂತರಂ |
ಸರ್ಗೈರನತಿವಿಸ್ತೀರ್ಣೈಃ ಶ್ರವ್ಯವೃತ್ತೈಃ ಸುಸಂಧಿಭಿಃ ||

[ಅಲಂಕೃತವಾಗಿಯೂ ಎಂದರೆ ವಿವಿಧ ಶಬ್ದಾಲಂಕಾರ ಅರ್ಥಾಲಂಕಾರಗಳಿಂದ ಕೂಡಿದ್ದಾಗಿಯೂ; ಸಂಕ್ಷಿಪ್ತವಾಗಿಲ್ಲದೆಯೂ; ಎಡೆಬಿಡದೆ ರಸಭಾವ

ಗಳಿಂದ ತುಂಬಿಯೂ; ಅತಿ ದೀರ್ಘವಲ್ಲದೆಯೂ ಕಿವಿಗಿಂಪಾದ ವೃತ್ತಗಳಿಂದ ಕೂಡಿರುವವಾಗಿಯೂ ಒಳ್ಳೆಯ ಸಂಧಿಗಳುಳ್ಳವಾಗಿಯೂ ಇರುವ ಸರ್ಗಗಳಿಂದ ಕೂಡಿರತಕ್ಕದ್ದೂ ಆಗಿ]

ಸರ್ವತ್ರಭಿನ್ನವೃತ್ತಾಂತೈರುಪೇತಂ ಲೋಕರಂಜನಂ।
ಕಾವ್ಯಂ ಕಲ್ಪಾಂತರಸ್ಥಾಯಿ ಜಾಯತೇ ಸದಲಂಕೃತಿ॥

[ಎಲ್ಲ ಸಂದರ್ಭಗಳಲ್ಲಿಯೂ ಎಂದರೆ ಪ್ರತಿಸರ್ಗದಲ್ಲಿಯೂ ಬೇರೆಯ ಜಾತಿಯ ವೃತ್ತದಿಂದಲೇ ಕೊನೆಗೊಳ್ಳುವಂತಿದ್ದು, ಒಳ್ಳೆಯ ಅಲಂಕಾರವುಳ್ಳದ್ದಾಗಿರುವ ಕಾವ್ಯವು ಲೋಕರಂಜನವನ್ನು ಮಾಡುವುದಲ್ಲದೆ ಕಲ್ಪಾಂತದವರೆಗೂ ಚಿರಸ್ಥಾಯಿಯಾಗಿರುವುದು].

ಮಾರ್ಗಕಾರನ ವಾಗಾಡಂಬರಜಾಲದಲ್ಲಿ ಸಿಲುಕಿರುವ ಲಕ್ಷಣಗಳನ್ನು ಹೀಗೆ ಬಿಡಿಸಿ ಹೇಳಬಹುದು:—

ಇತಿಹಾಸೋಪಾಶ್ರಯಂ (=ಇತಿಹಾಸವನ್ನು ಆಶ್ರಯಿಸಿದ್ದು, ಎಂದರೆ ಅದರ ಆಧಾರದ ಮೇಲೆ ರಚಿತವಾದದ್ದು); ಕಥಾವಿಶ್ರುತಚತುರ ವಿಕಾಶೋತ್ಪಾದಿತಾರ್ಥೋತ್ಕರಂ(ಕಥಾ+ವಿಶ್ರುತ+ಚತುರ+ವಿಕಾಶ+ಉತ್ಪಾದಿತ+ಅರ್ಥ+ಉತ್ಕರಂ=ಕಥೆಯಲ್ಲಿಪ್ರಸಿದ್ಧವಾದದ್ದೂ, ಚತುರವಾದ ಪ್ರಕಾಶನದಿಂದ ಉಂಟಾದ ಅರ್ಥಸಮೂಹದಿಂದ ಕೂಡಿದ್ದು); ಅತಿಕುಶಲಸಲೀಲಾಚಾರ ಲೋಕೋಪಕಾರೋದಿತ ಪರಮಗುಣೈಕೋದಾರ ಧೀರಾಧಿಕಾರಂ [ಅತಿ ಕುಶಲ+ಸಲೀಲಾ+ಆಚಾರ+ಲೋಕೋಪಕಾರ+ಉದಿತ + ಪರಮಗುಣೈಕ+ಉದಾರ + ಧೀರ+ಅಧಿಕಾರಂ: ಇದಕ್ಕೆ ಸಂವಾದಿಯಾದ ಲಕ್ಷಣ ವಿವರಣೆ 'ಕಾವ್ಯದರ್ಶ'ದಲ್ಲಿ ಇಲ್ಲ; ಶಬ್ದಗಳು ಅರ್ಥವಾಗುವಂತಿದ್ದರೂ ತಾತ್ಪರ್ಯವು ಸ್ಪಷ್ಟವಾಗುವುದಿಲ್ಲ. ಬಹುಶಃ ಹೀಗಿರಬಹುದು: ಬಹು ಕುಶಲತೆಯಿಂದಲೂ ಸೌಂದರ್ಯದಿಂದಲೂ ಕೂಡಿದ ಆಚಾರ ಮತ್ತು 'ಲೋಕೋಪಕಾರ'ಗಳಿಂದ (ಎಂದರೆ ಲೋಕಾನುಭವದ ಉಪಕಾರಕ ಸಂಗತಿಗಳಿಂದ ಕೂಡಿದ) ಉಂಟಾದ ಶ್ರೇಷ್ಠಗುಣದಿಂದ ಕೂಡಿದ್ದೂ, ಉದಾರವೂ ಧೀರವೂ ಆದ 'ಅಧಿಕಾರ' (=ಗ್ರಂಥ ವಿಭಾಗ)]; ಪರಮಸುಖಪದ ಶ್ರೀಧರ್ಮಕಾಮಾರ್ಥ ಮೋಕ್ಷಸ್ಥಿರ

ವಿಷಯ ವಿಶೇಷಾಖ್ಯಾನ ವಿಖ್ಯಾತ ತತ್ತ್ವಂ (=ಶ್ರೇಷ್ಠವಾದ ಸುಖ ಸಂಪತ್ ಸ್ವರೂಪವಾದ ಧರ್ಮ, ಕಾಮ, ಅರ್ಥ, ಮೋಕ್ಷಗಳೆಂಬ ಸ್ಥಿರ ವಿಷಯುಗಳನ್ನು ನಿರೂಪಿಸುವ ಪ್ರಸಿದ್ಧ ತತ್ತ್ವ); ಪುರ, ಜನಪದ, ಶೈಲ (=ಬೆಟ್ಟ), ಆದಿತ್ಯ ಚಂದ್ರರ ಉದಯುಗಳು, ಮೃಗಗಣಗಳು— ಇವುಗಳ ವರ್ಣನೆಗಳ ನಿರ್ಣಯಾರ್ಥವುಳ್ಳದ್ದು; ಸಮುದಿತ ಕುಸುಮಾ-ಮೋದೋದಯ ಉದ್ಯಾನಲೀಲಾ (=ಚೆನ್ನಾಗಿ ಅರಳಿದ ಹೂಗಳ ಸುಗಂಧವು ಹರಡಿರುವ ವನಕ್ರೀಡೆ), ಕ್ರಮವಿಹಿತ ಜಲಕ್ರೀಡಾ ವಿನೋದದಾದಿನೀತಂ—ಇವುಗಳಿಂದ ಸಾಗತಕ್ಕದ್ದು; ಪ್ರಮದ ಮದನಮಾದ್ಯದ್ಯೌವನೋದಾನ ರಾಮಂ (=ಉಕ್ಕೇರುವ ಕಾಮ ದಿಂದ ಸೊಕ್ಕೇರಿದ ಯೌವನವೆಂಬ ಉದ್ಯಾನದಿಂದ ಮನೋಹರ ವಾದದ್ದು); ರಮಣ ರಣಿತಗೋಷ್ಠೀಬಂಧ ಸಂಧಿಪ್ರಬಂಧಂ [= ಪ್ರಿಯನ (ನಾಯಕನ?) (ಮಧುರಾಲಾಪದ?) ಇಂಪಾದ ಧ್ವನಿ ಯಿಂದ ಕೂಡಿದ ಗೋಷ್ಠಿ(=ಸಭೆ, ಕೂಟ)ಯನ್ನು ವರ್ಣಿಸುವ ಕಥಾ ಸಂಧಿಗಳನ್ನುಳ್ಳ ಪ್ರಬಂಧ (=ಕಾವ್ಯ)]; ವಿವಿಧ ವಿಭವಶೋಭಾರಂಭ ಲಂಭ ಪ್ರಲಂಭೋದ್ಭವ ವಿಹಿತ ವಿವಾಹೋತ್ಸಾಹ ಸಾಕಲ್ಯ ಕಲ್ಪಂ (=ಬಗೆಬಗೆಯ ವೈಭವಗಳಿಂದ ಶೋಭಿಸುವ ಧರ್ಮಗಳಿಂದ ಸಾಧಿಸಿದ ವಿಧಿವತ್ತಾದ ವಿವಾಹ ಸಂಭ್ರಮಗಳನ್ನು ವರ್ಣಿಸುವ ಸಮಗ್ರ ವಾದ ವಿಧಿವಿಧಾನಗಳನ್ನುಳ್ಳದ್ದು); ಪ್ರವರ ನೃಪಕುಮಾರಾತ್ಮೋ-ದಯಾದಿ ಪ್ರಮೋದಾಸವ ಸಮುದಿತ ಸೇವಾರಾತಿ ವೃತ್ತಾಂತ ವೃತ್ತಂ [=ಶ್ರೇಷ್ಠನಾದ ರಾಜಕುಮಾರನ ಜನನ ಸಂಗತಿಯೇ ಮುಂತಾದ ಸಂತೋಷವೆಂಬ ಮದ್ಯದ ಸೇವನೆ, ಆರಾತಿ (=ಶತ್ರು) ವೃತ್ತಾಂತ,—ಇವುಗಳಿಂದ ಕೂಡಿದ ನಿರೂಪಣೆ); ನಯವಿನಿಮಯ ನಾನಾ ಮಂತ್ರದೂತ ಪ್ರಯಾಣಾಕ್ಷಯ ಸಮಯ ವಿಳಾಸೋಲ್ಲಾಸಿ ಸಂಗ್ರಾಮಿಕಾಂಗಂ (=ನೀತಿವಿನಿಮಯದಿಂದ ಕೂಡಿದ ಅನೇಕ ಮಂತ್ರಾಲೋಚನೆಗಳು, ದೂತಕಾರ್ಯ, ಪ್ರಯಾಣ, ಅನಂತಕಾಲ ದಲ್ಲೂ ಉಲ್ಲಾಸಕರವೆನಿಸಿರುವ ಯುದ್ಧ—ಇವುಗಳ ವರ್ಣನೆಯನ್ನು ಅಂಗವಾಗಿ ಉಳ್ಳದ್ದು); ಭಯವಿರಹಿತ ವೀಯೌದಾರ್ಯ ಗಂಭೀರ

ಕಾರ್ಯಾಶ್ರಯ ವಿಶದ ಗುಣಶ್ರೀನಾಯಕೋತ್ಕರ್ಷವೇದ್ಯಂ (=ಭಯವಿಲ್ಲದ ವೀರ, ಔದಾರ್ಯ, ಘನವಾದ ಕಾರ್ಯಗಳನ್ನು ಎಸಗುವುದರಲ್ಲಿ ವ್ಯಕ್ತಪಡುವ ಗುಣಸಂಪತ್ತು—ಇವನ್ನುಳ್ಳ, ನಾಯಕನ ಅಭ್ಯುದಯವನ್ನು ತಿಳಿಸತಕ್ಕದ್ದು) ; ವಿಳಸಿತ ಸದಳಂಕಾರಾದಿ ಸಂಸಾಧಿತಾರ್ಥಂ (=ಸೊಗಸು ವಬಳ್ಳಿಯ ಅಲಂಕಾರ ಮೊದಲಾದವುಗಳಿಂದ ಸಾಧಿತವಾದ ಅರ್ಥವುಳ್ಳದ್ದು) ; ಕುಳವಿದಿತ ಪದೋದ್ಯತ್ಕೋಮಳಾಳಾಪಶೀಲಂ (=ಕುಲ+ವಿದಿತ+ಪದ+ಉದ್ಯತ್+ಕೋಮಲ+ಆಲಾಪ+ಶೀಲಂ=ಶುದ್ಧವಾದ ಪದಗಳಿಂದ ಉಂಟಾದ ಲಲಿತವಾದ ಮಾತಿನ ರೀತಿಯುಳ್ಳದ್ದು) ; ಸುಳಲಿತಗುಣ ನಾನಾ ವೃತ್ತಜಾತಿ ಪ್ರವೃತ್ತಾಸ್ಖಳಿತ ರಸ ವಿಶೇಷೋಪಾಶ್ರಯ ಶ್ರೀನಿವೇಶಂ (=ಲಲಿತವಾದ ಗುಣಗಳಿಗೂ, ಬಗೆಬಗೆಯ ವೃತ್ತಜಾತಿಗಳ ಪ್ರಯೋಗಕ್ಕೂ, ನಿರಂತರವಾದ ರಸ ವಿಶೇಷಕ್ಕೂ ಎಡೆಗೊಡುವ ಸುಂದರವಾದ ನೆಲೆವೀಡಾಗಿರತಕ್ಕದ್ದು) ; ನಯವಿದುದಿತ ಯುಕ್ತಿವ್ಯಕ್ತಿ ಲೋಕ ಪ್ರತೀತ್ಯಾಶ್ರಯ ಸಕಳ ಕಳಾ ಲೀಲಾ ಕರಾಲ್ಪೋಪಜಲ್ಪಂ (=ನಯವಿದ್+ಉದಿತ+ಯುಕ್ತಿವ್ಯಕ್ತಿ+ಲೋಕಪ್ರತೀತಿ+ಆಶ್ರಯ+ಸಕಲಕಲಾಲೀಲಾ+ಆಕರ+ಅಲ್ಪ+ಉಪಜಲ್ಪಂ=ರಾಜನೀತಿಯನ್ನು ಬಲ್ಲವರು ಹೇಳಿದ ಯುಕ್ತಿಗಳ, ಎಂದರೆ ಉಪಾಯಗಳ, ತಿಳಿವಳಿಕೆಯನ್ನೂ ಲೋಕಾನುಭವವನ್ನೂ ಒಳಗೊಂಡ ಎಲ್ಲ ಕಲೆಗಳ ವಿಲಾಸಕ್ಕೂ ಆಕರವೆನಿಸುವ ಅಪೂರ್ವವಾದ ಮಾತುಗಾರಿಕೆಯುಳ್ಳದ್ದು) ; ನಿಯತ ಸಮಯಸಾರಾಸಾಧನೀಯಾದಿ ತಾರಾನ್ವಯ ಪರಮ ತಪೋನುಷ್ಠಾನ ನಿಷ್ಠಾರ್ಥಸಿದ್ಧಂ [(ಇಲ್ಲಿ ಸ್ವಲ್ಪ ಅರ್ಥಕ್ಲೇಶವಿದೆ ; ತಾತ್ಪರ್ಯ ಹೀಗಿರಬಹುದು) : ನಿಯತವಾದ ವೈದಿಕ ಸಮಯ ಜಿನ ಸಮಯ ಮುಂತಾದ ಸಿದ್ಧಾಂತಗಳ ಸಾರವನ್ನು ತಿಳಿದುಕೊಂಡರೂ ಅದರಿಂದ ಸಾಧಿಸಲಾಗದ, ಪರಮ ತಪಸ್ಸನ್ನು ಅನುಷ್ಠಾನ ಮಾಡುವುದರಿಂದ ಸಿದ್ಧಿಸುವ, ಪ್ರಯೋಜನವನ್ನು ದೊರಕಿಸಿಕೊಡತಕ್ಕದ್ದು)] ; [82] ವಿಗತಮಳಂ (=ನಿರ್ಮಲ

---

82 ಇಲ್ಲಿ ಪಾಠದೋಷವಿದ್ದರೂ ಇರಬಹುದು. ಮೇಲ್ಕಂಡ ತಾತ್ಪರ್ಯಾರ್ಥಕ್ಕೆ ಅನುಗುಣವಾಗಿ ಪಾಠವನ್ನು ಹೀಗೆ ತಿದ್ದಿಕೊಳ್ಳಬಹುದು: (ನಿಯತ+ಸಮಯಸಾರ+

ವಾದದ್ದು, ನಿರ್ದುಷ್ಟವಾದದ್ದು); ಉಪಾತ್ತಾರಾತಿ ಸಾರ್ಥಾರ್ಥ ವೀರಂ (=ಉಪಾತ್ತ+ಅರಾತಿ+ಸಾರ್ಥ+ಅರ್ಥವೀರಂ=ಶತ್ರುಗಳಿಂದ ಸೆಳೆದುಕೊಂಡ ಐಶ್ವರ್ಯದಿಂದ ಸಾರ್ಥಕವೆನಿಸಿಕೊಂಡ ವೀರದಿಂದ ಕೂಡಿದ್ದು); ಸಾಗರಂಬೋಲ್ (=ಸಾಗರದ ಹಾಗೆ), ಸ್ಥಗಿತಮಮಿತ ನಾನಾ ಶಬ್ದವೀಚಿ ಪ್ರಪಂಚಂ (=ಹರಡಿಕೊಂಡಿರುವ ಅಪಾರವಾದ ಅಸಂಖ್ಯಾತವಾದ ಶಬ್ದಗಳೆಂಬ ಅಲೆಗಳ ಸಮೂಹದಿಂದ ಕೂಡಿದ್ದು), ನಿಗದಿತ ಗುಣರತ್ನೈಕಾಕರಂ (=ನಿರೂಪಣೆಗೊಂಡ ಗುಣಗಳೆಂಬ ರತ್ನಗಳಿಗೆ ನೆಲೆಯಾದದ್ದು); ಇಂಥ (ಮಹಾಕಾವ್ಯವು) ಸೊಗಯಿಸಿ, ಧರಣೀಚಕ್ರಾಂಬರಾಕ್ರಾಂತಮಕ್ಕುಂ (=ಭೂಮಂಡಲವನ್ನೂ ಅಂತ ರಿಕ್ಷವನ್ನೂ ಆಕ್ರಮಿಸಿಕೊಂಡಿರುವುದು, ಎಂದರೆ ಅದರ ಕೀರ್ತಿ ವಿಶ್ವವ್ಯಾಪಕವಾಗಿರುವುದು).

ಪದ್ಯ ೨೧೭: "ಹೀಗೆ ಅತಿಶಯವಾದ ವರ್ಣನೆಗಳನ್ನು ಯಾವಾಗಲೂ ಒಟ್ಟುಗೂಡಿಸಿ ಹೇಳಿದ ಕಾವ್ಯವು ಅಮೋಘವರ್ಷನ ಯಶಸ್ಸಿನ ಹಾಗೆ ಕಲ್ಪಾಂತದವರೆಗೂ ನಿಲುಗಡೆಯಿಲ್ಲದೆ ಚಿರಸ್ಥಾಯಿಯಾಗಿರು ವುದು."

ಪದ್ಯ ೨೧೮-೨೩೦: ನೃಪತುಂಗ ಸಭಾಸದನಾದ ಕವಿಯನ್ನು ಇತರ ಸಭಾ ಸದರು ಹೀಗೆ ವರ್ಣಿಸುತ್ತಿದ್ದರು:

(ಪ. ೨೧೮) (ಮಹಾ ನೃಪತುಂಗ ಸಭಾಸದನಾದ ಕವಿ) "ಸಕಲ ಲೌಕಿಕ ಸಾಮಯಿಕ ವೈದಿಕ ವಿಚಾರಗಳಲ್ಲಿ ನಿರತನಾದವನು; ಸಾಹಿತ್ಯ ವಿದ್ಯೆಯಲ್ಲಿ ಉಕ್ತಿ ಕಲಾಕಲಾಪವನ್ನು ಪ್ರಕಟಪಡಿಸಿರು ವವನು. (ಪ. ೨೧೯) ಅತಿಶಯವಾದ ಪ್ರತಿಭಾ ವೈಭವವುಳ್ಳವನು;

ಅಸಾಧನೀಯ+ಅಧಿಕಾರ+ಅನ್ವಯ+ಪರಮ ತಪೋ ನು ಷ್ಠಾ ನ ನಿ ಷ್ಠ+ಅರ್ಥ ಸಿದ್ಧಂ) 'ನಿಯತ ಸಮಯಸಾರಾಸಾಧನೀಯಾಧಿಕಾರಾನ್ವಯ ಪರಮ ತಪೋ ನುಷ್ಠಾನನಿಷ್ಠಾರ್ಥಸಿದ್ಧಂ' (ಪಾಠಾಂತರಗಳು: ಪಾಠಕರ ಪ್ರತಿ: 'ತಪೋನು ಷ್ಠಾನ ನಿಷ್ಠಾರ್ಥ ಸಿದ್ಧಂ', ಮದ್ರಾಸು ಪ್ರತಿ: '—ಮಿಷ್ಠಾರ್ಥ ಸಿದ್ಧಂ'.)

ಚತುರವಾದ ವೃತ್ತಿ (=ವ್ಯಾಖ್ಯಾನ)ಯಲ್ಲಿ ಅಸಾಧಾರಣನಾದವನು; ಲಕ್ಷಣ ಲಕ್ಷ್ಯನು (=ಲಕ್ಷಣಗಳನ್ನೂ ಅವುಗಳಿಗನುಗುಣವಾಗಿ ಲಕ್ಷ್ಯಗಳನ್ನೂ ನಿರೂಪಿಸಬಲ್ಲವನು). (ಪ. ೨೨೦) ಭಾವಿಸಿ ನೋಡಿದರೆ, ವಿಚಾರಪರನು, ಬಲು ಜಾಣನು; ಸಮಸ್ತ ಭಾಷಾ ವಿಷಯಗಳಲ್ಲಿ ಅತಿಶಯವೂ ನಿರ್ದುಷ್ಟವೂ ಆದ ಕುಶಲತೆಯುಳ್ಳವನು; ದೇವತೆ, ಗುರು, ಗುಣೋದಯ (=ನೃಪತುಂಗ?), ವೃದ್ಧಜನ—ಇವರನ್ನು ಚೆನ್ನಾಗಿ ಸೇವಿಸುವುದರಲ್ಲಿ ಆಸಕ್ತನು; ವಿಕಾರವಾದ ಚಾಪಲ್ಯವನ್ನು ಹೊಂದಿರದವನು. (ಪ. ೨೨೧) ಪರಮಕಾರುಣಿಕನು; ದೋಷರಹಿತನು; ಎಲ್ಲ ಜನರಲ್ಲಿಯೂ ಆದರವನ್ನು ಹುಟ್ಟಿಸತಕ್ಕವನು; ಪರರ ಗುಣದಲ್ಲಿ ಅಸಹನೆಯಿಲ್ಲದವನು; 'ಆತ್ಮಗುಣೋದಯಾಂತರಸ ರೂಪಂ' (=ತನ್ನ ಗುಣೋದಯ ಸಿದ್ಧಿಯ ಸಾರಸ್ವರೂಪನು);[83] ಅಖಿಲಾಗಮಗಳ ಸಾರವನ್ನು ಮುಟ್ಟುವುದರಲ್ಲಿ ನಿರತನಾದವನು. (ಪ. ೨೨೨) ವಂಶದ ಏಳಿಗೆಗೂ ಮೋಕ್ಷಸುಖಕ್ಕೂ ಕಾರಣವಾದ ಪರಮಧರ್ಮವನ್ನು ಪ್ರೀತಿಯಿಂದ ವಿಚಾರಮಾಡಿ, ಒದಗಿದ ನಿರ್ಮಲ ಕೀರ್ತಿವಿತಾನವನ್ನು ಸಮಕಟ್ಟುವುದಕ್ಕಾಗಿ, ಯಾವ ರೀತಿಯಿಂದಲೂ ಹೆರರ ಮೆಚ್ಚುಗೆಯನ್ನು ಅವಲಂಬಿಸದಂತೆ, ಯಾವನಿಂದಲೂ ಏನನ್ನೂ ಕುರಿತು ನಿರೀಕ್ಷಿಸದೆ, ಇಂತು ಅಭಿಮಾನಿಯೂ '(ನಿರಗೀಡಿತ?) ಮಹಾಪುರುಷವ್ರತ ನಿಶ್ಚಿತ'ನೂ ಆದ ಈತನು 'ಕೂಡೆ ಪೇೞ್ದನ್ನುತ ಕಾವ್ಯಮಂ,[84] ಜಗದಗಾಧ

---

83 "ತನ್ನ ಮತ್ತು 'ಗುಣೋದಯ' (ನೃಪತುಂಗ)ನ ಮಧ್ಯದಲ್ಲಿ ಭೇದರಹಿತನು (ಸರೂಪನು)"—ಇದು ಮುಳಿಯ ತಿಮ್ಮಪ್ಪಯ್ಯನವರ ಅರ್ಥವಿವರಣೆ (ಕ. ಮಾರ್ಗ ವಿವೇಕ—ಭಾಗ ೧, ಪು. ೯೭.)

84 'ಕೂಡೆ ಪೇೞ್ದ ನುತಕಾವ್ಯಮನಿಂತಭಿಮಾನಿ' ಎಂದು ಎರಡು ಮುದ್ರಿತ ಪ್ರತಿಗಳಲ್ಲಿಯೂ ಇರುವ ಪಾಠ. 'ಪೇೞ್ದನ್ನುತ ಕಾವ್ಯಮಂ' (ಪೇೞ್ದಂ+ನುತ ಕಾವ್ಯಮಂ) ಎಂದು ಸ್ವಲ್ಪ ತಿದ್ದುಪಾಟು ಮಾಡುವುದರಿಂದ ಸುಲಭವಾಗಿ ಅರ್ಥಾನ್ವಯ ಮಾಡಬಹುದು. ಇಲ್ಲಿ 'ನುತ ಕಾವ್ಯ' ಎಂದರೆ 'ಲಕ್ಷಣಗ್ರಂಥ' (=ಕವಿರಾಜಮಾರ್ಗ) ಎಂದೇ ಗ್ರಹಿಸಬೇಕು.

ವಿವರೋದರ ದೀಪವಿಕಲ್ಪಮುಂ' [=ಜಗತ್ತಿನ ಅಗಾಧವಾದ ಕುಹರ ಪ್ರದೇಶದ ಮಧ್ಯ ಭಾಗದಲ್ಲಿ (ಅಲ್ಲಿನ ಕತ್ತಲೆಯನ್ನು ಕಳೆಯುವುದಕ್ಕಾಗಿ) ಒಂದು ದೀಪದಂತಿರುವ 'ನುತಕಾವ್ಯ'ವನ್ನು ಹೇಳಿದನು)" —ಎಂಬುದಾಗಿ (ಪ. ೨೨೪) "ನೃಪತುಂಗ ಸಭಾಸದರು 'ವರಗೀತ ಗುಣೋದಯೈಕಾಂತ ಕಾಂತವಿಷಯಾಶಯರಾಗಿ' (=ಹಾಡಿ ಹೊಗಳುವುದಕ್ಕೆ ಯೋಗ್ಯವಾದ ಕಾವ್ಯಗುಣೋದಯವೊಂದರಿಂದಲೇ ಆಕರ್ಷಿತವಾದ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು), 'ನುಡಿಗಳೊಳ್ ಬಗೆ ಪೆರ್ಚಿರೆ' (=ಹೇಳುವ ಮಾತಿನಲ್ಲಿ ಮನಸ್ಸು ತುಂಬಿ ಬಂದಿರಲು, ಎಂದರೆ ಮನಃಪೂರ್ವಕವಾಗಿ), 'ಅಂತು ಬಿಟ್ಟು ತೆಱದಿಂ' (=ಮಾತು ತಾನಾಗಿ ಉದುರಿದ ಹಾಗೆ, ಎಂದರೆ ಸ್ವಯಂ ಪ್ರೇರಿತರಾಗಿ), 'ನಿರಾಕುಳಂ ಸಂತತಂ ಪೇೞ್ದು ಅವರ್ ಸಂತಸಂ ಬಡಿಸುವರ್' (=ಯಾವಾಗಲೂ ನಿಸ್ಸಂದಿಗ್ಧವಾಗಿ ಹೇಳಿ ಅವರು ಸಂತೋಷಪಡಿಸುವರು.)"

ಇಷ್ಟುಮಾತ್ರವಲ್ಲ: (ಪದ್ಯ ೨೨೫) "ಎಂದುಂ ವರ್ಣಿಕುಂ" (=ಹೀಗೆಂದೂ ವರ್ಣಿಸುತ್ತಾರೆ):

ನೃಪತುಂಗ ಸಭಾಸದನು—

"ಪಾರ್ಥಿವಲೋಕನಪ್ಪಂ (=ಕ್ಷತ್ರಿಯ ಪ್ರಪಂಚಕ್ಕೆ ಸೇರಿದವನು, ಎಂದರೆ, ಕವಿಯಾಗಿದ್ದುದರ ಜೊತೆಗೆ ಕಲಿಯೂ ಆಗಿದ್ದನೆಂದು ಭಾವ) ; ಕವಿ; ಸಾರ್ಥಚಯಂ (=ಸಂಪದ್ಯುಕ್ತನು) ; ನುತ ಸರಸ್ವತೀ ತೀರ್ಥಾವತಾರ ಮಾರ್ಗನ (=ನೃಪತುಂಗನ), ಎಸಕಂ (=ಕಾರ್ಯವು), [85] ಸಾರ್ಥಮಪ್ಪಂತು ಚಿಂತಿತಕಾರ್ಯತತ್ಪರಂ[85] (=ಸಾರ್ಥಕವಾಗುವ ರೀತಿಯಲ್ಲಿ ಆಲೋಚಿಸಿದ ಕಾರ್ಯದಲ್ಲಿ ನಿರತನಾದವನು).

---

85 ಈ ಇಡಿಯ ವಾಕ್ಯಭಾಗವು ಎರಡು ಮುದ್ರಿತ ಪ್ರತಿಗಳಲ್ಲಿಯೂ ಲುಪ್ತವಾಗಿದೆ. ಈಗಿರುವಂತೆ ಈ ವಾಕ್ಯವು ಸಂಪಾದಕನು ಯಥಾಮತಿಯಾಗಿ ರಚಿಸಿ ಸೇರಿಸಿರತಕ್ಕದ್ದು. ಸರಿಯಾದ ಮೂಲಪಾಠವು ದೊರಕಿದ ಮೇಲೆ ಇದನ್ನು ತೆಗೆಯತಕ್ಕದ್ದು.

ಗದ್ಯ ೨೨೬ : “ ಕುಲ ಜಾತಿ ದೇಶವಿಶದಂ ; ವಿನಯೋಪಚಾರಂ ; ನಿಲಯೈಕ ವೃತ್ತಿ (=ಮನೆಯಲ್ಲಿಯೇ ಇರತಕ್ಕವನು, ಎಂದರೆ ಏಕಾಂತವಾಸ ಪ್ರಿಯ) ; [ಕೃತಿಬಿಂಬಿತ ಸತ್ತ್ವಸಾರಂ] [86] (=ತನ್ನ ಸತ್ತ್ವಸಾರ ವೆಲ್ಲವನ್ನೂ ಕೃತಿಯಲ್ಲಿ ಬಿಂಬಿಸಿರುವವನು ?); ವಿಲಸದ್ ಗುಣಾಗುಣ ವಿವರ್ತಿ ಗುರೂಪದೇಶಾಮಲಿನಾವಬೋಧ ವಿದಿತಾಖಿಳಚೋದ್ಯ ವೃಂದಂ (=ವಿಲಸದ್+ಗುಣ+ಅಗುಣ+ವಿವರ್ತಿ+ಗುರೂಪದೇಶ+ ಅಮಲಿನ + ಅವಬೋಧ + ವಿದಿತ + ಅಖಿಲಚೋದ್ಯವೃಂದಂ = ಗುಣ ದೋಷ ವಿವೇಕವನ್ನು ಸ್ಪಷ್ಟವಾಗಿ ತಿಳಿಸುವ, ಗುರುವಿನ ಉಪದೇಶದ ನಿರ್ಮಲವಾದ ಬೋಧೆಯಿಂದ ತಿಳಿದುಕೊಂಡ ಆಶ್ಚರ್ಯಕರವಾದ ಸಂಗತಿಗಳನ್ನು ಬಲ್ಲವನು).

ಪದ್ಯ ೨೨೭ : “ ಮದ ಮಾನ ಮಾಯ ಭಯ ಲೋಭ ವಿಷಾದ ಹಾರ್ಷಾ ಭ್ಯುದಿತಾಂತರಂಗರಿಪುವರ್ಗ ಜಯಾವತಾರಂ [=ಮದ ಮಾನ ಮುಂತಾದ ಅಂತರಂಗ ರಿಪುವರ್ಗವನ್ನು ಜಯಿಸಿದವನು (ಪ್ರಸಿದ್ಧ ವಾದ ಅರಿಷಡ್ವರ್ಗ : ಕಾಮ, ಕ್ರೋಧ, ಲೋಭ, ಮದ, ಮೋಹ, ಮತ್ಸರ; ತದ್ಭಿನ್ನವಾಗಿದೆ ಇಲ್ಲಿ ಹೇಳಿರುವ ‘ ಸಪ್ತರಿಪುವರ್ಗ ’)] ; ವಿದಿತ ಸ್ವಧೀ ವಿಭವ ಭಾವಿತ ವಿಶ್ವಲೋಕಂ (=ಪ್ರಸಿದ್ಧವಾದ ತನ್ನ ಬುದ್ಧಿಶಕ್ತಿಯಿಂದಾಗಿ ಸಮಸ್ತ ಲೋಕದ ಗೌರವಕ್ಕೆ ಪಾತ್ರನಾದ ವನು) ; ಬುಧಗೋಕಾವಂ (=ವಿದ್ವಾಂಸರನ್ನು ಪ್ರೀತಿಯಿಂದ ಕಾಪಾಡತಕ್ಕವನು) ; ಅನುನೀತಗೃಹೀತವಾಕ್ಯಂ (=ಕೈಕೊಂಡ ವಚನವನ್ನು ಪಾಲಿಸತಕ್ಕವನು).

ಪದ್ಯ ೨೨೮ : “ ಪರಮಾನುಭಾವನು ; ಅಭಿಮಾನಿ ; ವಿನೋದಶೀಲನು ; ‘ ಪರಂ ’ (=ಶ್ರೇಷ್ಠನು) ; ಅತ್ಯುದಾರಚರಿತೋದಯನು ; ಏಕ ರೂಪನು : ‘ ಸರಸಾಶ್ರಯಪ್ರವರಮೂರ್ತಿ’ (=ಅತ್ಯಂತ ಶ್ರೇಷ್ಠನಾದ

---

86 ಇದು ಮುಳಿಯ ತಿಮ್ಮಪ್ಪಯ್ಯನವರು ಗ್ರಂಥಪಾತವಾಗಿರುವೆಡೆಯಲ್ಲಿ ಸೂಚಿಸಿರುವ ಪಾಠ.

ರಸಿಕನು); ಪರೋಪಕಾರಿ; ಯಾವಾಗಲೂ ಗುಣೋದಯನು; 'ಅಕಾರಣಧುರ್ಯಮಿತ್ರಂ' (=ನಿರ್ವ್ಯಾಜ ಮೈತ್ರಿಯನ್ನು ತಳೆಯಬಲ್ಲವನು).

ಪದ್ಯ ೨೨೯: "ಅಸಹಾಯಸಾಹಸವಿನೋದಿ (=ಏಕಾಂಗ ವೀರದಲ್ಲಿ ನಲಿಯುವವನು); ವಿವಿಕ್ತ ಚಿತ್ರ ಪ್ರಸಹಕಾಶಿತ ಮಹೋದಯ ತತ್ತ್ವಸತ್ತ್ವಂ (=ಪ್ರತ್ಯೇಕ ಪ್ರತ್ಯೇಕವಾಗಿಯೂ ಆಶ್ಚರ್ಯಕರವಾಗಿಯೂ ಸ್ಥಿರವಾಗಿಯೂ ಪ್ರಕಾಶಗೊಂಡ ಮಹಿಮೆಯಿಂದ ಕೂಡಿದ ಸತ್ತ್ವಶಾಲಿ; ಎಂದರೆ, ನಾನಾ ವಿಧವಾಗಿ, ಬೆರಗುಗೊಳಿಸುವ ರೀತಿಯಲ್ಲಿ, ತನ್ನ ಆತ್ಮಶಕ್ತಿಯನ್ನು ವ್ಯಕ್ತಪಡಿಸುವ ಮಹಾಪುರುಷ); ವ್ಯಸನವ್ಯಪೇತಂ (=ದುರಭ್ಯಾಸಗಳಿಲ್ಲದವನು, ಕೆಟ್ಟ ಚಟಗಳಿಲ್ಲದವನು); ಉಪನೀತ ಕಲಾಕಲಾಪಂ(=ಕಲಾಕಲಾಪಸಹಿತನು, ಎಂದರೆ ಅನೇಕ ಕಲೆಗಳಲ್ಲಿ ನಿಪುಣನು); ಶಶಿಖಂಡನಿರ್ಮಲಯಶೋವಿವಿಧಾವತಂಸಂ [=ಬಾಲಚಂದ್ರನಂತೆ ನಿರ್ಮಲವಾದ ಕೀರ್ತಿಯೆಂಬ(ಶಿರೋಭೂಷಣ, ಕರ್ಣಕುಂಡಲ, ಮುಂತಾದ) ಬಗೆಬಗೆಯ ಆಭರಣಗಳುಳ್ಳವನು."

ಪದ್ಯ ೨೩೦: "ಪರಿವೃತ ನೃಪತುಂಗದೇವಮಾರ್ಗಾಂತರಗತ ಬೋಧವಿಶೇಷ ಯಾನಪಾತ್ರಂ [='ನೃಪತುಂಗದೇವ ಮಾರ್ಗ' ಎಂದು ಪ್ರಸಿದ್ಧವಾದ ಕಾವ್ಯಮಾರ್ಗ ಪ್ರಕಾರದಲ್ಲಿ ಅಡಗಿರುವ ತಿಳಿವಳಿಕೆ ('ಬೋಧ')ಯಿಂದ 'ಪರಿವೃತ'ವಾದ (=ಸುತ್ತುವರಿಯಲ್ಪಟ್ಟ, (ವ್ಯಾಪ್ತವಾದ) ವಿಶೇಷವಾದ ನೌಕೆ]; (ಇಂಥ ನೌಕಾರೂಪದ ಈ) ಮಹಾತ್ಮನು, 'ಪರಮಗುಣಪರೀತ ಕಾವ್ಯರತ್ನಾಕರದ ಉರುಪಾರಮಂ ಎಯ್ದುಗುಂ' (=ಶ್ರೇಷ್ಠ ಗುಣಗಳಿಂದ ಕೂಡಿದ ಕಾವ್ಯವೆಂಬ ಸಾಗರದ ಅಥವಾ ಕಾವ್ಯರತ್ನಗಳಿಂದ ತುಂಬಿದ ಸಾಗರದ ಮಹಾ ತೀರವನ್ನು ಮುಟ್ಟಬಲ್ಲನು]." (ಈ ಕವಿ, ನೃಪತುಂಗದೇವಮಾರ್ಗದ ಕಾವ್ಯ ಲಕ್ಷಣಗಳಿಗೆ ಅನುಗುಣವಾಗಿ ಮಹಾಕಾವ್ಯಗಳನ್ನು ರಚಿಸಬಲ್ಲವನು ಎಂದು ತಾತ್ಪರ್ಯ. ಮೇಲೆ ಹೇಳಿದ, 'ಲಕ್ಷಣಲಕ್ಷ್ಯಂ' ಎಂಬ ವಿಶೇಷಣಕ್ಕೆ ಇದು ವ್ಯಾಖ್ಯಾನದಂತಿದೆ).

ಪದ್ಯ ೨೩೧ : ಅನ್ವಯಾರ್ಥ : “ನಿರವದ್ಯಾನ್ವಯಂ (=ದೋಷರಹಿತವಾದ ವಂಶವುಳ್ಳ ಎಂದರೆ ಕರ್ತೃತ್ವವುಳ್ಳ), ಉದ್ಘಂ (=ಶ್ರೇಷ್ಠವಾದ), ಉದ್ಧತ ಮಹಾಕ್ಷೀರಾಬ್ಧಿ ಡಿಂಡೀರ ಪಾಂಡುರಂ (=ಮಹಾಕ್ಷೀರ ಸಾಗರದಲ್ಲಿ ಮೇಲಕ್ಕೆದ್ದ ತೆರೆನೊರೆಯಂತೆ ಬೆಳ್ಳಗಿರುವ], ಆಕ್ರಾಂತ ಸುಶೈಲ ಸಾಗರ ಧರಾಶಾಚಕ್ರವಾಳಾಂಬರಂ (=ಪರ್ವತ, ಸಾಗರ, ಭೂಮಿ, ದಿಗಂತದ ಮಂಡಲ, ಅಂತರಿಕ್ಷ—ಇವನ್ನೆಲ್ಲಾ ಆಕ್ರಮಿಸಿಕೊಂಡಿರುವ), ಸ್ತ್ರೀಬಾಲ ವೃದ್ಧಾಹಿತಂ (=ಸ್ತ್ರೀಯರು, ಬಾಲಕರು, ವೃದ್ಧರು—ಇವರಿಂದ ಅಂಗೀಕೃತವಾದ, ಎಂದರೆ ಸಮಸ್ತ ಜನರ ಅನುಮೋದನೆಯನ್ನು ಪಡೆದ), ಪರಮ ಶ್ರೀವಿಜಯ ಪ್ರಭೂತಿಜ ಯಶಂ (=ಪರಮ ಶ್ರೀವಿಜಯನಿಂದ ರಚಿತವಾದ ಈ ಕೃತಿಯ, ಎಂದರೆ ‘ಕವಿರಾಜಮಾರ್ಗ’ದ, ಕೀರ್ತಿ), ಪರಮಾನಂದಿತ ಲೋಕಮೊಪ್ಪೆ (=ಅತ್ಯಂತ ಆನಂದವನ್ನು ಪಡೆದ ಲೋಕವು ಒಪ್ಪಿಕೊಳ್ಳಲು, ಮೆಚ್ಚಿಕೊಳ್ಳುವಂತೆ), ಆಚಂದ್ರತಾರಂಬರಂ (=ಚಂದ್ರನೂ ನಕ್ಷತ್ರಗಳೂ ಇರುವವರೆಗೆ),) ನೆಲೆಗೊಳ್ಗೆ (=ನೆಲೆಗೊಳ್ಳಲಿ, ಸ್ಥಿರವಾಗಿರಲಿ).”

(ಅನುಬಂಧ-೧)

ಪ್ರಾಸವಿಚಾರ: ಅಧಿಕಪಾಠ

[ಪದ್ಯ II—೩೧ರಲ್ಲಿ ‘ಇಂತಾಱು ತೆಱಂ’, ‘ಪ್ರಾಸಗಳು ಆರು ಬಗೆ’, ಎಂದು ಸ್ಪಷ್ಟವಾಗಿ ಹೇಳಿರುವುದರಿಂದ, ಇಲ್ಲಿ ಕೊಟ್ಟಿರುವ ಹೆಚ್ಚಿನ ನಾಲ್ಕು ಬಗೆಯ ಪ್ರಾಸವಿಷಯಕ ಪದ್ಯಗಳು ಅನ್ಯಕವಿ ಕರ್ತೃಕ ಎಂಬಲ್ಲಿ ಸಂದೇಹವಿಲ್ಲ. ಇದು ಹೇಗಾದರೂ ಇರಲಿ. ಲಕ್ಷ್ಯಪದ್ಯಗಳು ಚಮತ್ಕಾರದಿಂದ ಕೂಡಿದ್ದು, ಮನೋಹರವಾಗಿವೆ.

೨. ಅನುಬಂಧದ ೩ನೆಯ ಪದ್ಯದಲ್ಲಿನ ‘ನಾಸಿಕಮುಡ್ಡಂ ಬಂದಂದವು ನೀಕ್ಷಿಸಿ’ ಎಂಬ ಪದ್ಯಭಾಗವು ‘ಶಬ್ದಮಣಿ ದರ್ಪಣ’ದ ೧೦೪ನೆಯ ಸೂತ್ರಕ್ಕೆ

(ಪರಿಷತ್ತಿನ ಮುದ್ರಣ, ಪು. ೯೧; ಪ್ರೊ|| ಡಿ. ಎಲ್. ನರಸಿಂಹಾಚಾರ್ಯರು ಸಂಪಾದಿಸಿರುವ ಮುದ್ರಣದ ದ್ವಿತೀಯಾವೃತ್ತಿಯಲ್ಲಿ ಸೂತ್ರ ಸಂಖ್ಯೆ ೧೧೪, ಪು. ೧೨೧) ಪ್ರಯೋಗವೆಂದು ಉದಾಹೃತವಾಗಿದೆ. ಉದಾಹೃತ ವಾಕ್ಯವು 'ಶಬ್ದಮಣಿದರ್ಪಣ'ದ ಮೂರು ಮುದ್ರಣಗಳ ಪ್ರತಿಗಳಲ್ಲಿಯೂ 'ನಾಸಿಕವಡ್ಡಂ...' ಎಂದಿದೆ; 'ಆ ಮತ್ವಕ್ಕುಚ್ಚರಿಪರ್ ವತ್ವಮನರೆಬರ್' ಎಂಬ ನಿಯಮಕ್ಕೆ ಅನುಗುಣವಾಗಿಯೇ ಇದೆ ಈ ಪ್ರಯೋಗ. 'ಕವಿರಾಜಮಾರ್ಗ'ದ ಎಲ್ಲ ಮುದ್ರಿತ ಪ್ರತಿಗಳಲ್ಲಿಯೂ 'ನಾಸಿಕಮಡ್ಡಂ...' ಎಂದೇ ಇದೆ. "...ಪ್ರಯೋಗ ಪದ್ಯ ಭಾಗಗಳು ಮೂಲತಃ ಕೇಶಿರಾಜನು ಬರೆದಿದ್ದ ರೂಪದಲ್ಲಿಯೇ ಇನ್ನೂ ಉಳಿದಿವೆಯೆಂದು ಹೇಳಬೇಕಾಗುತ್ತದೆ. ಕೇಶಿರಾಜನ ಸ್ವಹಸ್ತಪ್ರತಿಯ ಪ್ರತಿಬಿಂಬ ಬಹುಶಃ ಇಲ್ಲಿ ನೆಲಸಿದೆ; ಇಡೀ ಪ್ರಯೋಗಗಳಲ್ಲಿ ಅಲ್ಲ" ಎಂಬ ಪ್ರೊ|| ನರಸಿಂಹಾಚಾರ್ಯರ ಹೇಳಿಕೆಯನ್ನು ಆಧರಿಸಿ ಹೇಳುವುದಾದರೆ, ಕೇಶಿರಾಜನು ಬಳಸಿಕೊಂಡಿರುವ 'ಕವಿರಾಜಮಾರ್ಗ'ದ ಪ್ರತಿಯಲ್ಲಿ 'ನಾಸಿಕವಡ್ಡಂ...' ಎಂಬ ಪಾಠವೇ ಇದ್ದಿರಬೇಕು ಎಂದು ಊಹೆ ಮಾಡಬಹುದಲ್ಲದೆ, ಆ ಪ್ರತಿಯಲ್ಲಿಯೂ ಈ ಹೆಚ್ಚಿನ ಪ್ರಾಸವಿಷಯಕ ಪದ್ಯಗಳು ಇದ್ದಿರಬೇಕು ಎಂದು ಧಾರಾಳವಾಗಿ ಊಹೆ ಮಾಡಬಹುದು. ಎಂದಮೇಲೆ, ಅನ್ಯಕರ್ತೃಕವೆಂದು ಊಹಿಸಬಹುದಾದ ಈ ಪದ್ಯಗಳು ಕೇಶಿರಾಜನಿಗಿಂತ ಹಿಂದೆಯೇ ಯಾವುದೋ ಒಂದು 'ಕವಿರಾಜಮಾರ್ಗ ಪ್ರತಿ'ಯಲ್ಲಿ ಸೇರ್ಪಡೆಯಾಗಿರಬೇಕು.

೩. ಪ್ರೊ|| ಡಿ. ಕೆ. ಭೀಮಸೇನರಾಯರು ತಮಗೆ ದೊರೆತ 'ಶಬ್ದಮಣಿದರ್ಪಣ'ದ 'ಹೊಸ ಪ್ರತಿ' ಬಹುಶಃ ಪ್ರಾಚೀನತಮವೆಂದು ಅಭಿಪ್ರಾಯಪಟ್ಟಿದ್ದಾರೆ. ಆ ಪ್ರತಿಯಲ್ಲಿ ಉಲ್ಲೇಖಗೊಂಡಿರುವ 'ಕವಿರಾಜಮಾರ್ಗ'ದ ಹಲವಾರು ಪದ್ಯಗಳಲ್ಲಿ ಪ್ರಾಸವಿಚಾರದ ಲಕ್ಷ್ಯಲಕ್ಷಣ ಪದ್ಯಗಳೂ ಸೇರಿವೆ. ಇವು ಕೂಡ ಷಟ್‌ಪ್ರಾಸಕ್ಕೆ ಸಂಬಂಧಪಟ್ಟುವೇ ಹೊರತು, ಈ ಹೆಚ್ಚಿನ ಪ್ರಾಸವಿಷಯದ ಪ್ರಾಸ್ತಾವ ಆ ಪ್ರತಿಯಲ್ಲಿ ಇಲ್ಲ. ಎಂದಮೇಲೆ, 'ಶಬ್ದಮಣಿದರ್ಪಣ'ದ ಈ ಪ್ರತಿಯ ವ್ಯಾಖ್ಯಾನಕಾರನು ಬಳಸಿಕೊಂಡಿರುವ 'ಕವಿರಾಜಮಾರ್ಗ'ದ ಪ್ರತಿಯಲ್ಲಿ ಈ ಹೆಚ್ಚಿನ ಪದ್ಯಗಳು ಬಹುಶಃ ಇದ್ದಿರಲಾರವು ಎಂದು ಊಹಿಸಬಹುದು.

೪. 'ನಾಸಿಕವಡ್ಡಂ...' ಎಂಬ ಪದ್ಯಭಾಗವು 'ಶಬ್ದಮಣಿದರ್ಪಣ'ದ ಪಾಠಪರಿಷ್ಕರಣ ಕಾರ್ಯದಲ್ಲಿ ತಾವು ಬಳಸಿಕೊಂಡಿರುವ (ಕ) ಪ್ರತಿಯಲ್ಲಿ ಇಲ್ಲ ಎಂದು ಪ್ರೊ|| ನರಸಿಂಹಾಚಾರ್ಯರು ಅಡಿ ಟಿಪ್ಪಣಿಯಲ್ಲಿ ಸೂಚಿಸಿರುತ್ತಾರೆ. (ಪು. ೧೨೧).

ಮೇಲ್ಕಂಡ ಅಂಶಗಳಿಂದ, (೧) ಷಟ್‌ಪ್ರಾಸ ವಿಚಾರವನ್ನು ಮಾತ್ರ ಬಳಗೊಂಡ 'ಕವಿರಾಜಮಾರ್ಗ'ದ ಒಂದು ಪಾಠ ಸಂಪ್ರದಾಯವೂ; (೨) ಗ್ರಂಥದ

ಕೊನೆಯಲ್ಲಿ ಪ್ರಾಸವಿಷಯಕವಾದ ಹೆಚ್ಚಿನ ಪದ್ಯಗಳುಳ್ಳ ಇನ್ನೊಂದು ಪಾಠ ಸಂಪ್ರದಾಯವೂ ಇದ್ದುವೆಂದು ಸಿದ್ಧವಾಗುತ್ತದೆ.

ಇವೆರಡರಲ್ಲಿ, ಮೊದಲನೆಯ ಪಾಠಸಂಪ್ರದಾಯವು ಪ್ರಾಚೀನತರವೆಂದೂ, ಅದ್ದರಿಂದ, ಹೆಚ್ಚು ಶುದ್ಧವಾದುದೆಂದೂ ಊಹಿಸಬಹುದು. ಈಗ ಮುದ್ರಿತವಾಗಿರುವ ಎರಡು ಮುದ್ರಣಗಳ ಪಾಠಗಳಿಗೂ ಎರಡನೆಯ ಸಂಪ್ರದಾಯದ ಪಾಠವುಳ್ಳ ಪ್ರತಿಗಳೇ ಆಧಾರವಾಗಿವೆ. ಮೊದಲನೆಯ ಪಾಠ ಸಂಪ್ರದಾಯದ ಪ್ರತಿ ಒಂದಾದರೂ ದೊರಕಿದರೆ, ಗ್ರಂಥಪಾಠಪರಿಷ್ಕರಣ ಕಾರ್ಯಕ್ಕೆ ಹೆಚ್ಚಿನ ನೆರವಾಗುವುದರಲ್ಲಿ ಸಂದೇಹವಿಲ್ಲ.]

ಪದ್ಯ ೧:—ದ್ವಿಪ್ರಾಸ, ದ್ವಂದ್ವಪ್ರಾಸ, ತ್ರಿಪ್ರಾಸ, ಅಂತಾದಿಪ್ರಾಸ—ಇವುಗಳ ಹೆಸರು ಹೇಳಿದೆಯೇ ಹೊರತು, ಲಕ್ಷಣವನ್ನು ವಿವರಿಸಿಲ್ಲ. ಲಕ್ಷಣವನ್ನು ಲಕ್ಷ್ಯಗಳಿಂದ ಸುಲಭವಾಗಿ ಅರಿತುಕೊಳ್ಳಬಹುದು. 'ಬೇಱೆ ನಾಲ್ಕು ತೆಱನಾಗಿರ್ಕುಂ' ಎಂಬ ಮಾತಿನಿಂದ, ಈ ಪದ್ಯಗಳ ಕವಿ, ಮಾರ್ಗಕಾರನು ಹೇಳಿರುವ ಷಟ್ಪ್ರಾಸಕ್ಕೆ ಪೂರಕವಾಗಿ ಈ ನಾಲ್ಕರ ವಿಚಾರವನ್ನು ಹೇಳುತ್ತಿದ್ದಾನೆಂಬುದು ಸ್ಪಷ್ಟ.

ಪದ್ಯ ೨: ತಂದೆ ಅಥವಾ ಅನುಭವಿಕನಾದ ಹಿರಿಯನೊಬ್ಬನು ಒಬ್ಬ ಹೆಣ್ಣುಮಗಳಿಗೆ ಹೇಳಿದ ಬುದ್ಧಿವಾದ:

"ಎಲೆ ಮಗಳೇ, ನೀನು ಅರಸಿಯ ಹಾಗೆ (=ರಾಣಿಯ ಹಾಗೆ) ಅರಸರೊಂದಿಗೆ (ಶ್ಲೇಷಾರ್ಥ: ೧. ರಾಜರೊಂದಿಗೆ; ೨. ರಸಿಕರಲ್ಲದವರೊಂದಿಗೆ) ಸರಸವಾಡುತ್ತಿರುವೆ. ಇದು ನಿನಗೆ ಗುಣವಲ್ಲ. ಅರಸರು (೧. ರಾಜರು, ೨. ಅರಸಿಕರು) ಸರಸವನ್ನು ಅರ್ಥಮಾಡಿಕೊಳ್ಳಬಲ್ಲರೆ? ಅರಸರಲ್ಲದವರೊಡನೆ (೧. ರಾಜರಲ್ಲದವರೊಡನೆ, ೨. ರಸಿಕರೊಡನೆ) ಸರಸವಾಡು."

ಪದ್ಯ ೩: ಇದರಲ್ಲಿ ಒಬ್ಬ ಸುಂದರಿಯ ಕಟಾಕ್ಷವೀಕ್ಷಣದ ಚಾಂಚಲ್ಯ ವೈಖರಿಯನ್ನು ವರ್ಣಿಸಿದೆ:

"ಅವಳ ನೀಳವಾದ ಎಸಳುಗಣ್ಣುಗಳು ಬಹು ಚೆಲುವಾಗಿದ್ದುವು. ಒಂದು ಕಣ್ಣು ಇನ್ನೊಂದರ ಚೆಲುವನ್ನು ನೋಡಬಯಸಿ ಪ್ರಯತ್ನಿಸಿ

ದಾಗ, ಹಾಳು ಮೂಗು ಅಡ್ಡ ನಿಲ್ಲುತ್ತಿತ್ತು. ಇದನ್ನು ಕಂಡು, ಆ ಕಣ್ಣುಗಳು (ಯತ್ನವಿಲ್ಲದೆ) ಹಿಂದಕ್ಕೆ ಸರಿದು ನೋಡುತ್ತಿದ್ದುವು." ಪದ್ಯದ ಧ್ವನಿತಾರ್ಥವು ಇಲ್ಲಿ ಮುಖ್ಯವಾಗಿದ್ದು, ಸೊಗಸಾಗಿದೆ.

ಪದ್ಯ ೪: ಮುನಿಸು ತಿಳಿದ ನಲ್ಲೆ ನಲ್ಲನ ಪ್ರೇಮ ಪ್ರಕಟನೆಯನ್ನು ನೆನೆದು ಹೇಳುವ ಮಾತು:

"ನಲ್ಲನು ನನ್ನನ್ನು ಮಾತನಾಡಿಸಿದನು; ನನ್ನ ಮನಸ್ಸಿನ ವ್ಯಥೆಯನ್ನು ಹೋಗಲಾಡಿಸಿದನು; ಪ್ರೀತಿಯಿಂದ ಒಳ್ಳೆಯ ಒಳ ಉಡೆಯನ್ನು =ಉಳ್ಳುಡೆ (ಮೇಲಿನದರ ಒಳಗಡೆ ಉಡುವ ವಸ್ತ್ರ) ಉಡಿಸಿದನು; ಪ್ರಸಿದ್ಧವಾದ ರತ್ನಖಚಿತವಾದ ಒಡವೆಗಳನ್ನು ತೊಡಿಸಿದನು."

ಪದ್ಯ ೫; "ತಾರಾಪತಿವತ್ ಕೀರ್ತಿವಿಹಾರಾ [=ಚಂದ್ರನಂತಹ (ಎಂದರೆ, ಚಂದ್ರನ ಬೆಳುದಿಂಗಳಂತೆ ಬೆಳ್ಳಗಿರುವ) ಕೀರ್ತಿಯನ್ನು ಪಡೆದು ಅದರಲ್ಲಿ ನಲಿಯುವವನು]; [87] [ಹಾರಾ][87] ಪ್ರಭಯಾನಿಜತನು ಪೂರಾ (=ತನ್ನ ದೇಹದ ಮೇಲೆ ಹಾರದ ಕಾಂತಿಯ ಪ್ರವಾಹವುಳ್ಳವನು); ಪೂರಾಶ್ರಿತ ಹೃತ್ಕ್ಲೇಶ ವಿದೂರಾ (=ಆ ಕಾಂತಿ ಪ್ರವಾಹವನ್ನು ಆಶ್ರಯಿಸಿಕೊಂಡಿರುವ ಹೃದಯದ ನೋವನ್ನು ದೂರಮಾಡಿಕೊಂಡಿರುವವನು, ಎಂದರೆ, ತನ್ನ ಹೃದಯದ ನೋವನ್ನೆಲ್ಲಾ ಆ ಪಾರ ಕೀರ್ತಿಯಲ್ಲಿ ಮರೆತಿರುವವನು); ದೂರಾವೃತಬಲವಿಸ್ತಾರಾ (=ಬಲು ದೂರದವರೆಗೆ ವಿಸ್ತಾರವಾಗಿ ಹರಡಿರುವ ಬಲವುಳ್ಳವನು)."

---

87 ಪಾಠಕರ ಪ್ರತಿಯಲ್ಲಿ ಈ ಪದ ಲುಪ್ತವಾಗಿದೆ. ಮದ್ರಾಸು ಪ್ರತಿಯ ಸಂಪಾದಕರು [ಹಾರ] ಎಂದು ತಿದ್ದುಪಡಿಯನ್ನು ಸೂಚಿಸಿದ್ದಾರೆ. ಪ್ರಾಸಲಕ್ಷಣಕ್ಕೆ ಹೊಂದುವಂತೆ [ಹಾರಾ] ಎಂದು ನಾವು ತಿದ್ದುಪಡಿಯನ್ನು ಸ್ವಲ್ಪ ಮಾರ್ಪಡಿಸಿದ್ದೇವೆ. ಆದರೆ, 'ಹಾರಾ' ಎಂಬುದು ಅಶುದ್ಧರೂಪ.

ಅನುಬಂಧ-೩

ಪದ್ಯಗಳ ಅಕಾರಾದಿ

(ಮೊದಲನೆಯ ಅಂಕಿ ಪದ್ಯವನ್ನೂ ಎರಡನೆಯ ಅಂಕಿ ಪುಟವನ್ನೂ ಸೂಚಿಸುತ್ತದೆ)

ಅ

ಅಜೇಯಂ ಪೋಲ್ಕುಮಾ ಮತ್ತಗಜಂ ೧೩೪-೬೨
ಅತಿಧವಳಮಾಯ್ತು ಗುಣಸಂತ ೧೫೫-೧೦೦
ಅತಿವಿಶದ ಯಶೋವೃತ್ತಂ ೪೪-೪೬
ಅತಿಶಯ ಧವಳಧರಾಧಿಪ ಮತದಿಂ ೧೧-೭೧
ಅತಿಶಯ ಧವಳೋರ್ವಿಪನೀತಿಮಾರ್ಗೋ ೧೫೩-೬೬
ಅತಿಶಯ ಧವಳೋರ್ವಿಪೋದಿತಾ ೧೪೮-೩೭
ಅತಿಶಯ ಪ್ರತಿಭಾವಿಭವಂ ೨೧೯-೧೧೩
ಅತಿಶಯಮಾಗಿರೆ ಗುಣಸಂತತಿ ೧೬೦-೧೦೧
ಅತಿಶಯಮಿತಿಹಾಸೋಪಾಶ್ರಯಂ ೨೦೯-೧೧೧
ಅತಿಶಯಿತ ವಿಸ್ತುವಿಷಯ ೧೮೨-೧೦೫
ಅದಱಿಂದಲಸದೆ ಪೀನಂ ೪೪-೧೨
ಅದಱಿಂ ಪರಮಾಗಮಕೋ ೯-೫
ಅದಱೊಳಗಂ ಕಿಸುವೊಟಿಲಾ ೩೭-೧೦
ಅಧಿಕೃತ ಸತ್ಪುರುಷಾರ್ಥ ೨೦-೭
ಅನಲನಸಾಧ್ಯಾಕಳಂಕಮುನನಿಳ ೪೮-೭೮
ಅನುಗತಂ ಪೂರ್ವಕವಿಗಳ್ ನೆನೆದಿನ್ನುಂ ೧೪೩-೬೪
ಅನುಪಮನಂ ಬರಿಪ್ಪೆನನುರಾಗದೆ ೧೦೬-೫೮
ಅಂತಧಿಕ ವಿಶೇಷಣಗಣಮಂ ೨೯-೪೩
ಅಂತುಂ ಪುರಾಣ ಕವಿಗಳ ೪೭-೧೨
ಅಂತು ಬಿಡ್ದು ತೆಱದಿಂ ವರಗೀತ ೨೨೪-೧೧೪
ಅಂತುಂ ಭೇದಮನಿನಿಸಾರ್ಪಂತು ೫೧-೪೭
ಅಂತುಂ ಯತಿಯುಂ ಪೇಟ್ಗಾ ೭೭-೧೮
ಅನ್ನೆಗಮುದಱೊಳಗೆಸಮು ೩-೩೭
ಅಪರಾಗಂ ಮುನಿಪತಿವೋಲಪಗತ ೧೫೭-೧೦೦
ಅಪರಿಮೇಯಮೆ ದೋಷಗುಣ ೧೪೩-೩೧
ಅಮದಾಲಸಲೋಚನಲೀಲ ೪೭-೭೮
ಅಮರಾಧಿರಾಜ ಹುತವಹ ಯಮ ೯೬-೮೮
ಅಮಳಿನ ಗುಣವೃತ್ತಿಗಳಿಂ ಸಮು ೧೪೨-೯೭
ಅಮೃತಘನಂ ಶಿಶಿರಕರಂ ಕಮಳಂ ೭೪-೮೪
ಅಮೃತಮಯಕಿರಣನೆಂಬುದು ೧೮೩-೧೦೫
ಅರಮರಸಂ ಕೃತಕಾದ್ರಿಯೊಳ್ ೯೯-೨೩
ಅರವಿಂದೋತ್ಪಲ ಪುಷ್ಪೋತ್ಕರ ೬೫-೫೦
ಅರಸಿಯ ದಿವ್ಯಸೇನಾದರದಿರದೀ ೧೪೧-೬೩
ಅರಸುಕುಮಾರನನಾಯತ ೫೯-೧೫
ಅರಿಗೆ ದುರಾಹವರಾಂಗಾಂತರದೊ ೧೫೯-೧೦೧
ಅರಿಗೋತ್ರಭೇದಿನಿಬುಧೇಶ್ವರನಲ್ಲಂ ೧೧೨-೯೧
ಅರಿದಾದಂ ಕನ್ನಡದೊ ೪೨-೧೧
ಅರಿನೃಪಬಲಮುಂ ಗೆಲ್ದುರು ೮೨-೧೯
ಅರೆಮುಚ್ಚಿ ಕಣ್ಗಳಂ ವನಕರಿ ಮೆಲ್ಲದೆ ೮-೭೦
ಅಱಿದು ಪೀನಂ ಮಾರ್ಗಗತಿಯುಂ ೪೬-೪೬

ಅಱಿವುಳ್ಳವರೊಳ್ ಬೆರಸದುದ ೧೬೫-೧೦೨
ಅಲಘುಭುಜನಾಗಿಯುಂ ನಿಶ್ಚಲ ೪೩-೭೭
ಅಲರಂಬು ಕರ್ಬುವಿಲ್ ಕೋಮಲ ೧೨೯-೯೩
ಅವಗುಣಮಿನಿತಾದೊಡಮಾ ೪೩-೧೧
ಅವನಾಮಕತ್ವಕ್ಷುಚಯುಂ ೧೪೮-೬೫
ಅವಱ ವಿಪರ್ಯಯವೃತ್ತಿ ೫೫-೪೮
ಅವಱೊಳ್ ಶರೀರಮೆಂಬುದು ೨೪-೮
ಅಸಹಾಯ ಸಾಹಸ ವಿನೋದಿ ೨೨೯-೧೧೫
ಅಹರಹರುಚ್ಚೈರ್ನೀಚೈ ೫೨-೧೩
ಅಳಕಾನನ ನಯನಂಗಳಿನಳಿ ೫೦-೭೯
ಅಳಕಾನನ ನಯನಂಗಳೊಳ್ ೮೮-೨೦
ಅಳಿಗಳಿವು ಕಣ್ಗಳಲ್ತಿವು ನಳಿನ ೭೬-೮೪
ಅಳಿನಳಿನೋತ್ಪಳ ರುಚಿಗಳ ೮೯-೨೧
ಅಱಿದಱಿಪಿ ಬಱಿಯನುಱಿಯದೆ ೧೭೫-೧೦೪
ಅಱಿಪಿದವರುಂ ವಿಭೀತರು ೨೫-೪೨

ಆ

ಆ ಕಪಿಲ ಸುಗತ ಕಣಚರ ೧೦೫-೨೪
ಆಗಮ ಸಮಯ ನ್ಯಾಯವಿ ೭೦-೧೭
ಆಗಳುಂ ಗುರುಗಳಲ್ಲದ ತಾಣ ೧೨೭-೨೮
ಆದಿಪ್ರತೀತಿಯಿಂ ಶಬ್ದಾದರದಿಂ ೩೯-೭೭
ಆದಿಸ್ವರ ಪದಮುಂತದೊಳ್ ೧೬-೪೦
ಆಮಿಾಳನಮುಂ ಕಣ್ಗೊಳೊಳಾಮುನ ೯-೭೧
ಆಯುಂ ಶ್ರೀಯುಂ ವಿಜಯಮು ೨೦೬-೧೧೦
ಆರುಮಿಾ ಗುರುಲಘೂದಿತ ೧೨೬-೨೮
ಆರೂಢನಿಜಮನೋಹಂಕಾರೊ ೧೯೮-೧೦೮
ಆವುದು ಬಾಗಿದುದುಮಧಿಕಂ ೧೫೦-೬೫
ಆಶಾವಳಯಿತ ಲೋಕಾಕಾಶ ೯೪-೮೮

ಇ

ಇದಱ ವಿಪರ್ಯಯ ವಿವಿಧಾಸ್ಪದಾ ೭೨-೫೧
ಇದು ದಕ್ಷಿಣಮಾರ್ಗ ವಿಭೇದ ೬೨-೪೯
ಇದುದಲ್ ವರ್ಗಪ್ರಾಸಕ್ಕುದಾ ೩೯-೪೫
ಇದು ದಾಕ್ಷಿಣಾತ್ಯ ಕವಿಮಾರ್ಗ ೮೧-೫೩
ಇದು ನಿಬಿಡ ಶಿಥಿಲ ಬಂಧಾಸ್ಪದ ೬೬-೫೦
ಇದು ವಿದಿತ ವಿರುದ್ಧಾರ್ಥಕ್ಕೆ ೮೩-೧೯
ಇಂತಿಂತೆ ಪೇೞ್ವೊಡೆಲ್ಲಮನ್ ೧೧೧-೨೫
ಇಂತಿದನುಪ್ರಾಸಂ ಪಾದಾಂತ ೪೩-೯೫
ಇಂತಿದು ದಕ್ಷಿಣಮಾರ್ಗದ ಕಾಂತ ೬೮-೫೦
ಇಂತಿದು ಸಮಬಂಧ ದ್ವಿತ ೫೯-೪೯
ಇಂತಿರೆ ಮಾರ್ಗದ್ವಿತಿಯ ಗತಾಂತರ ೯೭-೫೬
ಇಂತು ಕಾರಕಂಗಳೊಳ್ ೧೨೫-೨೮
ಇಂತುದಿತ ಭೇದಮಂ ದೃಷ್ಟಾಂತಾ ೧೫-೩೯
ಇಂತುಪಮಾಕ್ರಮಮನಪರ್ಯಂತ ೯೦-೮೭
ಇಂತು ಪೇೞ್ದೊಡಿದು ಗೌರವ ೧೨೯-೨೯
ಇಂತು ಮಿಕ್ಕ ವರ್ಣನೆಗಳ್ ಸಂತ ೨೧೭-೧೧೨
ಇಂತು ವಿಶೇಷ್ಯಂ ಕ್ರಿಯೆಯುಂ ೯೪-೫೬
ಇಂದು ಕಿರಣಂಗಳಿಂದಂ ಚಂದನ ೧೬೪-೧೦೨
ಇಂನಂತೆ ಮತ್ತೆ ಬಱಿಮಿಗೆ ೧೩-೩೯
ಇಲ್ಲಿಗಿದು ತಕ್ಕುದಿಲ್ಲಿಗೆ ೪-೩೮
ಇವು ದುಷ್ಕರ ಕಾವ್ಯಂಗಳ್ ೧೧೩-೫೯

ಈ

ಈ ಕುಱುಪುಗಳಿಂದಱುವುದನೇಕ ೭೭-೫೨
ಈಕೆಯ ವದನಾಕಾರಮನೇಕಾಂತ ೬೭-೮೮

ಉ

ಉಕ್ತ ವಿಚಾರಂ ನ್ಯಾಯನಿ ೧೦೬-೨೪

ಉತ್ಸವದಿಂದೆ ಹಾಸ್ಯರಸಮಾ ೧೦೦-೫೭
ಉದಯಾರೂಢಂ ಕಾಂತ್ಯಾಸ್ಪದನ ೧೦೯-೯೧
ಉಪಮಿತಭೇದೋಕ್ತಿ ಕ್ರಮ ೯೮-೮೮
ಉಪಮಿತಾಕ್ಷರಮೆಲ್ಲಿಯುಂ ೧೪೬-೩೨
ಉರುಪಿತ್ತಶೋಕಪಲ್ಲವ ೩೭-೭೬

ಎ

ಎಂದಿಂತೀ ಗ್ರಾಮ್ಯೋಕ್ತಿಯೊಳೊಂದಾಗಿ ೮೪-೫೪
ಎಂದಿಂತು ಪೇೞ್ದ ಮಾಱ್ಕೆಯೊಳ್ ೯೦-೫೫, ೧೯-೪೧
ಎಂದಿಂತು ಸಮಾಸೋಕ್ತಿಯೊಳ್ ೬೧-೧೫
ಎಂದಿಂತು ಸಮೀಪ ಪ್ರಾಸಂ ೬೧-೪೫
ಎಂಬುದು ವಿನುತ ಪ್ರಾಸಂ ೩೪-೪೪

ಒ

ಒಂದಂ ಕ್ರಿಯಾ ವಿಶೇಷಣ ೯-೩೯
ಒಂದಱ ಮಾತುಗಳಂ ಪೆಱ ೭೩-೫೧
ಒಂದೊಂದಱೊಳೊಂದದುವಂ ೧೩೪-೯೬
ಒಸೆಗೆ ಮೇಣ್ ಮುನಿಗೆ ೧೩೫-೩೦
ಒಳಗಿರ್ದ ವೈರಿಗಳ್ ಮೊಕ್ಕಳ ೧೪೯-೯೯

ಕ

ಕಂದಂಗಳ್ ಪಲವಾಗಿರೆ ೩೫-೧೦
ಕಂದಮುಮಮಳಿನ ವೃತ್ತಮು ೩೪-೧೦
ಕಮಲಾಕರದೊಳ್ ಸಂಕೋಚ ೧೯-೭೩
ಕಮಳಮಿದನ್ನೆಗಮೀ ನಿನ್ನ ೬೫-೮೨
ಕಮಳಮಿದು ನಿನ್ನ ಮುಖದಂತೆ ೬೩-೮೧
ಕಮಳಂ ಲಲಿತ ಭ್ರೂವಿಭ್ರಮ ೬೮-೮೨
ಕಮಳವಿಮೋಹದಿನೀ ನಿನ್ನ ೬೯-೮೩
ಕರಚರಣ ಶರೀರ ಶಿರೋದರ ೪೭-೪೬
ಕರೆಕರೆದು ಮನೋಧೃತಿಯಂ ೧೯೧-೧೦೭
ಕವಿಗಳುಮನಾದಿ ಲೋಕೋದ್ಭವರ್ ೪೯-೪೭
ಕವಿಭಾವ ಕೃತಾನೇಕ ೨೨-೭
ಕಸವರಮೆಂಬುದ ನೆಱೆ ಸೈ ೧೭೬-೧೦೪
ಕೞಿಪಂ ತಂದು ನಿಂಕಮಿಂ ೧೩೧-೬೨
ಕಾಣನೇಗೆಯ್ದುಂ ತನ್ನ ದೋಷಮಂ ೪೫-೧೨
ಕಾರಕದೋಷಮುಂ ವಚನ ೧೧೩-೨೫
ಕಾರಕಮಂ ಕ್ರಿಯೆಯುಮನಱ ೮೭-೫೪
ಕಾರಕಮಾಱು ಕರ್ಮಕರಣಾದಿಕ ೧೧೪-೨೬
ಕಾರಣಮನಱಪೆ ನಿಜಸಂಸ್ಕಾರ ೧೬೮-೧೦೨
ಕಾರಣಮಾಗಿರ್ಪುದಳಂಕಾರಂ ೧೬೩-೧೦೧
ಕಾಲಮಹೋರಾತ್ರಾದಿಕಮ್ ೧೦೮-೨೪
ಕಾವೇರಿಯಿಂದಮಾ ಗೋದಾವರಿ ೩೬-೧೦
ಕಿಡಿಪಂ ಬಾರಗೇ ಮೆಯ್ಯಂ ೧೨೩-೬೧
ಕಿಱಿದೆಂದೇಳಿಸಿ ಪಗೆಯಂ ಪಱ ೧೪೯-೯೮
ಕುದುರೆ ತಗುಳ್ದುವಾದೆಸೆ ೧೨೦-೨೭
ಕುಮುದಾನಂದನಕರವತಿ ೨೧-೭೩
ಕುಱಿಗೊಂಡು ನೆಗೞ್ದನಿಚ್ಛೆಯ ೧೫೧-೯೯
ಕುಱಿತಂತು ಪೆಱರ ಬಗೆಯಂ ೧೫-೬
ಕುಱಿತಂತೆ ಪೇೞ್ದ ನಾಲ್ಕುಂ ೬೭-೧೬
ಕುಱಿತಂತೆ ಪೇೞ್ದ ಪದದೊಳ್ ೧೦೧-೨೩
ಕುಱಿತವರಲ್ಲದೆ ಮತ್ತಂ ೩೯-೧೧
ಕುಱಿತು ಸಮುಚ್ಚಯದಾ ೧೩೭-೩೦
ಕುಲಗಿರಿಯುಯರ್ ಗೌರವದಿಂ ೨೦-೭೩
ಕುಲಜನೀತನೆ ಪಂಡಿತನೀತನು ೧೩೯-೩೧
ಕುಲಜನುಮಲ್ಲಂ ನಣ್ಪಿನ ಬಲ ೧೭೨-೧೦೩
ಕುಲಜಾತಿದೇಶವಿಶದಂ ೨೨೬-೧೧೪

ಕುಸುಮಂಗಳೆಂಬ ಮಾತದು ಪುಸಿ ೧೮೪-೧೦೬
ಕುಸುಮಂ ಸ್ಮಿತಮಳಿನಯನಂ ೧೪-೬೨
ಕೊಡೆ ಪೇಟ್ದನುತ ಕಾವ್ಯಮು ೨೨೩-೧೧೩
ಕೃತಕೃತ್ಯಮಲ್ಲನಪ್ರತಿ ೨-೩
ಕೆಳದಿಯನಭಿಮತಮುಮನ್ ೧೩೩-೯೫
ಕೇಡಡಸಿದಂದು ಬಗೆಯುಂ ೬೨-೧೭
ಕೇಡಡಸಿದೊಡಂ ಬಗೆಯಂ ೭೪-೧೮
ಕೊಂದು ಜಟಾಯುವನಾತಂ ೧೯೪-೧೦೮
ಕೊಲ್ಲೆಂ ಬಿಸುಡಾಯುಧಮುಂ ೧೯೯-೧೦೯
ಕೊಳದಂತಂಬರಮತಿ ನಿರ್ಮಳ ೮೮-೮೬
ಕ್ಷಿತಿಪತಿಯಂ ಬರಿಸಿ ಜಗ ೮-೩೮

ಗ

ಗಣಿದದೊಳೊಂದಿ ಬರ್ಪ ೧೨೨-೨೭
ಗತಪ್ರತ್ಯಾಗತೋಪಾತ್ತ ಚತುಷ್ಟ ೧೯೯-೬೦
ಗಱಯಿಸಿದರ್ಥಂ ಸಲೆ ಪಾಂ ೫-೩೮
ಗುಣಜಾತ್ಯಾದಿಗಳಿಂದೊರೆಯೆ ೧೫೪-೧೦೦
ಗುಣಜಾತ್ಯಾದಿಗಳೊಳಗನುಗುಣ ೧೨೦-೯೩
ಗುಣದೊಳಮಱಪುವುದಿನಿಸವ ೧೭೦-೧೧೩
ಗುಣದೋಷಾದಿಗಳಿಂದನುಗುಣ ೧೪೧-೯೭
ಗುಣಮಿದು ದೋಷಮಿದೆಂಬೀ ೮-೪
ಗುಣಯುತನಪ್ಪನಂ ಸುಭಟ ೧೨೩-೨೭
ಗುರುಜನದ ಪರಕೆಯುಂ ಬಂಧು ೨೦೪-೧೧೦
ಗುರುಲಘು ವಿನ್ಯಾಸ ಕ್ರಮ ೯೨-೨೧
ಗೈರಿಕ ರಸಾದ್ರ್ರಮುಂ ಸಿಂಧೂರ ೯೨-೮೭
ಗೋಪಾಳ ಬಾಳ ಲಲನಾಚಾಪ ೮೨-೫೩
ಗೋಮೂತ್ರಿಕಂ ಸಯಮುಕಂ ೧೧೨-೫೯

ಘ

ಘನಮೆರಡನೆಯದಜೊಳ್ ೧೫-೪೦
ಘನಸ್ತನಿತಮುಂ ಕೇಕೀಸ್ವನಮುಂ ೧೦೦-೬೨

ಚ

ಚಲದೆಡೆಗೆ ಪಿರಿದು ರಜಮುಂ ೧೭೪-೧೦೪
ಚಾರುಶ್ರೀನೃಪತುಂಗವಿ ೨-೩೭
ಚ್ಯುತಯಾಥಾಸಂಖ್ಯಾರ್ಥ ೮೭-೨೦

ಛ

ಛಂದಕ್ಕೆ ಬಾರದೆಂದಱದು ೯೫-೨೨

ಜ

ಜಡಜನಮುಮೆಲ್ಲವೋದಂ ೧೦-೫
ಜನಪತಿಗೆ ಒಸಗೆಯಂ ೯೬-೨೨
ಜನಮುಱಯದನ್ನೆಗಂ ಮುನ್ನಂ ೧೪೩-೯೭
ಜನವಿನುತನನಘನನುಪಮ ೪೨-೪೫
ಜನಿತ ಪ್ರಗಲ್ಭದೊಳ್ ಮಾನ ೮೧-೮೫
ಜನಿತ ವಿಭಾಗಂಗಳ್ ವಾಙ್ಮನ ೫೦-೪೭
ಜಲದದ ನೆಱಲುಂ ಪರಪುಂ ೯೭-೮೮
ಜಲದಾಗಮದಿಂ ಚಿತ್ತಸ್ಖಲಿತಂ ೧೨೮-೬೧
ಜಲನಿಧಿಯಂ ಪಾಯ್ದೊರ್ವನೆ ೧೯೦-೧೦೭
ಜಲರಾಶಿಪ್ರಭವೆಯನವಿಕಲ ೧೬೧-೧೦೧
ಜಾಣರ್ಕಳಲ್ಲದವರುಂ ೪೦-೧೧
ಜಾತಿಕ್ರಿಯಾಗುಣದ್ರವ್ಯಾತಿಶಯ ೫೩-೭೯
ಜಾತಿವಿಭಾಗಮುಂ ಬಗೆದು ೧೯೯-೨೭
ಜಿನಚರಣನಖಾದರ್ಶಂ ೧೮-೬೨

ತ

ತಡವಡಿಸಿ ಯತಿಯನಿಂತಿರೆ ೬೩-೧೭
ತಡೆತಡೆದುಕಾಂತನಲ್ಲಿಗೆ ನಡೆಯಲ್ ೧೨೫-೯೪
ತರಳತರಲೋಚನಂ ನಿರ್ಭರರಾಗ ೧೬-೬೨
ತಱಸಂದಾ ಸಕ್ಕದಮುಮನ್ ೫೮-೧೪

ತೞಿಸಂದು ಪಲವು ತೆಱದಿಂ ತೆಱೆ ೧೧೪–೯೨
ತೞಿಸಂದು ಮನದೊಳೊಂದಂ ೧೨೬–೯೪
ತಲೆಸೂಡಿ ಮುನ್ನೆ ಕಜ್ಜದ ಫಲಮುಂ ೧೪೪–೯೮
ತಳಮುಳಗೊತ್ತುಂ ಜನಿತ ನಿಜಭೀತಿ ೧೫೧–೬೬
ತಳಮಿತಮಧ್ಯೆಯನಾಯತವಿ ೧೦–೭೧
ತಳಿರ್ಗಳವೋಲ್ ಮೆಲ್ಲಿದುವೀ ೬೧–೮೧
ತಾಮರೆಯುರಲೊಳ್ ಸರಸನಿಜಾಮೋದ ೧೨೭–೯೪
ತಾರಾ ಜಾನಕಿಯುಂ ಪೋಗಿ ೧೩೦–೬೨
ತಾಳತರುವಿತತಿಯೊಳ್ ಬೇತಾಳ ೧೯೩–೧೦೭
ತಿರಿತರ್ಕುಮುಮುಳಜಳನಿಧಿಪರಿಖಾ ೫೫–೮೦
ತಿರಿವುದದೊಂದು ಚಕ್ರದೊಳೆ ನಿಂದು ೧೪೬–೬೫
ತಿಳಿಗೊಳಗಳುಮುಮುಳಾಶಾವಳಯ ೧೬೭–೧೦೨
ತಿಳಿಗೊಳನಂ ಪೂಗೊಳನನದಂ ೧೩೮–೬೩
ತಿಳಿಪಲಡಿಗೆಱಗಿದೋಪನತಳಂ ೧೧೮–೯೨
ತೊಳಪೆಳವೆಱೆಯುಂ ಮೊರೆವಳಿ ೭೧–೫೧
ತ್ಯಾಗಾದಿಗುಣಗಣೋದಯಭಾಗಿ ೧೩೦–೯೫
ತ್ರಿದಶಗಣೇಶ ಮೌಳಿಮಣಿ ೧೮೯–೫೯
ತ್ರಿದಶಸುರಲೋಕಾವಾಸ ೮೫–೨೦

ದ

ದಾನಪರನಂ ನಿಜೋನ್ನತಮಾನ ೧೨೯–೯೫
ದಾರುದಾರುಣನಂ ದಾನವಾರಿ ೧೩೨–೬೨
ದಿನಕರ ಕರ ನಿಕರಂಗಳ್ ೬೭–೫೦
ದಿನನಾಯಕನಪರದಿಗಂಗನೆ ೩೪–೭೬
ದಿವಸಕರನುದಯಗಿರಿ ಶಿಖರ ೫೭–೮೦
ದಿವಿಜನೋ ಫಣಿನಾಯಕನೋ ೧೪೧–೩೧
ದೀನಾದೀನಾನಾದಿನಾದೀನಾನಿಂ ೧೨೬–೬೧
ದೀಪಕಮಾಜಾತ್ಯಾದಿ ನಿರೂಪಕ ೫೮–೮೦
ದೆಸೆಗಳ್ ವಿಶಾಲಮಾದುವು ೬೧–೪೯
ದೇವರುಂ ಗೊರವರುಂ ೧೩೨–೨೯
ದೇಶಂ ವರರಾಷ್ಟ್ರಾದಿ ನಿ ೧೧೦–೨೫
ದೊರೆಕೊಂಡಿರೆ ಸೊಗಯಿಸುಗುಂ ೫೦–೧೩
ದೊರೆಕೊಂಡು ಮನದ ಬಗೆಯುಂ ೨೦೫–೧೧೦
ದೊರೆಕೊಳೆ ನೋಡಿದನಾಯತ ೫೮–೪೮
ದೊರೆಕೊಳೆ ಪೇೞ್ದರ್ಥಮನಾ ೨೮–೭೪
ದೊರೆಕೊಳ್ವಂತಿರೆ ಮುನ್ನಂ ವಿರೋಧಿ ೧೩೭–೯೬
ದೋಷಂಗಳಿಂತು ಮಿಗೆ ಸಂ ೧೦೦–೨೩
ದೋಸಮನೆ ಗುಣದವೋಲು ೭೫–೧೮
ದೋಸಮಿನಿತೆಂದು ಬಗೆದು ೪೬–೧೨
ದೋಸಮೇನಾನುಂ ಸ್ವಲ್ಪಮಾದೊಡಂ ೧೧೨–೨೫
ಧನಮುಂ ನೆರಪದೆ ವಿದ್ಯಾಧನಮುಂ ೧೦–೮೯
ಧವಳಜಳಧರಕುಳಾಕುಳ ೬೩–೪೯
ಧವಳಾಪಾಂಗಂ ಕೇಕಾರವಮುಖರಂ ೭–೭೦
ಧ್ವನಿಯೆಂಬುದಳಂಕಾರಂ ೨೦೮–೧೧೦

ನ

ನಗೆಯೆಂಬ ನೆವದೆ ಬೆಳಗೀ ೨೬–೭೪
ನಡುವಗಲ ಬಿಸಿಲ್ ತನ್ನಂ ಸುಡೆ ೧೧೫–೯೨
ನಯವಿದುದಿತಯುಕ್ತಿ ವ್ಯಕ್ತಿ ೨೧೫–೧೧೨
ನಯವಿನಿಮಯ ನಾನಾಮಂತ್ರ ೨೧೩–೧೧೧
ನರದಾಶನಪರೊನೆಂನೆ ನರದಾ ೧೩೯–೬೩

ನರನಾಯಕನಂ ನಿಂದಾನಿರದೀ ೧೨೫-೬೧
ನರಪತಿತನಯನನಾಯತ ೬೦-೧೫
ನರಪತಿಬಂದನಾನೃಪನಸಟ್ಟಿತ್ತಿಯೆ ೧೧೫-೨೬
ನರಪತಿಯುಂ ಕಪಿಪೃತನಾ ೯೧-೫೫
ನರಲೋಕ ಚಂದ್ರಮುತದಿಂ ೨೩-೭
ನವವಿಧರಸಂಗಳಂ ಮನಕೆವರೆ ೧೮೭-೧೦೬
ನವವಿವರಾವೃತ ಪೂತಿದ್ರವ ೧೯೫-೧೦೮
ನಳಿನೋತ್ಪಳಾಳಿರುಚಿಗಳ ೫೧-೭೯
ನಾದಭೇದನನಾದಾನಾ ನಾದಾ ೧೧೭-೬೦
ನಾನಮಾನಮಸೇನಾಸೇ ಸೇನಾ ೧೧೮-೬೦
ನಾನಾರ್ಥಮೇಕರೂಪಾಧೀನವಚೋ
೧೦೮-೯೦
ನಾನಾವಸ್ತು ವಿಭೇದಮನೇನಾನುಂ ೫೯-೮೧
ನಿಕ್ಕುವಮಿಂತುಮಲ್ಲದದಜೂ ೧೧೭-೨೬
ನಿಕ್ಕುವಮಿಂತು ಮಾರ್ಗಯುಗದೊಳ್
೧೧೧-೫೯
ನಿಗದಿತ ಕಾವ್ಯೋಕ್ತಿಗಳೊಳ್ ೫೨-೪೭
ನಿಗದಿತ ಯಾಥಾಸಂಖ್ಯಾನುಗತ ೫೨-೭೯
ನಿನ್ನಂತೆ ಸುರೇಶ್ವರನುತ್ಪನ್ನಮಹ್ಯೆ ೮೭-೮೬
ನಿನ್ನ ಮುಖದಂತೆ ಕಮಳಮಿದು ೬೨-೮೧
ನಿನ್ನಿಂ ನಿನಿಂನನೆ ನೆಂನಿನಾ ನಾನಾ ೧೨೧-೬೦
ನಿಯುಕ್ತೋದ್ದೇಶಿಯುಮನುದೆ ೮೬-೨೦
ನಿಯಮಿತಾಕ್ಷರದಿಂದುಪಮಾ ೧೪೫-೩೨
ನಿಯಮಿತಾನ್ವಯ ಜಾತಿ ೧೩೮-೩೦
ನಿರತಿಶಯಮಕ್ಕುಮದು ೭೬-೧೮
ನಿರವದ್ಯಾನ್ವಯಮುದ್ಘಮುದ್ಧತ
೨೩೧-೧೧೫
ನಿರುಪಮ ಗಂಧರ್ವಗತಿ ೧೦೭-೨೪
ನಿಲಿಸಿಲಘುಪದಮನದನ ೬-೩೮
ನಿಲ್ತ್ತೋಳಂ ಬರ್ಪುದು ಸಯ್ತು ೬೩-೧೫
ನೀಮಿರ್ವರುಮನ್ನೆಗಮಿಂತೀ ೧೩೨-೯೫
ನುಡಿಗಳೊಡಂಬಡಲ್ ಬಗೆದ ೧೪೯-೩೩
ನುಡಿಗೆಲ್ಲಂ ಸಲ್ಲದ ಕನ್ನಡ ೩೩-೯
ನುಡಿಯುಂ ಛಂದದೊಳೊಂದಿರೆ ೧೬-೬
ನುಡಿಯುಂ ತಗುಳ್ಚಿ ನೋಟಂ ೨೦೨-೧೦೯
ನುತಪರಿವೃತ್ತಿ ವ್ಯಾಜಸ್ತುತಿ ಹೇತು ೪-೭೦
ನುತ ಶಬ್ದಾಲಂಕಾರದೊಳತಿಶಯ ೩೦-೪೩
ನುತ ಶಿಶಿರಕಿರಣಕಾಂತಿ ಪ್ರತತಿ ೭೮-೮೪
ನೃಪಕನ್ಯಕಾ ಸ್ವಯಂವರ ೧೪-೪೦
ನೃಪತೀ ಪರೋಪಕಾರೀ ವಿಪುಳ ೨೪-೪೨
ನೃಪನನಭಿಮಾನ ಧನನನ ೧೭-೪೦
ನೃಪನ ನರಪಾಲತನಯನ ೨೨-೪೧
ನೃಪನಾನಭಿನುತಮನನಾ ೧೮-೪೦
ನೃಪನುಮಂ ಪ್ರಜೆಯುಮಂ ೧೩೩-೨೯
ನೃಪನಾ ನೃಪನಂದನನಾ ನೃಪ ೨೧-೪೦
ನೆಗಟ್ದಿರ್ದ ಕನ್ನಡಂಗಳೊಳ್ ೫೭-೧೪
ನೆಗೆದ ಮುಗಿಲ್ಗಳುಂ ಸುರಿವ ೧೨೪-೨೮
ನೆಟ್ಟನೆ ತಾಂ ಸವಿಯೊಳೊಂದಿರೆ ೧೪೭-೬೫
ನೆನೆದಿರುಳುಂ ಪಗಲುಂ ನಿನ್ನನೆ ೮೩-೫೩
ನೆನೆನೆನೆದು ಪೆಜಿರ ಮಾತುಗ ೧೪-೬
ನೆರೆದತಿವಿದಗ್ಧಗಣಿಕಾಸುರತಾ ೧೨೮-೯೪
ನೆರೆದ ವಿಸಂವಾದಂ ಪಂಜರ ಶುಕ ೧೧೧-೯೧
ನೆರೆದು ಬಂದಪರವರ್ ೧೩೦-೨೯
ನೆರೆದೂರ್ಧ್ವರೇತನೊಳ್ ೬೪-೧೬
ನೆಲಸಿಕಿವಿಯೊಳ್ ಮದಾಯತ ೧೧೬-೯೨
ನೆಲಸಿದ ಕಾವ್ಯಂ ಕಾವ್ಯಕ್ಕೆ ೪೮-೧೨
ನೋಡುವೆನಾ ಮಹೀಪತಿಯನರ್ಥಿ
೧೦೨-೫೭

ಪ

ಪಡಿಯುಜಿಯುಲಾದೊಡರಿಯುಂ ೧೪೭-೯೮
ಪತ್ತಿ ಪ್ರಮಾದಫಲಕಮನ್ ೩೬-೪೪

ಪದನಜಱದು ನುಡಿಯಲುಂ ೩೮-೧೦
ಪದನಜಱದೊಂದಂ ಕ್ರಿಯೆಯೊಳ್ ೧೧-೩೯
ಪದಪಾದವಿಯುತನಿಯಮಾ ೨೫-೮
ಪದಪಾದ ಸಮಸ್ತಾರ್ಥಗತ ೧೧೪-೫೯
ಪದೆದುದಯಿಸಲೆಂದುಂ ಕಾಲದೊ
೧೪೬-೯೮
ಪದ್ಯಂ ಸಮಸ್ತಜನತಾ ೩೦-೯
ಪರಚಕ್ರಭೂಪರಟ್ಟಿದ ಕರಿ ೧೮೧-೧೦೫
ಪರದರ್ಗಾ ಪಾರ್ವರ್ಗಾ ೬೫-೧೬
ಪರಪಕ್ಷಮುಳ್ಳಿನಂ ತನಗಿರವು ೧೫೦-೯೯
ಪರಪುರುಷ ಸೇವನಾಕೃತ ೧೯೬-೧೦೮
ಪರಮ ಕಾರುಣಿಕನಪ್ಪನ ೨೭೧-೧೧೩
ಪರಮ ಶ್ರೀಕೃತಿವಧುವಾ ೧-೩೭
ಪರಮಶ್ರೀ ನಿಳಯಂ ಶಶಧರ ೭೨-೮೩
ಪರಮ ಶ್ರೀವಿಜಯ ಕವೀ ೩೨-೯
ಪರಮ ಸುಖಪದ ಶ್ರೀಧರ್ಮ ೨೧೦-೧೧೧
ಪರಮಾನುಭಾವನಭಿಮಾನಿ ೨೨೮-೧೧೪
ಪರಮಾನುಭಾವ ಭಾಸುರ ಸುರ ೮೯-೫೫
ಪರಮಾಲಂಕಾರೋಚಿತ ೪-೪
ಪರಮೋದಯರಿರ್ ಕಮಲಾಕರ ೪೧-೭೬
ಪರವಸದ ಬಗೆಯೊಳೊಂದಂ ದೊರೆ
೧೨೩-೯೩
ಪರಸುವೆನೆನ್ನದಾಂ ಪರಪೆನೆಂ ೧೦೭-೫೮
ಪರಗೀತಾರ್ಥ ಪೂರ್ವಾ ೮೧-೧೯
ಪರಿಚಿತ ಸನಾಭಿರಾಗಾಂಕುರ ೭೨-೭೩
ಪರಿಣತಗುಣರಿರ್ ಕಾಂತೋತ್ಕರ ೪೨-೭೭
ಪರಿಣಾಮ ಪಥ್ಯಮುಂ ಸುಖಪರಿ ೧೫೨-೯೯
ಪರಿತಾಪಮನೆನಗೆ ನಿಶಾಕರನಾಗಿ ೩೬-೭೬
ಪರಿದೆಯ್ದಿ ತಾಗಿದಂ ಭಾಸುರತರ ೯೩-೫೫,
೯೬-೫೬
ಪರಿವಾರ ವಾರವನಿತಾ ೧೦,೧೩-೩೯
ಪರಿವೃತ ನೃಪತುಂಗದೇವ ೨೩೦-೧೧೫
ಪರಿವೃತ್ತಿಯೆಂಬುದಕ್ಕುಂ ನಿರು ೧೫೮-೧೦೦
ಪರುಷಾಳಾಪಮುಮತಿ ನಿಷ್ಠುರ ೧೧೯-೯೩
ಪರೆದಿರೆ ರಾಗಂ ತನ್ನೊಳ್ ೧೦೨-೨೩
ಪರೆದಿರೆ ಸಂಧ್ಯಾರಾಗಂ ೧೦೩-೨೩
ಪಲವುಮನೊಡಗೂಡಿರೆ ಸ ೨೦-೪೧
ಪಸರಿಸಿದಾ ಬಗೆ ಮನಮುಂ ೧೨-೫
ಪಱಿಗೆ ಮೇಣ್ ಪೊಗಱ್ಗೆ ೧೩೬-೩೦
ಪಾದದೊಳೆರಡನೆಯಕ್ಕರಮಾ ೩೨-೪೩
ಪಾಪಮಿದು ಪುಣ್ಯಮಿದು ೧೮-೬
ಪಾರ್ಥಿವ ಗುಣಯುತಮಾಗಿಯು ೪೪-೭೮
ಪಾರ್ಥಿವ ಲೋಕನಪ್ಪನೆಂದು ೨೨೫-೧೧೪
ಪಾಱಿ ನಿಲೆ ನೆಗಱಿ ಬಾಱ್ವುದು ೧೭೭-೧೦೪
ಪೀನಂ ಕಾಡುಮುಡಕ್ಕೇಂ ಕೇಳ ೧೧೬-೬೦
ಪುನರುಕ್ತಮೆಂಬುದಕ್ಕುಂ ೮೪-೨೦
ಪುರುಷಂಬೋಲೀಕೆ ಕರಂ ೮೯-೮೭
ಪುರುಷೋತ್ತಮರಾರ್ ನಿನ್ನನ್ನರು ೮೦-೫೩
ಪುಲಿಪುಲಿ ಪರಿಪರಿ ಪೋಪೋ ೨೬-೪೨
ಪುಳಕಿತ ಕಪೋಳ ಫಳಕಂ ೧೯೨-೧೦೭
ಪೆಱನಾವಂ ಧರಾಚಕ್ರಕ್ಕೆಱೆಯಂ ೧೨೭-೬೧
ಪೊಡವಿಪತಿ ಗೊರವನೆನೆ ೮೯-೧೩
ಪೊಲ್ಲಮೆಯುಂ ಗುಣಮುಂ ತಮ
೧೭೮-೧೦೪
ಪೊಳೆವ ಮಿಂಚುಗಳಂತಿರೆ ೧೪೪-೩೨
ಪ್ರಣುತಗುಣಸೂರಿ ನಾಲಾ ೩೧-೯
ಪ್ರಣತಾರಿಘಟಿತ ಮುಕ್ತಾಮಣಿ ೧೮೦-೧೦೫
ಪ್ರತಿಕೂಲನಾಗಿ ಸಿಲೆ ವಿಧಿಮತನಯ
೧೪೫-೯೮
ಪ್ರತಿಪದಾರ್ಥತತ್ತ್ವ ಭೇದಮೊಳ್ ೧೦೭-೯೦
ಪ್ರತಿಭಾವತ್ವಮುಮುಕ್ತಕ ೧೧-೫
ಪ್ರತಿವಸ್ತೂಪಮಿತಾಲಂಕೃತ ೮೪-೮೬

ಪ್ರಸ್ತುತಮಲ್ಲದುದನೆ ಮಿಗೆ ವಿಸ್ತಾ ೧೩೮-೯೬
ಪ್ರಾಸಾನುಪ್ರಾಸಾಂತ ಪ್ರಾಸಂಗಳ್ ೪೫-೪೬
ಪ್ರಿಯಕುಶಲಪೂರ್ವಕೋಚಿತ ೨೦೩-೧೦೯

ಬ

ಬಗೆದರ್ಥನುನಜಱಪದೆ ಮೆಲ್ಲಗೆ ೧೩೧-೯೫
ಬಗೆದಿಂಗಿತ ಚೇಷ್ಟಾಕಾರಗತಂ ೧೧೭-೯೨
ಬಗೆದು ಮಾರ್ಗದ್ವಿತಯಗತಿ ೯೮-೫೬
ಬಗೆದು ಮೇಣ್ ಪರಮಥರ್ಮ ೨೨೨-೧೧೩
ಬಗೆಬಗೆದು ಕೇಳ್ದು ಬುಧರೊಲ್ ೧೩-೫
ಬಂದುವು ಪಾವುಡಂ ನೃಪತಿ ೧೧೮-೨೬
ಬರಮೆಮಗೀಗೆ ದೇವತೆಗಳಾ ೧೧೬-೨೬
ಬರಿಪೆನಮೋಘಮಿಂದುಪವನಾ ೧೦೫-೫೮
ಬರಿಸಿ ಕ್ಷಿತಿಪತಿಯಂ ಸ ೭-೩೮
ಬರಿಸುವೆನಿಂದು ನಂದನವನಾಂ ೧೦೪-೫೮
ಬಹಿರಂತರುಪವನಂಗಳೊಳ್ ೫೪-೧೪
ಬಹಿರುದ್ಯಾನಾಂತರದೊಳ್ ೫೬-೧೪
ಬುಧಗುಣಗಣನಾತೀತಾಂತರ ೧೫೪-೬೬
ಬೆರಸಿರೆ ಕನ್ನಡದೊಳ್ ಬಂ ೫೩-೧೩
ಬೆರಸಿರೆ ಮುಂ ಸಮುಚ್ಚಯ ೧೨೧-೨೭
ಬೆರಸಿರೆ ಮುಂ ಸಂಯೋಗಾ ೩೫-೪೪
ಬೆರಸಿರೆ ಸಮಾಸದೊಳ್ ೯೨-೫೫
ಬೆಳೆದೊಱಗಿದ ಕಟಿಮೆಗಳುಂ ೧೬೬-೧೦೨
ಬೇಱೆವೇಱೆರೆ ವಿಕಲ್ಪ ೧೩೧-೨೯
ಬೇಱೆವೇಱೆ ನಿಲೆ ಕಾರಕದೊಳ್ ೧೩೪-೩೦
ಭವದೀಯ ವದನಮಾಲೋಲ ೮೨-೮೫
ಭಾವಮೆಂಬುದಕ್ಕುಂ ಕವಿಗಳಾ ೨೦೭-೧೧೦
ಭಾವಿಸಲ್ ಬಗೆದವಂ ಮಿಗೆ ೨೨೦-೧೧೩
ಭಾವಿಸಿ ಶಬ್ದತತ್ತ್ವಸಮಯಸ್ಥಿತಿ ೧೫೫-೬೬
ಭಾವಿಸಿ ಸಮಸ್ತವಸ್ತು ವಿಭಾವಿತ ೬-೭೦
ಭಾವೆಯಂ ನುಸುಳುಮುಸ್ಪಷ್ಟ ೧೪೪-೬೪

ಮ

ಮುಗುಬ್ದುಂ ಮುಗುಬ್ದಾಮಾತಂ ೨೦೦-೧೦೯
ಮುದಕರಿಯೋ ಘನಸಮಯಾಂ ೧೦೪-೯೦
ಮುದಮಾನ ಮಾಯಭಯ ೨೨೭-೧೧೪
ಮುದಮುದಿತಾಳಿ ಕದಂಬಂ ೪೫-೭೮
ಮುನದೆ ನೆನೆದವರ ಕಿಡುಗುಂ ೯೧-೨೧
ಮುನದೊಳಗಾಗಳುಂ ನಿಱಿಸದಾ ೧೦೮-೫೮
ಮುನೆಗಿಂದು ಬರ್ಕುವೆಂದಾ ೩೩-೪೩
ಮುಲಯಜ ಚರ್ಚಿತೆಯಂ ಕೇವ ೯೩-೮೭
ಮುಲಯರುಹ ಶಿಶಿರಕರಶೀತ ೮೦-೮೫
ಮುಲಯಾನಿಲನುಂ ಮುಲಯಜ ೩೨-೭೫
ಮುಲಯಾನಿಲನೊಯ್ಯನೆ ಪಣ್ತಿ ೫೮-೮೦
ಮುಲಯಾನಿಳನೆಸಕದಿನುದಿರ್ವ ೧೩೬-೯೬
ಮುಸಗಿ ಬೆಸದಿರ್ದ ವಿವಿರ ೬೬-೧೬
ಮಾತಱಿವರ್ ಕೆಲಬರ್ ಜಗ ೧೭-೬
ಮಾತುಗಳಾವುವಾನುಮುಪವ ೧೦೧-೫೭
ಮಾನಧನಾ ಪೊಗಱಿಸಲೇಂ ೧೦೫-೯೦
ಮಾನಿನಿ ಮುನ್ನಮಾಂ ನೀನೆ ೧೨೨-೬೦
ಮಾನಿಯುಮುದಾರ ಚರಿತ ೧೭೧-೧೦೩
ಮಾರುತೀ ಪರಮೋದಾರದಾರನೊಳ್ ೧೨೪-೬೧
ಮಿಗೆ ಕನ್ನಡಗಬ್ಬಂಗಳೊಳ್ ೨೭-೮
ಮಿಗೆ ದುಷ್ಕರ ಕಾವ್ಯಂಗಳೊಳ್ ೬೮-೧೬
ಮಿಗೆ ನಿಬಿಡಬಂಧಮೆಂಬುದು ೬೪-೫೦
ಮಿಗೆ ಪದ್ಯದೊಳಂ ಗುಣಮುಂ ೮೩-೫೪
ಮಿಗೆ ಪಱಿವರೆನ್ನನೆನ್ನದೆ ಪೊಗ ೧೭೯-೧೦೫
ಮಿಗೆ ಮನದ ಪೆಂಪುಮಂ ಕೈ ೧೭೩-೧೦೩
ಮಿಗೆ ರಣದೊಳ್ ಪರಿಚಿತಮಾ ೧೯೭-೧೦೮
ಮಿಗೆ ವಸ್ತುಗತ ಸ್ಥಿತಿಯಂ ಬಗೆ ೭೯-೫೩
ಮುನಿ ವೀತರಾಗನೆಂದುಂ ೭೯-೧೯

ಮುನ್ನಂ ತನ್ನಂ ತಾನೆ ತಾನೇಕೆ ೧೧೫-೬೦
ಮುನ್ನಂ ಪೇೞ್ದರ್ಥಂ ೯೭-೨೨
ಮುಳಿದಿರ್ದ ನಲ್ಲಳಲ್ಲಿಗೆ ತಿಳಿ ೧೨೪-೯೪
ಮೃಗಗಣಮೆ ಸುಖಂ ಬಾೞ್ಗಂ ೧೩೯-೯೭
ಮೃಗಪಶು ಶಕುನಿ ಗಣಂ ೭-೪
ಮೃದುತರ ಕಪೋಲ ಫಳಕಂ ೧೭-೬೨
ಮೃದುತರ ಮಾರ್ಗದೆ ಕೆನ್ನಂ ೧೦೦-೮೯
ಮೃದುತರ ವರ್ಣಾನುಗಮಾ ೫೭-೪೮
ಮೇರೆಗಳೆದಿರೆ ವಿಶೇಷ ವಿಚಾರ ೯೧-೮೭
ಮೊಗಮೆಂಭಂಬುಜದಲರಾ ೨೫-೭೪
ಮೊದಲ ಪದಂ ನ್ಯೂನಾಕ್ಷರಂ ೯೪-೨೨
ಮೊದಲೊಳ್ ಸಮಾಸಪದಮು ೮೮-೫೪

ಯ

ಯತಿಭಂಗಮರ್ಥಶೂನ್ಯಂ ೬೯-೧೭
ಯತಿಯೆಂಬುದುಸಿರ್ವ ತಾಣಂ ೭೧-೧೭
ಯಮಕಂ ಪಾದಪಾದಾರ್ಧಸಮ ೧೨೯-೬೧

ರ

ರಾಗಾದಿ ದೋಷ ವಿರಹಿತ ೧೦೪-೨೪
ರಾವಣನಂ ಕೊಂದು ಜಯಶ್ರೀ ೧೮೯-೧೦೭
ರೂಪಕದೊಳಂ ವಿಶೇಷಾಳಾಪ ೨೭-೪೨
ರೂಪಕಮೆಂಬುದು ಪೆಜವಜ ೧೨-೭೧

ಲ

ಲೋಕದೊಳದಱಿಂ ಕಾವ್ಯ ೨೧-೭
ಲೋಕಮದೂರ್ಧ್ವಾರ್ಥೋವ ೧೦೯-೨೫
ಲೋಕ ವೈದಿಕ ಸಾಮ್ಯೈಕ ೧೩೫-೬೨
ಲೌಕಿಕ ಸಾಮಯಿಕೋರು ವಿ ೧೯-೭

ವ

ವದನಂ ಮದೀಯಲೋಚನ ೬೬-೮೨
ವದನಮಿದಲ್ತಂಬುರುಹಂ ೨೪-೭೪
ವದನಾಂಬುಜರಂಗದೊಳೀ ೨೩-೭೩
ವನರುಹದಂತೆ ಮುಖಂ ಲೋಚನ ೬೦-೮೧
ವನರುಹದಳನಯನೆ ನಿ ೯೩-೨೧
ವರಜಾತಿರೂಪಕಾರ್ಥಾಂತರ ೨-೬೯
ವರದಾನ ಪರಾದನ್ಯಂ ಪರದಾನ ೧೪೦-೬೩
ವರರೂಪಕ ಭೇದಮನಿಂತಿರೆ ೨೭-೭೪
ವರರೂಪಕಾದ್ಯಳಂಕಾರ ರಚನೆ ೧೧೩-೯೧
ವರವಾರ ನಾರಿಯೊಳ್ ನೆರೆದೆವಾನೆಲ್ಲಿ ೧೩೭-೬೩
ವರಶಬ್ದಾಲಂಕಾರದ ವಿರಚನೆ ೪೮-೪೬
ವರಹಂಸ ಕದಂಬಕಮದು ಶರ ೧೦೩-೮೯
ವಾರಿವಾರಿಯೊಳಾದಾನಂ ವಾರಿ ೧೩೬-೬೨
ವಿಗತಮಳಮುಪಾತ್ತಾರಾತಿ ೨೧೬-೧೧೨
ವಿಗಳಿತರಾಗನಾವೊಂ ನಿನ್ನಾವುದಜ ೧೫೨-೬೬
ವಿದಿತ ಸಮಸಂಸ್ಕೃತೋದಿತ ೫೫-೧೪
ವಿದಿತಾರ್ಥ ವಿಪರ್ಯಾಸಾಸ್ಪದಮೆ ೯೯-೮೯
ವಿದಿತಾರ್ಥಾಲಂಕಾರಾಸ್ಪದಭೇದಂ ೫-೭೦
ವಿನಿಮೀಳಾದಿಗಳಿವು ಲೋಚನಾ ೭೫-೫೨
ವಿನಿಮೀಳಿತ ಕುಮುದ ವನಂ ೭೪-೫೨
ವಿನಿಹತ ಸಮಸ್ತ ರಿಪುಕುಳ ೭೬-೫೨
ವಿನುತಪ್ರಾಸಂ ಶಾಂತೋಪನತಂ ೩೧-೪೩
ವಿಪರೀತಂ ತರುತತಿಯವೋಲ್ ೮೩-೮೫
ವಿಪುಳತರಕಟಕನುದ್ಯದ್ದ್ವಿಪ ೧೧೦-೯೧
ವಿಮಳೋದಯ ನಾಗಾರ್ಜುನ ೨೯-೯
ವಿರಹಂ ಪರಿತಾಪಮನಾಪರಿ ೨೦೧-೧೦೯
ವಿಲಸಿತ ಭವದಭ್ಯಾಗಮ ಜಲಧಾರೆ ೯೬-೫೧
ವಿವಿಧ ವಿಭವ ಶೋಭಾರಂಭ ೨೧೨-೧೧೧

ವಿಶದತರಮಾಯ್ತು ಗುಣಮಣಿ ೫೬-೮೦
ವಿಳಸಿತ ಸದಳಂಕಾರಾದಿ ಸಂಸಾ ೨೧೪-೧೧೨
ವಿಳಸಿತ ಸಸ್ಯಸಂಪದಭಿರಾಮ ೧೧೦-೫೯
ವೀರರಸಂ ಸ್ಫುಟೋಕ್ತಿಯಿನು ೯೯-೫೭
ವೀರಾದ್ಭುತ ಕರುಣಾ ಶೃಂಗಾರ ೧೮೮-೧೦೬
ವ್ಯತಿರೇಕ ವಿಕಲ್ಪಮುನನುಗತ ೪೯-೭೯
ವ್ಯತಿರೇಕ ವಿಕಲ್ಪಮಿದೆಂದತಿಶಯ ೧೦೬-೯೦
ವ್ಯಾಕರಣ ಕಾವ್ಯನಾಟಕ ೬-೪

ಶ

ಶರದಂಬರಮುಂ ಮತ್ತೀ ಸರ ೪೬-೭೮
ಶರದಮಾಲಂಬರದೊಳ್ ಹಿಮ ೭೮-೫೨
ಶರದಾಗಮದೊಳ್ ಕಳಹಂಸರವಂ ೧೩೫-೯೬
ಶರದುದಿತ ಶಿಶಿರಕರನುಂ ೭೫-೮೪
ಶಶಧರ ಬಿಂಬಾನನೆಯುಂ ೪೦-೮೫
ಶಾಂತಪ್ರಾಸದ ಭೇದಮುದಿಂತಕ್ಕುಂ ೩೭-೪೪
ಶೂರನೀತನೆ ಪಂಡಿತನೀತನೆ ೧೪೦-೩೧
ಶ್ರೀ ತಳ್ತುರದೊಳ್ ಕೌಸ್ತುಭ ೧-೩
ಶ್ರೀ ವನಿತಾಪ್ರಸವದಿನಾಲಾವಣ್ಯ ೪೦-೭೭
ಶ್ರೀ ವಿದಿತಾರ್ಥಾಲಂಕಾರಾವಳಿಯುಂ ೧-೬೯
ಶ್ರೀ ವಿಶದವರ್ಣ ಮಧುರಾವೋ ೩-೩
ಶ್ರುತದುಷ್ಟಮರ್ಥದುಷ್ಟಂ ೬೨-೧೫
ಶ್ರುತದೊಳ್ ಭಾವಿಸಿ ನೋಟ್ಪೊಡೆ ೫-೪
ಶ್ಲೇಷೋತ್ಪ್ರೇಕ್ಷಾಸೂಕ್ಷ್ಮ ವಿಶೇಷ ೩-೬೯

ಸ

ಸಕಲಜನವಿನುತನಂ ಶತಮುಖ ೩೮-೪೪
ಸಕಲವ್ಯಾಪಿ ವಿಶೇಷ ಪ್ರಕಾಶಕಂ ೨೯-೭೫
ಸಕಳಕಳಾಭಾಷಾಲೌಕಿಕ ೨೮-೮
ಸಕಳಾಳಾಪ ಕಳಾಕಳಾಪ ೧೫೦-೩೩
ಸಕ್ಕದಮುಂ ಪಾಗದಮುಮು ೪೧-೧೧
ಸಂಕೀರ್ಣಮೆಂಬುದುಕ್ತಾಳಂ ೧೫೬-೧೦೦
ಸಕಳ ಲೌಕಿಕ ಸಾಮಯಿಕೋರು ೨೧೮-೧೧೨
ಸತತಂ ದಕ್ಷಿಣ ಮಾರ್ಗೋದಿತೋ ೫೩-೪೭
ಸತತಂ ಭುಜಂಗ ಭೋಗಾಶ್ರಿತೆ ೧೬೨-೧೦೧
ಸತತೋದಯನಪ್ರತಿಹತಗತಿ ೩೦-೭೫
ಸದಮಳ ಸಮ ಸಂಸ್ಕೃತ ಕಾ ೨೬-೮
ಸಂತಂ ಮೃಗಗಣ ವೃತ್ತಿಯನಿಂ ೧೪೦-೯೭
ಸಂತತವಿಂತೆಸೆವಪ್ಪೃಥಾರ್ಥಾಂತರ ೩೮-೭೬
ಸಂತಂ ಬಾಟ್ಪುದು ಮಿಾಱಿದಾ ನರ ೧೪೨-೬೪
ಸಂಧಿಗಳುಂ ಕೆಲವೆಡೆಯೊಳ್ ೯೮-೨೨
ಸಮನಿಸೆ ಸಾಪೇಕ್ಷಮುಮಾ ೯೫-೫೬
ಸಮಬಂಧಮೆಂಬುದದಕ್ಕುಂ ೫೬-೪೮
ಸಮಮಧುರನಿಬಿಡ ಕಾಂತಸು ೫೪-೪೮
ಸಮಱಿ ಸಮಾಸಪದಂಗಳನ್ ೮೫-೫೪
ಸಮಱುಗೆಯಿಲ್ಲದ ಮುಱುಕಮು ೧೬೯-೧೦೩
ಸಮಸಂಸ್ಕೃತಂಗಳೊಳ್ ಸ ೫೧-೧೩
ಸಮುಚಿತ ನೃಪತುಂಗದೇವ ೧೪೭-೩೨
ಸಮುದಾಯಾರ್ಥಮನಾರಯೆ ೭೮-೧೮
ಸಮುದಿತ ಕುಸುಮಾಮೋದ ೨೧೧-೧೧೧
ಸಂಬೋಧನೆ ದೀರ್ಘೋಕ್ತಿಯೊಳ್ ೨೩-೪೧
ಸರಸಿಜದೊಳ್ ನಿನ್ನ ಮುಖಂ ೬೪-೮೨
ಸರಸಿಜಬಾಂಧವನಸ್ತಾಂತರ ೩೧-೭೫
ಸರಸಿಜಮೋ ಮೊಗಮೋ ಮೇಣ್ ೭೦-೮೩
ಸರಸಿಜವಿರೋಧಿ ಕಾಂತ್ಯಾಕರ ೧೦೨-೪೯
ಸರಸಿರುಹಮಿಂದುದೀಧಿತಿ ಪರಾ ೭೧-೮೩
ಸರಸೀಜಂ ಸರಜಂ ಶಶಧರ ೭೩-೮೩

ಸರಿದಧಿಪತಿಯುಂ ದೋಷಾಕರ ೩೫–೭೬
ಸವಿವೊಡೆ ಮಧುರ ರಸಂಬೊಲ್ ೬೦–೪೯
ಸವಿಶೇಷಾಲಂಕಾರೋದ್ಭವ ೯೦–೨೧
ಸವಿಹಿತಮಪ್ಪ ಕರ್ಣಪೂರೋತ್ಪಳ ೧೪೫–೬೪
ಸಾದುಗೆತ್ತು ಬಗೆಯಾದವನಾ ೧೨೮–೨೮
ಸಾರಸಾರಸನಾದಾನುಸಾರಸಾರಾ
೧೩೩–೬೭
ಸುಕುಮಾರತರಾಕ್ಷರ ಪದನಿಕರ ೭೦–೫೧
ಸುಭಟರ್ಕಳ್ ಕವಿಗಳ್ ಸು ೨೮–೪೨
ಸುರಗಣಾಧಿಪನೋ ಫಣಿ ೧೪೨–೩೧
ಸುರಗಿರಿವೋಲ್ ಧೈರ್ಯದಿನಂಬರ ೮೫–೮೬
ಸೂಡುವೆನೆಂಬುದಲ್ಲದಣಮಾಗದು ೧೦೩–೫೭
ಸೊಗಯಿಸುಗುಮಿಂದ್ರನೀಲಮಣಿ ೧೪೯–೬೫
ಸ್ತುತಿನಿಂದೆಗಳಿಂ ಸವಿವಕ್ಷಿತ ೯೫–೮೮
ಸ್ಥಿರಮರ್ಥಶೂನ್ಯಮೆಂಬುದು ೮೦–೧೯
ಸ್ಫುರಯಿಸದೆ ದಶನವಸನಾಂತರ ೧೨೨–೯೩
ಸ್ಫುರಿತಾಧರಪಲ್ಲವೆ ಬಂಧುರ ೧೫–೭೨
ಸ್ಮರನಸ್ತ್ರಸಮಿತಿಯಿದು ನಿರ್ಭ ೧೮೫–೧೦೬
ಸ್ಮರನೈದಂಬುಗಳಲ್ಲಿವು ಶರ ೧೮೬–೧೦೬
ಸ್ಮಿತಕುಸುಮಧರಪಲ್ಲವಮತಿ ೧೩–೭೧

ಹ

ಹರಿಣಧರನೊಳ್ ವಿಷಂ ಮಲಯ ೭೯–೮೫
ಹರಿಣಧರ ಸರಸಿಜಂಗಳ್ ೮೭–೮೪
ಹರಿಣಧರಂ ಸೊಗಯಿಸಿದಂ ೩೩–೭೫
ಹೀನಾಧಿಕ ಗುಣದೋಷ ವಿತಾ ೮೮–೮೬

ಅನುಬಂಧ-೪

ಪಾರಿಭಾಷಿಕ ಪದಗಳ ಅಕಾರಾದಿ

(ಮೊದಲನೆಯ ಅಂಕಿ ಪದ್ಯವನ್ನೂ ಎರಡನೆಯ ಅಂಕಿ ಪುಟವನ್ನೂ ಸೂಚಿಸುತ್ತವೆ)

ಅ

ಅಂಕಚಾರಣೆ ೨೯-೪೩
ಅಚ್ಛಂದಂ ೬೯-೧೭
ಅತಾಲವ್ಯ ೧೨೪-೬೧
ಅತಿರೇಕ ೨-೬೯
ಅತಿಶಯ ೨-೬೯
ಅತಿಶಯಾಲಂಕಾರ ೯೧-೮೭
ಅತಿಶಯೋಪಮೆ ೬೬-೮೨
ಅದ್ಭುತ ೧೮೮-೧೦೬, ೧೯೦-೧೦೭
ಅದ್ಭುತರಸಂ ೯೯-೫೭
ಅದ್ಭುತೋಪಮೆ ೩೮-೮೨
ಅನನ್ವಿತ ಯಾಥಾಸಂಖ್ಯ ೫೧-೭೯
ಅನಿಯಮೋಪಮೆ ೬೫-೮೨
ಅನುಗತಂ ೩೧-೪೩
ಅನುಗತ ಯಾಥಾಸಂಖ್ಯಾ ೫೦-೭೯
ಅನುದೇಶಿ ೮೬-೨೦
ಅನುಪ್ರಾಸ ೪೧-೪೫, ೪೩-೪೫, ೪೫-೪೬
ಅನುಶಯಾಕ್ಷೇಪ ೧೦೧-೮೯
ಅಂತಗತ ೩೧-೪೩
ಅಂತಪ್ರಾಸ ೪೩-೪೫, ೪೫-೪೬
ಅನ್ಯೋನ್ಯೋಪಮೆ ೬೩-೮೧
ಅನ್ವೇಷ ೩-೬೯
ಅಪಹ್ನುತಿ ೪-೭೦, ೧೮೨-೧೦೫
ಅಪ್ರಸ್ತುತ ೩-೬೯, ೧೩೮-೯೬
ಅಭೂತೋಪಮೆ ೭೮-೮೪
ಅಭ್ಯುಪಮೋಕ್ತಿ ೧೪೩-೩೧, ೧೪೫-೩೨
ಅಭ್ಯುಪಮಿತೋಕ್ತಿ ೧೪೬-೩೨
ಅರಸರ್ ೬೫-೧೬
ಅರ್ಥದುಷ್ಟ ೬೨-೧೫
ಅರ್ಥಶೂನ್ಯಂ ೬೯-೧೭, ೭೮-೧೮,
೮೦-೧೯
ಅರ್ಥಾಂತರವಿನ್ಯಾಸ ೨-೬೯, ೨೭-೭೪,
೨೮-೭೪
ಅರ್ಥಭ್ರಮಂ ೧೧೨-೫೯
ಅರ್ಥಭ್ರಮಣಂ ೧೩೯-೬೩
ಅಲಂಕ್ರಿಯಾ ೮೫-೫೪
ಅವಧಾರಣ ದೋಷ ೧೧೩-೨೫, ೧೩೯-೩೧
ಅವಯವಿ ರೂಪಕ ೧೬-೭೨
ಅಸಂಭವೋಪಮೆ ೭೯-೮೫
ಅಸಾಧಾರಣೋಪಮೆ ೭೭-೮೪
ಅಸ್ಪಷ್ಟಾಕ್ಷರ ೧೪೪-೬೪, ೧೪೭-೬೫

ಆ

ಆಕ್ಷೇಪ ೨-೬೯, ೯೯-೮೯
ಆದಿಪ್ರಾಸ ೧-೧೧೯
ಆದಿಸ್ವರ ೧೬-೪೦
ಆಱನೆಯ ವಿಭಕ್ತಿ ೨೦-೪೧
ಆರ್ಯೆ ೭೭-೧೮
ಆಶೀರಲಂಕಾರ ೨೦೫-೧೧೦
ಆಳಾಪ ೧೫೦-೩೩

ಉ

ಉಕ್ತಪುನರುಕ್ತಾರ್ಥಂ ೬೯-೧೭
ಉತ್ತರಮಾರ್ಗ ೫೩-೪೭, ೫೫-೪೮,
೬೨-೪೯, ೬೩-೪೯, ೬೮-೫೦, ೭೨-೫೧
ಉತ್ತರಮಾರ್ಗವಾಚಕ ೧೦೨-೫೭,
೧೦೫-೫೮
ಉತ್ತರಾಪಥಂ ೧೧೦-೫೯
ಉತ್ತರಾಯಣ ೧೦೯-೫೯
ಉತ್ತರೋತ್ತರ ೧೦೬-೫೮
ಉತ್ಪ್ರೇಕ್ಷೆ ೩-೬೯, ೧೧೪-೯೨
ಉತ್ಸವ ೧೦೦-೫೭
ಉದಾತ್ತ ೪-೭೦
ಉದಾತ್ತಾಲಂಕಾರ ೧೭೩-೧೦೩
ಉದೀಚ್ಯ ೮೧-೫೩
ಉದೀಚ್ಯವಾಚಕಂ ೧೦೮-೫೮
ಉದ್ದೇಶಿ ೮೬-೨೦
ಉಪಮಾ ೨-೬೯, ೫೯-೮೧
ಉಪಮಾಕ್ಷೇಪ ೧೦೩-೮೯
ಉಪಮಾಪ್ರತಿಜ್ಞೆ ೧೪೫-೩೨
ಉಪಮಿತಾಕ್ಷರ ೧೪೬-೩೨
ಉಪಮೋತ್ಪ್ರೇಕ್ಷೆ ೬೭-೮೨
ಉಭಯ ವ್ಯತಿರೇಕ ೪೧-೭೭
ಉರುಪ್ರಾಸ ೩೨-೪೩

ಊ

ಊರ್ಜಿತ ೪-೭೦, ೧೯೮-೧೦೮
ಊರ್ಜಿತೋಪಮೆ ೭೧-೮೩

ಎ

ಎಣೆಯಕ್ಕರ ೪೧-೪೫
ಎರಡನೆಯ ವಿಭಕ್ತಿ ೧೬-೪೦

ಏ

ಏಕವ್ಯತಿರೇಕ ೪೦-೭೭
ಏಕಾಕ್ಷರ ೧೨೨-೬೦

ಒ

ಒನರ್ಪಡಿ ೧೪೪-೬೪, ೧೫೦-೬೫

ಓ

ಓಜಸ್ವಿ ೫೪-೪೮
ಓಜೋಗುಣ ೮೬-೫೪
ಓಜೋಲಕ್ಷಣ ೮೫-೫೪

ಕ

ಕಂದ ೭೭-೧೮, ೩೪, ೩೫-೧೦
ಕಪ್ಪ ೧೧೫-೨೬
ಕರಣ ೧೧೪-೨೯
ಕರುಣ ೧೮೮-೧೦೬, ೧೯೧-೧೦೭
ಕರುಣಾರಸಂ ೯೯-೫೭
ಕರ್ಮ ೧೧೪-೨೬
ಕಲ್ಪನೋಕ್ತಿ ಕಷ್ಟ ೬೨-೧೫

ಕವಿಪ್ರಧಾನ ಪ್ರಯೋಗಪದ್ಧತಿ ೨೪–೮
ಕವಿಪ್ರಧಾನರ್ ೧೮–೬
ಕವಿಮಾರ್ಗ ೮೧–೫೩
ಕಳಾ ೧೦೭–೨೪
ಕಳಾವಿರುದ್ಧದೋಷಂ ೧೦೭–೨೪
ಕಾಂತ ೫೪–೪೮, ೬೬–೫೦, ೬೮–೫೦
ಕಾರಕ ೮೭–೫೪, ೧೧೪–೨೬, ೧೧೫–೨೬, ೧೧೭–೨೬, ೧೨೫–೨೮
ಕಾರಕದೋಷ ೧೧೩–೨೫, ೧೧೬–೨೬, ೧೨೨–೨೭
ಕಾರಕ ಸಂಪದ ೧೨೧–೨೭
ಕಾಲವಿರುದ್ಧಂ ೧೦೮–೨೪
ಕಾವ್ಯದ ಪದವಿ ೭೯–೫೩
ಕಾವ್ಯಬಂಧ ೯೨–೫೫
ಕಾವ್ಯಾಶ್ರಮ ೧೪೭–೩೨
ಕಾವ್ಯೋಕ್ತಿ ೩೪–೪೪, ೫೨–೪೭
ಕ್ರಮದಿಂ ೫೨–೪೭
ಕ್ರಿಯಾಗೋಪಕ ೧೪೧–೬೩
ಕ್ರಿಯಾನುಗತ ಆದಿದೀಪಕ ೫೫–೮೦
ಕ್ರಿಯಾಪದಂ ೧೧೭–೨೬
ಕ್ರಿಯಾ ವಿಶೇಷಣ ೯–೩೯
ಕ್ರಿಯಾಸ್ವಭಾವಾಖ್ಯಾನ ೮–೭೦
ಕ್ರಿಯೆ ೧೧–೩೯, ೯೪–೫೬, ೧೧೭–೨೬

ಖ

ಖಂಡಪ್ರಾಸ ೭೫–೧೮

ಗ

ಗದ್ಯ ೨೭–೮, ೮೫–೫೪
ಗದ್ಯಾಶ್ರಮ ೨೯–೯
ಗತಪ್ರತ್ಯಾಗತ ೧೧೯–೬೦
ಗಮಕಂ ೯೫–೫೬
ಗೀತಿಕೆ ೩೫–೧೦
ಗುಣ ೧–೩೭, ೮೬–೫೪, ೧೦೧–೫೭
ಗುಣಸ್ವಭಾವಾಖ್ಯಾನ ೯–೭೧
ಗುಣಾನುಗತ ಆದಿದೀಪಕ ೫೬–೮೦
ಗುರು ೯೨–೨೧, ೧೨೬–೨೮, ೧೨೭–೨೮
ಗುರುದೋಷ ೧೧೩–೨೫
ಗುರುಲಘುಭೇದಂ ೧೫–೪೦
ಗೂಢಚತುರ್ಥ ೧೧೯–೬೦
ಗೋಪಿತಕ್ರಿಯಂ ೧೧೨–೫೯
ಗೋಮೂತ್ರಿಕಂ ೧೧೨–೫೯
ಗೋಮೂತ್ರಿಕೆ ೧೨೮–೬೧
ಗೌರವ ದೋಷ ೧೨೯–೨೯
ಗ್ರಾಮ್ಯ ೫೪–೪೮
ಗ್ರಾಮ್ಯಾಳಾಪ ೮೨–೫೩
ಗ್ರಾಮ್ಯೋಕ್ತಿ ೮೪–೫೪

ಚ

ಚಕ್ರನಾಮಂ ೧೧೨–೫೯
ಚಕ್ರಶ್ಲೋಕ ೧೪೨–೬೪
ಚ್ಯುತಯಥಾಸಂಖ್ಯಂ ೬೯–೧೭, ೮೭–೨೦

ಛ

ಛಂದೋಭಂಗಂ ೯೨–೨೧, ೯೪–೨೨

ಜ

ಜಾತಿ ೨–೬೯, ೬–೭೦
ಜಾತಿಸ್ವಭಾವಾಖ್ಯಾನ ೭–೭೦
ಜಾತ್ಯನುಗತ ಆದಿದೀಪಕ ೫೪–೮೦

ತ

ತತ್ತ್ವಖ್ಯಾಸೋಪಮೆ ೭೬-೪೮

ತ್ರಿಪ್ರಾಸ ೧-೧೧೯

ದ

ದಕ್ಷಿಣ ೫೧-೪೭

ದಕ್ಷಿಣಮಾರ್ಗ ೫೩-೪೭, ೬೮-೫೦, ೫೪-೪೮, ೬೨-೪೯, ೧೦೨-೫೭, ೧೦೪-೫೮

ದಾಕ್ಷಿಣಾತ್ಯ ೮೧-೫೩, ೧೦೮-೫೮

ದೀಪಕ ೨-೬೯, ೫೨-೭೯

ದೀರ್ಘ ೧೬-೪೦

ದೀರ್ಘೋಕ್ತಿ ೨೩-೪೧

ದುಷ್ಕರಕಾವ್ಯ ೧೧೩-೫೯

ದುಷ್ಕರೋಕ್ತಿ ೧೪೩-೬೪

ದೃಷ್ಟಾಂತಾಳಂಕಾರ ೧೫೩-೯೯

ದೇಶವಿರುದ್ಧಂ ೧೧೦-೨೫

ದೋಷ (ಕೃತಿ –) ೪೬, ೪೭-೧೨ ; ೬೨-೧೫

ದ್ರವ್ಯಸ್ವಭಾವಾಖ್ಯಾನ ೧೦-೬೧

ದ್ರವ್ಯಾನುಗತ ಆದಿದೀಪಕ ೫೭-೮೦

ದ್ವ್ಯಕ್ಷರ ೧೨೨-೬೦

ದ್ವಂದ್ವಪ್ರಾಸ ೧-೧೧೯

ದ್ವಿಪ್ರಾಸ ೧-೧೧೯

ಧ

ಧರ್ಮಾಪೋಹಂ ೧೮೪-೧೦೬, ೧೮೫-೧೦೬

ಧರ್ಮೋಪಮೆ ೬೧-೮೧

ಧ್ವನಿ ೨೦೮-೧೧೦

ನ

ನವವಿಧರಸ ೧೮೭-೧೦೬

ನಿದರ್ಶನ ೩-೬೯

ನಿದರ್ಶನಾಲಂಕಾರ ೧೪೧-೯೭

ನಿಂದೋಪಮೆ ೭೩-೮೩

ನಿಬಿಡ ೫೪-೪೮

ನಿಬಿಡಬಂಧ ೬೪-೫೦

ನಿಬಿಡೋಕ್ತಿ ೯೯-೫೭

ನಿಯಮೋಪಮೆ ೬೪-೮೨

ನಿರುತ್ತರ ೧೨೭-೬೧

ನಿರೋಷ್ಠ್ಯ ೧೨೫-೬೧

ನುಸುಳು ೧೪೪-೬೪, ೧೪೬-೬೫

ನೇಯಾರ್ಥಂ ೬೯-೧೭, ೧೦೧-೨೩

ನ್ಯಾಯನಿಯುಕ್ತ, – ವಿರುದ್ಧ ೧೦೬-೨೪

ಪ

ಪದಾಂತರೀಕರಣ ೧೨೨-೨೭

ಪದ್ಯ ೮೬-೫೪, ೨೭-೮, ೩೦-೯

ಪರಮುಕವೀಶ ಪ್ರಯೋಗ ೪೮-೪೬

ಪರಿವೃತ್ತಿ ೪-೭೦, ೧೫೮-೧೦೦

ಪರ್ಯಾಯೋಕ್ತಗತಾಳಂಕಾರ ೧೩೧-೯೫

ಪರ್ಯಾಯೋಕ್ತ ೩-೬೯

ಪುನರುಕ್ತ ೮೪-೨೦

ಪುನರುಕ್ತಿ ೨೫-೪೨

ಪೂರ್ವಶಾಸ್ತ್ರ ಪದವಿಧಿ ೪೬-೪೬

ಪ್ರಕಟಶ್ಲೇಷಂ ೩೪-೭೬

ಪ್ರತಿವಸ್ತೂಪಮೆ ೮೪-೮೬

ಪ್ರಥಮಾ ೧೧೬-೨೬

ಪ್ರಯೋಗ ೩೮-೧೦, ೨೪-೮, ೫೦-೧೩, ೪೮-೪೬, ೬೨-೪೯, ೭೦-೫೧, ೧೦೧-೫೭, ೧೫೫-೬೬, ೧೬೩-೧೦೧

ಪ್ರಶಂಸೋಪಮೆ ೭೪-೮೪

ಪ್ರಸನ್ನ ೫೪-೪೮, ೭೭-೫೨

ಪ್ರಸನ್ನಗಂಭೀರತರೋಕ್ತಿ ೯೯–೫೭
ಪ್ರಸ್ತಾರ ೯೭–೨೨
ಪ್ರಾಕ್ತನೋಕ್ತ ೩೭–೪೪
ಪ್ರಾಸ ೩೦–೪೩, ೪೫–೪೬, ೩೫–೪೪
ಪ್ರಾಸಾಭಾಸ ೪೫–೪೬
ಪ್ರಿಯತರ ೪–೭೦, ೨೦೩–೧೦೯

ಬ

ಬಹೂಪಮೆ ೮೦–೮೫
ಬಿಂದುಚ್ಯುತಿ ೧೪೪–೬೪, ೧೪೯–೬೫
ಬೀಭತ್ಸ ೧೮೮–೧೦೬, ೧೯೫–೧೦೮
ಬೀಭತ್ಸರಸ ೧೦೦–೫೭

ಭ

ಭಯಾನಕ ೧೦೦–೫೭, ೧೮೮–೧೦೬,
೧೯೩–೧೦೭
ಭಾವಿಕಾಲಂಕಾರ ೨೦೭–೧೧೦
ಭಾವೆ ೧೪೪–೬೪, ೧೪೫–೬೪

ಮ

ಮಧುರ ೫೪–೪೮, ೬೦–೪
ಮಧುರರಸ ೬೨–೪೯
ಮಧುರಾಳಾಪ ೬೨–೪೯
ಮಧುರೋಕ್ತಿ ೧೦೦–೫೭
ಮಹಾಧ್ವಕೃತಿ ೧೬–೬
ಮಾತು ೭೩–೫೧, ೧೦೧–೫೭
ಮಾತ್ರೆ ೩೪–೪೪
ಮಾರ್ಗ ೨–೩೭, ೪೮–೪೬, ೪೯–೪೭,
೫೦–೪೭, ೧೦೧–೫೭, ೧೦೭–೫೮
ಮಾರ್ಗಂ ೮–೩೮, ೧೧–೩೯, ೨೬–೪೨
ಮಾರ್ಗಕ್ರಮ ೧೪೭–೩೨
ಮಾರ್ಗಗತಿ ೪೬–೪೬
ಮಾರ್ಗದ್ವಯ, ೫೧–೪೭, ೬೦–೪೯
ಮಾರ್ಗದ್ವಿತಯಗತಿ ೯೭–೫೬, ೯೮–೫೬
ಮಾರ್ಗಯುಗಳ ೮೨–೫೩
ಮಾರ್ಗಯುಗ್ಮ ೧೦೭–೫೮, ೧೧೧–೫೯
ಮಾಲೋಪಮೆ ೮೧–೮೫
ಮುಕ್ತಕ ಪದ ೮೭–೫೪
ಮುರಜಬಂಧಂ ೧೪೦–೬೩
ಮುರಜಬಂಧಕಂ ೧೧೨–೫೯
ಮೃದಂಗ ಸಂಗೀತ ೫೫–೧೪
ಮೃದು ೫೬–೪೮
ಮೃದುಬಂಧ ೫೭–೪೮
ಮೋಹಾಪೋಹಂ ೧೮೩–೧೦೫
ಮೋಹೋಪಮೆ ೬೯–೮೩

ಯ

ಯತಿ ೭೧–೧೭, ೭೩–೧೭, ೭೫–೧೮
೭೭–೧೮
ಯತಿಭಂಗ ೬೯–೧೭, ೭೩–೧೭
ಯಮಕ ೧೨೯–೬೧, ೧೩೭–೬೩
ಯಮಕಂ ೧೧೨–೫೯
ಯಾಥಾಸಂಖ್ಯಾ ೨–೬೯; ೪೯–೭೯, ೮೬–೨೦
ಯುಕ್ತಕಾರಿ ೩೨–೭೫
ಯುಕ್ತರೂಪಕ ೨೫–೭೪
ಯುಕ್ತಾಯುಕ್ತಂ ೩೩-೭೫
ಯುಕ್ತಾರ್ಥ ೩೭–೭೬

ರ

ರಸಮಾರ್ಗ ೧೯೮–೧೦೬
ರಸವತ್ ೪–೭೦
ರಸವದ್ವಿವಿಧಾಳಂಕಾರ ೧೮೭–೧೦೬

ರಸವಿಶೇಷ ೯೮-೫೬
ರೂಪಕ ೨-೬೯, ೧೨-೭೧, ೨೭-೪೨
ರೂಪಕಾಪಹ್ನುತಿ ೨೪-೬೪
ರೂಪಕೋರುರೂಪಕ ೨೩-೭೩
ರೌದ್ರ ೧೮೮-೧೦೬, ೧೯೪-೧೦೮
ರೌದ್ರರಸಂ ೧೦೦-೫೭

ಲ

ಲಘು ೯೨-೨೧, ೧೨೬-೨೮, ೧೨೭-೨೮
ಲಘುದೋಷ ೧೨೯-೨೯
ಲಘೂಚ್ಚಾರಣೆ ೨೦-೪೧
ಲಕ್ಷಣ ೪೧-೧೧, ೪೮-೧೨, ೯೦-೮೭, ೨೧೯-೧೧೩
ಲಕ್ಷ್ಯ ೪೧-೧೧ ; ೯೦, ೯೧-೮೭ ; ೧೩೭, ೧೩೮-೯೬ ; ೧೬೮-೧೦೨, ೧೮೨-೧೦೫, ೨೧೯-೧೧೩
ಲೇಶ ೧೭೦-೧೦೩
ಲೋಕವಿರುದ್ಧಂ ೧೦೯-೨೫
ಲೋಕಾಯತ ೧೧೫-೨೪

ವ

ವಕ್ರ ೫೨-೪೬
ವಕ್ರೋಕ್ತಿ ೫೩-೪೭
ವಚನ ೧೧೪-೨೬
ವಚನದೋಷ ೧೧೩-೨೫, ೧೧೮-೨೬
ವರ್ಗ ೩೧-೪೩
ವರ್ಗಪ್ರಾಸ ೩೭-೪೪, ೩೯-೪೫
ವರ್ಣಚ್ಯುತಂ ೧೪೪-೬೪, ೧೫೧-೬೬
ವರ್ಣವ್ಯತ್ಯಯ ೧೪೪-೬೪, ೧೪೮-೬೫
ವಸ್ತೂಪಮಾನ ೬೦-೮೧
ವಾಕ್ಯೋಪಮೆ ೮೨-೮೫
ವಿಕಟಾಕ್ಷರ ೧೪೯-೩೩
ವಿಕಲ್ಪ ೧೩೬-೩೦, ೧೩೭-೩೦
ವಿಕಲ್ಪದೋಷ ೧೧೩-೨೫
ವಿನುತಪ್ರಾಸಂ ೩೧-೪೩, ೩೪-೪೪
ವಿಪರೀತಂ ೩೬-೭೬
ವಿಪರ್ಯಯ ೩೬-೭೬
ವಿಪರ್ಯಯವೃತ್ತಿ ೫೫-೪೮
ವಿಪರ್ಯಯೋಪಮೆ ೬೨-೮೧
ವಿಭಕ್ತಿ ೧೫-೪೦, ೧೧೪-೨೬, ೧೧೫-೨೬, ೧೨೧-೨೭
ವಿಭಾವನಾ ೪-೭೦
ವಿಭಾವನಾಳಂಕಾರ ೧೬೮-೧೦೨
ವಿಭಿನ್ನರೂಪಕ ೨೨-೭೩
ವಿರುದ್ಧಾತ್ಮಕ ೩೫-೭೬
ವಿರುದ್ಧರೂಪಕ ೧೯-೭೩
ವಿರುದ್ಧಾರ್ಥ ೬೯-೧೭, ೮೧-೧೯, ೮೩-೧೯
ವಿರೋಧ ೩-೬೯
ವಿರೋಧಾಭಿಧಾನ ೧೩೪-೯೬
ವಿರೋಧೋಪಮೆ ೭೫-೮೪
ವಿಶಂಕಾ ೧೧೩-೨೫
ವಿಶಂಕೆ ೧೩೮-೩೦, ೧೪೧-೩೧
ವಿಶೇಷ ೩-೬೯, ೬೦-೪೯
ವಿಶೇಷಣ ೧೨೬-೨೭
ವಿಶೇಷಣಗಣ (ಬಹು-, ಅಧಿಕ-) ೨೭-೪೨, ೨೯-೪೩
ವಿಶೇಷಣರೂಪಕ ೧೮-೭೨
ವಿಶೇಷ ಪ್ರಕಾಶಕ ೩೧-೭೫
ವಿಶೇಷಾನುಭಾವ ಸದಳಂಕಾರ ೧೨೦-೯೩
ವಿಶೇಷಾಳಾಪ ೨೭-೪೨
ವಿಶೇಷ್ಯ ೧೧-೩೯, ೬೦-೪೯, ೯೪-೫೯, ೧೨೭-೨೭

ವಿಷಮಬಂಧ ೫೯–೪೯, ೧೦೦–೫೭
ವಿಷಮರೂಪಕ ೧೭–೭೨
ವಿಸಂಧಿ ೯೫–೨೨
ವಿಸಂಧಿಕಂ ೬೯–೧೭
ವೀರ ೧೮೮–೧೦೬
ವೀರರಸಂ ೯೯–೫೭, ೧೮೯–೧೦೭
ವೃತ್ತಜಾತಿ ೭೧–೧೭
ವೃತ್ತಾಕ್ಷೇಪ ೧೦೦–೮೯
ವೃತ್ತಿ ೧೦೧–೫೭
ವ್ಯತಿರೇಕ ೩೮–೭೬, ೩೯–೭೭
ವ್ಯವಹಿತದೋಷಂ ೯೦–೨೧
ವ್ಯವಹಿತ ೬೯–೧೭
ವ್ಯಸ್ತ ೯೨–೫೫
ವ್ಯಸ್ತರೂಪಕ ೧೪–೭೨
ವ್ಯಾಜರೂಪಕ ೨೬–೭೪
ವ್ಯಾಜಸ್ತುತಿ ೪–೭೦, ೧೬೦–೧೦೧
ವ್ಯಾವೃತ್ತಿ ೪–೭೦, ೨೦೦–೧೦೯

ಶ

ಶಬ್ದದೋಷ ೧೧೩–೨೫
ಶಬ್ದಾಲಂಕಾರ ೩–೩೭, ೩೦–೪೩, ೪೮–೪೬
ಶಾಂತ ೩೧–೪೩, ೩೫–೪೪, ೧೮೪–೧೦೬,
೧೯೭–೧೦೮
ಶಾಂತಪ್ರಾಸ ೩೭–೪೪
ಶಿಥಿಲ ೬೪–೫೦, ೬೬–೫೦
ಶಿಥಿಲಬಂಧ ೧೦೦–೫೭
ಶೃಂಗಾರ ೧೮೮–೧೦೬, ೧೯೨–೧೦೭
ಶೃಂಗಾರ ರಸಂ ೯೯–೫೭
ಶ್ರುತದುಷ್ಟ ೬೨–೧೫
ಶ್ರುತಿಕಷ್ಟಂ ೬೨–೧೫, ೬೮–೧೬
ಶ್ಲೇಷ ೩–೬೯
ಶ್ಲೇಷರೂಪಕ ೨೧–೭೩
ಶ್ಲೇಷಾಕ್ಷೇಪ ೧೦೨–೮೯
ಶ್ಲೇಷೆ ೧೦೮–೯೦, ೧೧೩–೯೧
ಶ್ಲೇಷೋಪಮೆ ೭೨–೮೩

ಸ

ಸಕಲವ್ಯಾಪಿ ೯–೭೫, ೩೦–೭೫
ಸಂಕೀರ್ಣ ೩–೬೯, ೧೫೬–೧೦೦
ಸದೃಶ ೨–೬೯
ಸದೃಶಯೋಗಿತಾ ೯೫–೮೮
ಸಂಧಾನೋಪಮೆ ೮೩–೮೫
ಸಂಧಿ ೯೮–೨೨
ಸಮ ೫೪–೪೮
ಸಮಂತಿ ೧೫೨–೬೬
ಸಮಬಂಧ ೫೬–೪೮, ೫೯–೪೯
ಸಮಯಂ ೧೦೫–೨೪
ಸಮಯ ವಿರುದ್ಧಂ ೧೦೫–೨೪
ಸಮಸ್ತರೂಪಕ ೧೩–೭೧
ಸಮಸಂಸ್ಕೃತ ೨೬–೪, ೫೧–೧೩, ೫೫–೧೪
ಸಮಹಿತ ಪ್ರಯೋಗ ೮೬–೫೪
ಸಮಾಸ ೩–೬೯, ೫೮–೧೪, ೯೪–೫೬,
೯೫–೫೬
ಸಮಾಸಪದ ೮೫–೫೪, ೮೭–೫೪, ೮೮–೫೪
ಸಮಾಸೋಕ್ತಿ ೧೨೬–೯೪
ಸಮಾಹಿತ ೫೪–೪೮, ೭೩–೫೧, ೭೫–೫೨,
೩–೬೯
ಸಮಾಹಿತಾಳಂಕರಣ ೧೨೩–೯೩
ಸಮೀಪಗತಂ ೩೧–೪೩
ಸಮೀಪ ಪ್ರಾಸ ೩೯–೪೫, ೪೧–೪೫
ಸಮುಚ್ಚಯ ೧೧೩–೨೫, ೧೨೧–೨೭,
೧೩೧–೨೯, ೧೩೩–೨೯

ಸಂಬಂಧಾಕ್ಷರ ೩೪–೪೪
ಸಂಬೋಧನೆ ೨೩–೪೧
ಸಂಯೋಗಾಕ್ಷರ ೩೫–೪೪
ಸರ್ವತೋಭದ್ರ ೧೨೬–೬೧
ಸಂಶಯಾಕ್ಷೇಪ ೧೦೪–೯೦
ಸಂಶಯೋಪಮೆ ೭೦–೮೩
ಸಹೋಕ್ತಿ ೩–೬೯, ೧೫೪–೧೦೦
ಸಾಪೇಕ್ಷ ೯೪–೫೬, ೯೫–೫೬
ಸಾವಯವ ರೂಪಕ ೧೫–೭೨
ಸಾಹಿತ್ಯವಿದ್ಯೆ ೨೧೮–೨೧೨
ಸುಕುಮಾರ, ೫೪–೪೮, ೭೦–೫೧
ಸುಕುಮಾರತರೋಕ್ತಿ ೯೯–೫೭
ಸುಗತ ೧೦೫–೨೪
ಸುಗುಣಾಪೋಹಂ ೧೮೬–೧೦೬
ಸುರಗಣಾಧಿಪ ೧೪೨–೩೧
ಸೂಕ್ಷ್ಮ ೩–೬೯
ಸೂಕ್ಷ್ಮಾನುಗತಾಳಂಕಾರ ೧೧೭–೯೨
ಸ್ಫುಟ ೫೬–೪೮
ಸ್ಫುಟಬಂಧ ೫೭–೪೮
ಸ್ಫುಟೋಕ್ತಿ ೯೯–೫೭
ಸ್ವಭಾವ ೫೨–೪೭
ಸ್ವಭಾವಾಖ್ಯಾನ ೫೩–೪೭

ಹ

ಹಾಸ್ಯ ೧೮೮–೧೦೬, ೧೯೬–೧೦೮
ಹಾಸ್ಯರಸ ೧೦೦–೫೭
ಹೀನಾಧಿಕ ಪ್ರಶಂಸಾದೋಷ ೮೮–೮೬
ಹೀನಾಧಿಕ ಪ್ರಶಂಸಾನುಗುಣ ೮೭–೮೬
ಹೇತು ೪–೭೦
ಹೇತುರೂಪಕ ೨೦–೭೩
ಹೇತೂಕ್ತಿ ೧೬೩–೧೦೧
ಹೇತ್ವಾಕ್ಷೇಪ ೧೦೫–೯೦
ಹೇಳಿಕೆ ೧೪೩–೬೪

ಅನುಬಂಧ-೫

ಹೆಸರುಗಳ ಅಕಾರಾದಿ

(ಮೊದಲನೆಯ ಅಂಕಿ ಪದ್ಯವನ್ನೂ ಎರಡನೆಯ ಅಂಕಿ ಪುಟವನ್ನೂ ಸೂಚಿಸುತ್ತವೆ)

ಅ

ಅಣುವ ೩೮–೪೪, ೪೦–೪೫, ೮೯–೫೫,
೯೧–೫೫
ಅತಿಶಯದವಳ ೫–೪, ೧೫೩–೬೬, ೫೫–೪೮,
೧೪೮–೩೨, ೧೧–೭೧, ೧೦೬–೯೦
೨೯–೪೩, ೨೪–೮, ೨–೩
ಅನಿಲತನಯ ೪೨–೪೫
ಅಪ್ರತಿಹತ ವಿಕ್ರಮ ೨–೩
ಅಮರಾಧಿರಾಜ ೯೬–೮೮
ಅಮೋಘವರ್ಷ ೧–೬೯, ೨೧೭–೧೧೨
ಆಳೆ ೫೮–೧೪

ಆ

ಆನೆ ೧೨೦–೨೭

ಈ

ಈಶಾನ (ಯಕ್ಷೇಶಾನ) ೯೬–೮೮

ಉ

ಉತ್ತರ ೫೧–೪೭
ಉದಾರ ೫೪–೪೮, ೮೧–೫೩, ೭೯–೫೩
ಉದಾರಚರಿತೋದಯ ೧೭–೪೦,
೧೮–೪೦, ೨೨೮–೧೧೪

ಒ

ಒಂಕುಂದ ೩೭–೧೦
ಒತ್ತುಂಗರಡೆ ೫೩–೧೩

ಕ

ಕಣಚರ ೧೦೫–೨೪
ಕಂದರ್ಪ ೮೪–೫೪
ಕಂದುಕಕ್ರೀಡೆ ೯೯–೨೩
ಕನ್ನಡ ೩೬–೧೦, ೪೬–೪೬, ೧೦೧–೫೭
ಕನ್ನಡಂಗಳ್ ೪೬–೧೨, ೫೭–೧೪
ಕಪಿಲ ೧೦೫–೨೪
ಕಪಿಪೃತನಾ ೮೯–೫೫, ೯೧–೫೫
ಕವಿರಾಜಮಾರ್ಗ ೧೫೦(ವ)–೩೩,
೧೫೫(ವ)–೬೬, ೨೩೧(ವ)–೧೧೫
ಕವಿವೃಷಭ ೩೧–೯, ೭೮–೧೮
ಕವಿವೃಷಭರ್ಕಳ್ ೧೭–೬. ೯೫–೫೬
ಕವೀಶ ೧೯–೭
ಕವೀಶರ್ ೧೨೯–೨೯
ಕವೀಶ್ವರ ೪–೪, ೩೨–೯, ೧೫೫–೬೬
ಕಾದಂಬರಿ ೨೬–೮
ಕಾವೇರಿ ೩೬–೧೦
ಕಾಳಿದಾಸ ೩೧–೯
ಕಿಸುವೊಟಲ್ ೩೭–೧೮

ಕುಡಿಯುರ್ ೬೫–೧೬
ಕುದುರೆ ೧೨೦–೨೭
ಕೂಸು ೬–೩೮
ಕೃತಕೃತ್ಯಮಲ್ಲ ೨–೩
ಕೃತಕೃತ್ಯಮಲ್ಲವಲ್ಲಭ ೩೦–೪೩,
ಕೊಪಣ ೩೭–೧೦

ಗ

ಗಣೇಶ ೧೦೯–೫೯
ಗಂಧರ್ವಗತಿ ೧೦೭–೨೪
ಗುಣಸೂರಿ ೩೧–೯
ಗೊರವ ೪೯–೧೩, ೧೩೨–೨೯,
೧೩೩–೨೯
ಗೋದಾವರಿ ೩೬–೧೦

ಚ

ಚತ್ತಾಣ ೩೩–೯, ೩೫–೧೦
ಚಂದ್ರ ೩೨–೯
ಚವುಪದಿ ೩೫–೧೦
ಚಿರಂತನಾಚಾರ್ಯ ೨೭–೮

ಜ

ಜಟಾಯು ೧೯೪–೧೦೮
ಜನಕತನಯಳ್ ೪೦–೪೫
ಜನಕಸುತೆ ೧೯೪–೧೦೮
ಜಯಬಂಧು ೨೯–೯
ಜಾನಕಿ ೧೩೦–೬೨
ಜಿನಾಧಿಪ ೯೧–೨೧

ಝ

ಝಷಕೇತನ ೪೦–೪೫

ತ

ತಾರಾ ೧೩೦–೬೨
ತಿವದಿ ೩೫–೧೦

ದ

ದಕ್ಷಿಣಾಪಥ ೧೧೦-೫೯
ದಕ್ಷಿಣಾಯನ ೧೦೯–೫೯
ದಶವದನ ೯೩–೫೫, ೯೬–೫೬
ದಶಾನನ ೧೯೦–೧೦೭
ದಿವಿಜ ೧೪೧–೩೧
ದುರ್ವಿನೀತ ೨೯–೯
ದೇಶಂ ೧೧೦–೨೫
ದೇಶಿ ೪೬–೧೨
ದೇಸಿ ೪೮–೧೨, ೫೦–೧೩, ೭೫–೧೮

ನ

ನರಮಹಿತ ೮೨–೧೯
ನರಲೋಕಚಂದ್ರ ೨೩–೭, ೧೮೧–೧೦೫
ನಾಗಾರ್ಜುನ ೨೯–೯
ನಾರಾಯಣ ೩೧–೯
ನಿತ್ಯಮಲ್ಲವಲ್ಲಭ ೧೩–೩೯
ನೀತಿನಿರಂತರ ೧೧೧–೫೭, ೧೪೯–೩೩
ನೃಪತುಂಗ ೧–೩, ೨–೩೭, ೧೫೩(ವ)–೬೬,
೨೦೭–೧೧೦, ೨೧೯–೧೧೩, ೨೨೪–೧೧೪,
೨೩೮–೧೧೫, ೨೩೧(ವ)–೧೧೫
ನೃಪತುಂಗದೇವ ೪೫–೪೬, ೯೮–೮೮,
೧೦೭–೫೮, ೧೦೭–೯೦, ೧೪೭–೩೨,
೧೫೦(ವ)–೩೩
ನೆಲ್ಲು ೪–೩೮
ನೈಋತ ೯೬–೮೮

ಪ

ಪಗರಣ ೬೮–೧೬
ಪಂಡಿತ ೩೨–೯, ೧೧೩–೨೫, ೧೩೯–೩೧, ೧೪೦–೩೧
ಪರದರ್ ೬೫–೧೬
ಪರಮಾಚಾರ್ಯರ್ ೪೨–೧೧
ಪರಮೋದಯ ೧೫೫–೧೧೦
ಪೞಗನ್ನಡ ೪೮–೧೨, ೪೯–೧೩
ಪಾಗದ ೪೧–೧೧
ಪಾರಿಜಾತ ೧೦೨–೨೩
ಪಾರ್ವರ್ ೬೫–೧೬
ಪಾವುಡಂ ೧೧೮–೨೬
ಪುರಾಣಕವಿ ೪೭–೧೨, ೫೧–೪೭
ಪುರಾತನ ಕವಿಗಳ್ ೩೩–೯
ಪುಲಿಗೆಱೆ ೩೭–೧೦
ಪೂರ್ವಕವಿಗಳ್ ೧೪೩–೬೪
ಪೂರ್ವಾಚಾರ್ಯರ್ ೭೫–೧೮

ಫ

ಫಣಿನಾಥ ೧೩೨–೩೧
ಫಣಿನಾಯಕ ೧೪೧–೩೧

ಬ

ಬೃಹಸ್ಪತಿ ೬–೪
ಬೆದಂಡೆ ೩೩–೯, ೩೪–೧೦

ಭ

ಭಾರವಿ ೩೧–೯

ಮ

ಮದ್ದಳೆ ೫೩–೧೩
ಮನೋಭವ ೧೪೧–೩೧
ಮಾಘ ೩೧–೯
ಮಾರುತಿ ೧೨೪–೬೧
ಮುತ್ತು ೫–೩೮
ಮೆೞಸು ೫–೩೮
ಮೊಸರು ೪–೩೮

ಯ

ಯಮ ೯೬–೮೮
ಯಕ್ಷ ೯೬-೮೮

ರ

ರಘುಕುಲಲಲಾಮ ೮೩–೫೫, ೯೬–೫೯
ರಾಘವ ೩೮–೪೪
ರಾವಣ ೧೮೯–೧೦೭
ರಾಷ್ಟ್ರ ೧೧೦–೨೫
ರಾಶಿ ೪–೭೦

ಲ

ಲಕ್ಷ್ಮಣ ೯೬–೫೬
ಲಕ್ಷ್ಮಿ ೧೧೦–೫೯
ಲಕ್ಷ್ಮೀಧರ ೯೩–೫೫
ಲಂಕೆ ೧೯೮–೧೦೭
ಲವ ೪–೭೦
ಲೋಕಪಾಲ ೩೨–೯

ವ

ವರುಣ ೯೬–೮೮
ವಾಗಧಿಪ ೧೫೪–೬೬
ವಾಯು ೯೬–೮೮
ವಾರಿಜನಾಭ ೧೩೬–೬೨
ವಾಸುಗಿ ೪೬–೧೨
ವಿಮಳೋದಯ ೨೯–೯
ವಿವೇಕಬೃಹಸ್ಪತಿ ೬–೪
ವೀತರಾಗ ೭೯–೧೯
ವೀರನಾರಾಯಣ ೨–೩, ೧೮೦–೧೦೫
ವೈದಿಕ ೧೩೫–೬೨

ಶ

ಶತಮುಖ ೩೮–೪೪, ೪೪–೪೬
ಶ್ರೀವಿಜಯ ೩೨–೯, ೧೫೦–೩೩, ೧೫೫–೬೬, ೨೩೧–೧೧೫
ಶ್ರುತಿಯುವತಿ ೧೪೮–೩೨

ಸ

ಸಂಸ್ಕೃತ ೫೭–೧೪
ಸಕ್ಕದ ೪೧–೧೧, ೫೧–೧೩, ೫೮–೧೪, ೬೧–೧೫, ೧೧೭–೨೯, ೧೪೯–೩೩
ಸಮಂಜಸ(?) ೬೬–೧೬
ಸರಸ್ವತಿ ೩–೩
ಸರಸ್ವತೀ ತಿರ್ಥಾವತಾರ ೨೨೫–೧೧೪, ೨೩೧ (ವ)
ಸೀತಾದೇವತೆ ೧೮೯–೧೦೭
ಸೀರೆ ೧೨೮–೨೮
ಸ್ಮರ ೧೪೨–೩೧

ಹ

ಹರ್ಷಚರಿತ ೨೬–೮
ಹುತವಹ ೯೬–೮೮

ಅನುಬಂಧ ೬

ಮುಖ್ಯ ಪಾಠಾಂತರಗಳು

ಸಂಕೇತ ವಿವರಣೆ: ೧. ಸ್ವೀ. ಪಾ. = ಸ್ವೀಕೃತ ಪಾಠ: ಸ್ವೀಕೃತ ಪಾಠವು ತಿದ್ದುಪಾಟಾದುದಾಗಿದ್ದರೆ, ಚೌಕ ಕಂಸದಲ್ಲಿ ಕಾಣಿಸಿ, ತಿದ್ದುಪಾಟನ್ನು ಸೂಚಿಸಿದವರ ಸಂಕೇತಾಕ್ಷರವನ್ನು ಪಕ್ಕದಲ್ಲಿ ಕಾಣಿಸಿರುತ್ತದೆ. ಉದಾ., I-೪೭ರಲ್ಲಿ, ತಜಿಂಸ[ಲೆ] (ಮ.); ಈ ತಿದ್ದುಪಾಟು ಮದ್ರಾಸು ಮುದ್ರಣದ್ದು. ಪಕ್ಕದಲ್ಲಿ ಸಂಕೇತಾಕ್ಷರವಿಲ್ಲದಿದ್ದರೆ, ಆ ತಿದ್ದುಪಾಟು ಪ್ರಕೃತ ಮುದ್ರಣದ ಸಂಪಾದಕನದು ಎಂದು ತಿಳಿಯತಕ್ಕದ್ದು. ೨. ಪ. = ಕೆ. ಬಿ. ಪಾಠಕರು ಸಂಪಾದಿಸಿರುವ ಮುದ್ರಿತ ಪ್ರತಿಯ ಪಾಠ. ೩. ಮ. = ಮದರಾಸು ಮುದ್ರಣದ ಪಾಠ. ೪. ಕ. = ಮೈಸೂರು ಓರಿಯಂಟಲ್ ಲೈಬ್ರರಿಯ ನಂ. ೧೨೫ ಹಸ್ತಪ್ರತಿಯ ಪಾಠ. ೫. ಖ. = ಮೈಸೂರು ಓರಿಯಂಟಲ್ ಲೈಬ್ರರಿಯ ನಂ. ೧೧೦ ಹಸ್ತಪ್ರತಿಯ ಪಾಠ. ೬. ಸೂ. ಪಾ. = (ವಿಚಾರಾರ್ಹವಾದ) ಸೂಚಿತ ಪಾಠ. ಈ ಪಾಠದ ಪಕ್ಕದಲ್ಲಿ (?) ಪ್ರಶ್ನಾರ್ಥಕ ಚಿಹ್ನೆಯಿದ್ದರೆ, ಪಾಠ ಅಂಗೀಕಾರಾರ್ಹ.

ಪರಿಚ್ಛೇದ ೧

ಪುಟ	ಪದ್ಯ	ಪಂಕ್ತಿ	ಸ್ವೀ. ಪಾ.	ಪಾಠಾಂತರಗಳು
೩	೧	೩	—ನಾವನನಗಲಲ್ (ಪ., ಕ, ಖ)	ನಾವಗಮುಗಲಲ್ (ಮ.)
೩	೩	೩	—ಹಂಸೀಭಾವದೆ (ಮ.)	ಹಂಸವಿಭಾವದೆ (ಪ., ಕ); ಹಂಸವಿಭಾವದಿ(ಖ)
೪	೬	೪	ಏಕೆ ವಿವೇಕ (ಪ, ಮ)	ಏಕ—(ಕ, ಖ)
೪	೭	೧	ಮೃಗಪಶು ಶಕುನಿ (ಪ, ಮ)	ಮೃಗಪತಿ—(ಕ, ಖ)
೫	೧೧	೧	ಪ್ರತಿಭಾವತ್ವ (ಪ, ಮ)	ಮತಿಭಾವತ್ವ (ಕ)

೫	೧೧	೩	ಶ್ರುತಪರಿಚಯು (ಪ, ಖ)	ಕೃತಿಪರಿಚಯು (ಮ)
೫	೧೨	೧	ಮನಮುಂ (ಪ)	ಮನದೊಳ್ (ಮ)
೫	೧೨	೨	ಪೊಸತಾಗೆ (ಪ)	ಪೊಸತಾಗಿ (ಮ)
೫	೧೩	೨	ತಾಳ್ದ (ಪ)	ತಾಳ್ದಿ (ಮ), ತಾಳ್ದೀ (ಖ)
೬	೧೪	೨	ಕೃತಿಯೊಳಿಡುವವಂ (ಪ)	ಕೃತಿಯೊಳಿಡುವನಂ (ಕ), ಕೃತಿಯೊಳದು ವ [ರಂ] (ಮ), ಕೃತಿಯೊಳದು ವ [ಲಂ] (ಸೂ. ಪಾ., ತೀ.ನಂ.ಶ್ರೀ., ಭಾ. ಕಾ. ಮೀ., ಪು. ೪೪೩)
೮	೨೧	೨	ಶ್ರೀಕರಣೋದ್ಯುಕ್ತ (ಪ)	ಸ್ವೀಕರಣೋ—(ಮ)
೧೦	೩೪	೨	ಮೊಂದೊಂದೆಡೆಗೊಂ[ಡು]	—ದೆಡೆಗೊಂದು (ಪ, ಮ)
೧೦	೩೫	೩	ಗೀತಿಕೆ ತಿವದಿ (ಪ)	ಗೀತಿಗೆ ತಿವಿದಿ (ಮ)
೧೧	೩೯	೩	ಕಿಱುವಕ್ಕಳುಮಾ—(ಪ)	ಕಿಱುವಕ್ಕಳ್ ಮಾ (ಮ)
೧೧	೪೧	೩	ನಿಕ್ಕುವವೊಳವ—(ಪ)	ನಿಕ್ಕುವನೊಳವ—(ಮ)
೧೧	೪೧	೪	ಲಕ್ಷ್ಯಮುಂ ಲಕ್ಷಣಮುಂ (ಪ)	ಲಕ್ಷ್ಯಮುಂ ಲಕ್ಷಣಮುಂ (ಮ)
೧೧	೪೩	೪	—ನೆಡೆವೆತ್ತ (ಪ, ಮ)	—ನೆದೆವೆತ್ತ (ಕ), —ನೆರ್ದೆವೆತ್ತ
೧೨	೪೫	೧	ಕಾಣನೇಗೆಯ್ದುಂ (ಪ, ಮ)	ಕಾಣೆಗೆಯ್ದುಂ (ಕ)
೧೨	೪೫	೪	ಜಾಣರಿನೋದಿಸಿ (ಪ, ಮ)	ಜಾಣರಿಂ ನೋಡಿಸಿ (ಪ-c ಪಾಠಾಂತರ) (?)
೧೨	೪೬	೧	ದೋಸಮಿನಿತೆಂದು (ಪ)	ದೋ [ಷ]—(ಮ)
೧೨	೪೭	೨	—ದ್ಭಾಪಿಸಿ	—ದ್ಭಾಷಿಸಿ (ಮ)
೧೨	೪೮	೨	ಸಂತ[ತ]ಗತ (ಮ)	ಸಂತತಿಗತ (ಪ)

ಪುಟ	ಪದ್ಯ	ಪಂಕ್ತಿ	ಸ್ವೀ. ಪಾ.	ಪಾಠಾಂತರಗಳು
೧೨	೪೭	೪	ತಱಿಸ[ಲೆ] (ಮ)	ತಱಿಸದೆ (ಪ)
೧೩	೪೯	೩	ಹಡುವಸುಮುಱಿಸೆಟ್ಟ—(ಪ)	[ಹಡವ ಸಮುರೆನಿಟ್ಟ] (ಮ)
೧೩	೫೧	೧/೨	ಸಯ್ತುಮರ್ದಿರೆ	[ತಳ್ತ]ಮರ್ದಿರೆ (ಮ)
೧೩	೫೩	೩	—ಮೊತ್ತುಂಗರಡೆ (ಮ)	—ಮೋದುಂಗರಡೆ (ಪ)
೧೫	೬೩	೨	ಸಯ್ತುಲ್ತುರುಂ [ದೂರಮೆನೆಡೆತುಡ ಗರ್ಪೂರಂ]	—ದೂಡಂರಮೆಡೆತುನೆ ಗರ್ಪೂರಂ (ಪ ; ಮ). (ಸೂ. ಪಾ.) —ದೂ [ರನೋಡಲಾಱಿ ಪೂರಂ] (ಮು. ತಿ.)
೧೬	೬೬	೧	ಬೆಸದಿರ್ದು	ಬೆ [ಸೆ] ದಿರ್ದು (ಮ)
೧೬	೬೬	೩/೪	—ಮೇೞ್ಗೀೞ್ಗೆ (ಮ)	—ಮೆಳ್ಗೀಳ್ಗೆ (ಪ.—c ಪಾಠಾಂತರ), —ಮೆಳ್ದೆಳ್ದೆ (ಪ)
೧೭	೭೧	೪	—ಶಾಸ್ತ್ರೋಕ್ತ (ಪ, ಮ)	ಶಾಸ್ತ್ರಾರ್ಥ (ಪ—A B ಪಾಠಾಂತರ)
೧೭	೭೨	೧	ಬಗೆ[ಯುಂ]	ಬಗೆಯಂ (ಪ, ಮ)
೧೭	೭೩	೧	ತಡವಡಿಸಿ (ಪ)	ತಡತಡಿಸಿ (ಮ., ಪ.—c ಪಾಠಾಂತರ)
೧೭	೭೩	೩	—ದಲಸದ[ದಂ]	—ದಲಸದರಂ (ಪ, ಮ)
೧೭	೭೩	೪	ತ[ದ]ದೋಷಂ	—ತದು ದೋಷಂ (ಪ ಮ)
೧೮	೭೫	೩	ದೇಸಿಯನೆ (ಪ, ಖ)	ದೇಸಿಯೆನೆ (ಮ), ದೇಸೆಯುನೆ (ಕ)
೧೮	೭೬	೪	ಚಳಿತಂಬೋಲ್ (ಪ)	ಚರಿತಂ—(ಪ—c ಪಾಠಾಂತರ ; ಮ)
೨೦	೮೮	೨	ವಿಕಾಶಮುಂ (ಪ)	ವಿಲಾಸಮುಂ (ಮ)
೨೧	೮೯	೩	—ಗೆ[ೕನಂ]ನೋೞ್ಪಿಗ (ಮ)	ಗೇನ್ನಂನ್ನೊಳ್ಪಿಗ (ಪ), ಗೆನc—(ಕ)

೨೧	೯೧	೪	ತತ್ಸೇವನೆಯಿಂ (ಮ)	ತ್ವತ್ಸೇವನೆಯಿಂ (ಪ) ; ತ್ವತ್ಸೇವನೆಯಂ (ಕ) ; (ಸೂ. ಪಾ.) ತತ್ಸೇವನೆ[ಯಂ] (?) (ಬಿ. ಎಂ. ಶ್ರೀ.)
೨೧	೯೩	೨	—ಳೊಳೊಜಗದಿರೆ (ಪ)	—[ಳೊಳಗೊ] ಜಗವಿರೆ (ಮ., ಸೂ. ಪಾ.)(?)
೨೨	೯೬	೪	ಸೊಗಯಿಸಿ ತೋರ್ಕುಂ (ಪ)	—ಯಿ[ಸುತಿರ್ಕುಂ] (ಮ) (ಸೂ. ಪಾ.)
೨೩	೯೯	೪	ನಿಲ್ವಂ (ಪ)	ನಿಲ್ತಂ (ಮ)
೨೪	೧೦೬	೧	ಉಕ್ತವಿಚಾರಂ (ಪ)	ಉಕ್ತಿವಿಚಾರಂ (ಮ, ಖ)
೨೪	೧೦೬	೧/೨	ನ್ಯಾಯನಿಯುಕ್ತಂ (ಮ, ಖ)	ನ್ಯಾಯವಿಮುಕ್ತಂ (ಪ)
೨೪	೧೦೭	೪	ಪೇಟಿಲ್ಕೆಂತುಂ (ಮ)	ಪೇಟಿಲ್ಕಿಂತುಂ (ಪ)
೨೫	೧೧೦	೧	ವರರಾಷ್ಟ್ರಾದಿ (ಪ, ಮ)	ವರನಾಷ್ಟ್ರಾದಿ (ಕ); ವ [ನ] ರಾಷ್ಟ್ರಾದಿ (ಸೂ. ಪಾ.) (?)
೨೫	೧೧೨	೩	ದುರ್ಜನದೊಳಾದ (ಪ)	ದುರ್ಜನ[ರೊ]ಳಾದ (ಸೂ. ಪಾ.) (ಮ) (?)
೨೬	೧೧೪	೪	—ಕ್ಕಾರಯೆ (ಪ, ಮ)	—[ತ್ತಾ]ರಯೆ (ಸೂ. ಪಾ.) (ಬಿ.ಎಂ.ಶ್ರೀ.)(?)
೨೬	೧೧೬	೪	—ದದುಷ್ಟಕಾರ[ಕಂ] (ಪ)	—ಕಾರಣಂ (ಪ, ಮ)
೨೬	೧೧೮	೧	—ದದ [ಜಾ] (ಮ)	—ದದಜ (ಪ)
೨೬	೧೧೮	೩	ಕಾರಕವಿಭಕ್ತಿ (ಪ, ಮ)	ಕಾರಣ—(ಕ, ಖ)
೨೮	೧೨೧	೨	—ನೇಕ [ವಾಕ್ಯ]ದೊಳೆ (ಮ)	—ನೇಕ ಕಾವ್ಯದೊಳೆ (ಪ) ; ನೆಕವಾಕು ಕಾವ್ಯ (ಕ)
೨೮	೧೨೨	೧	ಎಡೆಗೊಂ [ಡು] (ಮ)	ಎಡೆಗೊಂದು (ಪ)
೨೮	೧೨೨	೨	ದೋಷ [ಮುಲ್ತುದು]	—ಕೆಲ್ತದಂ (ಮ), ಕಲ್ತಿದಂ (ಪ)
೨೮	೧೨೩	೩	ಬಗೆಯುಪಾಗ [ಡು] ಮಂತೆ (ಪ)	ಬಗೆಯದಾಗದುಮಂತೆ (ಪ, ಮ)

ಪುಟ	ಪದ್ಯ	ಪಂಕ್ತಿ	ಸ್ವೀ. ಪಾ.	ಪಾಠಾಂತರಗಳು
೨೮	೧೨೮	೧	ನೋಡಲಟ್ಟಿದೆ	ನೋಡಲಟ್ಟಿದೇ (ಪ) ; ನೊಡನಟ್ಟಿದೆ (ಮ) ; ನೊಡನಟ್ಟಿದೇ (ಸೂ. ಪಾ.) (ಬಿ.ಎಂ.ಶ್ರೀ.)
೨೮	೧೨೮	೩	ಮೋದದಾನುಡುವ (ಪ)	ಮೋದದಿಂ ನುಡುವ (ಮ)
೨೮	೧೨೮	೪	(೧) ಬಾರದೆ ಪೋದೆಡೆಯೊಳೆ (ಪ), (೨) —ನವನೆಂದಪಂ (ಪ)	(೧) ಬಾರದೆ ಪೋದೆ [ನಾಯೆ] ಡೆಯೊಳ[ಂ] (ಸೂ. ಪಾ.) (ಮ); ಬಾ [ರಾದೆ] ಪೋದೆಡೆ ಯೊಳೆ[ೞ] (ಸೂ. ಪಾ.) (ಬಿ. ಎಂ. ಶ್ರೀ.) (೨)—ನವನಂದವಮಂ (ಮ); —ನವನೆಂದ [ಪೆಂ] (ಸೂ. ಪಾ.) (ಬಿ. ಎಂ. ಶ್ರೀ.)
೨೯	೧೩೦	೪	—ತಿರವೆ [ಱೊ] ಡ್ಡಱ	—ತಿರವೆಳೊಡ್ಡಱ—(ಪ, ಮ)
೨೯	೧೩೧	೪	ಪೊಸ [ಪೊಳ್ಗ] ಳಂ	—ಪೊೞ್ಗಳಂ(ಪ); ಪೊಸ—ಪೋೞ್ಗಳಂ(ಮ.)
೨೯	೧೩೨	೩/೪	—ಚ್ಚಯೋದ್ಭಾವಕ—(ಪ, ಮ)	—ಚ್ಚಯೋದ್ಭಾವಿತ (ಖ) (?)
೩೦	೧೩೪	೨	ತೋಱಿ (ಮ)	ತೋಱು (ಪ, ಕ)
೩೦	೧೩೪	೩	ನೃಪತಾನೆ (ಮ)	ನೃಪನಾನೆ (ಪ)
೩೦	೧೩೪	೪	(೧) —ತ್ತೇಜು [ವಂ] (೨) —ನೆಂಬು[ದ]ದೂಷಿತಂ (೩) ಪಣಿದೊಡಾ—(ಪ, ಮ)	(೧)—ತ್ತೇಜುವೆಂ (ಪ, ಮ, ಕ); (೨)—ನೆಂಬುದು ದೂಷಿತಂ (ಪ, ಮ) (೩) ಪಂಣಿದೊ—(ಕ)
೩೦	೧೩೫	೩	ಪುಸಿವರಾಗಿರದೆ (ಪ)	ಪುಸಿವರಾಗಿರೆ (ಮ)
೩೦	೧೩೫	೪	ವಿಕಲ್ಪದ ದೋಷವಮಂ (ಪ)	ವಿಕಲ್ಪ ದೋಷಮಂ (ಮ)
೩೦	೧೩೬	೪	ಗಱಿಯು[ದ]ಂತಿದನಿಂತಿರೆ	ಗಱಿಯುದಿಂತಿ[ಳಿ]ದನಿಂತಿರೆ (ಪ, ಮ)
೩೦	೧೩೮	೧	ನಿಯಮಿತಾ[ನ್ವಯ] (ಮ)	ನಿಯಮಿತಾನ್ವಿತ (ಪ)

೩೧	೧೪೩	೧	ಅಪರಿಮೇಯಯಮೆ (ಪ)	ಅಪರಿಯೇಯಮೆ (ಮ)
೩೧	೧೪೩	೪	—ಭ್ಯುಪ[ಮಿತೋ] ಕ್ತಿ (ಮ)	—ಭ್ಯುಪಗಮೋಕ್ತಿ (ಪ, ಕ, ಖ)
೩೨	೧೪೪	೨	ಜಳದವೃಂದದವೋಲಿರೆ (ಪ, ಮ)	ಜಳದ ಸಂಹತಿಯಂತಿರೆ (ಕ, ಖ)
೩೨	೧೪೫	೨	ತಿರ್ದುವುದ—	[ತೀರ್ಚು]ವು—(ಸೂ.ಪಾ.) (ಬಿ.ಎಂ.ಶ್ರೀ)(?)
೩೨	೧೪೬	೪	—ಭ್ಯುಪ[ಮಿತ]ಕ್ಕೆ (ಮ)	—ಭ್ಯುಪಗಮಕ್ಕೆ (ಪ)
೩೨	೧೪೭	೨	ಕ್ರಮು[ಮುಮುನ]ಭಿ—(ಮ)	ಕ್ರಮುನಮುನಾಭಿ (ಪ, ಕ)
೩೨	೧೪೭	೨	—ರ್ಕಳಪ್ಪ[ರಾ]	—ಳಪ್ಪರ್ (ಮ),—ಳಪ್ಪ × (ಪ)
೩೨	೧೪೭	೩	ರೂಪಕಾ[ವ್ಯಾ]	—ಕಾವ್ಯ (ಪ, ಮ)
೩೨	೧೪೭	೪	ನಿರಪಾಯದೆಯ್ದ (ಪ)	ನಿರಪಾಯಕೆಯ್ದ (ಮ) ; ನಿರಪಾಯ[ಮೆ]ಯ್ದ (ಸೂ, ಪಾ.)
೩೨	೧೪೮	೧	ಧವಳೋರ್ವಿಪೋದಿತಾಳಂ (ಪ, ಮ)	ಧವಳೋರ್ವೀಶೋದಿ—(ಕ, ಖ)
೩೨	೧೪೮	೨	ಕೃತಿಮತಿ[ಯೆ]ನಿರಂತರ	ಕೃತಿಮತಿನೀತಿ—(ಪ, ಮ)
೩೨	೧೪೮	೩	ಶ್ರುತಿಯುವತಿ (ಪ)	ಶ್ರುತ—(ಮ)
೩೨	೧೪೮	೪	ಸ್ವತಗುಣದಿಂ[ದೆ] ಕೃತಕೃತ್ಯಮಕ್ಕುಂ	ಸ್ವತಗುಣದಿಂ ಕೃತಕೃತ್ಯ—(ಪ) ; ಸ್ವತಗುಣ ಗಣದಿಂದೆ ಕೃತ್ಯಮಕ್ಕುಂ (ಮ) ; ಸ್ವತಗುಣ ಕೃತಕೃತ್ಯಮಲ್ಲನಕ್ಕುಂ (ಸೂ. ಪಾ.) (ಮ)
೩೩	೧೪೯	೪	ಗುಡಿವಿಡುವಂತೆ ನೀಳ್ದು ನಿಲೆವೇಟ್ಟುವುದು (ಪ)	ಗುಡಿವಿಡಿಪಂತೆ ನೀಟ್ಟಿನಿತುವೇಟ್ಟುದು (ಮ)

ಪರಿಚ್ಛೇದ ೨

೩೯	೯	೨	ಪೇಟಬದದಜಿಸೊಳೆ (ಪ)	ಪೇ [ಟ್ಟುಮ] ದ—(ಮ) (ಸೂ. ಪಾ.)
೩೯	೧೩	೨	ಮೇಣ್ ಪೆಜಿಂ (ಪ)	ಮೇಣ್ ವೆಜಿಂ (ಮ)

ಪುಟ	ಪದ್ಯ	ಪಂಕ್ತಿ	ಸ್ವೀ. ಪಾ.	ಪಾಠಾಂತರಗಳು
೪೦	೧೪	೪	ಚಪಲಾಧ್ವಜನೋಕ್ತಿ (ಪ)	ಚಪಲಧ್ವಜನೋಕ್ತಿ (ಮ, ಖ)
೪೦	೧೫	೪	ನಿಪುಣಂ (ಪ)	ನಿಪುಣರ್ (ಮ) (?)
೪೦	೧೯	೪	ಸಂದೋಃಸಜಜಿಸುವುದು	—ಸ[ರಿ]ಸು—(ಸೂ. ಪಾ.) (ಬಿ.ಎಂ.ಶ್ರೀ.) (?)
೪೨	೨೫	೩	ಪರಾರ್ಥಿಗಳುಂ (ಪ)	ಪರಾರ್ತಿಗಳುಂ (ಮ)
೪೨	೨೫	೪	ಪುನರುಕ್ತಿಕಮುಂ (ಮ)	—ಕ್ತಿಕಮುಂ (ಪ)
೪೨	೨೬	೩	ಬಲಿ (ಪ)	ಪುಲಿ (ಮ)
೪೩	೩೦	೪	—ದದ[ಜಾ] (ಮ)	ದದಜ (ಪ)
೪೩	೩೧	೩	—ಮಂತಗತಂ ಸಂ (ಪ)	ಮತ್ಯಂತಗತಂ (ಮ)
೪೩	೩೨	೩	—ದನಿತಂ (ವ)	—ದನಿತುಂ (ಪ)
೪೩	೩೩	೨/೩	—ದಿಂಬನೆ (ಪ); ಕುಡಲಿರ್ದಂ (ಪ, ಮ)	—ದಿಂಬೆನೆ (ಮ) (?); ದಿಂಬಿನೆ (ಕ); ಕುಡಲಿರ್ದಂ (ಕ, ಖ)
೪೩	೩೬	೧	ಪತ್ತಿ	ಪತ್ತೀ (ಸೂ. ಪಾ.) (ಮು. ತಿ.) (?)
೪೩	೩೬	೪	ಪುತ್ರಿಕೆಯೆನೆ ಬಬ್ಬ (ಮ)	ಪುತ್ರಿಕೆಯೆನೆ ಬಿಬ್ಬ (ಪ); ಪುತ್ರಿಕೆಯಲಿ (ಕ); ಪುತ್ರಿಕೆಯಲಿ ಬಿಳ್ದ (ಖ)
೪೫	೪೦	೨	ಕೇತನಾಭತನುತನುವಂ	—ನಾಭತರಲೋಚನೆಯುಂ (ಖ)
೪೬	೪೪	೪	ಶತಮುಖ ಸದೃಶಾನುಭಾವನೊಲವಿಂ ಪೆತ್ತಂ	ಶತಮುಖ ಸದೃಶಾನುಭಾವ ಪದಮುಂ—(ಮ); ಶತಮುಖ . . . ನೊಲವಿಂ ಪೆತ್ತಂ (ಖ); ಸತತಂ ನೃಪತುಂಗದೇವನೊಲವಿಂ ಪೊತ್ತಂ (ಪ)

೪೬	೪೬	೨	ತಜ್ಜುಸಲಾಗದಾರ್ಗ೦ (ಪ, ಮ)	ತಜ್ಜುಸಲಲಾಗದಾರ್ಗ೦ (ಖ); (ಸೂ. ಪೌ., ಬಿ. ಎಂ. ಶ್ರೀ.) (?)
೪೬	೪೭	೩	ದೊರೆಕೊಂಡೆಡೆಗಳೊ—(ಮ)	—ಕೊಂಡಡೆ—(ಪ)
೪೭	೪೯	೪	ಭೇದವದಜ್ಜುಂ ಮಾರ್ಗಂ (ಪ)	—ಮಾತುಂ (ಮ)
೪೭	೫೩	೩	ವಿ[ತ]ತೋತ್ತರ (ಮ)	ವಿದಿತೋತ್ತರ (ಪ)
೪೮	೫೫	೪	ತದ್ಭವದೊಳ್ (ಪ, ಮ)	ತದ್ದ್ವಯದೊಳ್(ಸೂ.ಪಾ.-ಬಿ.ಎಂ.ಶ್ರೀ.)(?)
೪೮	೫೬	೨	(೧) ಕಿವಿಗೆಡಜ್ಜು (ಪ); (೨) ಬಾರ [ದಂದಂಬಟ್ಟಂ]	(೧) ಕಿವಿಗೆದಜ್ಜು (ಮ); (೨) ಬಾರದಾದಂ ಮುಟ್ಟಂ (ಪ),—ದಾನಂ ಮುಟ್ಟುಂ (ಮ ; ಮು.ತಿ.)
೪೯	೬೨	೩	ಮುದಿತವಿತಾನಂ (ಪ, ಮ)	—ವಿಧಾನಂ (ಖ)
೫೩	೮೦	೨	—ನ್ನರುದಾ[ರರ]ರಾತಿ	—ನ್ನರುದಾರಾರಾತಿ (ಮ, ಪ)
೫೩	೮೧	೨	—ಮುದೀಚ್ಯದುರು (ಪ)	—ಮುದೀಚ್ಯರುರು (ಮ) (?)
೫೩	೮೧	೪	(೧) ಲೀಲಾಂಬುಜ (ಪ, ಖ) ; (೨) ಚಿತ್ರಾಧಿಕಮುಂ (ಪ, ಮ)	(೧) ನೀಲಾಂಬುಜ (ಪ); (೨) ಚಿತ್ರಾದಿಕಮುಂ (ಸೂ. ಪಾ.) (?)
೫೪	೮೫	೪	ಕ್ರಿಯಾನುಸಮೇತಂ (ಪ)	ಕ್ರಿಯಾತ್ಮ ಸಮೇತಂ (ಮ), ಕ್ರಿಯಾಮು-(ಖ)
೫೫	೯೩	೪	ನಯನಯುತ (ಪ)	ನಯನಯುಗ (ಮ)
೫೬	೯೪	೧	ವಿಶೇಷ್ಯಂ ಕ್ರಿಯೆಯುಂ (ಮ)	ವಿಶೇಷ್ಯಕ್ರಿಯೆಯುಂ (ಪ)
೫೭	೯೯	೪	ಪ್ರಶಾಂತ[ದ]ಂ	ಪ್ರಶಾಂತದಿಂ (ಪ, ಮ); —ತ[ದಾ] (ಸೂ.ಪಾ.) (ಬಿ.ಎಂ.ಶ್ರೀ.) (?)
೫೭	೧೦೩	೧, ೨, ೩	—ಂಬುದುಂ (ಮ)	—ಂಬುದಂ (ಪ)

ಪುಟ	ಪದ್ಯ	ಪಂಕ್ತಿ	ಸ್ವೀ. ಪಾ.	ಪಾಠಾಂತರಗಳು
೫೭	೧೦೩	೪	—ದಿಡಲಾಗದು (ಮ)	—ದಿರಲಾಗದು (ಪ)
೫೭	೧೦೪	೨	—ತನಂತಸುಖ (ಪ, ಮ)	—ತನಂಗಸುಖ (ಸೂ. ಪಾ.–ಬಿ. ಎಂ. ಶ್ರೀ.)(?)
೫೯	೧೧೨	೧	[ಗೋಮೂತ್ರಿಕಂ]* ಸಯುಮಕಂ (ಮ)	× × × × ಸಯುಮಕಂ (ಪ)
೫೯	೧೧೩	೨	ತೋರ್ಪೆ[ನಿ]ವಱ	ತೋರ್ಪೆಮಿವಱ (ಪ),—ಮಿವ[ಱಾ] (ಮ)
೫೯	೧೧೪	೧	ಸಮುಸ್ತಾರ್ಥ [ಗತ] (ಮ)	ಸಮುಸ್ತಾರ್ಥಂತದ (ಪ)
೫೯	೧೧೪	೨	ಮೊದಲ್ ಪೇ[ೞ್ವೊಡೆ]ದುಷ್ಕರಂ	—ಪೆೞ್ದುದು—(ಮ),—ಪೇೞ್ವುದು—(ಪ), ಮೊದಲೊಳ್ ಪೇೞ್ವುದು (ಕ), ಮೊದಲೊಳ್ ಪೇಳ್ವೊಡದು—(ಖ)
೫೯	೧೧೮	೧	ಸೇನಾಸೇ ಮನ[ಮಾನನಾ]	—ಮನ ನಾದಿನಾ (ಪ, ಮ)
೬೦	೧೨೭	೧	ಪೆಱ[ನಾ]ವಂ	ಪೆಱರಾವಂ (ಪ, ಮ)
೬೦	೧೨೯	೧	(೧) [ಪ]ದಾಪಾದಾರ್ಥ; (೨) ಸಮುಶ್ಲೋಕ[ಸು]ಗೋಚರಂ	(೧) ತದಾಪಾದಾರ್ಥಂ (ಪ), [ಪ]ದಪಾದಾರ್ಥ (ಮ); [ಪಾದ]ಪಾದಾರ್ಥ (ಸೂ. ಪಾ.). (೨) ಸಮುಶ್ಲೋಕಮುಗೋಚರಂ (ಪ), —ಶ್ಲೋ[ಕಾದಿ] ಗೋಚರಂ (ಮ)

* ೧೧೧–೧೧೨ ಪದ್ಯಗಳ ನಡುವೆ ಗ್ರಂಥಪಾತವಾಗಿದೆಯೆಂದು ಹೇಳಿ, ಮದರಾಸು ಮುದ್ರಣದ ಸಂಪಾದಕರು 'ಗೋಮೂತ್ರಿಕೆ'ಯ ವರೆಗಿನ ಶಬ್ದಾಲಂಕಾರಗಳ ಹೆಸರುಗಳನ್ನು ಶ್ಲೋಕರೂಪದಲ್ಲಿ ಅಡಿಟಿಪ್ಪಣಿಯಲ್ಲಿ ಸೂಚಿಸಿದ್ದಾರೆ. (ಮದರಾಸು ಮುದ್ರಣ, ಪು. ೫೫).

೬೧	೧೨೯	೨	ದೂಷ್ಯೋಪಕ್ರಮಾ—(ಪ, ಮ)	[ಮಧ್ಯೋ]ಪಕ್ರಮಾ—(ಸೂ. ಪಾ.)
೬೨	೧೩೪	೨	ತ್ರಿಜಗ[ನ್ಮ]ದನಂ	ತ್ರಿಜಗನ್ಮದನಂ (ಪ, ಮ), ತ್ರಿಜಗದೂದನಂ (ಕ), ತ್ರಿಚಕದೂದನಂ (ಖ)
೬೪	೧೪೨	೧/೨	ಸೌಜನ್ಯಲಕ್ಷ್ಮೀಮದಾಂಧಂತನ್ನಿಶ್ಚಯ (ಪ, ಮ)	ಲಕ್ಷ್ಮೀಮದುಂ ತಂ—(ಕ); —ಮದಂ ದಂತಂ—(ಖ)
೬೪	೧೪೨	೩	ಪಾಱಿಗೆಟ್ಟುಱಿಪಿನಿಂ (ಮ)	—ಟ್ಟುಱಿಪಿನಿಂ (ಪ)
೬೫	೧೪೬	೨	ಮತ್ತ[ರಿ]ದು	ಮತ್ತಱಿದು (ಪ, ಮ)
೬೬	೧೫೧	೧	ತಳಮಳ[ಗೊ]ತ್ತುಂ	—ಗುತ್ತುಂ (ಪ, ಮ)
೬೬	೧೫೧	೨/೩	[ಮೊ]ಕ್ಕಳ[ಮೊ]ಳಗೆ	ಮುಕ್ಕಳವೊಳಗೆ (ಪ), ಮೊಕ್ಕಳವೊಳಗೆ (ಮ)
೬೬	೧೫೧	೪	ನೋ[ಡೆ]	ನೋಡಿ (ಪ, ಮ)
೬೬	೧೫೩	೧	ಧವಳೋ[ರ್ವಿ]ಪನೀತಿಮಾರ್ಗೋ	ಧವಳೋಪನೀತಿ-(ಪ), ಧವಳೋ[ರ್ವಿಪ್ರೋಕ್ತ] ಮಾರ್ಗೋ (ಮ)
೬೬	೧೫೩	೨	ಮಾ[ಗಾ]ರ್ಗಳಂಕ್ರಿಯಾರ್ಥಂ	ಮಾರ್ಗಳಂ—(ಪ, ಮ)
೬೬	೧೫೪	೨	ವೀ[ಚಿಮಾಲಾ] (ಮು. ತಿ.)	ವೀಥಿಮಾಳಂ (ಪ), —ಮಾಳಿ (ಮ)
೬೬	೧೫೪	೨	ವಿಧಾನಾಲಂಕ್ರಿಯಾ (ಪ, ಮ)	ವಿ[ತಾ]ನಾಲಂಕ್ರಿಯಾ (ಸೂ. ಪಾ.) (ಮು. ತಿ.)
೬೬	೧೫೪	೮	ಗ[ಭೀರಂ]	ಗಭೀತಂ (ಪ, ಮ)

ಪರಿಚ್ಛೇದ ೩

೭೦	೭	೨	ಹರಿತಶಾಬಲಾಂಕ (ಮ)	—ಶಾಬಾಲಾಂಕ (ಪ)
೭೦	೭	೩	ನವಿಲಾಟಂ (ಪ)	ನವಿಲಾದಂ (ಮ) (?)

ಪುಟ	ಪದ್ಯ	ಪಂಕ್ತಿ	ಸ್ವೀ. ಪಾ.	ಪಾಠಾಂತರಗಳು
೭೪	೨೪	೪	—ನಿಂ[ಬೆ]ನೆ	—ನಿಂಬನೆ (ಪ),—ನಿಂಬಿನೆ (ಮ)
೭೬	೩೪	೩	—ಮಧಿಕಾರಾಗಮ (ಪ)	—ಮಧಿಕರಾಗಮ (ಮ) (?)
೭೬	೩೫	೪	ಪರಿವರ್ಧ[ಕ]ಮುಕ್ಕು	ಪರಿವರ್ಧನಮುಕ್ಕು (ಪ), – ರ್ಧಕನಕ್ಕು (ಮ) (?)
೭೬	೩೫	೪	ವಿರುದ್ಧಾತ್ಮಕ[ಮುಂ]	ವಿರುದ್ಧಾತ್ಮಕಮಂ (ಪ), ವಿರುದ್ಧಾರ್ಥಕಮಂ (ಮ), ವಿರುದ್ಧಾತ್ಮಕ[ನುಂ] (ಸೂ. ಪಾ.)(?)
೭೭	೩೯	೧	ಆದಿಪ್ರತೀತಿ[ಯಿ]ಂ (ಪ)	—ಪ್ರತೀತಿಯುಂ (ಮ, ಖ)
೭೭	೪೧	೪	ವೃತ್ತಸ್ಥಿತ[ನೇಂ]	—ಸ್ಥಿತನೈ (ಪ),—ಸ್ಥಿತನೇ (ಮ)
೭೮	೪೮	೧	—ನಸಾಧ್ಯಾಕಳಂಕ (ಪ)	—ನಸಾಧ್ಯಕಳಂಕಮು (ಮ)
೭೯	೪೯	೪	—ನನ್ವಿತಾನ[ನ್ವಿ]ತಮಂ (ಮ)	—ನನ್ವಿತಾನಿನ್ವಿತಮಂ (ಪ)
೭೯	೫೩	೨	ಪದಮೊ[ರ್ಬುೞಿ]ನಿಂ—	ಪದಮೊರ್ಬುೞಿನಿಂ—(ಪ, ಮ)
೭೯	೫೩	೩	[ವಾಕ್ಯ]ಸ—	ಕಾವ್ಯಸ—(ಪ, ಮ)
೮೦	೫೫	೨	—ಭಾಗಮುಂಬರದೆ (ಮ)	—ಭಾಗಮುಂ [ಭ]ರದೆ (ಸೂ. ಪಾ.) (ಮ) (?)
೮೦	೫೫	೩	ಕ್ಷೇಪಕ [ಕ]ಕುದಂ (ಮ)	ಕ್ಷೇಪಕ ಕುದಂ (ಪ)
೮೦	೫೫	೪	ರುಚಿ[ರ]—ವಿಧಿಯುಂ (ಮ)	ರುಚಿಯು—ವಿಧಿಯುಂ (ಪ);—ನಿಧಿಯುಂ (ಸೂ. ಪಾ.) (?)
೮೧	೬೨	೩	[ನನ್ನಿಯಿನೀ] ಪಲ್ಲವ	ನಿನ್ನಯನೀ (ಪ, ಮ, ಕ, ಖ); ನಿರ್ನೆರವಿಾ (ಸೂ. ಪಾ.) (ಮು. ತಿ.) (?)

೮೨	೬೪	೪	ವಿಕಲ್ಪಿತ ಭಾ[ಗಂ] (ಮ)	—ಭಾವಂ (ಪ)
೮೪	೭೪	೨	ಪಾವನೀಯ ಶ್ರೀಕಂ (ಪ, ಮ, ಕ, ಖ)	(ಸೂ. ಪಾ.)—ನೀಯಾ ಶ್ರೀಕಂ
೮೪	೭೬	೧	ಕಣ್ಗಳಲ್ಲಿವು (ಪ, ಮ)	(ಸೂ. ಪಾ.) ಕಣ್ಗಳಲ್ಲಿದು (?)
೮೫	೮೧	೧/೨	[ಮಾನನ]ದೊಳ್	ಮಾಂ ತನದೊಳ್ (ಪ, ಮ)
೮೫	೮೧	೨	ನಳಿನಮಿದೀ (ಪ)	(ಸೂ. ಪಾ.) ನಳಿನಮಿ[ದುಂ] (ಮ)
೮೫	೮೨	೨	ವಿಳಸಿತಮುಂ (ಪ, ಮ)	(ಸೂ. ಪಾ.) ವಿಳಸಿತಮುಂ
೮೬	೮೪	೪	ತಾರಾಪತಿ (ಪ)	ತಾರಾತತಿ (ಮ)
೮೬	೮೮	೩	—ಲಿಳೆ[ಯೊಳ್]ಕರ—	—ಲಿಳೆಯಂ ಕರ (ಪ, ಮ)
೮೭	೮೯	೪	[ನ]ರಪಂ (ಪ)	ನೆರಪಂ (ಮ)
೮೭	೯೨	೨	ತಲೆವ[ಱ]ದುದಂ	ತಲೆವಱದುದಂ (ಪ, ಮ)
೮೮	೯೭	೧	ಪರಪುಂ (ಖ)	ಪರವೂ (ಕ), ಪರಮಂ (ಪ), ಪರಮುಂ (ಮ)
೮೯	೧೦೦	೩	—ಮನ[ಟಲ]ಳವಿಂದುಱ	ಮನಳವಳವಿಂದುಱ (ಪ), ಮನಳವಳಲಿಂದುಱ (ಮ); (ಸೂ. ಪಾ) ನ[ದವಟಲಿ]ಂದುಱ
೯೦	೧೦೬	೩/೪	—ಳ್ಗನು[ಮಿ]ತಿ	—ಳ್ಗನುಮತಿ (ಪ, ಮ)
೯೧	೧೧೦	೨	ದ್ವಿಪಹ[ರಿ] (ಪ, ಮ)	ದ್ವಿಪಹಲೆ (ಕ, ಖ)
೯೧	೧೧೦	೨	ನಿಷೇವ್ಯ (ಪ, ಮ)	ನಿಸೇವ್ಯ (ಕ)
೯೧	೧೧೦	೩	ವ್ಯುಪನೀತ (ಪ)	ವ್ಯಪನೀತ (ಮ)
೯೧	೧೧೧	೨	ಗೇಹಂಗಳೊಳಂ (ಪ, ಮ)	ದೇಹಂಗಳೊಳೇ (ಕ), ಗೇಹಂಗಳೊಳೇ (ಖ)
೯೨	೧೧೪	೨	ತೆಱೆದಿರೆ (ಪ, ಮ)	ನೆರೆದಿರೆ (ಪ.—B ಪಾಠಾಂತರ); (ಸೂ. ಪಾ.) ನೆಱೆದಿರೆ (?)

ಪುಟ	ಪದ್ಯ	ಪಂಕ್ತಿ	ಸ್ವೀ. ಪಾ.	ಪಾಠಾಂತರಗಳು
೯೨	೧೧೫	೪	ಬಗೆ[ದಾ]	ಬಗೆಗಾ (ಪ, ಮ)
೯೩	೧೨೩	೧	ಪರ[ವ]ಸದ (ಪ)	ಪರಪೆಸದ (ಮ)
೯೪	೧೨೮	೨	ಕೃತೋದನನಾಗಿ (ಪ)	ಕೃತೌದನನಾಗಿ (ಪ, ಮ)
೯೫	೧೩೦	೨	ಪಾಯಾಂತರ[ದಿ]ಂ	ಪಾಯಾಂತರಮುಂ (ಪ, ಮ)
೯೫	೧೩೩	೧	ಕೆಳದಿಯುಮುಭಿಮುತ (ಪ, ಮ, ಖ)	ಕೆಳದಿಯ[ನ]ಭಿಮತ (ಸೂ. ಪಾ.) (ಬಿ. ಎಂ. ಶ್ರೀ.) (?)
೯೮	೧೪೭	೧	—ದೊಡ[ರಿ]ಯುಂ	—ದೊಡ[ಱು]ಯುಂ (ಪ, ಮ)
೯೮	೧೪೮	೧	ಕಿಱುದೆಂದೇ[ಳ]ಸಿ (ಪ)	—ದೇಱುಸಿ (ಮ); (ಸೂ. ಪಾ.)—ದೇಱುಸಿ (ಮು. ಶಿ.)
೯೮	೧೪೮	೩	ನೆ[ರೆ]ದನುವಂ	ನೆಱೆದನುವಂ (ಪ, ಮ)
೯೯	೧೫೦	೨	—ಮುದಱುನ[ಱು]ವುದದ	—ಮುದಱುನಱುವುದದ (ಪ, ಮ)
೧೦೧	೧೬೧	೨	ಗುಣಾನುರಕ್ತೆ (ಪ)	—ನುಸಕ್ತೆ (ಮ)
೧೦೨	೧೬೮	೧	ಕಾರಣಮುನಱುಪೆ (ಮ)	—ನುಱುಪೆ (ಪ); (ಸೂ.ಪಾ.)—ನುಱುಪಿ
೧೦೩	೧೬೯	೧	[ಮುಱು]ಕಮು	ಮುಱುಕ (ಪ, ಮ)
೧೦೩	೧೭೨	೩	—ಮು[ವನ]ಂ	—ಮುನವಂ
೧೦೪	೧೭೪	೨	ಕೊಳ[ನುಂ]ಕಡಲುಂ	ಕೊಳಲುಂ ಕಡಲುಂ (ಪ); ಕೊಳಲುಂ[ಕು]ಡಲುಂ (ಮ) (?)
೧೦೫	೧೮೦	೧	ಪ್ರಣತಾರಿ[ಘು]ಟಿತ	—ರಿತೃಟಿತ (ಪ), —ರಿತ್ರುಟಿತ (ಮ)
೧೦೫	೧೮೦	೨	[ಮಣಿಗಣಮು]ತ್ತಂಸದಿಂ	ಗಣಗಣನೋತ್ತಂಸದಿ (ಪ), ಮಣಿಗಳ್ ಮಾತ್ತಾರ್ಗಂಕದಿಂ (ಮ)

೧೦೫	೧೮೦	೨	ಕಟಿಲ್ದುದುರೆ	—ಲ್ದುದಿರೆ (ಮ), ಕಳಲ್ತುದುರೆ (ಪ)
೧೦೬	೧೮೪	೩	ಸುಡುವು[ವೆ]ದರ್ಯಂ (ಪ)	—ವುದೆರ್ದಯಂ (ಮ)
೧೦೬	೧೮೬	೩	ಮರ್ದಿಸುವುವವೆನೆ (ಮ)	ಮರ್ದಿಸುವುವನೆನೆ (ಪ, ಮ); (ಸೂ. ಪಾ.) ಮರ್ದಿ[ಸವವುಪನೆ] (?)
೧೦೬	೧೮೭	೨/೩	ರಸವ[ದ್ವಿವಿ]ಧಾಳಂಕಾರಂ	ರಸವತ್ಯವಿಧಾ (ಪ, ಮ) ;—ತ್ಯ[ಭಿ]ಧಾ (ಪ)
೧೦೭	೧೯೦	೪	ಕಲಿಯಾ[ದಂ]	ಕಲಿಯಾವಂ (ಪ), ಕಲಿಯಾಂ (ಮ)
೧೦೮	೧೯೫	೧	ಪೂ[ತಿ]	ಪೂತ (ಪ, ಮ)
೧೦೮	೧೯೫	೩/೪	—ಭ್ರಮಿ[ತಾಷ್ಠ]ವಹಂ	ಭ್ರಮಿತಕ್ರಿವಹಂ (ಪ, ಮ)
೧೦೮	೧೯೭	೧	[ಮಿಗೆರ]ಣದೊಳ್ ಪರಿಚಿತ[ಮಾ]	××× ಣದೊಳ್ ಪರಿಚಿತಮುಂ ದ್ವಿಗುಣಮ (ಪ), [ಮೃಗಗ]ಣದೊಳ್ಪರಿಚಿತಮು—(ಮ)
೧೦೮	೧೯೮	೩	ತದಿ[ೀಯ ವಸ್ತು] ವಿಚಾರ	ತದಿ ××× ವಿಚಾರ (ಪ), ತದಿ[ೀಯ ಭೇದ] ವಿಚಾರ (ಮ)
೧೦೯	೨೦೦	೧	ಮುಗುಟ್ದುಂಮ[ಗುಟ್ದಾ]ಮಾತಂ	ಮುಗುಟ್ದುಂಮ ×× ಮಾತಂ (ಪ), —ಮ[ತ್ತಿನ]—(ಮ),—ಮ×ಳ್ದಾಗಳಕ್ಕ (ಕ), ಮುಗುಳ್ದುಮ ×× ಮಾತಂ (ಖ)
೧೦೯	೨೦೧	೨	(೧) —ನಳಿಪು[ಮಾ]ವಲ್ಲಭ...; (೨) [ನೆರೆ]ದಿರ್ಪ (ಮ)	(೧) ನಳಿಪು × ವಲ್ಲಭ, (೨) ಬಗೆದಿರ್ಪ (ಪ, ಕ, ಖ).
೧೦೯	೨೦೨	೪	—ಪೊಡಗೂ[ಡಿದು]ದಂ (ಮ)	ಪೂಡಗೂ ×× ದಂ (ಕ, ಖ, ಪ)
೧೦೯	೨೦೩	೪	—ಮಿಂತು[ಟ]ದುದಾಹರಣಂ	—ತು[ತ]ದುದಾ-(ಮ), -ತುಟದುದಾ—(ಪ)
೧೧೦	೨೦೪	೧	ಗು[ರುಜನ]ದ ಪರಕೆ [ಯು]ಂ	ಗು ××× ದ ಪರಕೆಯುಂ (ಕ, ಖ, ಪ), ಗು[ರುಜನ]ದ ಪರಕೆಯುಂ (ಮ)

ಪುಟ	ಪದ್ಯ	ಪಂಕ್ತಿ	ಸ್ವೀ. ಪಾ.	ಪಾಠಾಂತರಗಳು
೧೧೦	೨೦೪	೨	—ಬಂಧ[ಮುಂ]	—ಬಂಧಮುಂ (ಪ, ಮ)
೧೧೦	೨೦೪	೩	—ಭರಮುಂ (ಪ, ಮ)	(ಸೂ. ಪಾ.) ಭರ[ಮುಂ] (?)
೧೧೦	೨೦೪	೪	ದೊರೆಕೊಂ[ಡು]ವ[ವಿ]ಂದು	—[ಡು]ವದಿಂದು (ಪ, ಮ, ಕ)
೧೧೦	೨೦೫	೨	[ಪೇಟಿಷ್ವೊಡ]ದುಂ	× × × ದುಂ (ಕ, ಖ, ಪ); [ಬಗೆದಂ] ದುಂ (ಮ)
೧೧೦	೨೦೬	೪	—ಧರ[ಣೀಧ]ರಾ—(ಪ, ಮ)	—ಧರ × × ರಾ (ಖ)
೧೧೦	೨೦೬	೩	—ದಜುಕೊ[ಳ]ಳಂಕೃತಿ (ಪ, ಮ)	—ದರೊಳಂಕೃತಿ (ಖ)
೧೧೧	೨೦೭	೨	—ವಿ[ಕಾ]ಶೋತ್ಪಾದಿತಾ—(ಪ, ಮ)	ವಿಶೋತ್ಪಾದಿ—(ಕ, ಖ)
೧೧೧	೨೦೯	೩	ಕುಶಲ[ಸ]ಲೀಲಾ	ಕುಶಲಬಲೀಲಾ (ಕ, ಪ, ಮ)
೧೧೧	೨೧೧	೪	ರಮಣರಣಿ[ತ]ಗೋಷ್ಠೀ (ಮ)	—ರಣಿ × ಗೋಷ್ಠೀ (ಕ, ಖ, ಪ)
೧೧೧	೨೧೨	೩	—ದಯಾ[ದಿ]ಪ್ರಮೋದಾ	—ಯಾ ವಿಪ್ರಮೋದಾ (ಪ),—ಯಾ ವಿಃಪ್ರ— (ಮ)
೧೧೨	೨೧೫	೩	ಸಾಧನೀಯಾದಿತಾರಾ (ಪ, ಮ)	(ಸೂ. ಪಾ.)—ಯಾಧಿಕಾರಾ (?)
೧೧೨	೨೧೫	೪	—ನಿಷ್ಪ್ರಾರ್ಥಸಿದ್ಧಂ (ಪ)	—ಮಿಷ್ಪ್ರಾರ್ಥ (ಮ); (ಸೂ. ಪಾ.) ನಿಷ್ಪ್ರಾರ್ಥ (?)
೧೧೨	೨೧೬	೧	—ರಾತಿ[ಸಾ]ರ್ಥಾರ್ಥವೀರಂ (ಪ, ಮ)	—ರಾತಿರಾರ್ಥಾ—(ಪ, ಮ)
೧೧೨	೨೧೬	೨	ಪ್ರ[ಪಂ]ಚಂ (ಪ, ಮ)	ಪ್ರಸಂಚಂ (ಪ, ಮ)
೧೧೨	೨೧೬	೩	ರತ್ನೈಕಾಕ[ರಂ] (ಪ, ಮ)	ರತ್ನೈಕಾಕರಾ (ಪ, ಮ)
೧೧೨	೨೧೬	೪	ಧರಣೀ[ಚಕ್ರಾಂಬ]ರಾಕ್ರಾಂತ (ಮ)	ಧರಣಿ × × ಚರಾಕ್ರಾಂತ (ಪ)

೧೧೨	೨೧೮	೩	ವಿವಿಕ್ತ (ಮು. ತಿ.) (?)	ವಿವಿಕ್ತಿ (ಪ, ಮ, ಖ)
೧೧೨	೨೧೮	೩/೪	ಕಳಾಪಕ[ನು]ಪಾಹಿತ	—ಪಕಮುಪಾಹಿತ (ಪ, ಮ)
೨೮ ೧೧೩	೨೧೯	೩	ಲಕ್ಷಣಲಕ್ಷ್ಯ[ನಾ]	—ಲಕ್ಷ್ಯಮಾ (ಪ, ಮ)
೧೧೩	೨೨೧	೪	—ನ[ಖಿಲಾಗಮ]ಪಾರ	—ನ × × × × ಪಾರ (ಕ, ಖ, ಪ, ಮ)
೧೧೩	೨೨೨	೧	ಧರ್ಮಮನ[ಚ್ತಿ]ಯಿ (ಮು. ತಿ.)	—ಮನರ್ಥಿಯಿ (ಮ), —ಮನತ್ಥಿಯಿ (ಪ)
೧೧೩	೨೨೩	೧	ಪೇೞ್ದನುತಕಾವ್ಯ (ಪ, ಮ)	(ಸೂ. ಪಾ.) ಪೇೞ್ದ[ನ್ನು]ತ ಕಾವ್ಯ (?)
೧೧೩	೨೨೩	೪	ಕುಱಿತಾವನ[ನು]ಮೇನುಮಂ	—ತಾವನಮೇನುಮಂ (ಪ, ಮ)
೧೧೪	೨೨೪	೨	ಕಾಂತ[ಕಾಂತ] ವಿಷಯಾ—(ಮು. ತಿ.)	ಕಾಂತ × × × ವಿಷಯಾ—(ಕ, ಖ, ಪ, ಮ)
೧೧೪	೨೨೪	೩/೪	ಸಂತತಂ ನುಡಿಗಳೊಳ್ ಬಗೆ ಪೆರ್ಚಿರೆ ಪೇೞ್ವವರ್ | ಸಂತಸಂಬಡಿಸುವರ್ ನೃಪತುಂಗ ಸಭಾ[ಸದರ್] (ಪ)	ಸಂತತಂನೊಡಿಗಳೊಳ್ × × × × × × × | × × ಬಗೆದು ಪೇೞ್ವುದುದಾರ ಕವೀಶ್ವರಂ (ಖ, ಮ) ; —ವರ್ ನೃಪತುಂಗ × × × × × (ಕ).
೧೧೪	೨೨೫	೨	[ಸಾ]ರ್ಥ ಚಯಂ	ಸ್ವಾರ್ಥಚಯಂ (ಪ, ಮ)
೧೧೪	೨೨೫	೪	[ಸಾರ್ಥಮಪ್ಪಂತು ಚಿಂತಿತ ಕಾರ್ಯ ತತ್ಪರಂ] (ಸೂ. ಪಾ.) (ಸಂ.)	(ಇಲ್ಲಿ ಗ್ರಂಥಪಾತವಾಗಿದೆ). × × × × ×
೧೧೪	೨೨೬	೨	ನಿಲಯ್ಯೈಕವೃತ್ತಿ [ಕೃತಿಬಿಂಬಿತ ಸತ್ತ್ವ ಸಾರಂ] (ಸೂ. ಪಾ.) (ಮು. ತಿ.)	ನಿಲಯ್ಯೈಕ ವೃತ್ತಿ × × × × × ‖ (ಪ, ಮ)
೧೧೪	೨೨೬	೪	ಚೋದ್ಯ [ವೃಂದಂ]	ಚೋದ್ಯವಿ[ಂ] ದೇಂ (ಪ, ಮ),—ನಾವ ಚೋದ × × × ‖ (ಖ)
೧೧೪	೨೨೭	೩	ವಿದಿತ[ಸ್ವಧೀ] ವಿಭವ (ಮು. ತಿ.)	ವಿದಿತ × × ವಿಭವ (ಖ, ಪ, ಮ)

ಪುಟ	ಪದ್ಯ	ಪಂಕ್ತಿ	ಸ್ವೀ. ಪಾ.	ಪಾಠಾಂತರಗಳು
೧೧೪	೨೨೮	೨	—ನೇಕರೂ[ಪ]ಂ (ಪ, ಮ)	—ನೇಕರೂ ೦[ಖ]
೧೧೪	೨೨೮	೩	ಪರೋ[ಪಕಾರ]ಂ (ಮ)	ಪರೋ × × × ೦ (ಪ), ಪರೊ × × × × (ಖ)
೧೧೪	೨೨೯	೩	ವ್ಯಪೇತ[ನು]ಪನೀತ	—ತಮುಪನೀತ (ಪ, ಮ)
೧೧೪	೨೩೧		(೧)—ನ್ವಯ[ಮು]ದ್ಧ; (೨) ಮ[ಹಾಕ್ಷೀ] (ಪ, ಮ); (೩) [ಸು]ಶೈಲ (ಪ, ಮ), (೪) ಯಶ[ಂ]	(೧) —ನ್ವಯಸುದ್ಧ (ಪ, ಮ); (೨-೪) (ಪಾಠಾಂತರಗಳಿಲ್ಲ).

ಅಧಿಕ ಪಾಠ (ಅನುಬಂಧ—೧)

ಪುಟ	ಪದ್ಯ	ಪಂಕ್ತಿ	ಸ್ವೀ. ಪಾ.	ಪಾಠಾಂತರಗಳು
೧೧೯	೧	೨	—ಗುಚಿತ[ಮೆನಿ]ಪ್ಪಾ (ಪ, ಮ)	(ಬೇರೆ ಪಾಠಗಳಿಲ್ಲ)
೧೧೯	೧	೩/೪	[ಸಲೆಯುಂತಾದಿಪ್ರಾಸಂ] (ಪ, ಮ)	,,
೧೧೯	೩	೪	ನಿಂ[ದಂ]ದೀಕ್ಷಿಸಃ[ವು]ವವಳ (ಪ, ಮ)	,,
೧೨೦	೫	೨	[ಹಾರಾ] ಪ್ರಭಯಾ	× × ಪ್ರಭಯಾ (ಪ), [ಹಾರ] ಪ್ರಭಯಾ (ಮ), ವಿಹಾರಾಪ್ರಭಯಾ (ಖ)
೧೨೦	೫	೪	ದೂ[ರಾವೃ]ತ	ದೂರೀಕೃತ (ಪ, ಮ)

[ವಿಶೇಷ ಟಿಪ್ಪಣಿ: ಪ್ರಕೃತ ಮುದ್ರಣದ ಪಾಠಪರಿಷ್ಕರಣ ಕಾರ್ಯಕ್ಕೆ ಈ ಹಿಂದಿನ ಎರಡು ಮುದ್ರಿತಗ್ರಂಥಪಾಠಗಳೂ, ಆ ಗ್ರಂಥಗಳಲ್ಲಿ ಕೊಟ್ಟಿರುವ ಪಾಠಾಂತರಗಳೂ ಆಧಾರಭೂತಗಳಾಗಿವೆ; ಬೇರೆ ಯಾವ ಹಸ್ತಪ್ರತಿಯೂ ಈ ಗ್ರಂಥ ಸಂಪಾದಕನಿಗೆ ದೊರಕಲಿಲ್ಲ. ಹಸ್ತಪ್ರತಿಗಳ ಸ್ವರೂಪ ಹಾಗೂ ಅವುಗಳ ಪರಸ್ಪರ ಸಂಬಂಧಗಳನ್ನು ಕುರಿತು ಈ ಸಂಪಾದಕನು ತಿಳಿಸಬೇಕಾದ ಹೆಚ್ಚಿನ ವಿಚಾರಗಳೇನೂ ಇಲ್ಲ. ಆದ್ದರಿಂದ, ಆ ಮುದ್ರಣಗಳ ಸಂಪಾದಕರುಗಳು ತಿಳಿಸಿರುವ ವಿವರಗಳನ್ನು ಇಲ್ಲಿ ಎತ್ತಿ ಹೇಳುವುದು ಅಪ್ರಕೃತವೆನಿಸದು.

೧. ಕೆ. ಬಿ. ಪಾಠಕರು ಉಪಯೋಗಿಸಿಕೊಂಡಿರುವ ಹಸ್ತಪ್ರತಿಗಳ ವಿವರ:

" (A): A copy of the palm-leaf Ms. (containing I and II parichchedas and 224 verses of the third). It is incomplete and inaccurate. It occasionally uses ṛ ಱ, the verses are not numbered. (B): A copy of a palm-leaf Ms. It is incomplete and inaccurate. It never uses the letter ṛ ಱ, but contains fewer gaps than A. Unfortunately most of the mistakes in B are the same as those in A. (C): A transcript of a Ms. deposited in the Govt. Oriental Library at Madras. This is decidedly superior to A. & B. but incomplete. It contains the first two parichchedas, and 193 verses of the third. The last 93 verses are mutilated. 'C' contains two additional verses, one on the use of the Sanskrit prepositions and the other an illustration of Mu(Ma)lopame. But since they are corrupt and not found in A & B, I have omitted them from the text. The most corrupt portion of the work is that which contains 'dushkara kavyas'. The other parts of the work are fairly well preserved."

ಪಾಠಕರು ಬಿಟ್ಟಿರುವ ಎರಡು ಪದ್ಯಗಳನ್ನೂ ಮದ್ರಾಸು ಮುದ್ರಣದಲ್ಲಿ ಉಳಿಸಿಕೊಂಡಿದೆ. ನಮ್ಮ ಮುದ್ರಣದಲ್ಲಿ ಸಂಸ್ಕೃತಾವ್ಯಯಗಳಿಗೆ ಸಂಬಂಧಪಟ್ಟ ಪದ್ಯವನ್ನು ಮಾತ್ರ, ಅದು ಮೂಲಪಾಠದಲ್ಲಿ ಇದ್ದಿರಬಹುದೆಂದು ಊಹಿಸಲು ಅವಕಾಶವಿರುವುದರಿಂದ, ಉಳಿಸಿಕೊಂಡಿದೆ (ಪ. I—೫೨); ಮಾಲೋಪಮೆಗೆ ಒಂದು ಲಕ್ಷ್ಯ ಇರುವುದರಿಂದ (ಪ. III—೮೧), ಅರ್ಥವಾಗದ C ಪ್ರತಿಯ ಪದ್ಯವನ್ನು ತ್ಯಜಿಸಿದೆ.

ಪಾಠಕರು ಮೇಲ್ಕಂಡ ಮೂರು ಪ್ರತಿಗಳ ಪಾಠಾಂತರಗಳಲ್ಲಿ ಅಗತ್ಯವೆನಿಸಿದ ಕೆಲವನ್ನು ಮಾತ್ರ ತಮ್ಮ ಮುದ್ರಣಗಳಲ್ಲಿ A, B, C ಎಂದು ನಿರ್ದೇಶಿಸಿ ಅಡಿ ಟಿಪ್ಪಣಿಗಳಾಗಿ ಕೊಟ್ಟಿರುತ್ತಾರೆ.

೨. ಮದರಾಸು ಮುದ್ರಣದ ಸಂಪಾದಕರು ಕೊಟ್ಟಿರುವ ವಿವರ:—

"ಈ ಗ್ರಂಥವನ್ನು ಶೋಧಿಸಿ ಪರಿಷ್ಕರಿಸುವುದರಲ್ಲಿ ಈ ಮೊದಲೇ ಮುದ್ರಿತವಾಗಿದ್ದ ಕವಿರಾಜಮಾರ್ಗದ ಪ್ರತಿಯೂ, ಮದರಾಸು ಪ್ರಾಚ್ಯಕೋಶಾಲಯದಲ್ಲಿರುವ ತಾಳಪತ್ರ ಪ್ರತಿಯೂ, ಮೈಸೂರು ಲೈಬ್ರರಿಯಲ್ಲಿಯ ಮತ್ತು ಬೊಮ್ಮರಸ ಪಂಡಿತರು ಕಳುಹಿಸಿದ ಪ್ರತಿಗಳೂ ನಮಗೆ ಸಹಾಯಕಗಳಾಗಿರುತ್ತವೆ."

ಮದರಾಸು ಮುದ್ರಣದ ಸಂಪಾದಕರು ಕೆಲವೆಡೆಗಳಲ್ಲಿ ಸೂಚಿಸಿರುವ ತಿದ್ದುಪಾಟುಗಳು ಸಮಂಜಸವಾಗಿವೆ; ಇನ್ನು ಹಲವೆಡೆಗಳಲ್ಲಿ ಅವರು ಪಾಠಕರ ಮುದ್ರಣದ ಪಾಠವನ್ನು (=C ಪ್ರತಿಯ ಪಾಠವನ್ನು ?) ಅನುಸರಿಸದೆ ಅನ್ಯಪಾಠಗಳನ್ನು ಸ್ವೀಕರಿಸಿರುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ.

ಮದರಾಸು ಮುದ್ರಣದಲ್ಲಿ, ಪಾಠಕರು A, B ಎಂದು ನಿರ್ದೇಶಿಸಿರುವ ಮೈ. ಓ. ಲೈಬ್ರರಿಯ ಪ್ರತಿಗಳ (A = No. 125, B = No. 110) ಪಾಠಗಳನ್ನು ಮಾತ್ರ ಬೇರೆ ಬೇರೆಯಾಗಿ ಎರಡು ಪರಿಶಿಷ್ಟಗಳನ್ನಾಗಿ ಸಂಪಾದಕರು ಒದಗಿಸಿರುತ್ತಾರೆ. (ಇವನ್ನು ನಮ್ಮ ಅನುಬಂಧದಲ್ಲಿ ಕ್ರಮವಾಗಿ 'ಕ', 'ಖ' ಎಂದು ನಿರ್ದೇಶಿಸಿದೆ.) C ಪ್ರತಿಯ ಪಾಠಗಳನ್ನೂ ಬೊಮ್ಮರಸ ಪಂಡಿತರು ಕೊಟ್ಟ ಪ್ರತಿಗಳ ಪಾಠಗಳನ್ನೂ ಸೂಚಿಸಿಲ್ಲ. ಹೀಗೆ ಮಾಡಲು ಕಾರಣವೇನೆಂಬುದನ್ನೂ ತಿಳಿಸಿಲ್ಲ.

ಮದರಾಸು ಮುದ್ರಣದ 'ಭಿನ್ನಪಾಠ' ಪರಿಶಿಷ್ಟಗಳಲ್ಲಿ ಕಂಡುಬರುವ ಗಮನಾರ್ಹವಾದ ಅಂಶವಿದು:

A (ನಂ. ೧೨೫) ಪ್ರತಿಯ ಪ್ರಥಮ ಪರಿಚ್ಛೇದದ ಮೊದಲಲ್ಲಿ "ಶ್ರೀಮತೇ ರಾಮಾನುಜಾಯ ನಮಃ" ಎಂಬ ಬರಹವಿದೆ. ಇದರಿಂದ ಪ್ರತಿಕಾರ ಇಲ್ಲವೆ ಪ್ರತಿ ಮಾಡಿಸಿಕೊಂಡವನು ವಿಶಿಷ್ಟಾದ್ವೈತ ಸಂಪ್ರದಾಯದ ವೈಷ್ಣವನೆಂದು ಊಹಿಸಬಹುದು.

B (ನಂ. ೧೧೦) ಪ್ರತಿಯ ಮೊದಲಲ್ಲಿ 'ಶ್ರೀಮದ್ವೇದವ್ಯಾಸಾಯನಮಃ' ಎಂದೂ, ಎರಡನೆಯ ಪರಿಚ್ಛೇದದ ಕಡೆಯಲ್ಲಿ–'ಶ್ರೀ ಶ್ರೀ ಮಂಗಳಂ ಶುಭಂ ಶ್ರೀಹರಯೇ ನಮಃ, ಶೋಭನಮಸ್ತು ನಾರಾಯಣಾಯನಮಃ, ಶ್ರೀ ಮಧ್ವೇಶಾಯ ನಮಃ' ಎಂಬ ಬರಹಗಳಿವೆ. ಇದರಿಂದ, ಪ್ರತಿಕಾರ ಇಲ್ಲವೆ ಪ್ರತಿ ಮಾಡಿಸಿಕೊಂಡವನು ಮಾಧ್ವ (ದ್ವೈತ) ಸಂಪ್ರದಾಯದ ವೈಷ್ಣವನೆಂದು ಊಹಿಸಬಹುದು.

ಶ್ರೀ ರಾಮಾನುಜರ ಕಾಲ, ಕ್ರಿ.ಶ. ೧೦೧೭; ಶ್ರೀ ಮಧ್ವಾಚಾರ್ಯರ ಕಾಲ, ಕ್ರಿ.ಶ. ೧೧೯೯. ಭಟ್ಟಾಕಳಂಕನ ಕಾಲಕ್ಕೆ (ಕ್ರಿ.ಶ. ೧೬೦೪) ಕವಿರಾಜಮಾರ್ಗವು 'ನೃಪತುಂಗ ಗ್ರಂಥ' ಎಂಬ ಪ್ರತೀತಿ ಬಲವಾಗಿ ಬೇರೂರಿರಬಹುದಾದ್ದರಿಂದಲೂ, ಆ ವೇಳೆಗೆ ಕನ್ನಡ ನಾಡಿನಲ್ಲಿ ಮಧ್ವ ರಾಮಾನುಜ ಮತಗಳೆರಡೂ ಬಲವಾಗಿ ಬೇರೂರಿದ್ದುದರಿಂದಲೂ, ನೃಪತುಂಗನು ವಿಷ್ಣುಭಕ್ತ ಎಂಬ ಕಾರಣದಿಂದ (ಅಥವಾ ನಂಬಿಕೆಯಿಂದ) ಮೇಲ್ಕಂಡ ಪ್ರತಿಗಳನ್ನು ವೈಷ್ಣವರು ಮಾಡಿಸಿಟ್ಟುಕೊಂಡಿರಬಹುದು. A ಪ್ರತಿಯಲ್ಲಿ ೞಕಾರ ಪ್ರಯೋಗವು ಕ್ವಚಿತ್ತಾಗಿದೆ; B ಪ್ರತಿಯಲ್ಲಿ ೞಕಾರದೆಡೆಯಲ್ಲಿ ರೇಫ ಪ್ರಯೋಗವಿದೆ. ಈ ಎಲ್ಲ ಕಾರಣಗಳಿಂದ, ಈ ಎರಡು ಪ್ರತಿಗಳು C ಪ್ರತಿಗಿಂತ ಬಹು ಈಚಿನವು, ಬಹುಶಃ ೧೬ನೆಯ ಶತಮಾನದ ತರುವಾಯ ಹುಟ್ಟಿದವು, ಎಂದು ಊಹಿಸಬಹುದು. ಇವೆರಡರಲ್ಲಿ, B ಗಿಂತ A ಹೆಚ್ಚು ಪ್ರಾಚೀನ ಎಂದು ತೋರುತ್ತದೆ.

ಹೀಗಿರುವುದರಿಂದ, ೩ನೆಯ ಪರಿಚ್ಛೇದದ ೨೨೪ನೆಯ ಪದ್ಯದ ೪ನೆಯ ಪಂಕ್ತಿಯ ಸಂಬಂಧವಾಗಿ, 'ಬಗೆದುಪೇೞ್ದುದುದಾರ ಕವೀಶ್ವರಂ' ಎಂಬ (ಮದರಾಸು ಮುದ್ರಣದಲ್ಲಿ ಸ್ವೀಕೃತವಾದ) B ಪಾಠಕ್ಕಿಂತ, 'ಸಂತಸಂ ಬಡಿಸುವರ್ ನೃಪತುಂಗ ಸಭಾ [ಸದರ್]' ಎಂಬ A ಮತ್ತು C ಪ್ರತಿಗಳ ಪಾಠವೇ ಪ್ರಾಚೀನತರ, C ಯದು ಬಹುಶಃ ಪ್ರಾಚೀನತಮ, ಆದ್ದರಿಂದ ಹೆಚ್ಚು ವಿಶ್ವಸನೀಯ ಎಂದು ಹೇಳಬಹುದು. B ಪಾಠವನ್ನು ಮದರಾಸು ಮುದ್ರಣದ ಸಂಪಾದಕರು 'ಕವೀಶ್ವರ ಕರ್ತೃತ್ವ' ವಾದಕ್ಕೆ ಒಂದು ಪ್ರಮಾಣವಾಗಿ ಉಪಯೋಗಿಸಿಕೊಂಡಿರುವುದು ಊರ್ಜಿತವಾಗುವುದಿಲ್ಲ.

C ಪ್ರತಿಯ ಪಾಠ ಮೂಲಪಾಠದ ಒಂದು ಶಾಖೆಗೂ, A-Bಗಳ ಪಾಠ ಪರಸ್ಪರ ಸ್ವತಂತ್ರಗಳಾಗಿದ್ದು ಇನ್ನೊಂದು ಶಾಖೆಗೂ ಸೇರಿದುವಾಗಿ ಕಂಡುಬರುತ್ತವೆ. C ಪ್ರತಿಯ ಪಾಠವನ್ನೇ ಹೆಚ್ಚಾಗಿ ಅವಲಂಬಿಸಿರುವ ಪಾಠಕರ ಮುದ್ರಣವನ್ನೆ ನಾವು ಮುಖ್ಯ ಆಧಾರವಾಗಿ ಇಟ್ಟುಕೊಂಡಿರುತ್ತೇವೆ.

ಅಂತೂ, ಬೇರೆಯ ಪ್ರಾಚೀನತರ ಹಸ್ತಪ್ರತಿಗಳು ದೊರೆಯುವವರೆಗೆ, ಗ್ರಂಥದ ಅಪಪಾಠಗಳನ್ನೂ ದುಷ್ಟಪಾಠಗಳನ್ನೂ ಗ್ರಂಥಪಾತವಾಗಿರುವೆಡೆಗಳ ಪಾಠವನ್ನೂ ಕವಿಪಾಠಕ್ಕೆ ಸಮೀಪವಾಗುವಂತೆ ಪುನರ್ನಿರಚಿಸುವುದು ಸಾಧ್ಯವಾಗದು.

ಪ್ರಕೃತ ಮುದ್ರಣದ ಪಾಠ ಮೇಲ್ಕಂಡ ಪಾಠಗಳ ಉತ್ತಮಾಂಶಗಳ ಆಧಾರದ ಮೇಲೆ ರೂಪಗೊಂಡ ಒಂದು ಮಿಶ್ರಪಾಠ; ಮಾಡಿರುವ ತಿದ್ದುಪಾಟುಗಳು ಅನೇಕ ಸಂದರ್ಭಗಳಲ್ಲಿ ಊಹಾತ್ಮಕ; ಇವು ಎಲ್ಲ ಸಂದರ್ಭಗಳಲ್ಲಿಯೂ ಕವಿಪಾಠಕ್ಕೆ ಸಮೀಪ ಎಂದು ಹೇಳುವ ಧೈರ್ಯ ನಮಗಿಲ್ಲ.

—ಸಂ.]

ಅನುಬಂಧ ೭

ಇತರ ಗ್ರಂಥಗಳಲ್ಲಿ ಉದಾಹೃತಗಳಾದ ಕವಿರಾಜಮಾರ್ಗದ ಪದ್ಯಗಳು

೧. **ಛಂದೋಂಬುಧಿ: ನಾಗವರ್ಮ—೧ (ಸು. ಕ್ರಿ. ಶ. ೯೯೦).**

[ಕವಿರಾಜಮಾರ್ಗದ ಈ ಮುಂದಿನ ಪದ್ಯಗಳು ಛಂದೋಂಬುಧಿಯಲ್ಲಿ, ಹಲ ಕೆಲವು ಪಾಠವ್ಯತ್ಯಾಸಗಳೊಡನೆ, ಉದಾಹೃತವಾಗಿವೆ: ೨ನೆಯ ಪರಿಚ್ಛೇದದ ೩೦, ೩೧, ೩೩, ೩೪, ೩೫, ೩೭, ೩೮, ೩೯, ೪೦, ೪೧, ೪೨, ೪೩, ೪೪, ೪೫; ೩ನೆಯ ಪರಿಚ್ಛೇದದ ೨೩೨ ಮತ್ತು ೨೩೩ (ಈ ಎರಡು ಪದ್ಯಗಳು ನಮ್ಮ ಮುದ್ರಣದಲ್ಲಿ ಅಧಿಕಪಾಠದ ೧ ಮತ್ತು ೨ನೆಯ ಪದ್ಯಗಳು).

ಡಾ॥ ಫ್ಲೀಟರು ಮೇಲ್ಕಂಡ ಪದ್ಯಗಳು ಛಂದೋಂಬುಧಿಯಲ್ಲಿ ದೊರೆಯುತ್ತವೆ ಎಂದು ಹೇಳಿ, 'ಕವಿರಾಜಮಾರ್ಗವು ಕವೀಶ್ವರಕೃತ' ಎಂಬ ತಮ್ಮ ವಾದಕ್ಕೆ ಸಾಧಕಗಳೆಂದು ಕೆಳಗಿನ ಮೂರು ಪದ್ಯಗಳನ್ನು ತಮ್ಮ ಲೇಖನದಲ್ಲಿ ಉದ್ಧರಿಸಿದ್ದಾರೆ. ಅವುಗಳಲ್ಲಿ ಗಮನಾರ್ಹಗಳಾದ ಪಾಠವ್ಯತ್ಯಾಸಗಳಿರುವುದರಿಂದ, ಅವುಗಳನ್ನು ಮಾತ್ರ ನಾವು ಇಲ್ಲಿ ಉದ್ಧರಿಸಿಕೊಟ್ಟಿದ್ದೇವೆ.—ಸಂ.]

(i) ನುತ ಶಬ್ದಾಲಂಕಾರದೊ
[ಳತಿಶಯಮುದು] ಕನ್ನಡಕ್ಕೆ ಸತತಂ ಪ್ರಾಸಂ
ಕೃತಕೃತ್ಯ[ಮಪ್ಪುದೆಲ್ಲರ]
ಮತದಿಂ[ದದು ತಪ್ಪೆ ಕಾವ್ಯಮೇಂ ಶೋಭಿಪುದೇ]* (II–೩೦)

(ii) ಅತಿ ವಿಶದ ಯಶೋವೃತ್ತಂ
ನತಸಕಳಾರಾತಿಜನ ವಿತಾನಂ ಮತ್ತಂ

---

* ಪ್ರೊ॥ ಡಿ. ಕೆ. ಭೀಮಸೇನರಾಯರು ಪಡೆದುಕೊಂಡಿರುವ ಶ. ಮು. ದ. ದ ಹಸ್ತಪ್ರತಿಯಲ್ಲಿಯೂ ಮೇಲ್ಕಂಡ ಪದ್ಯ ಉದಾಹೃತವಾಗಿದೆ; ಅದರ ಪಾಠ ಕವಿರಾಜಮಾರ್ಗದ ನಮ್ಮ ಈ ಮುದ್ರಣದಲ್ಲಿ ಇರುವಂತೆಯೆ ಇದೆ. ಇದರ ಜೊತೆಗೆ II–೩೧, ೩೨. ೩೭, ೩೮, ೪೦, ೪೪ ಮತ್ತು ೪೫ನೆಯ ಪದ್ಯಗಳೂ ಉದಾಹೃತವಾಗಿವೆ ಎಂದು ತಿಳಿದುಬರುತ್ತದೆ.—ಶ. ಮು. ದ. ಪಾಠಾಂತರಗಳು: ಪು. ೩೭.

ವಿತತ ಶ್ರೀ ಸಂಪತ್ತಂ
ಶತಮುಖಸದೃಶಾನುಭಾವ ವಿಭವಂಬೆತ್ತಂ

[ಈ ಪದ್ಯದ ನಾಲ್ಕನೆಯ ಪಂಕ್ತಿ ಪಾಠಕರ ಮುದ್ರಣದಲ್ಲಿ ಪಾಠಾಂತರವಾಗಿದ್ದು, ಸ್ವೀಕೃತಪಾಠ ಹೀಗಿದೆ: 'ಸತತಂ ನೃಪತುಂಗದೇವನೊಲವಿಂ ಪೊತ್ತಂ.']

(iii) ಪ್ರಾಸಾನುಪ್ರಾಸಾಂತ
ಪ್ರಾಸಂಗಳ್ ಮೂಱುವತಿಶಯಂಗಳ್ ಮತ್ತಂ
ಪ್ರಾಸಾಭಾಸಂಮ್ಮೂಱುಂ
ಭಾಸುರ [ಕಂಜಾಯತಾಕ್ಷಿ ಕೇಳದನೊರೆವೆಂ]

೨. ಶಬ್ದಮಣಿದರ್ಪಣ: ಕೇಶಿರಾಜ (ಸು. ಕ್ರಿ. ಶ. ೧೨೬೦).

(ಅ) (i) ಕಿಱಿದಱೊಳೆ ಪಿರಿದುಮರ್ಥಮ
ನಱಿಪಲ್ನೆಱೆವಾತನಾತನಿಂದಂ ನಿಪುಣಂ
(I–೧೫ರ ಉತ್ತರಾರ್ಧ).

(ii) ನುಡಿಗೆಲ್ಲಂ ಸಲ್ಲದ . . . ಪುರಾತನ ಕವಿಗಳ್ (II–೩೩)

(iii) ಅರಸು ಕುಮಾರನ ನಾಯತತರ . . . ಮುಖತಾವರೆಯಂ
(II–೫೯)

(iv) ಬರಿಸಿ [ಪ್ರಧಾನರಂ ಕು
ಳ್ಳಿರಿ]ಸಿ ಪ್ರಿಯಕುಶಲವಾರ್ತೆಯಂ [ನೆಱೆ ಕೇಳ್ವ] . . .

[ಈ ಪದ್ಯದ ಪಾಠವ್ಯತ್ಯಾಸವನ್ನು ಗಮನಿಸಬೇಕು. ಉತ್ತರಾರ್ಧ ಕವಿರಾಜ ಮಾರ್ಗದಲ್ಲಿ ಇರುವಂತೆಯೆ ಇದೆ. ಕೇಶಿರಾಜನು ೫೯ನೆಯ ಸೂತ್ರದಲ್ಲಿ ಸಂಧಿ ದೋಷಕ್ಕೆ ಇದನ್ನು ಉದಾಹರಣೆಯಾಗಿ ಕೊಟ್ಟಿದ್ದಾನೆ. ಮೂಲಪಾಠ 'ಬರಿಸಿ ಕ್ಷಿತಿಪತಿಯಂ . . . ಎಂದು ಮುಂತಾಗಿಯೆ ಇದ್ದಿರಬೇಕು. ಏಕೆಂದರೆ, ಮಾರ್ಗ ಕಾರನು 'ಲಘುಪದ' ದ ಮುಂದೆ 'ಒತ್ತಿ ಬರ್ಪ ಪದಮಂ' ತುದಿಯಲ್ಲಿ ಹೇಳ ಲಾಗದು ಎಂಬ ದೋಷಕ್ಕೆ ಈ ಉದಾಹರಣೆಯನ್ನು ಕೊಟ್ಟು, ದೂಷ್ಯವಲ್ಲದ 'ಮಾರ್ಗ' ದ ಲಕ್ಷ್ಯದಲ್ಲಿ 'ಕ್ಷಿತಿಪತಿಯಂ ಬರಿಸಿ' ಎಂದು ಅವೇ ಪದಗಳನ್ನು ಮತ್ತೆ ಬಳಸಿದ್ದಾನೆ. ಆದ್ದರಿಂದ, ಈ ಪದ್ಯವನ್ನು ಕೇಶಿರಾಜನು ತನ್ನ ಸೂತ್ರಕ್ಕೆ ಅನುಗುಣವಾಗಿ ತಿದ್ದಿಕೊಂಡಿರಬೇಕು, ಇಲ್ಲವೆ ಅವನು ಉಪಯೋಗಿಸಿಕೊಂಡಿ ರುವ ಕವಿರಾಜಮಾರ್ಗದ ಪ್ರತಿಯಲ್ಲಿ ಹಾಗೆ ತಿದ್ದಿದ ಪದ್ಯ ಇದ್ದಿರಬೇಕು.

ಮಾರ್ಗಕಾರನೇ ತನ್ನ ಪ್ರತಿಯಲ್ಲಿ ಕೆಲವು ಮಾರ್ಪಾಟುಗಳನ್ನು ಸೂಚಿಸಿದ್ದು,

ಅವು ಬೇರೆ ಬೇರೆ ಪ್ರತಿಕಾರರ ಕೈಯಲ್ಲಿ ಬೇರೆ ಬೇರೆ ಪಾಠಸಂಪ್ರದಾಯಗಳಾಗಿ ಪರಿಣಮಿಸಿರುವ ಸಂಭವವೂ ಉಂಟು.

ಪ್ರೊ॥ ಡಿ. ಕೆ. ಭೀಮಸೇನರಾಯರಿಗೆ ಲಬ್ಧವಾದ ಶ. ಮ. ದ. ಪ್ರತಿಯಲ್ಲಿ ಮೇಲ್ಕಂಡ ಪದ್ಯದ ಎರಡು ಪಾಠಗಳೂ ಇವೆ. 'ನಿಲಿಸಿ ಲಘುಪದಮಂ' ಎಂಬ ಪದ್ಯವೂ (II–೬) ಉದಾಹೃತವಾಗಿದೆ.]

(ಆ) ಪ್ರೊ. ಡಿ. ಕೆ. ಭೀಮಸೇನರಾಯರಿಗೆ ಲಬ್ಧವಾದ ಶ. ಮ. ದ. ಹಸ್ತಪ್ರತಿಯಲ್ಲಿ ಇತರ ಹಸ್ತಪ್ರತಿಗಳಲ್ಲಿ ದೊರಕುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕವಿರಾಜಮಾರ್ಗದ ಪದ್ಯಗಳು ಉದಾಹೃತವಾಗಿವೆ. ಕೆಲವನ್ನು ಮೇಲೆ ನಿರ್ದೇಶಿಸಿದೆ. ಇತರ ಪದ್ಯಗಳು:

(i) ಜಳಪ್ರಾಸಕ್ಕಾಗಿ ಕೊಟ್ಟಿರುವ ಉದಾಹರಣೆ:

ಗಱಿಯಿಸಿದರ್ಥಮಂ ಸಲೆ ಪಾಂ
ಗಱಿಯದೆಯುಂ ಶಬ್ದಮೊಂದದಿರ್ದೊಡೆ ಮುತ್ತುಂ
ಮೆಱಸುಂ ಕೋದಂ[ತಿರೆ ಪೇ
ಟ್ವಱಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ].

(ಶ. ಮ. ದ. ಪಾಠಾಂತರಗಳು: ಪು. ೪೩)

ಪಾಠವ್ಯತ್ಯಾಸವನ್ನು ಗಮನಿಸಬೇಕು.

(ii) "..., 'ಇಂತು ಜಱಾದೇಶಂಗೆಯ್ದೊಡೆ ದಕ್ಷಿಣಮಾರ್ಗ್ಗವೆಂಬ ಗುಣಂ' ಎಂದು ಹೇಳಿ, "ದಕ್ಷಿಣೋತ್ತರ ಮಾರ್ಗ್ಗಂಗಳೆಂತೆಂದೊಡೆ ನೃಪತುಂಗನ ಪ್ರಯೋಗಂ" ಎಂದು ಕವಿರಾಜಮಾರ್ಗದ ೧೦೦, ೧೦೭, ೧೦೧ ಪದ್ಯಗಳನ್ನು ಕ್ರಮವಾಗಿ ಉದ್ಧರಿಸಿದ್ದಾನೆ." (ಶ. ಮ. ದ. ಪಾಠಾಂತರಗಳು: ಪು. ೫೧).

(ಶಬ್ದಮಣಿದರ್ಪಣದ ಈ ಪ್ರತಿಯಲ್ಲಿ ಉದಾಹರಿಸಿರುವ ಕವಿರಾಜಮಾರ್ಗದ ಪದ್ಯಗಳು ವ್ಯಾಖ್ಯಾನಕಾರನಿಂದ ಉದಾಹೃತವಾಗಿವೆ, ಕೇಶಿರಾಜನಿಂದಲ್ಲ, ಎಂಬುದನ್ನು ಗಮನಿಸಬೇಕು.)

೩. ಈಶ್ವರ ಕವಿಯ 'ಕವಿಜಿಹ್ವಾಬಂಧನ'

ಕವಿರಾಜಮಾರ್ಗದ ಪ್ರಕ್ಷಿಪ್ತವೆನ್ನಬಹುದಾದ 'ಅರಸರೊಳೆಲೆ ನೀಂ' ಎಂಬ ಪದ್ಯವು (ನೋಡಿ: ಅನುಬಂಧ–೧, ಪ. ೨) ಈಶ್ವರ ಕವಿಯ ಕವಿಜಿಹ್ವಾಬಂಧನದಲ್ಲಿ ಕಂಡುಬರುತ್ತದೆ. ಈ ಪದ್ಯವನ್ನು ಈಶ್ವರ ಕವಿಯಿಂದ ತೆಗೆದುಕೊಂಡು ಕವಿರಾಜಮಾರ್ಗದಲ್ಲಿ ಪ್ರಕ್ಷೇಪಮಾಡಿರಬಹುದೆಂದು ಡಾ॥ ಫ್ಲೀಟರ ಊಹೆ. (ಡಾ॥ ಎ.ಆರ್.ಕೃ. ಅವರಿಂದ ಸಂಪಾದಿತವಾದ ಮುದ್ರಣದಲ್ಲಿ ಈ ಪದ್ಯ ಇಲ್ಲ.)

೪. ಭಟ್ಟಾಕಳಂಕನ 'ಶಬ್ದಾನುಶಾಸನ' (ಸು. ಕ್ರಿ. ಶ. ೧೬೦೪) (ದ್ವಿತೀಯ ಪಾದ, ಸೂತ್ರ ೨೦೨): 'ಅರಸಿ' ಇತ್ಯಾದಿ ಸ್ತ್ರೀಲಿಂಗ ಶಬ್ದಗಳ ಪ್ರಯೋಗವನ್ನು ಉದಾಹರಿಸುವ ಸಂದರ್ಭದಲ್ಲಿ, ಮೇಲ್ಕಂಡ ಪದ್ಯವೇ ಈ ಗ್ರಂಥದಲ್ಲಿಯೂ ವ್ಯಾಖ್ಯಾನದಲ್ಲಿ ಉದಾಹೃತವಾಗಿದೆ. ಶಬ್ದಾನುಶಾಸನದ ಕಾಲಕ್ಕೆ ಹಿಂದೆಯೇ ಪ್ರಾಸವಿಚಾರದ ಐದು ಪದ್ಯಗಳು ಕವಿರಾಜಮಾರ್ಗದಲ್ಲಿ ಪ್ರಕ್ಷೇಪವಾಗಿದ್ದ ಪಕ್ಷ ದಲ್ಲಿ ಅಲ್ಲಿಂದಲೇ ಅದನ್ನು ಭಟ್ಟಾಕಳಂಕನು ನೋಡಿ ತೆಗೆದುಕೊಂಡಿರಬಹು ದೆಂದೂ, ಹಾಗಿಲ್ಲದಿದ್ದ ಪಕ್ಷದಲ್ಲಿ ಈಶ್ವರ ಕವಿಯ ಗ್ರಂಥದಿಂದ ಅದನ್ನು ತೆಗೆದು ಕೊಂಡಿರಬಹುದೆಂದೂ ಡಾ|| ಫ್ಲೀಟರು ಊಹಿಸುತ್ತಾರೆ.

೫. ನೇಮಿಚಂದ್ರನ 'ಲೀಲಾವತಿ' (ಸು. ಕ್ರಿ. ಶ. ೧೧೭೦) (ಆಶ್ವಾಸ ೩–ಪ. ೪೨): 'ಲೀಲಾವತಿ'ಯಲ್ಲಿ ಕವಿರಾಜಮಾರ್ಗದಲ್ಲಿನ ಪ್ರಕ್ಷಿಪ್ತ ಪದ್ಯಗಳಲ್ಲಿ ಒಂದು ಕಂಡುಬರುತ್ತದೆ. ಕವಿರಾಜಮಾರ್ಗದ ಪದ್ಯದ ಪಾಠಕ್ಕೂ 'ಲೀಲಾವತಿ' ಯಲ್ಲಿನದಕ್ಕೂ ವ್ಯತ್ಯಾಸವಿರುವುದರಿಂದ, 'ಲೀಲಾವತಿ' ಯ ಪದ್ಯವನ್ನು ಇಲ್ಲಿ ಉದ್ಧರಿಸಬಹುದು.

ಒಂದೊಂದಱ ಸೌಂದರ್ಯಮ
ನೊಂದೊಂದೀಕ್ಷಿ[ಸಲೆ ಬಯಸಿ] ನಾಸಿ[ಕೆಯ]ಡ್ಡಂ
ಬಂ[ದಿರೆ ಪೊಱವಳಸಿಂದಂ
ಬಂದಪುವೆನೆ ನಿಮಿರ್ದು]ವವಳ ನಿಡಿ[ಯಲರ್ಗ]ಣ್ಗಳ್.

ಕವಿರಾಜಮಾರ್ಗದ ಪ್ರಕ್ಷಿಪ್ತಪದ್ಯವೊಂದನ್ನು ನೇಮಿಚಂದ್ರನು ತನ್ನ ಕಾವ್ಯ ದಲ್ಲಿ ಬಳಸಿಕೊಂಡಿದ್ದಾನೆ ಎನ್ನುವುದಕ್ಕಿಂತಲೂ, ಪ್ರಕ್ಷೇಪಕಾರನು ಲೀಲಾವತಿಯ ಪದ್ಯವನ್ನೆ 'ದ್ವಂದ್ವಪ್ರಾಸ'ಕ್ಕೆ ಉದಾಹರಣೆಯಾಗಿ ಬಳಸಿಕೊಂಡಿದ್ದಾನೆ ಎಂದು ತಿಳಿಯುವುದು ಹೆಚ್ಚು ಸಮಂಜಸ. ಹೀಗಿರುವ ಪಕ್ಷಕ್ಕೆ, ಪ್ರಕ್ಷಿಪ್ತ ಪದ್ಯಗಳುಳ್ಳ ಕವಿರಾಜಮಾರ್ಗದ ಪಾಠಸಂಪ್ರದಾಯವು ಈಶ್ವರಕವಿ ಹಾಗೂ ನೇಮಿಚಂದ್ರ ಇವರಿಗಿಂತ ಈಚೆಗೆ ಎಂದರೆ ೧೨೦೦ರ ಸುಮಾರಿನಲ್ಲಿ ಹುಟ್ಟಿರಬೇಕು.

ಭಟ್ಟಾಕಳಂಕನು (ಅಥವಾ 'ಶಬ್ದಾನುಶಾಸನ'ದ ವ್ಯಾಖ್ಯಾನಕಾರನು) ನೃಪತುಂಗ ಗ್ರಂಥದ ಉಲ್ಲೇಖಮಾಡಿರುವುದರಿಂದ, 'ಅರಸರೊಳೆಲೆನೀಂ' ಎಂಬ ಪದ್ಯವನ್ನು ನೇರವಾಗಿ ಪ್ರಕ್ಷಿಪ್ತಪದ್ಯಗಳುಳ್ಳ ಕವಿರಾಜಮಾರ್ಗದಿಂದಲೇ ಉದ್ಧರಿಸಿಕೊಂಡಿರುವ ಸಂಭವ ಹೆಚ್ಚು.

ಗ್ರಂಥಋಣ

(ಗ್ರಂಥಸಂಪಾದನ ಕಾರ್ಯದಲ್ಲಿ ಪರಿಶೀಲಿಸಿ ನೆರವುಪಡೆದ ಮುಖ್ಯ ಗ್ರಂಥಗಳ ಮತ್ತು ಲೇಖನಗಳ ಪಟ್ಟಿ.)

೧. ಕವಿರಾಜಮಾರ್ಗಂ : (Published under Bibliothica Carnatica Series, under the Direction of B. L. Rice, C. I. E., M. R. A. S. (1898); Edited, with Introduction, by K. B. Pathak, B.A., Assistant to the Director of Archaeological Researches in Mysore.

೨. ಕರ್ಣಾಟಕ ಕವಿರಾಜಮಾರ್ಗಂ : Edited by A. Venkata Rau, B.A., L.T., Reader in Kanarese, University Oriental Research Institute, Madras, and Published by the University of Madras : 1930.

೩. *Kavyadarsa of Dandin* : Sanskrit Text and English Translation by S. K. Belvalkar, M.A., Ph.D. (1924).

೪. ಕಾವ್ಯಾವಲೋಕನಂ : (ನಾಗವರ್ಮ ವಿರಚಿತ) (ಮೈ. ಓ. ಲೈ). ದ್ವಿತೀಯ ಮುದ್ರಣ (೧೯೩೯) ಸಂ. ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್., ಮತ್ತು ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್, ಎಂ.ಎ.

೫. ಶಬ್ದಮಣಿದರ್ಪಣ (ಕೇಶಿರಾಜ) : (೧) ರೆ|| ಎಫ್. ಕಿಟ್ಟೆಲ್‌ರವರು ಸಂಪಾದನೆಮಾಡಿದ ಮುದ್ರಣದ ತೃತೀಯ ಆವೃತ್ತಿ: ಪಂಜೆ ಮಂಗೇಶರಾಯರಿಂದ ಪರಿಷ್ಕೃತವಾದದ್ದು (೧೯೨೦); (೨) ಕರ್ಣಾಟಕ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಮುದ್ರಣ (೧೯೨೦); (೩) ಪ್ರೊ|| ಡಿ. ಎಲ್. ನರಸಿಂಹಾಚಾರ್ಯರು ಸಂಪಾದಿಸಿದ್ದು, ಮೈಸೂರು ಕವಿಕಾವ್ಯಮಾಲೆಯ ಪ್ರಕಟನೆ (ದ್ವಿತೀಯ ಮುದ್ರಣ : ೧೯೬೪).

೬. ಶಬ್ದಮಣಿದರ್ಪಣದ ಪಾಠಾಂತರಗಳು : ಪ್ರೊ|| ಡಿ. ಕೆ. ಭೀಮಸೇನರಾವ್, (ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ಅವರ ಪ್ರಕಟನೆ ; ೧೯೫೧)

೭. ಕರ್ಣಾಟಕ ಶಬ್ದಾನುಶಾಸನಂ (ಭಟ್ಟಾಕಲಂಕದೇವ ಕೃತ) (Bibliothica Carnatica Series): (ದ್ವಿತೀಯ ಮುದ್ರಣ: ೧೯೨೩) ಸಂ. ಆರ್. ನರಸಿಂಹಾಚಾರ್.

೮. ಕನ್ನಡ ಕೈಪಿಡಿ: ಸಂಪುಟ ೧ (೧೯೩೬) ಮತ್ತು ೨ (೧೯೪೭) (ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆ).

೯. ಕವಿರಾಜಮಾರ್ಗ ವಿವೇಕ—ಭಾಗ ೧: ದಿವಂಗತ ವಿದ್ವಾನ್ ಮುಳಿಯ ತಿಮ್ಮಪ್ಪಯ್ಯ, ಮಂಗಳೂರು (೧೯೪೮).

೧೦. ಕವಿರಾಜಮಾರ್ಗ ವಿವೇಕ—ಭಾಗ-೨ (ಹಸ್ತಪ್ರತಿ: ಅಪ್ರಕಟಿತ)

೧೧. ಭಾರತೀಯ ಕಾವ್ಯಮೀಮಾಂಸೆ: ಪ್ರೊ॥ ತೀ. ನಂ. ಶ್ರೀಕಂಠಯ್ಯ (ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆ: ೧೯೫೩).

೧೨. ಕನ್ನಡ ಕಾವ್ಯಾಲಂಕಾರ: ಡಾ॥ ಕೆ. ಕೃಷ್ಣಮೂರ್ತಿ (ಮೈಸೂರು ಕನ್ನಡ ಕವಿಕಾವ್ಯಮಾಲೆಯ ಪ್ರಕಟನೆ: ಮೊದಲ ಮುದ್ರಣ, ೧೯೫೫).

೧೩. ಕನ್ನಡದಲ್ಲಿ ಕಾವ್ಯತತ್ತ್ವ: ಡಾ॥ ಕೆ. ಕೃಷ್ಣಮೂರ್ತಿ (ಮೈಸೂರು ಕನ್ನಡ ಕವಿಕಾವ್ಯಮಾಲೆಯ ಪ್ರಕಟನೆ: ೧೯೬೪)

೧೪. ಕರ್ಣಾಟಕ ಕವಿಚರಿತ್ರೆ: (ಸಂಪುಟ ೧ ಮತ್ತು ೨: ೧೯೨೪): ಆರ್. ನರಸಿಂಹಾಚಾರ್.

೧೫. ಕನ್ನಡ ಸಾಹಿತ್ಯ ಚರಿತ್ರೆ: ಡಾ॥ ರಂ. ಶ್ರೀ. ಮುಗಳಿ (ಉಷಾ ಸಾಹಿತ್ಯಮಾಲೆ, ಮೈಸೂರು: ೧೯೬೦).

೧೬. *Kavisvara's Kavirajamarga:* J. F. Fleet (Indian Antiquary, Vol. XXXIII, Oct. 1904), pp. 268 ff.

೧೭. *Amoghavarsha as a patron of letters:* J. F. Fleet (Ibid, pp. 197 ff.)

೧೮. 'ಕವಿರಾಜಮಾರ್ಗದ ಗ್ರಂಥಕರ್ತೃವು ಯಾರು?'—ನಾ. ಶ್ರೀ. ರಾಜಪುರೋಹಿತ (ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೬–೧; ಜುಲೈ ೧೯೨೧).

೧೯. ಕವಿರಾಜಮಾರ್ಗವನ್ನು ಕುರಿತು 'ವಸ್ತುಕೋಶ' ದಲ್ಲಿ ಟಿಪ್ಪಣಿ: ಎ. ಆರ್. ಕೃಷ್ಣಶಾಸ್ತ್ರೀ (ಪ್ರಬುದ್ಧ ಕರ್ಣಾಟಕ, ಸಂ. ೩–೩).

೨೦-೨೧. 'ಕವಿರಾಜಮಾರ್ಗದ ಕರ್ತೃವು ಯಾರು?'—'ಪತ್ರವ್ಯವಹಾರ': ನಾ. ಶ್ರೀ. ರಾಜಪುರೋಹಿತ ಮತ್ತು ಟಿ. ಎಸ್. ವೆಂಕಣ್ಣಯ್ಯ (ಕ. ಸಾ. ಪ. ಪತ್ರಿಕೆ, ಸಂ. ೭-೧, ೪).

೨೨. 'ನೃಪತುಂಗನೇ ಕವಿರಾಜಮಾರ್ಗದ ಗ್ರಂಥಕರ್ತೃವು'—ನಾ. ಶ್ರೀ. ರಾಜಪುರೋಹಿತ (ಕ. ಸಾ. ಪ. ಪತ್ರಿಕೆ, ಸಂ. ೮-೨, ಜುಲೈ ೧೯೨೩).

೨೩. 'ನೃಪತುಂಗನ ಮತವಿಚಾರ'—ಮಂ. ಗೋವಿಂದ ಪೈ (ಕ. ಸಾ. ಪ. ಪತ್ರಿಕೆ, ಸಂ. ೧೨-೪).

೨೪. 'ಕನ್ನಡದಲ್ಲಿ ಬೌದ್ಧರು ಗ್ರಂಥಗಳನ್ನು ಬರೆದಿದ್ದರೆ?'—ಟಿ. ಎಸ್. ವೆಂಕಣ್ಣಯ್ಯ (ಪ್ರ. ಕ., ಸಂ. ೬, ದೀಪಾವಳಿ ಸಂಚಿಕೆ).

೨೫. ಕವಿರಾಜಮಾರ್ಗ ವಿವೇಕ, ಭಾಗ ೧: ಒಂದು ಸಮೀಕ್ಷೆ—ರಂ. ಶ್ರೀ. ಮುಗಳಿ ('ಶ್ರದ್ಧಾಂಜಲಿ': ಮುಳಿಯ ತಿಮ್ಮಪ್ಪಯ್ಯ ಸ್ಮಾರಕ ಗ್ರಂಥ, ೧೯೫೬; pp. 86 ff.)

೨೬. *Karnataka Kavirajamargam*(Review)—By 'S' (B. M. Srikantia) (Quarterly Journal of the Mythic Society, vol. 23–3, Jan. 1933).

೨೭. 'ಕವಿರಾಜಮಾರ್ಗದಲ್ಲಿ ಕಾರಕ ವಿಚಾರ': ವಿ. ಕೃಷ್ಣಸ್ವಾಮಿ ಅಯ್ಯಂಗಾರ್ (ಕನ್ನಡ ನುಡಿ: ಸಂ. ೨೮-೨, ಫೆಬ್ರುವರಿ ೧೯೬೫).

೨೮. (i) 'ಕವಿರಾಜಮಾರ್ಗದ ಕೆಲವು ವೃತ್ತಗಳ ಛಂದಸ್ಸುಗಳು': (ii) ಕವಿರಾಜಮಾರ್ಗದ ಎರಡು ವೃತ್ತಗಳು': ಕೆ. ಪು. ಸೀತಾರಾಮ ಕೆದಿಲಾಯ (ಕನ್ನಡ ನುಡಿ: ಸಂ. ೨೯-೫, ಮೇ ೧೯೬೬ ಮತ್ತು ಸಂ. ೨೯-೭, ಜುಲೈ ೧೯೬೬).

೨೯. ಕವಿರಾಜಮಾರ್ಗದಲ್ಲಿ ರಾಮಾಯಣ ಪದ್ಯಗಳು: ಎಂ. ವಿ. ಸೀತಾರಾಮಯ್ಯ (ಕ. ಸಾ. ಪ. ಪತ್ರಿಕೆ: ಡಿಸೆಂಬರ್ ೧೯೬೬).

೩೦. ಕವಿರಾಜಮಾರ್ಗ ಮತ್ತು ಅದರ ಕರ್ತೃ: ಎಂ. ವಿ. ಸೀತಾರಾಮಯ್ಯ (ಕ. ಸಾ. ಪರಿಷತ್ತಿನ ಆಶ್ರಯದಲ್ಲಿ ಜುಲೈ ೧೯೬೭ರಲ್ಲಿ ಮಾಡಿದ ಶ್ರೀಮತಿ ಜಾವಳಿ ಮಹಾಲಕ್ಷ್ಮಮ್ಮ ಲಕ್ಷ್ಮಯ್ಯ ಅವರ ನಿಧಿ ಉಪನ್ಯಾಸ: ಅಪ್ರಕಟಿತ).

೩೧. ಸಮಂತಭದ್ರನೇ ಶ್ರೀವಿಜಯನಿರಬಹುದೆ?—ದ. ರಾ. ಬೇಂದ್ರೆ (ಸಾಹಿತ್ಯ ಸಂಶೋಧನೆ, ಪು. ೧೦೯).

೩೨. *Sources of Karnataka History, Vol. I:* Dr. S. Sreekantha Sastry (1949).

೩೩. ಕರ್ಣಾಟಕದ ಚರಿತ್ರೆ: ಡಾ|| ಎಂ. ವಿ. ಕೃಷ್ಣರಾವ್ (ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ಪ್ರಕಟನೆ).

೩೪. *Rashtrakutas of Malkhed*: Dr. P. B. Desai ಪ್ರಕಟನೆ (?)

೩೫. ತವನಿಧಿ : 'ಚಂಪುವಿನ ಮೂಲ.'—ಡಾ|| ರಂ. ಶ್ರೀ. ಮುಗಳಿ.

ಇತರ ಸಹಾಯಕ ಗ್ರಂಥಗಳು, ಲೇಖನಗಳು

(೧) Rashtrakutas and their times: A. S. Altekar, (೨) 'ಕವಿರಾಜಮಾರ್ಗದ ಕವಿ ಯಾರು?'—ಕೆ. ವೆಂಕಟರಾಯಾಚಾರ್ಯ (ಜೀವನ, ಸಂ. ೧೫–೯), (೩) 'ಕವಿರಾಜಮಾರ್ಗದಲ್ಲಿ ಪ್ರಾಚೀನ ಕನ್ನಡದ ಪರಿಚಯ' (ಶರಣಸಾಹಿತ್ಯ, ಸಂ. ೧೯–೮), (೪) 'ಕವಿರಾಜಮಾರ್ಗದ ಪದ ಪ್ರಮಾಣ ಮತ್ತು ಕವಿಯ ಶೈಲಿ'—ಎಂ. ಜಿ. ವೆಂಕಟೇಶಯ್ಯ (ಪ್ರ. ಕ. ಸಂ., ೨೯–೨, (೫) 'ರಾಜನೂ ಕವಿಯೂ ಆದ ನೃಪತುಂಗ'—ರಾ. ಸ್ವಾ. ಪಂಪ ಮುಖಿ (ಜಯಂತಿ, ನವೆಂಬರ್ ೧೯೪೨.)

ತಪ್ಪುನೆಪ್ಪೋಲೆ

೧. ಪೀಠಿಕೆ

ಪುಟ	ಪಂಕ್ತಿ	ತಪ್ಪು	ನೆಪ್ಪು
xii	೧೧	ರಾಷ್ಟ್ರಕೂಟರ ಸಾಮಂತ ರಾಜರ	ರಾಷ್ಟ್ರಕೂಟ ಸಾಮಂತರಾಜರ
xiii	೬	ಕಷ್ಟವಾಗಲಿಲ್ಲ	ಕಷ್ಟವಾಗಲಿಲ್ಲ

ಪುಟ	ಪಂಕ್ತಿ	ತಪ್ಪು	ನೆಪ್ಪು
XXii	೨೪	ಪುಷ್ಟಿಕೊಡುತ್ತದೆ	ಪುಷ್ಟಿಕೊಡುತ್ತವೆ
xxiv	೯	ಅತನು	ಆತನು
XXXV	೧೧	ಮತರ್ಧಕ	ಮತಧರ್ಮನಿರ್ಣಯ
XLii XLiii	೬, ೧೮	ಛಂದೋಬುಧಿ	ಛಂದೋಂಬುಧಿ
LXii	೮	ಗಮನಾರ್ಹ	ಗಮನಾರ್ಹ[17]
LXV	೧೨	ಹೋಗಿಲ್ಲ).[14]	ಹೋಗಿಲ್ಲ).[24]
LXvii	೧೬	ಒಪ್ಪಿಕೊಳ್ಳಬಹುದು.	ಒಪ್ಪಿಕೊಳ್ಳಬಹುದು.[36]
LXX	೧೭	ಭಾಮುಮಹ	ಭಾಮಹ

೨. ಕವಿರಾಜಮಾರ್ಗ ಗ್ರಂಥ

ಪರಿಚ್ಛೇದ ೧

ಪುಟ	ಪದ್ಯ	ಪಂಕ್ತಿ	ತಪ್ಪು	ನೆಪ್ಪು
೧೦	೩೫	೩	ಮತ್ತಂ ದಲ್	ತ್ತಂ ದಲ್
೧೨	೪೭	೩	ಮತ್ತೆನ್ನ ಸಱಿವುದು	ಮತ್ತೆನ್ನಱಿವುದು
೧೬	೬೬	೩	ಬಿದಿರ್ದಾರ್ದರ್ಮೇಟಿಗ್ೕ	ಬಿದಿರ್ದಾ[ರ್ದೇ]ಟಿಗ್ೕ (?) ; ಬಿದಿರ್ದಾ[ರ್ಮೇ]ಟಿಗ್ೕ (?)
೧೭	೭೩	೪	—ಡಂತದದೋಷಂ	—ಡಂತ[ದ]ದೋಷಂ
೨೧	೯೩	೨	ನೆನೆನೆನೆದಿರುಳೊಳೊಜಗದಿರೆ	ನೆನೆನೆನೆದಿರು[ಳೊಳಗೊ]ಜಗ ದಿರೆ
೨೯	೧೩೧	೪	[ಪೊಳ್ಗ್]ಳಂ	[ಪೊಳ್ಗ]ಳಂ
೩೨	೧೪೭	೨	ಕ್ರಮ[ಮುಮನ]ಭಿಮುಖ ಕರ್ಣಳಪ್ಪ[ರಾ]	ಕ್ರಮನಮನಾಭಿಮುಖ ಕರ್ಣಳಪ್ಪ[ರೆಲ್ಲರ್]
೩೨	೧೪೭	೪	ಶ್ರಮುಮಂ	ಶ್ರಮುಪದಮಂ
೩೨	೧೪೮	೨	ಕೃತಿಮತಿ[ಯೆ]ನಿರಂತರ ಪ್ರತೀತಂ	ಕೃತಿಮತಿನೀತಿ ನಿರಂತರ ಪ್ರತೀತಂ
೩೨	೧೪೮	೪	—ಸ್ವತಗುಣದಿಂದೆ ಕೃತಕೃತ್ಯ ಮುಕ್ಕುಂ	—ಸ್ವತಗುಣದಿಂ ಕೃತಕೃತ್ಯ [ಮೆಲ್ಲ]ಮುಕ್ಕುಂ

ಪರಿಚ್ಛೇದ ೨

ಪುಟ	ಪದ್ಯ	ಪಂಕ್ತಿ	ತಪ್ಪು	ನೆಪ್ಪು
೬೦	೧೧೮	೧	ಸೇಮುನವಮಾನನಾ	ಸೇಮುನ[ವಮಾನನಾ]
೬೧	೧೨೯	೧	[ಪ]ದಾಪಾದಾರ್ಥ	[ಪಾದ]ಪಾದಾರ್ಥ
೬೩	೧೪೧	೧	ಅರಸಿಯು ದಿವ್ಯಸೇನಾದರ	ಅರಸಿಯು ದಿವ್ಯಸೇ[ವಾ]ದರ
೬೬	೧೫೪	೩	ವಿಲೋಢ್ಯಂ	ವಿಜೋಢ್ಯಂ

ಪರಿಚ್ಛೇದ ೩

ಪುಟ	ಪದ್ಯ	ಪಂಕ್ತಿ	ತಪ್ಪು	ನೆಪ್ಪು
೭೬	೩೪	೩	—ಮಧಿಕಾರಾಗಮ	—ಮಧಿಕರಾಗಮ
೭೬	೩೫	೪	ಪರಿವರ್ಥ[ಕ]ಮುಕ್ಕು	ಪರಿವರ್ಥ[ಕ]ನಕ್ಕು
೭೬	೩೫	೪	ವಿರುದ್ಧಾತ್ಮಕ[ಮುಂ]	ವಿರುದ್ಧಾತ್ಮಕ[ನುಂ]
೭೯	೫೨	೧	ಯಥಾಸಂಖ್ಯಾ-	ಯಾಥಾಸಂಖ್ಯಾ
೭೯	೫೩	೨	ಪದಮೊ[ಬ್ರ್ಬಿ]ನಿಂ	ಪದಮೊ[ರ್ಬಿ]ನಿಂ
೮೦	೫೫	೨	ಭಾಗಮುಂಬರದೆ	ಭಾಗಮುಂ[ಭ]ರದೆ
೮೦	೫೫	೪	ವಿಧಿಯಂ	[ನಿ]ಧಿಯಂ
೮೫	೮೧	೧/೨	[ಮಾನ]ಪೊಳ್	[ಮಾನನ]ದೊಳ್
೮೫	೮೨	೨	ವಿಳಸಿತವಮಂ	ವಿಳಸಿತ[ಮುಂ]
೮೬	೮೮	೩	—ಲಿಳೆ[ಯೊಳ್]ಯಂಕರ	—ಲಿಳೆ[ಯೊಳ್]ಕರ
೮೭	೯೦	೨	—ಯಂಂತಂ	—ರ್ಯಂತಂ
೮೭	೯೨	೨	ತಲೆವ[ಜು]ದುದಂ	ತಲೆವ[ಬಿ]ದುದಂ
೯೦	೧೦೭	೧	ತತ್ತಭೇದದೊಳ್	ತತ್ತ್ವಭೇದದೊಳ್
೯೫	೧೩೦	೨	—ತರಮು[ದಿ]ಂ	—ತರ[ದಿ]ಂ
೯೮	೧೪೪	೩	ಕಿ[ಡಿ]ಯಿಸಿ	ಕಿರಿಯಿಸಿ
೧೦೪	೧೭೪	೨	ಕೊಳ[ನುಂ] ಕಡಲುಂ	ಕೊಳ[ಲುಂ] ಕುಡಲುಂ
೧೦೪	೧೭೬	೨	ಪರವಿಚಾರಮುಂ	—ವಿಚಾರಮುಂ
೧೦೫	೧೮೦	೨	ಕಟಿಲ್ದುದುರೆ	ಕಟಿಲ್ತುದಿರೆ
೧೦೬	೧೮೬	೪	ಮರ್ದಿಸುವವೆನೆ	ಮರ್ದಿ[ಸವವುವೆನೆ]
೧೧೦	೨೦೪	೩	—ಭರಮುಂ	—ಭರ[ಮುಂ]
೧೧೦	೨೦೭	೩	—ಟಿೊ[ಳ]ಳಂಕೃತಿ	—ಜಿೊ[ಳ]ಳಂಕೃತಿ
೧೧೧	೨೧೩	೨	ಸಂಗ್ರಾಮಿತಾಂಗಂ	ಸಂಗ್ರಾಮಿ[ಕಾ]ಂಗಂ
೧೧೨	೨೧೫	೪	—ನಿಷ್ಟಾರ್ಥಸಿದ್ಧಂ	ನಿ[ಷ್ಠಾ]ರ್ಥ—
೧೧೨	೨೧೫	೩	ಸಾಧನೀಯಾದಿತಾರಾ	—ಯಾ[ಧಿಕಾ]ರಾ
೧೧೨	೨೧೬	೩	ನಿಕದಿತ	ನಿಗದಿತ
೧೧೨	೨೨೩	೪	ಕುಜುತಾವ[ನು]ಮೇನುಮುಂ	—ವನ[ನು]ಮೇನುಮುಂ

೩. ಅನುಬಂಧಗಳು

ಪುಟ	ಪಂಕ್ತಿ	ತಪ್ಪು	ನೆಪ್ಪು
೧೨೧	೨೧	ಕಾವ್ಯದರ್ಶ	ಕಾವ್ಯಾದರ್ಶ
೧೨೩	೬	ಪೃಕತಿ	ಪ್ರಕೃತಿ
೧೨೬	೯	ಅನಂದ	ಆನಂದ
೧೪೬	೬	ಎಂಬಂತು ಅಲ್ತು	ಎಂಬ ಅಲ್ತು
೧೫೩	೧೯	ಯಥಾಸಂಖ್ಯ	ಯಾಥಾಸಂಖ್ಯ
೧೬೬	೧೭	ಅಧೀಶರನಾ	ಅಧೀಶ್ವರನಾ
೧೯೮	೨೫	ಪಾಕ್ತನ್ರೋಕ್ತ	ಪ್ರಾಕ್ತನೋಕ್ತ
೨೧೬	೨೬	ಶರತಾಲದ	ಶರತ್ಕಾಲದ
೨೬೧	೨೨	ತುಡಿ ಚಿಗುರುಳ್ಳವಳು	ತುಟಿ—
೨೬೬	೩	ಎಂಬರೆ	ಎಂದರೆ
೨೭೫	೧೩	ಸ್ಪಂತ	ಸ್ವಂತ
೨೭೫	೨೦	ಯಥಾಸಂಖ್ಯಾಲಂಕಾರ	ಯಾಥಾ—
೨೯೧	೪	ಇರವುದನ್ನೇ	ಇರುವುದನ್ನೇ
೩೧೮	೫	—ಪ್ರುದ್ಧೀ—ನಾಂ ಸುಹೃದನುಗ್ರಹಂ	—ವೃದ್ಧೀನಾಂ ಫಲಂ ಸುಹೃದ—
೩೪೫	೨೫	ಅಧಾರವಿಲ್ಲ	ಆಧಾರ—
೩೪೬	೩	—ನಾಗಿದ್ದುನರ	—ನಾಗಿದ್ದುದರ
೩೪೬	೨೦	ಪ್ರಸಂತ	ಪಸಂತ
೩೪೯	೨೫	ಸ್ವಂತರಂಚನೆ	ಸ್ವಂತರಚನೆ
೩೬೨	೭	ಪ್ರಭೇದಗಳನು	ಪ್ರಭೇದಗಳನ್ನು
೩೮೪	೨೯	ಪಡಿಯಱಿಯಲಾದೊಡರಿಯಂ	ಪಡೆ—
೩೮೫	೨೪	ಪರಗೀತಾರ್ಥ	ಪರಿಗೀತಾರ್ಥ
೩೯೮	೭	ಅತಿಶಯುದವಳ	ಅತಿಶಯಧವಳ
೪೦೩	೧೫	—ನೆರ್ದೆವೆತ್ತ	—ನೆರ್ದೆವೆತ್ತ(ಖ)
೪೦೭	೬	ಕ್ರಮುನಮುನಾಭಿ (ಪ, ಕ)	—ನಾಭಿ(ಪ);—ನಾಭ(ಕ)
೪೦೭	೧೨	ಕೈತಿಮುತಿನೀತಿ—	ಕೃತಿ—
೪೧೪	೩	ಪರಪೆಸದ (ಮು)	ಪರಪಸದ—

ರಕ್ಷಾಪತ್ರದ ಮುಖಚಿತ್ರದಲ್ಲಿ 'ಕಿಸುಪೊಟಿಲ್' ಎಂದಿರುವುದನ್ನು 'ಕಿಸುವೊಟಿಲ್' ಎಂದು ಓದಿಕೊಳ್ಳಬೇಕು.

VIJAYA EVENING COLLEGE,
LIBRARY
BANGALORE-4.
ACCN. NO............................
SECTION.................................
COST ....
Date .. .. *Librarian.*

Call No. :

Author : ಸೀತಾರಾಮಯ್ಯ. M. V. ಡಾ|

Title : ಕವಿರಾಜಮಾರ್ಗಂ.

Signature	Borrowing Date

1289